Promotions to I.A.S. Cadre on Recommendations of State Government

487. Sri V. L. SHIVAPPA (Tiptur).—

Will the Chief Minister be pleased to state :—

(*a*) the number of promotions recommended to I.A.S. cadre by the State Government to the Central Government, since the last 10 years ;

(*b*) the number of them sanctioned by the Central Government (Communitywise) ?

Sri VEERENDRA PATIL (Chief Minister).—

(*a*) 31.

(*b*) 31. Appointment to the I.A.S. by promotion are not required to be made on the basis of Community. The I.A.S. (Appointment by Promotion) Regulations do not also provide for any reservation in favour of any class of officers.

ಶ್ರೀ ವಿ. ಎಸ್. ಶಿವಪ್ಪ.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಕಳೆದ ಹತ್ತು ವರ್ಷಗಳಿಂದ ಐ.ಎ.ಎಸ್. ಬಡ್ತಿಯನ್ನೀಯುವ ಬಗ್ಗೆ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ 31 ಜನಗಳಿಗೆ ಶಿಫಾರಸ್ಸು ಮಾಡಿದ್ದಾರೆಂದು ಹೇಳಿದ್ದೀರಿ, ಇನ್ನೂ ಅನೇಕ ಮಂದಿ ಐ.ಎ.ಎಸ್. ಹುದ್ದೆಗೆ ಬಡ್ತಿ ಹೊಂದತಕ್ಕ ಅವಕಾಶ ಇದ್ದರೂ ಕೂಡ ಆಳುವ ಪಕ್ಷದ ನಾಯಕರ ಒಂದೇ ಗುಂಪಿನವರಿಗೆ ಶಿಫಾರಸ್ಸು ಮಾಡಿದ್ದಾರೆ. ಇದರಿಂದಾಗಿ ಅವರಿಗೆ ಮಾತ್ರ ಪ್ರಮೋಷನ್ ಸಿಕ್ಕಿ ಬಾಕಿಯವರಿಗೆ ಸಿಕ್ಕಿಲ್ಲ. ಇದು ಯೋಗ್ಯ ರೀತಿಯಲ್ಲಿ ನಡೆದಿಲ್ಲ. ಆಳುವ ಪಕ್ಷದ ನಾಯಕರ ಗುಂಪಿನವರಿಗೆ ಸೇರಿದವರಿಗೆ ಜಾತಿಯ ಆಧಾರದಮೇಲೆ 31 ಜನಗಳಿಗೆ ಶಿಫಾರಸ್ಸು ಮಾಡಿದ್ದಾರೆ. ಆದ್ದರಿಂದ ಈ ಲಿಸ್ಟನ್ನು ಈ ಸಭೆಯ ಮುಂದೆ ಇಡುತ್ತೀರಾ ?

†ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ಮಾನ್ಯ ಸದಸ್ಯರು ಒಂದು ವಿಚಾರವನ್ನು ತಿಳಿದು ಕೊಳ್ಳಬೇಕು. ಐ.ಎ.ಎಸ್. ಪ್ರಮೋಷನ್ ಕೋಟಾ 25 ಪರ್ಸೆಂಟ್ ಇವೆ. ಇದರಲ್ಲಿ ಯಾವ ಯಾವ ಅಧಿಕಾರಿಗಳಿಗೆ ಐ.ಎ.ಎಸ್. ಹುದ್ದೆಗೆ ಬಡ್ತಿ ಕೊಡಬೇಕೆಂಬ ವಿಚಾರದಲ್ಲಿ ಸ್ಕ್ರೀನಿಂಗ್ ಕಮಿಟಿಯವರು, ಮೊದಲು ಸೆಲೆಕ್ಟ್ ಮಾಡುತ್ತಾರೆ, ನಂತರ ಸೆಲೆಕ್ಷನ್ ಕಮಿಟಿಯವರು ಅವರನ್ನು ಆಯ್ಕೆ ಮಾಡುತ್ತಾರೆ. ಈ ಸೆಲೆಕ್ಷನ್ ಕಮಿಟಿಯಲ್ಲಿ ಯು.ಪಿ.ಎಸ್. ಸದಸ್ಯರೊಬ್ಬರು ಛೇರ್ಮನ್ ಆಗಿರುತ್ತಾರೆ. ಇಂಡಿಯಾ ಸರ್ಕಾರದ ಒಬ್ಬರು ಆಫೀಸರು ಈ ಸೆಲೆಕ್ಷನ್ ಕಮಿಟಿಯ ಸದಸ್ಯರಾಗಿರುತ್ತಾರೆ. ನಮ್ಮಲ್ಲಿ ಚೀಫ್ ಸೆಕ್ರೆಟರಿಯವರು, ಮತ್ತು ಡೆವಲಪ್‌ಮೆಂಟ್ ಕಮೀಷನರು ಮತ್ತು ಕಾರ್ಯದರ್ಶಿಯವರು ಆ ಕಮಿಟಿಯ ಸದಸ್ಯರಾಗಿರುತ್ತಾರೆ. ಐ.ಎ.ಎಸ್. ಹುದ್ದೆಗೆ ಬಡ್ತಿ ಹೊಂದತಕ್ಕ ಆಫೀಸರು ಯಾರು ಯಾರು ಇರುತ್ತಾರೆ ಎಂಬುದನ್ನೆಲ್ಲಾ ನೋಡಿಕೊಂಡು, ಅವರ ಕಾರ್ಯಫಿರ್ಫಿಷಿಯರ್ ರೆಕಾರ್ಡ್ ವಗೈರೆ ಎಲ್ಲವನ್ನೂ ತರಿಸಿಕೊಂಡು ಸೆಲೆಕ್ಷನ್ ಕಮಿಟಿಯವರು ವಿಂಟಿಂಗ್ ಮಾಡಿ ಒಂದು ಲಿಸ್ಟ್ ತಯಾರು ಮಾಡುತ್ತಾರೆ. ಆ ಲಿಸ್ಟ್ ಮಾಡುವುದರಲ್ಲಿ 25 ಪರ್ಸೆಂಟ್ ಪ್ರಮೋಷನಲ್ ಕೋಟಾ ಕೊಡುತ್ತಾರೆ; ಆ ರೀತಿ ಅವರು ಲಿಸ್ಟನ್ನು ತಯಾರು ಮಾಡಿ ನಂತರ ಅದನ್ನು ಕೇಂದ್ರ ಸರ್ಕಾರದವರ ಒಪ್ಪಿಗೆಗಾಗಿ ಕಳುಹಿಸುತ್ತಾರೆ. ಅವರು ಅದನ್ನೆಲ್ಲಾ ನೋಡಿ ಐ.ಎ.ಎಸ್. ಆಫೀಸರುಗಳ ಲಿಸ್ಟನ್ನು ನೋಟಿಫೈ ಮಾಡುತ್ತಾರೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದಹಾಗೆ ಯಾರ ಹೆಸರನ್ನೋ ರೆಕಮೆಂಡ್ ಮಾಡಿ, ಪ್ರಮೋಷನ್ ಕೊಡುತ್ತಾರೆ ಎಂದು ಹೇಳತಕ್ಕದ್ದು ಸರಿಯಲ್ಲ.

ಶ್ರೀ ಎಸ್. ಶಿವಪ್ಪ.—ಐ.ಎ.ಎಸ್. ಹುದ್ದೆಗಳಿಗೆ ಪ್ರಮೋಷನಲ್ ಕೋಟಾ 25 ಪರ್ಸೆಂಟ್ ಕೊಡುತ್ತಾರೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಈ ರೀತಿ ಮಾಡುವುದರಿಂದ ರಾಜ್ಯದ ಹಿತಕ್ಕೆ ಧಕ್ಕೆ ಬರುತ್ತದೆ. ಆದ್ದರಿಂದ ಡೈರೆಕ್ಟ್ ರೆಕ್ರೂಟ್‌ಮೆಂಟ್ 50 ಪರ್ಸೆಂಟ್. ಪ್ರಮೋಷನ್ ಮುಖಾಂತರ 50 ಪರ್ಸೆಂಟ್ ಕೊಡುವೇಕು ಎಂದು ತಾವು ಕೇಂದ್ರ ಸರ್ಕಾರಕ್ಕೆ ಏತಕ್ಕೆ ಒತ್ತಾಯ ಮಾಡಲಿಲ್ಲ ?

ಶ್ರೀ ವೀರೇಂದ್ರ ಪಾಟೀಲ್.—ಇದು ಆಲ್ ಇಂಡಿಯಾ ಸರ್ವೀಸ್ ಇರುವುದರಿಂದ ಅವರು ಒಂದು ಪಾಲಿಸಿ ಮಾಡಿಕೊಂಡಿದ್ದಾರೆ. ಅದರ ಪ್ರಕಾರ 25 ಪರ್ಸೆಂಟ್ ಪ್ರಮೋಷನಲ್ ಕೋಟಾ 75 ಪರ್ಸೆಂಟ್ ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡುತ್ತಾರೆ. ಈ ರೀತಿಯಲ್ಲಿ ಇದು ನಡೆಯುತ್ತಿದೆ.

Sri H. SIDDAVEERAPPA.—How many times the Select Committee met during the last 10 years ? How many were interviewed and what is the final list of those who are selected ? Will the Government be pleased to place that list on the Table of the House ?

Sri VEERENDRA PATIL.—The Select Committee meets once in a year. They scrutinise all the records and also review the list prepared during the last year and they go on reviewing the list. The list is a secret document and it cannot be placed on the Table of the House.

Sri H. SIDDAVEERAPPA.—I want the list of those who are selected and how many have been interviewed, to be placed on the Table of the House. Is it not possible ?

Sri VEERENDRA PATIL.—The List will go on changing. This year, they prepare a list and next year they may have additions and alterations to that list. That is why the list is not a permanent one.

Sri H. SIDDAVEERAPPA.—I want the list of those who are selected to be placed on the Table. Is there any difficulty to place it ?

Sri VEERENDRA PATIL.—I am sorry. I said that they have prepared the list for the current year. The list will be reviewed. They make necessary changes. No. list is permanent. This is being reviewed every year. Therefore, we cannot say there is a permanent list.

Sri H. SIDDAVEERAPPA.—To question (*b*), the number of vacancias sanctioned by the Central Government, it is stated as 31. I want that list to be placed.

Sri. VEERENDRA PATIL.—There is no point in placing that sanctioned list. I have alrea y stated the number. If the Hon. Member wants the names of officers who have been selected or promoted, I am prepared to place it on the Table of the House. It contains the names.

ಶ್ರೀ ಎಸ್. ಎಸ್. ಅರಕೇರಿ.—ಐ. ಎ. ಎಸ್. ದರ್ಜೆಗೆ ನೇಮಕವಾಗಬೇಕಾದರೆ ಅಸಿಸ್ಟೆಂಟ್ ಕಮಿಷನರ್ ಆಗಿ ಎಷ್ಟು ವರ್ಷ ಸರ್ವಿಸ್ ಮಾಡಬೇಕಾಗುತ್ತದೆ ಮತ್ತು ಅಂತಹವರ ಮಿನಿಮಮ್ ಕ್ವಾಲಿಫಿಕೇಷನ್ ಏನು ? ಷೆಡ್ಯೂಲ್ ಕಾ ್ಟಸ್ನಲ್ಲಿ ಈ ದರ್ಜೆಗೆ ಬರುವವರು ಎಷ್ಟು ಜನ ಇದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.— ಇಷ್ಟು ವರ್ಷ ಸರ್ವೀಸ್ ಮಾಡಬೇಕೆಂದು ನಿಯಮವಿರುತ್ತದೆ. ಆ ವಿವರ ನನ್ನ ಹತ್ತಿರ ಈಗ ಇಲ್ಲ. ಎಲಿಜಬಲ್ ಆದ ಸೀನಿಯರ್ ಆಫೀಸರ್ಸ್ ಯಾರು ಇರುತ್ತಾರೆ. ಅಂತಹವರನ್ನು ಸೆಲೆಕ್ಷನ್ ಕಮಿಟಿಯವರು ಇಂಟರ್‌ವ್ಯೂ ಮಾಡುತ್ತಾರೆ. ಮತ್ತು ಅವರ ಬಗ್ಗೆ ಸೆಲೆಕ್ಷನ್ ಕಮಿಟಿಯವರು ಸ್ಕ್ರುಟಿನೈಸ್ ಮಾಡಿ ಸೆಲೆಕ್ಷನ್ ಲಿಸ್ಟ್‌ನ್ನು ತಯಾರುಮಾಡುತ್ತಾರೆ.

Mr. SPEAKER.—The Question Hour is over.

QUESTIONS FOR ANSWERS ON THE DAY

(but not taken up)

Imported Machinery rusting at Karwar Port

184. Sri I. SOMASHEKARAPPA (Hosanagar).—

Will the Minister of State for Ports and Fisheries be pleased to state :—

(*a*) whether it has come to the notice of the Government that huge imported machineries are rusting at Karwar Port ;

(*b*) the quantum of money spent on purchase of such machineries;

(*c*) whether they have fixed responsibility on any official for not making use of the same (Imported machinery)?

Sri H. C. LINGA REDDY (Minister of State for Ports and Fisheries).—

(*a*) No.
(*b*) Does not arise
(*c*) Does not arise.

Persons and Organisations receiving money from Foreign Countries

186. Sri I. SOMASHEKARAPPA (Hosanagar).—

Will the Chief Minister be pleased to state :—

(*a*) the number of persons and organisations in Mysore State that are receiving money from foreign countries;

(*b*) the names of such persons and organisations;

(*c*) whether the Government is having an eye over them to see that the money so received is utilised by them for the purpose for which it is received?

Sri VEERENDRA PATIL (Chief Minister).—

(*a*) and (*b*) There are two such Organisations OXFAM, Richmond Town, Bangalore and MYRADA, Richmond Town, Bangalore.

(*c*) The State Government is not in a position to exercise any supervision on the way in which funds are utilised by these organisations, as the activities of most of these organisations are in pursuance of understanding between the Government of India and the Governments of the donor conutries.

Illegal Possession of Malla Balli and other Fields in Buntwal

301. Sri RATNAKUMAR KATTEMAR (Mudabidri).—

Will the Chief Minister be pleased to state :—

(*a*) whether it is a fact that the Munsiff Court, Buntwal passed adinterim order of injunction in favour of one Sri Jagathpal Konde and againist Srimathi Laxmi Hengsu and others restraining the latter from interfering with the possession of the former's fields known as Malla Balli field, Sanna Balli Field and Ullathyar field;

(SRI RATNAKUMAR KATTEMAR)

(*b*) whether the abovementioned Jagathpala Konde lodged a complaint on 12th February 1968 before the Station House Officer, Buntwal informing about the above injunction order and seeking police aid against the attempts of the above Laxmi Hengsu and others to unlawfully harvest the crops in the above fields;

(*c*) whether it is a fact that in spite of the above complaint and adinterim injunction order, the Station House Officer, Buntwal allowed the said Laxmi Hengsu and others to forcibly harvest the Suggi crops form Malla Balli field on 12th February 1968 from Sanna Balli on 25th February 1968 and from Ullethyar field on 3rd March 1968;

(*d*) whether further complaint was preferred to the S. P. South Kanara on 26th February 1968 in this regard without any avail;

(*e*) whether a further complaint dated 3rd March 1968 was lodged before the S. H. O., Belthangady with copies to the Supdt. of Police, South Kanara and S. H. O., Buntwal;

(*f*) whether the above three complaints were registered in the respective police station, if so, the action taken by the police to protect the rights of a citizen in whose favour the court had issued adinterim injunction orders;

(*g*) whether it is found that the police authorities have failed to discharge their duties, if so, what action the Government propose to take against the Police Officers involved;

(*h*) whether it is a fact that the concerned police authorities have not taken any action on the plea that there was no Magistrate's order against the counter petitioner?

SRI VEERENDRA PATIL (Chief Minister).—

(*a*) Yes.

(*b*) Yes.

(*c*) No.

(*d*) A petition dated 27th February 1968 was received in the District Police Office, Mangalore and the same was sent to the Station House Officer, Belthangady for necessary action.

(*e*) A complaint dated 3rd March 1968 was received by the S. H. O., Belthangady.

(*f*) Cases in Belthangadi Police Stn. Cr. No. 27/68 and 30/68 u/s 147, 447 and 379 I. P. C. were registered on the complaints dated 27th February 1968 and 3rd March 1968 respectively and the petition dated 12th February 1968 was duly enquired into.

(*g*) Does not arise as there is no failure on the part of the police.

(*h*) No.

Calling Attention to a Matter of Urgent Pubiic Importance *re*: breakage of sluice of Sira Doddakere

Sri BOLA RAGHURAM SHETTY (Karkal).—I call the attention of the Minister of State for Minor Irrigation to the breakage of sluice of Sira Doddakere.

† **Smt. BASAVARAJESWARI** (Deputy Minister for Social Welfare).—Sira Doddakere is a major tank bearing Register No. 2 and Sl. No. 152, and has got a total atchkat of 844 acres and 32 guntas (633 acres 1 gunta of wet and 211 acres 31 gnntas of garden). The tank has got only one masonry wasteweir and the same is in good condition. This tank has got in all three sluices. The front cistern of the left sluice being in a dilapidated condition required some urgent repairs. Hence, an estimate for Rs. 1,200 for reconstruction of this cistern was sanctioned by the Executive Engineer, Madhugiri Division, and the work was to be taken up for execution. Meanwhile the front slab of the cistern was damaged by some of the ryots in order to draw water from the tank at a level lower than cill level of the plug sluice. As a result of this, there was some leakage from the sluice when the tank received water due to rains on the night of 24th August 1969. On receipt of this information immediate action was taken by the Executive Engineer to prevent leakage of water through the sluice by replacing the broken front slab of the cistern of the sluice. Action was also taken to block the leakage by putting puddle and sand bags. It is reported that the leakage was stopped and at present there is no wastage of water through the sluice. The tank has now received water during the recent rains, hence the proposed reconstruction of front cistern of the sluice cannot be taken up now. However, the Executive Engineer has taken necessary action to get repairs done to the sluice immediately the water level in the tank were to go down.

ಶ್ರೀ ಬೋಳಾ ರಘುರಾಮ ಶೆಟ್ಟಿ.—ಈ ಕೆರೆಯ ಸ್ಲೂಯಿಸ್ ಒಡೆದು ಸುಮಾರು ಐದು ತಿಂಗಳಾದವು. ಈ ಸಂದರ್ಭದಲ್ಲಿ ಪಿ.ಡಬ್ಲ್ಯು.ಡಿ. ಇಂಜನೀಯರವರು ನೀರು ಹೋಗಲು ಸ್ಲೂಯಿಸ್‌ನ್ನು ಓಪನ್ ಮಾಡಿದರು ಇದರಿಂದ ರೈತರು ನೀರಾವರಿಗೆ ಉಪಯೋಗ ಮಾಡಲೂ ಆಗಲಿಲ್ಲ ಮತ್ತು ಸುಮಾರು 250 ಎಕರೆ ಸಾಗುವಳಿಯಾಗುವುದೂ ಹೋಯಿತು. ಆದುದರಿಂದ ಇದರ ಬಗ್ಗೆ ಅಕ್ರಮವಾಗಿ ಕೆಲಸ ಮಾಡಿದ ಅಧಿಕಾರಿಗಳಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಮತ್ತು ಇದನ್ನು ಸರಿ ಮಾಡಲು ಇನ್ನೆಷ್ಟು ಕಾಲ ತೆಗೆದುಕೊಳ್ಳುತ್ತೀರಿ?

ಶ್ರೀಮತಿ ಬಸವರಾಜೇಶ್ವರಿ.—ನೀರು ಹೆಚ್ಚಾಗಿ ಬಂತು ಎಂದು ಇಲ್ಲಿ ಮೊದಲು ಸ್ಲೂಯಿಸ್‌ನ್ನು ಒಡೆಯಲು ಅಧಿಕಾರಿಗಳು ಅವಕಾಶ ಕೊಟ್ಟಿದ್ದರು. ಆದರೆ ಕೆರೆ ನೀರು ತುಂಬಿದ ಕೂಡಲೇ ಇದರಲ್ಲಿ ಲೀಕೇಜು ಇರುವುದು ಗೊತ್ತಾಯಿತು. ಆದರೆ ಇಲ್ಲಿನ ಅಸಿಸ್ಟೆಂಟು ಇಂಜನೀಯರು ಬಹಳ ತೀವ್ರಗತಿಯಿಂದ ಕಕ್ಕ ಕೆಲಸ ಮಾಡದೇ ಇದ್ದುದರಿಂದ ಇಲ್ಲಿಯ ನೀರನ್ನು ಸರಿಯಾಗಿ ಉಳಿಸಲಾಗಲಿಲ್ಲ. ಆದರೆ ಇಲ್ಲರುವ ಎಕ್ಸಿಕ್ಯೂಟೀವ್ ಇಂಜನೀಯರು ಬೇಗನೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಇದರಲ್ಲಿ ಸ್ಯಾಂಡ್ ಬಾಗ್ಸ್ ತಂದು ಹಾಕಿದ್ದಾರೆ ಮತ್ತು ಲೀಕೇಜುಗಳನ್ನು ದುರಸ್ತು ಮಾಡಿದ್ದಾರೆ. ಇದರ ಬಗ್ಗೆ ಒಂದು ಅಂದಾಜು ಮತ್ತು ಎಕ್ಸ್‌ಪರ್ಟ್ ರಿಪೋರ್ಟು ಇವೆರಡೂ ಬರುವುದರಲ್ಲಿದೆ. ಕೆರೆಯ ನೀರು ಕಡಿಮೆಯಾದಮೇಲೆ ಇಲ್ಲಿ ನೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

1924-Agreement between Mysore and Tamil Nadu *re* : Cauvery Waters

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸ್ವಾಮಿ, ಈ ದೇಶದಲ್ಲಿ ಬಹಳ ಪ್ರಾಮುಖ್ಯವಾದ ಮತ್ತು ಅತಿ ಜರೂರಾದ ಒಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಅದು ಮೈಸೂರು ಹಾಗೂ ಮದ್ರಾಸ್ ಸರ್ಕಾರಕ್ಕೆ ಆಗಿರುವ ಕಾವೇರಿ ನದಿ ನೀರಿನ ಒಪ್ಪಂದ. ಈ ಒಪ್ಪಂದ 1974ನೇ ಇಸವಿಯಲ್ಲಿ ಮುಗಿಯುತ್ತದೆ. ಇದು ಮುಗಿಯುವುದರೊಳಗಾಗಿ ಕಾವೇರಿ ನದಿ ನೀರಿನ ಎಲ್ಲಾ ನೀರಾವರಿ ಯೋಜನೆಗಳನ್ನೂ ಅತಿ ಜರೂರಾಗಿ ತೆಗೆದುಕೊಂಡು ಅವನ್ನು ಪೂರ್ತಿಕೆ ಮಾಡುವ ಕೆಲಸವನ್ನು ಸರಕಾರ ಮಾಡಬೇಕು ಎಂದು ನಾವು ಇಲ್ಲಿ ಆಗಿಂದಾಗ್ಗೆ ನಿರ್ಣಯಗಳ ಮೂಲಕ ಹಾಗೂ ಇನ್ನಿತರ ಸಂದರ್ಭಗಳಲ್ಲಿ ಸರ್ಕಾರದಮೇಲೆ ಒತ್ತಾಯ ತರುತ್ತಿದ್ದೇವೆ. 1974ನೇ ಇಸವಿ ಎನ್ನುವುದು ಬಹಳ ಸಮೀಪದಲ್ಲಿದೆ. ಆದುದರಿಂದ ಸರ್ಕಾರ ಇದುವರೆಗೆ ತೆಗೆದುಕೊಂಡಿರುವ ಕಾರ್ಯ ಎಷ್ಟುಮಟ್ಟಿಗೆ ಸಫಲವಾಗಿದೆ ಎನ್ನುವುದು ನಮಗೆ ಗೊತ್ತಿಲ್ಲ. ಇಂದು ಬೆಳಗ್ಗೆ ಪ್ರಶ್ನೋತ್ತರದ ವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ ಅವರು ಕೂಡ ಇದರ ಬಗ್ಗೆ ನಿಧಾನವಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಇಷ್ಟು ತಡವಾಗಲು ಅನೇಕ ಕಾರಣಗಳಿವೆ ಎಂದು ಅವರೇ ಒಪ್ಪಿಕೊಂಡರು. 1974ನೇ ಇಸವಿ ಎನ್ನುವುದು ಬಹು ಸಮೀಪವಾಗಿದೆ. ಆದುದರಿಂದ ಕಾವೇರಿ ನದಿ ಯೋಜನೆಗಳನ್ನು ಸಂಪೂರ್ಣವಾಗಿ ಪೂರ್ತಿಕೆ ಮಾಡಲು ಸರ್ಕಾರ ಯಾವ ಕ್ರಮ ತೆಗೆದುಕೊಂಡರೂ ಅದನ್ನು ನಾವು ಒಪ್ಪುತ್ತೇವೆ. ಇದನ್ನು ಮಾಡದೇ ಹೋದರೆ ನಮ್ಮ ಮುಂದಿನ ಪೀಳಿಗೆಯ ಜನತೆ ಒಂದು ಶಾಪಕ್ಕೆ ನಾವು ಗುರಿಯಾಗಬೇಕಾಗುತ್ತದೆ. ಆದುದರಿಂದ ಕಾವೇರಿ ನದಿ ನೀರಿನ ಎಲ್ಲಾ ಯೋಜನೆಗಳನ್ನೂ ಜರೂರಾಗಿ ಮಾಡಲು ತಮಗೆ ಬಲಬೇಕಾದರೆ ನಾವು ಕೊಡುತ್ತೇವೆ. ತಕ್ಷಣ ಯಾವ ಯಾವ ಕೆಲಸಗಳು ಪೂರ್ತಿಯಾಗಬೇಕು ಅವನ್ನು ಸರ್ಕಾರ ಮಾಡುತ್ತದೆ ಎನ್ನುವ ಪೂರ್ಣ ಆಶ್ವಾಸನೆಯನ್ನು ಕೊಡಬೇಕು ಎಂದು ತಮ್ಮ ಮುಖೇನ ಮಾನ್ಯ ಮುಖ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈ ಸಭೆಯಲ್ಲ ನಾವೆಲ್ಲರೂ ಒಂದಾಗಿ ತಮಗೆ ಏನು ಸಹಾಯಬೇಕಾದರೂ ಕೊಡಲು ಸಿದ್ಧರಿದ್ದೇವೆ. ಇದರ ಬಗ್ಗೆ ಒಂದು ನಿರ್ಣಯ ಬೇಕಾದರೂ ತಂದು ತಮಗೆ ಬಲವನ್ನು ಕೊಡ ಬಹುದು ಮತ್ತು ತಮ್ಮ ಶಕ್ತಿಯನ್ನು ತುಂಬಲಕ್ಕೆ ಏನು ಬೇಕಾದರೂ ಮಾಡುತ್ತೇವೆ. ಬೇಗನೆ ಇವು ಕಾರ್ಯಗತವಾಗುವಂತೆ ಮಾಡಬೇಕು ಇದರ ಬಗ್ಗೆ ನಾವು ಹೆಚ್ಚು ಮಾತನಾಡಬೇಕೆಂದೇನಿಲ್ಲ. ಮತ್ತು ರಿಸೋರ್ಸಸ್ ಕಮಿಟಿ ರಿಪೋರ್ಟ್ ಬರಲಿ ನಮಗೆ ಎಷ್ಟು ಹಣ ಬರುತ್ತದೋ ಅದನ್ನು ನೋಡಿ ಮಾಡೋಣ ಎನ್ನಬಹುದು. ನಾನಾದರೂ ಕೂಡ ಈ ಸಂದರ್ಭದಲ್ಲಿ ಹೇಳುತ್ತೇನೆ ರಿಸೋರ್ಸಸ್ ಕಮಿಟಿಯಲ್ಲಿ ನಾನು ಮೆಂಬರ್ ಆಗಿದ್ದೇನೆ. ರಿಸೋರ್ಸ್ ಕಮಿಟಿಮೇಲೆ ಕಾರಣ ಹೇಳಿ ಜಾರಿಕೊಳ್ಳುವ ನೀತಿ ಸರಿಯಲ್ಲ. ರಿಸೋರ್ಸಸ್ ಕಮಿಟಿಯವರು ಫೈನಾನ್ಸ್ ಕಮೀಷನ್ ಬರುತ್ತದೆ ಎಂದು ನಮ್ಮ ದಾಯಿಗೆ ಬೇಗ ಹಾಕಿದರು. ಫೈನಾನ್ಸ್ ಕಮೀಷನ್ ವರದಿ ಬಂದದ್ದು ಕೂಡ ಆಯಿತು. ಅದರಲ್ಲೂ ಕೂಡ ಏನಾಗಿದೆ ಎಂದು ಗೊತ್ತಾಗಿದೆ. ಆದುದರಿಂದ ನಾನು ಹೇಳುವುದು ಫೈನಾನ್ಸ್ ಕಮೀಷನ್ ರಿಪೋರ್ಟ್ ಯಾವ ರೀತಿಯೇ ಬರಲಿ, ಈಗ ಎಕ್ಸ್ಟ್ರಾಜಿನ ಹರಾಜಿನಿಂದ ಬರುವ ಹಣ 8½ ಕೋಟಿ ರೂಪಾಯಿಯನ್ನು ಪ್ರತ್ಯೇಕವಾಗಿ ನೀರಾವರಿ ಯೋಜನೆಗೆ ತೆಗೆದಿಡಿ. ಅನಂತರ ಬೇರಾವಣೆ ಮಾಡೋಣ. ನಮ್ಮಲ್ಲಿ ಏನು ರಿಸೋರ್ಸಸ್ ಬೇಕೋ ಅದನ್ನು ಕೊಡುತ್ತೇವೆ, ಈಗ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ಕಾರ್ಯಗತ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಈ ಸಭೆಗೆ ಜವಾಬ್ದಾರಿಯಾವ ಮುಖ್ಯಮಂತ್ರಿಗಳು ಕೊಡಬೇಕು. ಅವರು ಖರಾರುವಾಕ್ಕಾದ ಆಶ್ವಾಸನೆ ಕೊಟ್ಟರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಆದುದರಿಂದ ಈ ಕೆಲಸದಲ್ಲಿ ಮುಖ್ಯಮಂತ್ರಿಗಳು ಏನು ಮಾಡುತ್ತಾರೆಂಬುದನ್ನು ತಿಳಿಸಬೇಕು ಮತ್ತು ಈ ಬಗ್ಗೆ ಆಶ್ವಾಸನೆ ಕೊಡಬೇಕೆಂದು ತಮಗೆ ಈ ಸೂಚನೆ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

†ಶ್ರೀ ಹೆಚ್. ಸಿದ್ದವೀರಪ್ಪ (ಹರಿಹರ).—ಈಗ ಈ ಅಧಿವೇಶನ ಪ್ರಾರಂಭವಾದ ಲಾಗಾಯಿತು ಈ ವಿಷಯದಲ್ಲಿ ಅಲ್ಲಿ ಇಲ್ಲಿ ಗುಸುಗುಸು ಮಾತುಕತೆ ನಡೆಯುತ್ತಾ ಇರುವುದರಿಂದ ಈ ಮಾತನ್ನು ಹೇಳಬೇಕಾಗಿದೆ. ಸರ್ಕಾರದ ಹಿತದೃಷ್ಟಿಯಿಂದಲೂ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದಲೂ ಈ ಮಾತನ್ನು ಹೇಳುತ್ತಿದ್ದೇನೆ. ತಾವು ಇದನ್ನು ನಂಬಬೇಕು. ಈಗಾಗಲೇ ಎಲ್ಲಾ ಕಡೆಯೂ ಕಾವೇರಿ ನದಿಯ ವಿಚಾರದಲ್ಲಿ ನಮ್ಮ ದೇಶದಲ್ಲಿ ಹಾಹಾಕಾರ ಹೊರಟಿದೆ. ನನಗೆ ಗೊತ್ತಿರುವ ಹಾಗೆ ಕಾವೇರಿ ಡೆಲ್ಟಾ ಏರಿಯಾ ಕೆಳಗೆ ಬರತಕ್ಕಂಥ ಸುಮಾರು 5 ತಾಲ್ಲೂಕಿನ ಪೈಜೆಗಳು ಹಿಂದೆ

ಮೈಸೂರು ದೇಶದಲ್ಲಿ ಪಬ್ಲಿಕ್ ಸರ್ವಿಸ್ ಕಮೀಷನ್ನಿನ ಸದಸ್ಯರಾಗಿದ್ದಂಥ ಶ್ರೀಮಾನ್ ನಂಜರಾಜ ಅರಸ್‌ರವರ ನೇತೃತ್ವದಲ್ಲಿ ಇದನ್ನು ಕಾರ್ಯಗತ ಮಾಡಿಕೊಡಿ ಎಂದು ಮನವಿ ಕೊಟ್ಟಿದ್ದರು ಮತ್ತು ಸರ್ಕಾರದಲ್ಲೂ ಸಹ ಡಿಪ್ಯೂಟೇಷನ್ ಹೋಗಿದ್ದರು ಎಂದು ಪತ್ರಿಕೆಯಲ್ಲಿ ಓದಿದ್ದೇನೆ. ಈಗ ದೇಶದಲ್ಲಿ ಬಹಳ ತೊಂದರೆ ಇದೆ. ಅದಕ್ಕೆ ಏನು ಬೇಕಾದರೂ ತ್ಯಾಗ ಮಾಡುವುದಕ್ಕೆ ಸಿದ್ಧರಾಗಿದ್ದೇವೆ. ನಿಮಗೆ ಹೋದ ಬಡ್ಜೆಟ್ಟಿನಲ್ಲಿ ಇದ್ದಂಥ ಕಾತುರತೆ ಈಗ ಇದ್ದಹಾಗೆ ನನಗೆ ಭಾಸವಾಗುವುದಿಲ್ಲ. ಕಾರಣ ಹೋದ ಅಧಿವೇಶನದಲ್ಲಿ ಈ ವಿಚಾರದಲ್ಲಿ ಸರ್ಕಾರದವರೂ ಮತ್ತು ವಿರೋಧಪಕ್ಷದವರೂ ಬೇರೆ ಬೇರೆ ಭಿನ್ನಾಭಿಪ್ರಾಯ ತೋರಿಸಲಿಲ್ಲ. ಈಗ ಸರ್ಕಾರದವರಿಗೆ ಅಸಕ್ತಿ ಕಡಿಮೆಯಾದ್ದರಿಂದ ನಾನಾದರೂ ಹೇಳುತ್ತೇನೆ. ನಾವು ಇಲ್ಲಿಗೆ ಬಂದಿರತಕ್ಕದ್ದು ಕೇವಲ ಸರ್ಕಾರವನ್ನು ವಿರೋಧ ಮಾಡುವುದಕ್ಕಲ್ಲ. ಅದಷ್ಟುಮಟ್ಟಿಗೆ ಸರ್ಕಾರಕ್ಕೆ ಒಳ್ಳೆಯ ಕಲಸದಲ್ಲಿ ಬೆಂಬಲ ಕೊಡಬೇಕು ಎನ್ನುವ ದೃಷ್ಟಿಯಿಂದ ಬಂದಿದ್ದೇವೆ. ನೀವು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ಎನ್ನುವ ಆಶ್ವಾಸನೆ ಕೊಡಬೇಕು. ಈಗ ನಿಮ್ಮ ಭಾಷಣಗಳನ್ನು ನೋಡಿದರೆ ಮಂಕಾಗುತ್ತದೆ. ಏತಕ್ಕೆಂದರೆ 1924ರ ಅಗ್ರಿಮೆಂಟ್ ಪ್ರಕಾರ 1974ನೇ ಇಸವಿಯೊಳಗೆ ಕಾವೇರಿ ನದಿ ನೀರಿನಲ್ಲಿ 45 ಟಿ.ಎಂ.ಸಿ. ಎಫ್.ಟಿ. ಅಷ್ಟು ನೀರನ್ನು ಉಪಯೋಗಿಸಿಕೊಳ್ಳುವ ಹಕ್ಕು ಇದೆ. ಅದನ್ನು ಉಪಯೋಗಿಸಿಕೊಳ್ಳದಿದ್ದರೆ ಬಹಳ ತೊಂದರೆಯಾಗುತ್ತದೆ. ನಿಮ್ಮ ಮೇಲೆ ನಂಬಿಕೆ ಇದೆ, ನಿಜವಾಗಲೂ ನಂಬಿದ್ದೇವೆ. ಅದು ಏನೇ ಇರಲಿ 1924ರ ಒಪ್ಪಂದ ಮುಖ್ಯವಲ್ಲ ಅದನ್ನು ಯಾವಾಗ ಬೇಕಾದರೂ ಮಾಡಿಕೊಳ್ಳಬಹುದು ಎನ್ನುವ ಅಭಿಪ್ರಾಯ ಸರ್ಕಾರಕ್ಕೆ ಇದ್ದರೆ ಅದನ್ನಾದರೂ ತೀವ್ರವಾಗಿ ತಿಳಿಸಿಬಿಡಿ. ಇದನ್ನು 1974ನೇ ಇಸವಿ ಪೂರೈಸುವುದರೊಳಗೆ ಪೂರೈಸುತ್ತೇವೆ ಎಂದು ನೀವು ಹಿಂದು ಕಮಿಟಿ ಮಾಡಿದಿರಿ. ಆ ರಿಸೋರ್ಸಸ್ ಕಮಿಟಿಯಲ್ಲಿ ನಾವು ಕೇಳಿದೆವು, ಅಪರೂ ಮಾಡುತ್ತೇವೆ ಎಂದು ಹೇಳಿದರು, ಅದಕ್ಕೆ ನಾವು ಒಪ್ಪಿಕೊಂಡಿವಿ. ಆಮೇಲೆ ನಾನೇ ಆ ಕಮಿಟಿಯಲ್ಲಿ ಸಲಹೆ ಕೊಟ್ಟೆ. ಏನೆಂದರೆ ಹೇಗೂ ಜುಲೈ ತಿಂಗಳಿನಲ್ಲಿ ಫೈನಾನ್ಸ್ ಕಮೀಷನ್‌ನವರು ರಿಪೋರ್ಟ್ ಕೊಡುತ್ತಾರೆ. ಅದರಲ್ಲಿ ಏನಾದರೂ ಅನುಕೂಲವಾಗಬಹುದು ಎಂದು ಹೇಳಿದನೆ ಹೊರತು ಬೇರೆ ಯಾವ ಉದ್ದೇಶದಿಂದಲೂ ಹೇಳಿಲ್ಲ. ಅದೂ ಕೂಡ ಬಯಲಿಗೆ ಬಂದಿದೆ. ಆದರಿಂದ ಒಳ್ಳೆಯ ಪ್ರಯೋಜನವಾಗುವುದಿಲ್ಲ.

ಈಗೆಷ್ಟು ಫೈನಾನ್ಸ್ ಕಮಿಷನ್ನಿನಿಂದ ಅನ್ಯಾಯವಾಗಿದೆ ಎಂಬ ಬಗ್ಗೆ ಮಂತ್ರಿಗಳು ಒಂದು ಹೊತ್ತಿಗೆಯನ್ನು ಕೊಟ್ಟಿದ್ದಾರೆ, ಮುಖ್ಯಮಂತ್ರಿಗಳು ದೆಹಲಗೆ ಹೋಗಿಬಂದರು, ಕೇಂದ್ರ ಸರಕಾರವೇನು ಮಾಡುವುದು, ಪ್ರಧಾನಿಯವರೇನು ಆಶ್ವಾಸನೆ ಕೊಟ್ಟಿದ್ದಾರೆ ಎಂದು ಹೇಳಿದರೆ ಒಳ್ಳೆಯದು. ಬರೀ ಮಾತಿನಿಂದ ಮತ್ತು ಇಲ್ಲಿ ಚರ್ಚೆ ಮಾಡುವುದರಿಂದೇನೂ ಪ್ರಯೋಜನವಾಗುವುದಿಲ್ಲ. 1974ರೊಳಗಾಗಿ ಕಾವೇರಿ ನೀರನ್ನು ಉಪಯೋಗಿಸಿಕೊಳ್ಳಬೇಕು. ಕೃಷ್ಣ ನೀರನ್ನು ಉಪಯೋಗಿಸಿಕೊಳ್ಳಲು ಕಾರ್ಯಕ್ರಮವಿದೆ, ಕಾವೇರಿ ಮತ್ತು ಕೃಷ್ಣ ಎರಡೂ ಮುಖ್ಯ. ಆದರೆ ಕಾವೇರಿ ನೀರನ್ನು ಉಪಯೋಗಿಸಿಕೊಳ್ಳಲು ಅತುರವಿರುವುದು, 1974ರೊಳಗಾಗಿ ಉಪಯೋಗಿಸಿಕೊಳ್ಳದಿದ್ದರೆ ನಮ್ಮ ಹಕ್ಕು ಹೋಗುವುದು ಎಂಬ ಭಯ, ಭೀತಿ, ಸಂದೇಹ ಇವೆ. ಅದಕ್ಕಾಗಿ ಸರಕಾರದವರು ಬೇರೆ ರೀತಿಯಿಂದ ಯೋಚನೆ ಮಾಡದೆ 1974ರೊಳಗಾಗಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ, ಅದಕ್ಕೆ ಪೂರ್ವಭಾವಿಯಾಗಿ ಈ ವರ್ಷ ಇಷ್ಟು ಕೋಟಿ ಖರ್ಚು ಮಾಡುತ್ತೇವೆ ಎಂಬ ಭರವಸೆ ಕೊಡಬೇಕು. ಹಣ ಹೇಗೆ ಬರಬೇಕೆಂಬುದು ಗೊತ್ತಿದೆ, ಹಣಕಾಸಿನ ಮಂತ್ರಿಗಳನ್ನು ಕೇಳಿದರೆ ಸಲಹೆ ಕೊಡುವರು. ಜನರ ಮನಸ್ಸಿನಲ್ಲಿ ನಮನ್ಯಗಳು ಬಹಳವಾಗಿವೆ, ಅಭಿಪ್ರಾಯ ಬೇರೆಬೇರೆ ಕವಲಾಗಿ ಒಡೆಯಬಾರದು. ಈ ಪಕ್ಷ ಆ ಪಕ್ಷ ಎಂದು ಭೇದ ಮಾಡದೆ ಎರಡೂ ಕಡೆ ಕಾವೇರಿ ನೀರಿಗಾಗಿ ಹೋರಾಡುತ್ತಿರುವವರಿರುವುದರಿಂದ ಜಾಗ್ರತೆ ಸೂಕ್ಷ್ಮ ಕ್ರಮ ಕೈಕೊಳ್ಳಬೇಕಾದ್ದು ಅವಶ್ಯಕ. ಈಗ ಸುಮ್ಮನೆ ಹಬೆ ಇದೆ, ಬೆಂಕಿ ಕಾಣುತ್ತಿಲ್ಲ, ಹೊಗೆ ಬೇಕಾದಷ್ಟಿದೆ, ಅದನ್ನು ದೂರಮಾಡಬೇಕು. ಇವನ್ನೆಲ್ಲಾ ಗಮನಿಸಿ ತೆರೆದ ಮನಸ್ಸಿನಿಂದ ಒಂದು ಸರಿಯಾದ ಹೇಳಿಕೆ ಕೊಡಬೇಕು, ತೃಪ್ತಿಕರವಾದ ಹೇಳಿಕೆ ಕೊಡಬೇಕು, ಕಾವೇರಿ ಬೇಸಿನ್‌ನಲ್ಲಿ ಪ್ರಾಮುಖ್ಯವಾಗಿರುವ 4 ಪ್ರಾಜೆಕ್ಟುಗಳಿಗೆ ಕನಿಷ್ಠಪಕ್ಷ 10 ಕೋಟಿ ರೂಪಾಯಿಗಳನ್ನಾದರೂ ಖರ್ಚುಮಾಡುತ್ತೇವೆ ಎಂದು ಹೇಳಬೇಕು. ಹಾಗೆ ಸ್ಪಷ್ಟಪಡಿಸಿದರೆ ಜನರು ಸರಕಾರವನ್ನು ಅಭಿನಂದಿಸುತ್ತಾರೆ ಮತ್ತು ಎಲ್ಲರ ವಿಶ್ವಾಸಕ್ಕೆ ಪಾತ್ರರಾಗುತ್ತಾರೆ ಎಂದು ಹೇಳಿ ನನ್ನ ಮಾತನ್ನು ಪೂರೈಸುತ್ತೇನೆ.

Mr. SPEAKER.—Now on the points raised by Hon'ble Members Sivappa and Siddaveerappa, we have to see whether there is any scope for discussion. The matter is not actually under discussion. The point is, whether it is possible to allow some time for it, and if so, what

(MR. SPEAKER)

should be done? Members know that at the request of the Hon'ble Leader of the Opposition, I called upon the Hon'ble Leaders of parties to come together; secondly a number of Hon'ble Members on both the sides had met in my me chamber. Hon'ole Members Sriyuths S. Sivappa, Gopal Gowda, and Hutchmasti Gowda discussed this question with the Hon'ble Minister for Parliamentary Affairs; later on, the Hon'ble Chief Minister also joined us. I found that there was almost a sort of agreement between Leaders of parties on both the sides. If the House so desires, I shall once again call members on both sides to come together and if they come to some settlement or agreement the matter may be dealt with accordingly.

As far as the notice of motion given by Sri Nanje Gowda is concerned, I had to disallow it on the ground that the matter was not of recent occurrence. Hon'ble Members have expressed doubt about it. I shall peruse the records and give a finding about it.

They only motion before me is, the notice of motion given by Sri H. M. Channabasappa. I have not given a ruling on it. I shall call upon the representatives of both sides to come together again. If they do not come to a settlement, I shall give my ruling on the subject. Therefore, for the time being, the matter should rest there.

I remind the Hon'ble Members that in the list of Business for yesterday, debate on matters connected with the Electricity Board had to be taken up. When the Hon'ble Whip Sri Hutchmasthi Gowda pleaded that time should be extended, I stated that we should not skip over items on the agenda. Then there is the Motion on Scarcity Conditions also in the List of Business. The Hon'ble Members were persuading me and appealing to me that an opportunity should be given for discussion on scarcity conditions in the State. I request the Members to utilise the time available to the best advantage without deviating from the agenda.

As regards the motion pertaining to the Technical Data Committee Report on Cauvery waters, if both the sides come to an understanding, there is no difficulty in extending the current session. I am calling a meeting of the Business Advisory Committee and the matter may be taken up there. Now I think we may proceed with the regular agenda and stop further discussion on Sri Channabasappa's motion.

†ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಈ ಪ್ರಾಜೆಕ್ಟುಗಳನ್ನು ತಗೆದುಕೊಳ್ಳುವುದಕ್ಕೆ ತೊಂದರೆ ಹಣವ ಮುಗಟ್ಟು. ಅದ್ದರಿಂದ ಮಾಡವದಕ್ಕೆ ಆಗುತ್ತಾ ಇಲ್ಲ ಎಂದು ಹೇಳುತ್ತಾ ಇದ್ದಾರೆ. ಇದಕ್ಕೆ ನಮ್ಮ ಸಲಹೆ ಇಷ್ಟೆ. ಪಾನಸರೋಧವನ್ನು ತಗೆದು ಹಾಕಿದ್ದರಿಂದ ನುಮಾರು 10-12 ಕೋಟಿ ರೂಪಾಯಿ ಬಾಳುತ್ತದೆ ಎಂದು ತಿಳಿದುಕೊಂಡಿದ್ದೆವು. ಆದರೆ 20 ಕೋಟಿ ರೂಪಾಯಿ ಬರುತ್ತದೆ. ಎಂದರೆ ನುಮಾರು 8 ಕೋಟಿ ರೂಪಾಯಿ ಜಾಸ್ತಿ ಬಂದ ಹಾಗೆ ಆಯಿತು. ಅದುದರಿಂದ ತಾವು ಸಾಲವಾದರೂ ಮಾಡಿ ಈ ಕಾರ್ಯಗಳನ್ನೆಲ್ಲಾ ಮಾಡಬಹುದು ಏಕೆಂದರೆ 1974ನೇ ಇನವಿ ಆದಮೇಲೆ ಬೇಕಾದರೂ ಈ ಸಾಲಗಳನ್ನು ತೀರಿಸಬಹುದು. ಆದರೆ ಪ್ರಾಜೆಕ್ಟುಗಳನ್ನು ಮಾಡು

ವುದಕ್ಕೆ ಆಗುವುದಿಲ್ಲ. ತಮ್ಮ ಹತ್ತಿರ ದುಡ್ಡು ಇಲ್ಲವೇ ಇವ್ವರೆ ಸಲಬೇಕಾದರೂ ಮಾಡಿ, ಅದಕ್ಕೆ ನಮ್ಮ ಒಪ್ಪಿಗೆಯನ್ನು ಕೊಡುವುದಕ್ಕೆ ತಯಾರಾಗಿದ್ದೇವೆ, ಈ ಕೆಲಸಗಳನ್ನು ಪೊಟ್ಟಮೊದಲು ಮಾಡಿಸಬೇಕು ಎಂದು ಸಲಹೆ ಮಾಡುತ್ತಾ ಇದ್ದೇನೆ.

2-30 P. M.

†Sri H. M. CHANNABASAPPA (Periyapatna).—There is a feeling in the Government that we are anxious to have a discussion. The purpost of having a discussion here is to strengthen the hands of the Governmene to take action and if the Government itself is prepared to take action on the lines already suggested, I for one, and I am sure all the Members of this House, will not press for a discussion. But the statement of the Chief Minister must be such as to not merely infuse confidence in us but also infuse confidence in the minds of all the people of the State by his immediate acton. A mere statement not followed up by action is not the thing we want. We want a categorical statement to be made by the Government on these lines: (1) the Goverement would take all action necessary to build up organisation, find funds and push through the projects well in time and complete the projects before 1974; (2) that this Government, in view of the fact that Madras has flouted the agreement, must say that we are not bound by that, nor are we bound by the clearance of the Central Government and we will go ahead whether we have clearance or not. ಈ ವಿಷಯಗಳನ್ನೆಲ್ಲಾ ಇಲ್ಲಿ ಕೂಲಂಕಷವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಎಲ್ಲಾ ಕಾರ್ಯಗಳನ್ನೂ ಸರ್ಕಾರದವರು ಎಷ್ಟೇ ಖರ್ಚುಗಳು ಬರಲಿ 10 ಕೋಟಿ ಮೇಲೆ ಖರ್ಚಾದರೂ ಚಿಂತೆಯಿಲ್ಲ ಮಾಡುತ್ತೇವೆಂಬ ಭರವಸೆಯನ್ನು ಕೊಟ್ಟರೆ ಅದಕ್ಕೂ ನಮ್ಮ ಅಡ್ಡಿಯಿಲ್ಲ. ಅವರು ಈ ಯೋಜನೆಗಳಿಗೆ ಬೇಕಾಗತಕ್ಕ ಹಣವನ್ನು ಬೆಗ್, ಬಾರೊ ಆರ್ ಸ್ಟೀರ್ ಎಂದು ಹೇಳುವಂತೆ ಹೇಗಾದರೂ ಹಣವನ್ನು ಒದಗಿಸಿಕೊಳ್ಳಲಿ, ಅದಕ್ಕೂ ನಮ್ಮ ಅಡ್ಡಿಯಿಲ್ಲ. ನಮಗೆ ಮುಖ್ಯವಾಗಿ ಬೇಕಾದ್ದು ಒಂದು ಆಶ್ವಾಸನೆ. ಅದನ್ನು ಸರ್ಕಾರದವರು ಕೊಡದೆ ಇಲ್ಲವ ತೊಂದರೆಯನ್ನೆಲ್ಲಾ ಅವರು ಆಹ್ವಾನ ಮಾಡಿ ಅದನ್ನು ತಮ್ಮ ತಲೆಯಮೇಲೆ ಎಳೆದುಕೊಳ್ಳುತ್ತೇವೆ ಎಂದರೆ ಅದಕ್ಕೂ ಅವರೇ ಜವಾಬ್ದಾರರು. ಅದೆಲ್ಲವನ್ನೂ ಚರ್ಚೆಮಾಡಲು ಅವಕಾಶಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಎ೯ರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕಾವೇರಿ ನದಿಯ ನೀರನ್ನು ಉಪಯೋಗ ಮಾಡಿಕೊಳ್ಳುವುದರ ಬಗ್ಗೆ ಮತ್ತು ಆ ನೀರನ್ನು ನಾವು 1974ರೊಳಗೇ ಆ ನಮ್ಮ ಹಕ್ಕಿನ ನೀರನ್ನೆಲ್ಲಾ ನಾವು ಉಪಯೋಗಮಾಡಿಕೊಳ್ಳಬೇಕೆಂಬ ವಿಚಾರದಲ್ಲಿ ಒಂದು ನವಿ ಸ್ತಾರವಾದ ಚರ್ಚೆ ನಡೆಯಬೇಕೆಂದು ಒಂದು ಆಗ್ರಹಪೂರ್ವಕವಾದ ಬೇಡಿಕೆ ಬಂದುದರಿಂದ ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಎಂಬುದು ತಮ್ಮೆಲ್ಲರಿಗೂ ಗೊತ್ತಿರುವ ವಿಷಯ. ಅದರೂ ಇನ್ನೂ ಇದರ ಬಗ್ಗೆ ಒತ್ತಾಯಗಳು ಬರುತ್ತಲೇ ಇವೆ. ಇದೇ ರೀತಿಯಾಗಿ ಆ ಕೃಷ್ಣಾ ಮತ್ತು ಗೋದಾವರಿಯಲ್ಲಿ ನಮಗಿರತಕ್ಕ ಹಕ್ಕಿನ ನೀರನ್ನು ನಾವು 1974ರೊಳಗೆ ಉಪಯೋಗಮಾಡಿಕೊಳ್ಳಲು ಅದರ ಬಗ್ಗೆಯೂ ಜನರಿಂದ ಸಾಕಷ್ಟು ಒತ್ತಾಯಗಳು ಬರುತ್ತಿವೆ. ನಾನು ಇದೇ ಮಾನ್ಯ ಸಭೆಯಲ್ಲಿ ಅನೇಕವೇಳೆ ಹೇಳಿದ್ದೇನೆ. ಈ ದಿನವೂ ಕೂಡ ನಾನು ವೈಯಕ್ತಿಕವಾಗಿ ಹೇಳಬೇಕೆಂದರೆ ಎಲ್ಲ ವಿಷಯುಗಳಿಗಿಂತಲೂ ಒಂದು ಹೆಚ್ಚಿನ ಪ್ರಾಮುಖ್ಯತೆಯನ್ನು ಹಾಗೂ ಒಂದು ಹೆಚ್ಚಿನ ಪ್ರಾಶಸ್ತ್ಯವನ್ನು ಈ ವ್ಯವಸಾಯದ ಬಾಬಿಗೆ ಕೊಡಬೇಕೆಂದು ಮನಸ್ಸನ್ನು ಮಾಡಿಕೊಂಡಿದ್ದೇನೆ. ಈ ವಿಚಾರ ಅನೇಕ ಮಾನ್ಯ ಸದಸ್ಯರಿಗೂ ಬಹುಶಃ ಗೊತ್ತಿರಬಹುದು. ನಾವು ಪೊದಲು ಯಾವ ಒಂದು ದಾಮಾಷದಲ್ಲಿ ಈ ವ್ಯವಸಾಯದ ಬಾಬಿಗೆ ಹಣವನ್ನು ಖರ್ಚುಮಾಡುತ್ತಿದ್ದೆವೋ ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಯೋಜನೆಗಳಿಗಾಗಿ ಹಣವನ್ನು ಖರ್ಚುಮಾಡರಾಗುತ್ತಿದೆ. ಆ ಕಾವೇರಿ ನದಿಯ ನೀರಿನಲ್ಲಿ ನಮ್ಮ ಪಾಲು ಎಷ್ಟಿದೆ ಮತ್ತು ಅದನ್ನು ಯಾವ ರೀತಿ ನಾವು ಉಪಯೋಗಮಾಡಿಕೊಳ್ಳಬೇಕು ಎನ್ನುವ ವಿಚಾರದಲ್ಲಿ ಇದೇ ಮಾನ್ಯ ಸಭೆಯಲ್ಲಿ ಬೇಕಾದಷ್ಟು ವೇಳೆ ಚರ್ಚೆಯಾಗಿದೆ. ಅದರ ಬಗ್ಗೆ ಇನ್ನೂ ಒಂದು ಹೆಚ್ಚಿನಮಟ್ಟದಲ್ಲಿ ಚರ್ಚೆಯಾಗಬೇಕೆಂದು ಸದಸ್ಯರು ಒತ್ತಾಯ ಮಾಡಿ

(ಶ್ರೀ ವೀರೇಂದ್ರ ಪಾಟೀಲ್)

ದ್ದಕ್ಕೆ ನಾನೂ ಕೂಡ ಅದನ್ನು ಒಪ್ಪಿಕೊಂಡು ಆ ಕಾವೇರಿ ಬೇಸಿನ್ನಿಗೆ ಸಂಬಂಧಪಟ್ಟ ಜನರನ್ನೆಲ್ಲಾ ಕರೆಸಿಕೊಂಡು ಅದನ್ನು ಚರ್ಚೆ ಮಾಡೋಣ ಎಂದು ಹೇಳಿದ್ದ ಪ್ರಕಾರ ಅದರ ಚರ್ಚೆಯಾಗಿದೆ. ಕಾವೇರಿ, ಕೃಷ್ಣಾ ಮತ್ತು ಗೋದಾವರಿ ನದಿಗಳ ನೀರನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳಬೇಕು ಎನ್ನುತಕ್ಕ ಬಗ್ಗೆ ಇತ್ತಕಡೆಯ ಸದಸ್ಯರು ಮತ್ತು ಅತ್ತಕಡೆಯ ಸದಸ್ಯರು ಎಲ್ಲರೂ ಮಾತನಾಡಿದ್ದಾರೆ. ಇದರಲ್ಲಿ ಯಾವ ರಾಜಕೀಯವೂ ಇಲ್ಲ. ಈ ನೀರನ್ನು ಸಂಪೂರ್ಣವಾಗಿ ಉಪಯೋಗಮಾಡಿಕೊಳ್ಳಬೇಕೆಂಬ ಹೊಣೆಗಾರಿಕೆ ಕೇವಲ ಸರ್ಕಾರದ್ದೇ ಅಲ್ಲ. ಅದರ ಹೊಣೆ ಈ ಮಾನ್ಯ ಸಭೆಯ ಮೇಲೂ ಇದೆ. ಈ ವಿಚಾರದಲ್ಲಿ ಎಲ್ಲಾ ಪಕ್ಷಗಳೂ ತಮ್ಮ ಪಾಲಿನ ಕರ್ತವ್ಯಗಳನ್ನು ಪಾಲಿಸಲೆಂಬ ಉದ್ದೇಶದಿಂದ ಈ ನದಿಗಳ ನೀರಿನ ಉಪಯೋಗದಲ್ಲಿ ಸರ್ಕಾರಕ್ಕೆ ತಗಲತಕ್ಕ ಹೆಚ್ಚಿದ ಬಗ್ಗೆ ಒಂದು ರಿಸೋರ್ಸಸ್ ಸಮಿತಿಯನ್ನೂ ಮಾಡಲಾಯಿತು. ರಿಸೋರ್ಸಸ್ ಕಮಿಟಿಯವರು ಇದೀಗ ಮಾನ್ಯ ಶ್ರೀ ಸಿದ್ದವೀರಪ್ಪನವರು ಹೇಳಿದಹಾಗೆ ಇಲ್ಲಿಯವರೆಗೂ ಕೂತು ಒಂದು ನಿರ್ಣಯಕ್ಕೆ ಬರುವುದಕ್ಕೆ ಸಾಧ್ಯವಾಗಲಿಲ್ಲ. ಫೈನಾನ್ಸ್ ಕಮಿಷನ್ನಿನಿಂದ ಅವಾರ್ಡ್ ಬರುವವರೆಗೂ ಇದನ್ನು ತಡೆಯೋಣವೆಂದು ನಿರ್ಣಯ ಮಾಡಿದ್ದರಿಂದ ಇಷ್ಟರವರೆಗೂ ಏನೂ ಕೆಲಸಮಾಡುವುದಕ್ಕಾಗಲಿಲ್ಲ. ಈಗ ಫೈನಾನ್ಸ್ ಕಮಿಷನ್ನಿನ ಅವಾರ್ಡ್ ಬಂದಿದೆ, ಈಗ ಹಣಕಾಸಿನ ಸ್ಥಿತಿಗತಿಯೇನು, ಫೈನಾನ್ಸ್ ಕಮಿಷನ್ನಿನಿಂದ ನಮಗೆ ಬಂದಂಥ ಅನುಕೂಲವೇನು, 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟರವರೆಗೆ ಹಣ ಒದಗುತ್ತದೆ—ಈ ಎಲ್ಲಾ ಅಂಶಗಳೂ ಅವರ ಮುಂದಿವೆ. ಅದಕ್ಕಾಗಿ ಅವರಿಗೆ ಪ್ರತ್ಯೇಕವಾಗಿ ಭೇಟಿಯಾದಾಗಲೂ ಹೇಳಿದ್ದೇವೆ. ಆದ್ದರಿಂದ ರಿಸೋರ್ಸಸ್ ಕಮಿಟಿಯವರು ಅವರ ಕೆಲಸವನ್ನು ಆದಷ್ಟು ಜಾಗ್ರತೆ ಮುಗಿಸಿ ನಮಗೆ ವರದಿ ಸಲ್ಲಿಸಿದರೆ ನಾವು ಮುಂದಕ್ಕೆ ಹೋಗಬಹುದೆಂದು ಅವರಿಗೆ ಹೇಳಿದ್ದೇವೆ. ಇನ್ನು ವಿರೋಧಪಕ್ಷದ ನಾಯಕರಿಗೆ ಹೇಳುವುದಾದರೆ, ಕೇವಲ ಹಣಕಾಸಿನ ಮತ್ತು ಉಳಿದ ಶಕ್ತಿಗೆ ಯಾರಲ್ಲೂ ಪೊರೆ ಹೋಗಬೇಕಾಗಿಲ್ಲ. ಅದಕ್ಕಾಗಿ ಪದೇ ಪದೇ ನೀರಿನ ಪೂರ್ತಿ ಉಪಯೋಗ ಅಗ್ರಿಮೆಂಟ್ ಪೀರಿಯಡ್‌ನೊಳಗೆ ಮಾಡಿಕೊಳ್ಳುವುದಕ್ಕೆ ಏನೇನು ಪ್ರಯತ್ನಗಳನ್ನು ಮಾಡಬೇಕೋ ಆ ಪ್ರಯತ್ನಗಳನ್ನು ಮಾಡುವುದರಲ್ಲಿ ತಾವೆಲ್ಲರೂ ಪೂರ್ತಿಯಾಗಿ ಸಹಕರಿಸಬೇಕೆಂದು ಹೇಳಿದ್ದೇವೆ. ಒಂದುವೇಳೆ ಇದಕ್ಕೆ ಹೆಚ್ಚಿನ ದುಡ್ಡು ಪ್ರತ್ಯೇಕವಾಗಿ ಶೇಖರಣೆ ಮಾಡುವ ಅಗತ್ಯ ಬಂದರೆ ಎರಡು ಕಾರ್ಪೊರೇಷನ್ನುಗಳನ್ನು ಮಾಡಬಹುದು. ನೀವೂ ಸಹ ಪರಿಶೀಲನೆಮಾಡಿ ಅದರ ಬಗ್ಗೆ ಶಿಫಾರಸು ಮಾಡಬೇಕು. ಕಾವೇರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮತ್ತು ಕೃಷ್ಣಾ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆಗಬೇಕು. ನಮ್ಮ ರಾಜ್ಯದೊಳಗೆ ಈ ಎರಡು ದೊಡ್ಡ ವ್ಯಾಲಿಗಳು ಇವೆ. ಇವತ್ತು ಬ್ಯಾಂಕ್ ನ್ಯಾಷನಲೈಜ್ ಆಗಿದೆ. ಅದರ ಮುಖಾಂತರ ಹೆಚ್ಚಿನ ಮಟ್ಟಿಗೆ ಅಡ್ವಾನ್ಸ್ ಪಡೆಯಬಹುದು. ಅಡ್ವಾನ್ಸ್ ಕಂಟ್ರಿಬ್ಯೂಷನ್ ಬಿಲ್ ತಯಾರುಮಾಡಿದ್ದಾರೆ. ನಿನ್ನೆ ಆ ಬಿಲ್ ಮುಂಡಿಸಿದ್ದಾರೆ. ಕೆಲವು ವಿಚಾರಗಳು ನನ್ನಲ್ಲಿವೆ. ಅವನ್ನು ರಿಸೋರ್ಸಸ್ ಕಮಿಟಿಯವರಲ್ಲಿ ವಿಚಾರಮಾಡಬೇಕಾಗಿದೆ. ಇಲ್ಲಿ ಅದು ಚರ್ಚೆಗೆ ಬಂದಾಗ್ಲೆ ಎಲ್ಲ ಪರಿಹಾರವನ್ನೂ ಕಂಡುಹಿಡಿಯುವುದಕ್ಕೆ ಸಾಧ್ಯವಾಗಲಲ್ಲ. ಇದು ಈ ಮಾನ್ಯ ಸಭೆಯಲ್ಲಿ ಪದೇ ಪದೇ ಬರುತ್ತಾ ಇದೆ. ನಾನು ವಿಶ್ವಾಸದಿಂದ ಹೇಳುವುದಾದರೆ, ಇವತ್ತು ಯಾವ ಭಾಗದಲ್ಲಿಯೂ ಈ ಕಾವೇರಿ ಡೆವಲಪ್‌ಮೆಂಟ್ ನಿಲ್ಲಿಸಬೇಕು, ಇಲ್ಲಿ ನಿಲ್ಲಿಸಿ ಬೇರೆ ಕಡೆ ಮಾಡಬೇಕೆಂದು ಇಲ್ಲ. ನನಗೆ ಗೊತ್ತಿರುವಹಾಗೆ ಬಹು ದೊಡ್ಡ ಪ್ರಮಾಣದ ಕೆಲಸಗಳನ್ನು ಕಾವೇರಿ ಬೇಸಿನ್‌ನಲ್ಲಿ ಮಾಡಿದ್ದೇವೆ. ಹಾರಂಗಿ ಮಾಡುವುದು ಉಳಿದಿದೆ. ಅದನ್ನೂ ಹೇಳಿದ್ದೇವೆ. ಪೂರ್ತಿ ತಯಾರಾಗಿರತಕ್ಕ ಪ್ಲಾನ್ ಮತ್ತು ಎಸ್ಟಿಮೇಟುಗಳನ್ನು ನಮ್ಮಲ್ಲಿ ಈಗ ಇರುವುದರಿಂದ ಮುಂದೆ ಹಜ್ಜೆ ಇಡುವ ಪರಿಸ್ಥಿತಿ ಇದೆ. ರಿಸೋರ್ಸಸ್ ಕಮಿಟಿಯವರ ಜೊತೆಯಲ್ಲಿ ನಾನೂ ಕೂಡ ಕೂತು ನನ್ನ ಸಲಹೆಗಳನ್ನು ಹೇಳುವುದಕ್ಕೆ ತಯಾರಿದ್ದೇನೆ. ನಾವು ರಚನಾತ್ಮಕವಾಗಿ ವಿಚಾರಮಾಡಿ ಒಂದು ಹಾದಿ ಹುಡುಕಬೇಕು. ಅದಕ್ಕಾಗಿ ನಾವು ಏನು ಸ್ಟೇಟ್‌ಮೆಂಟ್ ಮಾಡುತ್ತೇವೋ ಅದರಲ್ಲಿ ಫಾಲೊ ಆ್ಯಕ್ಷನ್ ಇಲ್ಲದೇಹೋದರೆ ಏನೂ ಪ್ರಯೋಜನವಿಲ್ಲ. ಯಾರೂ ಶೂರನಂತೆ ಇಲ್ಲಿ ಅದರ ಬಗ್ಗೆ ಸ್ಟೇಟ್‌ಮೆಂಟ್ ಮಾಡಬೇಕೆಂಬ ವಿಚಾರವಲ್ಲ. ಮಾತು ಹೆಚ್ಚು ಆಡಲಾರದೆ ಕೃತಿಯಲ್ಲಿ ಅದನ್ನು ಮಾಡಿ ತೋರಿಸಬೇಕೆಂಬ ಮನೋಭಾವನೆಯನ್ನು ನಾವೆಲ್ಲರೂ ತಾಳಬೇಕು. ಇದರಲ್ಲಿ ನಿಮಗೆ ಎಷ್ಟು ಆತುರತೆ ಇದೆಯೋ ನಮಗೂ ಅಷ್ಟೇ ಆತುರತೆ ಇದೆ. ಆದ್ದರಿಂದ ಎಲ್ಲಾ ಕೆಲಸಕಾರ್ಯಗಳನ್ನು ಮಾಡಬೇಕೆಂಬ ಮನಸ್ಸು ಮಾಡಿದ್ದೇವೆ. ಅದಕ್ಕೆ ಒಂದು ಹಾದಿಯನ್ನು ಹುಡುಕಿದ್ದೇವೆ. 20ನೇ ತಾರೀಖು ರಿಸೋರ್ಸಸ್ ಕಮಿಟಿ ಸೇರುತ್ತದೆ. ಅವರ ಜೊತೆಯಲ್ಲಿ ನಾನೂ ಸೇರಿ ಒಂದು ಹಾದಿ ಹುಡುಕಿದರೆ ಆಗ ಆ ಕೆಲಸಕಾರ್ಯಗಳು ತ್ವರಿತಗತಿಯಿಂದ ಪ್ರಾರಂಭ ಮಾಡುವುದಕ್ಕೆ ಮತ್ತು ಪ್ರೋಗ್ರೆಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನನಗನ್ನಿಸುತ್ತದೆ. ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡು

ತ್ತೇನೆ. ಈ ಒಂದು ಸಮಸ್ಯೆ ರಾಜಕೀಯ ಸಮಸ್ಯೆಯಲ್ಲ. ಏನೋ ಮಾಡಿದರು, ಎಲ್ಲೋ ಮಾಡಿದರು ಎಂಬುದಾಗಿ ಹೇಳುವುದು ಸರಿಯಾದ ನಲಹೆಯಲ್ಲ. ಯಾವ್ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಸೇವಿಂಗ್ಸ್ ಮಾಡುವುದಕ್ಕೆ ಸಾಧ್ಯವಿದೆ. ಯಾವ್ಯಾವ ಯೋಜನೆಗಳನ್ನು ಮುಂದೂಡುವುದಕ್ಕೆ ಸಾಧ್ಯವಿದೆ, ರಿಸೋರ್ಸನ್ನು ಪೊಬಿಲೈಜ್ ಮಾಡುವುದಕ್ಕೆ ಸಾಧ್ಯವಿದೆ; ಇವುಗಳಿಂದ ಎಷ್ಟು ದುಡ್ಡು ಬರುತ್ತದೆ—ಇವೆಲ್ಲವನ್ನೂ ನೋಡಿಕೊಂಡು ಅಷ್ಟು ಹಣವನ್ನೂ ನೀರಾವರಿಗೋಸ್ಕರವೇ ಇಡೋಣ. ಇನ್ನೂ ಹೆಚ್ಚು ದುಡ್ಡು ಬೇಕಾದರೆ ಡಿಬೆಂಚರ್ ಲೋನ್ ಅಥವಾ ಬ್ಯಾಂಕುಗಳಿಂದ ಪಡೆಯೋಣ. ಇನ್ನೂ ಇಂತಹ ಅನೇಕ ನಲಹೆಗಳು ಇವೆ. ಇವೆಲ್ಲವನ್ನೂ ನಾವು ರಿಸೋರ್ಸನ್ ಕಮಿಟಿಯಲ್ಲಿ ಕೂತು ದೀರ್ಘವಾಗಿ ವಿಚಾರ ಮಾಡೋಣ. ಅದರ ಬಗ್ಗೆ ನನಗೆ ಗೊತ್ತಿರುವ ಹಾಗೆ ನಾನು ಆಶಾವಾದಿ ಇದ್ದೇನೆ.

ಕಾವೇರಿ ಬೇಸಿನ್ನಿನಲ್ಲಿರತಕ್ಕ ಅನೇಕ ಕೆಲಸಕಾರ್ಯಗಳನ್ನು ತ್ವರಿತಗತಿಯಿಂದ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಂತಹ ಪೂರ್ವಸಿದ್ಧತೆಗಳನ್ನು ಈಗಾಗಲೇ ಮಾಡಿದ್ದೇವೆ. ರಿಸೋರ್ಸನ್ ಕಮಿಟಿಯವರು ಯೋಗ್ಯವಾದ ನಲಹೆಗಳನ್ನು ಕೊಟ್ಟಿದ್ದಾರೆ. ನಮಗೆ ಇದರಿಂದ ಹೆಚ್ಚಿನ ಅನುಕೂಲವಾಗಬಹುದು, ಹೆಚ್ಚಿನ ನೀರಾವರಿ ಅನುಕೂಲ ಒದಗಬಹುದು ಎಂಬ ಆಶೆಯನ್ನು ಇಟ್ಟುಕೊಂಡಿದ್ದೇವೆ. ಇದಕ್ಕೆ ಸಂಬಂಧಪಟ್ಟ ಅನೇಕ ವಿಚಾರಗಳನ್ನು ಇಲ್ಲಿ ಹೇಳುವುದಿಲ್ಲ, ಅದು ಹೇಳುವ ಅವಶ್ಯಕತೆಯೂ ಇಲ್ಲ. ಅದಕ್ಕಾಗಿ ಇನ್ನೊಮ್ಮೆ ಸ್ಪಷ್ಟವಾಗಿ ಹೇಳುತ್ತೇನೆ. ಅವರಿಗೆ ಎಷ್ಟು ಆತುರತೆ ಇದೆಯೋ ಅಷ್ಟೇ ಆತುರತೆ ನಮಗೆಲ್ಲರಿಗೂ ಇವೆ. ನಾವೆಲ್ಲರೂ ಮತ್ತು ರಿಸೋರ್ಸನ್ ಕಮಿಟಿಯವರೂ ಕೂತುಕೊಂಡು, ಇದಕ್ಕೆ ಒಂದು ಹಾಸು ಹುಡುಕಿ ಎಲ್ಲವನ್ನೂ ತ್ವರಿತಗತಿಯಿಂದ ಮುಗಿಸುವುದಕ್ಕೆ ಪ್ರಯತ್ನ ಮಾಡೋಣ. ಆ ಒಂದು ಪ್ರಯತ್ನ ಮಾಡುವುದರಲ್ಲಿ ನಾನು ಪೂರ್ತಿಯಾಗಿ ನನ್ನ ಶಕ್ತಿಮೀರಿ ಪ್ರಯತ್ನವನ್ನು ಮಾಡುತ್ತೇನೆಂದು ತಮಗೆ ಭರವಸೆಯನ್ನು ನೀಡುತ್ತೇನೆ.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ತಾವು ರಿಸೋರ್ಸನ್ ಕಮಿಟಿಯವರು ಹೇಳಿದ ಮೇಲೆ ಎಂದು ಹೇಳಿದ್ದೀರಿ. ಅದು ನಮಗೂ ಕೂಡ ಸ್ವಲ್ಪ ಗೊತ್ತಾಗುತ್ತಿದೆ. ಅಲ್ಲಿ ಆಗಲಿ, ಆಗದಿರಲಿ, ಇದನ್ನು ಮಾಡಿಯೇ ಮಾಡುತ್ತೇವೆಂದು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ರಿಸೋರ್ಸನ್ ಕಮಿಟಿ ನಾವು ನೀವು ಮಾಡಿದ್ದೇವೆ. ನಾನು ಅವರ ಜೊತೆಯಲ್ಲಿ ಕೂತು ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ತಯಾರಾಗಿದ್ದೇನೆ. ನಿಮ್ಮ ನಲಹೆ ನಮ್ಮ ನಲಹೆ, ಎಲ್ಲವನ್ನೂ ನೋಡಿಕೊಂಡು ಮಾಡೋಣ. ನಾವೇ ಆ ಕಮಿಟಿಯಲ್ಲಿ ಇರುವುದರಿಂದ ನಮ್ಮ ಬಗ್ಗೆ ನಾವೇ ಸಂಶಯಪಟ್ಟುಕೊಂಡರೆ ಹೇಗೆ ಆಗುತ್ತದೆ ?

ಶ್ರೀ ಎಸ್. ಚನ್ನಯ್ಯ.—ಅದೇನೇ ಆಗಲಿ, ಪ್ರಾರಂಭ ಮಾಡಿಯೇ ಮಾಡಬೇಕೆಂದು ಕೈ ಮುಗಿದು ಬೇಡಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ರಿಸೋರ್ಸನ್ ಕಮಿಟಿ ಮಾಡಬೇಕೆಂದು ತಾವೇ ನಲಹೆ ಮಾಡಿದ್ದೀರಿ. ಇದರಿಂದ ನಮಗೆ ಎಷ್ಟು ಹಣ ಉಳಿಸುವುದಕ್ಕೆ ಸಾಧ್ಯವಿದೆ, ಯಾವ ಬಾಬಿನಲ್ಲಿ ಶೇಖರಣೆ ಮಾಡಬಹುದು, ಇವೆಲ್ಲವನ್ನು ನಲಹೆಗಳ ಮೂಲಕ ಕೊಡುತ್ತೇವೆ ಎಂದು ಅವರು ಹೇಳಿದ್ದಾರೆ. ಆಗ ನನಗೆ ಒಂದು ಥೈರ್ಯ ಬಂತು. ಅದರಮೇಲೆ ಪ್ಲಾನ್ಸ್, ಬ್ಲೂಪ್ರಿಂಟ್ಸ್ ಎಲ್ಲಾ ಮಾಡಿದ್ದಾರೆ. ಆದರೂ ಕೂಡ ಮಾಡುತ್ತೇವೆಂದು ಹೇಳಬಹುದಾಗಿದ್ದರೆ, ಇವತ್ತು ಆ ರೀತಿ ಹೇಳಬೇಕಾಗಿದ್ದಿರಲಿಲ್ಲ. ಇವತ್ತು ಆ ರೀತಿ ಹೇಳಿದರೆ, ರಿಸೋರ್ಸನ್ ಕಮಿಟಿ ಕೂಡುವ ಅಗತ್ಯವಿಲ್ಲವೆಂದು ಹೇಳಿದರೆ ಹೇಗೆ ? ನಾವು ಆಶಾವಾದಿಗಳಾಗಿದ್ದೇವೆ. ರಿಸೋರ್ಸನ್ ಕಮಿಟಿಯಲ್ಲಿ ಚರ್ಚೆ ಮಾಡಿ, ಆಮೇಲೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ. ಈ ತಿಂಗಳ ಕೊನೆಯೊಳಗೆ ಒಂದು ನಿರ್ಣಯಕ್ಕೆ ಬರಬಹುದೆಂದು ಕಾಣುತ್ತದೆ. ಆಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ರಿಸೋರ್ಸನ್ ಕಮಿಟಿಯವರು ಹೇಳಿದ್ದನ್ನು ಇವರು ಕ್ಯಾಬಿನೆಟ್ ಸದಸ್ಯರಿಗೆ ಒಪ್ಪಿಸುವಂತಹ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ರಿಸೋರ್ಸನ್ ಕಮಿಟಿಯವರು ಈಗಾಗಲೇ 10 ಕೋಟಿ ರೂಪಾಯಿ ಅಲಾಟ್ ಮಾಡಿ ಎಂದು ಹೇಳಿದ್ದಾರೆ. ತಮ್ಮ ಆರ್ಥಿಕ ಮಂತ್ರಿಯವರೂ ಒಪ್ಪಿಕೊಂಡಿದ್ದಾರೆ. ಈಗ ಅವರಿಗೆ ಇವರಿಗೆ ಕಾಯುತ್ತಾ ಕೂರುವುದಕ್ಕೆ ಸಮಯವಿಲ್ಲ. ಈ ವಿಷಯ ಏನಿದೆ, ಇದಕ್ಕೆ ಯಾರನ್ನಾದರೂ ಕಾಯುತ್ತಾ ಕೂತರೆ ಸಮಯ ಸಮಗೋಸ್ಕರ ಕಾಯುವುದಿಲ್ಲ. ನಷ್ಟವನ್ನು ಯಾರೂ ತುಂಬುವುದಕ್ಕಾಗುವುದಿಲ್ಲ. ರಿಸೋರ್ಸನ್ ಕಮಿಟಿಯವರು ಹೇಳಿದರೆ ಮಾಡುತ್ತೇವೆ, ಇಲ್ಲದಿದ್ದರೆ ಮಾಡುವುದಿಲ್ಲ ಎಂಬ ಥೋರಣೆಯನ್ನು ತಳಿಬಾರದು. ಮಾಡುತ್ತೇವೆಂದು ಹೇಳಬೇಕು. ರಿಸೋರ್ಸನ್ ಕಮಿಟಿಯವರು ಅದಕ್ಕೆ ಏಡ್ ಮಾಡಬೇಕು. ಆಮೇಲೆ ಈ ಸಮಸ್ಯೆಗಳು ಇನ್ನೂ ಇತರ ಅನೇಕ ಸಮಸ್ಯೆಗಳಿಗೆ ಕಾರಣವಾಗಿ ದೇಶದಲ್ಲಿ ಅನಾಹುತವಾಗುವುದಕ್ಕೆ ಕಾರಣವಾಗುತ್ತದೆ.

Mr. SPEAKER.—I request the hon Member not to disclose the discussions that took place in the committee.

Sri H. M. CHANNABASAPPA.—Sir, I want a clarification. The Hon'ble Chief Minister was pleased to say that he is second to none in this matter. I agree and I am very happy about it, but I am unable to understand and this House is also unable to understand why he should not straightaway make the allotment necessary for pushing through the projects immediately so that the projects may go ahead and in the meantime we may sit together and discuss and find out the resources. Only yesterday we voted several crores of rupees by way of Supplementary Grants. This House has given an assurance that we are going to stand by him. So, in view of the shortage of time that is available to us. the projects may be proceeded with without any hindrance whatsover. I appealed to him yesterday to make available Rs. 5 crores ask his engineers to go ahead with all the projects and come before us for additional grants, and we will be prepared to give it. In the meantime the Resources Committee may go ahead with discussing with you and with all the Ministers to find out the necessary resources for it.

Sri VEERENDRA PATIL.—Sir, I have explained all the facts of the case. The hon. Member expects that the Chief Minister should announce that he is going to allot Rs. 5 or 10 crores and then ask the Chief Engineer to go ahead with the projects. It does not take much time to ask my officers to go ahead with the projects. I can do it within twenty-four hours. Now the question is how and from where Rs. 5 or 10 crores are to come. I have to get at least 50 per cent of this amount from out of savings and the remaining 50 per cent by mobilising additional resources. For that I have to find out which are the programme to which the Departments have already committed. I do not know to what extent it will be possible for us to cut short their programmes and make any savings. This is possible only if we sit with those Ministers, discuss with the Secretaries and Heads of Departments and find out how much we can save in each department. That is why I have been urging the members of the Resources Committee to sit with all the Ministers, Secretaries and Heads of Departments and discuss and find out to what extent they can save and also find out to what extent they can further mobilise resources. After that, we can come to a decision. Then it will not take much time to make an announcement and give effect to the decison that we may take.

ಶ್ರೀ ಎಸ್. ಶಿವಪ್ಪ.—ಈಗ ಸರ್ಕಾರದವರು ಏನು ಹೇಳಬೇಕು ಎಂದರೆ ನಾವು ಆ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಮನಸ್ಸು ಮಾಡಿದ್ದೇವೆ, ಕಾರ್ಯಗತ ಮಾಡಿಯೇ ಮಾಡುತ್ತೇವೆ ಎನ್ನುವ ಅಂಶ ಮೊದಲು ನಿರ್ಧಾರ ಆಗಬೇಕು. ಅದನ್ನು ನಿರ್ಧಾರ ಮಾಡಿದಮೇಲೆ ಅದಕ್ಕೆ ಹಣ ಎಲ್ಲಿಂದ ಬರಬೇಕು, ಹೇಗೆ ಒದಗಿಸಬೇಕು ಎಂಬುದು ಎರಡನೆಯ ಪ್ರಶ್ನೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಕಾರ್ಯಗತ ಮಾಡಿಯೇ ಮಾಡುತ್ತೇವೆ ಎನ್ನುವಂಥಾದ್ದನ್ನು ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್.—ಆ ಕೆಲಸ ಮಾಡುವುದಕ್ಕೆ ನಾವು ತಯಾರು ಮಾಡಿಕೊಂಡಿದ್ದೇವೆಂದು ನಾನು ಇಷ್ಟರವರೆಗೆ ಹೇಳಿದ್ದೇನೆ. ಹಣದ ವ್ಯವಸ್ಥೆಗೆ ತಾವುಗಳೆಲ್ಲರೂ ಸಹಕರಿಸಬೇಕು

ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಹಣ ಕೊಟ್ಟಾಗ ಅದನ್ನು ನಾನು ವಿಚಾರ ಮಾಡುತ್ತೇನೆ ಎಂದು ನಾನು ಹೇಳಲಿಲ್ಲ.

I have got the blue-prints ready and it will not take any time to issue order to the engineers.

Mr. SPEAKER.—I am happy that there is no difference of opinion on this matter. I invite all these hon. Members to come to my chamber. Let us have an informal talk in my chamber at 3-15 P.M. when the Chief Minister will also join us. Let all the hon. Members put their heads together and find out a solution. Nobody will be happier than myself if an agreed solution is arrived at.

General Discussion on the Annual Financial Statement of the Mysore State Electricity Board for 1968-69.

†ಶ್ರೀ ಎನ್. ಚೆಕ್ಕೇಗೌಡ (ಹೊಸಕೋಟೆ).—ಮಾನ್ಯ ಸಭಾಪತಿಗಳೇ, ನೆನ್ನೆ ದಿವಸ ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ವಿದ್ಯುಚ್ಛಕ್ತಿ ಮಂಡಲಿಯ 1968-69 ಮತ್ತು 19 9-70ನೇ ಸಾಲಿನ ಬಜೆಟ್ಟಿನ ಬಗ್ಗೆ ಇರುವ ಅನೇಕ ನ್ಯೂನತೆಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದೇನೆ. ಈ ನ್ಯೂನತೆಗಳ ಬಗ್ಗೆ ಇನ್ನೂ ಅನೇಕ ವಿಷಯಗಳನ್ನು ಮತ್ತೆ ನಾನು ಹೇಳಬೇಕಾಗಿತ್ತು. ಈ ನ್ಯೂನತೆಗಳಿಂದ ಎಷ್ಟೊಂದು ಹಣ ಹಾಳಾಗುತ್ತಿವೆ ಎಂಬ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಈಗ ನೀರಾವರಿ ಪಂಪ್‌ಸೆಟ್ಟುಗಳ ಮೇಲಿನ ದರವನ್ನು ಹೆಚ್ಚು ಮಾಡಿದ್ದಾರೆ. ವಿದ್ಯುಚ್ಛಕ್ತಿ ಮಂಡಲಿಯವರು ಏನು ಒಂದು ಅಂಕಿಅಂಶಗಳನ್ನು ಸರ್ಕಾರದ ಮುಂದೆ ಮತ್ತು ಸಾರ್ವಜನಿಕರ ಮುಂದೆ ಮತ್ತು ಬಳಕೆದಾರರ ಮುಂದೆ ಇಟ್ಟಿದ್ದಾರೆಯೋ ಅದು ಬಹಳ ಉತ್ಪ್ರೇಕ್ಷೆಯಿಂದ ಕೂಡಿದೆ ಎಂದು ಹೇಳುತ್ತೇನೆ. ಈಗ ಒಂದು ಬಾವಿಯ ಹತ್ತಿರಕ್ಕೆ ಲೈನ್ ಎಳೆಯುಬೇಕಾದರೆ ಸರಾಸರಿ 3 ಸಾವಿರ ರೂಪಾಯಿಗಳು ಖರ್ಚಾಗುತ್ತದೆಂದು ಮಂಡಲಿಯವರು ಹೇಳಿದ್ದಾರೆ. ಈ ಬಗ್ಗೆ ಅನೇಕ ವಾದ ವಿವಾದಗಳು ಇವೆ. ಇವತ್ತಿನ ದಿವಸ ಮಂಡಲಿಯವರು ಬಳಕೆದಾರರ ಅನುಕೂಲಕ್ಕಾಗಿ 3 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಲೈನ್ ಎಳೆದರೂ ಕೂಡ ಆ ಒಂದು ಸ್ವತ್ತು ಮಂಡಲಿಯವರದ್ದೇ ಆಗಿರುತ್ತದೆ. ಯಾರ ಅನುಕೂಲಕ್ಕಾಗಿ ಲೈನ್ ಎಳೆಯುತ್ತಾರೋ, ಅವರದ್ದೇ ಸ್ವತ್ತು ಎಂದು ಮಂಡಲಿಯವರು ಹೇಳಿದರೆ ದರ ಹೆಚ್ಚು ಮಾಡಿದ್ದನ್ನು ಒಪ್ಪಿಕೊಳ್ಳಬಹುದಾಗಿತ್ತು. ಈಗ ಒಂದು ಭಾಗಕ್ಕೆ ಲೈನ್ ಎಳೆಯಬೇಕಾದರೆ ಒಂದು ಸರ್ವೇಟ್ ಎಸ್ಟಿಮೇಟ್ ತಯಾರು ಮಾಡುತ್ತಾರೆ. ಆ ಭಾಗಕ್ಕೆ ಬೇಕಾಗುವ ಸಾಮಾನುಗಳಿಗೆ ಮತ್ತು ಲೇಬರರ್ಸ್ ಬಗ್ಗೆ ಎಷ್ಟು ಹಣ ಬೇಕಾಗುತ್ತದೆ ಎಂಬುದನ್ನು ಲೆಕ್ಕ ಹಾಕುತ್ತಾರೆ. ಲೇಬರರ್ಸ್ ಬಗ್ಗೆ ಮಂಡಲಿಯವರು ಖರ್ಚು ಮಾಡುವ ಹಣದಲ್ಲಿ ಬಹಳಷ್ಟು ಹಣವನ್ನು ಉಳಿಸಬಹುದು. ಈಗ ಒಂದು ಪೋಲನ್ನು ನೆಡಬೇಕಾದರೆ ಆ ಪೋಲನ್ನು ಗಾಡಿಯಲ್ಲಿ ಹಾಕಿಕೊಂಡು ಅದರ ಹಿಂದೆ ಸ್ಮಶಾನ ಯಾತ್ರೆಗೆ ಹೋಗುವಂತೆ 20-30 ಜನ ಅವರದ್ದೇ ಫೋಷಣೆಗಳನ್ನು ಕೂಗಿಕೊಂಡು ಹೋಗುತ್ತಾರೆ. ನಾಲ್ಕು ಜನ ಮಾಡುವ ಕೆಲಸವನ್ನು 20-30 ಜನ ಮಾಡುತ್ತಾರೆ. ಇಷ್ಟೊಂದು ಜನ ಲೈನ್‌ಮನ್‌ಗಳು ಇದ್ದರೂ ಕೂಡ, ಪ್ಯೂಜ್ ಹೋಗಿದೆ, ಬಂದು ಹಾಕಿಕೊಡಿ ಎಂದುಕೇಳಿದರೆ ಲೈನ್ ಮೆನ್‌ಗಳು ಇಲ್ಲ ಎಂದು ಆಫೀಸ್‌ನವರು ಹೇಳುತ್ತಾರೆ. ಇಲ್ಲ ಹಣ ಹೇಗೆ ಪೋಲಾಗುತ್ತಿದೆ ಎನ್ನುವುದಕ್ಕಾಗಿ ಇಂತಹ ಒಂದು ಉದಾಹರಣೆ ಹೇಳಿದೆ. ಇಲ್ಲಿರುವ ಜನರೇ ಬೋರ್ಡಿಗೆ ಸೇರಿದ ಸಾಮಾನುಗಳನ್ನು ಕದ್ದು ಹೊರಗಡೆ ಮಾರಾಟ ಮಾಡುತ್ತಿರುವುದು ಎಲ್ಲರಿಗೂ ಗೊತ್ತಾಗಿದೆ. ಇದರಲ್ಲಿ ಕಾಪರ್ ವೈರ್ ಕಳ್ಳತನ ಬಹಳ ಜಾಸ್ತಿಯಾಗಿತ್ತು ಎಂದು ಕೇಳಿದ್ದೇವೆ. ಇದಕ್ಕೆ ಕಾರಣ ಇಲ್ಲಿರುವ ಲೈನ್‌ಮನ್‌ಗಳು ಹಾಗೂ ಇನ್ನಿತರರು ಸೇರಿಕೊಂಡು ಬೇಕಾದಷ್ಟು ಹಣವನ್ನು ಪೋಲು ಮಾಡುತ್ತಿದ್ದಾರೆ ಮತ್ತು ಬೆರೆ ಬಾಳುವ ಸಾಮಾನುಗಳನ್ನು ಮಾರಿ ಹಣ ಸಂಪಾದನೆ ಮಾಡುತ್ತಿದ್ದಾರೆ. ವರ್ಕ್ ಚಾರ್ಜ್ ಎಸ್ಟಾಬ್ಲಿಷ್‌ಮೆಂಟಿಗೆ ಸೇರಿರುವ ಜನರೇ ಇವನ್ನೆಲ್ಲಾ ಮಾಡುತ್ತಿದ್ದರೂ ಇದರ ಕಡೆಗೆ ಸರಿಯಾದ ಬಿಗಿ ಇಟ್ಟು ತನಿಖೆ ಮಾಡುತ್ತಿಲ್ಲ. ಇಡೀ ಸಂಟ್ರೂರ್ ಸ್ಟೋರು ಕೈಕೆಳಗೆ ಇರುವ ಲೈನ್‌ಮೆನ್‌ಗಳು ಹಾಗೂ ಇನ್ನಿತರ ಜನರು ಖದೀಮರಾಗಿದ್ದಾರೆ. ಇವರಿಂದಲೇ ಬೋರ್ಡಿಗೆ ವಿಪರೀತವಾದ ನಷ್ಟವಾಗುತ್ತಿದೆ. ಅಲ್ಲದೆ ಇಲ್ಲಿ ಆಗಾಗ್ಗೆ

(ಶ್ರೀ ಎನ್. ಚಿಕ್ಕೇಗೌಡ)

ಸಾಮಾನುಗಳನ್ನು ಹಳೆಯದಾಗಿವೆ ಎಂದು ಹರಾಜು ಹಾಕುತ್ತಾರೆ. ಇವರಲ್ಲಿ ಇಲ್ಲಿರತಕ್ಕ ಅಧಿಕಾರಿಗಳೇ ಸೇರಿಕೊಂಡು ಬೇಕಾದಷ್ಟು ಹಣ ಹೊಡೆಯುತ್ತಿದ್ದಾರೆ, ಹೀಗೆ ಒಂದು ಸಾರಿ ಬಹಳವಾದ ಸಾಮಾನುಗಳು ಕಳುವಾದವು ಎಂದು ಒಬ್ಬ ಲೈನ್‌ಮನ್ ಪತ್ತೆಹಚ್ಚಿ ಕೊಟ್ಟಿದ್ದಾರೆ ಎಂದು ಅವರಿಗೆ ಬೋರ್ಡಿನವರು 250 ರೂಪಾಯಿಗಳ ಬಹುಮಾನ ಕೊಟ್ಟಿದ್ದಾರೆ. ಆಮೇಲೆ ಹಿಡಿದಿಟ್ಟ ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಂಡರೋ ಏನೋ ಒಂದು ಗೊತ್ತಾಗುತ್ತಿಲ್ಲ. ಇದರಿಂದ ಬೋರ್ಡಿಗೆ ಲಕ್ಷಾಂತರ ರೂಪಾಯಿಗಳಷ್ಟು ಹಣ ಪೋಲಾಗುತ್ತಲಿದೆ. ಇದನ್ನೆಲ್ಲಾ ನಿರಿಯಾಗಿ ತನಿಖೆ ಮಾಡಲು ಏರ್ಪಾಡು ಮಾಡಿದ್ದಾರೆಯೇ ಇಲ್ಲವೇ ಎನ್ನುವುದರ ಬಗ್ಗೆ ಸರಕಾರದವರು ತಮ್ಮ ಉತ್ತರದಲ್ಲಿ ಹೇಳಬೇಕು ಎಂದು ಕೇಳುತ್ತೇನೆ. 68-69ನೇ ಸಾಲಿನ ಸ್ಟೇಟ್‌ಮೆಂಟಿನಲ್ಲಿ ಇಲ್ಲಿರುವ ಸ್ಟೋರ್ಸ್‌ಗಳಲ್ಲಿ ಸುಮಾರು ಒಂಬತ್ತೂವರೆ ಕೋಟಿ ರೂಪಾಯಿ ಬೆಲೆಯುಳ್ಳ ಸಾಮಾನುಗಳಿವೆ ಎಂದು ಗೊತ್ತಾಗುತ್ತದೆ. ಇದರಲ್ಲಿ ಬರೇ ಸೆಂಟ್ರಲ್ ಸ್ಟೋರ್ಸ್ ಬಗ್ಗೆ ಹೇಳಿದ್ದಾರೆ. ಇದರಲ್ಲಿ ಸೆಕ್ಷನ್ ಆಫೀಸರು, ಅಸಿಸ್ಟೆಂಟು ಇಂಜನೀಯರು ಹಾಗೆ ಇನ್ನೂ ಇತರ ಅಧಿಕಾರಿಗಳು ಇದ್ದಾರೆ. ಇವರೆಲ್ಲಾ ಸೇರಿಕೊಂಡು ಇರುವ ಸಾಮಾನುಗಳನ್ನು ದುರುಪಯೋಗ ಮಾಡುತ್ತಿದ್ದಾರೆ. ಮತ್ತು ಇಲ್ಲಿ ಸಿಮೆಂಟು ಕಂಬಗಳನ್ನು ಮ್ಯಾನುಫ್ಯಾಕ್ಚರು ಮಾಡಬೇಕೆಂದು ಸುಮಾರು 50 ಸೆಂಟರುಗಳನ್ನು ಮಾಡಿದ್ದಾರೆ. ಇದರಲ್ಲಿ ಎಷ್ಟೆಷ್ಟು ಸಿಮೆಂಟು ಪೋಲುಗಳನ್ನು ಮಾಡುತ್ತಿದ್ದಾರೆ ಎನ್ನುವ ನಿರಿಯಾದ ಅಂಕೆ ಸಂಖ್ಯೆಗಳಿಲ್ಲ. ಇಲ್ಲಿ ಬರುವ ಸಿಮೆಂಟು ಹಾಗೂ ಕಬ್ಬಿಣ ಇತ್ಯಾದಿ ಸಾಮಾನುಗಳನ್ನು ಇಲ್ಲಿರುವ ಅಧಿಕಾರಿಗಳೇ ದುರುಪಯೋಗ ಮಾಡಿಕೊಂಡು ಬೇಕಾದ ಹಾಗೆ ಮನೆ ಮಠಗಳನ್ನು ಮಾಡಿಕೊಂಡಿದ್ದಾರೆ. ಇವತ್ತು ನಮ್ಮ ಹೊಸಕೋಟೆಯಲ್ಲಿ ಕೂಡ ನಮ್ಮ ಕಣ್ಣೆದುರಿಗೆ ಇರುವ ಅಧಿಕಾರಿಗಳು ಎರಡು ಮೂರು ಬಂಗಲೆಗಳನ್ನು ಮಾಡಿಕೊಂಡಿದ್ದಾರೆ. ಇದಕ್ಕೆ ಇಲ್ಲಿ ಬರುವ ಸಿಮೆಂಟು ಹಾಗೂ ಕಬ್ಬಿಣವನ್ನು ಉಪಯೋಗಿಸಿಕೊಂಡು ಮಾಡಿದ್ದಾರೆ ಎಂದು ನಾವು ಒಂದು ಸಾರಿ ಬೋರ್ಡಿನ ಚೇರ್ಮನ್ನರವರಿಗೂ ದೂರು ಕೊಟ್ಟೆ. ಈ ರೀತಿ ಎಷ್ಟೋ ಜನ ಸೂಪರ್‌ವೈಸರುಗಳು ಹಾಗೂ ಇಲ್ಲಿರತಕ್ಕ ಇನ್ನಿತರ ಅಧಿಕಾರಿಗಳು ಬೇಕಾದಷ್ಟು ಸಾಮಾನುಗಳನ್ನು ದುರುಪಯೋಗ ಮಾಡಿ ಸರಕಾರಕ್ಕೆ ನಷ್ಟವುಂಟು ಮಾಡುತ್ತಿದ್ದಾರೆ ಮತ್ತು ಲಕ್ಷಾಂತರ ರೂಪಾಯಿಗಳಷ್ಟು ಸರಕಾರಕ್ಕೆ ನಷ್ಟವಾಗುತ್ತಿದೆ. ಇದರ ಬಗ್ಗೆ ಮಂಡಲಯವರು ನಿರಿಯಾದ ಅಂಕೆ ಅಂತಗಳನ್ನು ಕೊಡುತ್ತಿಲ್ಲ. ನಾನು ಯಾವ ಒಂದು ವ್ಯಕ್ತಿ ಬಗ್ಗೆ ಹೇಳುತ್ತಿಲ್ಲ. ಇವೊತ್ತು ರೈತರಮೇಲೆ ಹೆಚ್ಚು ಹೊರೆ ಹಾಕಲು ಹೋಗುವುದು ಸರಿಯಲ್ಲ. ರೈತರು ಪಂಪು ಸೆಟ್ಟುಗಳ ಮೇಲೆ ತೆರಿಗೆ ಕೊಡಬೇಕೆಂದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಇದಕ್ಕೆ ಬದಲು ಆಡಳಿತದಲ್ಲಿ ಬಿಗಿ ಇಟ್ಟು ಕೆಲಸ ಮಾಡಿದರೆ ಎಷ್ಟೋ ಹಣ ದುರುಪಯೋಗವಾಗುವುದು ತಪ್ಪಿ ಸರಕಾರಕ್ಕೆ ಹೆಚ್ಚು ಲಾಭವೂ ಆಗುತ್ತದೆ. ಎಷ್ಟೋ ಕಡೆಗಳಲ್ಲಿ ಅಧಿಕಾರಿಗಳೇ ಮೀಟರುಗಳನ್ನು ಟ್ಯಾಂಪರ್ ಮಾಡುತ್ತಿರುವುದು ಕಂಡುಬರುತ್ತಿದೆ. ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ ಇವು ನಡೆಯುತ್ತಿವೆ. ಇವನ್ನು ನರಿಯಾಗಿ ಪತ್ತೆ ಮಾಡಲು ವಿಜಿಲೆನ್ಸ್ ಸ್ಕ್ವಾಡ್ ನೋಡಬೇಕೆಂದು ನಾವು ದೂರು ಕೊಟ್ಟರೂ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಬೆಂಗಳೂರಿನ ಸುತ್ತಮುತ್ತ ಅನೇಕ ಇಂಡಸ್ಟ್ರೀಗಳಿವೆ. ಇಲ್ಲಿ ಮೀಟರುಗಳನ್ನು ಕೆಲಸ ಮಾಡದಂತೆ ಇಡುವ ಒಂದು ಕೆಲಸವನ್ನು ಮಾಡಿ ಬೋರ್ಡಿಗೆ ನಷ್ಟಮಾಡುತ್ತಿದ್ದಾರೆ, ಬಳಕೆದಾರರುಗಳಿಗೆ ರೇಟುಗಳನ್ನು ಹೆಚ್ಚು ಮಾಡಬಾರದು. ಇಲ್ಲಿರುವ ಸೂಪರ್‌ವೈಸರುಗಳು ಹಾಗೂ ಮೀಟರು ರೀಡರುಗಳು ಇನ್ನು ಇತರ ಲೈನು ಅಧಿಕಾರಿಗಳು ಎಲ್ಲರೂ ಸೇರಿಕೊಂಡು ಮಂಡಲಗೆ ಬಹಳ ನಷ್ಟ ಮಾಡುತ್ತಿದ್ದರೂ ಇದನ್ನು ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಮೀಟರಿನಲ್ಲಿ 700 ಎಂದು ರೀಡಿಂಗು ಇದ್ದರೆ ಇದನ್ನು ಬೇಕಾದರೆ 70 ಮಾಡಬಹುದು ಇಲ್ಲವೇ 007 ಎಂದು ಬೇಕಾದರೂ ಮಾಡಬಹುದು. ಹೀಗೆ ಬಹಳ ನಷ್ಟ ಮಾಡುತ್ತಿದ್ದಾರೆ.

3-00 P.M.

ಮನೆಗೆ ಮೀಟರ್ ರೀಡಿಂಗ್ ಇನ್‌ಸ್ಪೆಕ್ಟರ್ಸ್ ಬರುತ್ತಾರೆ, ಅವರು ಮೀಟರ್ ರೀಡಿಂಗ್ ತೆಗೆದುಕೊಳ್ಳದೆ ಮನೆ ಬೀಗ ಹಾಕಿದೆಯೆಂದು ಬರೆದುಕೊಂಡು ಹೋಗಿಬಿಡುತ್ತಾರೆ. ಆ ಬಿಲ್ಲು ನಲ್ಲರುವ ನ್ಯೂನತೆಗಳನ್ನೂ ಕಂಡುಹಿಡಿಯುವುದಿಲ್ಲ. ಅವರಿಗೆ ನರಿಯಾದ ಅನುಭವವೇ ಇರುವುದಿಲ್ಲ. ಅಂತಹ ಮೀಟರ್ ರೀಡರ್ಸ್‌ನ್ನು ಅಪಾಯಿಂಟ್ ಮಾಡುತ್ತಿದ್ದಾರೆ. ಅವರಿಗೆ ಓವರ್‌ಟೈಂ ಬೇರೆ ಕೊಡುತ್ತಾರೆ, ಅವನಿಗೆ ಏನು ಇನ್‌ಸೆಂಟಿವ್ ಕೊಟ್ಟರೂ ನರಿಯಾಗಿ ಕೆಲಸ ಮಾಡುವುದಿಲ್ಲ. ಒಬ್ಬ ರೈತನಿಗೆ ಒಂದು ಪಂಪುಸೆಟ್ಟಿಗೆ ಸರ್ವಿಸ್ ಕೊಡಬೇಕಾದರೆ ಅಲ್ಲಿ ಎಂಪ್ಲಾಯೀಸ್ ಬೆಳಗ್ಗೆ 7½ ಗಂಟೆಗೆ

ಆಫೀಸಿಗೆ ಬಂದರೂ ಕೂಡ 10½ ಗಂಟೆ ಮೇಲೆ ಒಂದು ಗಾಡಿ ಮೇಲೆ ಪೋಲು ಇಟ್ಟುಕೊಂಡು 20 ಜನ ತಳ್ಳಿಕೊಂಡು ಹೋಗುತ್ತಾ ಇರುವುದನ್ನು ನೋಡುತ್ತಾ ಇದ್ದೇವೆ. ನಾವು ಇದನ್ನು ಯಾವ ತರ್ತದರೂ ನೋಡಬಹುದು. ಇದು ಎಲ್ಲರ ಅನುಭವಕ್ಕೆಯೂ ಇದೆ. ಈ ರೀತಿಯಾದಂಥ ಕೆಲಸಗಳನ್ನು ಎಲೆಕ್ಟ್ರಿಸಿಟಿ ಬೋರ್ಡ್ ಅಧಿಕಾರಿಗಳು ಮಾಡುತ್ತಿದ್ದಾರೆ. ಇದರಿಂದ ಎಷ್ಟು ಲೇಕ್ಏಜ್ ಮತ್ತು ಟ್ಯಾಂಪರಿಂಗ್ ಜಾಸ್ತಿ ಆಗುತ್ತಾ ಇದೆ. ಇದನ್ನೆಲ್ಲಾ ಸರ್ಕಾರದವರು ಗಮನ ತೆಗೆದುಕೊಂಡು ಇದರಿಂದಾಗುವ ಲೀಕೇಜ್ ಮತ್ತು ಟ್ಯಾಂಪರಿಂಗನ್ನು ನಿಲ್ಲಿಸಿದರೆ ನಾವು ಯಾರಿಂದಲೂ ಸಾಲ ಪಡೆಯಬೇಕಾಗಿಲ್ಲ. ಇದನ್ನು ನಿಲ್ಲಿಸುವುದಕ್ಕೆ ಸಾಧ್ಯ ಇದೆ. ಇದನ್ನು ಮುಂದುವರಿಸುವುದಾದರೆ ಅವರಿಗೆ ನಾವು ಕೊಡತಕ್ಕ ನಬ್ಸಿಡಿಯನ್ನು ಕೊಡುವುದಕ್ಕೆ ಸಾಧ್ಯ ಇಲ್ಲ ಎಂದು ಹೇಳಬಹುದು.

ಇನ್ನೊಂದು ವಿಷಯ ಏನೆಂದರೆ ವಿದ್ಯುಚ್ಛಕ್ತಿ ಮಂಡಲಯಲ್ಲಿರತಕ್ಕ ಅಧಿಕಾರಿಗಳನ್ನು ಸಾರ್ವಜನಿಕರೇ ಆಗಲಿ, ವಿಧಾನಸಭಾ ಸದಸ್ಯರೇ ಆಗಲಿ ಹೋಗಿ ನೋಡಬೇಕಾದರೆ ಅವರು ಥ್ರೆಂಬರಿನ್ಲಲ್ಲಿ ಸಿಕ್ಕುವುದೇ ಕಷ್ಟ. ಅವರು ಇದಕ್ಕೆಲ್ಲಾ ನಾವು ಜವಾಬ್ದಾರರಲ್ಲ ಎನ್ನುವ ದುರಹಂಕಾರದಿಂದ ನಡೆಯುತ್ತಾರೆ. ಈ ಸಭೆಯಲ್ಲಿ ಹಿಂದೆ ಮಾನ್ಯ ಉಪಮಂತ್ರಿಗಳನ್ನು ಕೇಳಿದ ಸಂದರ್ಭದಲ್ಲಿ ವಿದ್ಯುಚ್ಛಕ್ತಿ ಬೋರ್ಡ್ ಥೇರ್ಮನ್‌ಗೆ 2,500 ರೂಪಾಯಿ ಸಂಬಳ ಕೊಡುತ್ತಿದ್ದೇವೆ ಎಂದು ಹೇಳಿದರು. ಹಿಂದಿದ್ದ ಥೇರ್ಮನ್‌ಗೆ 900 ರೂಪಾಯಿ ಸಂಬಳ ಕೊಡುತ್ತಿದ್ದರೂ ಕೂಡ ಈವಾಗಿನಷ್ಟು ಗೊಂದಲ ಇರಲಿಲ್ಲ. ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ 35 ಸಾವಿರ ಜನ ಕೆಲಸಗಾರರು ಇದ್ದಾರೆ. ನಾನು ಒಂದು ಮೀಟಿಂಗಿಗೆ ಹೋಗಿ ವಿದ್ಯುಚ್ಛಕ್ತಿ ಮಂಡಲಯ ಅಧ್ಯಕ್ಷರನ್ನು ಒಂದು ಪ್ರಶ್ನೆ ಕೇಳಿದಾಗ ಅವರು No man on this earth can change legislation ಎಂದು ಉತ್ತರ ಕೊಟ್ಟರು. ಆದುದರಿಂದ ಈ ಮಂಡಲಯನ್ನು ರದ್ದುಮಾಡಿ ಹಿಂದೆ ಇದ್ದಹಾಗೆ ಸರ್ಕಾರದ ವತಿಯಿಂದ ನಡೆಸಬೇಕು ಎಂದು ಹೇಳುತ್ತೇನೆ. ಈಪೊತ್ತಿನ ದಿವಸ ಮಂಡಲಿಯವರು ಸರ್ಕಾರದವರ ಕಡೆ ತೋರಿಸಿ ಅವರು ಏನೂ ಸಹಾಯ ಮಾಡಲಿಲ್ಲ ಎನ್ನುವುದು, ಬ್ಯಾಂಕ್‌ನಲ್ಲಿ ಸಾಲ ಎತ್ತುವುದು ಈರೀತಿ ಮಾಡುವುದು ಸರಿಯಲ್ಲ ಎಂದು ಹೇಳುತ್ತೇನೆ. ಇದು ಸಾರ್ವಜನಿಕರ ದುಡ್ಡು ಎನ್ನುವ ಮನೋಭಾವನೆಯನ್ನು ತಿಳಿದುಕೊಳ್ಳಬೇಕು. ನಾನು ವೈಯಕ್ತಿಕವಾಗಿ ಈ ಆಪಾದನೆ ಮಾಡುತ್ತಾ ಇಲ್ಲ. ಇದರ ಬಗ್ಗೆ ವಿಚಾರಣೆ ನಡೆಸಬೇಕು. ಒಂದು ಉದಾಹರಣೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ಸಾಯಿಬಾಬ ಮಂದಿರ ಇದೆ. ಅಲ್ಲಗೆ ಇವರು ವ್ಯಾನ್ ತೆಗೆದುಕೊಂಡು ವಾರಕ್ಕೆ 5 ಸಲ ಸಾಯಿಬಾಬನನ್ನು ನೋಡಲಿಕ್ಕೆ ಬರುತ್ತಾರೆ. ಅವರಿಗೆ ವ್ಯಾನ್ ಕೊಟ್ಟಿರುವುದು ಇದೇ ಕೆಲಸಕ್ಕಾಗಿಯೇ ಎಂದು ಕೇಳಬೇಕಾಗಿದೆ. ಬೇಕಾದರೆ ವಿಚಾರಣೆ ಮಾಡಿ. ಇನ್ನು ಏನೇನು ವ್ಯವಹಾರ ನಡೆಯುತ್ತಿದೆಯೋ? ಎಲೆಕ್ಟ್ರಿಸಿಟಿ ಬೋರ್ಡ್ ವ್ಯಾನನ್ನು ತಮ್ಮ ಸ್ವಂತ ಕಾರಿನ ಹಾಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ರೀತಿ ವೈಟ್ ಫೀಲ್ಡ್‌ಗೆ ಓಡಾಡುತ್ತಾ ಇರುವುದನ್ನು ಹೇಳುವುದಕ್ಕೆ ಹೋದರೆ ನಮಗೆಲ್ಲಾ ಗೊತ್ತಿದೆ ಎಂದು ಹೇಳುತ್ತಾರೆ. ಅವರು ಏನು ತಿಳಿದುಕೊಂಡಿದ್ದಾರೋ ಗೊತ್ತಿಲ್ಲ. ನಾನು ಮುಖ್ಯಮಂತ್ರಿಗಳಿಗೆ ಇದನ್ನು ಸರಿಯಾಗಿ ವಿಚಾರಣೆಮಾಡಬೇಕು ಎಂದು ಕೇಳುತ್ತೇನೆ. ಬೇರೆ ವಿಚಾರದಲ್ಲೂ ಕೆಲವು ಆಪಾದನೆ ಮಾಡಿದ್ದೇನೆ, ಅವರು ಮಾಡುವಂಥ ಕೆಲಸಗಳನ್ನು ನೋಡಿದ್ದೇನೆ. ಈ ವಿದ್ಯುಚ್ಛಕ್ತಿ ಮಂಡಲಯವರು ಅವರದೇ ಆದ ಒಂದು ಚೀಫ್ ಅಕೌಂಟ್ಸ್ ಆಫೀಸರನ್ನು ಇಟ್ಟುಕೊಂಡಿದ್ದಾರೆ. ಆದುದರಿಂದ ಈ ಆಡಳಿತವನ್ನು ಸ್ಟೇಟ್ಸ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್‌ನವರು ಹತೋಟಿಯಲ್ಲಿ ಇಡುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ. ಇಂದು ವಿದ್ಯುಚ್ಛಕ್ತಿ ಬೋರ್ಡ್ ಇದೆ, ಅದರಮೇಲೆ ಲೆಕ್ಕ ತನಿಖೆ ಇಲಾಖೆಯ ಹತೋಟಿ ಇದೆ, ಈ ಬೋರ್ಡಿನಲ್ಲಿ ಒಬ್ಬರು ವಿಶೇಷ ಅಕೌಂಟ್ಸ್ ಆಫೀಸರಿದ್ದಾರೆ. ರಿಟೈರ್ ಆದವರನ್ನು ಪುನಃ ಕೆಲಸಕ್ಕೆ ತೆಗೆದುಕೊಂಡಿದ್ದಾರೆ, ಅವರಮೇಲೆ ಬೇಕಾದಷ್ಟು ಆಪಾದನೆಗಳಿವೆ. ಬೋರ್ಡ್ ಡಿಬೆಂಚರ್ ಫ್ಲೋಟ್ ಮಾಡುವುದು, ಬ್ಯಾಂಕುಗಳಿಂದ ಸಾಲ ಪಡೆಯುವುದು ಇದೆಲ್ಲಾ ನಡೆಯುತ್ತಿದೆ. ಬ್ಯಾಂಕುಗಳಿಂದ ಸಾಲ ಪಡೆಯುವುದು, ಆ ಹಣವನ್ನು ಡ್ರಾ ಮಾಡದೆ ಬ್ಯಾಂಕುಗಳಲ್ಲೇ ಬಿಟ್ಟು ಬಡ್ಡಿ ಹಂಚಿಕೊಳ್ಳುತ್ತಿದ್ದಾರೆ, ಇದನ್ನು ತೀವ್ರವಾಗಿ ಪರಿಶೀಲಿಸಬೇಕು. ಥೇರ್ಮನ್ನರಮೇಲೆ ಹಿಂದೆ ಎನ್‌ಕ್ವೈರಿ ಇತ್ತು, ಒಬ್ಬರು ಸ್ಪೆಷಲ್ ಸಿ. ಐ. ಡಿ. ಅವರಮೇಲೆ ನಿಗಾ ಇಟ್ಟಿದ್ದರು, ಅವರಮೇಲೆ ಇರುವ ಆಪಾದನೆಗಳ ಪರಿಶೀಲನೆಯಾಗಿಲ್ಲ. ಹಾಗಿರುವಾಗ ಅವರನ್ನೇ ಥೇರ್ಮನ್ನಾಗಿ ನೇಮಿಸಿದ್ದಾರೆ. ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ಜವಾಬು ಕೊಡಬೇಕು.

ಇಂದು ಸರಕಾರದ ಥೋರಣ್ ಪ್ರಕಾರ ಅಟಾನಮಸ್ ಬಾಡಿಗಳಲ್ಲಿ ರೈತರ ಕಷ್ಟಸುಖ ಹಿತ ಏನಿದೆ, ಅವರ ಸಮಸ್ಯೆ ಏನಿದೆ ಅದನ್ನು ತಿಳಿಯಲು ಅನುಭವವಿರುವವನ್ನು ಥೇರ್ಮನ್ ಮಾಡುತ್ತೀರಿ. ಈಗಿರುವ ಕಾರ್ಪೊರೇಷನ್ನುಗಳಿಗೆ ಮಂತ್ರಿಗಳು ಅಥವ ಉಪಮಂತ್ರಿಗಳು ಥೇರ್ಮನ್ ಆಗಿರುವರು. ಹಾಗಿರುವಾಗ ವಿದ್ಯುಚ್ಛಕ್ತಿ ಬೋರ್ಡಿಗೂ ಕೂಡ ಮಂತ್ರಿಗಳೇ ಏಕೆ

(ಶ್ರೀ ಎನ್. ಚಿಕ್ಕೇಗೌಡ)

ಥ್ರೇರ್ಮನ್ ಆಗಿರಬಾರದು ? ಸಂಬಂಧಪಟ್ಟ ಮಂತ್ರಿಗಳನ್ನು ಥ್ರೇರ್ಮನ್ ಮಾಡಬಹುದು. ರಿಜ್ಯೆರ್ಡ್ ಸಿವಿಲ್ ಸರ್ವಿಸ್ ಆಫೀಸರಿಗೆ ಜನರ ಕಷ್ಟಸುಖ ಗೊತ್ತಾಗುವುದಿಲ್ಲ, ಜನರ ನೋವನ್ನು ತಿಳಿಯಲು ಅವರಿಗೆ ತಾಳ್ಮೆ ಇರುವುದಿಲ್ಲ. ಯಾವುದಾದರೂ ಚರ್ಚೆಯಾಗುತ್ತಿದ್ದರೆ ಮಧ್ಯೆ ಎದ್ದು ಹೋಗುವರು.

[Sri D. M. Siddaiah in the Chair]

ಅವರಿಗೆ ಬೇರೆ ಸಭೆಗಳಿಗೆ ಹೋಗಬೇಕಾದ ಕೆಲಸವಿರಬಹುದು. ದೆಹಲಿಯ ರೆವಲ್ಲಿನಲ್ಲೂ ಅವರಿಗೆ ಕೆಲಸವಿರಬಹುದು. ಮಂಡಲಿಯಲ್ಲಿ ದುರಾಡಳಿತವಿದೆ, ಹಣ ಪೋಲಾಗುತ್ತಿದೆ ಎಂದು ಇಂದು ಎಲ್ಲಾ ಸದಸ್ಯರೂ ಹೇಳುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ರೈತರು ಗಾಡಿ ತಂದು ಪೋಲು ಗಳನ್ನು ತೆಗೆದುಕೊಂಡುಹೋಗಿ ಬೇಕಾದ ಕಡೆಗೆ ಹಾಕುತ್ತಿದ್ದಾರೆ. ಪಂಪ್‌ಹೌಸಿನ ಹತ್ತಿರಕ್ಕೆ ರೈತರು ಪೋಲನ್ನು ಸಾಗಿಸುವರು. ಆದರೂ ಕೂಡ ಜಾಗ್ರತೆ ಸರ್ವಿಸ್ ಕೊಡುವುದಿಲ್ಲ. ರೋಡ್ ಹೆಚ್ಚಾಗಿ ಕೆಲವು ಕಡೆ ಮೋಟಾರುಗಳು ನುಟ್ಟುಹೋಗುತ್ತಿವೆ. ಸರಕಾರದಲ್ಲಿ ಬಾವಿಗೆ ಸಾಲ, ಪಂಪಿಗೆ ಸಾಲ ಹೀಗೆ ನಾನಾ ರೀತಿಯಲ್ಲಿ ತೆಗೆದುಕೊಂಡು ರೈತರು ಸಾಲಗಾರರ ಮಕ್ಕಳಾಗು ತ್ತಿದ್ದಾರೆ.

ಇನ್ನೊಂದು ಅಂಶ. ವಿದ್ಯುಚ್ಛಕ್ತಿ ಬೋರ್ಡಿಗೂ ವಿದ್ಯುತ್ತನ್ನು ಉತ್ಪತ್ತಿಮಾಡುವ ಹೈಡ್ರೋ ಎಲೆಕ್ಟ್ರಿಕ್ ಇರಾಖೆಗೂ ಹೊಂದಾಣಿಕೆಯಿಲ್ಲ. ನಮ್ಮ ದೇಶದಲ್ಲಿ ಬಹಳ ಕನಿಷ್ಠ ದರದಲ್ಲಿ ವಿದ್ಯುತ್ ಉತ್ಪತ್ತಿಯಾಗುತ್ತಿದೆ. ಇಡೀ ಭಾರತದಲ್ಲಿ ನಮ್ಮಲ್ಲಿ ಬಹಳ ಕಡಮೆ ಖರ್ಚಿನಲ್ಲಿ ವಿದ್ಯುತ್ತನ್ನು ಉತ್ಪತ್ತಿಮಾಡುತ್ತಿದ್ದಾರೆ, ಕಾರಣ ನೀರಿನ ಸಹಾಯದಿಂದ ಉತ್ಪತ್ತಿಮಾಡುವರು. ಒಂದು ಯೂನಿಟ್ಟಿಗೆ 2·8 ಪೈಸೆ ಬೀಳುವುದು, ಅದನ್ನು ಮಂಡಲ 4·8 ಪೈಸೆಯಂತೆ ಮಾರುತ್ತಿದೆ, ಜೊತೆಗೆ ಡ್ಯೂಟಿ ಬೇರೆ ಹಾಕುತ್ತಿದ್ದಾರೆ. ಸರಕಾರ ಇದರಿಂದ ರಾಭ ಪಡೆಯುತ್ತಿದೆ. ಬೋರ್ಡ್ ಮಿತವ್ಯಯಮಾಡಬಹುದು, ಹಣ ಪೋಲಾಗುತ್ತಿದೆ. ಸಾಮಾನುಗಳನ್ನು ಕದ್ದು ಮಾರುತ್ತಿದ್ದಾರೆ, ಲೆಕ್ಕ ಸರಿಯಾಗಿಲ್ಲ. ಪೆಟ್ರೋಲನ್ನು ಲಾರಿಗಳಿಗೆ ಹಾಕಿಸುವಾಗ ಬಂಕುಗಳಲ್ಲಿ ಹತ್ತು ಲೀಟರನ್ನು ಕಡಮೆ ಹಾಕಿಸಿಕೊಂಡು ತಪ್ಪು ಲೆಕ್ಕ ಕೊಟ್ಟು ಅದನ್ನು ಮಾರಿಕೊಂಡುಬಿಡುತ್ತಾರೆ ಎಂದು ಒಬ್ಬ ಸದಸ್ಯರು ಹೇಳುತ್ತಿದ್ದಾರೆ. ಇದಕ್ಕೆಲ್ಲಾ ಅವಕಾಶ ಕೊಡಬಾರದು. ಇದನ್ನು ಪರಿಶೀಲನೆ ಮಾಡಿ ಸರಿಪಡಿಸಿದರೆ ಇದರಲ್ಲಿ ಆಗತಕ್ಕ ನಷ್ಟವನ್ನು ಕಡಿಮೆ ಮಾಡಿ ಕೊಳ್ಳುವುದಕ್ಕೆ ಅವಕಾಶವಿದೆ. ನಮ್ಮಲ್ಲಿ ನೀರಾವರಿ ಇರುವುದು ಕೇವಲ 7–8 ಪರ್ಸೆಂಟು. ಬಾವಿಯ ಮೂಲಕ ನೀರನ್ನು ಉಪಯೋಗ ಮಾಡಿಕೊಳ್ಳಲು ಅವಕಾಶ ಇರುವುದು ಕೇವಲ ಒಂದೆರಡು ಪರ್ಸೆಂಟ್ ಮಾತ್ರ ಆಗಿದೆ. ಟ್ಯಾರಿಫ್ ಬೋರ್ಡಿನವರು ಮಿನಿಮಂ ಚಾರ್ಜಸ್ ಜಾರಿ ಮಾಡಬಾರದು ಎಂದು ಹೇಳಿದ್ದರೂ ಕೂಡ ಕಾನೂನು ತಿಳಿಯದೆ, ಕೋರ್ಟಿಗೆ ಹೋಗಲು ಶಕ್ತಿ ಇಲ್ಲದ ರೈತರಮೇರೆ ಹೆಚ್ಚಿನ ಹೊರೆಯನ್ನು ಹಾಕಿರುವುದನ್ನು ತೀವ್ರವಾಗಿ ವಿರೋಧಿಸಬೇಕಾಗಿದೆ. ಅನೇಕ ವೇಳೆ ಬಾವಿ ಯಲ್ಲಿ ನೀರು ಇಲ್ಲದೇ ಪಂಪನ್ನು ಉಪಯೋಗಿಸುವುದಕ್ಕೆ ಆಗುವುದಿಲ್ಲ ಮತ್ತು ಕೆಲವು ವೇಳೆ ಪಂಪು ಸೆಟ್ಟುಗಳು ಕೆಟ್ಟುಹೋಗಿ ಕೆಲಸ ಮಾಡುವ ಸ್ಥಿತಿಯಲ್ಲಿರುವುದಿಲ್ಲ. ಇವನ್ನೆಲ್ಲಾ ಗಮನದಲ್ಲಿಟ್ಟು ಕೊಂಡು ಒಂದು ತೀರ್ಮಾನವನ್ನು ಮಾಡಬೇಕಾಗಿತ್ತು. 35 ಸಾವಿರ ಕೆಲಸಗಾರರನ್ನು ಇಟ್ಟು ಕೊಂಡು ಅಧಿಕಾರಿಗಳಿಂದ ಹಿಡಿದು ಚೇರ್ಮನ್‌ವರೆಗೂ ಸಾವಿರಾರು ರೂಪಾಯಿಗಳ ಸಂಬಳ ಕೊಟ್ಟು, ರೈತನ ಮೇರೆ ಇಂತಹ ಹೊರೆಯನ್ನು ಹೇರುವುದು ಸರ್ವಥಾ ನ್ಯಾಯವಲ್ಲ. ಇದರ ಚೇರ್ಮನ್‌ರಿಗೆ 2,200 ರೂಪಾಯಿ ಸಂಬಳ, ಎರಡು ಕಾರು. ಅದಕ್ಕಿಂತ ಹೆಚ್ಚಾಗಿ ರಿಜ್ಯೆರ್ಡ್ ಸಿವಿಲ್ ಸರ್ವಿಸ್ ಅಧಿಕಾರಿಯನ್ನು ಮತ್ತೆ ನೇಮಕ ಮಾಡಿರುವುದು ಬಹಳ ದುಃಖಕರವಾದ ಸಂಗತಿ. ಯಾರು ಹೋದರೂ ಅವರು ಇಂಟರ್‌ವ್ಯೂ ಕೊಡುವುದಿಲ್ಲ ಎಂದು ಹೇಳುತ್ತಾರೆ. ಸಿನಿಮಾಗಳಿಗೆ 21 ಪೈಸೆ, ಹೊಟೇಲುಗಳಿಗೆ 10 ಪೈಸೆ, ಐ.ಪಿ. ಸೆಟ್ಟುಗಳಿಗೆ 11 ಪೈಸೆ ಒಂದು ಯೂನಿಟ್ಟಿಗೆ ಈ ರೀತಿ ನಿಗದಿ ಮಾಡಿರುವುದು ಅಷ್ಟು ಸರಿಯಾಗಿ ಕಾಣುತ್ತಿಲ್ಲ. ನಮ್ಮ ದೇಶದ ಆಹಾರ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಹಸಿರು ಕ್ರಾಂತಿಯಾಗಬೇಕೆಂದು ಹೇಳುವಾಗ ಈ ರೀತಿ ಹೆಚ್ಚಿನ ದರವನ್ನು ನಿಗದಿ ಮಾಡಿದ್ದೇ ಆದರೆ ಯಾವ ರೀತಿ ಹಸಿರು ಕ್ರಾಂತಿಯಾದೀತು ಎಂಬುದನ್ನು ತಾವು ಯೋಚನೆ ಮಾಡಬೇಕು. ನಾನು ಪಾಶ್ಚಿಮಾತ್ಯ ದೇಶಗಳಲ್ಲಿ ನೋಡಿದ್ದೇನೆ, ಅಮೆರಿಕಾದಲ್ಲಿ ರೂರರ್ ಎಲೆಕ್ಟ್ರಿ ಫಿಕೇಷನ್‌ಗೆ ಮತ್ತು ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನು ಕೊಡಬೇಕಾದರೆ ವಾರ್ ಫುಟಿಂಗನಂತೆ ಅದಕ್ಕೆ ಒಂದು ಪ್ರತ್ಯೇಕವಾದ ಡಿಪಾರ್ಟ್‌ಮೆಂಟನ್ನೇ ಇಟ್ಟು ಅದಕ್ಕೆ ಬೇಕಾದ ಎಲ್ಲಾ ಸೌಕರ್ಯ ಗಳನ್ನೂ ಮಾಡಿಕೊಡುತ್ತಾರೆ. ಅದೇ ರೀತಿ ರಾಜಾಸ್ಥಾನ್ ಮತ್ತು ಮಧ್ಯಪ್ರದೇಶದಲ್ಲೂ ಸಹ

ಒಂದು ಪ್ರತ್ಯೇಕವಾದ ಇಲಾಖೆಯನ್ನು ಇಟ್ಟು ಅದಕ್ಕೆ ರೂರಲ್ ಎಲೆಕ್ಟ್ರಿಫಿಕೇಷನ್ ಕೆಲಸವನ್ನು ವಹಿಸಿವ್ವಾರೆ. ಆ ರೀತಿ ನಮ್ಮ ಮೈಸೂರು ಸಂಸ್ಥಾನದಲ್ಲೂ ಒಂದು ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಬೇಕೆಂದು ಈ ನಶೆಯ ಮೂಲಕ ಪ್ರಾರ್ಥನೆ ಮಾಡುತ್ತೇನೆ. ನಾನಾಗಲೇ ಆ ಸಿಬ್ಬಂದಿ ವರ್ಗದವರ ಬಗ್ಗೆ ಮತ್ತು ರೈನ್‌ಇಂಟರ್‌ಪ್ಷನ್ ವಿಚಾರಗಳನ್ನೆಲ್ಲಾ ಹೇಳಿದ್ದೇನೆ. ಸರ್ಕಾರದವರು ಈ ದಿವಸ ಕೈಗಾರಿಕೆಗಳಿಗೆ ಉತ್ತೇಜನ ಕೊಡಬೇಕೆಂಬ ಉದ್ದೇಶದಿಂದ ಯಾರು ಕೈಗಾರಿಕೆಗಳನ್ನು ನಡೆಸುವುದಕ್ಕೆ ಮುಂದೆ ಬರುತ್ತಾರೋ ಅಂಥವರಿಗೆ ಉಚಿತವಾಗಿ ಭೂಮಿಯನ್ನೂ ಮತ್ತು ರಿಯಾಯಿತಿಯ ದರದಲ್ಲಿ ವಿದ್ಯುಚ್ಛಕ್ತಿಯನ್ನೂ ಮತ್ತು ಕನ್‌ವರ್‌ಷನ್ ಛಾರ್ಜುಗಳನ್ನೂ ಒದಗಿಸುವುದಾಗಿ ಹೇಳಲಾಗುತ್ತಿದೆ. ದೇಶದಲ್ಲಿ ಹೆಚ್ಚು ಆಹಾರ ಉತ್ಪಾದನೆ ಮಾಡತಕ್ಕ ರೈತನ ವಿಚಾರದಲ್ಲಿ ಇದೇ ರಿಯಾಯಿತಿಗಳನ್ನು ಏಕೆ ಕೊಡುತ್ತಿರಲ್ಲಾ? ಇಂಥ ಅನುಕೂಲಗಳನ್ನು ರೈತನಿಗೂ ಒದಗಿಸಬೇಕೆಂದು ನಾವು ಒತ್ತಾಯ ಮಾಡುತ್ತಿದ್ದರೂ ಕಳೆದ 10 ವರ್ಷಗಳಿಂದಲೂ ಆ ವಿದ್ಯುಚ್ಛಕ್ತಿ ಮಂಡಳಿಯವರು ಮನಸ್ಸು ಮಾಡಿಲ್ಲ; ಅವರಲ್ಲಿ ಸ್ವಲ್ಪವೂ ಕರುಣೆಯಿಲ್ಲ. ಅವರು ಯಾವತ್ತೂ ಸುಪತ್ತಿಗೆಯ ಮೇಲೆ ಕುಳಿತಿರತಕ್ಕವರು. ಅವರಿಗೆ ರೈತನ ಕಷ್ಟಗಳು ಹೇಗೆ ಗೊತ್ತಾಗಬೇಕು? ಇಲ್ಲಿಯವರೆಗೂ ಅವರು ಆ ಬೋರ್ಡಿನವರ್ಗತಕ್ಕ ಲೀಕೇಜನ್ನು ತಡೆಗಟ್ಟುವುದಕ್ಕಾಗಿಲ್ಲ. ಸ್ಟೋರಿನಲ್ಲಿ ನಡೆಯುತಕ್ಕ ಕಳುವನ್ನು ನಿಲ್ಲಿಸುವುದಕ್ಕಾಗಿಲ್ಲ. ಅವರಿಗೆ ರೈತನ ಕಷ್ಟ ಗೊತ್ತಾಗುವುದಿಲ್ಲ. ಈ ಬೋರ್ಡಿನಿಂದ ದೇಶಕ್ಕೇನೂ ಪ್ರಯೋಜನವಿಲ್ಲ. ಸರ್ಕಾರದವರು ಈ ಬೋರ್ಡನ್ನು ಉಳಿಸಿಕೊಳ್ಳಲೇಬೇಕು ಎನ್ನುವುದಾದರೆ ಅವರು ರೈತರಿಗೆ ಒದಗಿಸತಕ್ಕ ವಿದ್ಯುತ್ತಿನ ಬಗ್ಗೆ ಅವನ್ನು ಸಬ್‌ಸಿಡೈಜ್ಡ್ ದರದಲ್ಲಿ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿಯವರೆಗೂ ಇದ್ದ ಆ 2 ರೂಪಾಯಿಗಳ ಮಿನಿಮಂ ಛಾರ್ಜನ್ನು ಈಗ 4 ರೂಪಾಯಿಗಳಿಗೇರಿಸಿವ್ವಾರೆ. ಅವನ್ನು ತಿದ್ದಿ ಮತ್ತೆ ಅವನ್ನು 2 ರೂಪಾಯಿಗಳಿಗೇ ಇಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಒಂದು ವಿಷಯ ಎಂದರೆ ಈ ಎಲೆಕ್ಟ್ರಿಕರ್ ಛಾರ್ಜನ್ನು ವರ್ಷಕ್ಕೊಂದು ಸಾರಿ ವಸೂಲಾಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಆ ಟ್ಯಾರಿಫ್ ಚಾರ್ಜುಗಳಲ್ಲಿ ಕೈಗಾರಿಕೆಗಳವರಿಗೆ ಸೇರಿದಂತೆ ಅನೇಕ ವಿಷಯಗಳನ್ನು ಹೇಳಿವ್ವಾರೆ. ಅದಕೆಲ್ಲಾ ಕಾರಣ ಆ ಟ್ಯಾರಿಫ್ ಬೋರ್ಡಿನಲ್ಲಿ ಸಾಕಷ್ಟು ಮಂದಿ ಕೈಗಾರಿಕಾ ಕ್ಷೇತ್ರದಲ್ಲಿರತಕ್ಕ ಜನರ ಪ್ರಾತಿನಿಧ್ಯವಿದೆ. ಅದರಲ್ಲಿ ಒಬ್ಬ ರೈತಪ್ರತಿನಿಧಿಗೆ ಅವಕಾಶ ಮಾಡಿಕೊಟ್ಟಿರುವಂತೆ ನನಗೆ ತಿಳಿದು ಬಂದಿದೆ. Since majority of the representatives are from Electricity Board and from industrial and other sectors, it is not possible for one member to represent the grievances of the agriculturists. Therefore I suggest to the Government that there should be more number of representatives from the farmers and agriculturists in the Tariff Board. ಈ ಅನ್ಯಾಯಗಳನ್ನೆಲ್ಲಾ ಸರಿಪಡಿಸಿದರೆ ಆಗ ನಾವು ಈ ಆನ್ಯುಯಲ್ ಫೈನಾನ್‌ಷಿಯರ್ ಸ್ಟೇಟ್‌ಮೆಂಟಿಗೆ ನಮ್ಮ ಅನುಮೋದನೆಯನ್ನು ನೀಡಬಹುದು. ನಾನು ಇಲ್ಲಿಯವರೆಗೂ ಹೇಳಿರತಕ್ಕ ಅನ್ಯಾಯಗಳನ್ನು ಸರ್ಕಾರದವರು ಕೂಡಲೆ ತಡಗಟ್ಟಬೇಕು. ಆ ವಿದ್ಯುಚ್ಛಕ್ತಿಯ ಮಂಡಳಿಯಲ್ಲಿ ನಡೆಯುತ್ತಿರುವ ಅವ್ಯವಸ್ಥೆಗಳ ಬಗ್ಗೆ ಕೂಡಲೇ ಪರಿಶೀಲನೆಗಳನ್ನು ನಡೆಸಿ ಸೂಕ್ತಕ್ರಮಗಳನ್ನು ಕೈಗೊಳ್ಳಬೇಕು. ಈ ಸರ್ಕಾರದ ಬಗ್ಗೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರಿಗೆ ಒಂದು ಒಳ್ಳೆಯ ಭಾವನೆ ಉಂಟಾಗಬೇಕಾಗಿದ್ದರೆ ನಮ್ಮ ರಾಜ್ಯ ಸರ್ಕಾರದವರು ಸುಗಮವಾಗಿ ಅವರ ಆಡಳಿತವನ್ನು ನಡೆಸಿಕೊಂಡು ಹೋಗಬೇಕೆಂಬ ಅಭಿಲಾಷೆ ಅವರಿಗಿದ್ದರೆ ಅವರು ದೇಶದಲ್ಲಿ ರೈತರು ಅಂಧೋಲನವನ್ನ ಮಾಡುವುದಕ್ಕೆ ಅವಕಾಶವನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ರೈತರು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆದು ಅವನು ದೇಶವನ್ನು ಸಾಕಬೇಕೆಂಬ ಅಭಿಲಾಷೆ ಇದ್ದರೆ ಆ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಹಣ ಪೋಲಾಗುವುದನ್ನು ಕೂಡಲೆ ತಡಗಟ್ಟಬೇಕು. ಸರ್ಕಾರದವರು ಕೈಗಾರಿಕೆಗಳಿಗೆ ಉತ್ತೇಜನವನ್ನು ಕೊಡುತ್ತಿರುವ ಹಾಗೆ ರೈತರಿಗೂ ಉತ್ತೇಜನ ನೀಡಿ ಅವರಿಗೆ ಹಾಲಿ ಹೆಚ್ಚುವಾಡಿರತಕ್ಕ ವಿದ್ಯುತ್ ದರವನ್ನು ತಗ್ಗಿಸಿ ಸಾಧ್ಯವಾದರೆ ಸರ್ಕಾರದವರು ಅದಕ್ಕೆ ಸಾಕಷ್ಟು ಸಬ್‌ಸಿಡೈಜ್ಡ್ ಮಾಡಿ ದೇಶದಲ್ಲಿ ಹೆಚ್ಚು ಆಹಾರ ಉತ್ಪಾದನೆಗೆ ಅವಕಾಶಮಾಡಿಕೊಡಬೇಕೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ನಾಗಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ನಾನು ಪ್ರಥಮವಾಗಿ ಶ್ರೀಮಾನ್ ಚಿಕ್ಕೇಗೌಡರಿಗೆ ಅಭಿನಂದಿಸುತ್ತೇನೆ. ಏಕೆಂದರೆ ಅವರು ಸಾಕಷ್ಟು ಪ್ರಯತ್ನಮಾಡಿ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ನಡೆದಿರತಕ್ಕ ಅನ್ಯಾಯಗಳನ್ನು ಪರಿಶೀಲನೆಮಾಡಿ ಸ್ವಲ್ಪ ಅದರ ವಿವರ

(ಶ್ರೀ ಎಂ. ನಾಗಪ್ಪ)

ಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಆದರೆ ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ. ಈ ಕೆಲಸವನ್ನು ಸರ್ಕಾರ ಮಾಡಬೇಕಾಗಿತ್ತು. ಅದನ್ನು ಸರ್ಕಾರ ಮಾಡಲಿಲ್ಲವೆಂದು ನಾನು ಮೊದಲನೆಯ ದೋಷವನ್ನು ಸರ್ಕಾರಕ್ಕೆ ಕೊಡುತ್ತೇನೆ. ನಾನು 1967ರಲ್ಲಿ ಈ ಮನೆಯ ಸದಸ್ಯನಾದೆ. 1967-68 ಮತ್ತು 1968-69ರಲ್ಲಿ ಇಂತಹ ಅನ್ಯುಯಲ್ ಫೈನಾನ್ಸಿಯರ್ ಸ್ಟೇಟ್‌ಮೆಂಟ್‌ಗಳನ್ನು ಈ ಸಭೆಯ ಮುಂದೆ ಇಟ್ಟರೂ ಇಂತಹ ಒಂದು ಚರ್ಚೆಯ ಅವಕಾಶವನ್ನು ಸರ್ಕಾರ ಪ್ರತಿವರ್ಷ ಕೊಟ್ಟಿದ್ದರೆ ಇವತ್ತು ಇರತಕ್ಕ ನ್ಯೂನತೆಗಳು ಕಾಣುತ್ತಿರಲಿಲ್ಲ. ಈ ಮುಂದಿಲಯು ಮೇಲೆ ಯಾವ ತರಹ ಅಧಿಕಾರವನ್ನು ಈ ಸಭೆಯಾಗಲೀ ಅಥವಾ ಸರ್ಕಾರವಾಗಲೀ ಇಟ್ಟುಕೊಳ್ಳುವುದರಲ್ಲಿ ವಿಫಲಗೊಂಡಿದ್ದಾರೆ. ಸರಿಯಾದ ರೀತಿಯಲ್ಲಿ ಅದರ ಮೇಲೆ ಹತೋಟಿಯನ್ನು ಇಡಬೇಕಾಗಿತ್ತು. ಆದರೆ ಇವತ್ತು ವಿರೋಧಪಕ್ಷದ ಸದಸ್ಯರ ಒತ್ತಾಯದಿಂದ ಇದನ್ನು ಪರಿಶೀಲನೆಮಾಡಲು ತೆಗೆದುಕೊಂಡಿದ್ದಾರೆ. ಏನೇ ಆಗಲಿ ಇವತ್ತು ಒಂದು ಶುಭಕಾರ್ಯವನ್ನು ಮಾಡುತ್ತಿದ್ದೇವೆಂದು ಹೇಳಿ ನಾನು ಇದರ ಬಗ್ಗೆ ಕೆಲವು ವಿಚಾರಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಮೊಟ್ಟ ಮೊದಲನೆಯದಾಗಿ ಹೇಳಬೇಕೆಂದರೆ ಸರ್ಕಾರ ಯಾವ ಅಧಿಕಾರವನ್ನು ಮುಂದಿಲಯು ಮೇಲೆ ಇಟ್ಟುಕೊಳ್ಳಬೇಕಾಗಿತ್ತೋ ಅದನ್ನು ಸರ್ಕಾರದವರು ಇಟ್ಟುಕೊಂಡಿಲ್ಲ. ಇವತ್ತು ಫೆಬ್ರುವರಿ ತಿಂಗಳಲ್ಲಿ ಅವರು ಆನ್ಯುಯಲ್ ಫೈನಾನ್ಸಿಯಲ್ ಸ್ಟೇಟ್‌ಮೆಂಟನ್ನು ಕೊಡುತ್ತಾರೆ. ಸರ್ಕಾರ ಅದನ್ನು ಮೇನಲ್ಲಿ ಪರಿಶೀಲನಮಾಡುತ್ತದೆ. ಆಮೇಲೆ ಅವರಿಗೆ everything is o. k. ಎಂದು ಗ್ರೀನ್ ಸಿಗ್‌ನಲ್ ಕೊಡುತ್ತಾರೆ. ಇದರಲ್ಲಿ ಸರ್ಕಾರ ಯಾವುದನ್ನೂ ವಿಮರ್ಶೆ ಮಾಡುತ್ತಾ ಇಲ್ಲ. ಖಚಿತವಾಗಿ ಕೆಲವು ವಿಷಯಗಳನ್ನು ಈ ಸಭೆಯ ಎದುರಿಗೆ ತರುತ್ತೇನೆ. ದಯವಿಟ್ಟು ಮಾನ್ಯ ಸದಸ್ಯರು ಸೆಕ್ಷನ್ 61—ಎರೆಕ್ಟ್‌ಕ್ ಸಪ್ಲೈಆಕ್ಟ್ 1948ನ್ನು ನೋಡಬೇಕು. ಅದರಲ್ಲಿ ಈ ರೀತಿ ಹೇಳಿದ್ದಾರೆ :

> "61. (1) In February of each year the Board shall submit to the State Government a statement in the prescribed form of the estimated capital and revenue receipts and expenditure for the ensuing year. (2) The said statement shall include a statement of the salaries of members, Officers and servants of the Board and of such other particulars as may be prescribed. (3) The State Government shall, as soon as may be after the receipt of the said statement, cause it to be laid on the Table of the (House) or as the case may be (Houses) of the State Legislature, and the said statement shall be open to discussion therein, but shall not be subject to vote. (4) The Board shall take into consideration any comments made on the said statement in the State Legislature. (5) The Board may, at any time during the year in respect of which a statement under Sub-Section (1) has been submitted, submit to the State Government a supplementary statement, and all the provisions of this section shall apply to such statement as they apply to the statement under the said sub-section."

ಅಂದರೆ, ಈ ತರಹ ಅಂದಾಜು ಪತ್ರಿಕ ಪ್ರತಿವರ್ಷವೂ ಮುಂದಲಿ ತಯಾರುಮಾಡುವಂಥಾದ್ದು ಈ ಸಭೆಯ ಗಮನಕ್ಕೆ ತರಬೇಕು. ಈ ಸಭೆ ಅದನ್ನು ಚರ್ಚಿಸಬೇಕೆಂದು ಇದರಲ್ಲಿದೆ. ಅದರ ಸೆಕ್ಷನ್ 65ರಲ್ಲಿ ಈ ರೀತಿ ಹೇಳಿದೆ :

> "65. (1) The Board may from time to time, with the previous sanction of the State Government and subject to the the provisions of this Act and to such conditions as may be prescribed in this behalf, borrow any sum required for the

purposes of this Act. (2) Rules made by the State Government for the purposes of this section may empower the Board to borrow by the issue of bonds or stock or otherwise and to make arrangements with bankers, and may apply to the Board with such modifications as may be necessary to be consistent with this Act the provisions of the Local Authorities Loans Act, 1914 and the rules made thereunder as if the Board were a local authority. (3) The maximum amount which the Board may at any time have on loan under Sub-Section (1) shall be ten crores of rupees, unless the State Government, with the approval of the State Legislative Assembly, fixes a higher maximum amount. (4) Stock issued by the Board under this Section shall be issued, transferred, dealt with and redeemed in such manner as may be prescribed."

ಆದ್ದರಿಂದ ಸೆಕ್ಷನ್ 65, ಸಬ್ ಸೆಕ್ಷನ್ (3)ರ ಪ್ರಕಾರ ಸರ್ಕಾರದ ಹತ್ತೋಟಿ ಮಂಡಲಿಯವರ ಮೇರೆ ಇಲ್ಲವೆಂದು ನಾನು ಹೇಳುತ್ತೇನೆ. ಇದಕ್ಕೆ ಸ್ಪಷ್ಟವಾಗಿ ಅನ್ಯುಯರ್ ಫಿನಾನ್ಷಿಯರ್ ಸ್ಟೇಟ್‌ಮೆಂಟ್ ಆಂಡ್ ಬಜೆಟ್ ಎಸ್ಟಿಮೇಟ್ 69-70, ವಾಲ್ಯೂಂ ನಂ. 1ರಲ್ಲಿ, ಕಾಲಂ ನಾಲ್ಕನ್ನು ದಯವಿಟ್ಟು ತಾವು ನೋಡಬೇಕು. ಅದರಲ್ಲಿ ಬ್ಯಾಲೆನ್ಸ್ ಔಟ್‌ಸ್ಟ್ಯಾಂಡಿಗ್ ಆಟ್ ದಿ ಎಂಡ್ ಆಫ್ ಮಾರ್ಚ್ 69—17 ಕೋಟಿ 27 ಲಕ್ಷದ 24 ಸಾವಿರ ರೂಪಾಯಿ, ಎಂದು ಇದೆ. ರೀತಿ ಪುಟ 2ರಲ್ಲಿ ಕಾಲಂ 5ರಲ್ಲಿ, ಇಲ್ಲಿ ಕೊಟ್ಟಿದ್ದು 28 ಕೋಟಿ 63 ಲಕ್ಷದ 26 ಸಾವಿರದ 300 ರೂಪಾಯಿ. ಇದನ್ನು ಜೋಟರ್ ಮಾಡಿದರೆ 45 ಕೋಟಿಯ 90 ಲಕ್ಷವ 50 ಸಾವಿರದ 300 ರೂಪಾಯಿಯಾಗುತ್ತದೆ. ಇದರಲ್ಲಿ ನನಗೆ ಗೊತ್ತಿರುವ ಪ್ರಕಾರ ಈ ಮಾನ್ಯ ಸಭೆಯಲ್ಲಿ ಮಂಡಲಿಗೆ ಕೊಟ್ಟಂತಹ ಅಧಿಕಾರ ಒಂದು ರೆಸೊಲ್ಯೂಷನ್ ಮೂಲಕ ಇದೆ. ಆರೆಸೊಲ್ಯೂಷನ್ ಪಾಸ್ ಮಾಡಿದಂತದ್ದು 21ನೇ ಡಿಸೆಂಬರ್ 1967ರಲ್ಲಿ. ಆ ರೆಸೊಲ್ಯೂಷನ್ ಹೀಗಿದೆ :

It reads as follows :

"Whereas under Sub-section (3) of Section 65 of the Electricity Supply Act, 1948 (Central Act 54 of 1948) approval of the State Legislative Assembly is required for fixing higher maximum amount than rupees ten crores which the Mysore State Electricity Board may, at any time, have on loan under Sub-section (1) of the said section ;

Whereas a resolution was passed by the Mysore Legislative Assembly on the 3rd July, 1964, to enhance the said limit of rupees ten crores to rupees twenty crores ; and

Whereas the Government of Mysore proposes to fix the maximum amount which the Mysore State Electricity Board may, at any time, have on loan under Sub-section (1) of the said Section 65 at rupees thirty crores ;

Now, therefore, the Mysore Legislative Assembly hereby accords approval to the proposal of the State Government to fix, under Sub-section (3) of Section 65 of the said Act, rupees thirty crores as the maximum amount which the Board may at any time, have on loan under Sub-section (1) of Section 65 of the Electricity Supply Act, 1948 (Central Act 54 of 1948)."

ಅಂದರೆ 20 ಕೋಟಿಯಿಂದ 30 ಕೋಟಿಯವರೆಗೆ ಸಾಲ ಮಾಡತಕ್ಕ ಅಧಿಕಾರ ಈ ಅಸೆಂಬ್ಲಿ ಕೊಟ್ಟಿದೆ. ಅವರು ಕೊಟ್ಟಂತಹ ಫಿನಾನ್ಷಿಯರ್ ಸ್ಟೇಟ್‌ಮೆಂಟ್ ನೋಡಿದರೆ ಅವರು 46 ಕೋಟಿ

(ಶ್ರೀ ಎಂ. ನಾಗಪ್ಪ)

ನಮೂದಿಸಿದ್ದಾರೆ. ಅದಲ್ಲದೇ, ಅದೇ ಬಜೆಟಿನ ಕೆಳಗೆ ಈ ರೀತಿ ಹೇಳುತ್ತಿದ್ದಾರೆ.

"It is proposed to raise a loan of Rs. 150 lakhs during 1969-70 in the open market, Rs. 100 lakhs from L. I. C. and Rs. 200 lakhs from the Government to meet expenditure on developmental schemes during 1969-70."

ಇದರ ಒಟ್ಟು ಮೊತ್ತ ಸಾಧಾರಣ ನಾಲ್ಕು ಕೋಟಿ 50 ಸಾವಿರವಾಗುತ್ತದೆ. ಅಂದರೆ 50 ಕೋಟಿ 40 ಲಕ್ಷದ 50 ಸಾವಿರದ 300 ರೂಪಾಯಿ ಲೋನ್ ಆಗುತ್ತದೆ. ಇಂಥ ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ಸರ್ಕಾರಕ್ಕೆ ಫೆಬ್ರುವರಿ ತಿಂಗಳಲ್ಲಿ ಕೊಟ್ಟರೂ, ಈ ಬೋರ್ಡು ತನ್ನ ಹಣಕಾಸಿನ ಪರಿಮಿತಿಯಲ್ಲಿ ಲೋನ್ ತೆಗೆದುಕೊಂಡಿದೆಯೇ ಎಂಬುದನ್ನು ಸರ್ಕಾರ ಪರಿಶೀಲಿಸಿಲ್ಲ. ಇದರಿಂದ ಸರ್ಕಾರದ ಕಂಟ್ರೋಲ್ ಈ ಬೋರ್ಡಿನ ಮೇಲೆ ಇಲ್ಲವೆಂಬುದು ಸ್ಪಷ್ಟವಾಗುತ್ತದೆ. ಇವರು ಸ್ವಜನ ಪಕ್ಷಪಾತದಿಂದ ತಮಗೆ ಬೇಕಾದ ಹಳ್ಳಿಯನ್ನು ಎಲೆಕ್ಟ್ರಿಫೈ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಯವರು ರೂರಲ್ ಎಲೆಕ್ಟ್ರಿಫಿಕೇಶನ್ ಮಾಡಿ ಮುಂಡಲಯವರು ನಾಕಷ್ಟು ಹಾನಿಯನ್ನು ಅನುಭವಿಸುತ್ತಿದ್ದಾರೆಂದು ಹೇಳಿದ್ದಾರೆ.

3-30 P.M.

ಇವೊತ್ತು ಯಾವ ಹಳ್ಳಿಯೊಳಗೆ ಎಲೆಕ್ಟ್ರಿಫೈ ಮಾಡಬೇಕಾಗಿದೆ ಅಂಥವುಗಳನ್ನು ರಾಜಕೀಯ ದೃಷ್ಟಿಯಿಂದ ನಿರ್ಣಯ ಮಾಡುತ್ತಾರೆ. ಇಂತಿಂಥಾ ಹಳ್ಳಿಗಳಲ್ಲಿ ಎಲೆಕ್ಟ್ರಿಫೈ ಮಾಡಬೇಕು, ಪಂಪು ಸೆಟ್ಟುಗಳನ್ನು ಹಾಕಬೇಕು ಅವುಗಳಿಗೆ ವಿದ್ಯುಚ್ಛಕ್ತಿಯನ್ನು ಒಯ್ಯಬೇಕು ಎಂದು ಎಲೆಕ್ಟ್ರಿಸಿಟಿ ಬೋರ್ಡಿನವರಾಗಲೀ, ಸರ್ಕಾರದವರಾಗಲೀ, ಯೋಜನೆಯನ್ನು ಮಾಡಿ ಕಳುಹಿಸಿದರೆ ಅದನ್ನು ವ್ಯವಸ್ಥಿತ ರೀತಿಯಲ್ಲಿ ಕಾರ್ಯಗತ ಮಾಡತಕ್ಕಂಥ ಒಂದು ನಿಯಮ ಸರ್ಕಾರದಲ್ಲಿ ಇಲ್ಲ. ಎಲ್ಲೆಲ್ಲಿಗೆ ಅವಶ್ಯಕವಾಗಿ ಪಂಪುಸೆಟ್ಟುಗಳನ್ನು ಕೊಡಬೇಕೋ ಅಂಥಾ ಕಡೆ ನೆಗ್ಲೆಕ್ಟ್ ಮಾಡುತ್ತಾರೆ. ನನ್ನ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡತಕ್ಕ ಹಳ್ಳಿಗಳು 4 ಹಳ್ಳಿಗಳು ಎಂದು ಲಸ್ಟಿನಲ್ಲಿ ಕೊಟ್ಟಿದ್ದಾರೆ. ಆದರೆ ಮಾನ್ಯ ಉಪಮಂತ್ರಿಗಳ ಕ್ಷೇತ್ರದಲ್ಲಿ 8 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆಂದು ಆ ಲಸ್ಟಿನಲ್ಲಿ ಕೊಟ್ಟಿದ್ದಾರೆ. ಇದಕ್ಕೆ ಕಾರಣವೇನು ! ಅದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಿದೆ ಎಂದು ಹೇಳುತ್ತಾರೆ. ಒಂದು ಲಕ್ಷ ರೂಪಾಯಿಗಳನ್ನು ಯಾವುದಕ್ಕೋ ಖರ್ಚು ಮಾಡಿ 8 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಇಷ್ಟು ಹಣ ಖರ್ಚಾಯಿತು ಎಂದು ಈ ನಭೆಯಮುಂದೆ ಇಟ್ಟರೆ ಅದು ಗೊತ್ತಾಗುತ್ತದೆಯೇ ! ಬಾಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದರೆ ಸರ್ಕಾರಕ್ಕೆ, ಬೋರ್ಡಿಗೆ ನಷ್ಟವಾಗುತ್ತದೆ ಎಂದು ಹೇಳುತ್ತಾರೆ. ಆದರೆ ಇದರಲ್ಲಿ ಒಂದು ನೀತಿಯಲ್ಲ, ನಿಯಮವಿಲ್ಲ. ರಾಜಕೀಯ ಒತ್ತಡಕ್ಕಾಗಿ ತಮಗೆ ಬೇಕಾದಂತಹ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡತಕ್ಕದ್ದು ಯೋಗ್ಯವೇ !

ಶ್ರೀಮತಿ ಬನಶಂಕರಾಜೇಶ್ವರಿ.—ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಎಷ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಲಸ್ಟಿನಲ್ಲಿ ನಮೂದು ಮಾಡಿದ್ದಾರೆ, ಎಷ್ಟು ಗ್ರಾಮಗಳಿಗೆ ಈಗ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ ಎಂಬುದನ್ನು ಸರಿಯಾಗಿ ತಿಳಿದುಕೊಂಡು ಮಾನ್ಯ ಸದಸ್ಯರು ಮಾತನಾಡಿದರೆ ಒಳ್ಳೆಯದು.

ಶ್ರೀ ಎಂ. ನಾಗಪ್ಪ.—ನಾನು ಮಾನ್ಯ ಮಂತ್ರಿಗಳ ಚೇಂಬರಿಗೆ ಹೋಗಿದ್ದೆ. ಲಸ್ಟನ್ನು ನೋಡಿಕೊಂಡು ಬಂದಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಕೋಪಮಾಡಿಕೊಳ್ಳುವುದು ಸರಿಯಲ್ಲ. ನಮ್ಮ ತಾಲ್ಲೂಕಿನಲ್ಲಿ ಸ್ವಜನ ಪಕ್ಷಪಾತ ನಡೆಯುತ್ತಿದೆ. ಇದರಿಂದಾಗಿ ಅಲ್ಲಿ ಸರಿಯಾಗಿ ಕೆಲಸಕಾರ್ಯಗಳು ನಡೆಯುತ್ತಿಲ್ಲ. ರೂರಲ್ ಎಲೆಕ್ಟ್ರಿಫಿಕೇಷನ್ ಮಾಡಿದರೆ ಅದರಿಂದ ನಷ್ಟವಾಗುತ್ತದೆ ಎಂದು ಹೇಳಿ ನಮ್ಮ ರಾಯಚೂರು ತಾಲ್ಲೂಕಿನಲ್ಲಿ 1966-67ನೇ ಸಾಲಿನಲ್ಲಿ ಎರಡು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ. 1966ನೇ ಇಸವಿ ಡಿಸೆಂಬರ್ ತಿಂಗಳಿನಲ್ಲಿ ಆ ಎರಡು ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿ ಅದರ ಓಪನಿಂಗ್ ಸೆರಮೊನಿಯನ್ನು ಮಾನ್ಯ ಮುಖ್ಯ ಮಂತ್ರಿಗಳೇ ಮಾಡಿದ್ದಾರೆ. ಆಗ ಜನರಲ್ ಎಲೆಕ್ಷನ್ ಇನ್ನು ಒಂದೂವರೆ ತಿಂಗಳು ಇತ್ತು. ಸ್ವಜನ ಪಕ್ಷಪಾತಕ್ಕಾಗಿ ತಮಗೆ ಬೇಕಾದಂತಹ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಾದರೆ

ಸರ್ಕಾರ ವಿದ್ಯುಚ್ಛಕ್ತಿ ಮಂಡಲಯಷ್ಟಿ ಅಪಾದನೆಗೆ ಭಾಗಿಯಾಗಿದೆ ಎಂದು ಹೇಳಿದರೆ ತಪ್ಪಾಗ ರಾರದು. ಮಂತ್ರಿಗಳು ಯಾವ ಯಾವ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಲಿಸ್ಟನ್ನು ಕೊಡುತ್ತಾರೆಯೋ ಆ ಪ್ರಕಾರ ಬೋರ್ಡಿನವರು ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ. ಇದರಿಂದಾಗಿ ಎಲೆಕ್ಟ್ರಿಸಿಟಿ ಬೋರ್ಡಿನವರು ತಮ್ಮ ಕೆಲಸಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ಮಾಡಿಲ್ಲ. ಇದುವರೆಗೆ ಮಾನ್ಯ ಸದಸ್ಯರು ಈ ವಿದ್ಯುಚ್ಛಕ್ತಿ ಮಂಡಲಯಮೇಲೆ ಏನು ಅಪಾದನೆಯನ್ನು ಮಾಡಿದ್ದಾರೆಯೋ ಅದೇರೀತಿ ಸರ್ಕಾರದಮೇಲೂ ಅಪಾದನೆಯನ್ನು ಮಾಡಿದ್ದರೆ ಸಂತೋಷ ವಾಗುತ್ತಿತ್ತು. ಸರ್ಕಾರದ ಹತೋಟಿ ಮಂಡಲಯಮೇಲೆ ಇರಲಿಲ್ಲ. ಆದ್ದರಿಂದ ಮಂಡಲಯು ಸ್ವೇಚ್ಛೆಯಾಗಿ ಕೆಲಸ ಮಾಡಿತು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಇದರಲ್ಲಿ ಮುಖ್ಯವಾಗಿ ನಾವು ನೋಡಬೇಕಾದ್ದು, ಈ ವಿದ್ಯುಚ್ಛಕ್ತಿ ಮಂಡಲಯವರು 1969ನೇ ಇಸವಿ ಏಪ್ರಿಲ್ ತಿಂಗಳಿನಲ್ಲಿ ವಿದ್ಯುಚ್ಛಕ್ತಿದರವನ್ನು ಏರಿಸಿದೆ. ಇದರಿಂದ ನಮ್ಮ ರೈತರಿಗೆ ಯಾವ ತರಹ ಪರಿಣಾಮ ಉಂಟಾಗುತ್ತದೆ ಎಂಬುದನ್ನು ನಾವು ನೋಡಬೇಕಾಗಿದೆ. ಈ ದೃಷ್ಟಿಯಿಂದ ನಾನು ಒಂದೆರಡು ವಿಷಯಗಳನ್ನು ಈ ಸಭೆಯಮುಂದೆ ನಾನು ಹೇಳಬಯಸುತ್ತೇನೆ. ಮೊದಲನೆಯದಾಗಿ ಈಗಾಗಲೇ ನಮ್ಮ ಮಾನ್ಯ ಮಿತ್ರರು ಹೇಳಿದಹಾಗೆ ಈ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ಅನೇಕ ಕಡೆ ಎಲೆಕ್ಟ್ರಿಕ್ ಪೋಲುಗಳು ಮುಂತಾದ ಸಾಮಾನುಗಳನ್ನು ತೆಗೆದು ಕೊಂಡು ಅಲ್ಲಲ್ಲೇ ಹಾಕುತ್ತಾರೆ, ಅವು ಹಾಳಾಗಿ ಹೋಗುತ್ತವೆ. ಅವುಗಳ ಬಗ್ಗೆ ಸರಿಯಾದಂತಹ ರೆಕ್ಕಪತ್ರಗಳಿಲ್ಲ. ಮತ್ತೆ ಎಲೆಕ್ಟ್ರಿಕ್ಕಿಗೆ ಸಂಬಂಧಪಟ್ಟ ವೈರು ಮುಂತಾದ ಕೆಲವು ಸಾಮಾನು ಗಳನ್ನು ಅಲ್ಲಿರತಕ್ಕ ಎಂಪ್ಲಾಯೀಸ್ ಮಾರಾಟ ಮಾಡಿ ಸಾಕಷ್ಟು ಹಣವನ್ನು ಗಳಿಸುತ್ತಿದ್ದಾರೆ. ಇದು ಸರ್ಕಾರಕ್ಕೆ ಗೊತ್ತಿಲ್ಲ. ಸಾವಿರಾರು ರೂಪಾಯಿಗಳ ವೈರನ್ನು ಅಲ್ಲಿರತಕ್ಕ ಎಂಪ್ಲಾಯಿಗಳು ಮಾರಾಟ ಮಾಡಿದ್ದಾರೆ. ಎಷ್ಟೋ ಸಾರಿ ಇಂಥ ವಿಚಾರಗಳು ಪತ್ರಿಕೆಯಲ್ಲಿ ಕೂಡ ಬರುತ್ತಿದೆ. ಇದರಿಂದಾಗಿ ಸರ್ಕಾರಕ್ಕೆ ನಾನಾ ರೀತಿಯಲ್ಲಿ ಹಾನಿಯಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಸರಿಯಾದಂತಹ ಒಂದು ಕಂಟ್ರೋಲ್ ಇಲ್ಲ. ಸರಿಯಾದಂತಹ ವ್ಯವಸ್ಥೆ ಇಲ್ಲ. ಈ ಬಗ್ಗೆ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ, ಮಾನ್ಯ ಮಂತ್ರಿಗಳು ಏಪ್ರಿಲ್ 8ನೇ ತಾರೀಕು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಸ್ಪಷ್ಟವಾಗಿದೆ. ವಿದ್ಯುಚ್ಛಕ್ತಿಯನ್ನು ಮಾರಾಟ ಮಾಡುವ ವಿಷಯದಲ್ಲಿ ಮದ್ರಾಸು, ಆಂಧ್ರ ಮತ್ತು ಮಹಾರಾಷ್ಟ್ರ ಈ ಮೂರು ರಾಜ್ಯಗಳಿಗೆ ಸಂಬಂಧಪಟ್ಟಹಾಗೆ ಒಂದು ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಅದರಲ್ಲಿರತಕ್ಕ ಅಂಕಿಅಂಶಗಳನ್ನು ನೋಡಿದರೆ ತಮಗೆ ಗೊತಾಗುತ್ತದೆ. ಈಗ ಮದ್ರಾಸ್ ಸರ್ಕಾರದವರು ಇರಿಗೇಷನ್ ಪಂಪುಸೆಟ್ಟಿಗೆ ಅಲ್ಲಿ ಒಂದು ಯೂನಿಟ್ಟಿಗೆ 8·25 ಪೈಸಾ ಚಾರ್ಜ್ ಮಾಡುತ್ತಾರೆ, ಆಂಧ್ರದಲ್ಲಿ 12 ಪೈಸಾ ಚಾರ್ಜ್ ಮಾಡುತ್ತಾರೆ. ಕೇರಳದಲ್ಲಿ 8 ಪೈಸಾ ಒಂದು ಯೂನಿಟ್ಟಿಗೆ ಚಾರ್ಜ್ ಮಾಡುತ್ತಾರೆ. ಆದರೆ ನಮ್ಮ ಮೈಸೂರಿನಲ್ಲಿ ಇರಿಗೇಷನ್ ಪಂಪುಸೆಟ್ಟಿಗೆ ಒಂದು ಯೂನಿಟ್ಟಿಗೆ 11 ಪೈಸಾ ಚಾರ್ಜ್ ಮಾಡುತ್ತಾರೆ. ಅವರು ನಮ್ಮ ರಾಜ್ಯದಲ್ಲಿ ಒಂದು ಯೂನಿಟ್ಟಿಗೆ 4, 5 ಪೈಸಾಗಳಂತೆ ವಿದ್ಯುಚ್ಛಕ್ತಿಯನ್ನು ಕೊಂಡುಕೊಂಡು ಹೆಚ್ಚಿನ ಆದಾಯ ಮಾಡಿ ಕೊಳ್ಳುತ್ತಾರೆ. ನಮ್ಮ ದೇಶದಲ್ಲಿ ಉತ್ಪತ್ತಿಯಾದಂತಹ ವಿದ್ಯುಚ್ಛಕ್ತಿಯನ್ನು ಕಡಿಮೆ ದರದಲ್ಲಿ ಬೇರೆ ಸ್ಟೇಟಿನವರಿಗೆ ಮಾರಿ ಅವರಿಗೆ ಅನುಕೂಲ ಮಾಡುವಾಗ ನಮ್ಮದೇಶದ ರೈತರಿಗೆ ಹೆಚ್ಚಿನ ದರವನ್ನು ವಿದ್ಯುಚ್ಛಕ್ತಿಗೆ ವಿಧಿಸುವುದು ಸರಿಯಾದಂತಹ ನೀತಿಯಲ್ಲ, ಅದನ್ನು ನಾನು ಖಂಡಿಸುತ್ತೇನೆ. ರೈತರ ಹಿತಸಾಧನೆಗೋಸ್ಕರ ಕೆಲಸಮಾಡತಕ್ಕ ಪ್ರಜಾ ಸರ್ಕಾರ 100ಕ್ಕೆ 80ರಷ್ಟು ರೈತರು ಇರತಕ್ಕ ದೇಶದಲ್ಲಿ ಅವರ ಏಳಿಗೆಗಾಗಿ ಎಷ್ಟರಮಟ್ಟಿನ ಕೆಲಸ ಮಾಡುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಕೋಟಿ ಕೋಟಿಗಟ್ಟಲೇ ಹಣವನ್ನು ನಾನಾ ರೀತಿಯಲ್ಲಿ ಖರ್ಚು ಮಾಡತಕ್ಕ ಈ ಸರ್ಕಾರ ರೈತರ ಬೆನ್ನು ಮೂಳೆಯನ್ನು ಮುರಿಯುವ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ಹೇಳಿದರೆ ತಪ್ಪಾಗ ರಾರದು. ಸಿನೆಮಾ ಮತ್ತು ಕಾರ್ಖಾನೆಗಳಿಗೆ ಮತ್ತು ಹೋಟೆಲ್‌ಗಳಿಗೆ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದೀರಿ. ಅನ್ನದ ಪರಿಸ್ಥಿತಿ ದೊಡ್ಡದಾಗಿರುವ ಇವತ್ತಿನ ಪರಿಸ್ಥಿತಿಯಲ್ಲಿ ರೈತರಿಗೆ ಹೆಚ್ಚಿನ ದರವನ್ನು ವಿಧಿಸುತ್ತಿದ್ದೀರಿ. ಅದೇ ಪ್ಲಾಸ್ಟಿಕ್ ಕಂಪನಿಯೊಂದಕ್ಕೆ 10-15 ವರ್ಷದವರೆಗೆ ಅಗ್ರಿಮೆಂಟ್ ಮಾಡಿಕೊಂಡು ಯೂನಿಟ್‌ಗೆ 3 ಪೈಸೆಯಂತೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದೀರಿ. ಅದೇ ರೈತರ ಪಂಪ್‌ಸೆಟ್ಟುಗಳಿಗೆ ಒಂದು ಯೂನಿಟ್‌ಗೆ 11 ಪೈಸೆಯಂತೆ ಚಾರ್ಜು ಮಾಡುತ್ತಿದ್ದೀರಿ. ಮಿನಿಮಮ್ ಚಾರ್ಜು 24 ರೂಪಾಯಿಗಳು ಇದ್ದುದನ್ನು 48 ರೂಪಾಯಿಗಳಿಗೆ ಹೆಚ್ಚಿಸಿದ್ದೀರಿ. ಅದೇ ಹೆಚ್ಚಿನ ಆದಾಯ ಗಳಿಸುತ್ತಿರುವ ಸಿನಿಮಾ, ಹೋಟೆಲ್‌ಗಳಿಗೆ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿ ಒದಗಿಸುತ್ತಿದ್ದೀರಿ. ಇನ್ನಿತರ ಲಗ್ಜುರಿ ವಸ್ತುಗಳಿಗೆ ಉಪಯೋಗಿಸುವ ವಿದ್ಯುಚ್ಛಕ್ತಿಗೆ ಎಕ್ಸೈಸ್ ಡ್ಯೂಟಿ ದರವನ್ನು 10 ಪರ್‌ಸೆಂಟ್ ಎಂದು ಮಾಡಿದ್ದೀರಿ. ಅದೇ ಬಡರೈತರ ಮೇಲೆ 100ಕ್ಕೆ 100 ರಷ್ಟು ಸರ್‌ಚಾರ್ಜನ್ನು ಹಾಕುವುದು ಮೂಲಕ ಹೆಚ್ಚು ಮಾಡಿದ್ದೀರಿ. ಇದು ಅನ್ಯಾಯ.

(ಶ್ರೀ ಎಂ. ನಾಗಪ್ಪ)

ರೈತರಿಗೆ ದ್ರೋಹ ಬಗೆಯುತ್ತಿದ್ದೀರಿ ಎಂದು ಹೇಳಬೇಕಾಗಿದೆ. ಬೋರ್ಡಿಗೆ ಈಗ ನಷ್ಟವಾಗುತ್ತಿದೆ ಎಂದು ಹೇಳಿ ದರವನ್ನು ಹೆಚ್ಚು ಮಾಡಿದ್ದಾರೆ. ಆ ರೀತಿ ನಷ್ಟವಾಗುವುದಕ್ಕೆ ಅವಕಾಶವೇ ಇಲ್ಲ. ನಷ್ಟವಾಗುವುದಕ್ಕೆ ಕೆಲವು ಕಾರಣಗಳು ಇವೆ. 1965ಕ್ಕೆ ಮುಂಚೆ ಬೋರ್ಡಿನಲ್ಲಿದ್ದ ನೌಕರರಿಗೆ ವಿದ್ಯುಚ್ಛಕ್ತಿಯನ್ನು ಫ್ರೀ ಆಗಿ ಒದಗಿಸುತ್ತಿದ್ದಾರೆ. 1965ರ ನಂತರ ಬೋರ್ಡಿಗೆ ಸೇರಿದ ನೌಕರರಿಗೆ ಚಾರ್ಜು ಮಾಡುತ್ತಿದ್ದಾರೆ. ಈಗ 3 ಜನ ಚೀಫ್ ಇಂಜಿನಿಯರ್ ಇದ್ದಾರೆ. ಅಷ್ಟೊಂದು ಜನ ಏತಕ್ಕೆ ಬೇಕು ? ಇಷ್ಟೊಂದು ಜನ ಅನಾವಶ್ಯಕವೆಂದು ಹೇಳುತ್ತೇನೆ. ಫೀಲ್ಡ್ ವರ್ಕರ್ಸ್ ಕಡಿಮೆ ಇದ್ದಾರೆ. ಸಮಯಕ್ಕೆ ಬೇಕಾದರೆ ಒಬ್ಬರೂ ಸಿಗುವುದಿಲ್ಲ. ಇವರ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ಈಗ ಚೇರ್‌ಮನ್‌ಗೆ ಕೊಡುತ್ತಿರುವ ಸಂಬಳದ ಬಗ್ಗೆ ಕೆಲವು ಸದಸ್ಯರು ಹೇಳಿದರು. ಈಗ ಚೇರ್‌ಮನ್ ತೆಗೆದುಕೊಳ್ಳುತ್ತಿರುವ ಸಂಬಳ ಜಾಸ್ತಿ ಇವೆ ಎಂದು ಕೆಲವರು ಹೇಳಿದರು. ಪೆನ್‌ಷನ್ ಹಣ ಮತ್ತು ಚೇರ್‌ಮನ್ ಪೋಸ್ಟ್‌ಗೆ ಇರುವ ಸಂಬಳ ಇವೆರಡಕ್ಕಿಂತ ಹೆಚ್ಚು ತೆಗೆದುಕೊಳ್ಳಬಾರದು ಎಂದು ನಿಯಮವಿದೆ. ಈ ನಿಯಮಕ್ಕೆ ವಿರುದ್ಧವಾಗಿ ಈಗಿರುವ ಚೇರ್‌ಮನ್ ಅವರು 2,700 ರೂಪಾಯಿಗಳ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ರೈತರ ಹೊಟ್ಟೆಯಮೇಲೆ ಹೊಡೆದು ಇವರಿಗೆ ಇಷ್ಟೊಂದು ಸಂಬಳ ಕೊಡುವುದು ನ್ಯಾಯೇ ಎಂಬುದನ್ನು ಸರ್ಕಾರದವರು ಯೋಚನೆಮಾಡಬೇಕು. ಸಮಯಾವಕಾಶ ಇಲ್ಲದಿರುವುದರಿಂದ ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

[MR. CHAIRMAN (SRI G. RAME GOWDA) in the Chair].

†ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧೀನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಚಿಕ್ಕೇಗೌಡರು ಎಲ್ಲಾ ವಿಷಯವನ್ನು ಸಹ ವಿಸ್ತಾರವಾಗಿ ಹೇಳಿದ್ದಾರೆ. ಮತ್ತೆ ಅಳಿದುಳಿದವು ಇದ್ದರೆ ಅಂತವರೆ ಆ ಬೋರ್ಡಿನಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಮತ್ತು ಕುಂದುಕೊರತೆಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಮೈನೂರು ವಿದ್ಯುಚ್ಛಕ್ತಿ ಬೋರ್ಡಿನ ಆಡಳಿತ ಬುದ್ಧಿಇಲ್ಲದವರ ಮೇಲ್ವಿಚಾರಣೆಯಲ್ಲಿ ಹಮ್ಮು ಬಿಮ್ಮಿರಿ ನಡೆಯುತ್ತಿದೆ ಎಂದು ಹೇಳಲು ನಾನು ಹಿಂಜರಿಯಲಾರೆ. ನಾಡಿನ ಸಂಪದಭಿವೃದ್ಧಿಗೆ ಕಾರಣವಾದ ಜನಜೀವನದ ನಿತ್ಯದ ವ್ಯವಹಾರಕ್ಕೆ ಅವಶ್ಯಕವಾದ ಈ ಇಲಾಖೆ ಲಂಗು-ಲಗಾಮಿಲ್ಲದ ಕುದುರೆಯಂತೆ ಓಡುತ್ತಿದ್ದರೆ ತುಂಬಾ ಅಪಾಯ ವೆಂದು ಹೇಳಬೇಕಾಗಿಯೇ ಇಲ್ಲ. ಕೋಟಿ-ಕೋಟಿ ವ್ಯವಹಾರದ ಈ ಇಲಾಖೆಯಲ್ಲಿ ಸ್ವಲ್ಪವೇ ಅಕ್ರಮ ಅನ್ಯಾಯ ನಡೆದರೆ ಅದರಿಂದ ಜನತೆಯಮೇಲೆ ತುಂಬಾ ದುಷ್ಪರಿಣಾಮವಾಗುತ್ತದೆ. ವಿದ್ಯುಚ್ಛಕ್ತಿಯ ಉಪಯೋಗ ಪಡೆಯುವ ಪ್ರತಿಯೊಬ್ಬ ವ್ಯಕ್ತಿಯೂ ತಾನು ನಂದಾಯ ಮಾಡ ಬೇಕಾದ ಹಣವನ್ನು ಕ್ಲುಪ್ತಕಾಲಕ್ಕೆ ಚಾಚೂ ತಪ್ಪದೇ ಕೊಡುತ್ತಾನೆ. ಬಲ್ಲುಗಳ ಹಣವನ್ನು ಪಠಾಣರಂತೆ ವಸೂಲಾತ್ಮಿಯ ಇಲಾಖೆ ಎಂದರೆ ಇದೊಂದೇ ಎಂದು ಹೇಳಬಹುದು. ಜನಜೀವನದಲ್ಲಿ ಹಾಸುಹೊಕ್ಕಾಗಿ ಹೊಂದಿಕೊಂಡಿರುವ ಹೊಂದಿಕೊಳ್ಳುತ್ತಿರುವ ಈ ಇಲಾಖೆ ಜನತೆಯ ಬಾಳಿನ ಜೀವನಾಡಿಯಾಗಿದೆ. ಇಂತಹ ಜೀವನಾಡಿ ಇಲಾಖೆಯು ಸ್ವಾರ್ಥಿಗಳ ಅಹಂಕಾರಿಗಳ ಮೇಲ್ವಿ ಚಾರಣೆಗೆ ಒಳಪಟ್ಟರೆ ಗತಿ ಏನು ? ಅಂಧಕಾರ ದರ್ಬಾರಿನಿಂದ ಆಗುವ ಅಪಾರ ನಷ್ಟಕ್ಕೆ ಹೊಣೆ ಯಾರು ಎಂದು ಸಹಜವಾಗಿಯೇ ಪ್ರಶ್ನಿಸಬೇಕಾಗಿದೆ. ವಿದ್ಯುಚ್ಛಕ್ತಿ ಬೋರ್ಡಿನ ಸದ್ಯದ ಆಡಳಿತ ದಲ್ಲಿ ತುಂಬಾ ಅಕ್ರಮಗಳು ನಡೆಯುತ್ತಿವೆ, ಎಂಬುದು ಜನಜನಿತವಾಗಿದೆ. ಈ ಬೋರ್ಡಿನ ಅಧ್ಯಕ್ಷರು ನಿರ್ಲಕ್ಷ್ಯದಿಂದ ಅಧಿಕಾರಮದದಿಂದ ಕೂಡಿದ್ದಾರೆಂಬುದಕ್ಕೆ ನಿದರ್ಶನಗಳುಂಟು. ಪಾಪ, ಇದು ಅಧ್ಯಕ್ಷರ ತಪ್ಪಲ್ಲ, ನಿವೃತ್ತಿ ಹೊಂದಿದ್ದ ಅಹಂಭಾವದ ಇಂತಹವರನ್ನು ಈ ಮಹಾನಂಸ್ಥೆಯ ಅಧ್ಯಕ್ಷರನ್ನಾಗಿ ಮಾಡಿದವರ ತಪ್ಪು. ನಂಸ್ಥೆ ಹಾಳಾದರೇನು ? ಊರ್ಜಿತವಾದರೇನು ? ತಿಂಗಳಿಗೆ 2,600 ರೂಪಾಯಿಗಳ ತಲುಬು, ಐಷಾರಾಮಗಳಿಗೆ ಹಣ, ಓಡಾಟಕ್ಕೆ ಕಾರು, ಜೊತೆಗೆ ಟಿ.ಎ., ಡಿ.ಎ. ಸಾಕಾದಷ್ಟು ಬೇಕಾದಷ್ಟು ಬರುತ್ತಿರುವಾಗ ಮತ್ತು ಕೋಟ್ಯಾಂತರ ರೂಪಾಯಿಗಳ ವ್ಯವಹಾರದ ಅಧ್ಯಕ್ಷರಾಗಿರುವಾಗ ಯಾರ ಹಂಗೇನು ಎಂಬ ಅಹಂಭಾವ ಬರುವುದು ಸ್ವಾಭಾವಿಕ. ಹಾಗೆ ಈ ಬೋರ್ಡಿನ ಅಧ್ಯಕ್ಷರಿಗೆ ಬಂದಿರುವಂತಿದೆ. ಈ ಕಾರಣಗಳಿಂದ ಅವರನ್ನು ಆ ಸ್ಥಾನದಲ್ಲಿ ಮುಂದುವರೆಸಿದರೆ ನಂಸ್ಥೆಗೂ ನಷ್ಟ, ದೇಶಕ್ಕೂ ನಷ್ಟ. ಸರ್ಕಾರಕ್ಕೆ ಎಷ್ಟೇ ನಿಷ್ಠೂರ ಬರಲಿ, ಈ ನಂಸ್ಥೆಗೆ ಕೈಶುದ್ಧಿ ಬಾಯಿಶುದ್ಧಿ ಇರುವವರನ್ನು ಆದಷ್ಟು ಜಾಗ್ರತೆ ಅಧ್ಯಕ್ಷರನ್ನಾಗಿ ಮಾಡಿರೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಬೇಕಾದರೆ ಪಿ.ಡಬ್ಲು.ಡಿ. ಇಲಾಖೆ ಸೆಕ್ರೆಟರಿಯವರನ್ನು ಚೇರ್‌ಮನ್ ಆಗಿ ಮಾಡಿರೂ ಚಿಂತೆ ಇಲ್ಲ, ನಿವೃತ್ತರಾದಂಥವರನ್ನು ನೇಮಕ ಮಾಡುವ ವ್ಯವಸ್ಥೆ ಬೇಡವೆಂದು ಹೇಳುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ಮಂಡಳಿಯ ವಿಜಿಲೆನ್ಸ್ ಅಂದರೆ ಜಾಗೃತ ದಳದವರು ಇದುವರೆಗೆ ಸಾಧಿಸಿರುವ ಕಾರ್ಯವೇನು ? ಎಷ್ಟರಮಟ್ಟಿಗೆ ಅವರು ಅನ್ಯಾಯ ಅಕ್ರಮಗಳನ್ನು ಪತ್ತೆ ಹಚ್ಚಿದ್ದಾರೆ ? ಜಾಗೃತ ದಳಕ್ಕಾಗಿ ಖರ್ಚು ಮಾಡುತ್ತಿರುವ ಹಣದ ಮೊತ್ತಕ್ಕೆ ಸಮಾನವಾದಷ್ಟು ಅನ್ಯಾಯಗಳನ್ನು ಪತ್ತೆ ಹಚ್ಚಿದ್ದಾರೆಯೇ ಎಂದು ಕೇಳುತ್ತೇನೆ. ಬೆಂಗಳೂರು ನಗರದಲ್ಲಿಯೇ ಅನೇಕ ಕೈಗಾರಿಕೋದ್ಯಮಿಗಳು ವಿದ್ಯುಚ್ಛಕ್ತಿ ಮಂಡಲಿಗೆ ಗಣನೀಯ ಪ್ರಮಾಣದಲ್ಲಿ ಮೋಸ ಮಾಡುತ್ತಿದ್ದಾರೆ. ಇವರಲ್ಲಿ ಎರಡು ಬಗೆ, ಮಿಟರ್‌ಗಳನ್ನು ಇಟ್ಟುಕೊಂಡು ಅವು ಸರಿಯಾಗಿ ಕೆಲಸ ಮಾಡಿ ಉಪಯೋಗಿಸಿದ ವಿದ್ಯುಚ್ಛಕ್ತಿಯನ್ನು ತೋರಿಸಿದರೂ ಮಂಡಳಿಯ ಸಂಬಂಧಪಟ್ಟ ಅಧಿಕಾರಿಗಳನ್ನು ಬುಟ್ಟಿಗೆ ಹಾಕಿಕೊಂಡು ಕಡಿಮೆ ಹಣ ಕಟ್ಟುತ್ತಿರುವವರು ಒಂದು ರೀತಿಯಾದರೆ, ಮಿಟರು ನಡೆಯದಂತೆ ಮಾಡಿ ಮೋಸ ಮಾಡುವವರು ಇನ್ನೊಂದು ಬಗೆ. ಈ ಮಂಡಲಿಯ ಉಗ್ರಾಣಗಳು ಅವುಗಳ ಲೆಕ್ಕ ಬಹುಶಃ ಯಾರಿಗೂ ಗೊತ್ತಿಲ್ಲ. ಸೂಪರ್‌ವೈಸರ್, ಸ್ಟೋರು ಕೀಪರುಗಳು ಕೆಲವರು ಮೇಲಿನ ಅಧಿಕಾರಿಗಳೊಂದಿಗೆ ಸೇರಿ ಅಪಾರ ಹಣ ದೋಚುತ್ತಿದ್ದಾರೆ. ವಿದ್ಯುಚ್ಛಕ್ತಿಯ ಮಂಡಳಿಯ ಕಾರುಗಳು, ವಾಹನಗಳು, ವಿದ್ಯುಚ್ಛಕ್ತಿ ಮಂಡಲಿಯ ಅತಿಥಿ ಗೃಹಗಳು ಕೆಲವು ಉನ್ನತಾಧಿಕಾರಿಗಳ ಮೋಜು ಆಡಂಬರದ ಪ್ರದರ್ಶನಕ್ಕಾಗಿ ಇವೆ. ಇದರ ಬಗ್ಗೆ ಸರಕಾರದವರು ತನಿಖೆ ನಡೆಸಿದರೆ ಅವರಿಗೆ ಎಲ್ಲ ವಿಚಾರಗಳೂ ಗೊತ್ತಾಗುತ್ತದೆ. ನೆರೆಯ ಮದರಾಸು ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೊರತೆ ಇದ್ದರೂ ನೆರೆಯ ರಾಜ್ಯದಿಂದ ವಿದ್ಯುತ್ ಪಡೆದು ಹಳ್ಳಿಗಳ ವಿದ್ಯುದೀಕರಣ (ರೂರಲ್ ಎಲೆಕ್ಟ್ರಿಫಿಕೇಷನ್)ದಲ್ಲಿ ಬಹಳ ಪ್ರಗತಿ ಸಾಧಿಸಿದ್ದಾರೆ. ನಮ್ಮಲ್ಲಿ ಇರುವ ವಿದ್ಯುಚ್ಛಕ್ತಿಯನ್ನು ವ್ಯರ್ಥ ಮಾಡುವುದರ ಬದಲು ರಾಷ್ಟ್ರೀಕೃತವಾದ ಭಾರಿ ಬ್ಯಾಂಕುಗಳಿಂದ ಇನ್ನೂ ಹೆಚ್ಚಿನ ಹಣ ಪಡೆದು ಪ್ರತಿ ಹಳ್ಳಿಗೂ ವಿದ್ಯುಚ್ಛಕ್ತಿಯನ್ನು ನೀಡಲು ಪ್ರಯತ್ನಿಸಬೇಕು. ಈಗಾಗಲೇ ವಿದ್ಯುಚ್ಛಕ್ತಿಯ ದರ ಸಾಮಾನ್ಯ ಬಳಕೆದಾರರಿಗೆ ಸಣ್ಣ ಕೈಗಾರಿಕೋದ್ಯಮಿಗಳಿಗೆ ನೀರಾವರಿ ಬಳಕೆಗೆ ಎಲ್ಲರಿಗೂ ಭಾರಿ ಹೊರೆಯಾಗಿದೆ. ಇನ್ನೂ ಇದರ ಏರಿಕೆ ಸರ್ವಥಾ ಒಪ್ಪದಂತಹ ಅಂಶ. ವಿದ್ಯುಚ್ಛಕ್ತಿ ಮಂಡಳಿಯ ಕೆಲವು ವರ್ಗದ ನೌಕರರುಗಳಿಗೆ ನೀಡುತ್ತಿರುವ ಉಚಿತ ವಿದ್ಯುಚ್ಛಕ್ತಿಯನ್ನು ಕೊಡಕೂಡದು. ನೌಕರರಲ್ಲಿಯೇ ಎರಡು ಬಣ ಸೃಷ್ಟಿಸುವುದು ಸಲ್ಲದು; ಕೊಟ್ಟರೆ ಎಲ್ಲ ನೌಕರರುಗಳಿಗೂ ಕೊಡಿ. ಜನತೆಗೆ ತೃಪ್ತಿಕರವಾಗುವಂತೆ ಕುಂದುಕೊರತೆಗಳನ್ನು ನಿವಾರಿಸಿ ಅನಂತರ ಈ ದರದ ಬಗ್ಗೆ ಯೋಚಿಸಿರೆಂದು ಹೇಳಬಯಸುತ್ತೇನೆ. ಬಹುಶಃ ಈ ಮಂಡಳಿಯ ಮೇಲಿರುವ ದೂರು ಹಾಗೂ ಅವ್ಯವಹಾರ ಮತ್ತು ಅಕ್ರಮಗಳ ಕಡಿವಾಣಕ್ಕೆ ವ್ಯವಸ್ಥೆಯ ಬಗ್ಗೆ ಒಂದು ತನಿಖಾ ಮಂಡಳಿಯನ್ನು ಸರಕಾರ ನೇಮಿಸುವುದು ಅಗತ್ಯ. ಇದನ್ನು ಸರಕಾರದವರು ಕೂಡಲೇ ಮಾಡಿ ತನಿಖೆ ಮಾಡಬೇಕೆಂದು ಹೇಳುತ್ತೇನೆ.

ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ರೈತರ ಬಗ್ಗೆ ಬಹಳಷ್ಟಾದ ಕಳವಳವನ್ನು ವ್ಯಕ್ತಪಡಿಸಿದರು. ನಾನೂ ಕೂಡ ರೈತರ ಹೊಟ್ಟೆಯಲ್ಲಿಯೇ ಹುಟ್ಟಿದವಳು. ನಮಗೂ ಕೂಡ ರೈತರ ಬಗ್ಗೆ ತಮಗೆ ಎಷ್ಟು ಕಳವಳವಿದೆಯೋ ಅಷ್ಟಕ್ಕೆ ಎರಡರಷ್ಟು ಇದೆ. ನಾವೂ ಕೂಡ ಪ್ರಯತ್ನ ಮಾಡುತ್ತಿದ್ದೇವೆ ಮತ್ತು ಸರಕಾರಕ್ಕೆ ಒತ್ತಾಯ ಮಾಡುತ್ತಲೂ ಇದ್ದೇವೆ. ರೈತರ ಮೇಲೆ ಹೆಚ್ಚು ಕರ ಹೇರುವುದನ್ನು ಸ್ವಲ್ಪ ಪರಿಶೀಲನೆ ಮಾಡಬೇಕು ಎಂದೂ ಹೇಳುತ್ತಿದ್ದೇವೆ. ಮತ್ತು ಇಲ್ಲಿರುವ ಬೋರ್ಡಿಗೆ ಚೇರ್ಮನ್‌ರಾಗಿ ರಿಟೈರಾದ ಅಧಿಕಾರಿಗಳನ್ನು ನೇಮಕ ಮಾಡಬಾರದು ಮತ್ತು ನನ್ನ ಅಭಿಪ್ರಾಯದಲ್ಲಿ ಇಲ್ಲಿಗೆ ಚೇರ್ಮನ್ನರಾಗಿರುವವರು ಪಿ.ಡಬ್ಲ್ಯು.ಡಿ. ಸೆಕ್ರಟರಿಗಳಾಗಿರುವವರೇ ಇದ್ದರೆ ಉತ್ತಮ. ಮತ್ತು ಇದರಲ್ಲಿರುವ ಲೋಪಗಳನ್ನು ತನಿಖೆ ಮಾಡಲು ಸರಿಯಾದ ಒಂದು ಕಮಿಟಿಯನ್ನು ಮಾಡಬೇಕೆಂದು ಸರಕಾರಕ್ಕೆ ನಲಕೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಭಾನ್ಮರಶೆಟ್ಟಿ (ಕಾಪು).—ಸ್ವಾಮೀ, ಎಲೆಕ್ಟ್ರಿಸಿಟಿ ಬೋರ್ಡಿನ 1969-70ನೇ ಸಾಲಿನ ವಾರ್ಷಿಕ ಸ್ಟೇಟುಮೆಂಟು ಮತ್ತು ಅಕೌಂಟುಗಳನ್ನು ವಿರೋಧಿಸುತ್ತಾ ಒಂದೆರಡು ಸಲಹೆಗಳನ್ನು ಸರಕಾರಕ್ಕೆ ಹೇಳಬಯಸುತ್ತೇನೆ.

ನನ್ನ ಮಿತ್ರರು ಅನೇಕರು ಈಗಾಗಲೇ ಎಲೆಕ್ಟ್ರಿಸಿಟಿ ಬೋರ್ಡಿನ ಅವ್ಯವಹಾರಗಳ ಬಗ್ಗೆ ಹಾಗೂ ರೆಕ್ಕಾಚಾರಗಳ ಬಗ್ಗೆ ಉತ್ತಮವಾದ ಸಲಹೆಗಳನ್ನು ಸಭೆಯಮುಂದೆ ಇಟ್ಟಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡಿನವರು ಸಾಲ ಪಡೆದು ಅದಕ್ಕೆ ಕೊಡುವ ಬಡ್ಡಿಯೇ ಸುಮಾರು ಹತ್ತು ಕೋಟಿಯಷ್ಟು ಆಗುತ್ತಿದೆ. ಇದರ ರೆಕ್ಕಾಚಾರವನ್ನು ಇನ್ನೂ ಕೂಲಂಕಷವಾಗಿ ಪರಿಶೀಲಿಸಿದರೆ ಈ ಎಲೆಕ್ಟ್ರಿಸಿಟಿ ಬೋರ್ಡು ಇನ್ನು ಹೆಚ್ಚು ಕಾಲ ಬದುಕಿಕೊಳ್ಳಲಾರದು ಎನ್ನುವ ಭಾವನೆ ಜನರಲ್ಲಿ ಬರುತ್ತಿದೆ. ಎಲೆಕ್ಟ್ರಿಸಿಟಿ ಬೋರ್ಡಿನ ವ್ಯವಹಾರವನ್ನು ನೋಡುವಾಗ ಸರಕಾರದವರಿಂದ ಹಣ ಪಡೆದು ವಿದ್ಯುಚ್ಛಕ್ತಿ ಉತ್ಪಾದನೆ ಎಷ್ಟು ಆಗುತ್ತಿದೆ ಎನ್ನುವುದನ್ನು ಇದರಲ್ಲಿರುವ ಲೆಕ್ಕದಿಂದ ನೋಡಿದರೆ ಗೊತ್ತಾಗುತ್ತದೆ.

(ಶ್ರೀ ಬಿ. ಭಾನ್ಮರ ಶೆಟ್ಟಿ)

4-00 P.M.

ವಿದ್ಯುಚ್ಛಕ್ತಿ ಮುಂತಲಾ ವಿದ್ಯುಚ್ಛಕ್ತಿಯನ್ನು 4.08 ಮಾರುವಾಗ ಪೈಸೆಯಂತೆ ಮಾರುತ್ತಾರೆ. ಅನಂತರ ಅವಕ್ಕೆ ಡ್ಯೂಟಿ ಬೇರೆ ಹಾಕುತ್ತಾರೆ. ಅಲ್ಲವೆ ಅವನಿಗೆ ಬೇಕಾದವರಿಗೆ ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಅಗ್ಗದ ದರವಲ್ಲಿ ಕೊಡುತ್ತಾರೆ. 10-15 ವರ್ಷದವರೆಗೆ ಕಾಂಟ್ರಾಕ್ಟ್ ಮಾಡಿಕೊಂಡಿದ್ದಾರೆ. ಉದಾಹರಣೆಗೆ ಇಂಡಿಯನ್ ಅಲ್ಯೂಮಿನಿಯಮ್ ಕಾರ್ಖಾನೆ. ಇದಕ್ಕೆ 1.76 ಪೈಸೆಯಂತೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು 15 ವರ್ಷದವರೆಗೆ ಕರಾರನ್ನು ಸರ್ಕಾರದವರು ಮಾಡಿಕೊಂಡಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಳ್ಳಿಯಲ್ಲಿ ದುಡಿವೆ ಮಾಡುವ ರೈತನಿಗೆ 100ಕ್ಕೆ 10 ರಷ್ಟು ದರವನ್ನು ಹೆಚ್ಚು ಮಾಡಿದ್ದೀರಿ. ಬೆಳಗಾದರೆ ನಮ್ಮ ಮಂತ್ರಿಗಳು ರೇಡಿಯೋದಲ್ಲಿ ಸುಸ್ಪಲವಾದ ಭಾಷಣವನ್ನು ಮಾಡುತ್ತಾರೆ ವ್ಯವಸಾಯೋತ್ಪನ್ನ ಹೆಚ್ಚು ಮಾಡಬೇಕು, ರೈತನ ಏಳಿಗೆಯಾಗಬೇಕು, ಅದಕ್ಕಾಗಿಯೇ ಹೆಚ್ಚು ಹೆಚ್ಚು ಹಣ ಮೀಸಲಾಗಿಟ್ಟಿದ್ದೇವೆ ಎಂದು ಹೇಳುತ್ತಾರೆ. ಮತ್ತು ಪುಟಾಯಿತ ರಾಜ್ಯವಲ್ಲೂ ಸಹ ಈ ಒಂದು ಹೇಳಿಕೆಯು ಸೋಗನ್ನು ಹಾಕಿದ್ದಾರೆ. ಇನ್ನೊಂದು ಕಡೆ ಅಪ್ರತ್ಯಕ್ಷವಾಗಿ ರೈತನ ಶೋಷಣೆ ಮಾಡುತ್ತಿದ್ದಾರೆ. ಕೆಲ್ತ್ ಸೆಸ್, ಎಜುಕೇಷನ್ ಸೆಸ್ ಇನ್ನೂ ಅನೇಕ ತರಹ ಸೆಸ್‌ಗಳನ್ನು ಹಾಕಿ, ತೆರಿಗೆಗಳನ್ನು ಹಾಕಿ ವಸೂಲ್ಮಾಡುತ್ತಿದ್ದಾರೆ. ಈ ಪ್ರೊತ್ತಿನ ದಿವಸ ಸರ್ಕಾರಕ್ಕೆ 120 ಕೋಟಿ ರೂಪಾಯಿ ವರಮಾನ ಸೇಲ್ಸ್‌ಟ್ಯಾಕ್ಸ್‌ನಿಂದ ಇದೆ. ಆದೂ ಕೂಡ ರೈತರುಮೇಲೆ ಬೀಳುತ್ತದೆ ಎಂದು ಹೇಳಬಹುದು. ನನ್ನ ಲೆಕ್ಕಾಚಾರದ ಪ್ರಕಾರ ರೈತನು ಉಪಯೋಗಿಸುವ ಬಿತ್ತನೆಗ 25 ಪಾಲು ಖರ್ಚಾಗುತ್ತದೆ, 50 ಪಾಲು ವ್ಯವಸಾಯ ಮಾಡುವುದಕ್ಕಾಗಿ ಖರ್ಚಾಗುತ್ತದೆ, ಉಳಿದ 25 ಪಾಲನಲ್ಲಿ ತೆರಿಗೆ ಕೊಡಬೇಕಾದರೆ ಇನ್ನು ಅವನಿಗೆ ಇದರಿಂದ ರಾಗಿ ಏನು ಸಿಕ್ಕುತ್ತದೆ? ಅವನಿಗೆ ಏನೂ ಸಿಕ್ಕುವುದಿಲ್ಲ. ಇದನ್ನು ಯೋಚನೆ ಮಾಡಬೇಕು. ಇನ್ನು ರೈತರನ್ನು ಉದ್ಧಾರ ಮಾಡುವ ಬಗೆ ಹೇಗೆ? ಕೇಂದ್ರ ಸರ್ಕಾರದ ಲೆಕ್ಕಾಚಾರದ ಪ್ರಕಾರವೇ ಅತಿ ದೊಡ್ಡ ಕೈಗಾರಿಕೆ ವ್ಯವಸಾಯ. ಆದುದರಿಂದ ಇದರ ಉತ್ಪಾದನೆಗೆ 14,500 ಕೋಟಿ ರೂಪಾಯಿಯನ್ನು ಖರ್ಚು ಮಾಡಬೇಕೆಂದು ಒಂದು ಅಂದಾಜು ಮಾಡಿದ್ದಾರೆ. ಆದರೆ ಕೈಗಾರಿಕೆಯಲ್ಲಿ 3,000 ಕೋಟಿ ರೂಪಾಯಿ ಉತ್ಪಾದನೆ ಇದೆ ಎಂದು ತಿಳಿದುಕೊಂಡರೂ ಕೂಡ ಅದಕ್ಕೆ ಬಂಡವಾಳ ಎಷ್ಟು ಕೊಡುತ್ತೀರಿ? ಈ ಪ್ರೊತ್ತಿನ ದಿವಸ ರೈತನಿಗೆ ಎಷ್ಟು ಬಂಡವಾಳ ಕೊಡುತ್ತೀರಿ? ಅವನಿಗೆ ಏನೂ ಕೊಡುವುದಿಲ್ಲ. ಆದರೆ ಅತಿ ದೊಡ್ಡ ಕೈಗಾರಿಕೆ ಅಂದರೆ ವ್ಯವಸಾಯ. 14,500 ಕೋಟಿ ರೂಪಾಯಿಯು ಉತ್ಪತ್ತಿ ತರುವಂಥ ಈ ವ್ಯವಸಾಯಕ್ಕೆ 100ಕ್ಕೆ 100ರಷ್ಟು ಕನಿಷ್ಠ ದರವನ್ನು ಏರಿಸಿದ್ದೀರಿ ಇದರ ಬಗ್ಗೆ ನಿಮಗೆ ಎಷ್ಟುಮಟ್ಟಿಗೆ ಕನಿಕರ ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ಖಚಿತವಾಗಿ ಹೇಳಬೇಕಾಗುತ್ತದೆ. ಮುಖ್ಯ ಮಂತ್ರಿಗಳು ಪಂಪುಸೆಟ್ಟಿನ ಬಗ್ಗೆ ಒಂದು ಲೆಕ್ಕಾಚಾರವನ್ನು ಹೇಳಿದರು; ಒಂದು ಪಂಪುಸೆಟ್ಟನ್ನು ಸರ್ವಿಸ್ ಮಾಡಲು 3,000 ರೂಪಾಯಿ ಖರ್ಚಾಗುತ್ತದೆ ಮತ್ತು ಪ್ರತಿ ಪಂಪುಸೆಟ್ಟಿನಿಂದ 540 ರೂಪಾಯಿ ಆದಾಯ ಬಂದರೆ ರಾಜಭೂ, ನಷ್ಟವೂ ಇಲ್ಲದಂತೆ ಕೆಲಸಮಾಡಲು ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಮದ್ರಾಸ್‌ನಲ್ಲಿ 55 ರೂಪಾಯಿನಿಂದ 60 ರೂಪಾಯಿನವರೆಗೆ ಇವೆ. ಇನ್ನೊಂದು ಲೆಕ್ಕಾಚಾರ ಏನೆಂದರೆ ಈ ವಿದ್ಯುಚ್ಛಕ್ತಿಯಿಂದ ಮದ್ರಾಸ್‌ನವರು 40 ಪರ್ಸೆಂಟು, ಆಂಧ್ರದವರು 12 ಪರ್ಸೆಂಟು ಉತ್ಪತ್ತಿ ಬರಬೇಕೆಂದು ಒಂದು ಲೆಕ್ಕಾಚಾರ ಇಟ್ಟುಕೊಂಡಿದ್ದಾರೆ. ಮೈಸೂರಿನವರ ಲೆಕ್ಕಾಚಾರ ನೋಡಿದರೆ ನಮಗೆ 18 ಪರ್ಸೆಂಟು ರಾಜಭವಾದರೂ ಬರಬೇಕು ಎನ್ನುವ ಲೆಕ್ಕ ಕೊಟ್ಟಿದ್ದಾರೆ. ಈ 18 ಪರ್ಸೆಂಟು ವಾರ್ಷಿಕ ಬಡ್ಡಿಗಿಂತಲೂ ದೊಡ್ಡ ವಾರ್ಷಿಕ ಬಡ್ಡಿ ಆದ ಹಾಗಾಯಿತು. ಇಷ್ಟಾದರೂ ಕೂಡ ಸರಿಯಾದ ಪಂಪುಸೆಟ್ಟಿನ ವ್ಯವಸ್ಥೆ ಇಲ್ಲ. ಅತಿ ದೊಡ್ಡ ಕೆಟ್ಟಿನ ಪೊತ್ತವನ್ನು ವ್ಯವಸಾಯದ ಬಾಬಿಗೆ ಹಾಕಿ, ರೈತರಿಗೆ ಅವಷ್ಟುಮಟ್ಟಿಗೆ ಹೊರೆಯನ್ನು ಕಡಿಮೆ ಮಾಡಿಕೊಡಬೇಕು ಎನ್ನುವ ಭಾವನೆ ಇರಬೇಕೇ ವಿನಃ ಅದಲ್ಲದೆ ಒಂದು ಪಂಪುಸೆಟ್ಟಿನ ಸೌಲಭ್ಯ ದೊರಕಿಸಿಕೊಡಬೇಕಾದರೆ ನಮಗೆ 3,000 ರೂಪಾಯಿ ಖರ್ಚಾಗುತ್ತದೆ ಎಂದು ಹೆಚ್ಚಿನ ಮಂಥಾಮ್ಯು ಸರಿಯಲ್ಲ. ಮತ್ತು ಅದಷ್ಟು ಸಾಮಾನಿನ ಬೆಲೆಗಳೂ ಕೂಡ ಕಡಿಮೆಯಾಗಬೇಕು. ಮಾಜ್ಯ ಮಂತ್ರಿಗಳು ಈ ನಡೆಯಲ್ಲಿ ಪಂಪುಸೆಟ್ಟುಗಳು ಎಷ್ಟು ಇವೆ ಎನ್ನುವ ವಿಷಯ ಹೇಳಿದ್ದರು. ಈ ಲೆಕ್ಕಾಚಾರವನ್ನು ಯಾವ ಆಧಾರದಮೇಲೆ ಕೊಟ್ಟಿದ್ದಾರೆ ಎಂದು ಹೇಳುವುದಕ್ಕೆ ಬರುವುದಿಲ್ಲ. ವಿದ್ಯುಚ್ಛಕ್ತಿ ಮಂಡಲಿಯು ಲೇಟೆಸ್ಟ್ ಲೆಕ್ಕಾಚಾರದ ಪ್ರಕಾರ ಜುಲೈ ತಿಂಗಳಿನಿಂದ ಇಂದಿನವರೆಗೆ ಪಂಪುಸೆಟ್ಟು ವಿತರಣೆ ಮಾಡಿರುವುದು 95,902. ಇದರಲ್ಲಿ ಕೋಲಾರ 14,272 ಬೆಂಗಳೂರು 23,923 ತುಮಕೂರು 11,232, ಸೌತ್ ಕೆನರಾ 10,214, ಇನ್ನೂ ನಾಲ್ಕು ಜಿಲ್ಲೆಗಳಲ್ಲಿ ಸರ್ಕಾರದವರಿಂದ 50 ಪರ್ಸೆಂಟು

ಪಂಪುಸೆಟ್ಟುಗಳನ್ನು ಹೊಂದಿರುತ್ತಾರೆ. ಈ ಲೆಕ್ಕಾಚಾರವನ್ನು ತೆಗೆದುನೋಡಿದರೆ ಸರಾಸರಿ ಇವರ ಪಂಪುಸೆಟ್ಟಿನ ಅಶ್ವಶಕ್ತಿ 4 ಹೆಚ್.ಪಿ. ಇರುತ್ತದೆ, ಅಂದರೆ 96 ಸಾವಿರ ಪಂಪುಸೆಟ್ಟಿಗೆ 3 ಲಕ್ಷ 84 ಸಾವಿರ ಹಾರ್ಸ್‌ಪವರ್ ಆಗುತ್ತದೆ. ಅವರು ಏರಿಸಿರುವ ಕನಿಷ್ಠ ದರ 24 ರೂಪಾಯಿ. ವರ್ಷ ವರ್ಷಕ್ಕೂ ಹೆಚ್ಚು ಮಾಡುತ್ತಿದ್ದಾರೆ. ಈ ಲೆಕ್ಕಾಚಾರದ ಪ್ರಕಾರ 92 ಲಕ್ಷ 16 ಸಾವಿರ ರೂಪಾಯಿ ಅಷ್ಟನ್ನು ರೈತರಿಗೆ ಹೆಚ್ಚಿಗೆ ಏರಿಸಿದಂತಾಯಿತು. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಯಾವ ರೀತಿಯಿಂದ ಇಲ್ಲಿ ಲೆಕ್ಕಾಚಾರ ಕೊಟ್ಟಿದ್ದಾರೋ ಗೊತ್ತಿಲ್ಲ.

ಇನ್ನು ಈ ಸಂದರ್ಭದಲ್ಲಿ ಕೈಗಾರಿಕೆ ವಿಷಯ ಹೇಳಬೇಕಾಗಿದೆ. ಈ ವಿದ್ಯುಚ್ಛಕ್ತಿಗೆ ಎಲ್ಲಾ ಖರ್ಚನ್ನೂ ನಾವೇ ವಹಿಸಿಕೊಂಡು ಮದ್ರಾಸ್‌ಗೆ 5 ಪೈಸೇಯಂತೆಯೂ, ಆಂಧ್ರದವರಿಗೆ 7 ಪೈಸೇ ಯಂತೆಯೂ, ಕೇರಳದವರಿಗೆ 8-9 ಪೈಸೇಯಂತೆಯೂ ಮಾರಿದ್ದಾರೆ. ಆದರೆ ನಮ್ಮವರೇ ಆದ ರೈತರಿಗೆ ಈ ವಿಷಯದಲ್ಲಿ ನಿಷ್ಕರುಣೆ ತೋರಿಸಿರುವುದು ಇವರ ಅರ್ಥ ಏನು ಎನ್ನುವುದು ನನಗೆ ಗೊತ್ತಾಗುವುದಿಲ್ಲ. ನಾನು ಈ ಸಂದರ್ಭದಲ್ಲಿ ಖಂಡಿತವಾಗಿಯೂ ಹೇಳುತ್ತೇನೆ. ಈಪ್ರೊತ್ತು ನಮ್ಮ ದೇಶದಲ್ಲಿ ಸುಧಾರಣೆ ಆಗಬೇಕಾದರೆ 75 ಪರ್ಸೆಂಟು ರೈತರಮೇಲೆಯೇ ಹೊಣೆ ಇದೆ. ಅವರೇ ಉತ್ಪತ್ತಿ ಮಾಡಿಕೊಡಬೇಕು. ಹೀಗಿರುವಾಗ ಅವರಮೇಲೆ ಈ ರೀತಿ ಧೋರಣೆ ಅನುಸರಿಸುವುದು ಸರಿಯಾದುದಲ್ಲ. ಈ ರೀತಿ ಮಾಡಿದರೆ ಅದು ಶಾಪವಾಗುತ್ತದೆ. ಮತ್ತು ಅದರಿಂದ ಉತ್ಪತ್ತಿಯೂ ಕೂಡ ಬಹಳಷ್ಟು ಕಡಿಮೆಯಾಗುತ್ತದೆ ಎಂದು ಸರ್ಕಾರದ ಗಮನಕ್ಕೆ ತಿಳಿಸಬಯಸುತ್ತೇನೆ.

ಇನ್ನು ನೀರಾವರಿ ಲೆಕ್ಕಾಚಾರ ತೆಗೆದುಕೊಂಡರೆ ಇಡೀ ರಾಜ್ಯದಲ್ಲಿ 8.73ರಷ್ಟು ನೀರಾವರಿ ಯನ್ನು ಹೊಂದಿದ್ದೇವೆ. ಆದರಲ್ಲೂ ಕೂಡ 5.5 ಪರ್ಸೆಂಟು ಸಣ್ಣ ನೀರಾವರಿ ಯೋಜನೆಗಳನ್ನು ಪಡೆದಿದ್ದೇವೆ. ಈ ರೀತಿ ನಮ್ಮ ಎಲ್ಲಾ ನದಿಗಳ ನೀರನ್ನು ಉಪಯೋಗಿಸಿಕೊಂಡು ನೀರಾವರಿ ಯೋಜನೆಗಳನ್ನು ಕೈಗೊಂಡರೂ ಕೂಡ ನಾವು ಆರ್ ಇಂಡಿಯಾ ಲೆವಲ್‌ಗೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಆರ್ ಇಂಡಿಯಾ ಲೆವರ್ ನೀರಾವರಿ ಯೋಜನೆ 25 ಪರ್ಸೆಂಟು ಇದೆ. ಅದೇ ರೀತಿಯಾಗಿ ನಮ್ಮ ಮೈಸೂರು ರಾಜ್ಯದಲ್ಲಿಯೂ ಮಾಡಬೇಕು. ಅವರ ಮಟ್ಟಕ್ಕೆ ಬರಬೇಕಾದರೆ ಇರಿಗೇಷನ್‌ಗೆ ಹೆಚ್ಚು ಪಂಪುಸೆಟ್ಟುಗಳನ್ನು ಉಪಯೋಗಿಸಿ ಹೆಚ್ಚು ಬೆಳೆಯನ್ನು ಬೆಳೆಸಬೇಕು. ಬರೀ ಪ್ರಾಜೆಕ್ಟ್‌ನಿಂದ ಮಾತ್ರವೇ ಸಾಧ್ಯವಾಗುವುದಿಲ್ಲ. ಈ ರೀತಿ ಹೆಚ್ಚು ಬೆಳೆ ಬೆಳೆಸಬೇಕಾದರೂ ಕೂಡ ವಿದ್ಯುಚ್ಛಕ್ತಿ ಮಂಡಲ ಅಧ್ಯಕ್ಷರು ಒಂದು ಲೆಕ್ಕಾಚಾರ ಕೊಟ್ಟು ಮದ್ರಾಸ್ ಮತ್ತು ಆಂಧ್ರಪ್ರದೇಶದಲ್ಲಿ ಹೇಗೆ ಮಾಡುತ್ತಿದ್ದಾರೆ ಎನ್ನುವುದನ್ನು ತಿಳಿಸಬೇಕು. ನಮ್ಮ ರಾಜ್ಯದಲ್ಲಿ ವ್ಯವಸಾಯದಲ್ಲಿ ಹೆಚ್ಚು ಉತ್ಪತ್ತಿ ಬರುವ ಹಾಗೆ ಮಂಡ್ಯ. ಅಲ್ಲಿ ವ್ಯವಸಾಯ ಕೆಲಸ ಮಾಡಬೇಕಾದರೆ ಒಂದು ದಿವಸಕ್ಕೆ ಅರ್ಧಗಂಟೆ, ಒಂದು ಗಂಟೆಯೂ ಕೂಡ ಪಂಪುಸೆಟ್ಟಿನಿಂದ ನೀರು ಸಿಕ್ಕುವುದಿಲ್ಲ. ಆದರೆ ಮದ್ರಾಸ್ ಮತ್ತು ಆಂಧ್ರ ಪ್ರದೇಶ ನೋಡಿದರೆ, ಮದ್ರಾಸ್ ರಾಜ್ಯದ ತಂಜಾವೂರುನಲ್ಲಿ ಒಂದು ದಿವಸಕ್ಕೆ 6 ಗಂಟೆ ಕಾಲ ನೀರು ಸಿಕ್ಕುತ್ತದೆ ಮತ್ತು ಆಂಧ್ರದಲ್ಲಿ ದಿವಸಕ್ಕೆ 7 ಗಂಟೆ ಪಂಪುಸೆಟ್ ಉಪಯೋಗಮಾಡುತ್ತಿದ್ದಾರೆ, ಇಲ್ಲಿ ಅರ್ಧ ಅಥವ ಒಂದು ಗಂಟೆ ನೀರು ಸಿಕ್ಕುವುದೇ ಕಷ್ಟವಾಗಿದೆ. ಹೀಗಿರುವಾಗ ಲೆಕ್ಕಾಚಾರ ನೋಡಬಾರದು. ಇನ್ನೊಂದು ಒಂದು ಎಚ್. ಪಿ. ಗೆ 4 ರೂಪಾಯಿನಂತೆ ಏರಿಸಿದ್ದಾರೆ. ಅದರ ಪ್ರಕಾರ 3 ಎಚ್.ಪಿ. ಪಂಪು ಇರುವವರಿಗೆ ವರ್ಷಕ್ಕೆ 144 ರೂಪಾಯಿ ಬೀಳುವುದು. ದಾಮಾಷಾ ಪ್ರಕಾರ 1,440 ಯೂನಿಟ್ ವಿದ್ಯುಚ್ಛಕ್ತಿ ಉಪಯೋಗಮಾಡಬಹುದು. ಬೇರೆ ಕಡೆ ಹಾಗೆ ಮಾಡುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರ್ಷಕ್ಕೆ 400-500 ಯೂನಿಟ್ಟುಗಳಿಗಿಂತ ಹೆಚ್ಚು ಖರ್ಚುಮಾಡುವುದಿಲ್ಲ, ಅದು ವಿಶಿಷ್ಟ ಜಿಲ್ಲೆ, ನಮ್ಮ ಜಿಲ್ಲೆಯಲ್ಲಿ ವರ್ಷಕ್ಕೆ 6-7 ತಿಂಗಳು ಮಳೆ ಬರುವುದು, 4-5 ತಿಂಗಳು ಪಂಪುಸೆಟ್ಟು ಉಪಯೋಗಮಾಡಿದರೆ ಹೆಚ್ಚು. ಏರಿಸಿರುವ ಕನಿಷ್ಠ ದರದ ಪ್ರಕಾರ ನಾವು 7-8 ತಿಂಗಳು ಈ ದರವನ್ನು ಪುಕ್ಕಟ್ಟೆ ತುಂಬಬೇಕು. ಇನ್ನು 4 ತಿಂಗಳು ಕನಿಷ್ಠ ಮಿತಿ ವಿಧಾರಿ ಉಪಯೋಗಮಾಡಿರುವುದಿಲ್ಲ. ನಮ್ಮಲ್ಲಿ ಭೂಗರ್ಭದಲ್ಲಿ ನೀರು ಹೊಳೆಗೆ ಹರಿದು ಹೋಗುವುದು. ಇದರಿಂದಾಗಿ ಕೆಲವರು ಪಂಪ್‌ಸೆಟ್ ಇರುವವರು ಅದನ್ನು ತೆಗೆದುಹಾಕಬೇಕಾಗಿದೆ, ಬೇರೆ ಮಾರ್ಗವಿಲ್ಲ. ಈಗಾಗಲೆ ಹತ್ತು ಹಣ್ಣು ಗಿಡಗಳಿರುವವರು ಮತ್ತು ಒಂದೆರಡು ಎಕರೆ ಇರುವವರು ಪಂಪುಸೆಟ್ಟನ್ನು ಪಡೆದಿದ್ದಾರೆ. ಅವರಿಗಿರುವುದು ಪಂಪು ಸೆಟ್ಟನ್ನು ಕಿತ್ತುಹಾಕುವುದೊಂದೇ ದಾರಿ. ಬೇರೆ ಮಾರ್ಗವಿಲ್ಲ. ಆದುದರಿಂದ ಈ ವಿಚಾರವನ್ನು ತೀವ್ರವಾಗಿ ಆಲೋಚನೆಮಾಡಬೇಕು.

ಇನ್ನೊಂದು ವಿಚಾರ. ವಿದ್ಯುಚ್ಛಕ್ತಿ ದರ ಏರಿಸುವುದಕ್ಕೆ ಯಾವ ಮಟ್ಟದಲ್ಲಿ ಏರಿಸಬೇಕು, ಹೇಗೆ ಏರಿಸಿದರೆ ಲೆಕ್ಕಾಚಾರ ಸರಿದೂಗಿಸಬಹುದು ಎಂದು ಲೆಕ್ಕಾಚಾರ ಮಾಡಲು ಒಂದು ಟ್ಯಾರಿಫ್ ಕಮಿಟಿ ನೇಮಕವಾಗಿದೆ. ಆದರೆ ಆ ಸಮಿತಿಯು ತನ್ನ ವರದಿಯನ್ನು ಕೊಡುವುದಕ್ಕೆ ಮುಂಚೆಯೇ ಈ ದರವನ್ನು ಏರಿಸುವ ಔಚಿತ್ಯವಾದರೂ ಏನು ? ಖುಷಿ ಬಂದಾಗ ಏರಿಸುವುದು, ಖುಷಿ ಬಂದ

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಹಾಗೆ ರೈತರಮೇಲೆ ದಬ್ಬಾಳಿಕೆ ನಡೆಸುವುದು ಮುಂದುವರೆದರೆ ಖಂಡಿತ ಒಳ್ಳೆಯದಾಗುವುದಿಲ್ಲ. ನೀವು ಖಂಡಿತ ಬದುಕುವುದಿಲ್ಲ. ನೂರಕ್ಕೆ 75 ಮಂದಿ ರೈತರಿರುವ ಈ ದೇಶದಲ್ಲಿ ರೈತರ ಹೊಟ್ಟೆ ಉರಿಸಿದರೆ ತೊಂದರೆಯಾಗುವುದು. ದಿನಬೆಳಗಾದರೆ ರೈತನನ್ನು ಉದ್ಧಾರಮಾಡುವುದಾಗಿ ಹೇಳುವ ನೀವು ಹೀಗೆ ಅವರಿಗೆ ತೊಂದರೆ ಮಾಡುವುದು ಯೋಗ್ಯವಲ್ಲ. ಲಾಲ್‌ಬಹದ್ದೂರು ಶಾಸ್ತ್ರಿಯವರು ಜೈ ಜವಾನ್ ಜೈ ಕಿಸಾನ್ ಎಂದು ಹೇಳಿದರು. ಈಗ ಆ ಜವಾನ ಎಲ್ಲಿದ್ದಾನೆ ಎಂದು ಯೋಚನೆ ಮಾಡಬೇಕಾದ ಪರಿಸ್ಥಿತಿ ಇದೆ. ನಮ್ಮ ಜಿಲ್ಲೆಯ ವಿಷಯ ಹೇಳುವುದಾದರೆ ನಾನು ಈ ಸಭೆಗೆ ಬಂದನಂತರ ಐನೂರಕ್ಕೂ ಹೆಚ್ಚು ಪತ್ರಗಳು ಬಂದಿವೆ, ಮಂತ್ರಿಗಳಿಗೆ ಕಳಿಸುತ್ತೇನೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ದೊಡ್ಡ ಗೊಂದಲವಾಗಿದೆ. ಮರೆನಾಡು ಜಿಲ್ಲೆಯನ್ನು ತೆಗೆದುಕೊಂಡರೆ ಶಿವಮೊಗ್ಗ ಜಿಲ್ಲೆಯಲ್ಲಿ ಕೂಡ ರೈತರು 3-4 ತಿಂಗಳಿಗಿಂತ ಹೆಚ್ಚು ಕಾಲ ಪಂಪುಸೆಟ್ಟನ್ನು ಉಪಯೋಗ ಮಾಡುವುದಿಲ್ಲ, ಅವರಿಗೆ ದರ ಏರಿಸಿರುವುದು ದೊಡ್ಡ ಸಿರುಕುಳವಾಗಿದೆ. ಪಂಪು ಸೆಟ್ಟನ್ನು ಕಿತ್ತು ಹಾಕಿ ಏಕೆ ಭೂಮಿ ಬಿಟ್ಟು ಹೋಗಬಾರದು ಎಂಬ ಭಾವನೆ ಅವರಲ್ಲಿ ಮೂಡಿದೆ. ಅವರಿಗೆ ಈಗ ಉಳುಮೆಮಾಡುವ ಆಸೆಯಿಲ್ಲ. ಆದುದರಿಂದ ಎಚ್ಚರಿಕೆ ಕೊಡುತ್ತೇನೆ. ಒಂದುವೇಳೆ ಕನಿಷ್ಠಪಕ್ಷ ಹಿಂದಿನಂತೆ ಬದಲಾವಣೆಯಾಗದಿದ್ದರೆ ದೇಶದಾದ್ಯಂತ ರೈತರ ಚಳವಳಿ ನಡೆದು ಸರಕಾರವನ್ನು ಉರುಳಿಸುವುದಕ್ಕೆ ತಯಾರಾಗಬಹುದು.

ಹಿಂದಿನ ಭಾರತ ಮತ್ತು ರಾಮಾಯಣದ ಕಾಲದಿಂದ ರೈತರ ಉದ್ಧಾರ ಸಾಕಷ್ಟಾಗಿಲ್ಲ. ಭಾರತದಲ್ಲಿ ಒಂದು ಪದ್ಯ ಓದಿದ್ದೆ. ಅದರಲ್ಲೂ ಕೂಡ ರೈತರನ್ನು ರಕ್ಷಿಸಬೇಕು, ಉಳುಮೆ ದೇಶಾಭಿವೃದ್ಧಿಗೆ ಸಹಾಯಕವಾದದ್ದು, ದೇಶಾಭಿವೃದ್ಧಿಯಾಗಬೇಕಾದರೆ ಉಳುವವರಿಗೆ ಸಕಲ ಸೌಲಭ್ಯಗಳೂ ಸಿಕ್ಕಬೇಕು ಎಂದು ಹೇಳಿದ್ದಾರೆ. ಆ ವಿಷಯವನ್ನು ಮಂತ್ರಿಗಳ ಗಮನಕ್ಕೆ ತಂದು ಆ ಪದ್ಯದ ಸಾರಾಂಶವನ್ನು ಈ ನಂದರ್ಭದಲ್ಲಿ ಬಿಡಿಹೇಳುತ್ತೇನೆ. ಈ ಪದ್ಯವನ್ನು ಭಾರತ ಯುದ್ಧ ಮುಗಿದಮೇಲೆ ಧರ್ಮರಾಯ ನಾರದರನ್ನು ರಾಜ್ಯಧರ್ಮ ಮತ್ತು ಪ್ರಜಾಹಿತದ ವಿಷಯ ಕೇಳಿದಾಗ ನಾರದರು ಧರ್ಮರಾಯನಿಗೆ ಹೇಳಿದರು, ಸಭಾಪರ್ವದಲ್ಲಿ ಇದು ನಮೂದಾಗಿದೆ.

"ಕೃಷಿಮೊದಲು ಸರ್ವಕ್ಕೆ ಕೃಷಿಯುಂ,
ಪರಿನುವುದಾ ಕೃಷಿಯನುದ್ಯೋ
ಗಿಸುವ ಜನವನು ಪಾಲಿಸುವುದಾ ಜನಪದದ, -ಜನದೀ,
ವನುತರಳುವುದು ವನುವಿನಿಂ ಸಾಧಿಸುವುದರಾಧ್ಯವದು
ಕೃಷಿ ವಿಹೀನನ ದೇಶವದು ದುರ್ದೇಶ ಕೇಳೆಂದಾ.

ಅತಿ ಪ್ರಾಮುಖ್ಯವಾದ ಮಹಾಭಾರತದಲ್ಲಿ ನಾರದರು ರಾಜನೀತಿಯನ್ನು ಕುರಿತು ಧರ್ಮರಾಯನಿಗೆ ಇದನ್ನು ಹೇಳಿದರು. ಇದರ ಅರ್ಥ ದೇಶೋದ್ಧಾರಕ್ಕೆ ಕೃಷಿಯೇ ಮುಖ್ಯ. ಕೃಷಿಯ ಅಭಿವೃದ್ಧಿಯಿಂದ ಜನರ ಉದ್ಧಾರ. ಕೃಷಿ ಉದ್ಯೋಗದ ಜನರನ್ನು ರಾಜನು ಸರ್ವವಿಧದ ಸಹಕಾರ ನೀಡಿ ರಸಬೇಕು. ಕೃಷಿವಿಹೀನವಾದ ದೇಶ ನಿಷ್ಫಲ. ಕೃಷಿಕರನ್ನು ಉದ್ಧರಿಸದದ ದೇಶವೇ ದುರ್ದೇಶ (ಕೆಟ್ಟದೇಶ). ಈ ಪದ್ಯ ಅರ್ಥಗರ್ಭಿತವಾಗಿದೆ. ಸರ್ವಂ ಭಕ್ಷಯಾಮಿ, ಸಾಗರಂ ಭಕ್ಷಯಾಮಿ ಎಂದು ಮಾಡಬಾರದು. ಸಾಗರಕ್ಕೂ ಈಗ ಕೈ ಹಾಕಿದ್ದಾರೆ, ಅದರಿಂದ ತೊಂದರೆಯಾಗುತ್ತದೆ ಎಂದು ಪುನಃ ಎಚ್ಚರಿಕೆ ಕೊಡುತ್ತೇನೆ.

ತಮ್ಮ ರೆಕ್ಕಾಡಾರವನ್ನು ತಿಳಿಸುವಾಗ ವಿದ್ಯುತ್ ಮಂಡಲಯ ಅಧ್ಯಕ್ಷರು 6 ಕೋಟಿ ರೂಪಾಯಿಗಳ ವೆಚ್ಚದಲ್ಲಿ 20 ಸಾವಿರ ಪಂಪುಸೆಟ್ಟುಗಳನ್ನು ಮುಂದಿನ 5 ವರ್ಷಗಳಲ್ಲಿ ಹಂಚ ಬೇಕೆಂದಿರುವುದಾಗಿ ಹೇಳಿದ್ದಾರೆ. ಮುಂದಿನ ಈ ಯೋಜನೆಯನ್ನು ಕಾರ್ಯಗತ ಮಾಡದೆ ಕೈಬಿಡುವುದು ಒಳ್ಳೆಯದು. ಏಪ್ರಿಲ್‌ನಿಂದ ದರವನ್ನು ಎರಡರಷ್ಟು ಮಾಡಿದ್ದಾರೆ. ಆಮೇಲೆ ಎಷ್ಟು ಪಂಪುಸೆಟ್ಟುಗಳಿಗೆ ಅರ್ಜಿ ಬಂದಿದೆಯೆಂದು ನೋಡಿದರೆ ಗೊತ್ತಾಗುವುದು, ಹೆಚ್ಚಾಗಿ ಯಾರೂ ಅರ್ಜಿ ಹಾಕಿಲ್ಲ. ಒಂದುವೇಳೆ ಹಾಕಿದ್ದರೂ ಏರಿರುವ ದರ ಗೊತ್ತಿಲ್ಲದೆ ಹಾಕಿರಬಹುದೇ ಹೊರತು ಗೊತ್ತಿರುವವರು ಯಾರೂ ಖಂಡಿತ ಅರ್ಜಿ ಹಾಕುವುದಿಲ್ಲ. ನಿಮ್ಮ ಯೋಜನೆ ಖಂಡಿತ ಕಾರ್ಯಗತವಾಗುವುದಿಲ್ಲ. ಒಂದು ವಿಷಯ ಹೇಳುತ್ತೇನೆ, ತಾವು ವಿದ್ಯುತ್ ಮಂಡಲಯನ್ನು ದೂರಿದರೆ ಪ್ರಯೋಜನವಿಲ್ಲ, ವಿದ್ಯುತ್ ಉತ್ಪತ್ತಿಯ ಕೇಂದ್ರ ನಿಮ್ಮ ಕೈಲಿದೆ, ಈಗ ವಿದ್ಯುತ್ತನ್ನು ಮಾರುತ್ತಿದ್ದೀರಿ. ಆದರೂ ಡ್ಯೂಟಿ ಹಾಕುತ್ತಿದ್ದೀರಿ. 4.8 ಪೈಸೆಗಳಂತೆ ವಿದ್ಯುತ್ತನ್ನು ಮಾರುತ್ತಿದ್ದೀರಿ, 2 ಪೈಸೆ ಲಾಭವಿದೆ, ಮತ್ತು ಡ್ಯೂಟಿ ಇದೆ. ಹೀಗಿರುವಾಗ ಲಾಭ ಬಂದರೂ

ಪ್ರಾಪ್ತಿ ಕ್ರಮಾಂಕ Accession No... 4871
ದಿನಾಂಕ Date.....

ಸಹಾಯಧನ ಕೊಡಬೇಕು, ಮತ್ತು ಸಾಲಮಾಡಿರುವುದಕ್ಕೆ ಸೇಕಡ ಒಂಬತ್ತೂವರೆಯಷ್ಟು ಬಡ್ಡಿ ಹೊರಬೇಕು. ಸಹಾಯ ಧನ, ಬಡ್ಡಿ ಕೊಟ್ಟು ಕಡಮೆ ಬಡ್ಡಿಯಲ್ಲಿ ಹಣ ಕೊಟ್ಟು ಕೆಲವು ಸ್ಕೀಂ ಮಾಡಿ ಈಗ ಸೇಕಡ 50 ರಿಂದ 75ರವರೆಗೆ ಸಹಾಯಧನ ಕೊಡುವ ಪದ್ಧತಿಯಿದೆ.

ಪ್ರಯೋಜನಕ್ಕೆ ಬರಬಹುದಾದ ಕೆಲಸಗಳಿಗೆ, ರೈತರ ನೀರಾವರಿ ಅಭಿವೃದ್ಧಿ ಕಾರ್ಯಗಳಿಗೆ ವಿದ್ಯುಚ್ಛಕ್ತಿ ಮಂಡಲಿಯವರು ಏಕೆ ವಿದ್ಯುತ್ತನ್ನು ಕೊಡಬಾರದು ಎಂದು ಕೇಳುತ್ತೇನೆ. ವಿದ್ಯುತ್ ಮಂಡಲಿಯವರಿಗೆ ಕಮ್ಮಿ ಬಡ್ಡಿಯ ದರದಲ್ಲಿ ಹಣ ಸಿಕ್ಕುವಂತಹ ವ್ಯವಸ್ಥೆ ಮಾಡಬೇಕು, ತಮ್ಮ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಅವರಿಗೆ ಬಿಟ್ಟು ಕೊಡಬೇಕು, ಅದು ಸಾಧ್ಯವಿಲ್ಲದೇ ಇದ್ದರೆ ಅವರ ಎಲ್ಲಾ ಆಡಳಿತವನ್ನೂ ಸರ್ಕಾರದವರೇ ವಹಿಸಿಕೊಳ್ಳಬೇಕು, ಈ ಮೂರರಲ್ಲಿ ಒಂದು ಕ್ರಮವನ್ನು ತುರ್ತಾಗಿ ಮಾಡಬೇಕು, ಇಲ್ಲದೇ ಇದ್ದರೆ ಈ ಅವ್ಯವಹಾರಗಳು ಇಷ್ಟಕ್ಕೇ ನಿಲ್ಲುವುದಿಲ್ಲ. ಮೇನ್ ಲೈನ್‌ನಲ್ಲಿ ವಿದ್ಯುತ್‌ನ್ನು ಟ್ಯಾಪ್ ಮಾಡುತ್ತಾರೆ ಅದರಲ್ಲಿ ಎಷ್ಟು ನಷ್ಟವಾಗುತ್ತದೆ ಎಂಬ ರೆಕ್ಕಾಚಾರ ತೆಗೆಯುವುದಿಲ್ಲ. ವಿದ್ಯುಚ್ಛಕ್ತಿಯ ಮಿಟರ್ಸ್ ಕೆಲವು ಕಡೆ ರೆಕಾರ್ಡ್ ಮಾಡುವುದಿಲ್ಲ, ರೆಕಾರ್ಡ್ ಮಾಡಿದರೂ ಕೂಡ ಬೇರೆ ರೀತಿಯ ರೆಕ್ಕಾಚಾರ ತೋರಿಸುವಂತಹದಾಗಿರುತ್ತದೆ. ಒಂದು ದೊಡ್ಡ ಫ್ಯಾಕ್ಟರಿಯಲ್ಲಿ ತಿಂಗಳಿಗೆ 5 ಸಾವಿರ ರೂಪಾಯಿನಷ್ಟು ಎಲೆಕ್ಟ್ರಿಸಿಟಿ ಖರ್ಚಾಗುವುದಿದ್ದರೆ 500-600 ರೂಪಾಯಿನಷ್ಟು ರೆಕ್ಕಾಚಾರವನ್ನು ತೋರಿಸುವಷ್ಟುಮಟ್ಟಿಗೆ ಈ ಮಿಟರುಗಳನ್ನು ಬದಲಾಯಿಸಿ ಮಾಡಿರುತ್ತಾರೆ. ತಮ್ಮ ಮಿಟರುಗಳಲ್ಲೂ ಕೂಡ ದೋಷ ಇದೆ. ವೈರ್ಸ್, ಕಟ್‌ಔಟ್ಸ್, ತಂತಿ, ಕಂಬಗಳು ಅವುಗಳೆಲ್ಲದರ ವಿಷಯದಲ್ಲೂ ಸಹ ಬಹಳಷ್ಟು ಜಾಗ್ರತೆಯನ್ನು ವಹಿಸಬೇಕು. ಕಾಪರ್‌ವೈರ್ ಮತ್ತು ಕಂಬಗಳ ವಿಷಯವಾಗಿ ವಿದ್ಯುಚ್ಛಕ್ತಿ ಮಂಡಲಿಗೆ ಬೇಕಾದಷ್ಟು ನಾನು ಬರೆದಿದ್ದೇನೆ. ಇನ್ನೊಂದು ವಿಷಯ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು, ಕಳೆದ ಐದು ವರ್ಷಗಳಲ್ಲಿ ಹಿಂದೆ ಇದ್ದ 2 ಜನ ಸೂಪರ್‌ವೈಸರುಗಳು ಸಾಧಾರಣ 400ರಿಂದ 500 ಪಂಪ್ ಸೆಟ್ಟುಗಳನ್ನು ಸರ್ವಿಸ್ ಮಾಡದೇ ಹಾಗೆಯೇ ಬಿಟ್ಟಿದ್ದಾರೆ, ಇದರ ಅರ್ಥ ಏನಾಗುತ್ತದೆ ಎಂಬುದನ್ನು ಮಾನ್ಯಮಂತ್ರಿಗಳು ನೋಡಬೇಕು; 500 ಪಂಪ್ ಸೆಟ್ಟುಗಳಿಗೆ ಕಮ್ಮಿ ಎಂದರೆ 2 ಲಕ್ಷ ರೂಪಾಯಿಗಳವರೆಗೂ ನಷ್ಟವಾಗಿದೆ. ವೈರ್, ಕಂಬಗಳು ಮತ್ತು ಇನ್ನಿತರ ಕಟ್‌ಔಟ್ ಮುಂತಾದ ಸಾಮಗ್ರಿಗಳಲ್ಲಿ ಅವ್ಯವಹಾರ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ತಾವು ನೋಡಬೇಕು. ಬುಡದಿಂದ ತಲೆಯವರೆಗೂ ಈ ಅವ್ಯವಹಾರದಲ್ಲಿ ಲಿಂಕ್ ಇದೆ ಎಂದು ಹೇಳಿ ನನಗೆ ಅನಿಸುತ್ತದೆ. ಈ ರೀತಿ ಅವ್ಯವಹಾರ ನಡೆದರೆ ಎಷ್ಟು ದಿವಸ ಈ ಎಲೆಕ್ಟ್ರಿಸಿಟಿ ಬೋರ್ಡು ಬದುಕಬಹುದು, ಎಷ್ಟು ದಿವಸ ರೈತರುಮೇಲೆ ತೆರಿಗೆ ಹೇರಿ ತಾವು ರಾಜ್ಯಭಾರ ಮಾಡಿಕೊಂಡು ಹೋಗುತ್ತೀರಿ ಎಂದು ಕೇಳುತ್ತೇನೆ. ಕಡೆಯದಾಗಿ ತಮಗೆ ಎಚ್ಚರಿಕೆ ಕೊಡಬಯಸುತ್ತೇನೆ, ಈ ಅವ್ಯವಹಾರಗಳನ್ನೆಲ್ಲ ಇವನ್ನು ಕೂಡಲೇ ತಡೆಗಟ್ಟದಿದ್ದರೆ ನಮ್ಮ ಈ ಖಾತೆ ಏನಿದೆ ಇದು ಖಂಡಿತವಾಗಿಯೂ ಉಳಿಯುವಂತಿಲ್ಲ ಎಂದು ಹೇಳಿ ಅಧ್ಯಕ್ಷರು ಇಷ್ಟು ಅವಧಿ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮುಂಜೇಗೌಡ (ಮದ್ದೂರು).—ಮಾನ್ಯ ಸಭಾಪತಿಗಳೇ, ಇಲ್ಲಿಯವರೆಗೂ ಅನೇಕ ಸ್ನೇಹಿತರು ಎರಡು ಕಡೆಯಿಂದಲೂ ಕೂಡ ವಿದ್ಯುಚ್ಛಕ್ತಿ ಮಂಡಲಿಯಿಂದ ಎಷ್ಟುಮಟ್ಟಿನ ಅನ್ಯಾಯವಾಗುತ್ತಾ ಇದೆ ಎಂಬ ವಿಷಯವನ್ನು ನಳೆಯ ಮುಂದೆ ಇಟ್ಟಿದ್ದಾರೆ. ಈ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲಿ. ಎಲ್ಲ ಮಾನ್ಯ ಸದಸ್ಯರೂ ಕೂಡ ಏಕ ಕಂಠದಿಂದ ಅನ್ಯಾಯ ಅತಿಯಾಯಿತು, ಜನತೆಗಾಗಲಿ, ಜನತೆಯಿಂದ ಚುನಾಯಿತರಾಗಿ ಬಂದಿರತಕ್ಕ ನಮಗಾಗಲಿ ಇದರಿಂದ ಬಹಳ ಚಿಂತೆಯಾಗಿದೆ, ಇದು ಬಹಳ ಹದಗೆಡತಕ್ಕ ಸ್ಥಿತಿಗೆ ಬಂದಿದೆ ಎಂದು ಹೇಳಿದರು, ಈ ರೀತಿ ಆಡಳಿತ ಕೆಡುತ್ತಾ ಇರುವುದಕ್ಕೆ ಜೇರ್ಮನ್ನರೇ ಜವಾಬ್ದಾರರು ಎಂದು ನಮ್ಮ ಅನೇಕ ಸ್ನೇಹಿತರು ಹೇಳಿದ್ದಾರೆ. ಮಂಡಲಿಗೆ ಸೇರಿದಂತಹ ಅಧಿಕಾರಿಗಳನ್ನು ಕಂಟ್ರೋಲ್ ಮಾಡತಕ್ಕ ಅಧಿಕಾರ ಆಡಳಿತವನ್ನು ಸರಿಯಾಗಿ ವ್ಯವಸ್ಥೆ ಮಾಡತಕ್ಕದ್ದು ಮಂಡಲಿಗೆ ವಹಿಸಿದಂತಹ ಒಂದು ಕಾರ್ಯ, ಇದರ ಮಹತ್ವ ಏನೆಂಬುದನ್ನು ಯೋಚನೆ ಮಾಡತಕ್ಕದ್ದೂ ಕೂಡ ಅನಿವಾರ್ಯ ಎಂದು ಕಾಣುತ್ತದೆ. ಯಾವಾಗ ಜೇರ್ಮನರ ಜವಾಬ್ದಾರಿ ಎಂದು ಹೇಳುತ್ತೇವೆ, ಆ ಜೇರ್ಮನರ ಜವಾಬ್ದಾರಿಗಿಂತ ಅವರನ್ನು ನೇಮಕ ಮಾಡತಕ್ಕ ಸರ್ಕಾರಕ್ಕೆ ಬುದ್ಧಿ ಇಲ್ಲವೇನೋ ಎಂಬ ಮಾತನ್ನು ಹೇಳಿದರೆ ಬಹುಶಃ ತಪ್ಪಾಗುವುದಿಲ್ಲ ಎಂದು ಕಾಣುತ್ತದೆ. ನಾವು ಜನತೆಯಿಂದ ಮತ ತೆಗೆದುಕೊಂಡು ಬಂದು ಜನತೆಗೆ ಅನ್ಯಾಯವಾಗುತ್ತಾ ಇದೆ, ಇಂಥವರು ಮಾಡಿದರು ಎಂದು ಹೇಳಿದರೂ ಕೂಡ ಕಿವುಡರಂತೆ ನಟನೆ ಮಾಡಿ ನೇಮಕ ಮಾಡತಕ್ಕದ್ದು ಸರಿಯಾದದ್ದಲ್ಲ ಎಂದು ಕಾಣುತ್ತದೆ. ಈ ಸಾರಿ ಬಜೆಟ್ ಸೆಷನ್‌ನಲ್ಲಿ, ಕಳೆದ ಸಾರಿ ಬಜೆಟ್ ಸೆಷನ್‌ನಲ್ಲಿ ಅನೇಕ ಸ್ನೇಹಿತರು ಯಾವುದೇ ಖಾಸಗಿ ಸಂಸ್ಥೆಗಾಗಲಿ ಮಂಡಲಿಗಾಗಲಿ ಖಾಸಗಿ ಮನುಷ್ಯರನ್ನಲ್ಲದೆ ಅಧಿಕಾರಿಗಳನ್ನು ಅದರಲ್ಲೂ ನಿವೃತ್ತ

(ಶ್ರೀ ಎಂ. ಮುಂಜೇಗೌಡ)

ಅಧಿಕಾರಿಗಳನ್ನು ನೇಮಕ ಮಾಡಕೂಡದು ಎಂಬುದಾಗಿ ಒಂದು ಕಂಠದಿಂದ ಹೇಳಿದ್ದರೂ ಕೂಡ ಈ ರೀತಿ ಅವರನ್ನು ನೇಮಕ ಮಾಡಿರುವುದು ಸರಿಯಲ್ಲ. ನಾನು ಕೂಡ ಕಳೆದ ಬಜೆಟ್ ಅಧಿವೇಶನದಲ್ಲಿ ಈ ಮಂಡಲಿಯ ಚೇರ್ಮನ್‌ರ ಕಾರ್ಯಕಲಾಪಗಳ ಬಗ್ಗೆ ಸರ್ಕಾರದವರ ಗಮನ ವನ್ನು ಸೆಳೆದಾಗ ಸಭಾನಾಯಕರು ಇಂತಹ ಅನ್ಯಾಯ ಆಗದಂತೆ ನೋಡಿಕೊಳ್ಳುತ್ತೇನೆ ಎಂದು ಉತ್ತರ ಕೊಟ್ಟರು. ಆದರೂ ಕೂಡ ಮತ್ತೆ ಮತ್ತೆ ಅದೇ ತಪ್ಪು ಮಾಡುತ್ತಾ ಇದ್ದಾರೆ. ನಿಮ್ಮ ಮನಸ್ಸು ಹಿಡಿತದಲ್ಲಿಲ್ಲವೇನೋ ಅಂತ ಹೇಳಿದರೆ ತಪ್ಪಾಗುವುದಿಲ್ಲ ಎಂದು ಕಾಣುತ್ತದೆ. ಸ್ವಾಮಿ, ಮೈಸೂರು ರಾಜ್ಯದಲ್ಲಿ 100ಕ್ಕೆ 80 ಭಾಗ ರೈತರು ಇದ್ದಾರೆ ಈಗ ವಿದ್ಯುಚ್ಛಕ್ತಿಗೆ ಏನೊಂದು ಹಣ ಖರ್ಚಾಗಿದೆ ಅದರಲ್ಲಿ ಬಹುತೇಕ ಬೊಬಲಗು ರೈತರಿಂದ ಬಂದದ್ದು ಎಂದು ಹೇಳುತ್ತೇನೆ.

ಶ್ರೀ ಪಿ. ಎನ್. ಪಾಟೀಲ್ (ಹುಮ್ನಾಬಾದ್).—ಸ್ವಾಮಿ, ಇದಕ್ಕೆ ಸಂಬಂಧಪಟ್ಟ ಮಿನಿಸ್ಟರು ಸಭೆಯಲ್ಲಿ ಇಲ್ಲ, ತಾವು ಇದನ್ನು ಗಮನಕ್ಕೆ ತಗೆದುಕೊಳ್ಳಬೇಕು.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಅಧ್ಯಕ್ಷರೇ ನಮ್ಮ ಮಂತ್ರಿಮಂಡಲದಲ್ಲಿ ನುಮಾರು 31 ಜನ ಮಂತ್ರಿಗಳಿದ್ದಾರೆ. ಸಭೆಯಲ್ಲಿ ಎರಡೂವರೆ ಕೋಟಿ ಪ್ರಜೆಗಳ ಆಗು ಹೋಗುಗಳನ್ನು ಹಾಗೂ ಭವಿಷ್ಯವನ್ನು ನಿರ್ಧರಿನತಕ್ಕ ಕಾಲದಲ್ಲಿ ಇಲ್ಲಿ ಚರ್ಚೆಯಾಗುತ್ತಿರುವ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲದಿರುವುದು ನಾಚಿಕೆಗೇಡಿನ ಪ್ರಸಂಗ ಈ ಸರ್ಕಾರಕ್ಕೆ ಇಷ್ಟಾದರೂ ಬುದ್ಧಿ ಇರಬೇಡವೇ ?

4-30 P. M.

ಶ್ರೀ ಎಂ. ಮುಂಜೇಗೌಡ.—ಮಾನ್ಯ ಸದಸ್ಯರು ಬುದ್ಧಿಯಿಲ್ಲದ ಸರ್ಕಾರ ಎಂದು ಹೇಳಿದರು. ಇದು ಬುದ್ಧಿಯಿಲ್ಲದ ಸರ್ಕಾರವೋ ಅಥವಾ ಬುದ್ಧಿಗೆಟ್ಟ ಸರ್ಕಾರವೋ ಎಂಬುದನ್ನು ಅವರು ವಿಮರ್ಶೆ ಮಾಡಿ ಹೇಳಿದ್ದರೆ ಚೆನ್ನಾಗಿತ್ತು. ಈ ವಿಷಯ ಹಾಗಿರಲಿ.

ಸ್ವಾಮಿ, ಅಧ್ಯಕ್ಷರೇ, ಅಲ್ಲಿ ಇಂಥ ಅನ್ಯಾಯಗಳನ್ನು ನಡೆಯದಂತೆ ಆದಷ್ಟು ನಡೆಸತಕ್ಕ ದಕ್ಷರನ್ನು ನೇಮಕಮಾಡದೆ, ಸರ್ಕಾರದವರು ಹಿಂದೂಮುಂದೂ ಏನೂ ಆಲೋಚನೆಯನ್ನೇ ಮಾಡದೆ ಯಾರನ್ನೋ ಒಬ್ಬರನ್ನು ಅಲ್ಲಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ. ಅಲ್ಲಿ ಒಬ್ಬ ಖಾನಗೀ ಅಧ್ಯಕ್ಷರನ್ನು ನೇಮಕಮಾಡಿದ್ದರೆ ಈದಿವಸ ನಡೆಯುತ್ತಿರುವಷ್ಟು ಅನ್ಯಾಯಗಳು ನಡೆಯುತ್ತಿರಲಿಲ್ಲವೆಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ನೂರಕ್ಕೆ ನಮಾರು 80-85 ಜನರು ರೈತರಿದ್ದಾರೆ. ಈ ವಿದ್ಯುಚ್ಛಕ್ತಿಯು ಉತ್ಪಾದನೆಗಾಗಿ ಮಾಡಿರತಕ್ಕ ಹಣದಬಗ್ಗೆ ಬಡ್ಡಿಯನ್ನು ತೆರತಕ್ಕವರು ರಾಜ್ಯದಲ್ಲರತಕ್ಕ ರೈತರು. ಆ ಸಾಲದ ಹೊರೆಯನ್ನು ಹೊತ್ತಿರತಕ್ಕವರು ರಾಜ್ಯದಲ್ಲರತಕ್ಕ ರೈತರು. ಅಷ್ಟಾದರೂ ಆ ರೈತರಿಗೆ ಅನುಕೂಲಗಳಿಲ್ಲ. ಇನ್ನು ಆ ಟ್ಯಾರಿಫ್ ಬೋರ್ಡಿನಲ್ಲೂ ಅನೇಕ ಅನ್ಯಾಯಗಳು ನಡೆಯುವುಕ್ಕೆ ಅವ ಕಾಶವನ್ನು ಕೊಟ್ಟಿದ್ದಾರೆ. ಆ ವಿದ್ಯುಚ್ಛಕ್ತಿಮಂಡಲಿಯವರು ಈ ಉದ್ಯಮವನ್ನು ರಾಭ – ನಷ್ಟಗಳು ಬಾರದಂತೆ ನಡೆಸಬೇಕೆಂಬ ತತ್ವದಮೇರೆ ಹೋಗಬೇಕೆಂದು ಹೇಳುತ್ತಿರುವುದರಿಂದ ಈ ದರಗಳನ್ನು ಏರಿಸಲೇ ಬೇಕೆಂದು ಅವರು ಹೇಳುತ್ತಿದ್ದಾರೆ. ಕಳೆದ 10–15 ವರ್ಷಗಳಿಂದ ನಮ್ಮ ಕೈಗಾರಿಕೆಗಳಲ್ಲಿ ಲಕ್ಷಾಂತರ ರೂಪಾಯಿಗಳ ನಷ್ಟವಾಗುತ್ತಿದೆ. ಆ ನಷ್ಟವನ್ನು ಕಟ್ಟಿಕೊಡತಕ್ಕವರು ಯಾರು ? ಆ ನಷ್ಟವನ್ನೂ ಕೂಡ ಈ ರೈತರಮೇಲೆ ಹಾಕಲಾಗುತ್ತಿದೆ. ಕೈಗಾರಿಕೆಗಳಲ್ಲಿ ಕೆಲಸಮಾಡತಕ್ಕ ಜನರೇನಿದ್ದಾರೆ ಅವರಲ್ಲ ಅನೇಕ ಸಂಘ ಸಂಸ್ಥೆಗಳಿವೆ. ಥೇಂಬರ್ ಆಫ್ ಕಾಮರ್ಸ್ ಮತ್ತು ಇಂಡಿಯನ್ ಥೇಂಬರ್ ಆಫ್ ಕಾಮರ್ಸ್ ಎಂದು ಅನೇಕ ಸಂಸ್ಥೆಗಳಿವೆ. ಅವರಲ್ಲ ಸಂಘಟನೆ ಚೆನ್ನಾಗಿದೆ. ಆದರೆ ಅಂಥ ಒಂದು ಸಂಘಟನೆ ರೈತವರ್ಗದಲ್ಲಿಲ್ಲ. ಆದರೆ ಅವರೇನೂ ಈ ವಿಚಾರದಲ್ಲಿ ಸಾಮೂಹಿಕ ಮುಷ್ಕರ ವನ್ನು ಹೂಡಬೇಕಾಗಿಲ್ಲ. ಅವರಿಂದ ಓಟುಗಳನ್ನು ಪಡೆದು ಬಂದಿರತಕ್ಕ ಜನರೇನಿದ್ದಾರೆ ಅವರೇ ಈ ಬಗ್ಗೆ ಚಳುವಳಿಯನ್ನು ಹೂಡತಕ್ಕ ಕಾಲ ಸಮೀಪಿಸುತ್ತಿದೆ. ನಾವು ಇಲ್ಲಿಯವರೆಗೂ ಎಷ್ಟೆಷ್ಟೋ ಹೇಳಿದ್ದಾಯಿತು. ಆದಾಗ್ಯೂ ಆ ಬೋರ್ಡಿನವರಿಗೆ ಕಿವಿ ಕೇಳಿಸುವುದಿಲ್ಲ. ಅವರಿಗೆ ಪರಿಜ್ಞಾನವೂ ಇದ್ದಹಾಗೆ ಕಾಣುತ್ತಿಲ್ಲ. ಮುಂದಿನ ವರ್ಷ ದೇಶದಲ್ಲಿ ಆಹಾರಕ್ಕೇನು ಮಾಡಬೇಕೆಂಬ ರೋಧನವೆ ಎಲ್ಲೆಲ್ಲೂ ಕೇಳಿಬರುತ್ತಿದೆ ರೈತರು ಏನಾದರೂ ಕಷ್ಟಪಟ್ಟು ಆಹಾರವನ್ನು ಉತ್ಪತ್ತಿಮಾಡೋಣ ಎಂದು ಪ್ರಯತ್ನಪಟ್ಟರೆ ಪಂಪ್‌ಸೆಟ್ಟನ್ನು ಕೊಂಡುಕೊಳ್ಳುವುದಕ್ಕೆ ವಗೈರೆ ಖರ್ಚುವೆಚ್ಚಗಳಿಗೆ ಖಾನಗೀ ಜನರಲ್ಲಿ ಸಾಲಮಾಡೋಣ ಎಂದರೆ ಆ ಡೆಟ್ ರಿಲೀಫ್ ಆಕ್ಟಿನ ದೆಶೆಯಿಂದ ಅಲ್ಲಿಯೂ ಸಾಲ ಸಿಕ್ಕುತ್ತಿಲ್ಲ. ಇನ್ನು ಬ್ಯಾಂಕುಗಳಲ್ಲೂ ನಹಾ ರೈತನಿಗೆ ಸಾಲಸಿಕ್ಕುವಂತಿಲ್ಲ. ಈ ಎರಾ ತೊಂದರೆಗಳನ್ನೂ ದಾಟಿಕೊಂಡು ಆ ರೈತನು ತನ್ನ ಮನೆಮಠಗಳನ್ನೂ ಮಾರಾಟ ಮಾಡಿ ಪಂಪ್ ಸೆಟ್ಟುಗಳನ್ನು ಕೊಂಡು ತಂದು ಹಾಕಿದ್ದರೆ ಅತನಿಗೆ ಆ ಬಾವಿಗಳಲ್ಲಿ ಬಂದು ಗಂಟೆಗಿಂತ ನೀರು

ಹೆಚ್ಚಾಗಿ ಸಿಕ್ಕುತ್ತಿಲ್ಲ. ಇಷ್ಟು ರೈತ ಕಷ್ಟಪಟ್ಟು ಕೆಲಸಮಾಡುತ್ತಿದ್ದಾನೆಂಬುದೂ ಕೂಡ ಇವರಿಗೆ ಪರಿಜ್ಞಾನವಿಲ್ಲ. ಈ ಬೋರ್ಡಿನವರು ಏನೋ ನೇರವಾಗಿ ಆಕಾಶದಿಂದ ಕೆಳಗಿಳಿದವರಂತೆ ನಟಿಸುತ್ತಿದ್ದಾರೆ. ಇವರಲ್ಲಿ ಮಾನವೀಯತೆಯ ದೃಷ್ಟಿ ಕೂಡ ಇಲ್ಲ. ಹೀಗೆ ರೈತನಿಗೆ ದಿನ ದಿನಕ್ಕೂ ಅನ್ಯಾಯಗಳು ಹೆಚ್ಚುತ್ತಿರುವುದರಿಂದ ದೇಶದಲ್ಲಿ ಜನರು ಬೊಬ್ಬೆಯೇಳತಕ್ಕ ಮಟ್ಟದಲ್ಲಿದ್ದಾರೆ. ಸರ್ಕಾರವರು ಹಿಂದೆಕೊಟ್ಟಿದ್ದ ಆಶ್ವಾಸನವನ್ನು ಅವರು ಇಂದು ಮುರಿದುಹಾಕುತ್ತಿದ್ದಾರೆ. ಆಂದಾಗ ಇನ್ನು ನಮ್ಮಲ್ಲಿ ಆ ತಿನ್ನು ನಂಯಮಗಳು ಎಲ್ಲಿಂದ ಬರಬೇಕು? ಪರಿಸ್ಥಿತಿ ಹೀಗೆ ಮುಂದುವರಿದರೆ ಮುಂದೆ ನಾವು ಏನುಮಾಡಬೇಕೆಂಬದನ್ನು ನಾವೂ ಕೂಡ ಮಾಡೇ ಮಾಡುತ್ತೇವೆ. ಕೈಗಾರಿಕೆಗಳವರಿಗೆ ದರವನ್ನು ಇಳಿಸತಕ್ಕ ಕಾಲದಲ್ಲಿ ನಮ್ಮನ್ನೆಲ್ಲಾ ಕೇಳಿ ಅದನ್ನು ಇಳಿಸಿದರೋ: ಈ ದಿವಸ ನಮ್ಮ ಸರ್ಕಾರದವರು ಹೊರ ರಾಜ್ಯಗಳಿಗೆ ರಿಯಾಯತಿ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿರುವುದರಿಂದ ಎಷ್ಟು ನಷ್ಟವಾಗುತ್ತದೆ? ಕೋಟಿಗಟ್ಟಲೆ ನಷ್ಟವಾಗುತ್ತಿದೆ. ಆದರೆ ಆ ಕೈಗಾರಿಕಾ ಕ್ಷೇತ್ರದಲ್ಲಿ ಒಂದು ಸಂಘಟನೆ ಇರುವುದರಿಂದ ಅವರಿಗೆ ಹೆದರಿ ಅದನ್ನು ಸಬ್‌ಸಿಡೈಜ್ಡ್ ಮಾಡಿದ್ದಾರೆ. ಅದನ್ನು ಆ ವಿದ್ಯುಚ್ಛಕ್ತಿ ಮಂಡಲಿ ಕೊಡಲಿ. ರೈತನ ನಾನಾ ಸಮಸ್ಯೆಗಳು ಪರಿಹಾರವಾಗಬೇಕಾಗಿದ್ದರೆ ಈ ಬೋರ್ಡಿನಿಂದ ಸಾಧ್ಯವಿಲ್ಲ. ಆ ವಿದ್ಯುಚ್ಛಕ್ತಿ ಬೋರ್ಡಿನವರು ಅವರೇ ಬೇರೆ, ಸರ್ಕಾರದವರೇ ಬೇರೆ ಇಲ್ಲಿರತಕ್ಕ ಜನರೇ ಬೇರೆ ಎಂದು ಭಾವಿಸಿರುವಂತೆ ಕಾಣುತ್ತಿದೆ. ಏನೇ ಆಗಲೀ ದೇಶದಲ್ಲಿರತಕ್ಕ ಜನರನ್ನೂ ಜನರ ಪ್ರತಿನಿಧಿಗಳನ್ನೂ ಮತ್ತು ಸರ್ಕಾರವನ್ನೂ ಆ ಬೋರ್ಡಿನವರು ಬಹಳ ಧಿಕ್ಕಾರದಿಂದ ಕಾಣುತ್ತಿದ್ದಾರೆ. ಆದ್ದರಿಂದ ಅದು ರೈತನ ಏಳಿಗೆಗಾಗಿ ಇರತಕ್ಕ ಸಂಸ್ಥೆಯಲ್ಲ ಎಂಬುದನ್ನು ಮನಗಂಡಂತೆ ಆಯಿತು. ಇದರಿಂದ ರೈತನ ಏಳಿಗೆಯಾಗುತ್ತದೆಂಬುದನ್ನು ಅವರು ಮರೆಯಬೇಕು. ಇನ್ನು ಆ ವಿದ್ಯುಚ್ಛಕ್ತಿ ಮಂಡಲಿಯಲ್ಲಿರತಕ್ಕ ನೌಕರರು ಆ ಮಂಡಲಿಯ ಕಂಟ್ರಾಕ್ಟರುಗಳಿಗೆ ಸರಿಯಾಗಿ ಹೊಂದಿಕೊಂಡು ವಿಧೇಯರಾಗಿ ನಡೆಯದಿದ್ದರೆ ಅವರನ್ನು ಆ ತಾಲ್ಲೂಕಿನಿಂದ ಆ ಕೂಡಲೆ ವರ್ಗಮಾಡಲಾಗುತ್ತದೆ. ಅವರನ್ನು ಹೊಂದಿಕೊಂಡವರು ಒಂದೇ ತಾಲ್ಲೂಕಿನಲ್ಲಿ ಎಷ್ಟು ವರ್ಷಗಳು ಬೇಕಾದರೂ ಇರಬಹುದು. ಆ ಒಂದು ಭಯದಿಂದ ಕಂಟ್ರಾಕ್ಟರು ಎಂಥ ಕೀಳು ದರ್ಜೆಯ ಮೆಟೀರಿಯಲ್ಸ್‌ಗಳನ್ನು ಉಪಯೋಗ ಮಾಡಿದರೂ ಅದನ್ನು ಯಾರೂ ತನಿಖೆಮಾಡುವಂತಿಲ್ಲ. ತನಿಖೆಮಾಡಿದರೆ ವರ್ಗ ಆಯಿತೆಂತಲೇ. ಕಂಟ್ರಾಕ್ಟರು ಎಲ್ಲಿಗೆ ವಿದ್ಯುಚ್ಛಕ್ತಿಯನ್ನು ಮಂಜೂರು ಮಾಡಬೇಕೆಂದರೆ ಅಲ್ಲಿಗೆ ಮಾತ್ರ ವಿದ್ಯುಚ್ಛಕ್ತಿ ಸಿಕ್ಕುತ್ತದೆ. ನೂರು ಜನರು ವಿದ್ಯುಚ್ಛಕ್ತಿ ಬೇಕೆಂದು ಅರ್ಜಿಹಾಕಿಕೊಂಡರೆ ಅದರಲ್ಲಿ ಒಂದು ಕ್ರಮವರಿತು ಗ್ರಾಮಗಳಿಗೆ ಸರಬರಾಯಿ ಮಾಡುತ್ತಿಲ್ಲ. ಯಾವ ಕೆಲಸಕ್ಕೂ ಲಂಚವಿಲ್ಲದೆ ಕೆಲಸ ನಡೆಯುವಂತೆಯೇ ಇಲ್ಲ. ಹತ್ತನೆಯ ಮನುಷ್ಯನಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡತಕ್ಕ ಥಾನ್ಸ್ ಬಂದಾಗ ಅವನಿಗೆ ಕಂಬವಿಲ್ಲ, ತಂತಿಇಲ್ಲ ಎಂದು ಏನೇನೋ ನಬೂಬನ್ನು ಹೇಳಿ ಅವನಿಗಿಂತ ಹಿಂದೆ ಅರ್ಜಿಹಾಕಿಕೊಂಡಿದ್ದವನಿಗೆ ಸರ್ವೀಸನ್ನು ಕೊಡುತ್ತಿದ್ದಾರೆ. ಇದೆಂಥ ನೀತಿ? ಇದಕ್ಕೆಲ್ಲಾ ಮೂಲ ಕಾರಣ ಆ ಬೋರ್ಡಿನ ಅಧ್ಯಕ್ಷರಿಗೆ ಯಾರ ಭಯವೂ ಇಲ್ಲ. ಜನರ ಪ್ರತಿನಿಧಿಯೊಬ್ಬ ಅಲ್ಲಿ ಇದ್ದಿದ್ದರೆ ಹೀಗಾಗುತ್ತಿರಲಿಲ್ಲ. ಶ್ರೀಮತಿ ನಾಗರತ್ನಮ್ಮನವರು ಅಲ್ಲಿ ಒಬ್ಬ ಸರ್ಕಾರದವರ ಕಾರ್ಯದರ್ಶಿಯನ್ನು ಇಟ್ಟು ಏಕೆ ಆಡಳಿತವನ್ನು ನಡೆಸಬಾರದೆಂದು ಹೇಳಿದರೂ. ಅದೂ ಕೂಡ ಸರಿಯಾದ್ದಲ್ಲ. ಆ ಸ್ಥಾನದಲ್ಲಿ ಒಬ್ಬ ಖಾನಗೀ ಸದ್ಗೃಸ್ಥರನ್ನಿಟ್ಟರೇನೇ ಅಲ್ಲಿ ಅವರು ಸ್ವಲ್ಪ ಭಯದಿಂದ ಕೆಲಸಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಹೇಳುತ್ತೇನೆ. ಆ ಸ್ಥಾನದಲ್ಲಿ ಯಾರೋ ಚುನಾವಣೆಗಳಲ್ಲಿ ಸೋತವರನ್ನು ಇಲ್ಲವೇ ನಿವೃತ್ತ ಅಧಿಕಾರಿಗಳನ್ನು ಇಟ್ಟರೆ ಆಗುವುದೇ ಹೀಗೆ. ಇನ್ನೊಬ್ಬ ಯಾರೋ ನನ್ನ ಮಾನ್ಯ ಸ್ನೇಹಿತರು ಇದು ಕೇಂದ್ರಕ್ಕೆ ಸೇರಿದ ಬಾಬು, ರಾಜ್ಯ ಸರ್ಕಾರದವರು ಇದರಲ್ಲಿ ಕೈಹಾಕುವುದಕ್ಕೆ ಬರುವುದಿಲ್ಲ ಎಂದು. ಜನತೆಗೆ ವಿರೋಧ ಮಾಡತಕ್ಕ ಸಂಸ್ಥೆ ಅದು ಯಾರದೇಆಗಿರಲಿ ಅದನ್ನು ರದ್ದುಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ. ಆದ್ದರಿಂದ ಕೂಡಲೇ ಆ ಬೋರ್ಡ್‌ನ್ನು ರದ್ದುಮಾಡಿ ಆ ಅಧಿಕಾರವನ್ನು ಕೂಡಲೆ ಸರ್ಕಾರದವರು ವಹಿಸಿಕೊಳ್ಳಬೇಕೆಂದೂ ಆ ತರುವಾಯ ಅವರು ಅದನ್ನು ಒಬ್ಬ ಜನರ ಪ್ರತಿನಿಧಿಗೆ ವಹಿಸಬೇಕೆಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಸರ್ಕಾರದವರು ಇಂಥ ಮಂಡಳಿಗಳ ಆಡಳಿತದ ಬಗ್ಗೆ ರಚಿನತಕ್ಕ ಕಾನೂನುಗಳಲ್ಲಿ ಇಂಥಅಕ್ರಮ ಪ್ರಸಂಗಗಳಲ್ಲಿ ನಡೆದಾಗ ಕೈಹಾಕುವುದಕ್ಕೆ ಅನುಕೂಲ ಆಗುವಂತೆ ಸರ್ಕಾರದವರು ಅವಕಾಶ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ಈ ವಿದ್ಯುಚ್ಛಕ್ತಿ ಪಂಪುಗಳಿಗೆ ಏನು ದರವನ್ನು ಏರಿಸಿದ್ದಾರೋ ಅದನ್ನು ತಕ್ಷಣ ಕ್ಯಾನ್ಸಲ್‌ಮಾಡಬೇಕು. ಜನಗಳ ಆಶೋತ್ತರಗಳನ್ನು ಈಡೇರಿಸಬೇಕಾದರೆ ಏನೇನು ಕ್ರಮುಗಳನ್ನು ತೆಗೆದುಕೊಳ್ಳಬೇಕೋ ಅವನ್ನು ತೆಗೆದುಕೊಳ್ಳುವುದಕ್ಕೆ ಈಗ ಕಾಲ ಸನ್ನಿಹಿತವಾಗಿ ಬಂದಿದೆ ಎಂಬುದಾಗಿ ಹೇಳುತ್ತೇನೆ.

ಸಭಾಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಎನ್. ನಂಜೇಗೌಡ (ಅರಕಲುಗೂಡು).—ಮಾನ್ಯ ಸಭಾಧ್ಯಕ್ಷರೇ, ಕೆಲವಾರು ವಿಷಯುಗಳನ್ನು ವಿದ್ಯುಚ್ಛಕ್ತಿಮಂಡಲಯ ಬಗ್ಗೆ ಹೇಳತಕ್ಕದ್ದು ಅತ್ಯಗತ್ಯವಾಗಿದೆ. ಅದೃಷ್ಟವಶಾತ್, ಈ ಮಂಡಲ ರಚನೆಯಾದ ಮೇಲೆ ಈಗ ಮೊದಲನೆಯಬಾರಿ ಇದು ಇಲ್ಲಿ ಚರ್ಚೆಗೆ ಬಂದಿದೆ. ಇಂತಹ ಸಂದರ್ಭದಲ್ಲಿ ಕೇವಲ ಏನೋ ಮಂಡಲಿಯ ಬಗ್ಗೆ ಕೆಲವಾರು ಒರಟು ಮಾತುಗಳನ್ನು ಹೇಳಿ ಅವರ ಮೇಲೆ ಅನಗತ್ಯವಾದ ಆಕ್ಷೇಪಣೆಗಳನ್ನು ಹೊರಿಸುವಂಥ ಉದ್ದೇಶವನ್ನು ಇಟ್ಟುಕೊಂಡು ನಾನು ಇಲ್ಲಿ ಮಾತನಾಡುವುದಕ್ಕೆ ಬಯಸುವುದಿಲ್ಲ. ಮಂಡಲಿಯ ವ್ಯವಹಾರ ಏನಿದೆ, ಮಂಡಲಿಯ ಎದುರಿಗೆ ಇರುವ ಕಷ್ಟನಷ್ಟುಗಳೇನು, ಅವನ್ನೂ ಕೂಡ ನಾನು ಹೇಳಬೇಕೆಂದು ಅಪೇಕ್ಷೆಪಡುತ್ತೇನೆ. ಈ ಮೊದಲು ಮಂಡಲಿಯವರ ವಿಚಾರವಾಗಿ ನಾನು ಮುಖ್ಯ ಮಂತ್ರಿಗಳಿಗೆ ಕಾಗದ ಬರೆದ ಸಂದರ್ಭದಲ್ಲಿ ಅವರು ನನಗೆ ಉತ್ತರ ಕೊಟ್ಟರು. ಆ ಉತ್ತರದಿಂದ ನನ್ನ ಮಾತುಗಳನ್ನು ಪ್ರಾರಂಭ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ಟ್ಯಾರಿಫ್ / ರೇಟ್ಸನ್ನು ಏರಿಸಿದ ಬಗ್ಗೆ ಅವರು ಕೆಲವಾರು ಕಾರಣಗಳನ್ನು ಕೊಟ್ಟಿದ್ದಾರೆ. ಅದಕಾಗಿ ಐ. ಪಿ. ಸೆಟ್ಸ್ ಮೇಲೆ ದರವನ್ನು ಏರಿಸಬೇಕಾಯಿತು ಎಂಬುದಾಗಿ ಹೇಳಿದ್ದಾರೆ. ಕಾರಣ ಕೊಟ್ಟಿದ್ದರಲ್ಲಿ ಅವರು ಸಂಪೂರ್ಣವಾಗಿ ಕಾರಣಗಳನ್ನು ಕೊಟ್ಟಿಲ್ಲವೆಂದು ನನಗೆ ಅಭಿಪ್ರಾಯವುಂಟಾಗಿದೆ. ಏಕೆಂದರೆ, ರೂರಲ್ ಎಲೆಕ್ಟ್ರಿಫಿಕೇಷನ್ನಿನಲ್ಲಿ ಸರ್ವಿಸಿಂಗ್ ಆಫ್ ಐ.ಪಿ. ಸೆಟ್ಸ್ ರಿಟರ್ನ್ಸ್ ಬರುತ್ತಾ ಇಲ್ಲ, ಮಂಡಲ ನಷ್ಟ ಹೊಂದುತ್ತಿದೆಯೆಂದು ಹೇಳಿದ್ದಾರೆ. ನಾನು ಏತಕ್ಕೆ ಹೀಗೆ ಆಗುತ್ತದೆ. ಪರಿಶೀಲನೆಮಾಡಿ ನೋಡಿದ್ದೀರಾ ಎಂದು ಸಂಬಂಧಪಟ್ಟ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಾ ಗ್ರಾಮಗಳಿಗೂ ವಿದ್ಯುಚ್ಛಕ್ತಿ ಸರಬರಾಜುಮಾಡುವ ಉದ್ದೇಶದಿಂದ ಐ.ಪಿ. ಸೆಟ್ಟುಗಳನ್ನು ಕೊಡಲು ಕೇಂದ್ರ ಸರ್ಕಾರದವರು ಸುಮಾರು ರೇಟ್ಸ್‌ಲ್ಲಿ ರಾಜ್ಯ ಸರ್ಕಾರದವರಿಗೆ ಹಣವನ್ನು ನಿರ್ದಿಷ್ಟವಾಗಿ ಕೊಡುತ್ತಾ ಇಲ್ಲವೇ! ನನಗೆ ತಿಳಿದ ಪ್ರಕಾರ ವರ್ಷಂಪ್ರತಿ 2 ಕೋಟಿ ರೂಪಾಯಿಗಳಷ್ಟು ಹಣವನ್ನು ಇದೇ ಉದ್ದೇಶಕ್ಕಾಗಿ ರಾಜ್ಯ ಸರ್ಕಾರಕ್ಕೆ ಕೊಡುತ್ತಿದ್ದಾರೆ. ಈ ಹಣವನ್ನು ರಾಜ್ಯ ಸರ್ಕಾರದವರು ಮಂಡಲಿಗೆ ಕೊಡುತ್ತಾ ಇಲ್ಲವೆಂದು ನನಗೆ ಅರ್ಥವಾಗುತ್ತದೆ. ಈ ಹಣ ಎಲ್ಲಿ ಹೋಗುತ್ತದೋ ಗೊತ್ತಿಲ್ಲ. ಅವರು ಸುಮಾರು ರೂಪದಲ್ಲಿ ಕೊಡುವ ಹಣವನ್ನು ಮಂಡಲಯವರಿಗೆ ಕೊಡದೇ ಇರುವುದರಿಂದಲೇ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ನರಬರಾಜು ಕಡಿಮೆಯಾಗಿ ಸರ್ವಿಸಿಂಗ್ ಆಫ್ ಐ. ಪಿ. ಸೆಟ್ಟುಗಳನ್ನು ಕೊಡುತ್ತಾ ಇಲ್ಲ. ಆದಕ್ಕೋಸ್ಕರ ಈ ಮಂಡಲ ನಷ್ಟದಲ್ಲಿ ಕೆಲಸಮಾಡುತ್ತಿದೆಯೆಂದು ಹೇಳುತ್ತಿದ್ದಾರೆ. ಯಾವ ಉದ್ದೇಶಕ್ಕಾಗಿ ಇದನ್ನು ಬೈಫರ್‌ಕೇಟ್ ಮಾಡಿದರೆಂಬುದು ಗೊತ್ತಿಲ್ಲ. ಕೇಂದ್ರಸರ್ಕಾರದಿಂದ ಹಣ ಬರುತ್ತದೆಂಬ ಬಲದಿಂದ ಇವರು ಅದನ್ನು ಬೇರೆ ರೀತಿಯಲ್ಲಿ ಉಪಯೋಗಿಸುವುದನ್ನು ನೋಡಿದರೆ, ಮತ್ತು ಎಲ್ಲಾ ತಪ್ಪುಗಳನ್ನು ಮಂಡಲಯವರ ಮೇಲೆಯೇ ಹೊರಿಸುವುದನ್ನು ನೋಡಿದರೆ, ಇದರಲ್ಲಿ ಏನೂ ಅರ್ಥವಿಲ್ಲ. ಮಂಡಲಯವರು ಇದರಿಂದ ಯಾವ ರೀತಿ ಲಾಭದಾಯಕವಾಗಿ ಕೆಲಸಮಾಡಬಹುದು. ಒಂದು ಐ. ಪಿ. ಸೆಟ್ಟಿಗೆ ಹಳೆಯ ಮೈಸೂರು ಭಾಗದಲ್ಲಿ 3ಸಾವಿರ ಅಥವಾ 4 ಸಾವಿರ ರೂಪಾಯಿಗಳು ಬೇಕಾಗುತ್ತದೆ. ಆದರೆ ಒಂದು ಐ. ಪಿ. ಸೆಟ್ಟನ್ನು ಹೊಸ ಮೈಸೂರಿನಲ್ಲಿ ಹಾಕಬೇಕಾದರೆ ಸುಮಾರು 25ಸಾವಿರ ರೂಪಾಯಿಗಳಾದರೂ ಆಗುವುದಿಲ್ಲ. ಮಿನಿಮಂ ವರ್ಕ್‌ಔಟ್ ಆಗುವುದಿಲ್ಲ. Are we to be penalised ? ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಫೈನಾನ್ಸಿಯಲ್ ಸ್ಟೇಟ್‌ಮೆಂಟ್ 1957ರಿಂದ 1967ರವರೆಗೆ ರೂರಲ್ ಎಲೆಕ್ಟ್ರಿಫಿಕೇಷನ್ನಿನಲ್ಲಿ ಸರ್ವಿಸಿಂಗ್ ಆಫ್ ಐ. ಪಿ. ಸೆಟ್ಸ್‌ಗಳಿಂದ ಎಷ್ಟರಮಟ್ಟಿಗೆ ಖರ್ಚಾಗಿದೆಯೆಂಬುದು ಈ ರೀತಿ ಇದೆ. ಓದುತ್ತೇನೆ.

		ರೂ.
ಚಿತ್ರದುರ್ಗ	...	17,83,000
ಗುಲ್ಬರ್ಗ	...	20,47,000
ಹಾಸನ	...	4,12,000
ಹುಬ್ಬಳ್ಳಿ	...	55,25,000
ಮಂಡ್ಯ	...	1,84,000
ಮಂಗಳೂರು	...	24,42,000
ಮೈಸೂರು	...	72,000 (ಮೂರು ವರ್ಷಗಳಿಗೆ)
ಡಿವಿಷನ್ (ಶ್ರೀ ಡಿ. ಎಂ. ಸಿದ್ಧಯ್ಯನವರ ಕ್ಷೇತ್ರ)		
ತುಮಕೂರು	...	5,00,000

ಕೇವಲ ಎರಡು ಡಿವಿಷನ್ನುಗಳಲ್ಲಿ ಲಿಮಿಟ್ ಏರಿ ಖರ್ಚುಮಾಡಿರುವುದಕ್ಕೆ ಮತ್ತು ಉಳಿದ ಭಾಗಗಳಲ್ಲಿ ಅಂದರೆ, ಕಾರವಾರ, ಮಂಡ್ಯ ಮತ್ತು ಹಾಸನ —ಇಂತಹ ಕಡೆಗಳಲ್ಲಿ ನೀವು ಪೀನಲ್ಟೈಜ್ ಮಾಡುತ್ತೇವೆಂದು ಹೇಳಿದರೆ ನಾವು ಕಣ್ಣುಮುಚ್ಚಿ ನೋಡುವುದಕ್ಕೆ ತಯಾರಾಗಿಲ್ಲ, ಕೇಂದ್ರ ಸರ್ಕಾರದಿಂದ ಬರತಕ್ಕ ಹಣವನ್ನು ನೇರವಾಗಿ ಬೋರ್ಡ್‌ಗೆ ಕೊಡುವ ಅದನ್ನೂ ಕೂಡ ಪ್ರೈಮರಿಯಾಗಿ ರೈನ್ ಎಳೆಯುವುದಕ್ಕೆ ಉಪಯೋಗಿಸಿ ಅದರಲ್ಲಿ ರಾಜಕಾರಣ ಮಾಡಿ ಕೃಷ್ಣಾ ಮತ್ತು ಕಾವೇರಿ ಬೇಸಿನ್‌ನಲ್ಲಿರುವವರಿಗೆ ಜಗಳ ತರುವುದು, ಕಾರವಾರ, ಮಂಡ್ಯಾ ಮತ್ತು ಹಾಸನ—ಈ ಪ್ರದೇಶಗಳಲ್ಲಿರುವವರಿಗೆ ಜಗಳ ತರುವುದು—ಹೀಗೆ ಮುಖ್ಯಮಂತ್ರಿಗಳು ರಾಜ್ಯಭಾರ ಮಾಡಿ ಕಾಲಹರಣ ಮಾಡುವುದು ನಿಜವಾಗಿ ಸೌಜನ್ಯವಾಗಿಲ್ಲ. ಏತಕ್ಕೆಂದರೆ, ಇಲ್ಲಿ ಇವತ್ತು ನಾನು ಕ್ರೋಢೀಕರಿಸಿದಂಥ ಅಂಕ ಅಂಶಗಳನ್ನು ಹೇಳದೆ ಹೋದರೆ ಖಂಡಿತವಾಗಿ ನಾನು ಅಪರಾಧಮಾಡಿದಂತಾಗುತ್ತದೆ. ಅದಕ್ಕಾಗಿ ಹೇಳಿದ್ದೇನೆ. ಕೆಲವಾರು ಭಾಗಗಳಿಗೆ ಹೆಚ್ಚಿಗೆ ಅನುಕೂಲ ಮಾಡಿದ್ದಾರೆಂದು ಹೇಳಿದರು. ಏತಕ್ಕೆ ನಾನು ಈ ಪ್ರಸಂಗದಲ್ಲಿ ಅಂಕಅಂಶಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆಂದರೆ, ವಾಸ್ತವವಾಗಿ ಏನು ಎಕ್ಸ್‌ಪೆಂಡಿಚರ್ ಸ್ಕೆಡಿನಲ್ಲಿ ಖರ್ಚುಮಾಡುತ್ತಾರೋ ಅದರಲ್ಲಿ ಕೆಲವು ಭಾಗಗಳಿಗೆ ಬಹಳ ಕಡಿಮೆ ಖರ್ಚುಮಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಅನೇಕ ಪಂಪುಸೆಟ್ಟುಗಳಿಗೆ ಮಂಡ್ಯಾ ಮುಂತಾದ ಕಡೆಗಳಲ್ಲಿ ಕಡಿಮೆಯಾಗಿ ಖರ್ಚುಮಾಡಲು ಕಾರಣ ಕೇವಲ ಎರಡು ಫರ್ಲಾಂಗ್, ಮೂರು ಫರ್ಲಾಂಗ್ ರೈನ್ ಎಳೆದರೆ 2—3 ಪಂಪುಸೆಟ್ಟುಗಳನ್ನು ಕೊಡಬಹುದು. ಮಾನ್ಯ ಮುಖ್ಯ ಮಂತ್ರಿಗಳ ಊರಿನಲ್ಲಿ ಎಷ್ಟೋ ದುಡ್ಡನ್ನು ಖರ್ಚುಮಾಡುತ್ತಿದ್ದಾರೆ. ಸೀಲಿಂಗ್ ಲಿಮಿಟ್ ಅಲ್ಲಿ ಇಲ್ಲ. 10 ಎಚ್. ಪಿ. ಗೆ 40 ಸಾವಿರ ರೂಪಾಯಿಗಳಂತೆ ಎಸ್ಟಿಮೇಟ್ ಮಾಡಿರುವ ಉದಾಹರಣೆಗಳಿವೆ. ಈಗ ಎರಡೂವರೆ ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ. ಅದು ತಪ್ಪು. ಹೀಗಾದರೆ ನಿಮ್ಮ ಮಂಡಲಿಯವರಿಗೆ ಎಲ್ಲಿ ಲಾಭದಾಯಕವಾಗಿ ಕೆಲಸಮಾಡುವುದಕ್ಕಾಗುತ್ತದೆ! ತಾವು ಸಂಪೂರ್ಣವಾಗಿ ತಮ್ಮ ಆರ್ಥಿಕ ಹಿತದೃಷ್ಟಿಯನ್ನು ಅನುಸರಿಸಿ ಕೆಲಸಮಾಡುವುದಾದರೆ, ಎರಡೂವರೆ ಸಾವಿರ ರೂಪಾಯಿಗಳಷ್ಟು ಮಂಡಲಿಯವರಿಗೆ ನೀವು ಮಾಡುತ್ತಿರಲಿಲ್ಲ. 10 ಎಚ್. ಪಿ. ಇಂಜಿನ್ ಕೊಡುವುದಕ್ಕೆ ಅವರಿಗೆ 25 ಸಾವಿರ ರೂಪಾಯಿಗಳು ಅಥವಾ 40 ಸಾವಿರ ರೂಪಾಯಿಗಳು ಬೇಕಾಗುತ್ತದೆ. ಮಿನಿಮಂ ಇಷ್ಟೇ ರಿಟರ್ನ್ ಬರಬೇಕೆಂದು ಹೇಳಿದ್ದಾರೆ. ಹೀಗೆ ಮಾಡಿದರೆ ಆಗುವುದಿಲ್ಲ! ಗುಲ್ಬರ್ಗ ಆಗಲೀ ಅಥವಾ ಹಾಸನ ಆಗಲೀ We are not prepared to be penalised. ಎಂಬ ಎಚ್ಚರಿಕೆಯನ್ನು ನಾನು ಕೊಡಲಿಕ್ಕೆ ಇಚ್ಛಿಸುತ್ತೇನೆ, ಇವತ್ತಿನ ದಿವಸ ಒಂದು ಅಂಕಿ ಅಂಶವನ್ನು ತಮ್ಮ ಮುಖಾಂತರ ತಿಳಿಸುತ್ತೇನೆ. ಇತ್ತೀಚೆಗೆ ಇವರು ಮಾಡಿರತಕ್ಕ ಖರ್ಚನ್ನು ತೆಗೆದುಕೊಂಡರೆ ಗೊತ್ತಾಗುತ್ತದೆ. 1965 ರಿಂದೀಚೆಗೆ ಡಿ. ಎಂ. ಸಿದ್ದಯ್ಯನವರ ಊರಿನಲ್ಲಿ 18 ಲಕ್ಷ ರೂಪಾಯಿ ಖರ್ಚುಮಾಡಿದ್ದಾರೆ, ವೀರೇಂದ್ರ ಪಾಟೀಲರ ಊರಿನಲ್ಲಿ 85 ಲಕ್ಷ ರೂಪಾಯಿ ಖರ್ಚಾಗಿದೆ. ಚಿತ್ರದುರ್ಗದಲ್ಲಿ ಸಿದ್ದವೀರಪ್ಪನವರ ಊರಿನಲ್ಲಿ 18 ಲಕ್ಷ ರೂಪಾಯಿ ಖರ್ಚಾಗಿದೆ. ಅದು ಬಿಟ್ಟರೆ ಬಾಗಲಕೋಟೆಯಲ್ಲಿ 60 ಲಕ್ಷ ರೂಪಾಯಿ. ಈ ಖರ್ಚನ್ನು ಹಳೆಯ ಮೈಸೂರಿನಲ್ಲಿ, ಹಾಗೂ ಕಾರವಾರ ಮುಂತಾದ ಕಡೆಗಳಲ್ಲಿ ಟ್ಯಾರಿಫ್ ರೇಟುಗಳ ಮೂಲಕ ವಸೂಲು ಮಾಡುತ್ತೇವೆಂದು ಹೇಳಿದರೆ ಏನು ಮಾಡುವುದು! ಸೀಲಿಂಗ್ ಲಿಮಿಟ್ ತೀರ್ಮಾನ ಮಾಡುವಾಗ ಜಿಲ್ಲಾವಾರು ಮಿನಿಮಂ ಏಕೆ ಮಾಡಬಾರದು! ಒಂದು ಕಡೆ 30 ಸಾವಿರ ರೂಪಾಯಿ ಖರ್ಚುಮಾಡುತ್ತೀರಿ. ಇನ್ನೊಂದು ಕಡೆ ಒಂದೂವರೆ ಸಾವಿರ ರೂಪಾಯಿ ಖರ್ಚು ಮಾಡುತ್ತೀರಿ. ಎಲ್ಲಿ ಎರಡು ಕಡೆಯೂ ಒಂದೇ ರೀತಿ ಕೊಡಬೇಕೆಂದು ಹೇಳಿದರೆ ಹೇಗೆ! ಇದರಲ್ಲಿ ನೀವು ಇಕ್ವೆಟಿ ಆಫ್ ಜಸ್ಟಿಸ್ ಮಾಡುತ್ತಾ ಇಲ್ಲ. ನಿನ್ನೆ ಮಾನ್ಯ ಮುಖ್ಯ ಮಂತ್ರಿಯವರು ಈ ಖರಿಕೆಯಿಂದ ಕೇವಲ 22 ಲಕ್ಷ ರೂಪಾಯಿ ಚಿಲ್ಲರೆಬರುತ್ತದೆ ಎಂದು ಹೇಳಿದರು. ನೀವು ಮೊಟ್ಟಮೊದಲನೆಯದಾಗಿ ಜನರನ್ನು ರಾಬ್ ಮಾಡುತ್ತಿದ್ದೀರಿ. ನಿಮ್ಮ ಡಿಪಾಸಿಟ್ ಇವತ್ತು 9 ರಿಂದ 95 ಲಕ್ಷ ರೂಪಾಯಿಯಾಗುತ್ತದೆ. ನೀವು ಇವತ್ತು ರೈತರನ್ನು ರಾಬ್ ಮಾಡುತ್ತಿದ್ದೀರಿ. ಐ. ಪಿ. ಸೆಟ್ಸ್‌ಗೆ ಬೆಂಗಳೂರಿನಲ್ಲಿ 18 ಲಕ್ಷ 60 ಸಾವಿರ ಖರ್ಚಾಗಿದೆ. ತುಮಕೂರಿನಲ್ಲಿ ಕೆಲವು ಭಾಗ ಆಗಿದೆ. ಮೈಸೂರಿನಲ್ಲಿ 59 ಲಕ್ಷ ಆಗಿದೆ. ಹಾಸನದಲ್ಲಿ 45 ಲಕ್ಷ, ಗುಲ್ಬರ್ಗ 97 ಲಕ್ಷ, ಹುಬ್ಬಳ್ಳಿಯಲ್ಲಿ 66 ಲಕ್ಷವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಐ ಪಿ ಸೆಟ್ಟುಗಳಿಗೆ ಖರ್ಚಾಗಿರತಕ್ಕಂತದ್ದು ಕೆಲವೇ ಕೆಲವು ಡಿವಿಜನ್ನುಗಳಿಗೆ. ಮುಖ್ಯಮಂತ್ರಿಯವರ ಹೆವೆರಿಟ್ ಆದ ಕೆಲವು ಜಿಲ್ಲೆಗಳಿಗೆ, ಕೆಲವು ಜನರಿಗೋಸ್ಕರ ಯು ವಾಂಟ್ ಟು ಪೀನಲ್ಟೈಸ್ ದಿ ಓರ್ ಸ್ಟೇಟ್. ಇದರಿಂದಾಗುವ ಪರಿಣಾಮಕ್ಕೆ ನೀವೇ ಹೊಣೆ. ನಾನು ಒಂದು ಸೂಚನೆಯನ್ನು ಇಲ್ಲಿ ಕೊಡುತ್ತೇನೆ. ನಿಮಗೆ ಏನಾದರೂ ಸೀಲಿಂಗ್ ಲಿಮಿಟ್ ವರ್ಕ್ ಔಟ್ ಆಗುವುದಿಲ್ಲ ಎಂದಿದ್ದರೆ ಮಂಡಲಿಯವರಿಗೆ ಅಧಿಕಾರ ಕೊಡಿ. ಜಿಲ್ಲಾವಾರು ಮಾತ್ರ ವಸೂಲು ಮಾಡಿ. ಹಾಸನ ಜಿಲ್ಲೆಗೆ ಬೇರೆ ಫಿಕ್ಸ್ ಮಾಡಿ, ಗುಲ್ಬರ್ಗಕ್ಕೆ ಬೇರೆ ಮಾಡಿ. ಎಲ್ಲಾ ಕಡೆಯೂ ಒಂದೇ ತರನಾಗಿ

(ಶ್ರೀ ಎಚ್. ಎನ್. ನಂಜೇಗೌಡ)

ಮಾಡಬೇಡಿ. ಒಂದು ಕಡೆ ಜಾಸ್ತಿ ಖರ್ಚುಮಾಡಿ ಇನ್ನೊಂದು ಕಡೆ ಅದನ್ನು ವಸೂಲು ಮಾಡುವುದಕ್ಕೆ ಹೊರಟರೆ ಹೇಗೆ!

(MR. DEPUTY SPEAKER in the Chair)

ಇನ್ನು 10 ಪೈಸೆ ದರ ಇಟ್ಟಿರತಕ್ಕದ್ದು ಒಂದು ಮಹಾ ಮೋಸವೆಂದು ಹೇಳುತ್ತೀನೆ. ಇವತ್ತು ಇರತಕ್ಕಂತಹ ಪಾಪ್‌ಸೆಟ್ಟುಗಳು ಒಟ್ಟು ಒಂದು ಲಕ್ಷ ಎಂದು ಇಟ್ಟುಕೊಳ್ಳೋಣ. ಇದರಲ್ಲಿ ಪೆನಿನ್ಸುಲರ್ ಸಪ್ಲೈ ಮಾಡುವಂತದ್ದು 36 ಸಾವಿರ ಇರಬಹುದು. ಇವರಿಗೆ 48 ರೂಪಾಯಿ ಮಿನಿಮಂ ಮಾಡಿದರೂ ಕೂಡ ವರ್ಕ್ ಔಟ್ ಆಗುತ್ತದೆ, ಏಕೆಂದರೆ, ಹರಿಯುವ ನೀರು ಇರುತ್ತದೆ. ಆದರೆ ಉಳಿದ ಭಾಗಗಳಲ್ಲಿ ಹಾಗಲ್ಲ. ಉಳಿದ 70 ಸಾವಿರ ಪಂಪ್‌ಸೆಟ್ಟುಗಳಿಗೆ 6 ತಿಂಗಳು ನೀರು ಇದ್ದರೆ, 6 ತಿಂಗಳು ನೀರು ಇರುವುದಿಲ್ಲ. ಆದರಲ್ಲೂ ದಿನಕ್ಕೆ ಕೆಲವು ಸಮಯ ಒಂದು ಗಂಟೆಗಿಂತ ಹೆಚ್ಚು ಓಡಿಸುವುದಕ್ಕಾಗುವುದಿಲ್ಲ. ಏಕೆಂದರೆ ನೀರೇ ಇಲ್ಲ. ಇವತ್ತು ನೀವು ಇಟ್ಟಂತ ರೇಟು ಸರಿಯಾದುದಲ್ಲ. ಹಳೆಯ ರೇಟ್ ಪ್ರಕಾರ ಯೂನಿಟ್‌ಗೆ 12 ಪೈಸೆ ಬೀಳುತ್ತದೆ. ನ್ಯೂ ರೂಲ್ಸ್ ಪ್ರಕಾರ ಒಂದು ಯೂನಿಟ್‌ಗೆ 24 ಪೈಸೆ ಬರುತ್ತದೆ. ನೀವು ಪೆರೆನಿಯರ್ ಸಪ್ಲೈಸ್‌ಗೆ 10 ಪೈಸೆ ಇಡಿ.

ಇನ್ನು ಕೆಲವು ಪ್ರೊಜೆಕ್ಟುಗಳನ್ನು ನೀವು ಇಟ್ಟುಕೊಂಡಿದ್ದೀರಿ. ಯಾವುದು ರೆಮುನರೇಟಿವ್ ಇದೆಯೋ ಅದನ್ನು ನೀವು ಇಟ್ಟುಕೊಂಡಿದ್ದೀರಿ, ನೀವು ಶರಾವತಿಯಲ್ಲಿ ಕಾಸ್ಟ್ ಆಫ್ ಪ್ರೊಡಕ್ಷನ್ ಎಷ್ಟು ಎಂದು ಕೇಳಿದರೆ ಹೇಳುವುದಿಲ್ಲ. ಶರಾವತಿಯಲ್ಲಿ 0·98 ಪೈಸೆ. ಡ್ಯಾಟ್ ಈಸ್ ದಿ ಕರೆಕ್ಟ್ ಅಕೌಂಟ್‌ಮೆಂಟ್ ಆಫ್ ದಿ ಕಾಸ್ಟ್ ಆಫ್ ಪ್ರೊಡಕ್ಷನ್. ಮುನಿರಾಬಾದಿನಲ್ಲಿ 5. 28 ಪೈಸೆ. ಇದು ಬಾರಿ ಅನ್‌ರೆಮುನರೇಟಿವ್.

ಎಚ್. ಇ. ಸಿ. ಪಿ ಯನ್ನು ಎಂ.ಎಸ್.ಇ.ಬಿ. ಗೆ ಕೊಟ್ಟಿದ್ದಾರೆ. ಒಂದು ಯೂನಿಟ್ಟಿಗೆ ಕಾಸ್ಟ್ ಆಫ್ ಪ್ರೊಡಕ್ಷನ್ 5.28 ಪೈಸಾ ಬೀಳುತ್ತದೆ. ಅನ್ ರೆಮ್ಯುನರೇಟೀವ್ ಆದ ಮುನಿರಾಬಾದಿನ ಪವರ್ ಪ್ರಾಜೆಕ್ಟ್ ಅನ್ನೂ ಎಂ.ಎಸ್.ಇ.ಬಿ.ಗೆ ಕೊಟ್ಟಿದ್ದಾರೆ. ಒಂದು ಯೂನಿಟ್ಟಿಗೆ ಕಾಸ್ಟ್ ಆಫ್ ಪ್ರೊಡಕ್ಷನ್ ·98 ಪೈಸಾ ಬೀಳತಕ್ಕಂಥ ಶರಾವತಿಯನ್ನು ಸರ್ಕಾರದವರೇ ಇಟ್ಟುಕೊಂಡಿದ್ದಾರೆ. ಶರಾವತಿಯಲ್ಲಿ ಉತ್ಪತ್ತಿಯಾಗತಕ್ಕಂಥ ವಿದ್ಯುಚ್ಛಕ್ತಿಯನ್ನು ಸರ್ಕಾರದವರು ಬೋರ್ಡಿಗೆ ಒಂದು ಯೂನಿಟ್ಟಿಗೆ 4·ರ ಪೈಸೆಯಂತೆ ಕೊಡುತ್ತಾರೆ. ಈ ವಿದ್ಯುಚ್ಛಕ್ತಿಯ ಡಿಸ್ಟ್ರಿಬ್ಯೂಷನ್ ಮತ್ತು ಮೇಂಟೆನೆನ್ಸ್‌ಗೆ ಸಂಬಂಧಪಟ್ಟಹಾಗೆ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಬರತಕ್ಕಂಥ ಸಬ್ಸಿಡಿ ಎಷ್ಟು ಕೋಟಿ ರೂಪಾಯಿಗಳನ್ನು ಗುಲ್ಬರ್ಗ, ಹುಬ್ಬಳ್ಳಿ ಮತ್ತು ಬೆಳಗಾಂ ಡಿವಿಜನ್ನಿಗೆ ನೀವು ಡೈವರ್ಟ್ ಮಾಡುತ್ತೀರಿ. ಈ ರೀತಿ ಮಾಡಿದರೆ ಎಂ. ಎಸ್. ಇ. ಬಿ. ಯಾವರೀತಿ ಕೆಲಸಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಸರ್ಕಾರದವರನ್ನು ಪ್ರಶ್ನೆ ಮಾಡುತ್ತೀನೆ.

5.00 P. M.

ಇದರ ಜೊತೆಗೆ ಒಂದು ಅಗ್ರಿಮೆಂಟ್ ಮಾಡಿ ಸೇರಿಸಿದ್ದಾರೆ. ಅದು ಏನೆಂದರೆ ವರ್ಲ್ಡ್ ಬ್ಯಾಂಕಿನ ಅಗ್ರಿಮೆಂಟ್ ಪ್ರಕಾರ 11 ಪರ್ಸೆಂಟ್ ರೆವಿನ್ಯೂ ರಿಟರ್ನ್ ಬರಬೇಕೆಂದು ಹೇಳಿದ್ದಾರೆ. 11 ಪರ್ಸೆಂಟ್ ರೆವಿನ್ಯೂ ರಿಟರ್ನ್ ಬರಬೇಕಾದರೆ ಯಾವ ಮಾಯಾ ಮಂತ್ರ ಮಾಡಬೇಕೋ ನನಗೆ ಗೊತ್ತಿಲ್ಲ. ಈ ರೀತಿಯಾದ ಸಹಾಯ ಸೌಲಭ್ಯವನ್ನು ಸರ್ಕಾರದವರು ಎಂ.ಎಸ್.ಇ.ಬಿ.ಗೆ ಕೊಟ್ಟಿದ್ದಾರೆ. ಆಕ್ಟ್ ಪ್ರಕಾರ 30 ಕೋಟಿ ರೂಪಾಯಿಗಳಿಗಿಂತ ಮೇಲ್ಪಟ್ಟು ಎಂ.ಎಸ್.ಇ.ಬಿ. ಯವರು ಸಾಲ ಮಾಡುವುದಕ್ಕೆ ಅವಕಾಶ ಇಲ್ಲ. ಸರ್ಕಾರಕ್ಕೆ ಮರುಪಾವತಿ ಮಾಡಬೇಕಾದ ಸಾಲವನ್ನು ಯಾವರೀತಿ ಮಾಡುತ್ತಾರೆ ಎಂದರೆ ಸಾಲ ತಂದದ್ದನ್ನು ಮರುಪಾವತಿ ಮಾಡಿದಂತೆ ತೋರಿಸಿ, ಬುಕ್ ಅಡ್ಜಸ್ಟ್‌ಮೆಂಟ್ ಮಾಡಿ, ಅದನ್ನು ಪುನಃ ಸಾಲ ಎಂದು ಟ್ರೀಟ್ ಮಾಡುತ್ತಾರೆ. ಈ ರೀತಿಯಿಂದ ಎಲೆಕ್ಟ್ರಿಸಿಟಿ ಬೋರ್ಡಿಗೆ 39 ಕೋಟಿ ರೂಪಾಯಿಗಳ ಸಾಲವಾಗಿದೆ. ಆದ್ದರಿಂದ ಇದನ್ನೆಲ್ಲಾ ನಿರಿದೂಗಿಸಬೇಕಾದರೆ, ನಿರ್ವಹಿಸಬೇಕಾದರೆ ನಾನೊಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಶರಾವತಿಯಿಂದ ಹಿಡಿದು ಪ್ರೊಡಕ್ಷನ್ ಮತ್ತು ಇನ್‌ವೆಸ್ಟಿಗೇಷನ್ನಿಗೆ ಸಂಬಂಧಪಟ್ಟ ಎಚ್. ಇ. ಸಿ. ಪಿ. ಇಲಾಖೆಯನ್ನು ಅಬಾಲಿಷ್ ಮಾಡಿ ಆ ಕೆಲಸವನ್ನು ಬೋರ್ಡಿಗೆ ವಹಿಸಿ. ನಾನ್ ರೆಮ್ಯುನರೇಟೀವ್ ಆದ ಮುನಿರಾಬಾದ್ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟನ್ನು ಎಲೆಕ್ಟ್ರಿಸಿಟಿ

ಬೋರ್ಡಿಗೆ ಏತಕ್ಕೆ ಮಹಿಸಬೇಕು. ಅದನ್ನು ಸರ್ಕಾರವೇ ಇಟ್ಟುಕೊಂಡು ನಡೆಸಲಿ. ಏತಕ್ಕೆಂದರೆ ಆದರಲ್ಲಿ ಕಾನ್ಸ್ಟ್ರಕ್ಷನ್ ಒಂದು ಯೂನಿಟ್ಟಿಗೆ 5·28 ಪೈಸಾ ಬೀಳುತ್ತದೆ. ಬೋರ್ಡಿನವರು ಶರಾವತಿಯ ವಿದ್ಯುಚ್ಛಕ್ತಿಯನ್ನು 4·8 ಪೈಸಾದಂತೆ ಕೊಂಡುಕೊಳ್ಳುವುದರಿಂದ ಬೋರ್ಡಿನವರಿಗೆ ರೇಟು ಹಾಸ್ಟಿಯಾಗುತ್ತದೆ. ಈಗ ಕೈಗಾರಿಕೆಗಳಿಗೆ ಕಡಿಮೆ ದರವಲ್ಲಿ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದಾರೆ. ಅದೇರೀತಿ ವ್ಯವಸಾಯವನ್ನೂ ಒಂದು ಕೈಗಾರಿಕೆ ಎಂದು ಏತಕ್ಕೆ ಭಾವನೆ ಮಾಡುವುದಿಲ್ಲ? ಮುಖ್ಯ ಮಂತ್ರಿಗಳು ಕೆಲವು ಜಿಲ್ಲೆಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಹೆಚ್ಚು ಹಣವನ್ನು ಕೊಟ್ಟಿದ್ದಾರೆ. ಇದು ಸರಿಯಲ್ಲ. ಇನ್ನುಮುಂದೆ ಆ ರೀತಿ ತಮಗೆ ಬೇಕಾದ ಜಿಲ್ಲೆಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡುವಂಥಾದ್ದನ್ನು ಕೈ ಬಿಡಬೇಕು ಎಂದು ನಾನು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ರಿಪೋರ್ಟಿನಲ್ಲಿ ಈ ಎಲೆಕ್ಟ್ರಿಸಿಟಿ ಬೋರ್ಡಿಗೆ ಸಂಬಂಧಪಟ್ಟ ಹಾಗೆ, ನಮ್ಮಾರು 18 ಲಕ್ಷ 64 ಸಾವಿರ ರೂಪಾಯಿಗಳು ದುರುಪಯೋಗವಾಗಿರುವುದನ್ನು ಬರೆದಿದ್ದಾರೆ. ಒಂದು ಕಂಟ್ರಾಕ್ಟ್ ಕೊಟ್ಟ ವ್ಯವಹಾರದಲ್ಲಿ 10 ಲಕ್ಷ 90 ಸಾವಿರ ರೂಪಾಯಿಗಳು ದುರುಪಯೋಗವಾಗಿರುವ ಬಗ್ಗೆ ಗಂಭೀರವಾದ ಆಪಾದನೆಗಳನ್ನು ವ್ಯಕ್ತಪಡಿಸಿ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯಲ್ಲಿ ನಮೂದಿಸಿದ್ದಾರೆ. ಅದು ಈ ರೀತಿ ಇದೆ. The Audit paragraph cites 6 cases of extra expenditure totalling Rs. 10.90 lakhs incurred by the Board on the purchase of equipments like diesel power generating sets, transformers, cables, insulators, etc. In most of the cases, the extra expenditure had to be incurred because of the delay in finalisation of tender quotations and failure to place orders within the period of validitly of offers made by the firms. The delay helped the firms either to increase their rates or to back out of their offers leaving no choice to the Board but to effect the purchases at higher rates ಎಂದು ಹೇಳಿದ್ದಾರೆ. ಇದರಲ್ಲಿ ಯಾರು ಯಾರೋ ಸೇರಿಕೊಂಡು ವ್ಯವಹಾರಗಳನ್ನು ಮಾಡಿದ್ದಾರೆ. ಕಂಟ್ರಾಕ್ಟರ ಜೊತೆಯಲ್ಲಿ ಸೇರಿಕೊಂಡು ಈ ರೀತಿ ವ್ಯವಹಾರ ಮಾಡಿದ್ದಾರೆ. ಈ ವಿಚಾರವಲ್ಲಿ ಅನುಮಾನಪಡುವುದಕ್ಕೆ ಅವಕಾಶ ಇವೆ. ಈ ಬಗ್ಗೆ ವಿಚಾರಣೆಯಾಗಬೇಕು ಎಂದು ನಾನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನೊಂದು ಮಾತು ಹೇಳುತ್ತೇನೆ. ಇವೊತ್ತು ಈ ರೀತಿ ಇವರು ವಿದ್ಯುಚ್ಛಕ್ತಿಯನ್ನು ಉಪಯೋಗಿಸತಕ್ಕಂಥ ಜನಗಳಮೇಲೆ ಹೆಚ್ಚಿನ ದರವನ್ನು ವಿಧಿಸತಕ್ಕದ್ದು ಸರಿಯಲ್ಲ ಎಂದು ನಾನು ಹೇಳುತ್ತೇನೆ. ಕನ್ಸ್ಯೂಮರ್ಸ್ ಮೇಲೆ ಹೆಚ್ಚಿನ ಹೊರೆಯನ್ನು ಹಾಕತಕ್ಕದ್ದು ನೈತಿಕದೃಷ್ಟಿಯಿಂದ ನ್ಯಾಯವಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಸರ್ಕಾರದವರು ಮತ್ತು ಎಲೆಕ್ಟ್ರಿಸಿಟಿ ಬೋರ್ಡಿನವರು 20 ಸಾವಿರ ಪಂಪುಸೆಟ್ಟುಗಳಿಗೆ ಸರ್ವಿಸ್ ಕೊಡಬೇಕೆಂದು ಏನು ಪ್ರೋಗ್ರಾಂ ಹಾಕಿಕೊಂಡಿದ್ದಾರೆಯೋ ಇದನ್ನು ಸರಿಯಾಗಿ ಕಾರ್ಯಗತ ಮಾಡುತ್ತಾರೆಯೇ ಹೇಗೆ ಎಂಬುದರ ಬಗ್ಗೆ ನನಗೆ ಉತ್ತರ ಕೊಡಬೇಕು. ಕೇಂದ್ರ ಸರ್ಕಾರದಿಂದ ಎಲೆಕ್ಟ್ರಿಸಿಟಿ ಡಿಸ್ಟ್ರಿಬ್ಯೂಷನ್ ಮತ್ತು ಮೇಂಟೆನೆನ್ಸ್‌ಗೆ ಸಂಬಂಧಪಟ್ಟಹಾಗೆ ನಮ್ಮ ರಾಜ್ಯ ಸರ್ಕಾರಕ್ಕೆ ಏನು ಸಬ್ಸಿಡಿ ಬರುತ್ತದೆಯೋ ಅದನ್ನು ಬೋರ್ಡಿಗೆ ಕೊಡದೇ ಗುಲ್ಬರ್ಗ, ಧಾರವಾಡ ಮತ್ತು ಬೆಳಗಾಂ ಈ ಮೂರು ಜಿಲ್ಲೆಗೆ ಮಾತ್ರ ಸರ್ಕಾರದವರು ನೇರವಾಗಿ ಖರ್ಚು ಮಾಡುತ್ತಿದ್ದಾರೆ. ಇದು ಸರಿಯೇ?

ಶ್ರೀ ವಿ. ಎನ್. ಪಾಟೀಲ್.—ಒಂದೆರಡು ಜಿಲ್ಲೆಗಳು ಮಾತ್ರವಲ್ಲ, ಅನೇಕ ಜಿಲ್ಲೆಗಳಿಗೆ ತಾರತಮ್ಯ ಮಾಡಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಹೌದು, ತಾವು ಕಮ್ಯುನಿಸ್ಟ್ ಪಾರ್ಟಿಯವರಾದ್ದರಿಂದ ತಮ್ಮ ಜಿಲ್ಲೆಗೂ ಕೂಡ ತಾರತಮ್ಯ ಮಾಡಿರಬಹುದು. ಆದ್ದರಿಂದ ವಿದ್ಯುಚ್ಛಕ್ತಿ ಬೋರ್ಡಿನ ಅಧ್ಯಕ್ಷರು ಮುಚ್ಚುಮರೆ ಇಲ್ಲದಂಥ ಮತ್ತೊಂದು ಶ್ವೇತಪತ್ರವನ್ನು ಪ್ರಕಟಣೆಯನ್ನು ಕೊಡಬೇಕು. ಮತ್ತು ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಹೇಳಿಕೆ ಕೊಡಬೇಕು. I request the Electricity Board to rectify the mistakes they have committed. I do not care if the Government were to abolish the Board. ಅವರ ಕೈಯಲ್ಲಿ ನಡೆಸುವುದಕ್ಕಾಗದಿದ್ದರೆ ಸರ್ಕಾರಕ್ಕೆ ವಹಿಸಿಬಿಡಲಿ. ಮುಖ್ಯವಾಗಿ ನಾನು ಕೇಳಿಕೊಳ್ಳುವುದು ಏನೆಂದರೆ ಈಗ ಇರತಕ್ಕಂಥ ವಿದ್ಯುಚ್ಛಕ್ತಿಯನ್ನು ಬೋರ್ಡಿನ ಅಧ್ಯಕ್ಷರು ಸಾರ್ವಜನಿಕರ ಗಮನಕ್ಕೆ ತಂದು

(ಶ್ರೀ ಎಚ್. ಎನ್. ನಂಜೇಗೌಡ)

ಬೋರ್ಡಿನವರ ಕಷ್ಟಸುಖಗಳನ್ನು ತಿಳಿಸಬೇಕು. ಇಷ್ಟು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†Sri R. G. WALI (Hubli).—Mr. Speaker, while considering the Annual Financial Statement of the Mysore State Electricity Board, I wish to place the following observations before the House.

Our State which is supposed to be producing large quantity of electricity and which has taken up bigger Projects, has to see that electricity supplied to the consumer, whether he is an agriculturist or industrialist or common man, is supplied at a reasonable rate, if possible cheaper than in other parts of the country. We know our neighbouring State, in spite of many difficulties they are facing, in spite of non-availability of natural resources which we have got in our State, in spite of many inconveniences, has been able to provide larger number of electric pumpsets, electrify more number of villages in that State. Their progress in this direction is not comparable to our State. We feel that in spite of our resources we have not been able to fullfil the desires of the people. It is an agreed fact that rural electrification and irrigation pumsets should be given top priority in order to increase agricultural production and to see that our country more particularly our State becomes self-sufficient in food. We have to see that pumpsets are provided to the ryots as quickly as possible and at as cheap a rate as possible. Similarly every village in the State should be electrified. There cannot be any dispute and nobody can say that a particular village should not be electrified and a particular villlage should be electrified. Everyone has the right to demand that villages should be electrified. Every village must have power and everyone has the right to demand power. Rural electrification must be taken up and power supplied to as many irrigation pumpsets as possible. This must be done on a top priority basis.

In our State there are a number of villages not developed. They do not have electricity and it is, therefore, necessary to see that they are electrified. When villages around Bangalore can have electricity, why should not the people in other parts of the State have the same benefits. We must struggle hard to see that all people have electricity. In order to achieve this, the Government must give priority and see that finances are made available to all these projects. Today the mind of everyone of the agriculturists in the village is much agitated, because there is a proposal, and already a decision has been taken, to increase the minimum charges and also a proposal to increase the rates. If that is the case, I want to bring to the notice of the Mysore State Electricity Board and the Government that it is not proper to increase the minimum charges because the agriculturists will be hit hard to pay that money. There are a number of reasons to show why he feels very hard to pay that money. The first thing is, they do not have water in the well and when they do not get water throughout the year

why should they pay throughout the year? During rainy seasons they may not utilise the water. As it is an agreed policy that agriculture should develop and irrigation facilities should be provided, it is necessary that power is supplied at cheap rates and the for that the Electricity Board should fix lowest rates. While ruggesting this, I want to request the Government to take up th se projects as special projects or subsidised projects. Unless they are taken as subsidised projects, it may not be possible to make much hea.way. The Electricity Board is a statutory body appointed by the Government and they have to work on commercial lines. But, I say it is a public utility concern and it is necessary that it should work on no profit no loss basis. Firstly when such proj.cts are entrusted to the Board it is necessary that the Government should subsidise this extra expenditure. I am sure the Central Government also is giving some subsidy for developing these programmes, and that fund also can be used to subsidise the loss that may be incurred by the Board. I am sure the Board cannot incur loss in the case of other consumers like industries, household connections or any other entertainments, cinema houses, etc. They have fixed the rates considering all aspects and the Tariff Committee is meeting very often and many times they are revising the rates taking into consideration various factors to see that the Board works under no loss. When such is the case, and when a lot of profit is made I am sure some money out of it can be utilised for subsidising agricultural pumpsets. Until and unless Government takes a serious view of rural electrification programme for supplying electrical energy for irrigation pumpsets and treats them as subsidised projects, it may not be possible to d. velop the State. The common man in the villages has the right to agitate for th s and we have to see that they prosper well. If the villages prosper, everyone will prosper, the industry will also prosper.

Secondly, while considering the financial report of the Board I have to point out some of the defects. There are leakages and they have to be stopped. Unless it is done, it is not possible to get full utility. Whatever energy that is produced must be utilised fully. There are a number of villages where they say that rural electrification programme has been taken up, but unfortunately the fuse is not fixed for months together. This must not be the case. It must be run on commercial basis. They must see that electricity is supplied and there is return as quickly as possible. Even in the case of household units, they are not giving current soon and the people have to wait for months together. They must see that within 24 hours electric energy is supplied. It is much more difficult in the case of irrigation pump sets. The ryot goes to the bank, and gets the pumpset on loan, he has to pay interest every day. There are instances where the ryot has waited for months together, only because the fuse is not given. Why should these fuses be withheld by the authority concerned?

Sri M. MALLIKARJUNASWAMY (Malavalli).—That is due to the lack of co-ordination between the hydro-electric project and the M.S.E.B.

Sri R. G. WALI.—I do not think there is any quarrel between these two departments, because they are departments of the Government. It is our duty as people's representatives to see that proper supplies are made without any difficulty any that service is given without the least resistance. That should be the motto in this public utility concern. I suggest that the M.S.E.B. should take immediate action and see that electric energy is supplied as quickly as possible.

There are a number of complaints that have been brought to your kind notice, Sir, during the speeches. I suggest that these complaints have to be attended to and for that purpose I suggest that at each divisional headquarter there should be committees where they can get the advice of the public as to whether there is any defect, whether some people are harassing the consumers, what difficulties are there and so on and so forth. They can go into those matters, and see that the difficulties of the public are removed. This is one of the essential things which I think the M.S.E.B. should consider.

I have one suggestion as regards leakage. The M.S.E.B. is distributing energies to various cities. These are bulk consumers. I want to know whether there is record of the consumption by each village, each town or each city. They have to maintain the record of electricity consumption by each city, town or villages by fixing meters. When we supply electricity to the private distributors, we have got a metering system. We know how many kilo watts are consumed by private agency. So, I suggest that the M.S.E B. should have metering system for each village, each town and each city and see that the total consumption of all these villages, cities and towns is equal to the electricity supplied by the main source. This is one of the ways of removing leakage.

There are a number of complaints regarding misuse of power by various people and that also gives scope for the lower staff to plav some mischief. Without proper metering electricity is consumed or they do not want to take meter reading. All these things will lead to mischief that should be avoided.

Finally, I would like to point out that there is lot of mischief or dishonesty in respect of stores and materials. Many a time stocks are not maintained properly and there is leakage. It is necessary that this leakage should be stopped.

So, top priority must be given to agriculture and every village must be electrified. Every ryot must get electricity for irrigation purpose to produce more. The M.S.E.B. should supply power at concessional rate to the ryots. These two projects should be subsidised and the difficulties I have pointed out must be removed as quickly as possible.

With these few words, I request that this Annual Report may be accepted.

† Sri P. B. NANDIHALI (Uchagaon).—Sir, I wish to offer my remarks on the Annual Financial Statement of the Electricity Board for

the year 1969-70. Hon. Members on both sides have criticised the Chairman and officials of the Electricity Board bitterly.

In the first instance, I want to ask the Hon. Minister in charge whether Government have got any policy for the uplift of the common people and for the progress of the farmers, whether they are practising socialism, and whether they have got some special consideration for the poor people who have been in the dark valley of poverty for centuries together. If their problem is solved, this criticism will stop immediately from both sides. I am very glad to hear the criticism from the Members of the Ruling Party. Of course, this is welcome in the age of conscience and the age of revolt. They have shared much of the views of the Members on this side and that is a very good thing. If the problem is solved at the level of policy making, there will be no scope for this criticism. Either the Government should have full control over the board or if they have no control, they should abolish it within twenty-four hours and take over direct control. If this problem is not solved, the difficulties will go on increasing day by day. I oppose the policy of the Board and the order which they have issued for enhancing the power tariff; it is a great injustice.

We are complaining about the rate fixed in 1966. We were saying that that rate itself was high. If one sees what is actually happening, one can understand that pumpsets are not used for all the 12 months of the year. In the rainy season the farmers do not use the pumpsets for 5 to 6 months and in summer becau e they have no money to deepen their wells and because they have no water in their wells, they cannot use the pumpsets for one or two months and yet they are forced to pay the minimum charges for all the 12 months. The Board did not consider this difficulty of the farmers, but, on the contrary, they increased the minimum rate from Rs. 2 per Hp. to Rs. 4 per Hp. This is a great injustice done to the farmers and it should be set right immediately. Otherwise we are listening to threats of agitation throughout the State. I request the Government and the Board to take immediate action in this matter to stop the recovery of the enhanced rate and to collect only at the old rate.

5-30 P.M.

It is said that the Board has enhanced the rate because it is incurring great loss and so the Government has sanctioned this increase in the rate. I would say that the Government must go into the details and find out why the Board is incurring losses and also find out whether throwing this burden on the poor peasants is the only alternative to avoid this loss. This increase must be immediately withdrawn and the burden on the poor farmers must be lessened.

In this connection I wish to state here some of my bitter experiences. During the last session the Minister called a meeting of districtwise members and we felt very happy in the first instance at the organising capacity of the Minister. At this

(SRI P. B. NANDIHALI)

meeting we gave our proposals to the Minister and the Minister assured us to give top priority to our proposals, but the unfortunate experience of myself and my colleagues from my district is that out of the proposals submitted by us, not even a single village has been selected for electrification this year. On the assurance of the Minister we gave in turn our assurance to the villagers that the Minister has given us a promise to electrify their villages as per our proposals and they were all expecting that their villages would be electrified. Now it is very difficult for us to convince the people. This shows that the Minister has no control over the Board or the Board is going on its own way and not caring for the Minister. We have given so many representations and proposals. The Board and the Government must consider our proposals very seriously or they should not consult the members and they should go their own way. In that case the people also would go their own way and the Government would have to face the consequences. If this is their attitude it would be very difficult for the authorities to sanction the electrification of villages.

Even the villages which are electrified are facing so many difficulties which must be removed forthwith. When the villagers heard the speeches made at the time of the inauguration of electrification of their villages, they sold their oil engines immediately and ran to banks or moneylenders or sold their properties and got money and installed pumpsets in their wells, but unfortunately their experience is that most of them are not getting electricity. Last year the crops so many villages of Belgaum taluka failed only because the Board failed to give them electrifity in time. The village of Belgundi fulfilled all the conditions of the Board and the Government by paying the required amount, but unfortunately they could not get the line in time and so they had to suffer last year. These things should be set right forthwith.

The Board has also miserably failed to give proper service and guidance to the farmers. In fact, in these days of democratic set-up all facilities must go to the doors of the farmers if we want to make our Grow More Food campaign a success. Unfortunately, our experience is quite the contrary and the farmers have to go off and on to the office of the Board. They are ill-treated there and so they come back disappointed. There is no encouragement given to them.

In this connection I wish to suggest that the old procedure of collecting the minimum charge at the end of the year should be restored and the new procedure of collecting the same particularly when the rate has been doubled, should be given up as it is causing great hardship to the farmers. They do not have any cash with them except during harvest time. A farmer is born in debt and he dies in debt and the Government does not do anything to solve his problems. He is not in a position to pay the minimum charges every month. This is one difficulty.

Another difficulty is that the farmer has to go every month to the Office to pay the amount and much of his time is wasted which he can better utilize in his field. So this procedure of collecting the minimum charge every month should be changed forthwith.

As I find that the Hon. Minister is listening to the criticisms and the suggestions made by Hon. Members, I hope he will take some progressive steps and try to remove all the difficulties immediately.

† ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-2).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದಿರುವ ವಿದ್ಯುತ್ ಮಂಡಲ ಬಜೆಟ್ಟನ್ನು ಕುರಿತು ಕೆಲವು ಮಾತುಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದ ರೈತರಿಗೆ ವಿದ್ಯುತ್ ಬಳಕೆಯಲ್ಲಿ ವಿಶೇಷ ಅನುಕೂಲವಾಗಬೇಕಾಗಿತ್ತು. ಕರ್ನಾಟಕ ಭಾಗಗಳು ಮೈಸೂರು ರಾಜ್ಯಕ್ಕೆ ಸೇರಿದ ಮೇಲೆ ವಿದ್ಯುತ್ತಿನ ಬಗ್ಗೆ ಬಹಳ ಅನುಕೂಲವಾಗ ಬಹುದೆಂಬ ಭಾವನೆ ಇತ್ತು. ಶರಾವತಿ ಇರುವ ರಾಜ್ಯದಲ್ಲಿ ವಿದ್ಯುತ್ ಬೇಕಾದಷ್ಟಿದೆ ಎಂಬ ಭಾವನೆ ಇತ್ತು. ಗಂಧದ ನಾಡು, ಚಿನ್ನದ ನಾಡು, ವಿದ್ಯುತ್‌ನಾಡು ಮೈಸೂರು ಎಂದು ಕವಿಗಳು ಹಾಡಿ ದ್ದಾರೆ. ಇಂಥ ರಾಜ್ಯದಲ್ಲಿ ಇಂದು ವಿದ್ಯುತ್ ಬೇಕಾದಷ್ಟು ಸಿಕ್ಕಬೇಕು, ಉಪಯೋಗವಾಗಬೇಕು ಅದರ ಸಹಾಯ ಪಡೆದು ಉತ್ಪತ್ತಿ ಹೆಚ್ಚಬೇಕು ಎಂಬುದು ಸಿದ್ಧಾಂತ. ಆದರೆ ವಿದ್ಯುತ್ತನ್ನು ನಮ್ಮ ರೈತರಿಗೆ ಬಳಸುವುದಕ್ಕೆ ಕೊಡುವುದನ್ನು ಬಿಟ್ಟು ಮದ್ರಾಸು, ಮಹಾರಾಷ್ಟ್ರ ಮತ್ತು ಆಂಧ್ರ ರಾಜ್ಯಗಳಿಗೆ ಕೊಡುವುದಕ್ಕೆ ಯೋಜನೆ ಮಾಡಿದ್ದಾರೆ. ಇದು ಸರಿಯಲ್ಲ. ಲಾಭದ ದೃಷ್ಟಿಯಿಂದ ಹೀಗೆ ಕೊಟ್ಟರೂ ದೇಶದಲ್ಲಿರುವ ಶೇಕಡ 75 ಭಾಗ ರೈತರ ಉದ್ಧಾರಕ್ಕೆ ಹೆಚ್ಚು ಗಮನ ಕೊಡ ಬೇಕಾದ್ದು ಅತಿ ಮುಖ್ಯವಾದುದು. ಮಹಾತ್ಮ ಗಾಂಧಿಯವರು ಇದನ್ನೇ ಹೇಳಿದ್ದಾರೆಂದು ಗೊತ್ತಿದೆ. ಈ ದೇಶದಲ್ಲರುವ ಏಳೂವರೆ ಲಕ್ಷ ಹಳ್ಳಿಗಳಲ್ಲಿರುವವರ ಉದ್ಧಾರವಾಗಬೇಕು ಎಂದು ಅವರು ಹರಿಜನ್ ಎಂಬ ಪತ್ರಿಕೆಯಲ್ಲೂ ಬರೆದು ಭಾಷಣದಲ್ಲೂ ಹೇಳಿದ್ದರು. ಏಳೂವರೆ ಲಕ್ಷ ಹಳ್ಳಿಗಳಲ್ಲಿರುವರ ರೈತರ ಉದ್ಧಾರ, ಏಳಿಗೆ ಆಗದಿದ್ದರೆ ದೇಶಕ್ಕೆ ಸ್ವಾತಂತ್ರ್ಯ ಬಂದರೂ ಪ್ರಯೋಜನವಿಲ್ಲ ಎಂದು ಅವರು ಹೇಳಿದ್ದಾರೆ. ಇದನ್ನು ತಿಳಿದು ಇದೇ ಪರಂಪರೆಯಲ್ಲಿ ಬೆಳೆದು ಇರುವ ನಾವು ರೈತರ ಬಗ್ಗೆ ಹೆಚ್ಚು ಗಮನ ಕೊಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ ನಾವು ಹೊರ ದೇಶದವರನ್ನು ಆಹಾರಕ್ಕಾಗಿ ಅವಲಂಬಿಸಿದ್ದೇವೆ, ಅಮೆರಿಕ ಮತ್ತಿತರ ದೇಶಗಳಿಂದ ಆಹಾರ ಧಾನ್ಯಗಳು ಬಂದರೆ ಮಾತ್ರ ಜನರನ್ನು ರಕ್ಷಣೆ ಮಾಡಲು ಸಾಧ್ಯ ಎಂಬ ಭಾವನೆಯಿದೆ. ಹೊರ ದೇಶದಿಂದ ಆಹಾರ ತಂದು ಅಭಾವ ನೀಗಬೇಕಾದ ಕಾಲ ಬಂದಿದೆ. ಇದನ್ನು ನೀಗಿಸಿ ಸ್ವಾವಲಂಬಿ ಯಾಗಬೇಕು ಆಹಾರ ಮತ್ತಿತರ ಪದಾರ್ಥಗಳನ್ನು ಹೆಚ್ಚಾಗಿ ಬೆಳೆಯಬೇಕು, ಎಂದು ಹೇಳುವಾಗ ವಿದ್ಯುತ್ತನ್ನು ಸಾಕಷ್ಟು ಸರಬರಾಯಿ ಮಾಡಬೇಕು. ಅದಿಲ್ಲದಿದ್ದರೆ ಹಾಗೆ ಮಾಡಲು ಸಾಧ್ಯವಿಲ್ಲ. ಇಂದು ರಾಜ್ಯದಲ್ಲಿ ಎಷ್ಟೋ ನದಿಗಳಿದ್ದರೂ ಕೂಡ ಅವುಗಳ ನೀರನ್ನು ಬಳಸಿ, ಇರುವ ವಿದ್ಯುತ್ತನ್ನು ಉಪಯೋಗಮಾಡಿ ಆಹಾರ ಉತ್ಪತ್ತಿಯನ್ನು ಹೆಚ್ಚಿಸಲು ಗಮನ ಕೊಟ್ಟಿಲ್ಲ. 1965ರಲ್ಲಿ ಚೈನಾ ಮತ್ತು ಪಾಕಿಸ್ತಾನಗಳೊಡನೆ ಯುದ್ಧ ಸಂಬಂಧಿಸಿದಾಗ ಆಹಾರದ ಅಭಾವ ಬಂತು. ಸೈನಿಕರಿಗೆ ಆಹಾರ ಆಗ ಒದಗಿಸಬೇಕಾಗಿತ್ತು, ಅತ್ತಕಡೆ ಗೊಂದಲವಾದಾಗ ಇಡೀ ಭಾರತದಲ್ಲೇ ಆಹಾರದ ಆಂದೋಳನ ನಡೆಯಿತು, ಮೈಸೂರಿನಲ್ಲೂ ದೊಡ್ಡ ಆಂದೋಳನ ನಡೆಯಿತು. ಈ ದೇಶದ ಮಂತ್ರಿಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲರು ಮತ್ತು ಶ್ರೀ ರಾಮಕೃಷ್ಣ ಹೆಗಡೆಯವರು ಪ್ರತಿ ಹಳ್ಳಿಗೂ ಸಂಚಾರ ಹೋಗಿ ಆಹಾರವನ್ನು ಹೆಚ್ಚಾಗಿ ಬೆಳೆಯಬೇಕು, ಪಂಪುಸೆಟ್ಟು ಹಾಕಬೇಕು, ವಿದ್ಯುತ್ ಕೊಡುತ್ತೇವೆ ಎಂದು ಹೇಳಿದರು. ಅದಕ್ಕೆ ಜನರು ಒಪ್ಪಿಕೊಂಡರು. ಸ್ವಾತಂತ್ರ್ಯ ಬಂದಾಗ ಸ್ವಾವಲಂಬಿಗಳಾಗಬೇಕೆಂಬುದನ್ನು ಮನಗಂಡು ಯುದ್ಧವಾದಾಗ ಪ್ರಚಾರಮಾಡಿದರು. ಆಗ ರೈತರು ಪಂಪುಸೆಟ್ಟುಗಳಿಗೆ ಅರ್ಜಿಕೊಟ್ಟರು. ಆದರೆ ದಕ್ಷಿಣ ಕನ್ನಡ ಜಿಲ್ಲೆ ವಿಚಾರ ಹೇಳುವುದಾದರೆ ಬೇಕಾದಷ್ಟು ನದಿಗಳು ಅಲ್ಲವೆ, ಅಲ್ಲ 150 ಇಂಚು ಮಳೆ ಬಿದ್ದರೂ ನೆಲದಲ್ಲಿ ಇಂಗಿ ಹೋಗುವುದು, ನದಿಗಳ ನೀರು ಸಮುದ್ರಕ್ಕೆ ಹರಿದುಹೋಗುವುದು. ಅದು ನ್ಯಾಯವಲ್ಲ, ಅದನ್ನು ಬಳಸಬೇಕು, ಬಳಸಿ ಹೆಚ್ಚು ಉತ್ಪತ್ತಿಮಾಡಬೇಕು, ಆಹಾರ ಹೆಚ್ಚು ಬೆಳೆಯಬೇಕು ಎಂದು ತಿಳಿಸಿದರು. ಇಷ್ಟು ನದಿಗಳಿದ್ದರೂ ಪಂಪುಸೆಟ್ಟು ಕೇಳಿದಾಗ ಸಿಕ್ಕುವುದು ಕಠಿಣವಾಗಿತ್ತು. ಪ್ರತಿಯೊಂದು ತಾಲ್ಲೂಕಿನವರು ಹೋಗಿ ವಿನಂತಿಮಾಡಿದರು. ಆದರೆ ಈಗ 2 ರೂಪಾಯಿ ದರವನ್ನು 4 ರೂಪಾಯಿ ಮಾಡಿರುವುದು ಸರಿಯಲ್ಲ, ದರ ಇಳಿಸಬೇಕು ಎಂದು ಎಲ್ಲರೂ ಮನವಿಮಾಡುತ್ತಿದ್ದಾರೆ. ಮೊದಲು ವರ್ಷಕ್ಕೆ ಒಂದು ಸಲ ಕಂತು ಕಟ್ಟುತ್ತಿದ್ದರು, ಈಗ ತಿಂಗಳಿಗೊಂದು ಸಲ ಕಟ್ಟ ಬೇಕೆಂಬುದು ಸರಿಯಲ್ಲ, ವರ್ಷಕ್ಕೊಂದು ಸಲ ಕಟ್ಟಲು ಅವಕಾಶ ಮಾಡಬೇಕು. ರೈತರಿಂದ ಅರಿಸಿ

(ಶ್ರೀ ಬಿ. ಎಂ. ಇದಿನಬ್ಬ)

ಬಂದಿರುವ ನಾವು ರೈತರ ಬಳಿಗೆ ಹೋಗಬೇಕಾಗುವುದು, ಹೋದಾಗ ಸುತ್ತಲೂ ರೈತರು ಬಂದು ಸುತ್ತಿಕೊಂಡು ಹೆಚ್ಚು ಮಾಡಿರುವ ದರವನ್ನು ಕಡಿಮೆ ಮಾಡಿಸಿಕೊಡುತ್ತೀರಾ ಎಂದು ಕೇಳುವರು. ಅದಕ್ಕೆ ಸದಸ್ಯರುಗಳಾದ ನಾವು ಉತ್ತರ ಕೊಡಬೇಕು. ಆದುದರಿಂದ ವಿದ್ಯುಚ್ಛಕ್ತಿ ಮಂಡಲ ಯವರೂ ಮತ್ತು ಸರಕಾರದವರೂ ಇದಕ್ಕೆ ಗಮನಕೊಡಬೇಕು. ರೈತರಿಂದ ನಾವು ಅರಿಸಿ ಬಂದಿರುವಾಗ ಅವರು ಸರಕಾರದ ಬೆನ್ನುಮೂಳೆ ಎಂದು ಹೇಳುವಾಗ ಅವರಿಗೆ ತೊಂದರೆ ಮಾಡಬಾರದು, ಬೇಕಾದ ಸವಲತ್ತನ್ನು 1965ರಲ್ಲಿ ಹೇಳಿರುವಂತೆ ಕೊಡಬೇಕು, ವಿದ್ಯುತ್ತನ್ನು ಬೇಕಾದಷ್ಟು ಒದಗಿಸುತ್ತೇವೆ, ಸಾಲ ಕೊಡುತ್ತೇವೆ ಎಂದು ಹೇಳಿರುವಂತೆ ಕೊಡಬೇಕು. ದರ ಹೆಚ್ಚುವುದೆಂದು ತಿಳಿಯದೆ ಇಂದು ಪಂಪುಸೆಟ್ಟುಗಳಿಗೆ ಅರ್ಜಿ ಹಾಕಿರುವವರೆಲ್ಲಾ ಮಾಡಬೇಕು ? ಇಂದು ಆಹಾರ ಹೆಚ್ಚು ಬೆಳೆಯಬೇಕು ಎಂದು ಹೇಳುವಾಗ, ಅದರಂತೆ ಅವರು ಆಹಾರಪದಾರ್ಥಗಳು ಅಡಕೆ, ಕಬ್ಬು, ಹೊಗೆಸೊಪ್ಪು ಮುಂತಾದುವನ್ನು ಹೆಚ್ಚಳವಾಗಿ ಬೆಳೆಯುತ್ತಿರುವಾಗ ದರ ಹೆಚ್ಚಿಸಿರುವುದು ರೈತರಿಗೆ ಕೈ ಮುರಿದಂತಾಗಿ ಬಹಳ ಅನ್ಯಾಯವಾಗಿದೆ. ಇದರಲ್ಲಿ ಸಂಶಯವಿಲ್ಲ. ಶೇಕಡ 70 ಭಾಗವಿರುವ ರೈತರ ಹಿತ ಸಾಧಿಸುತ್ತೇವೆಂದು ಹೇಳುವಾಗ ಅವರನ್ನು ಆಧೋಗತಿಗೆ ಇಳಿಸಲು ದರ ಹೆಚ್ಚು ಮಾಡಿರುವುದು ನಿಜವಾಗಿಯೂ ಶೋಚನೀಯವಾದ ವಿಚಾರ. ಆದುದರಿಂದ ಸರಕಾರ ಇದಕ್ಕೆ ಮೊದಲು ಗಮನಕೊಡಬೇಕು. ವಿದ್ಯುತ್ ಮಂಡಲಗೆ ನಷ್ಟವಾಗಿದೆ, ಏನು ಮಾಡುವುದು ಎಂದು ಹೇಳುವುದುಂಟು. ಒಂದು ವೇಳೆ ಹಾಗಿದ್ದರೆ ಬೇರೆ ರೀತಿಯಲ್ಲಿ ತುಂಬಿ ಕೊಳ್ಳಬೇಕು, ರೈತರಿಗೆ ತೊಂದರೆ ಮಾಡಬಾರದು. ರೈತರು ಗೊಂದಲ ಮಾಡುವುದಿಲ್ಲ, ಚಳುವಳಿ ಮಾಡುವುದಿಲ್ಲ. ಹಾಗಿರುವವರು ರೇಗಿದರೆ ಯಾವ ಪರಿಸ್ಥಿತಿ ಉಂಟಾಗಬಹುದೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಮಂಡಲಗೆ ನಷ್ಟವಾದರೆ ಮಿತವ್ಯಯ ಮಾಡಬೇಕು. ಸಿಬ್ಬಂದಿ ಕಡಮೆ ಮಾಡಬೇಕು, ಸಾಮಗ್ರಿಗಳು ಹಾಳಾಗುವುದನ್ನು ತಡೆಗಟ್ಟಬೇಕು, ಅನ್ಯಾಯ ಮಾಡುವವರನ್ನು ಬಂಧೋಬಸ್ತು ಮಾಡಬೇಕು, ತನಿಖೆ ಮಾಡಿ ತಪ್ಪು ಮಾಡುವವರ ಮೇರೆ ಕ್ರಮ ತೆಗೆದುಕೊಳ್ಳಬೇಕು. ಈ ರೀತಿಯಾಡಿ ಮಂಡಲಯ ನಷ್ಟವನ್ನು ತುಂಬಿಕೊಳ್ಳಬೇಕು, ನಷ್ಟವಾಗಿದೆ ಎಂದು ಹೀಗೆ ದರ ಏರಿಸಬಾರದು ಎಂದು ಸರಕಾರದಲ್ಲಿ ಮನವಿ ಮಾಡುತ್ತೇನೆ. ಸರಕಾರ ಆಲೋಚನೆಮಾಡಬೇಕು, ಸಿಬ್ಬಂದಿ ಬೇಕಾದಷ್ಟಿದೆ, ಅವಶ್ಯಕವಿರುವಷ್ಟು ಮಾತ್ರ ಇರುವಂತೆ ವ್ಯವಸ್ಥೆ ಮಾಡುವುದು ಒಳ್ಳೆಯದು, ಸರಕಾರ ಸಾಧ್ಯವಾದಷ್ಟು ನಷ್ಟ ತುಂಬಿಕೊಡಬೇಕು. ಇದು ಬಹಳ ದೊಡ್ಡ ಪ್ರಶ್ನೆ, ಸ್ವಾತಂತ್ರ್ಯ ಸಿಕ್ಕುವಾಗ 34 ಕೋಟಿ ಪ್ರಜೆ ಇದ್ದುದು ಇಂದು 54 ಕೋಟಿ ಯಾಗಿದೆ, ಭಾರತದಲ್ಲಿ ಜನಸಂಖ್ಯೆ ಹೆಚ್ಚು, ಅವಕ್ಕಾಗಿ ಆಹಾರದ ಉತ್ಪಾದನೆ ಹೆಚ್ಚಬೇಕು. ಹೀಗಿರುವಾಗ ವಿದ್ಯುತ್ತಿನ ದರ ಹೆಚ್ಚಿಸಿದರೆ ರೈತರು ಹೇಗೆತಾನೆ ಹೆಚ್ಚು ಬೆಳೆಯಲು ಸಾಧ್ಯ ?

ಇನ್ನೊಂದು ಸೂಚನೆ. ಇಂದಿರುವ ಸಾಮಾನುಗಳು, ಈಗ ಹಾಕುವ ಬಲ್ಬುಗಳು ಬಹಳ ಕೆಳಮಟ್ಟದವು, ಇಂದು ಹಾಕಿದರೆ ನಾಳೆ ಸುಟ್ಟುಹೋಗುವುವು. ಹೀಗಿರುವಾಗ ಬೋರ್ಡಿನ ಖರೀದಿ ಮಾಡುವುದರ ಬದಲಾಗಿ ಸಾರ್ವಜನಿಕರೇ ಖರೀದಿ ಮಾಡಬಹುದು. ಖರೀದಿ ಮಾಡುವಾಗ ಸರಕಾರದ ಕಂಟ್ರೋಲ್ ಇರಬೇಕು, ಯಾರಿಂದ ತೆಗೆದುಕೊಳ್ಳಬೇಕು, ಯಾವುದು ತೆಗೆದುಕೊಳ್ಳಬೇಕು ಎಂದು ಆಲೋಚನೆಮಾಡಿ ಸರಕಾರ ವಿದ್ಯುತ್ ಮಂಡಲಗೆ ತಿಳಿಸಿದರೆ, ಆ ಪ್ರಕಾರ ಮಂಡಲ ತೆಗೆದುಕೊಂಡರೆ ಕೆಳಮಟ್ಟದ ಬಲ್ಬುಗಳು ಅಥವಾ ಇತರ ಸಾಮಗ್ರಿಗಳನ್ನು ಉಪಯೋಗವಾಡುವುದು ಕಡಿಮೆ ಯಾಗುವುದಕ್ಕೆ ಸಾಧ್ಯವುಂಟು. ಇದನ್ನು ಗಮನಿಸಬೇಕು.

ಕೈಗಾರಿಕೆಗಳನ್ನು ನಡೆಸತಕ್ಕವರ ವಿದ್ಯುಚ್ಛಕ್ತಿ ಬಳಕೆಯ ಬಿಲ್ಲು ಸಾವಿರ ರೂಪಾಯಿಗಳಿಗೂ ಮೇಲ್ಪಟ್ಟು ಬರುತ್ತದೆ, ಅಂತಹವರಿಗೂ ಒಂದೇ, ಮನೆಬಳಕೆಗೂ, ಪಂಪುಸೆಟ್ಟುಗಳಿಗೂ ಉಪಯೋಗಿಸತಕ್ಕವರಿಗೂ ಬಹಳ ಹೆಚ್ಚಿನ ವ್ಯತ್ಯಾಸವನ್ನೇನೂ ಮಾಡಿಲ್ಲ ಎಂಬ ದೂರು ಉಂಟು. ಯಾಕೆ ಈ ರೀತಿಯಾಗುತ್ತಿದೆ ಎಂಬುದನ್ನು ಪರೀಕ್ಷಿಸಿ ಈ ರೀತಿ ಅಕ್ರಮಗಳು ಆಗದಂತೆ ತಡೆಗಟ್ಟಬೇಕೆಂದು ಸರ್ಕಾರದವರಿಗೆ ಸಲಹೆ ಮಾಡುತ್ತಾ ಇದ್ದೇನೆ.

ಎರಡು ರೂಪಾಯಿ ಇದ್ದುದನ್ನು 4 ರೂಪಾಯಿ ಮಾಡಿದ್ದಾರೆ. ಇವಕ್ಕೆ ಮೊದಲು ಪಂಪ್‌ಸೆಟ್ ಇಟ್ಟುಕೊಂಡವರೆ ಸಾವಿರ ರೂಪಾಯಿ ಮುಂಗಡ ಹಣ ಕೊಡಬೇಕೆಂದು ಆಜ್ಞೆ ಮಾಡಿದ್ದರು. ಈ ಸಭೆಯ 216 ಜನ ಸದಸ್ಯರು ಏಕ ಕಂಠದಿಂದ ಈ ರೀತಿ ಮುಂಗಡವನ್ನು ಕೊಡುಲಕ್ಕೆ ರೈತನಿಂದ ಸಾಧ್ಯವಾಗಲಿಕ್ಕಿಲ್ಲ, ಈ ರೀತಿ ಮಾಡಬಾರದು ಎಂದು ಹೇಳಿದಾಗ ಅದನ್ನು ಕೈ ಬಿಟ್ಟರು, ಅದರಿಂದ ರೈತರಿಗೆ ಉಪಕಾರವಾಗಿದೆ. ಆಹಾರ ಹೆಚ್ಚು ಬೆಳೆಯುಲ ಎಂಬ ಭಾವನೆಯಿಂದ ಆ ರೀತಿ ಮಾಡಲಾಯಿತು. ಅವೇ ರೀತಿ ಈಗ 4 ರೂಪಾಯಿ ಮಾಡಿರುವುದನ್ನು 2 ರೂಪಾಯಿಗೆ ತರಬೇಕು

ಅದಕ್ಕೆ ಏರಿ ಆಗತಕ್ಕ ನಷ್ಟವನ್ನು ಸರ್ಕಾರದವರೇ ಸಬ್ಸಿಡಿ ಅಥವಾ ಸಾಲ ಯಾವುದಾದರು ರೂಪದಲ್ಲಿ ಭರ್ತಿಮಾಡಿಕೊಟ್ಟು ರೈತನನ್ನು ಕಾಪಾಡದಿದ್ದರೆ ಮುಂದೆ ಬರತಕ್ಕ ಭವಿಷ್ಯತ್ತಿನ ವಿಚಾರ ಕಷ್ಟವಾಗಬಹುದು. ಹಸಿರು ಕ್ರಾಂತಿಯಾಗಬೇಕೆಂದು ಹೇಳುತ್ತೀರಿ. ಹಸಿರು ಕ್ರಾಂತಿಯಾದರೆ ಕಣ್ಣಿಗೆ ಹಬ್ಬವಾಗುತ್ತದೆ, ಹೊಟ್ಟೆಗೆ ಆಹಾರವಾಗುತ್ತದೆ. ಆದರೆ ಅದಕ್ಕೆ ಬೇಕಾದ ಉಪಕಾರ ಮಾತ್ರ ಮಾತುವುದಿಲ್ಲ ಎಂದರೆ ಮುಂದೆ ಯಾವ ರೀತಿಯ ಪರಿಣಾಮವಾಗಬಹುದು ಎಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಿ. ಇದು ಮುಂಬೆ ಕೆಂಪು ಕ್ರಾಂತಿಗೆ ಅವಕಾಶವಾಗದಂತೆ ನೋಡಿ ಕೊಳ್ಳಬೇಕಾದ್ದು ನಿಮ್ಮ ಧರ್ಮ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾವಿರಾರು ಪಂಪುಸೆಟ್ಟುಗಳು ಇವೆ, ಅವರಿಂದ ದಿನಂಪ್ರತಿ ಮನವಿಗಳು ಬರುತ್ತಾ ಇವೆ. ಈ ದರವನ್ನು ಕಡಮೆ ಮಾಡಿಕೊಡುವುದರ ಕಡೆಗೆ ಸರ್ಕಾರದವರು ಗಮನ ಕೊಡಬೇಕು. ಈ ಬಗ್ಗೆ ಆಳುವ ಪಕ್ಷದ ಸದಸ್ಯರು ಬಹಳ ಕಟ್ಟುವಾಗಿ ಮಾತನಾಡಿದ್ದಾರೆ, ಎದುರು ಪಕ್ಷದವರೂ ಕೂಡ ಮಾತನಾಡಿದ್ದಾರೆ, ಇದನ್ನೆಲ್ಲಾ ಗಮನಿಸಿ ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾದ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಕೊನೆಯದಾಗಿ ಈ ಮೂರು ಚರಣಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

" ರೈತನ ಬಿಟ್ಟರೆ ಕೆಟ್ಟಿತು ದೇಶ
ರೈತನ ಪ್ರೇಮವೇ ದೇಶದ ಪ್ರೇಮ
ರೈತನ ಹಿರಿಮೆಯೇ ದೇಶದ ಹಿರಿಮೆ ".

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿ ಮಂಡಲಯ ರೈತನಮೇಲೆ ಹಾಕಿರತಕ್ಕ ಹೆಚ್ಚಿನ ತೆರಿಗೆಯ ವಿಚಾರವಾಗಿ ಈ ಸದನದ ಹಿರಿಯ ಸದಸ್ಯ ರೆಲ್ಲರೂ ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ಸರ್ಕಾರಕ್ಕೆ ಮನದಟ್ಟಾಗುವ ರೀತಿಯಲ್ಲಿ ಹೇಳಿ ದ್ದಾರೆ. ಜನತೆಯ ಆಶೋತ್ತರಗಳನ್ನು ನೆರವೇರಿಸಿ ಅವರ ಕಷ್ಟಗಳನ್ನು ನಿವಾರಣೆ ಮಾಡುವು ದಕ್ಕೋಸ್ಕರ ಸರಕಾರ ಇಂತ ಮಂಡಲಗಳನ್ನು ರಚನೆ ಮಾಡಿದರು, ಇವತ್ತು ಇದು ಸರ್ವಾಧಿ ಕಾರಿಯಾದಂತಹ ಒಂದು ಮಂಡಲಯಾಗಿದೆ. ನಾನು ವಿದ್ಯುಚ್ಛಕ್ತಿ ಮಂಡಲಯು ಮೀಟಿಂಗ್‌ಗೆ ಹೋಗಿದ್ದೆ, ಈ ಮಂಡಲ ಪರ್ವಸ್ಯಂದ್ರ ಅಧಿಕಾರವನ್ನು ಹೊಂದಿರತಕ್ಕ ಒಂದು ಸಂಸ್ಥೆ ಎಂಬ ಭಾವನೆಯನ್ನು ಮಂಡಲಯ ಅಧ್ಯಕ್ಷರು ವ್ಯಕ್ತಪಡಿಸಿದರು. ಪ್ರಜಾಪ್ರಭುತ್ವದ ನೆಪದಲ್ಲಿ ಇಂತಹ ಮಂಡಲಗಳನ್ನು ರಚನೆ ಮಾಡುವುದು ಆದರ್ಶಪ್ರಾಯವಾದುದಲ್ಲ ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ಇಂತಹ ಮಂಡಲಗಳನ್ನು ಮಾಡಿ ರೈತರಿಗೆ ಬೇಕಾದ ನೆರವನ್ನು ಅವರು ನೀಡಬೇಹೋದ ಪಕ್ಷದಲ್ಲಿ ಇವುಗಳಿಂದ ಪ್ರಯೋಜನವಾದರೂ ಏನು ಎಂದು ನಾನು ಬಹಳ ವ್ಯಸನ ದಿಂದ ಹೇಳಬೇಕಾಗುತ್ತದೆ. ವಿದ್ಯುಚ್ಛಕ್ತಿ ಮಂಡಲಯವರು ದೊಡ್ಡ ದೊಡ್ಡ ಕೈಗಾರಿಕೆಗಳಿಂದ ಬರಬೇಕಾದ ಸುಮಾರು 270ಲಕ್ಷ ರೂಪಾಯಿಗಳನ್ನು ಬಾಕಿ ಬಿಟ್ಟುಕೊಂಡು ಬಂದಿದ್ದಾರೆ. ಯಾವ ಕಾರಣದಿಂದ ಬಿಟ್ಟುಕೊಂಡು ಬಂದಿದ್ದಾರೆ ಎಂದರೆ ಈ ಕೈಗಾರಿಕೆಗಳು ಸಾರೋದ್ಧಾರವಾಗಿ ಅಭಿವೃದ್ಧಿಯಾಗುವುದಕ್ಕಾಗಿ ಅಲ್ಲಾ ಕೆಲವು ಮುಖಂಡರ ಮತ್ತು ಕೆಲ ಅಧಿಕಾರಗಳ ಸೌಲಭ್ಯಕ್ಕಾಗಿ ಬಾಕಿ ವಸೂಲಿ ಮಾಡದಂತೆ ಸರ್ಕಾರದವರು ಆದೇಶ ನೀಡಿದ್ದಾರೆ ಗ್ರಾಮಾಂತರಗಳ ರೈತರ ಪಂಪು ಸೆಟ್ಟುಗಳಿಗಾಗಿ ಸರಬರಾಯಿ ಮಾಡತಕ್ಕ ವಿದ್ಯುಚ್ಛಕ್ತಿಗೆ ನಿಗದಿ ಮಾಡಿರತಕ್ಕ ತಾರೀಖಿನಲ್ಲಿ ಹಣ ಕಟ್ಟದಿದ್ದರೆ ವಿದ್ಯುಚ್ಛಕ್ತಿಯ ಸರಬರಾಯಿ ನಿಲ್ಲಿಸತಕ್ಕ ಪರಿಸ್ಥಿತಿ ಇದೆ. ಅದೇ ಕೈಗಾರಿಕೆ ಗಳವರ ವಿಷಯದಲ್ಲಿ ಯಾವ ಕ್ರಮ ತೆಗೆದುಕೊಂಡಿದ್ದೀರಿ ? ಅವರಿಂದ ಎಷ್ಟು ನಷ್ಟ ವಿದ್ಯುಚ್ಛಕ್ತಿ ಮಂಡಲಗೆ ಆಗಿದೆ ? ಅದಕ್ಕೆ ಕಾರಣರು ಸರ್ಕಾರದವರೇ ? ವಿದ್ಯುಚ್ಛಕ್ತಿ ಮಂಡಲಯ ಅಧ್ಯಕ್ಷರೇ ? ಮೊನ್ನೆತಾನೆ ಸರ್ಕಾರದ ವತಿಯಿಂದ ಅನೇಕ ಕೈಗಾರಿಕೆಗಳಿಗೆ ಲಕ್ಷೋಪಲಕ್ಷ ರೂಪಾಯಿಗಳನ್ನು ಗ್ರಾಂಟ್ ರೂಪದಲ್ಲಿ ಕಡಿಮೆ ಬಡ್ಡಿಗೆ ಕೊಟ್ಟಿದ್ದೀರಿ. ನಮ್ಮ ದೇಶದ ಜನರ ದುರಾದೃಷ್ಟ ಎಂದು ಹೇಳಬೇಕಾಗಿದೆ, ಯಾವುದೇ ತೆರಿಗೆಯನ್ನು ಹಾಕುವಾಗಲೂ ಕೂಡ ಸರ್ಕಾರದವರ ದೃಷ್ಟಿ ಗ್ರಾಮಾಂತರದ ಜನರಮೇಲೆಯೇ ಇರುತ್ತದೆ. ಗ್ರಾಮಾಂತರ ಜನತೆಯು ಅಭ್ಯುದಯವಾಗ ಬೇಕಾದರೆ ನಮ್ಮ ದೇಶದಲ್ಲರತಕ್ಕ ಅನ್ನದ ಅಭಾವ ನಿವಾರಣೆಯಾಗಬೇಕಾದರೆ ಗ್ರಾಮಾಂತರದ ಜನರು ಹೆಚ್ಚು ಹೆಚ್ಚಾಗಿ ಆಹಾರ ಧಾನ್ಯವನ್ನು ಬೆಳೆಯಬೇಕು. ಅನ್ನ ಸಮಸ್ಯೆಯಿಂದ ಮಾತ್ರ ಎಲ್ಲಾ ಅಭ್ಯುದಯವಾದಂತೆ ದೇಶವಿದೇಶಗಳಿಂದ ಭಿಕ್ಷಾ ಪಾತ್ರೆ ಹಿಡಿದು ದವಸಧಾನ್ಯಗಳನ್ನು ತರುತ್ತಾ ಇದ್ದೇವೆ ಗ್ರಾಮಾಂತರ ಜನರ ಹಿತಚಿಂತನೆ ಮಾಡಿಲ್ಲ ಎಂಬುದು ಇದರಿಂದಲೇ ಸ್ಪಷ್ಟ ವಾಗುತ್ತದೆ. ನಮ್ಮಲ್ಲಿ ಇರತಕ್ಕ ಅಧಿಕಾರಿಗಳು, ಮಂತ್ರಿವರ್ಯರೂ ಕೂಡ ರೈತನ ಮಕ್ಕಳೇ, ಆದರೆ ಅವರು ನಗರಕ್ಕೆ ಬಂದಮೇಲೆ ಅವರ ಭಾವನೆಯೇ ಬದಲಾವಣೆಯಾಗಿ ನಾವು ಸಾಮ್ರಾಟ ರೆಂಬ ಮನೋಭಾವ ಹೊಂದಿದವರಾಗಿ ಜನತೆಯ ಹಿತವನ್ನೇ ಮರೆತಿದ್ದಾರೆ. ಅಧಿಕಾರವರ್ಗದಲ್ಲಿ

(ಶ್ರೀ ಬಿ. ದೊಡ್ಡಬೋರೇಗೌಡ)

ನೂರಕ್ಕೆ ಎಂಬತ್ತು ಜನರು ಭ್ರಷ್ಟಾಚಾರ, ಲಂಚಗುಳಿತನದಿಂದ ಕೂಡಿದ್ದಾರೆ. ನಮ್ಮ ಆಡಳಿತ ಭದ್ರವಾಗಿ ಇರಲಿ ಅನ್ನುವುದಕ್ಕೆ ಕಂಟ್ರಾಕ್ಟ್‌ದಾರರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿ ಕೊಟ್ಟು, ಚುನಾವಣಾ ಕಾಲದಲ್ಲಿ ಅವರಿಂದ ಬೇಕಾದಷ್ಟು ಹಣವನ್ನು ವಸೂಲು ಮಾಡಿಕೊಂಡಿರುತ್ತಾರೆ, ಬೇಕಾದರೆ ನನ್ನ ಹತ್ತಿರ ಹೆಸರುಗಳು ಇವೆ, ಅಧ್ಯಕ್ಷರು ಅಪ್ಪಣೆಕೊಟ್ಟರೆ ಅಂಕಿಅಂಶಗಳಿಂದ ಅದನ್ನು ನಿಷ್ಪಕ್ಷವಾಗಿ ಹೇಳುತ್ತೇನೆ. ಎಲ್ಲರೂ ಆದೇರೀತಿ ಇದ್ದಾರೆಂದು ನಾನು ಹೇಳುತ್ತಿಲ್ಲ. ಶೇಕಡ 20 ರಷ್ಟು ಅಧಿಕಾರಿಗಳು ನಿಷ್ಠಾವಂತರು ಇದ್ದಾರೆ, ಅವರಿಗೆ ಸರ್ಕಾರದಲ್ಲಿ ಬೆಂಬಲ ಇಲ್ಲ. ನಿಷ್ಠಾವಂತ ಅಧಿಕಾರಿಗಳು ಯಾರಿದ್ದಾರೆ ಅವರಿಗೆ ವರ್ಷದಲ್ಲಿ 3-4 ಸಾರಿ ವರ್ಗಾವಣೆಯಾಗಿ ಅವರು ಗಂಟುಮೂಟೆ ಕಟ್ಟಲೇ ಬೇಕು. ಮತ್ತು ನೌಕರರು ತಮ್ಮ ಸೀನಿಯಾರಿಟಿ ಮತ್ತು ಗ್ರೇಡ್ ವಗ್ಗೆರೆ ಸಿಕ್ಕಲಿಲ್ಲ ಎಂದು ಅತೃಪ್ತಿಹೊಂದಿದವರಾಗಿ ಕೆಲಸ ಮಾಡುತ್ತಿರ್ಲಿ ಆ ದೊಡ್ಡರೋಗಗಳಿಗೆ ಇಲ್ಲಿಯವರಿಗೂ ಚಿಕಿತ್ಸೆಯನ್ನು ಕಂಡುಹಿಡಿಯುವುದಕ್ಕಾಗಲಿಲ್ಲ, ಸರ್ಕಾರದವರು ಈ ವಿಚಾರದಲ್ಲಿ ಅನಾನಕ್ಕೆ ವಹಿಸಿದ್ದಾರೆ. ಇದು ಸರಿಯಲ್ಲ. ಅವರಿಗೆ ಒಂದು ಯೋಗ್ಯ ಜೀವನ ನಡೆಸುವುದಕ್ಕೆ ಆಗುವಷ್ಟನ್ನಾದರೂ ಕೊಡಲೇಬೇಕು. ಇದನ್ನೆಲ್ಲಾ ಸರ್ಕಾರದವರು ಮನಗಂಡಿದ್ದರೂ ಕಾಣದವರಂತೆ ನಡೆಸುತ್ತಿರುವುದು ನಾಚಿಗೇಡಿನ ಪ್ರಸಂಗ. ಈ ಹಿಂದೆ ಸರ್ಕಾರದವರು ಇನ್ನು ಮುಂದೆ ಈ ಆಹಾರಧಾನ್ಯಗಳಮೇಲೆ ಯಾವುದೇ ಒಂದು ತೆರಿಗೆಯನ್ನೂ ಹಾಕುವುದಿಲ್ಲ ಎಂಬ ಭರವಸೆಯನ್ನು ಹೇಳಿ ಆ ಶರಾವತಿಯ ವಿದ್ಯುತ್ ಜನರೇಟ್ ಉತ್ಪಾದನಾ ಕಾಲದಲ್ಲಿ ವಿಪರೀತ ತೆರಿಗೆಗಳನ್ನು ಹಾಕಿ ಆ ಶರಾವತಿ ಮೂರನೆ ಹಂತದಲ್ಲಿ ಅದಕ್ಕೆ ನೂರಾಹತ್ತು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರು. ಆ ಕಾಲದಲ್ಲಿ ಸರ್ಕಾರದವರು ಏನು ಹೇಳಿದ್ದರು ? ದೇಶದಲ್ಲಿ ಇರತಕ್ಕ ಎಲ್ಲಾ ಗ್ರಾಮಾಂತರ ಪ್ರದೇಶದವರಿಗೂ ವಿದ್ಯುಚ್ಛಕ್ತಿಯನ್ನು ಬಹಳ ರಿಯಾಯಿತಿ ದರದಲ್ಲಿ ಒದಗಿಸುತ್ತೇವೆಂದು ಹೇಳಿದ್ದರು. ಆ ದಿವಸ ಹಾಗೆ ಹೇಳಿ ಈ ದಿವಸ ಅವರು ನಡೆಯುತ್ತಿರುವುದನ್ನು ನೋಡಿದರೆ ಅವರು ಯಾವ ದಿಕ್ಕಿಗೆ ಹೊರಟಿದ್ದಾರೆ ಎಂಬುದು ಗೊತ್ತಾಗುತ್ತದೆ. ಸರ್ಕಾರದವರು ಇಲ್ಲಿಯವರೆಗೂ ಹೊರದೇಶದಿಂದ ಸಾಲಮಾಡಿ ತಂದಿರತಕ್ಕ ಅಪಾರ ಹಣಕ್ಕೆಲ್ಲಾ ದೇಶದಲ್ಲಿರತಕ್ಕ ರೈತಾಪಿ ಜನರು ಅದಕ್ಕೆ ಬಡ್ಡಿಯನ್ನು ತೆರಬೇಕಾಗಿದೆ. ನಮ್ಮ ಸರ್ಕಾರದವರು ಅಕ್ಕಪಕ್ಕದ ರಾಜ್ಯಗಳವರಿಗೆ ಯೂನಿಟ್ ಒಂದಕ್ಕೆ ಅಂದರೆ ಕೆ. ವಾಟ್ ಒಂದಕ್ಕೆ 6 ಪೈಸೆಗಳಿಂದ ಹಿಡಿದು 10 ಪೈಸೆಗಳವರೆಗೆ, ದರವನ್ನು ನಿಗದಿಮಾಡಿದ್ದಾರೆ. ಇಲ್ಲಿ ಒಂದು ಕೆ. ವಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆಮಾಡಬೇಕಾಗಿದ್ದರೆ ಅದಕ್ಕೆ 980 ರೂಪಾಯಿಗಳಿಂದ 1,005 ರೂಪಾಯಿಗಳವರೆಗೂ ಖರ್ಚಾಗುತ್ತದೆಂದು ಹೇಳುತ್ತಿದ್ದಾರೆ. ಹೀಗೆ ಆ ವಿದ್ಯುಚ್ಛಕ್ತಿಯ ಉತ್ಪಾದನೆಗೆ ತಗಲುವ ಅಪಾರ ಖರ್ಚನ್ನು ವಹಿಸಲು ಸರ್ಕಾರದವರು ಅಪಾರವಾಗಿ ಸಾಲ ಮಾಡಿದ್ದಾರೆ. ಆ ಸಾಲದ ಹೊರೆಯನ್ನು ದೇಶದ ಪ್ರಜೆಗಳಮೇಲೆ ಹೊರಿಸಿದ್ದಾರೆ. ಹೊರಗಡೆ ರಾಜ್ಯಗಳಲ್ಲಿರತಕ್ಕ ಮಂತ್ರಿಮಂಡಲದ ಪ್ರೀತಿಯನ್ನು ಸಂಪಾದಿಸುವುದಕ್ಕಾಗಿ ನಮ್ಮ ಸರ್ಕಾರದವರು ಅವರಿಗೆ ಬಹಳ ಕಡಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕ ರೈತನಿಗೂ ಕೂಡ ಅದೇ ದಾಮಾಷದಲ್ಲಿ ಏಕೆ ರಿಯಾಯಿತಿ ದರದಲ್ಲಿ ಪವರನ್ನು ಸರಬರಾಯಿಮಾಡುತ್ತಿಲ್ಲ. ಸರ್ಕಾರದವರು ಅನೇಕ ಕೋಟಿ ರೂಪಾಯಿಗಳನ್ನು ಸಾಲ ಮಾಡಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಎರಡೂವರೆ ಕೋಟಿ ಜನರಮೇಲೆ ಆ ಸಾಲದ ಹೊರೆಯನ್ನು ಹೇರಿದ್ದರೂ ರಾಜ್ಯಸರ್ಕಾರ ಅವರ ಹಿತಸಾಧನೆಯ ಗಮನ ಕೊಡದಿರುವುದು ಬಹಳ ವ್ಯಸನಕರ. ನಮ್ಮ ಅಕ್ಕಪಕ್ಕದಲ್ಲಿರತಕ್ಕ ರಾಜ್ಯಗಳಿಗೆ ವಿದ್ಯುಚ್ಛಕ್ತಿಯನ್ನು ಕಡಮೆ ದರದಲ್ಲಿ ಒದಗಿಸತಕ್ಕ ವಿಚಾರದಲ್ಲಿ ಈ ಸಭೆಯವರನ್ನು ಸರ್ಕಾರದವರು ಕೇಳಲಿಲ್ಲ. ನೆರೆ ರಾಜ್ಯಗಳಿಗೆ ಕಡಿಮೆ ದರದಲ್ಲಿ ವಿದ್ಯುತ್ತನ್ನು ಒದಗಿಸಿ ಅಪಾರ ಸಾಲವ ಹೊರೆಯನ್ನು ಹೊರತಕ್ಕ ರೈತರಿಗೆ ಆ ರಿಯಾಯಿತಿ ದರದಲ್ಲಿ ವಿದ್ಯುತ್ತನ್ನು ಒದಗಿಸಿಲ್ಲ. ಈ ವಿದ್ಯುಚ್ಛಕ್ತಿಯನ್ನು ತಯಾರಿಸುವುದಕ್ಕಾಗಿ ಖರ್ಚುಮಾಡಿರತಕ್ಕ ಕೋಟ್ಯಾನುಕೋಟಿ ರೂಪಾಯಿಗಳ ಸಾಲವನ್ನಾಗಲಿ ಅಥವ ಅದರ ಬಡ್ಡಿಯನ್ನಾಗಲ್ಲಿ ಅಕ್ಕ ಪಕ್ಕದ ರಾಜ್ಯಸರ್ಕಾರ ಕೊಡುತ್ತಿಲ್ಲ. ಅಂಥವರಿಗೇಕೆ ಇವರು ರಿಯಾಯಿತಿ ದರದಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಯಿಮಾಡಬೇಕು ? ನಮ್ಮ ರಾಜ್ಯ ಸರ್ಕಾರದ ಆಡಳಿತಇಷ್ಟು ಲಕ್ಷಣವಾಗಿದೆ. ಇನ್ನು ಜನತೆಯು ಉದ್ಧಾರವಾದಂತೆಯೇ ಇದೆ. ಇನ್ನಾದರೂ ಈ ಸರ್ಕಾರದವರು ಎಚ್ಚೆತ್ತು ಕೆಲಸಮಾಡಬೇಕಾಗಿದೆ. ಈಗಿನ ಮಂತ್ರಿಮಂಡಲವಾದರೋ ಯುವಕರಿಂದಲೂ ಉತ್ಸಾಹಶಾಲಿಗಳಿಂದಲೂ ಕೂಡಿದ್ದಾಗಿದೆ. ನಮ್ಮ ಮಂತ್ರಿಮಂಡಲದಲ್ಲಿ 29 ಜನ ಮಂತ್ರಿಗಳಿದ್ದಾರೆ. ಇವರೆಲ್ಲಾ ದಿನ ಬೆಳಗಾದರೆ ರಾಜ್ಯದಲ್ಲಿ ಸುತ್ತುತ್ತಲೇ ಇರುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಕಳೆದ 5-6 ವರ್ಷಗಳಿಂದ ಮಳೆಬೆಳೆಗಳಿಲ್ಲ ಎಂಬುದು ಇವರಿಗೇನು ಗೊತ್ತಿಲ್ಲದ

ವಿಷಯವೇ ? ಹಾಗೆ ಅಲ್ಲಿ ಮಳೆ ಬೆಳೆಗಳಿಲ್ಲವಿದ್ದರೂ ಇವರಿಗೆ ಸಿಕ್ಕತಕ್ಕ ಭವ್ಯಸ್ವಾಗತಕ್ಕೇನೂ ಕೊರತೆಯಿಲ್ಲ. ಇವರ ಆ ಭವ್ಯಸ್ವಾಗತದ ವೈಭವದಲ್ಲಿ ಇವರಿಗೆ ಆ ರೈತರ ಗೋಳನ್ನು ಕೇಳುವುದಕ್ಕಾದರೂ ವೇಳೆಯೆಲ್ಲಿದೆ ? ದೇಶದಲ್ಲಿ ಸಹಕಾರ ಪದ್ಧತಿಯನ್ನು ರೂಢಿಸುವುದಕ್ಕಾಗಿ ನಿರ್ಮಾಣವಾದ ಸಹಕಾರ ಸಂಘಗಳೇನಿವೆ ಅವು ಈ ದಿವಸ ಆ ಸಹಕಾರ ಸಂಘಗಳಾಗಿ ಮಾರ್ಪಟ್ಟು ದೇಶಕ್ಕೆ ಬಹಳ ಹಾನಿಯನ್ನುಂಟುಮಾಡುತ್ತಿವೆ. ದೇಶದಲ್ಲಿ ಇಂಥ ಅಸಹಕಾರ ಸಂಘಗಳು ಸುಮಾರು 20 ಸಾವಿರ ಇರುತ್ತವೆ. ಈ ಅಸಹಕಾರ ಸಂಘಗಳು ಈ ಮಂತ್ರಿಗಳಿಗೆ ಆಮಂತ್ರಣಕೊಟ್ಟು ಸ್ವಾಗತಿಸುತ್ತಿವೆ. ಒಂದು ಗ್ರಾಮದಲ್ಲಿ ಒಂದು ವಿದ್ಯುಚ್ಛಕ್ತಿಯ ಕಂಬವನ್ನು ನಿಲ್ಲಿಸುವುದಕ್ಕೆ ಎಷ್ಟು ಜನ ಮಂತ್ರಿಗಳು ಬರಬೇಕು ! ಅಧಿಕಾರಿಗಳು ಎಷ್ಟು ಮಂದಿ ? ಜೀಪುಗಳೆಷ್ಟು ? ಇದನ್ನು ಹೇಳತೀರದು. ಸುಮಾರು 8 ಜೀಪುಗಳಲ್ಲಿ ಅಧಿಕಾರಿಗಳ ತಂಡ ಮಂತ್ರಿಗಳನ್ನು ಸ್ವಾಗತಿಸಲು ಅವರು ತಮ್ಮ ಕೆಲಸ ಕಾರ್ಯಗಳನ್ನೆಲ್ಲಾ ಬಿಟ್ಟು ಅಲ್ಲಿದ್ದರು ಇಬ್ಬರು ನಡೆದರು ಆ ಕಾರ್ಯದ ಉದ್ಘಾಟನೆ ಆಗುವುದರಲ್ಲಿ ಇದು ಸುಖರಾಜ್ಯದ ಲಕ್ಷಣಗಳು. ಅವರಿಗೆ ಟಿ.ಎ.ಡಿ.ಎ. ಎಷ್ಟು ಖರ್ಚಾಗುತ್ತದೆ ಇದನ್ನೆಲ್ಲಾ ಕೇಳತಕ್ಕವರು ಯಾರು ಇಲ್ಲವೋ ? ಇಷ್ಟು ಅಧರ್ಮಗಳನ್ನು ನಾನೆಂದು ಕಂಡಿರಲಿಲ್ಲ. ಇವನ್ನೆಲ್ಲಾ ಕೂಡಲೆ ನಿಲ್ಲಿಸಬೇಕೆಂದು ಹೇಳಿ ಇನ್ನು ನಾನು ಈ ಸಂದರ್ಭದಲ್ಲಿ ಸಂದರ್ಭಕ್ಕೆ ಲಗತ್ತಾಗಿರತಕ್ಕ ಒಂದು ಕಥೆಯನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಕಾಬೂಲಿನ ರಾಜ್ಯದ ಒಂದು ಹಳ್ಳಿಯಲ್ಲಿ ಕ್ವಾಜಾಸಾಬ್ ಎಂಬ ಒಬ್ಬ ಉತ್ತಮ ರೈತನಿದ್ದ. ಅವನು ಯಾವಾಗಲೂ ತನ್ನ ಹೊಲಗದ್ದೆಗಳ ಕಡೆ ಹೋಗಬೇಕಾಗಿದ್ದಾಗ ಗಾರ್ಧಭನಮೇಲೆ ಸವಾರಿ ಮಾಡಿಕೊಂಡು ಹೋಗುತ್ತಿದ್ದ. ಅವನ ಜಮೀನುಗಳು ಊರಿಗೆ ಸುಮಾರು ಎರಡೂವರೆ ಮೈಲಿಗಳ ದೂರವಲ್ಲಿದ್ದವು. ಒಂದು ದಿನ ಬೇಸಿಗೆಯ ಕಾಲ. ಅವನು ಗಾರ್ಧಭನಮೇಲೆ ಸವಾರಿಹೊರಟಿದ್ದ ಕಾಲದಲ್ಲಿ ದಾರಿಯಲ್ಲಿ ಒಂದು ದೊಡ್ಡ ನಾಗರ ಹಾವು ಅಡ್ಡಬಂದಿತು. ಆಗ ಗಾರ್ಧಭ ಹೆದರಿ ಓಡುವುದಕ್ಕೆ ಪ್ರಾರಂಭ ಮಾಡಿತು. ಅದರಮೇಲೆ ಕುಳಿತಿದ್ದ ಸವಾರನು ಅದನ್ನು ಭದ್ರವಾಗಿ ಕಟ್ಟಿ ಹಿಡಿದಿದ್ದನು. ಆ ಗಾರ್ಧಭ 4–5 ಮೈಲಿಗಳವರೆಗೂ ಓಡಲಾರಂಭಿಸಿತು. ಆಗ ದಾರಿಯಲ್ಲಿ ಅವನ್ನು ಕಂಡ ಜನರು ಖಾಜಾಸಾಹೇಬರನ್ನು ಎಲ್ಲಿಗೆ ಹೀಗೆಕೊರಟಿದ್ದೀಯ ಎಂದು ಕೇಳಿದ್ದಕ್ಕೆ ಆತನು ನಾನು ಹೋಗುತ್ತಿಲ್ಲ, ಈ ಗಾರ್ಧಭಮಾತ್ರ ಹೋಗುತ್ತಿದೆ. ಅದು ಎಲ್ಲಿಗೆ ಹೋಗುತ್ತಿದೆ ಎಂಬುದನ್ನು ತಿಳಿಯಬೇಕಾಗಿದ್ದರೆ ಅದನ್ನೇ ಕೇಳಿ ಎಂದನಂತೆ. ಹಾಗೆ ಇಲ್ಲಿ ರೈತರಿಗೆ ಇಷ್ಟೊಂದು ಅನ್ಯಾಯಗಳಾಗುತ್ತಿವೆ ಎಂದು ಸರ್ಕಾರದವರನ್ನು ಕೇಳಿದರೆ ಅವರು ಬೋರ್ಡಿನ ಕಡೆಗೆ ಕೈ ತೋರಿಸುತ್ತಾರೆ. ಬೋರ್ಡಿನವರನ್ನು ಕಂಡರೆ ಅವರು ಸರ್ಕಾರದವರ ಕಡೆಗೆ ಕೈತೋರಿಸುತ್ತಾರೆ. ಹೀಗೆ ಉಭಯತ್ರರಿಂದಲೂ ಅತ್ಯಪ್ರಿಯ ಉತ್ತರಗಳೇ ಬರುತ್ತಿವೆ. ರೈತರು ಇಂಥ ಪರಿಸ್ಥಿತಿಯಲ್ಲಿ ಶತಪ್ರಯತ್ನಮಾಡಿದರೂ ಪ್ರಯೋಜನವಾಗುವುದಿಲ್ಲ. ಇಂಥ ಬೋರ್ಡ್‌ಗಳನ್ನು ಪರಿವರ್ತನೆಮಾಡುವುದಕ್ಕೂ ಕೂಡ ಸಾಧ್ಯವಿಲ್ಲ. ನಮ್ಮ ಮುಖಂಡರು ಬಾಯಲ್ಲಿ ಹೇಳುತ್ತಾರೆ ವ್ಯಕ್ತಿಪೂಜೆ ನಲ್ಲದು ಎಂದು. ಹಾಗೆ ಹೇಳಿದವರು ಹಳ್ಳಿಗಳಿಗೆ ಹೋಗುವುದನ್ನು ಏನಾದರೂ ಬಿಟ್ಟಿದ್ದಾರೆಯೇ ? ಅವರ ಪಾರ್ಟಿಯ ಜನರು ಸೇರಿ ಈ ವ್ಯಕ್ತಿಪೂಜೆಯನ್ನು ಇನ್ನೂ ಬಲಗೊಳಿಸುತ್ತಿದ್ದಾರೆ. ಒಂದೊಂದು ಕಾಂಗ್ರೆಸ್ ಕೂಟಕ್ಕೂ ಏನಿಲ್ಲ ಎಂದರೂ 400 ರೂಪಾಯಿಗಳಿಂದ ಹಿಡಿದು 800 ಸಾವಿರವರೆಗೂ ಖರ್ಚುಮಾಡುತ್ತಾರೆ; ಜನರಿಂದ ಓಟನ್ನು ಗಳಿಸತಕ್ಕ ಒಂದು ಕಾರಣಕ್ಕಾಗಿ ಹಳ್ಳಿಗಳಲ್ಲಿ ಆಡತಕ್ಕ ನಾಟಕಗಳಿಗೆ ಹೋಗಿ ಮಂತ್ರಿಗಳು ಭಾಷಣ ಮಾಡುತ್ತಿದ್ದಾರೆ. ಇಂಥ ನಾರ್ಮೈದು ನಿದರ್ಶನಗಳು ನನಗೆ ಗೊತ್ತು. ದೇಶದಲ್ಲಿ ಅನ್ನದ ನೀರಿನ ಜರಿ ಸಮಸ್ಯೆಗಳಿದ್ದಾಗ ಈ ರೀತಿ ರೈತನನ್ನು ಹಿಂಸೆಗೆ ಗುರಿಮಾಡತಕ್ಕದ್ದು ಸರಿಯಲ್ಲ. ಈ ಹೊರೆಯನ್ನು ಕಡಿಮೆ ಮಾಡಬೇಕೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ಕೆ. ಲೀಲಾವತಿ ರೈ (ಬಂಟವಾಳ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಎರೆಕ್ಟ್ರಿಸಿಟಿ ವಿಷಯದಲ್ಲಿ ನನ್ಮಾನ್ಯ ಸದಸ್ಯರುಗಳು ಈ ಕಡೆಯಿಂದ ಆ ಕಡೆಯಿಂದ ಬಹಳವಾಗಿ ಮಾತನಾಡಿದರು. ಮೊಟ್ಟಮೊದಲನೆಯದಾಗಿ ನಮ್ಮ ದೇಶದ ಶೇಕಡಾ 85ರಷ್ಟು ರೈತರು ಈ ದೇಶದ ಜೀವಾಳ. ಅವರ ಉತ್ತಮ ರೀತಿಯ ಜೀವನವೇ ಈ ದೇಶದ ಅಡಿಗಲ್ಲು ಎಂದು ಹೇಳಬಯಸುತ್ತೇನೆ. ಹಿಂದೆ ಬೋರ್ಡಿನ ಅಧಿಕಾರವರ್ಗದವರೊಡನೆ ಕೂಡಿ ಮಾತನಾಡಿದಂಥ ಸಂದರ್ಭದಲ್ಲಿ ಯಾವ ರೀತಿ ಕಷ್ಟಕರವಾದ ಸ್ಥಿತಿಯನ್ನು ಸುಧಾರಿಸಬೇಕೆಂಬುದನ್ನು ನಾವು ಹೇಳಿಕೊಂಡಿದ್ದೇವೆ. ರೈತರಿಂದ ಮಿನಿಮಂ ಚಾರ್ಜಸ್ 4 ರೂಪಾಯಿನಂತೆ ವಸೂಲು ಮಾಡುವುದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಇದನ್ನು ಸರ್ಕಾರದವರು ಯೋಚನೆಮಾಡಿ ಕಡಿಮೆ ಮಾಡಬೇಕು. ರೈತರಿಗೆ ಎರೆಕ್ಟ್ರಿಸಿಟಿ ನಿಗುವಂತಾಗುವುದಿಲ್ಲ. ಈ ಬೋರ್ಡ್ ಜನತೆಗಾಗಿ ಇದೆ. ಜನತೆಯ ಕ್ಷೇಮಕ್ಕಾಗಿ

(ಶ್ರೀಮತಿ ಕೆ. ಲೀಲಾವತಿ ರೈ)

ಇದೆ. ಪ್ರತಿಯೊಂದು ಹಳ್ಳಿಹಳ್ಳಿಗೂ ಈ ದೇಶದಲ್ಲಿ ಎರೆಕ್ಟ್ರಿಸಿಟಿ ಹೋಗಬೇಕು ಮತ್ತು ನೀರಾವರಿ ಸೌಲಭ್ಯವೂ ಹೋಗುವುದು ಅಗತ್ಯವೆಂದು ನಮ್ಮ ಸರ್ಕಾರ ಪದೇ ಪದೇ ಸಾರಿದೆ. ಅದನ್ನು ಮಾಡುವುದು ನಮ್ಮ ಕರ್ತವ್ಯ. ಅದರೂ ನಾವು ಹೇಳುವುದು ಒಂದನ್ನೂ ಕಿವಿಗೆ ಸರ್ಕಾರದವರು ಹಾಕಿಕೊಳ್ಳುತ್ತಿಲ್ಲ. ಆ ರೀತಿ ಮಾಡುವುದು ಸರಿಯಲ್ಲ. ಈಗ ಈ ಸದನದಲ್ಲಿ ಬರೀ ಬಾಯಿಯಿಂದ ಹೇಳಿದರೆ, ಅದರಿಂದೇನೂ ಪ್ರಯೋಜನವಿಲ್ಲ. ಅವರು ಹೇಳಿದ್ದನ್ನು ಕಾರ್ಯಗತ ಮಾಡಬೇಕು.

ಮತ್ತೊಂದು ವಿಷಯ. ನೀರು ಕೊಡುವುದು, ವಿದ್ಯುಚ್ಛಕ್ತಿ ಕೊಡುವುದು, ಆಹಾರ ಕೊಡುವುದು, ಇವು ಪುಣ್ಯ ಕೆಲಸ. ಡೆಪ್ಯುಟಿ ಕಮಿಷನರೇ ಆಗಲಿ, ಯಾರೇ ಆಗಲಿ, ಅಧಿಕಾರ ಸ್ಥಾನದಲ್ಲಿ ಕೂತಿರುವವರು ಎಲ್ಲರ ಅಭಿಪ್ರಾಯವನ್ನೂ ತೆಗೆದುಕೊಂಡು ಕನಿಕರ ದೃಷ್ಟಿಯಿಂದ ಅನುಕೂಲ ಮಾಡಿಕೊಟ್ಟರೆ ಬಹಳ ಒಳ್ಳೆಯದು. ಸದಸ್ಯರು ಅನೇಕರು ಇಲ್ಲಿ ಏನು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೋ, ಅವೆಲ್ಲವನ್ನೂ ನಾನು ಪುಷ್ಟೀಕರಿಸುತ್ತೇನೆ. ಹಿಂದೆ ಒಂದು ಸಾರಿ ಮಾನ್ಯ ಮುಖ್ಯಮಂತ್ರಿಗಳಾಗಿದ್ದಂಥ ಶ್ರೀಮಾನ್ ನಿಜಲಿಂಗಪ್ಪನವರೇ ಈ ಸದನದಲ್ಲಿ ವ್ಯವಸಾಯವನ್ನು ಒಂದು ಕೈಗಾರಿಕೆಯನ್ನಾಗಿ ಪರಿಗಣಿಸಬೇಕೆಂದು ಹೇಳಿದ್ದು ನನಗೆ ಈಗ ಜ್ಞಾಪಕಕ್ಕೆ ಬರುತ್ತಿದೆ. ಅವರು ಹೇಳಿದಂತೆ ಈ ವ್ಯವಸಾಯವನ್ನು ಕೈಗಾರಿಕೆಯ ಹಾಗೆ ಭಾವಿಸಬೇಕೆಂದು ನಾನು ಹೇಳುತ್ತೇನೆ. 6.7 ಪೈಸೆಯಂತೆ ಇಂಡಸ್ಟ್ರಿಗೋಸ್ಕರವಾಗಿ ಕೊಡುತ್ತಿದ್ದಾರೆ. ಆದರೆ ನಮ್ಮ ರೈತರಿಗೆ ಇಲ್ಲಿ ನಾಲ್ಕು ತಿಂಗಳುಗಳ ಕಾಲ ನೀರು ಇದ್ದರೆ ಆರು ತಿಂಗಳುಗಳು ನೀರು ಇಲ್ಲ. ಅವರು 24 ರೂಪಾಯಿಗಳನ್ನು ಕೊಡುವುದು ಬಹಳ ಕಷ್ಟ. ಅವರು ಈಗಿರತಕ್ಕ ತೆರಿಗೆಗಳ ಹೊರೆಯನ್ನು ಹೊರುವುದಕ್ಕೆ ಕಷ್ಟಪಡುತ್ತಿದ್ದಾರೆ. ಅವರು ಬತ್ತ ಬೆಳೆದುದನ್ನು ಲೆವಿ ರೂಪವಾಗಿ ತೆಗೆದುಕೊಂಡು ಅರ್ಬನ್ ಏರಿಯಾದಲ್ಲಿ ಜನರಿಗೆ ಒದಗಿಸಿಕೊಡುವಂಥ ಪುಣ್ಯ ಕೆಲಸವನ್ನು ಮಾಡುತ್ತಿದ್ದಾರೆ. ಅರ್ಬನ್ ಏರಿಯಾಗಳಲ್ಲಿರುವ ಜನತೆ ಅದನ್ನು ತಿಳಿದುಕೊಳ್ಳಬೇಕು. ಅವರು ಅರ್ಬನ್ ಜನತೆಗೆ ಊಟಕ್ಕಾಗಿ ಆಹಾರವನ್ನು ಕಷ್ಟಪಟ್ಟು ಬೆಳೆಸಿ ಕೊಡುತ್ತಿದ್ದಾರೆ. ಅಂದಮೇಲೆ ಅವರು ಕೂಡ ಸ್ಟ್ರೈಕ್ ಮಾಡುತ್ತೇವೆಂದು ಎದ್ದರೆ, ನಮ್ಮ ಗತಿಯೇನೆಂಬುದನ್ನು ನಮ್ಮ ಜನತೆ ತಿಳಿಯಬೇಕು. ಏಕೆಂದರೆ ನಮ್ಮಲ್ಲಿ ಶೇಕಡಾ 85ರಷ್ಟು ರೈತರು ಇದ್ದಾರೆ. ಅವರು ಈಗಾಗಲೇ ಮಾನ್ಯ ಮಂತ್ರಿಗಳಿಗೆ ತಂತಿಗಳನ್ನು ಕಳುಹಿಸಿದ್ದಾರೆ. ಹಳ್ಳಿಗಳಿಂದ ಈಗಾಗಲೇ 500 ತಂತಿಗಳು ಒಬ್ಬೊಬ್ಬ ಸದಸ್ಯರಿಗೆ ಬಂದಿದೆ. ಈ ಇರಾಖೆ ಬಹಳ ಪ್ರಾಮುಖ್ಯವಾದುದು. ಇದು ದೇಶದ ಜೀವಾಳ. ಇದಕ್ಕೆ ಯಾವುದಾದರೂ ರೀತಿಯಿಂದ ಸಬ್ಸಿಡೈಜ್ ಮಾಡಬೇಕು. ಸರ್ಕಾರದವರು ಅಗತ್ಯವಿಲ್ಲದ ಕೆಲಸಕಾರ್ಯಗಳಿಗೆ ಬಹಳವಾಗಿ ಖರ್ಚುಮಾಡುತ್ತಿದ್ದಾರೆ. ಅದನ್ನು ನಿಲ್ಲಿಸಿ ಈ ಬೋರ್ಡಿಗೆ ಅದಷ್ಟು ಹಣವನ್ನು ಒದಗಿಸಬೇಕು. ಸರ್ಕಾರ ಮತ್ತು ಬೋರ್ಡಿನವರು ರೈತರ ಹಿತದೃಷ್ಟಿ ಇಟ್ಟುಕೊಂಡು ಇದರಲ್ಲಿ ಏನಾದರೂ ಅವರಿಗೆ ಉಪಕಾರ ಮಾಡದಿದ್ದರೆ ಮಾನ್ಯ ಸದಸ್ಯರು ಬಹಳ ಇಕ್ಕಟ್ಟಿನ ಪರಿಸ್ಥಿತಿಗೆ ಬೀಳಬೇಕಾಗುತ್ತದೆ. ರೈತರ ಪ್ರತಿನಿಧಿಗಳಾಗಿ ಹೋದವರು ನೀವು ಅಸೆಂಬ್ಲಿಯಲ್ಲಿ ಏನು ಮಾಡಿದ್ದೀರಿ ಎಂದು ಕೇಳುತ್ತಾರೆ. ಅದುದರಿಂದ ವಿದ್ಯುಚ್ಛಕ್ತಿಯ ದರವನ್ನು ಅದಷ್ಟು ಕಡಿಮೆ ಮಾಡುವುದಕ್ಕೆ ಪ್ರಯತ್ನಪಡಬೇಕು. ಸರ್ಕಾರದವರು ಅದನ್ನು ಕಾರ್ಯಗತ ಮಾಡಬೇಕು. ಇದು ಸಾಧ್ಯವಿಲ್ಲದಿದ್ದರೆ ಯಾವುದಾದರೂ ಒಂದು ರೂಪದಲ್ಲಿ ಸಬ್ಸಿಡಿ ಕೊಟ್ಟು ರೈತರಿಗೆ ಸಹಾಯ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಬಹಳ ಕಳಕಳಿಯಿಂದ ರೈತರ ಪರವಾಗಿ ಹೇಳಲಿಚ್ಛಿಸುತ್ತೇನೆ. ಈಗ ರೈತರಿಗೆ ಅವರ ಪಂಪು ಸೆಟ್ಟಿಗೆ ಎರೆಕ್ಟ್ರಿಸಿಟಿ ಸಿಗಬೇಕಾದರೆ ಅವರು ಅದಕ್ಕಾಗಿ ಎಷ್ಟು ಕಷ್ಟಪಡುತ್ತಾರೆ. ಮತ್ತು ಅವರು ಎಷ್ಟು ನಷ್ಟಪಡುತ್ತಾರೆಂಬುದನ್ನು ನಾನು ಇಲ್ಲಿ ವಿವರಿಸಬೇಕಾಗಿಲ್ಲ. ಅದು ಮಾನ್ಯ ಸದಸ್ಯರಿಗೇ ಗೊತ್ತಿದೆ. ನೀವು ನಷ್ಟದಿಂದ ಕೊಡಿ ಎಂದು ನಾನು ಹೇಳುತ್ತಾ ಇಲ್ಲ. ಆದರೆ ರೈತರಿಗೆ ಕಷ್ಟಕೊಡಬೇಡಿ. ಅವರಿಗೆ ಸುಲಭ ದರದಲ್ಲಿ ಎರೆಕ್ಟ್ರಿಸಿಟಿ ಸಿಗುವಂತೆ ಮಾಡುವುದು ಸರ್ಕಾರದ ಮತ್ತು ಬೋರ್ಡಿನ ಜವಾಬ್ದಾರಿ ಇದೆ. ಇದರಲ್ಲಿ ಯಾವ ರೀತಿ ನಷ್ಟವಾಗುತ್ತಿದೆ, ಏನು ಕಾರ್ಯಕ್ರಮ ತೆಗೆದುಕೊಂಡರೆ ಉಳಿತಾಯ ಮಾಡಬಹುದೆಂಬುದನ್ನು ಪರಿಶೀಲಿಸಿ ನಮ್ಮ ರೈತರಿಗೆ ಅದಷ್ಟು ಸಹಾಯ ಮಾಡಬೇಕೆಂದು ಮತ್ತೊಮ್ಮೆ ಕಳಕಳಿಯಿಂದ ಬೇಡಿ, ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ).—ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರನೇಕರು, ಈ ವಿದ್ಯುಚ್ಛಕ್ತಿಯ ದರ ಪರಿಕೆಯ ವಿಚಾರದಲ್ಲಿ ಸಾಕಷ್ಟು ಪ್ರತಿಭಟನೆಯನ್ನು ಮತ್ತು ಇದರಿಂದಾಗತಕ್ಕ ಅನಾಹುತವನ್ನು ಸಾಕಷ್ಟು ಹೇಳಿದ್ದಾರೆ.

ನಾನಾದರೂ ಈ ಬೋರ್ಡನ್ನು ಭಸ್ಮಾಪುರಸಿಗೆ ಹೋಲಿಸುತ್ತೇನೆ. ಇವತ್ತು ಬೋರ್ಡ್ ಕೈಹಾಕಿದ ಯಾವುದೇ ವಿಚಾರವಾದರೂ ಕೂಡ, ನಾಶವಾಗುವುದಲ್ಲದೆ, ಒಳ್ಳೆಯದಾಗುವುದಿಲ್ಲ. ಎಲೆಕ್ಟ್ರಿಸಿಟಿ ಬೋರ್ಡು, ಟ್ರಸ್ಟ್ ಬೋರ್ಡು, ವಾಟರ್ ಸಪ್ಲೈ ಬೋರ್ಡು ಮತ್ತು ಇದರ ಜೊತೆಗೆ ಕಾರ್ಪರೇಷನ್ ಇವೇ ಅದಕ್ಕೆ ಸಾಕ್ಷಿ. ಸರ್ಕಾರದವರು ನಡೆಸುತ್ತಿದ್ದಾಗ ಲಾಭವಾಗುವುದಕ್ಕೆ ಏನು ಕಾರಣ ಮತ್ತು ಬೋರ್ಡಿನವರು ಬಂದಾಗ ಏಕೆ ನಷ್ಟವಾಯಿತು, ಇದಕ್ಕೆ ಕಾರಣವೇನು ಎಂಬುದನ್ನು ನೋಡಬೇಕು. ಬೋರ್ಡಿನ ಅಧಿಕಾರಿಗಳನ್ನು ಪೂರ್ಣವಾಗಿ ಟೀಕೆ ಮಾಡುತ್ತಾ ಇಲ್ಲ. ಏಕೆಂದರೆ ಇವರು ಹಿಂದೆ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡುತ್ತಿದ್ದವರು. ಆದರೆ ಆಗ ಡಿಪಾರ್ಟ್‌ಮೆಂಟ್ ಚೆನ್ನಾಗಿ ನಡೆದಿರುವುದಕ್ಕೆ ಏನು ಕಾರಣ? ಮತ್ತು ಇವತ್ತು ಇವರು ಜನರಿಗೆ ಕಿರುಕುಳ ಕೊಡುವುದಕ್ಕೆ ಏನು ಕಾರಣವೆಂಬುದನ್ನು ನಾವು ನೋಡಬೇಕಾಗಿದೆ. ಇವತ್ತು ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಅನೇಕ ವಿಧವಾದಂತಹ ನಷ್ಟವಾಗಲು ಮುಖ್ಯವಾಗಿ ಸರ್ಕಾರದವರೇ ಕಾರಣರು. ಇದಕ್ಕೆ ಸರ್ಕಾರದ ನೀತಿಯೇ ಕಾರಣವೆಂದು ಹೇಳಬೇಕಾಗಿದೆ. ಸರ್ಕಾರದವರು ಏನು ಮಾಡಿದ್ದಾರೆಂದರೆ, ತಮ್ಮ ಅಧಿಕಾರ ನಡೆಯಬೇಕು, ತಾವು ಹೇಳಿದಂತೆ ನಡೆಯಬೇಕೆಂದು ಮಾಡಿದ್ದಾರೆ. ಕಷ್ಟ ಬಂದಾಗ ಸ್ವಾಟೋನಿಯರಿ ಬೋರ್ಡು ಎಂದು ಇಡುತ್ತಾರೆ. ಇವರು ತಮ್ಮವರನ್ನು ಅಲ್ಲಿ ಇಡುವುದಕ್ಕೆ, ತಮ್ಮವರಿಗೆ ಲಾಭ ಮಾಡುವುದಕ್ಕೆ, ಈ ಬೋರ್ಡನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಮುಖ್ಯವಾಗಿ ಬೋರ್ಡಿನವರು ಈ ರೂರಲ್ ಎಲೆಕ್ಟ್ರಿಫಿಕೇಶನ್ ತೆಗೆದುಕೊಂಡಿದ್ದುದರಿಂದ ಈ ನಷ್ಟವನ್ನು ಸರಿದೂಗಿಸುವುದಕ್ಕೆ ರೇಟ್ ಹೆಚ್ಚಿಸಿದ್ದು ಎಂದು ಹೇಳುತ್ತಾರೆ. ನಮ್ಮ ಹಳ್ಳಿಗಳಿಗೆ ಶಗತಕ್ಕ ಕೊಂದರೆಗಳನ್ನು ನಮ್ಮ ಸದಸ್ಯರನೇಕರು ಹೇಳಿದ್ದಾರೆ. ಹಳ್ಳಿಯವರಿಂದ ಇವತ್ತು ನಾವು ಬದುಕುತ್ತಿದ್ದೇವೆ. ಹಳ್ಳಿಯವರಿಂದ ಜನ ಊಟ ಮಾಡುತ್ತಿದ್ದಾರೆ ಮತ್ತು ನಾನು ಅವರಿಗೆ ಉಪಕಾರ ಮಾಡಬೇಡಿ ಎಂದು ಹೇಳುತ್ತಿಲ್ಲ. ಆದರೆ ನಮ್ಮ ಪಟ್ಟಣವನ್ನು ಕೂಡ ಹಳ್ಳಿಯವರ ಜೊತೆಗೆ ಅವ್ಯವಸ್ಥೆಗೆ ತೆಗೆದುಕೊಂಡು ಹೋಗಬೇಡಿ. ಸರ್ಕಾರ ಎಲೆಕ್ಟ್ರಿಸಿಟಿ ಟ್ಯಾಕ್ಸ್ ತೆಗೆದುಕೊಳ್ಳುತ್ತದೆ, ಸೇರ್ಸ್ ಟ್ಯಾಕ್ಸ್ ತೆಗೆದುಕೊಳ್ಳುತ್ತದೆ, ಮತ್ತು ಕೋಟ್ಯಾಂತರ ರೂಪಾಯಿ ಬಡ್ಡಿ ರೂಪದಲ್ಲಿ ತೆಗೆದುಕೊಳ್ಳುತ್ತದೆ. ಹಳ್ಳಿಗಳನ್ನು ಉದ್ಧಾರಮಾಡುವುದಕ್ಕೆ ಸಬ್ಸಿಡಿ ಕೊಡಬೇಕೇ ಏನಹ ಬೇರೆ ಏನೂ ಮಾಡುವುದು ಸರಿಯಲ್ಲ. ಹಾವನ್ನು ಹೊಡೆದುಹಿದ್ದಿಗೆಹಾಕಿದಂತೆ ಮಾಡುವುದು ಸರಿಯಲ್ಲ. ಇವತ್ತು ಶರಾವತಿಯಲ್ಲಿ ಮತ್ತು ಜೋಗ್‌ನಲ್ಲಿ ಉಂಟಾಗತಕ್ಕ ಉತ್ಪನ್ನ ಒಂದಕ್ಕೆ ನಾಲ್ಕರಷ್ಟು ಹೆಚ್ಚಾಗಿದೆ. ಈ ಉತ್ಪನ್ನದ ಖರ್ಚುಗಳಿಗನುಗುಣವಾಗಿ ಅದರ ದರವನ್ನು ಫಿಕ್ಸ್ ಮಾಡಬೇಕು. ಅವರು ಕೊಡತಕ್ಕ ಬಡ್ಡಿ ಮತ್ತು ಅವರ ಆಸ್ತಿಪಾಸ್ತಿಗಳನ್ನು ನೋಡಬೇಕು. ಸರ್ಕಾರದವರು ಅವರಿಗೆ ಎಷ್ಟು ಆಸ್ತಿಪಾಸ್ತಿ ಕೊಟ್ಟಿದ್ದಾರೆ, ಮತ್ತು ಅದರ ಮೇಲೆ ಬಡ್ಡಿ ಕೊಡುತ್ತಾರೆಂಬುದನ್ನೂ ವಿಮರ್ಶೆ ಮಾಡಬೇಕು. ಅದೇ ರೀತಿ ಇವತ್ತು ನಿಮ್ಮ ಎಸ್ಟಾಬ್ಲಿಷ್‌ಮೆಂಟ್ ಯದ್ವಾತದ್ವಾ ಹೋಗಿದೆ. ಅದನ್ನು ಕೂಡ ಪರಿಶೀಲನೆ ಮಾಡಬೇಕು. ಇವತ್ತು ಇಲ್ಲಿ ಬೇಕಾದಷ್ಟು ಆಫೀಸರುಗಳು ಇದ್ದಾರೆ. ಅವರನ್ನು ಕಡಿಮೆ ಮಾಡಬೇಕು. ಇದರ ಜೊತೆಗೆ ಮಾನ್ಯನದನ್ಯರನೇಕರು ಹೇಳಿದ ಹಾಗೆ ಬೇಕಾದಷ್ಟು ಜನರು ವಿದ್ಯುಚ್ಛಕ್ತಿಯನ್ನು ಕದ್ದು ಉಪಯೋಗಿಸುತ್ತಿದ್ದಾರೆ. ಇದಕ್ಕೆ ಎಲೆಕ್ಟ್ರಿಸಿಟಿ ಬೋರ್ಡಿನ ಅಧಿಕಾರಿಗಳ ಬೆಂಬಲ ಇದೆ. ಇದನ್ನು ಹಲವು ಸದಸ್ಯರು ಇಲ್ಲಿ ಹೇಳಿದ್ದಾರೆ. ಇವತ್ತು ಜನರೇಟ್ ಆಗತಕ್ಕ ಪವರನ್ನು ನಾವು ಪೂರ್ತಿಯಾಗಿ ಉಪಯೋಗಿಸಿಕೊಳ್ಳಬೇಕು. ಅರ್ಧಂಭರ್ಧ ಉಪಯೋಗಿಸಿಕೊಳ್ಳದೆ, ಪೂರ್ತಿಯಾಗಿ ಉಪಯೋಗಿಸಿಕೊಳ್ಳಬೇಕು; ಮತ್ತು ಈಗ ಆಗತಕ್ಕ ಅನ್ ಅಥರೈಸ್ಡ್ ಟ್ಯಾಪಿಂಗ್ ಏನಿದೆ, ಅದನ್ನು ತಪ್ಪಿಸಬೇಕು. ಈ ರೀತಿಯೆಲ್ಲಾ ಮಾಡಿ ಅದ ನಷ್ಟವನ್ನು ತುಂಬಬೇಕೇ ಏನಃ ಅದನ್ನು ಯಾರ ಮೇಲಾದರೂ ಹಾಕಬಾರದು. ಬೆಂಗಳೂರಿಗೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ಈಗಾಗಲೇ ಇವರ ವರಮಾನದ ಸುಮಾರು ಕಾಲು ಭಾಗ ಉತ್ಪತ್ತಿಯಾಗುತ್ತಿದೆ. ನೀವು ದರ ಹೆಚ್ಚಿಸಿರುವುದರಿಂದ ಕಾರ್ಪೊರೇಷನ್ನಿನವರು 13 ಲಕ್ಷ ಕೊಡುತ್ತಿದ್ದಾರೆ. ವಾಟರ್ ಅಂಡ್ ಸಿವರೇಜ್ ಬೋರ್ಡಿನವರು 32 ಲಕ್ಷ ಕೊಡುತ್ತಿದ್ದಾರೆ. ಆ ಮೇಲೆ ಸ್ಟ್ರೀಟ್ ಲೈಟ್, ವಾಟರ್ ಸಪ್ಲೈಸ್ ಇದಕೆಲ್ಲಾ ಪವರ್ ರೇಟ್ ಜಾಸ್ತಿಯಾದಾಗ, ಅದು ಇನ್‌ಡೈರೆಕ್ಟಾಗಿ ಜನರ ಮೇಲೆ ಬೀಳುತ್ತದೆ. ಅದರ ಜೊತೆಗೆ ಗೃಹ ಬಳಕೆಯ ವಿದ್ಯುಚ್ಛಕ್ತಿಗೂ ಕೂಡ ಒಂದಕ್ಕೆ ಎರಡರಷ್ಟು, ಮೂರರಷ್ಟು ಕೊಡಬೇಕಾದ ಸಂದರ್ಭ ಬರುತ್ತದೆ. ಇವತ್ತು ಸಿಟಿಯಲ್ಲಿ ಅನೇಕ, ಪ್ರಿಂಟಿಂಗ್ ಪ್ರೆಸ್ಸುಗಳು ಇವೆ, ಹ್ಯಾಂಡ್ಲೂಮ್ಸ್ ಇವೆ, ಸಣ್ಣ ಕೈಗಾರಿಕೆಗಳು ಇವೆ, ಇವೆಲ್ಲಾ ಪವರ್ ಉಪಯೋಗಿಸುವಾಗ ಇದಕ್ಕೆ ಕಡಿಮೆ ದರದಲ್ಲಿ ಕೊಡಬೇಕು. ಏಕೆಂದರೆ ಒಂದು ಕಡೆ ನೀವು ಜನರ ಜೀವನ ಮಟ್ಟ ಇಳಿಸಬೇಕೆಂದು ಹೇಳುತ್ತಿದ್ದೀರಿ ಇನ್ನೊಂದು ಕಡೆ ಈ ರೀತಿ ರೇಟನ್ನು ಜಾಸ್ತಿ ಮಾಡುತ್ತಿದ್ದೀರಿ. ಇದರಿಂದ ಜನರ ಹಿತದೃಷ್ಟಿಯನ್ನು ಕಾಪಾಡಿದ ಹಾಗೆ ಆಗುವುದಿಲ್ಲ. ಒಟ್ಟಿನಲ್ಲಿ ಎಲೆಕ್ಟ್ರಿಸಿಟಿ ಬೋರ್ಡು ಆದ ಮೇಲೆ ಜನರಿಗೆ ಏನಾದರೂ ಸೌಕರ್ಯವಾಗಿದೆಯೇ ಅಂದರೆ, ಅದು ಇಲ್ಲ. ಇವತ್ತು

(ಶ್ರೀ ಟಿ. ಆರ್. ಶಾಮಣ್ಣ)

ಬೆಂಗಳೂರಿನಲ್ಲಿ ಎಷ್ಟೋ ಅವ್ಯವಸ್ಥೆಯಾಗಿದೆ. ಇವರ ಲೆಕ್ಕಪತ್ರಗಳು ಸರಿಯಾಗಿಲ್ಲ. ಇವತ್ತು ರೈತರಿಗೆ ಅನುಕೂಲವಾಗಬೇಕೆಂದು ಶೇಕಡಾ 90 ಜನರು ಹೇಳುತ್ತಿದ್ದಾರೆ. ಆದರೆ ಆ ನಷ್ಟವನ್ನು ನಮ್ಮಿಂದ ವಸೂಲು ಮಾಡುವುದು ಬೇಡ. ರೂರರ್ ಎಲೆಕ್ಟ್ರಿಫಿಕೇಶನ್‌ನಲ್ಲಿ ಆಗತಕ್ಕಂತಹ ನಷ್ಟವನ್ನು ಸರ್ಕಾರ ದವರು ಭರ್ತಿ ಮಾಡಬೇಕು ಮತ್ತು ಇನ್ನು ಬೇರೆ ರೀತಿಯಲ್ಲಿ ನಷ್ಟವಾಗಿದ್ದರೆ, ಅದನ್ನು ನಮ್ಮಿಂದ ವಸೂಲು ಮಾಡಬಾರದು. ಮತ್ತು ಇಲ್ಲಿ ಆಗತಕ್ಕ ಮಿಸ್‌ಮ್ಯಾನೇಜ್‌ಮೆಂಟನ್ನು ಕಡಿಮೆ ಮಾಡಿ, ಆಗತಕ್ಕ ನಷ್ಟವನ್ನು ಕಡಿಮೆ ಮಾಡಬೇಕು. ಮತ್ತು ಯಾವುದೋ ಕಾಲದಲ್ಲಿ ಈ ದರವನ್ನು ಫಿಕ್ಸ್ ಮಾಡಿದ್ದು ಎಂದು ಹೇಳುತ್ತಿದ್ದಾರೆ. ಆದರೆ, ಅದೇ ಸಮಯಕ್ಕೆ, ಹಿಂದೆ ಎಷ್ಟು ಪವರ್, ಜನರೇಟ್ ಆಗುತ್ತಿತ್ತು, ಈಗ ಎಷ್ಟು ಆಗುತ್ತಿದೆ ಎಂಬುದನ್ನೂ ಕೂಡ ನೋಡಬೇಕು. ಆದ್ದರಿಂದ ಹಳ್ಳಿಯ ವರಿಗೆ ಅನುಕೂಲ ಮಾಡಿಕೊಡಬೇಕೆಂದು ಇಲ್ಲಿಯ ಜನರಿಂದತುಂಬಿಕೊಳ್ಳುವುದು ಬೇಡ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-30 P.M.

†ಶ್ರೀಮತಿ ನಾಗಮ್ಮ.—(ಕಲ್ಕುಲ) ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ನಥೆಯಮುಂದಿಟ್ಟಿರತಕ್ಕ ಎಲೆಕ್ಟ್ರಿಸಿಟಿಬೋರ್ಡಿನ ಫೈನಾನ್ಷಿಯರ್ ಸ್ಟೇಟ್‌ಮೆಂಟಿನ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟ ಮೊದಲನೆಯದಾಗಿ ನಾನು ಹೇಳುವುದಾದರೆ ಈಗ ವಿದ್ಯುಚ್ಛಕ್ತಿ ಬೋರ್ಡಿನವರು ರೈತರು ಪಂಪುಸೆಟ್ಟುಗಳಿಗೆ ಉಪಯೋಗಿಸತಕ್ಕ ವಿದ್ಯುಚ್ಛಕ್ತಿಯ ಮೇಲೆ ಹೆಚ್ಚಿನ ದರವನ್ನು ಹಾಕಿದ್ದಾರೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗಿದೆ. ರೈತರು ಪಂಪುಸೆಟ್ಟುಗಳನ್ನು ಕೊಂಡುಕೊಂಡದ್ದೇ ಒಂದು ದೊಡ್ಡ ತಪ್ಪಾಗಿದೆ ಎನ್ನುವಂತಾಗಿದೆ. ಎಲೆಕ್ಟ್ರಿಸಿಟಿ ಬೋರ್ಡಿನವರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿದೆ ಎಂದು ನಾವೆಲ್ಲರೂ ಪದೇಪದೇ ಹೇಳುತ್ತಿದ್ದೇವೆ. ಒಂದು ಪಂಪು ಸೆಟ್ಟಿಗೆ ಮಿನಿಮಮ್ ಚಾರ್ಜಸ್ 48 ರೂಪಾಯಿಗಳನ್ನು ರೈತ ಕೊಡಬೇಕೆಂದರೆ ಅವನು ಎಲ್ಲಿಂದ ತಂದು ಕೊಡಬೇಕು? ಈ ರೀತಿ ರೈತರು ಉಪಯೋಗಿಸತಕ್ಕ ವಿದ್ಯುಚ್ಛಕ್ತಿಗೆ ದರವನ್ನು ಏರಿಸಿರುವುದು ಸರಿಯಲ್ಲ, ಇದನ್ನು ಕಡಿಮೆ ಮಾಡಬೇಕು, ಇಲ್ಲವೇ ಹೋದರೆ ರೈತ ಮುಂದಕ್ಕೆ ಬರುವುದಕ್ಕಾಗುವುದಿಲ್ಲ ಎಂದು ಹೇಳಿ ವಿದ್ಯುಚ್ಛಕ್ತಿ ಬೋರ್ಡಿನವರಿಗೆ ನಾವು ಮನವಿಯನ್ನು ಕೊಟ್ಟರೂ ಕೂಡ ಅದರ ಬಗ್ಗೆ ವಿದ್ಯುಚ್ಛಕ್ತಿ ಬೋರ್ಡಿನವರು ಸೂಕ್ತ ಕ್ರಮವನ್ನು ತೆಗೆದುಕೊಂಡು ರೈತರಿಗೆ ಯಾವರೀತಿಯ ಅನುಕೂಲತೆಯನ್ನು ಮಾಡಿಕೊಟ್ಟ ಹಾಗೆ ಕಾಣುವುದಿಲ್ಲ. ಇಪ್ಪತ್ತಿನ ದಿವಸ ರೈತರಿಂದ ದೇಶ ಉದ್ಧಾರವಾಗಬೇಕು. ಆದ್ದರಿಂದ ರೈತ ಚೆನ್ನಾಗಿದ್ದರೆ ಎಲ್ಲರೂ ಚೆನ್ನಾಗಿರುತ್ತಾರೆ. ರೈತನಿಗಾಗಿ ನಾವು ಕರರು ಇರುವುದು. ರೈತರು ದುಡಿದಂತಹ ಹಣದಿಂದ ನಾವು ರಾಗಿಗೆ ಸಂಬಳ ಸಾರಿಗೆಗಳನ್ನು ಕೊಡಲಾಗುತ್ತಿದೆ. ಹೀಗಿರುವಾಗ ವಿದ್ಯುಚ್ಛಕ್ತಿ ಬೋರ್ಡಿನವರು ರೈತನು ಉಪಯೋಗಿಸತಕ್ಕಂಥ ವಿದ್ಯುಚ್ಛಕ್ತಿಗೆ ಹೆಚ್ಚಿನ ದರವನ್ನು ಹಾಕಿರತಕ್ಕದ್ದು ಸರಿಯೇ ಎಂದು ನಾನು ವಿದ್ಯುಚ್ಛಕ್ತಿ ಬೋರ್ಡಿನವರಿಗೆ ಒತ್ತಾಯಪೂರ್ವಕವಾಗಿ ಕೇಳುತ್ತೇನೆ. ರೈತರು ಚೆನ್ನಾಗಿದ್ದರೆ ಎಲ್ಲರೂ ಚೆನ್ನಾಗಿರುತ್ತಾರೆ. ರೈತ ಚೆನ್ನಾಗಿಲ್ಲದಿದ್ದರೆ ನಾವು ಕರರಿಗೆ ಸಂಬಳ ಎಲ್ಲಿಂದ ಬರೆಯುತ್ತದೆ. ಆದ್ದರಿಂದ ಎಲ್ಲರೂ ಸೇರಿ ರೈತರನ್ನು ಉದ್ಧಾರ ಮಾಡುವಂತಹ ಕಾರ್ಯವನ್ನು ಮಾಡಬೇಕು. ಇವೊತ್ತು ಒಬ್ಬ ರೈತ ಒಂದು ಬಾವಿಗೆ ಪಂಪು ಸೆಟ್ಟು ಹಾಕಿಸಿ ಅವಕ್ಕೆ ವಿದ್ಯುಚ್ಛಕ್ತಿಯನ್ನು ಪಡೆಯಬೇಕಾದರೆ ಅವನು ವಿದ್ಯುಚ್ಛಕ್ತಿ ಬೋರ್ಡಿಗೆ ಎಷ್ಟು ಸಾರಿ ಅಲೆದಾಡಬೇಕು, ಎಷ್ಟು ಅವತಾರ ಆಡಬೇಕು, ಎಷ್ಟು ಕಷ್ಟಪಡಬೇಕು ಎಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಈ ರೀತಿಯಾಗಿ ರೈತ ತನ್ನ ಕೆಲಸಕಾರ್ಯಗಳನ್ನು ಮಾಡಿಸಿಕೊಳ್ಳಬೇಕಾದರೆ ಬೋರ್ಡ್ ಪತಕ್ಕೆ ಇರಬೇಕು? ರಿಜ್ಜೆರ್ ಆದಂಥವರು ಈ ಎಲೆಕ್ಟ್ರಿಸಿಟಿ ಬೋರ್ಡಿಗೆ ಚೇರ್ಮನ್ ಆಗಿ ಬಂದಿರುವುದರಿಂದ ಈರೀತಿ ರೈತರಿಗೆ ತೊಂದರೆಯಾಗುತ್ತಿದೆ ಎಂದು ಗೊತ್ತಾಗಿದೆ. ಅವರಿಗೆ ರೈತರ ಕಷ್ಟಸುಖಗಳೇನು ಎಂಬುದು ಚೆನ್ನಾಗಿ ಗೊತ್ತಿಲ್ಲ ಎಂದು ಕಾಣುತ್ತದೆ. ನಿಜವಾಗಿಯೂ ಅವರಿಗೆ ರೈತರ ಕಷ್ಟಸುಖಗಳ ಅರಿವು ಆಗಿದ್ದರೆ ಇಷ್ಟು ಹೆಚ್ಚಿನ ದರಗಳನ್ನು ರೈತರು ಉಪಯೋಗಿಸತಕ್ಕಂಥ ವಿದ್ಯುಚ್ಛಕ್ತಿಯಮೇಲೆ ಅವರು ಹಾಕುತ್ತಿರಲಿಲ್ಲ ಎಂದು ನಾವು ಹೇಳಬೇಕಾಗಿದೆ. ರೈತರ ಕಷ್ಟಸುಖಗಳೇನು ಎಂಬುದನ್ನೆಲ್ಲಾ ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಈ ದೃಷ್ಟಿಯಿಂದ ರೈತರಿಗೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸುವುದಕ್ಕೆ ಹೆಚ್ಚಿನ ದರವನ್ನು ಹಾಕಿರತಕ್ಕದ್ದು ಸರಿಯಲ್ಲ ಎಂದು ನಾನು ಹೇಳಬಯಸುತ್ತೇನೆ. ಸಾಧ್ಯವಾದ ಮಟ್ಟಿಗೆ ರೈತರಿಗೆ ಅನುಕೂಲ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅದಕ್ಕೆ ಬದಲಾಗಿ ರೈತರನ್ನು ಭೂಮಿಗೆ ತುಳಿಯಬೇಕು ಎನ್ನುವಂಥಾದ್ದು ಸರಿಯಲ್ಲ. ರೈತ ನಮ್ಮ ಗುರಾಮ ಎಂದು ತಿಳಿದುಕೊಳ್ಳತಕ್ಕದ್ದು

ನರಿಯಲ್ಲ. ಯಾರಾದರೂ ಒಬ್ಬ ರೈತ ಒಂದು ಟಾವಿಗೆ ಪಂಪುಸೆಟ್ಟು ಹಾಕಿಸಿ ಅದಕ್ಕೆ ವಿದ್ಯುಚ್ಛಕ್ತಿ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ಅಲ್ಲಿ ಕಂಬ ನೆಡುವುದಕ್ಕೆ, ಎರಡು ತಿಂಗಳು, ತಂತಿ ಎಳೆಯುವುದಕ್ಕೆ 4 ತಿಂಗಳು, ಆಮೇಲೆ ಕನೆಕ್ಷನ್ ಕೊಡುವುದಕ್ಕೆ 4 ತಿಂಗಳು ಈ ರೀತಿಯಾಗಿ ಅವನು ಒಂದು ಪಂಪು ಸೆಟ್ಟಿಗೆ ವಿದ್ಯುಚ್ಛಕ್ತಿ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ಒಂದು ವರ್ಷವಾಗುತ್ತದೆ. ಹೀಗಾದರೆ ರೈತರ ಗತಿ ಏನು? ರೈತ ತನ್ನ ಕೆಲಸವನ್ನು ಮಾಡಿಸಿಕೊಳ್ಳಬೇಕಾದರೆ ಎಷ್ಟು ಜನಗಳ ಹತ್ತಿರ ತಿರುಗಾಡಬೇಕು? ಸೂಪರ್ ವೈಜರ್, ಅಸಿಸ್ಟೆಂಟ್ ಇಂಜಿನಿಯರ್, ಎಗ್ಜಿಕ್ಯೂಟೀವ್ ಇಂಜಿನಿಯರ್ ಹೀಗೆ ಅನೇಕ ಆಫೀಸರುಗಳ ಹತ್ತಿರ ರೈತ ತನ್ನ ಕೆಲಸವಾಡಿಸಿಕೊಳ್ಳುವುದಕ್ಕಾಗಿ ತಿರುಗಾಡ ಬೇಕಾಗಿದೆ. ರೈತನನ್ನು ಕೇಳುವವರೇ ಇಲ್ಲ. ಮೊದಲು ರೈತ ಉದ್ಧಾರವಾಗಬೇಕು. ರೈತನ ಉದ್ಧಾರವಾದರೆ ದೇಶದ ಉದ್ಧಾರವಾಗುತ್ತದೆ. ಇವೊತ್ತು ನಮ್ಮ ದೇಶದಲ್ಲಿ ನೌಕರರಿಗೆ ಸಂಬಳವನ್ನು ಕೊಡತಕ್ಕವನು, ಅನ್ನವನ್ನು ಕೊಡತಕ್ಕವನು ರೈತ. ಆದ್ದರಿಂದ ರೈತನನ್ನು ಉದ್ಧಾರ ಮಾಡುವ ಕಾರ್ಯದಲ್ಲಿ ವಿದ್ಯುಚ್ಛಕ್ತಿ ಬೋರ್ಡಿನವರು ಮತ್ತು ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ನಾನು ಹೇಳಬಯಸುತ್ತೇನೆ. ರೈತರೆಲ್ಲರೂ ನಮಗೆ ಪತ್ರವನ್ನು ಬರೆಯುತ್ತಿದ್ದಾರೆ ನೀವು ನಮ್ಮಿಂದ ಆರಿಸಿ ಹೋಗಿ ನಮಗೋಸ್ಕರ ವಿಧಾನಸಭೆಯಲ್ಲಿ ಏನು ಕೆಲಸ ಮಾಡುತ್ತಿದ್ದೀರಿ, ನಮ್ಮ ಹಿತ ಸಾಧನೆಯ ಬಗ್ಗೆ ಏನು ನೀವು ಕೆಲಸಮಾಡುತ್ತಿದ್ದೀರಿ ಎಂದು ಕೇಳುತ್ತಿದ್ದಾರೆ. ಅವರಿಗೆ ನಾವು ಜವಾಬು ಕೊಡಬೇಕು. ಈ ದೃಷ್ಟಿಯಿಂದ ನಾನು ವಿದ್ಯುಚ್ಛಕ್ತಿ ಬೋರ್ಡಿನವರಿಗೆ ಹೇಳುವುದು ಏನೆಂದರೆ ಈಗ ರೈತರು ಉಪಯೋಗಿಸತಕ್ಕ ವಿದ್ಯುಚ್ಛಕ್ತಿ ಏನಿದೆ ಅವಕ್ಕೆ ಹೆಚ್ಚಿನ ದರವನ್ನು ವಿಧಿಸಿರುವುದು, ಮತ್ತು ಪಂಪುಸೆಟ್ಟುಗಳಿಗೆ ಉಪಯೋಗಿಸತಕ್ಕಂಥ ವಿದ್ಯುಚ್ಛಕ್ತಿಗೆ ಮಿನಿಮಮ್ ಚಾರ್ಜಸ್ 48 ರೂಪಾಯಿಗಳನ್ನು ಕಟ್ಟಬೇಕೆಂದು ವಿಧಿಸಿರುವುದು ಸರಿಯಾದದ್ದಲ್ಲ. ಇದನ್ನು ಎಲ್ಲಾ ರೀತಿಯಿಂದಲೂ ಕಮಿಮೆ ಮಾಡಬೇಕೆಂದು ಹೇಳುತ್ತೇನೆ. ಆ ರೀತಿ ಮಾಡುವುದಾದರೆ ರೈತನ ಉದ್ಧಾರ ಆಗುತ್ತದೆ, ಅವನು ಚೆನ್ನಾಗಿ ಆಗುತ್ತಾನೆ. ರೈತ ಉದ್ಧಾರ ಆದರೆ ದೇಶ ಉದ್ಧಾರ ಆಗುತ್ತದೆ. ರೈತನು ಉಪಯೋಗಿಸುವಂಥ ವಿದ್ಯುಚ್ಛಕ್ತಿಗೆ ದರವನ್ನು ಕಡಿಮೆ ಮಾಡದಿದ್ದರೆ ವಿದ್ಯುಚ್ಛಕ್ತಿ ಬೋರ್ಡಿನವರು ರೈತನಿಗೆ ದ್ರೋಹವನ್ನು ಮಾಡಿದಂತಾಗುತ್ತದೆ. ಈ ದೃಷ್ಟಿಯಿಂದ ರೈತನು ಉಪಯೋಗಿಸುವಂತಹ ವಿದ್ಯುಚ್ಛಕ್ತಿಗೆ ದರವನ್ನು ಕಡಿಮೆ ಮಾಡಬೇಕು, ಮತ್ತು ಪಂಪುಸೆಟ್ಟಿಗೆ ಕಟ್ಟತಕ್ಕಂಥ ಮಿನಿಮಮ್ ಚಾರ್ಜನ್ನೂ ಸಹ ಕಡಿಮೆ ಮಾಡಬೇಕು. ರೈತರಿಗೆ ಯಾರು ದ್ರೋಹ ಮಾಡುತ್ತಾರೆ ಅಂಥವರನ್ನು ತನಿಖೆ ಮಾಡಿ ಅವರಿಗೆ ಶಿಕ್ಷೆ ವಿಧಿಸಬೇಕು. ರೈತನ ವಿಚಾರವಲ್ಲಿ ಸರ್ಕಾರದವರು ಕನಿಕರವನ್ನು ತೋರಿನಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಅಧ್ಯಕ್ಷರೇ, 1957ರ ಅಕ್ಟೋಬರ್ ತಿಂಗಳಲ್ಲಿ ಸ್ವಾಯತ್ತ ಆಡಳಿತವುಳ್ಳ ಈ ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿ ಸ್ಥಾಪಿತವಾಯಿತು. ಒಂದು ನುಗಮವಾದ ಸುವ್ಯವಸ್ಥಿತವಾದ ಮತ್ತು ಸರಳವಾದ ಆಡಳಿತವನ್ನು ಜನರಿಗೆ ಒದಗಿಸ ಬೇಕು, ಸರ್ಕಾರ ಯಾವುದೇ ಒಂದು ಜಂಜಾಟಕ್ಕೆ ಸಿಕ್ಕಬಾರದು. ಯಾರಿಗೆ ಯಾವ ರೀತಿ ವಿದ್ಯುಚ್ಛಕ್ತಿ ದರ ಹಾಕಿದರೆ ಅನುಕೂಲವಾಗುತ್ತದೆ ಎಂಬುದು ಏಮರ್ಶೆಮಾಡಿ ಸರಿಯಾದ ಆಡಳಿತ ನಡೆಸಲು ಎಂಬ ಕಾರಣಗಳಿಂದ ಈ ಬೋರ್ಡನ್ನು ಸರ್ಕಾರದವರು ರಚನೆ ಮಾಡಿದರು. ಈ ಬೋರ್ಡಿನ ಆಡಳಿತ ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭವಾಯಿತು. ಸಾಮಾನ್ಯವಾಗಿ ಹಿಂದೂ ಶಾಸ್ತ್ರದ ಪ್ರಕಾರ ಅಕ್ಟೋಬರ್ ತಿಂಗಳಲ್ಲಿ ಶೂನ್ಯಮಾಸ ಬರುತ್ತದೆ. ಶೂನ್ಯಮಾಸದಲ್ಲಿ ಪ್ರಾರಂಭವಾದ ಎಲ್ಲಾ ಸಂಸ್ಥೆಗಳ ಪಾಡೂ ಕೂಡ ಇದೆ ಏನೋ ಎಂದು ಕಾಣುತ್ತದೆ. ಈ ಒಂದು ಬೋರ್ಡಿನ ಆಡಳಿತದಲ್ಲಿ ಅದಕ್ಷತೆ, ಅನ್ಯಾಯ, ಅನಾಚಾರ, ಭ್ರಷ್ಟಾಚಾರ ಮುಂತಾದವು ನಡೆಯುತ್ತಿದೆ ಎಂದು ಖಂಡನೆ ಇಲ್ಲವೆ ನುಲಭವಾಗಿ ಹೇಳಬಹುದು. ನಮ್ಮ ಮುಖ್ಯಮಂತ್ರಿಗಳು ವಿದ್ಯುತ್ ದರವನ್ನು ಹೆಚ್ಚು ಮಾಡಿರುವುದರಿಂದ ನುಮಾರು 2 ಕೋಟಿ ರೂಪಾಯಿಗಳ ಆದಾಯ ಮತ್ತು ಪಂಪ್‌ಸೆಟ್ಟುಗಳ ಕನಿಷ್ಠ ದರವನ್ನು ದ್ವಿಗುಣಗೊಳಿಸಿರುವುದರಿಂದ ನುಮಾರು 22 ಲಕ್ಷ ರೂಪಾಯಿಗಳ ಆದಾಯ ಬೋರ್ಡಿಗೆ ಬರುತ್ತದೆಂದು ಹೇಳಿದರು. ಪಂಪ್‌ಸೆಟ್ಟುಗಳ ಮೇಲಿನ ಕನಿಷ್ಠ ದರವನ್ನು ಹೆಚ್ಚು ಮಾಡಿದರೆ ರಾಜ್ಯದ ಪ್ರತಿ ಮೂಲೆಯಿಂದಲೂ ಕೂಡ ರೈತರಿಂದ ಪ್ರಬಲ ವಿರೋಧ ಬರುತ್ತದೆ ಎಂಬುದು ಮುಖ್ಯಮಂತ್ರಿಗಳಿಗೆ ಗೊತ್ತು. ದೇಶಕ್ಕೆ ಆಹಾರವನ್ನು ಬೆಳೆದು ಒದಗಿಸುತ್ತಿರುವ ಮತ್ತು ಆ ಒಂದು ಘನತರವಾದ ಜವಾಬ್ದಾರಿಯನ್ನು ಹೊತ್ತಿರುವ ರೈತರಮೇಲೆ ಹೆಚ್ಚಿನ ದರವನ್ನು ಹಾಕಿದರೆ ಪ್ರತಿಭಟನೆ ಬರುತ್ತದೆ ಎಂದು ತಿಳಿದಿದ್ದರೂ ಕೂಡ ಹೆಚ್ಚು ಮಾಡಿದ್ದಾರೆ. ನದನದಲ್ಲಿರುವ ನಂಖ್ಯಾಬಲದಮೇಲೆ ಈ ರೀತಿ ದರವನ್ನು ಹೆಚ್ಚು ಮಾಡಿದ್ದಾರೆಂದು ನನಗೆ ಗೊತ್ತಾಗುತ್ತಿದೆ. ಬೋರ್ಡಿನ ಆಡಳಿತ ಮಂಡಲಿಯವರಾದರೂ ಕೂಡ ಈ ರೀತಿ ದರವನ್ನು ಹೆಚ್ಚಿನುವುದಕ್ಕೆ ಮೊದಲು ಈ ಬಗ್ಗೆ ಆಳವಾಗಿ ಅಭ್ಯಸಿನಿ ಬೇರೆ ಬೇರೆ ಮೂಲಗಳಿಂದ ವರಮಾನವನ್ನು

(ಶ್ರೀ ಎನ್. ಎ. ಚನ್ನೇಗೌಡ)

ಹೆಚ್ಚಿಸಿಕೊಳ್ಳುವುದಕ್ಕೆ ಇರುವ ಅವಕಾಶಗಳನ್ನು ಗಮನಿಸಬೇಕಾಗಿತ್ತು. ಜನರಿಗೆ ಹೆಚ್ಚಿನ ದರವನ್ನು ವಿಧಿಸದೆ ಈಗ ಬರುತ್ತಿರುವ ವಾರ್ಷಿಕ ಆದಾಯವನ್ನು ನರಿಯಾಗಿ ವಸೂಲು ಮಾಡಿದ್ದರೆ ಈಗ ಕಡಿಮೆ ಎಂದು ತೋರಿರುವ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದಾಗಿತ್ತು. ಈ ದಿನ ಬೋರ್ಡಿನಲ್ಲಿ ತಜ್ಞರು ಹೆಚ್ಚು ಅಧಿಕಾರದಲ್ಲಿ ಇದ್ದಾರೆ. ಆದರೆ ಅವರಿಗೆ ವ್ಯವಹಾರ ಜ್ಞಾನ ಇಲ್ಲ. ಅವರದು ಪುಸ್ತಕ ಜ್ಞಾನ ಮಾತ್ರ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಹೆಚ್ಚಿನ ತೆರಿಗೆಯನ್ನು ಹಾಕಿದರೆ ಜನರು ಪ್ರತಿಭಟನೆ ಮಾಡುತ್ತಾರೆ ಎಂಬುದನ್ನು ಅವರು ಅರಿತುಕೊಂಡು ಮೂಲ ಉತ್ಪತ್ತಿ ಏನು ಬರುತ್ತಿತ್ತು ಅದನ್ನೇ ನರಿಯಾದ ರೀತಿಯಲ್ಲಿ ಪಡೆಯುವುದಕ್ಕೆ ಪ್ರಯತ್ನಪಡಬೇಕಾಗಿತ್ತು. ಇದನ್ನು ಬಿಟ್ಟು ಬಡ ರೈತರ ಮೇಲೆ ಹೆಚ್ಚುವರಿ ತೆರಿಗೆಯನ್ನು ಹಾಕಿದ್ದಾರೆ. ರೈತರ ಕಷ್ಟನುಖ ಗಳನ್ನು ಅವರು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿಲ್ಲ. ಬೋರ್ಡಿನ ಆಡಳಿತದ ಮೇರ್‌ತರಗತಿ ಯಲ್ಲಿ ಸಿಬ್ಬಂದಿವರ್ಗ ಬಹಳ ಜಾಸ್ತಿ ಇದೆ. ಬೆಂಗಳೂರಿನಲ್ಲಿಯೇ ಮೂರು ಜನ ಚೀಫ್ ಇಂಜಿನಿಯರ್ ಇದ್ದಾರೆ, ಒಬ್ಬರು ಸೂಪರಿಂಟೆಂಡಿಂಗ್ ಇಂಜಿನಿಯರ್ ಇದ್ದಾರೆ, 12 ಜನ ಎಕ್ಸಿಕ್ಯುಟಿವ್ ಇಂಜನಿಯರ್ಸ್ ಇದ್ದಾರೆ, 28 ಜನ ಅಸಿಸ್ಟೆಂಟ್ ಇಂಜನಿಯರ್ಸ್ ಇದ್ದಾರೆ, 70 ಜನ ಜೂನಿಯರ್ ಇಂಜನಿಯರ್ಸ್ ಇದ್ದಾರೆ. ಮಂಡಲಿಯವರು ವಿದ್ಯುಚ್ಛಕ್ತಿ ರೆವಿನ್ಯೂ ವಸೂಲು ಮಾಡಲು ಆರು ಸರ್ಕಲ್ ಮಾಡಿದ್ದಾರೆ. ಮೊದಲು ಡಿವಿಜನ್ ಸಿಸ್ಟಮ್ ಇತ್ತು. ಆಗ ಹೆಚ್ಚಿನ ತನಿಖೆ ಸೌಲಭ್ಯ ಗಳನ್ನು ಒದಗಿಸುವ ವ್ಯವಸ್ಥೆ ಇತ್ತು. ಆದರೆ ಈಗ ತಮ್ಮ ಅನುಕೂಲಕ್ಕಾಗಿಯೇ ಸರ್ಕಲ್‌ಸೈಸ್ ಸಿಸ್ಟಮ್ ಆಫ್ ಅಕೌಂಟಿಂಗ್ ಜಾರಿಗೆ ತಂದು ಲೆಕ್ಕಾಚಾರ ಸರಿಯಾಗಿ ಇಡರಾರದಂತೆ ಮಾಡಿ ಬಿಟ್ಟಿದ್ದಾರೆ. ಸರಿಯಾಗಿ ಲೆಕ್ಕವೇ ಸಿಗುತ್ತಿಲ್ಲ. ಇದರಿಂದ ಹೆಚ್ಚು ನಷ್ಟ ಖರ್ಚು ಇದೆ ಎಂದು ಹೇಳುತ್ತೇನೆ. ಬರುವ ವರಮಾನವಲ್ಲಿಯೇ ತನ್ನ ವರಮಾನವನ್ನು ಹೆಚ್ಚಿಸಿಕೊಳ್ಳುವ ಬಗ್ಗೆ ವಿದ್ಯುಚ್ಛಕ್ತಿ ಮಂಡಲಿ ಯಾವ ರೀತಿ ವಿಫಲವಾಗಿದೆ ಎಂಬ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. 'ಮೈಕೋ' ಫ್ಯಾಕ್ಟರಿ ತೆಗೆದುಕೊಂಡರೆ ಅದಕ್ಕೆ 3370 ಕೆ. ವಿ. ಶಕ್ತಿಯುಳ್ಳ ಟ್ರಾನ್ಸ್‌ಫಾರಮ್ ಇಟ್ಟಿದ್ದಾರೆ. ಲೋಡ್ ಬರ್ಡ್ 1730 ಕೆ. ವಿ. ಆದರೆ ಲೋಡ್ ನಾಟ್ ಬರ್ಡ್ 1640 ಕೆ. ವಿ. ಈ ಕಾರಣದಿಂದ ಒಂದು ವರ್ಷಕ್ಕೆ ಬೋರ್ಡಿಗೆ 2 ಲಕ್ಷ ರೂಪಾಯಿ ನಷ್ಟವಾಗುತ್ತದೆ. ಇಂತಹ ಉದಾಹರಣೆಗಳನ್ನು ಇನ್ನೂ ಕೊಡಬಹುದು. ಇಂತಹ ತಪ್ಪುಗಳು ಆಗುತ್ತಿರುವುದು ಅಧಿಕಾರವರ್ಗದವರ ಗಮನಕ್ಕೆ ಬಂದಿಲ್ಲವೇ ಎಂದು ಕೇಳುತ್ತೇನೆ. ಬಂದಿದ್ದರೂ ಏತಕ್ಕೆ ಸುಮ್ಮ ನಿದ್ದಾರೆ. ಇದಕ್ಕಿಂತಲೂ ಅದಕ್ಷತೆಯ ಸಂಕೇತ ಬೇಕೆ? ನಮ್ಮ ರಾಜ್ಯದಲ್ಲಿ ಮೂರು ಲಕ್ಷ ಪಂಪರ್ ಇನ್‌ಸ್ಟಲೇಷನ್‌ಗಳು ಇವೆ. ದಾವಣಗೆರೆ ಮತ್ತು ದೊಡ್ಡಬಳ್ಳಾಪುರದಲ್ಲಿ 630,1200 ಕ್ರಮವಾನು ಸಂಖ್ಯೆಯಲ್ಲಿವೆ. ಆ ಸ್ಥಳಗಳಲ್ಲಿ ಬಹುಮಂದಿ 5 ಎಚ್.ಪಿ. ಮೋಟಾರ್‌ಗಳಿಗೆ ಪರ್ಮಿಷನ್ ತೆಗೆದು ಕೊಂಡು 10 ಎಚ್.ಪಿ. ಮೋಟಾರ್‌ಗಳನ್ನು ಉಪಯೋಗಿಸಿ, ಕಡಿಮೆ ಹಣವನ್ನು ಮಂಡಲಿಗೆ ಕಟ್ಟುತ್ತಿದ್ದಾರೆ. ಈ ವಿಚಾರ ಅಧಿಕಾರವರ್ಗದವರ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ಇದರಿಂದ ಕನಿಷ್ಟಪಕ್ಷ ಬೋರ್ಡಿಗೆ ಒಂದು ವರ್ಷಕ್ಕೆ ಒಂದೂವರೆ ಕೋಟಿ ರೂಪಾಯಿಗಳ ನಷ್ಟ ವಾಗುತ್ತಿದೆ. ಇನ್ನು ಮೀಟರ್ ಬಗ್ಗೆ ಹೇಳುವುದಾದರೆ ತಲೆತಿಗ್ಗಿನುವಂತಹ ಕೆಲಸಗಳು ನಡೆ ಯುತ್ತಿವೆ. ಬೆಂಗಳೂರು ನಗರ ಒಂದರಲ್ಲಿಯೇ 25 ಸಾವಿರ ಮೀಟರ್‌ಗಳು ಡಿಫೆಕ್ಟಿವ್ ಪಟ್ಟಿಯಲ್ಲಿವೆ. ಎಂದು ಡಿಸ್‌ಕನೆಕ್ಟ್ ಮಾಡಿದ್ದರೂ ಕೂಡ ಬಹುಭಾಗ ಸರ್ವಿಸ್‌ನಲ್ಲಿ ಇವೆ. ಈ ರೀತಿಯು ಸರ್ವಿಸನ್ನು ಬೋರ್ಡಿನ ನೌಕರರೇ ಕೊಡುತ್ತಿದ್ದಾರೆ. ಈ ರೀತಿಯ ಭ್ರಷ್ಟಾಚಾರ ನಡೆಯುತ್ತಿದೆ. ಇದಕ್ಕೆ ಯಾರು ಜವಾಬ್ದಾರಿ? ಇದರ ಕೊನೆ ಹೇಗೆ ಮಾಡುತ್ತೀರಿ! ಏನಾದರೂ ಕ್ರಮ ತೆಗೆದು ಕೊಂಡಿರುವಿರಾ?

ಇನ್‌ಸ್ಪೆಕ್ಷನ್ ವಿಚಾರದಲ್ಲಿ ನಮ್ಮ ವಿದ್ಯುತ್ ಮಂಡಲಿಯವರು ಬಹಳ ಅದಕ್ಷತೆಯಿಂದ ವರ್ತಿಸು ತ್ತಿದ್ದಾರೆ. ಒಂದೇ ಒಂದು ಉದಾಹರಣೆ ಕೊಡುತ್ತೇನೆ ಆರ್. ಆರ್. ನಂಬರು 93420 ಇದು ಒಬ್ಬ M S.E.B. ಸರ್ವಿಸ್‌ನಲ್ಲಿರುವ ನೌಕರರ ಮನೆಯದು. ಇಲ್ಲಿ ಪವರು ಉಪಯೋಗವಾಗಿರ ತಕ್ಕದ್ದು 1017 ಯೂನಿಟ್ಟುಗಳು ಎಂದು ಬಿಲ್ ಮಾಡಿದ್ದರು ಮತ್ತು ಇದರ ಹಣ 385·93 ಎಂದು ಕಟ್ಟಬೇಕಾಗಿತ್ತು. ಆದರೆ ಬೋರ್ಡಿನವರಿಗೆ ಸಂದಾಯವಾಗಿರುವುದು ಬರೀ 54 ರೂಪಾಯಿಗಳು ಮಾತ್ರ. ಇದೇ ರೀತಿ ಇಲ್ಲನ ಒಬ್ಬರು ಉನ್ನತಾಧಿಕಾರಿಗಳ ಅದಕ್ಷತೆಯಿಂದ ಆರ್. ಆರ್. ನಂಬರು 41958 ಬಾಬ್ತು ಕಳೆದ ಒಂದೂವರೆ ವರ್ಷಗಳಿಂದ ಉಪಯೋಗವಾಗಿರುವ ಪವರು 2400 ಯೂನಿಟ್ಟುಗಳ ಬೆಲೆನುಮಾರು 696 ರೂಪಾಯಿಗಳು ಕೊಡಬೇಕಾಗಿದ್ದು. ಅದರೆ ಕೊಟ್ಟಿರುವ ಹಣ ಕೇವಲ 70 ರೂಪಾಯಿಗಳು ಮಾತ್ರ ಆಗಿರುತ್ತದೆ. ವಿದ್ಯುಚ್ಛಕ್ತಿ ಮಂಡಲಿಯ ಅಧಿಕಾರಿಗಳು ಅಧಿಕಾರವನ್ನು ದುರುಪಯೋಗ ಮಾಡಿದ್ದಾರೆ. ಅವರು ಕೊಡಬೇಕಾಗಿರುವ ಹಣವನ್ನು ವಿದ್ಯುತ್

ಮುಂಡಲಿಯವರು ವಸೂಲು ಮಾಡಲು ಆಗಲಿಲ್ಲ. ಹೀಗೆ ರಾಜ್ಯದಲ್ಲಿ ಬೇಕಾದಷ್ಟು ಜವರಿನ ದುರುಪಯೋಗವಾಗುತ್ತಿದೆ. ಬೇರೆಯವರಾಗಿದ್ದರೆ ಬೇಗನೆ ಡಿಸ್‌ಕನೆಕ್ಟ್ ಮಾಡುತ್ತಿದ್ದರು. ಇಂತಹ ಉದಾಹರಣೆಗಳನ್ನು ಬೇಕಾದಷ್ಟು ಹೇಳಬಹುದು. ಇಂತಹ ದುರಾಪೇಕ್ಷಿತಗಾರರಿಂದ ನಷ್ಟವಾಗುವ ಹಣವನ್ನು ವಸೂಲು ಮಾಡದೆ ಮುಂಡಲಿಯವರು ದೇಶದ ಬೆನ್ನು ಮೂಳೆಯಾಗಿರುವ ರೈತರ ಮೇಲೆ ಹೆಚ್ಚು ಹೊರೆ ಹಾಕುತ್ತಿದ್ದಾರೆ! ಹೀಗೆ ಹೆಚ್ಚು ಹೊರೆ ರೈತರಮೇಲೆ ಹಾಕಲು ಮುಂಡಲಿಗೆ ಧೈರ್ಯವಾದರೂ ಹೇಗೆ ಬಂತು? ಇದು ನ್ಯಾಯಸಮ್ಮತವೆ?

ಇನ್ನು ವರದಿಯ ಪುಟ ಹತ್ತರಲ್ಲಿ ಮುಂಡಲಿಯ ಬೇರೆ ಬೇರೆ ಕಡೆ ಇರುವ ಸ್ಟೋರುಗಳಲ್ಲಿ ಇರುವ ಸಾಮಾನುಗಳ ಒಟ್ಟು ಬೆಲೆ ನುಮಾರು 9·50 ಲಕ್ಷ ಇತ್ತು ಎಂದು ಇದೆ. ಇದರಲ್ಲಿ ಯಾವ ಯಾವ ಸ್ಟೋರುಗಳಲ್ಲಿ ಎಷ್ಟು ಲೆಕ್ಕ ಸಿಕ್ಕಿಲ್ಲ ಎಂದರೆ ಪಟ್ಟಿ ಈ ರೀತಿ ಇದೆ. ತುಮಕೂರು ಸ್ಟೋರಿನಲ್ಲಿ 2·5 ಲಕ್ಷ, ಚಿತ್ರದುರ್ಗದಲ್ಲಿ 2·75 ಲಕ್ಷ, ಹಾಸನದಲ್ಲಿ 1·75 ಲಕ್ಷ, ಹುಬ್ಬಳ್ಳಿಯಲ್ಲಿ 4·50 ಲಕ್ಷ, ಬಾಗಲಕೋಟೆ 1·21 ಲಕ್ಷ, ದಾವಣಗೆರೆಯಲ್ಲಿ 1·00 ಲಕ್ಷ, ಚಳ್ಳಕೆರೆಯಲ್ಲಿ 1·52 ಲಕ್ಷ, ಮೈಸೂರಿನಲ್ಲಿ 3·7 ಲಕ್ಷ, ಮರ್‌ಕೆರಾದಲ್ಲಿ 1·20 ಲಕ್ಷ ಹೀಗೆ ಒಟ್ಟು 19·95 ಲಕ್ಷ ಬೆಲೆ ಬಾಳುವ ಸಾಮಾನುಗಳು ಕಣ್ಮರೆಯಾಗಿ ಲೆಕ್ಕ ತಪ್ಪಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿರುವ ಸೆಂಟ್ರಲ್ ಸ್ಟೋರ್ಸಿನಲ್ಲಿ ಕನಿಷ್ಟ ಪಕ್ಷ 25 ಲಕ್ಷ ರೂಪಾಯಿಗಳ ಸಾಮಾನುಗಳ ಲೆಕ್ಕವೇ ಸಿಕ್ಕಿಲ್ಲ. ಇದಲ್ಲದೆ ಪ್ರತ್ಯೇಕವಾಗಿ ಇದರಲ್ಲಿ ಎರಡು ಕೋಟಿ ರೂಪಾಯಿಗಳಷ್ಟು ಸಾಮಾನುಗಳು ಅಡ್ವಾನ್ಸ್ ಆಗಿ ಪಡೆದು ಅದನ್ನು ಸಸ್‌ಪೆನ್ಸ್ ಲೆಕ್ಕದಲ್ಲಿ ತೆಗೆದುಕೊಂಡಿದ್ದಾರೆ. ಇದಕ್ಕೆ ಕಾರಣವೇನು? ಅದಕ್ಕೆ ಎಂದಾದರೂ ಲೆಕ್ಕ ಸಿಕ್ಕುವುದೇ! ಇದೇ ರೀತಿ ಬೇರೆ ಜಿಲ್ಲೆಗಳಲ್ಲಿಯೂ ಇದೆ. ಇದನ್ನು ನರಿಪಡಿಸಲು ಮುಂಡಲಿಯವರು ಏನಾದರೂ ಪ್ರಯತ್ನ ಮಾಡಿದ್ದಾರೆಯೇ? ಕಳೆದ ಐದಾರು ವರ್ಷಗಳಿಂದಲೂ ಈ ಮುಂಡಲಿಯ ಅಧೀನದಲ್ಲಿರುವ ನುಮಾರು 350 ರೆವೆನ್ಯು ಆಫೀಸುಗಳಲ್ಲಿ ನರಿಯಾಗಿ ಆಡಿಟ್ ತನಿಖೆ ಮಾಡಿಲ್ಲ. ಇಲ್ಲಿರುವ ಅಕೌಂಟುಗಳನ್ನು ನರಿಯಾದ ಒಬ್ಬರು ಆಡಿಟರವರಿಂದ ಲೆಕ್ಕಾಚಾರ ಮಾಡಿದರೆ ಕನಿಷ್ಟ ಪಕ್ಷ ಇದರಲ್ಲಿ ನುಮಾರು ಮೂರು ಕೋಟಿ ರೂಪಾಯಿಗಳಷ್ಟು ನಷ್ಟ ಬಂದಿರುವುದು ಗೊತ್ತಾಗುತ್ತದೆ. ಆದರೆ ಲೆಕ್ಕ ತನಿಖೆ ಮಾಡುವ ಅಧಿಕಾರಿಗಳು ತಮ್ಮ ಕರ್ತವ್ಯಪಾಲನೆ ಮಾಡುವ ಬದಲು ಅದಕ್ಷತೆಯಿಂದ ವರ್ತಿಸಿದ್ದರೂ ಆ ಅದಕ್ಷ ಅಧಿಕಾರಿಗೆ ಅಧಿಕಾರಾವಧಿ ವಿಸ್ತರಿಸಿ ಗೌರವಿಸಿದ್ದಾರೆ. ಇದಕ್ಕೆ ಕಾರಣವೇನು?

ಇನ್ನೊಂದು ನಣ್ಣ ವಿಚಾರ: ಇದು ಎಸ್.ಎ.ಎಸ್. ಎಕ್ಸಾಮಿನೇಷನ್ ಬಗ್ಗೆ ಹೇಳಬೇಕಾಗಿದೆ. ಇದರಲ್ಲಿ ಪರೀಕ್ಷೆಗೆ ಕೂತು ಕಷ್ಟಪಟ್ಟು ಓದಿ ಯಾರೂ ಪಾಸು ಮಾಡಬೇಕಾಗಿಲ್ಲ. ಪರೀಕ್ಷಾ ಅಧಿಕಾರಿಗಳಿಗೆ ಯಾರನ್ನು ಪಾಸು ಮಾಡಬೇಕು ಎಂದು ಇರುತ್ತದೋ ಅಂತಹವರು ಪಾಸಾಗುತ್ತಾರೆ. ಇಂತಹ ಒಂದು ವಿಶೇಷ ಸೌಲಭ್ಯ ಈ ಮುಂಡಲಿಯಲ್ಲಿದೆ. ಮುಂಡಲಿಯವರು ಹೊಸ ತಿರಿಗೆಗಳನ್ನು ವಿಧಿಸುವುದಕ್ಕೆ ಬದಲು ಈ ನಗರದಲ್ಲಿರುವ ಡೊಮಸ್ಟಿಕ್ ಮತ್ತು ಕಮರ್ಷಿಯಲ್ ಕನೆಕ್ಷನ್ ದರಗಳನ್ನು ರೀ ಅಡ್ಜಸ್ಟ್ ಮಾಡಿದರೇ ಇವರಿಗೆ ಬೇಕಾದಷ್ಟು ಹಣ ಸಿಗುತ್ತಿತ್ತು. ಮುಂಡಲಿಯಲ್ಲಿರುವ ಅನುಭವಿ ಮತ್ತು ಬ್ರಷ್ಟಾಚಾರಿ ಅಧಿಕಾರಿಗಳಿಂದ ನುಮಾರು ಎರಡು ಕೋಟಿಯಷ್ಟು ಹಣದ ನಷ್ಟ ಬಂದಿದೆ. ಬೆಂಗಳೂರು ಸಿಟಿಯೊಂದರಲ್ಲೇ ಅರ್ಧಕ್ಕಿಂತ ಹೆಚ್ಚು ಈ ಮೂಲದಿಂದ ನಷ್ಟವಾಗಿದೆ. ಇದಕ್ಕೆಲ್ಲಾ ಕಾರಣ ಇಲ್ಲಿರುವ ಅದಕ್ಷ ಮೇಲಧಿಕಾರಿಗಳು. ಇವರು ತಮಗೆ ಮನಸ್ಸು ಬಂದ ರೀತಿಯಲ್ಲಿ ಪಂಪುಸೆಟ್ಟುಗಳನ್ನು ಕೊಡುವುದು ಮತ್ತು ಸ್ವಾರ್ಥ ಮನೋಭಾವದಿಂದ ಕೆಲಸ ಮಾಡುವುದು ಮತ್ತು ರಾಂಗ್ ಸಿನ್ಕಂ ಆಫ್ ಅಕೌಂಟಿಂಗು ಮಾಡುತ್ತಿರುವುದು ಕಾರಣವಲ್ಲವೇ ಎಂದು ನಾನು ಇಲ್ಲಿ ಕೇಳುತ್ತೇನೆ.

ಗ್ರಾಮಾಂತರ ವಿದ್ಯುತ್‌ಕರಣದ ಒಂದು ವಿಚಾರ ಇಲ್ಲೇ ಹೇಳಬೇಕಾಗಿದೆ. ನಮ್ಮ ಮುಂಡಲಿ ರಾಜ್ಯದಲ್ಲಿ ಯಾವ ರೀತಿ ಕೆಲಸ ಮಾಡುತ್ತಿದೆ ಮತ್ತು ಯಾವ ರೀತಿಯಾದ ಕೆಲಸಕಾರ್ಯಗಳನ್ನು ಯೋಜನೆಯಲ್ಲಿ ಅಳವಡಿಸಿದೆ ಹಾಗೂ ಹೊರ ಪ್ರಾಂತಗಳಾದ ಆಂಧ್ರ ಅಥವಾ ಮದ್ರಾಸು ರಾಜ್ಯದ ವಿದ್ಯುತ್ ಮುಂಡಳಿಗಳು ಯಾವ ರೀತಿ ಕೆಲಸ ಮಾಡುತ್ತಿದೆ ಮತ್ತು ಅವು ಯಾವ ಸ್ಥಿತಿಯಲ್ಲಿವೆ ಇಲ್ಲಿ ಹೇಗಿವೆ ಎನ್ನುವುದನ್ನೇನಾದರೂ ತುಲನೆಮಾಡಿ ನೋಡಿದ್ದೀರಾ? ಇಂದು ಆಂಧ್ರದಲ್ಲಿ ನಷ್ಟ ಮಾಡುವ ರೇಟಿಗೂ ಮತ್ತು ನಮ್ಮ ರಾಜ್ಯದ ರೇಟಿಗೂ ವ್ಯತ್ಯಾಸವಿದೆ. ಆಂಧ್ರದವರು ನಷ್ಟ ಮಾಡಲು ಶೇಕಡಾ ಹತ್ತರಷ್ಟು ವರಮಾನ ಬಂದರೆ ಸಾಕು. ಆದರೆ ನಮ್ಮ ಮುಂಡಲಿಯವರು ಶೇಕಡಾ 18ರಷ್ಟು ವರಮಾನ ನಿರೀಕ್ಷೆ ಮಾಡುತ್ತಿದ್ದಾರೆ. ಹೀಗೇಕೆ ಮಾಡಬೇಕು? ಶೇಕಡ ಹತ್ತರಷ್ಟು ವರಮಾನ ನಿರೀಕ್ಷೆಯಲ್ಲಿ ಹೊರ ಪ್ರಾಂತಗಳಲ್ಲಿ ಗ್ರಾಮಾಂತರ ವಿದ್ಯುತ್ ಸರಬರಾಜು ಮಾಡುತ್ತಿರುವಾಗ ನಮ್ಮ ರಾಜ್ಯದವರು ಶೇಕಡಾ 18ರಷ್ಟು ಹೆಚ್ಚು ವರಮಾನ ನಿರೀಕ್ಷೆ ಮಾಡಬಾರದು. ಆಂಧ್ರ,

(ಶ್ರೀ ಎನ್. ಎ. ಜನ್ನೇಗೌಡ)

ದವರು ಹಾಗೂ ಮದ್ರಾಸಿನವರು ಎಸ್ಟಾಬ್ಲಿಷ್‌ಮೆಂಟಿಗೆ ಹೆಚ್ಚು ಖರ್ಚು ಮಾಡುತ್ತಿಲ್ಲ. ಆದರೆ ನಮ್ಮಲ್ಲಿ ಎಸ್ಟಾಬ್ಲಿಷ್‌ಮೆಂಟಿಗಾಗಿ ಹೇರಳವಾಗಿ ಹಣ ಖರ್ಚು ಮಾಡುತ್ತಿದ್ದಾರೆ. ಇದು ಹೇಗಿದೆ ಎಂದರೆ ತೂತು ಮಡಕೆಗೆ ನೀರು ಹಾಕಿದಂತಾಗಿದೆ. ಇಲ್ಲಿ ಲೀಕೇಜು ಎಷ್ಟಾಗುತ್ತಲಿದೆ ಎನ್ನುವುದನ್ನು ಯಾರೂ ಸರಿಯಾಗಿ ನೋಡುತ್ತಿಲ್ಲ. ಮದ್ರಾಸಿನಲ್ಲಿ ಒಂದು ಗ್ರಾಮಾಂತರ ಲೈನು ಎಳೆಯಬೇಕಾದರೆ ಸುಮಾರು ಇನ್ನೂರು ರೂಪಾಯಿಗಳ ಖರ್ಚಿನಲ್ಲಿ ಮಾಡುತ್ತಾರೆ. ಆದರೆ ಇಲ್ಲಿ ಒಂದು ಲೈನು ಎಳೆಯಬೇಕಾದರೆ ಸುಮಾರು ಒಂದು ಸಾವಿರದವರೆಗೆ ಖರ್ಚು ಮಾಡುತ್ತಾರೆ. ಕಾರಣ ಅನವಶ್ಯಕವಾದ ಸಾಮಾನು, ಡಿಸೈನ್, ಸ್ಪೆಕ್ಸರ್ ಮತ್ತು ವೈರಿಂಗ್. ಇರಾಖಿಯವರ ತೃಪ್ತಿಗಾಗಿ ರೈತರಮೇಲೆ ಹೆಚ್ಚು ಹೊರೆ ಹಾಕಬೇಕು ಎಂದು ಹೇಳುತ್ತಿದ್ದಾರೆ. ರಾಜ್ಯದಲ್ಲಿ ದಿನಬಳಕೆ ಸಾಮಾನಿನಮೇಲೆ ಶೇಕಡ ಮೂರರಷ್ಟು ಸೇಲ್ಸ್‌ಟ್ಯಾಕ್ಸ್ ಹಾಕುತ್ತಿದ್ದರೆ ಮಂಡಳಿ ವಿದ್ಯುಚ್ಛಕ್ತಿಯ ಮೇಲೆ ಶೇಕಡಾ ಹತ್ತರಷ್ಟು ಟ್ಯಾಕ್ಸ್ ಹಾಕುತ್ತಿದ್ದಾರೆ. ಈ ಅಂಶಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸರಕಾರ ರೈತರಮೇಲೆ ಹೆಚ್ಚು ಕರ ವಿಧಿಸಬೇಕೆಂಬುದನ್ನು ಕೈಬಿಡಬೇಕು. ಮದ್ರಾಸು ಹಾಗೂ ಇತರ ರಾಜ್ಯಗಳಲ್ಲಿ ಪೊದಲು ಕೃಷಿಗೆ ಹೆಚ್ಚು ಗಮನ ಕೊಡುತ್ತಿರುವ ವಾತಾವರಣವನ್ನು ಮಂಡಲಿಯವರು ಕಲಿಯಬೇಕು. ಆದರೆ ರೈತರಿಗೆ ಹೆಚ್ಚು ಅನಾನುಕೂಲವಾಗುವ ಈ ದರವನ್ನು ವಜಾ ಮಾಡಬೇಕೆಂದು ಹೇಳಿ ಅಧ್ಯಕ್ಷರು ಇಷ್ಟು ಅವಕಾಶ ಕೊಟ್ಟುದಕ್ಕೆ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri K. PUTTASWAMY.—The Business Advisory Committee has allotted only one day for this discussions. To-morrow after the Question Hour Government will reply to the debate on the Financial Statement of the Electricity Board. It has been sufficiently discussed here yesterday and to-day.

Mr. SPEAKER.—As the programme stands, the House is expected to adjourn *sine die* on 5th instant. On that basis one day was allotted for this subject. There are other matters to be discussed by the House. There is also a possibility of the current session being extended.

7.00 P.M.

Sri K. N. VEERAPPA GOWDA (Sringeri).—There are so many members yet to speak on the financial statement of the Electricity Board.

Mr. SPEAKER.—I would like to make a suggestion. If the Hon. Members are agreeable to meet tomorrow at 11 A.M. instead of 1 P.M. I think that would be allright.

Sri B. P. GANGADHAR.—We are prepared to come by 11 A.M.

Mr. SPEAKER.—What does the Hon. Minister for Parliamentary Affairs say ?

Sri K. PUTTASWAMY.—When the House is agreeable I have nothing to say.

Mr. SPEAKER.—Allright, we shall meet to-morrow at 11.00 A.M. Now we shall take up half-an-hour discussion.

Half-an-Hour Discussion arising out of Replies to Starred Question No. 374. *re* : Measures to keep up reservation in appointment of Scheduled Castes and Scheduled Tribes in Government Services.

ಶ್ರೀ ಎಸ್. ಎಸ್. ಅರಕೇರಿ (ಬಳ್ಳಿಗಿ).—ನನ್ಮಾನ್ಯ ಅಧ್ಯಕ್ಷರೇ, ಈವೊತ್ತಿನ ದಿವನ 374ನೇ ಚುಕ್ಕೆಯ ಗುರುತಿನ ಪ್ರಶ್ನೆ ಕೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ನವಾಧಾನಕರವಾಗ ದಂಥ ಉತ್ತರವನ್ನು ಕೊಟ್ಟಿದ್ದರಿಂದ ಅನೇಕ ನಮಸ್ಯೆಗಳನ್ನು ಈ ನಭೆಯು ಗಮನಕ್ಕೆ ತರಬೇಕಾಗಿದೆ. ನರ್ಕಾರಿ ಸೇವೆಯಲ್ಲರುವ ಅನುನೂಚಿತ ಜಾತಿ ಮತ್ತು ಅನಸೂಚಿತ ಅದಿಮ ಜಾತಿಗಳ ವರಿಗೆ ಶೇಕಡಾ 18ರಷ್ಟು ಹುದ್ದೆಗಳನ್ನು ಮೀಸಲರಿಸುವಂತೆ ನರ್ಕಾರದ ಆದೇಶವಿದ್ದರೂ ಕೂಡ ಕಳೆದ 22 ವರ್ಷಗಳಿಂದಲೂ ಅವನ್ನು ಭರ್ತಿಮಾಡದೇ ಇದ್ದುದರ ನಲುವಾಗಿ ಬಹಳ ವಿಷಾದಿ ನುತ್ತೇನೆ ಮತ್ತು, ಈ ರೀತಿ ಮಾಡಬೇಕೆಂದು ಆದ್ಯತೆ ಇದ್ದರೂ ಆ ರೀತಿ ಮಾಡಲಿಲ್ಲ ಎನ್ನುವ ಅಪಾದನೆಯನ್ನು ಮೈಸೂರು ನರ್ಕಾರದಮೇರೆ ಮಾಡಬೇಕಾಗಿದೆ.

22 ವರ್ಷಗಳಿಂದಲೂ ಕೂಡ ಹರಿಜನ ಮತ್ತು ಗಿರಿಜನರಿಗೆ 18 ಪರ್ಸೆಂಟೇಜ್ ಕೊಡಬೇ ಕೆಂದು ಆದ್ಯತೆ ಇದ್ದರೂ ಈ ದಿನ ಅವರಿಗೆ ನರಿಯಾದ ನ್ಥಾನಮಾನ ಸಿಕ್ಕಿಲ್ಲ. ಮತ್ತು ಹರಿಜನ ಮತ್ತು ಗಿರಿಜನರಿಗೆ ನರಿಯಾಗಿ ಅಪಾಯಿಂಟ್‌ಮೆಂಟ್ ಕೊಟ್ಟಿಲ್ಲ. ಈವೊತ್ತಿನ ದಿವನ ಎಸ್.ಎಸ್. ಎಲ್.ಸಿ. ಆದ ತರುಣ ವಿದ್ಯಾರ್ಥಿಗಳು ಕೆಲನ ಇಲ್ಲದೇ ಓಡಾಡುತ್ತಾ ಇದ್ದರೂ ಕೂಡ ಅವರನ್ನು ಯಾವ ಸ್ಥಳಗಳಿಗೂ ನೇಮಕ ಮಾಡಿಲ್ಲ. ಈ ಪ್ರಕಾರ ಅವರಿಗೆ ಕೊಡಬೇಕಾದ್ದನ್ನು ಕೊಡಲಾರದೇ ಇದ್ದುದರಿಂದ ನಿಜವಾಗಿಯೂ ತುಂಬಾ ವಿಷಾದಿರುತ್ತೇನೆ. ಮಾಜಿ ಮುಖ್ಯಮಂತ್ರಿ ಶ್ರೀವಾನ್ ನಿಜಲಿಂಗಪ್ಪನವರು ಮತ್ತು ಶ್ರೀಮತಿ ಯಶೋಧರಾ ದಾಸಪ್ಪನವರು ಇದ್ದಾಗ 17 ಜನ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರರನ್ನು ಸಿವಿಲ್ ಲಿಸ್ಟ್‌ನಲ್ಲಿದ್ದರೂ ಕೂಡ ಅವರನ್ನು ಮನೆಗೆ ಕಳುಹಿಸಿದ್ದಾರೆ. ಇದು ದೊಡ್ಡ ಅಪರಾಧ. ಇವರ ಬಗ್ಗೆ ಮೈಸೂರು ನರ್ಕಾರದ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಆಗಲೀ, ಅಥವಾ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರಾಗಲ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಅದೇ ಪ್ರಕಾರ 18 ಪರ್ಸೆಂಟ್ ಪ್ರಾತಿ ನಿಧ್ಯ ಇಲ್ಲದ ಈ ನ್ಯೂನತೆಯನ್ನು ಹೋಗರಾಡಿನಲು ಬೀರಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದ್ದರು. ಅವರ ರಿಪೋರ್ಟಿನಲ್ಲೂ ಕೂಡ ಈ 18 ಪರ್ಸೆಂಟನ್ನು ಯಾವ ರೀತಿ ಕೊಡಬೇಕು ಎಂದು ತಿಳಿಸಿರುವುದಲ್ಲದೆ ಮುಂದಿನ 10 ವರ್ಷದವರೆಗೂ ಆಯಾಯ ವರ್ಷದ ರಿಪೋರ್ಟನ್ನು ತರಿಸಿಕೊಂಡು ಅವರಿಗೆ ಮೀಸಲಾಗಿಟ್ಟು ಭರ್ತಿ ಮಾಡಬೇಕೆಂದು ಹೇಳಿದ್ದಾರೆ. ಹೀಗಿದ್ದರೂ ಕೂಡ ಹರಿಜನ ಮತ್ತು ಗಿರಿಜನರ ಕಡೆ ಯಾವ ಗಮನವನ್ನೂ ಕೊಡದೇ ಇರುವುದು ಬಹಳ ವಿಷಾದಕರ ಎನಿಸುತ್ತದೆ.

ಇನ್ನೊಂದು ಮುಖ್ಯವಾದ ವಿಚಾರ. ಅದು ಏನೆಂದರೆ ಈವೊತ್ತಿನ ದಿವನ ಪೆಡ್ಯೂಲ್‌ಕ್ಯಾಸ್ಟ್‌ಗೆ 15 ಪರ್ಸೆಂಟು ಮತ್ತು ಪೆಡ್ಯೂಲ್ ಟ್ರೈಬ್ಸ್‌ಗೆ 3 ಪರ್ಸೆಂಟು ಕೊಡಬೇಕಾದ್ದನ್ನು ಕೊಡದೇ ಇರು ವುದಕ್ಕೆ ಅನೇಕ ಕಾರಣಗಳು ಇವೆ. ನಮಾಜ ಕಲ್ಯಾಣ ಆಫೀನ್‌ನಲ್ಲರುವ ಎಂಪ್ಲಾಯ್‌ಮೆಂಟ್ ನೆಲ್‌ಗೆ ಮುಖ್ಯಮಂತ್ರಿಗಳು ಏನು ಆದೇಶ ಕೊಟ್ಟಿದ್ದಾರೆ ಅದರಂತೆ ಪಾಲಿನುತ್ತಾ ಇಲ್ಲ. ಮತ್ತು ನಮಾಜ ಕಲ್ಯಾಣ ಎಂಪ್ಲಾಯ್‌ಮೆಂಟ್ ನಲ್‌ನಿಂದ ಕಳುಹಿಸಿದಂಥಾ ಕ್ಯಾಂಡಿಡೇಟ್ಸ್‌ಗೆ ಯೂನಿಟ್ ಆಫೀನರ್ಸ್, ಅಥವಾ ಆಯಾ ಖಾತೆಯ ಮುಖ್ಯಾಧಿಕಾರಿಗಳು ಬೆಲೆಕೊಡದೆ ಅವರನ್ನು ನೌಕರಿಗೆ ತೆಗೆದುಕೊಳ್ಳುತ್ತಿಲ್ಲ. ಈ ರೀತಿಯಾಗಿ ಅವರು ಅಪಾಯಿಂಟ್‌ಮೆಂಟ್ಸ್ ನೆಲ್‌ನಿಂದ ಹೋದರೆ, ಅವರಿಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಿಂದ ಬಂದರೆ ತೆಗೆದುಕೊಳ್ಳುತ್ತೀವೆ ಎಂದು ಹೇಳು ತ್ತಾರೆ. ಸೋಷಿಯಲ್ ವೆಲ್‌ಫೇರ್ ಎಂಪ್ಲಾಯ್‌ಮೆಂಟ್ ನೆಲ್‌ನಿಂದ ಹೋಗಿರತಕ್ಕಂಥ ಕ್ಯಾಂಡಿ ಡೇಟ್ಸ್‌ನ್ನು ಅಪಾಯಿಂಟ್‌ಮೆಂಟ್‌ಗೆ ತೆಗೆದುಕೊಳ್ಳುವುದಿಲ್ಲ. ಇದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಇದನ್ನು ಅನೇಕ ನಲ ಮುಖ್ಯಮಂತ್ರಿಗಳ ಗಮನಕ್ಕೂ ಮತ್ತು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್ ಮೆಂಟಿನವರ ಅಧಿಕಾರಿಗಳ ಗಮನಕ್ಕೂ ತಂದಿದ್ದೇನೆ. ಆದುದರಿಂದ ಯಾವ ರೀತಿಯಾಗಿ ಎಂಪ್ಲಾ ಯ್‌ಮೆಂಟ್ ಎಕ್ಸ್‌ಛೇಂಜಿನಿಂದ ಬಂದ ಕ್ಯಾಂಡಿಡೇಟ್ಸನ್ನು ಮಾನ್ಯತೆ ಮಾಡುತ್ತೀರೋ ಅದೇ ರೀತಿಯಾಗಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ನೆಲ್‌ನಿಂದ ಬಂದ ಕ್ಯಾಂಡಿಡೇಟ್ಸನ್ನೂ ಮಾನ್ಯತೆ ಮಾಡಿ, ಆಯಾ ಖಾತೆಗಳಲ್ಲಿ ನೌಕರಿಗಳನ್ನು ತುಂಬಿಕೊಳ್ಳಬೇಕು. ಇದುವರೆಗೆ ಇವರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. It is really disgraceful and shameful on the part of Government having neglected the confidential safeguards for Scheduled Castes and Scheduled Tribes. ರಿವಿಟ್ಯಾಂಗದ ಪ್ರಕಾರ Rotation

(ಶ್ರೀ ಎಸ್. ಎಸ್. ಅರಕೇರಿ)

ಮತ್ತು Ranking in vacancies for the purposes of classification and recruitment ಮಾಡಬೇಕು. ಇದು ಹಿಂದೆ ಇದ್ದ ಹಾಗೆ Cycle system ಇತ್ತು. ಆದರೆ Ranking and Rotation system ಅನ್ವಯ ಮಾಡಿರಲಿಲ್ಲ. ಆದ್ದರಿಂದ ಮುಖ್ಯಮಂತ್ರಿಗಳು ಇದನ್ನು ಗಮನದಲ್ಲಿಟ್ಟುಕೊಂಡು 18 ಪರ್ಸೆಂಟ್ ಹರಿಜನ-ಗಿರಿಜನರಿಗೆ ನೌಕರಿಗಳಲ್ಲಿ ಆದ್ಯತೆ ಕೊಡಬೇಕು ಅಂತ ಕೇಳಿಕೊಳ್ಳುತ್ತೇನೆ. ಮುಖ್ಯ ಮಂತ್ರಿಗಳು 60 ರಲ್ಲಿದ್ದುದನ್ನು ಮುಂದುವರೆಸುತ್ತೇವೆ ಎಂದು ಹೇಳಿದ್ದರು. ಹರಿಜನರಿಗೆ ಹೊಸ ರೂಲ್ ಇಲ್ಲ. ರೋಜ್ಟೇಷನ್ ಮತ್ತು ರ್ಯಾಂಕಿಂಗ್ ರೂಲ್ಸ್ ಇದ್ದುದು ಗೊತ್ತಿಲ್ಲವೆಂದು ಕಾಣುತ್ತದೆ. ಅನ್ಯಾಯವಾಗಿದ್ದುದನ್ನು ನಿವಾರಣೆ ಮಾಡಲು ಮಿಲ್ಲರ್ ಕಮಿಟಿ ವರದಿ ಪ್ರಕಾರ 1961ರ ನವೆಂಬರ್ 21ರಲ್ಲಿ ಸರಕಾರಿ ಆಜ್ಞೆ ಹೊರಡಿಸಿದ್ದಾರೆ. ರೊಟೇಷನ್ ಮತ್ತು ರ್ಯಾಂಕಿಂಗ್ ಇತ್ತು, ಸೇಕಡ 18 ಹುದ್ದೆಗಳನ್ನು ಕೊಡುತ್ತಿದ್ದರು. 1963 ರಲ್ಲಿ ತಿದ್ದುಪಡಿ ಮಾಡಿ ಇದ್ದ ಸೌಲಭ್ಯ ತೆಗೆದುಹಾಕಿದ್ದಾರೆ. ಮೊದಲಿದ್ದ ಗವರ್ನಮೆಂಟ್ ಆರ್ಡರನ್ನು ಸೂಪರ್‌ಸೀಡ್ ಮಾಡಿರುವುದರಿಂದ ಇಂದು ಪಿ.ಎಸ್.ಸಿ. ಮತ್ತು ಇರಾಖಾ ಮುಖ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿಮಾಡುವಾಗ ಶೇಕಡ 3 (ಮೂರು) ಮತ್ತು 15ರಂತೆ ಗಿರಿಜನ ಹರಿಜನರಿಗೆ ಅವಕಾಶ ಸಿಕ್ಕುತ್ತಿಲ್ಲ. ಆದುದರಿಂದ 1961 ರಲ್ಲಿ ಎಂದರೆ ಮೊದಲಿದ್ದುದನ್ನು ಜಾರಿಗೆ ತರಬೇಕು-ಎಂದು ಮುಖ್ಯ ಮಂತ್ರಿಗಳು ಮತ್ತು ಸಮಾಜ ಕಲ್ಯಾಣ ಇರಾಖೆಯ ಮಂತ್ರಿಗಳಲ್ಲಿ ವಿನಂತಿಮಾಡುತ್ತೇನೆ. ಇಂದು ಮದ್ರಾಸು ಮತ್ತು ಆಂಧ್ರದಲ್ಲಿ ಪಿ.ಎಸ್.ಸಿ. ಹೇಗೆ ಕೆಲಸಮಾಡುತ್ತಿದೆ, ಅಲ್ಲಿ ಯೂನಿಟ್ ಆಫೀಸರು ಏನು ಮಾಡುತಿದ್ದಾರೆ ಅದಕ್ಕೆ ಹೋಲಿಕೆ ಮಾಡಿದರೆ ಮದ್ರಾಸಿನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಶೇಕಡ 16 ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಶೇಕಡ 4 ಹುದ್ದೆಗಳನ್ನು ಕೊಡುತ್ತಿದ್ದಾರೆ. ಇಲ್ಲಿ ಶೇಕಡ 59 ಜನರಲ್ ಪೋಸ್ಟುಗಳಾಗಿ ಓಪನ್ ಕಾಂಪಿಟಿಷನ್‌ಗೆ ಇವೆ. ಮೆರಿಟ್ ಮೇಲೆ ಷೆಡ್ಯೂಲ್ಡ್ ಕ್ಯಾಸ್ಟಿನವರು ಮತ್ತು ಟ್ರೈಬ್ಸ್‌ನವರು ಬಂದರೆ 59ರಲ್ಲಿ ಎಣಿಕೆ ಮಾಡುತ್ತಾರೆ ಸೇಕಡ 16ಕ್ಕೆ ರಿಸರ್ವೇಷನ್ ಇದೆ. ಅದರಲ್ಲಿ ಯೋಗ್ಯತೆ (Merit) ಮೇಲೆ ಬಂದವರನ್ನು ರಿಸರ್ವೇಶನವಲ್ಲಿ ಕೂಡಿಸುವುದಿಲ್ಲ. ಆದರೆ ಮೈಸೂರು ರಾಜ್ಯದ ಪಿ.ಎಸ್.ಸಿ. ಮತ್ತು ಇರಾಖಾ ಮುಖ್ಯಾಧಿಕಾರಿಗಳಿಗೆ ಈ ರೂಲ್ಸ್ ಅನ್ವಯಿಸುವುದಿಲ್ಲ. ಕಾದಿರಿಸಿದ್ದ 18 ಪರ್ ಸೆಂಟ್ಯೇಜ್ ಇದ್ದರೂ ಮೈಸೂರಲ್ಲಿ ಸರಿಯಾದ ಕ್ಯಾಂಡಿಡೇಟ್ಸ್ ಇಲ್ಲವೆಂದು ಆಯಾ ಇರಾಖೆಯ ಮುಖ್ಯಾಧಿಕಾರಿಗಳು ತಕರಾರು ಮಾಡುತ್ತಾರೆ. ಹಾಗೆ ಮಾಡಿ ಹುದ್ದೆಗಳನ್ನು ಜನರಲ್ ಎಂದು ಟ್ರೀಟ್ ಮಾಡುತ್ತಾರೆ, ರಿಸರ್ವೇಷನ್ ಮುಂದಕ್ಕೆ carry ಮಾಡುವುದಿಲ್ಲ. ಉದಾಹರಣೆಗೆ, ಅವೇ ಮದ್ರಾಸು ಮತ್ತು ಆಂಧ್ರದಲ್ಲಿ ಈ ದಿವಸ 10 ಜಾಗಾ ಹರಿಜನ ಗಿರಿಜನರಿಗೆ ಕೆಲಸವಿದ್ದರೆ ಅದರಲ್ಲಿ 4 ಷೆಡ್ಯೂಲ್ಡ್ ಕ್ಯಾಸ್ಟಿನವರು ಬಂದರೆ 6 ಜಾಗಕ್ಕೆ ಮಂದಿ ಬಾರದಿದ್ದರೆ ಆ ಹುದ್ದೆಗಳನ್ನು ಮುಂದಿನ ನಲ ಕೊಡುವಂತೆ ಕಂಟಿನ್ಯೂ ಮಾಡುವರು. ಅವನ್ನು ಮುಂದಿನ ರಿಸರ್ವೇಷನ್ ಜೊತೆಗೆ ಇಡುವರು, ಅವು ಲ್ಯಾಪ್ಸ್ ಆಗುವುದಿಲ್ಲ. In Andhra Pradesh Public Service Commission, if from the Scheduled Castes and Scheduled Tribes, suitable candidates are not available for appointment, equal percentage should be reserved for the subsequent appointments in subsequent vacancies. ನೆರೆ ರಾಜ್ಯಗಳವರು ರೊಟೇಷನ್ ಮತ್ತು ರ್ಯಾಂಕಿಂಗ್ ಇಟ್ಟುಕೊಂಡು ಎಲ್ಲಿ ಯಾವ ತಕರಾರೂ ಇಲ್ಲದೆ ಸೇಕಡ 18 ಹುದ್ದೆಗಳನ್ನು ಕೊಡುವಾಗ ನಮ್ಮ ಸರಕಾರದವರು ಆ ರೀತಿ ಮಾಡಿಲ್ಲ, ಹಾಗೆ ಮಾಡಬೇಕು. ಹರಿಜನ ಗಿರಿಜನರಿಗೆ ಅರಿಸುವಾಗ್ಯೆ ಅವರ ಹೆಸರು ಕೊನೆಯಲ್ಲಿ ಇರುತ್ತದೆ. ಉದಾಹರಣೆ : ಮೈಸೂರಿನಲ್ಲಿ 25 ಹುದ್ದೆಗಳಿಗೆ ಉಮೇದು ವಾರರನ್ನು ತೆಗೆದುಕೊಳ್ಳುವಾಗ್ಗೆ 23 ಜನರು ಬಂದರೆ ಉಳಿದವರು ವೈಟಿಂಗ್ ಲಿಸ್ಟಿನಲ್ಲಿರಬೇಕು, ಕೊನೆಗೆ ಸೀನಿಯಾರಿಟಿ ಪ್ರಕಾರ ನೋಡಿ ರಿಪ್ಯೆಂಟ್ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಸೇಕಡ 25 ರಲ್ಲಿ 4 ಜನರು Rotation ಮತ್ತು Ranking ಅನುಸರಿಸಿದರೆ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಮಧ್ಯದಲ್ಲಿ ಸಿಕ್ಕಪುದು. ಅವರ ಸಲುವಾಗಿ ಹೇಳುವುದು ಈಗಿನ ಮುಖ್ಯ ಮಂತ್ರಿಗಳಿಗೆ ಹರಿಜನರ ವಿಚಾರದಲ್ಲಿ ಸಹಾನುಭೂತಿಯಿದೆ. ಹಿಂದಿನ ಮುಖ್ಯ ಮಂತ್ರಿಯವರಿಗೆ ಮಲತ ಯಿ ಧೋರಣೆಯಿತ್ತು. ಸೇಕಡ 18ರಷ್ಟು ಕೊಟ್ಟಿರುವುದನ್ನು 22 ವರ್ಷಗಳಲ್ಲಿ ಜಾರಿಗೆ ಸರಿಯಾಗಿ ತರುತ್ತಾರೆ ಎಂಬ ವಿಶ್ವಾಸವಿತ್ತು ಆದರೆ ತಂದಿಲ್ಲ. ಸರಕಾರದವರು ಕಳಕಳಿಯಿಂದ ರೊಟೇಷನ್ ಮತ್ತು ರ್ಯಾಂಕಿಂಗ್ ಪದ್ಧತಿಯಂತೆ ಲ್ಯಾಪ್ಸ್ ಮಾಡದೆ ಮುಂದಿನ ವರ್ಷಕ್ಕೆ ಕ್ಯಾರೀಫಿಟ್ ಮಾಡಿದ್ದರೆ ನಿರುದ್ಯೋಗ ಸಮಸ್ಯೆ ಹರಿಜನರಲ್ಲಿ ಬೆಗೆಹರಿಯುತ್ತಿತ್ತು. ಅಲ್ಲದೆ ರಾಜ್ಯಾಂಗದ ಪ್ರಕಾರ ಸೇಕಡ 18 ಕೊಟ್ಟ ಹಾಗಾಗುತ್ತಿತ್ತು. ಇದರ ಸಲುವಾಗಿ ರೊಟೇಷನ್ ಮತ್ತು ರ್ಯಾಂಕಿಂಗ್ ಕ್ವಾಸಿಫಿಕೇಷನ್ ಪ್ರಕಾರ

ಜಾರಿಗೆ ತಂದು ಸೂಪರ್‌ಸೀಡ್ ಮಾಡಿರುವ ಜಿ.ಓ. ತೆಗೆದು ಮೊದಲನಹಾಗೆ ಮಾಡಿದರೆ ಮುಂದಿನ 5-6 ವರ್ಷಗಳಲ್ಲಿ ಸಮಸ್ಯೆ ಬಗೆಹರಿಯುವುದು ಎಂದು ವಿನಂತಿಮಾಡುತ್ತೇನೆ. ಮಾಸ್ತಿ ಪ್ರತಿಭೆಯಿಂದ (Merit) ಬಂದ ಹರಿಜನ ಗಿರಿಜನ ಉಮೇದುವಾರರನ್ನು ಕಾದಿರಿಸಿದ ಸೀಕಡಾ 18ರಲ್ಲಿ ಕೂಡಿಸಬಾರದು ಅಂತ ಮುಖ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಅಧ್ಯಕ್ಷರೇ, ನಾನು ಅರ್ಧ ಗಂಟೆಯ ಚರ್ಚೆಯಲ್ಲಿ ಭಾಗವಹಿಸಿ ಎರಡು ಮಾತುಗಳನ್ನು ಹೇಳುತ್ತೇನೆ. ರಾಜ್ಯಾಂಗದತ್ತವಾಗಿ ಹರಿಜನ-ಗಿರಿಜನರಿಗೆ ವಿಶೇಷ ಸೌಲಭ್ಯ ಕಲ್ಪಿಸಿರುವುದು 1970 ರೊಳಗೆ ಮುಗಿಯುವ ಕಾಲ ಬಂದಿದೆ. ರಾಜ್ಯಾಂಗವನ್ನು ತಿದ್ದುಪಡಿಮಾಡಿ ಈ ಸೌಲಭ್ಯವನ್ನು ಮುಂದುವರೆಸದಿದ್ದರೆ 1970 ರಲ್ಲಿ ಅದು ಮುಗಿದು ಹೋಗುವುದು ಅಂದರೆ ಈಗಿರುವ ರಿಯಾಯಿತಿ ಮುಗಿಯುವ ಕಾಲ ಬಂದರೂ ಕೆಲವು ಕಡೆ ರಿಯಾಯಿತಿ ಕೊಡುವುದಕ್ಕೆ ಆರಂಭಿಸಿಲ್ಲ. ಇದು ಚಿಂತಾಜನಕವಾಗಿದೆ, ದುರ್ದೈವದ ಸಂಗತಿಯಾಗಿದೆ ಎಂದು ಹೇಳಬೇಕಾಗಿದೆ. ಇತ್ತೀಚೆಗೆ ಹರಿಜನರಿಗೆ ರಾಜಕೀಯ ಪ್ರಜ್ಞೆ ಬಂದಿದೆ, ಅವರಿಗೆ ರಾಜ್ಯಾಂಗದ ಪ್ರಕಾರ ಇರುವ ಹಕ್ಕುಭಾಧ್ಯತೆಯ ಅರಿವಾಗಿದೆ, ಮುಂದೆ ತಮಗೆ ದೊರೆಯಬೇಕಾದ ಸೌಲಭ್ಯ ಕೊಡಲಿಲ್ಲ ಎಂದು ಅವರು ಚಿಂತಿಸುವ ಪರಿಸ್ಥಿತಿ ಬರಬಾರದು. ನಿರ್ದಿಷ್ಟವಾಗಿ ಮಂತ್ರಿಗಳಿಗೆ ಕೆಲವು ವಿಷಯಗಳನ್ನು ತಿಳಿಸಬಯಸುತ್ತೇನೆ. ನಮ್ಮಲ್ಲಿ 4 ವಿಶ್ವವಿದ್ಯಾನಿಲಯಗಳಿವೆ. ಅಲ್ಲಿ ಅರ್ಹತೆ ಹೊಂದಿರುವ ವ್ಯಕ್ತಿಗಳನ್ನು ದೊಡ್ಡ ದೊಡ್ಡ ಹುದ್ದೆಗಳಿಗೆ ಇಲ್ಲದಿದ್ದರೂ ಫಸ್ಟ್ ಡಿವಿಜನ್‌ನಿಂದ ನಾಲ್ಕನೇಯ ಡಿವಿಜನ್‌ವರೆಗಿರುವ ಹುದ್ದೆಗಳಿಗೆ ಸೀಕಡ 18ರಂತೆ ಹರಿಜನರನ್ನು ತೆಗೆದುಕೊಂಡಿಲ್ಲ. ವಿಶ್ವವಿದ್ಯಾನಿಲಯದವರಿಗೆ ರಾಜ್ಯಾಂಗದತ್ತವಾದ ರಿಯಾಯಿತಿಯನ್ನು ತೋರಿಸಲು ನಿರ್ದಿಷ್ಟವಾದ ಸೂಚನೆಯನ್ನು ಸರಕಾರ ಕೊಟ್ಟಿಲ್ಲವೇ ? ಮುಂದಾದರೂ ಕೊಡುತ್ತಾರೋ, ಇಲ್ಲವೋ ? ಈಗಲಾದರೂ ಸರ್ಕಾರದವರು ಮೈಸೂರು, ಬೆಂಗಳೂರು, ಕರ್ನಾಟಕ ಹಾಗೂ ವ್ಯವಸಾಯ ವಿಶ್ವವಿದ್ಯಾನಿಲಯಗಳಿಗೆ ಸೂಚನೆ ಕೊಟ್ಟು ಆ ವಿಶ್ವವಿದ್ಯಾನಿಲಯಗಳಲ್ಲಿ ಸೀಕಡ 18 ಹುದ್ದೆಗಳನ್ನು ಹರಿಜನರಿಗೆ ಕೊಡಬೇಕು. ಫಸ್ಟ್ ಡಿವಿಜನ್ ನಿಂದ ನಾಲ್ಕನೆಯ ಡಿವಿಜನ್‌ವರೆಗೆ ಇರುವ ಹುದ್ದೆಗಳನ್ನು ಕೊಡಬೇಕುಎಂದು ಸ್ಪಷ್ಟವಾಗಿ ತಿಳಿಸಬೇಕು.

ಅಧ್ಯಕ್ಷರೇ, ಈ ಹರಿಜನ ಗಿರಿಜನರಿಗೆ ರಾಜ್ಯಾಂಗದಲ್ಲಿ ನೀಡಿರುವ ವಿಶೇಷ ಸೌಲಭ್ಯಗಳ ಕಾಲಾವಧಿ ಮುಗಿಯುತ್ತಾ ಬಂದಿದ್ದರೂ ಆ ವಿಶೇಷ ಸೌಲಭ್ಯಗಳನ್ನು ನೀಡದೇ ಇರುವುದು ದುರ್‌ದೈವದ ಸಂಗತಿ ಎಂದು ಹೇಳಬಯಸುತ್ತೇನೆ.

Sri S. K. AMIN (Udipi).—Sir, there is no quorum in the House.

Mr. CHAIRMAN.—Yes. I will ring the quorum bell. If we have the quorum we will continue or else we have to adjourn the House.

(The quorum bell rang for five minutes)

Since there is no quorum in the House, the House will now rise and meet again tomorrow at 11-00 A.M.

The House adjourned at Twenty-three minutes past Seven of the Clock to meet again at Eleven of the Clock on Wednesday, the 3rd September, 1969.

WD 13522—GPB—600—4-12-69

CONTENTS

		Pages
1	General Discussion on the Annual Financial Statement of the M. S. E. B. for 1969-70—(Debate Concluded) ...	79—107
	(i) Starred Questions and Answers ...	107—124
	(ii) Questions for Answers on the day (but not taken up)...	124—127
2	(i) Procedure for taking up Question Hour ...	128
	(ii) Projects on the Cauvery Basin ...	128—130
	(iii) Motion to suspend of rules for discussion on the Resolutions relating to the River Projects ...	130—133
	(iv) Notice of adjournment motion *re:* Strike by the Students of the Bangalore University ...	133—135
3	Papers laid on the Table :—	
	Costing sheet of Jawar in pursuance of reply to Question No. 66 on 25th August 1969 ...	135
4	Nineteenth Report of the Business Adivsory Committee—(Adopted) ...	135
5	Mysore Irrigation (Levy of Betterment Contribution and Water Rate) (Amendment) Bill, 1969—(Motion to consider—Debate not concluded) ...	136—166

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, the 3rd September 1969

The House met in the Assembly Chamber, Vidhana Soudha, Bangalore, at Eleven of the Clock.

MR. DEPUTY SPEAKER (SRI D. MANJUNATH) in the Chair.

General consideration of the Annual Financial Statement of the M. S. E. B. for 1969-70

(*Debate contd.*)

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ),—ಮಾನ್ಯ ಅಧ್ಯಕ್ಷರೇ, ಇಂದು ಎಲೆಕ್ಟ್ರಿಸಿಟಿ ಬೋರ್ಡಿನ ವಾರ್ಷಿಕ ವರದಿ ನಮ್ಮ ಮುಂದೆ ಬಂದಿದೆ. ಆ ವಿಚಾರಧಲ್ಲಿ ಕೆಲವು ಅಂಶಗಳನ್ನು ಪ್ರಸ್ತಾಪಮಾಡಬೇಕೆಂದು ನಾನು ಪ್ರಯತ್ನಪಡುತ್ತಿದ್ದೇನೆ. ಸರ್ಕಾರದವರು ಎಲೆಕ್ಟ್ರಿಸಿಟಿ ಬೋರ್ಡನ್ನು ಬೇರೆಯಾಗಿ ಮಾಡಿ ಅಲ್ಲಿ ಅದು ಒಂದು ಸ್ವಂತವಾಗಿ ವ್ಯವಹಾರ ಮಾಡತಕ್ಕ ಸಂಸ್ಥೆಯಾಗಿ ಇರಬೇಕು ಮತ್ತು ಅದು ಒಂದು ವ್ಯಾಪಾರದ ಸಂಸ್ಥೆ ರೂಪದಲ್ಲಿ ನಡೆಯತಕ್ಕ ನೀತಿಯನ್ನು ಹೊಂದಿರಬೇಕು ಎಂದು ಆ ಬೋರ್ಡನ್ನು ಸ್ಥಾಪನೆ ಮಾಡಿದ್ದಾರೆ. ಬೋರ್ಡ್ ಸ್ಥಾಪನೆಯಾಗುವ ಕಾಲದಲ್ಲಿ ಯಾವ ಮಟ್ಟದಲ್ಲಿ ಆ ಬೋರ್ಡ್ ನಡೆಯುತ್ತಿತ್ತು, ಇತ್ತೀಚೆಗೆ ಅದು ಸಂಪೂರ್ಣವಾಗಿ ಬದಲಾವಣೆ ಹೊಂದಿದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಆದರೆ ಎಲೆಕ್ಟ್ರಿಸಿಟಿ ಬೋರ್ಡ್ ಕನ್ಸಲ್ಟೇಟಿವ್ ಕಮಿಟಿಯಲ್ಲಿ ನನಗೂ ಸಹ ಒಂದೆರಡು ವರ್ಷಗಳ ಕಾಲ ಕೆಲಸಮಾಡುವ ಅವಕಾಶ ಸಿಕ್ಕಿತ್ತು. ಆ ಸಂದರ್ಭದಲ್ಲಿ ಅಲ್ಲಿಯ ವ್ಯವಹಾರಗಳನ್ನು ನೋಡಿದ್ದರಲ್ಲಿ ಆವರಿಗೆ ಸಂಪೂರ್ಣವಾಗಿರತಕ್ಕ ಸ್ವಾತಂತ್ರ್ಯ ಸಿಕ್ಕಿರುವ ರೀತಿ ಅಲ್ಲಿನ ವ್ಯವಹಾರ ನಡೆಯುತ್ತಿದೆಯೆಂದು ನಾನು ಹೇಳಬಹುದು. ಇದರಲ್ಲಿ ಸರ್ಕಾರದವರ ತಪ್ಪುಗಳೂ ಸಹ ಕೆಲವು ಇವೆ. ಸರ್ಕಾರದವರು ಬೋರ್ಡಿಗೆ ನಾಮಿನೇಟ್ ಮಾಡುವಾಗ ಬಹಳ ಮುಖ್ಯವಾಗಿರತಕ್ಕ ರೈತರ ಪ್ರತಿನಿಧಿಗಳಿಗೆ ಅವಕಾಶವನ್ನು ಕೊಡಬೇಕಾಗಿತ್ತು. ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಅದರ ಉತ್ಪತ್ತಿ ಮತ್ತು ಅದರ ವ್ಯವಹಾರಕ್ಕೆ ಅನುಗುಣವಾಗಿ ಖರ್ಚು ಮಾಡಬೇಕೇ ವಿನಹ ವ್ಯಾಪಾರ ಸಂಸ್ಥೆಯಾಗಿ ಲಾಭದ ದೃಷ್ಟಿ ಇರಬಾರದು. ನಾನು ಅಕಸ್ಮಾತ್ ಜಪಾನು ಮಾಡುತ್ತೇನೆಂದರೆ, ನನಗೆ ಎಷ್ಟು ಜನರು ಬೇಕೋ ಅಷ್ಟು ಜನರನ್ನು ಇಟ್ಟುಕೊಂಡು ವ್ಯವಸಾಯ ಮಾಡಬೇಕೇ ವಿನಹ ಅದನ್ನು ಬಿಟ್ಟು ನನಗೆ ಇಷ್ಟಬಂದ ರೀತಿಯಲ್ಲಿ ಜನರನ್ನು ನೇಮಕ ಮಾಡಿಕೊಂಡು ಇಷ್ಟಬಂದ ರೀತಿಯಲ್ಲಿ ಸಂಬಳ ಕೊಡುತ್ತಾ ಹೋದರೆ ನನ್ನ ಜಮೀನೇ ಉಳಿಯುವುದಿಲ್ಲ. ಆ ರೀತಿ ಮಾಡಬೇಕೆಂದು ಸರ್ಕಾರದವರು ಅದನ್ನು ಇಟ್ಟುಕೊಂಡಿರುತ್ತಾರೆ. ನನ್ನ ಸ್ನೇಹಿತರು ಹೇಳಿದಹಾಗೆ 800—900 ರೂಪಾಯಿಗಳಷ್ಟು ಆನರರಿಯಮನ್ನು ಸಂಬಳ ರೂಪದಲ್ಲಿ ಚೇರ್‌ಮನ್‌ಗೆ ಕೊಡುವ ಸಂದರ್ಭ ಹೋಗಿ ಇವತ್ತು 2 ಸಾವಿರ, 3 ಸಾವಿರ ರೂಪಾಯಿಗಳಷ್ಟು ಸಂಬಳ ಕೊಟ್ಟು ಅಧಿಕಾರಿಗಳನ್ನು ನೇಮಿಸುವುದು ಆಗಿದೆ. ಜೊತೆಗೆ ಚೇರಮನ್ನರನ್ನು ನೇಮಕಮಾಡುವಾಗ ಯಾವ ಒಂದು ನೀತಿಯನ್ನೂ ಇಟ್ಟುಕೊಳ್ಳದೆ ಯಾವುದೋ ಒಂದು ಪ್ರಭಾವಕ್ಕೊಳಗಾಗಿಯೋ ಏನೋ ಕಾಯಿದೆ ವ್ಯವಹಾರ ಜ್ಞಾನ ಮತ್ತು ದೇಶದ ಪರಿಸ್ಥಿತಿ ತಿಳಿಯದೇ

(ಶ್ರೀ ಕೆ. ಎನ್. ವೀರಪ್ಪಗೌಡ)

ಇರುವವರನ್ನು ನೇಮಕ ಮಾಡುವ ಪರಿಸ್ಥಿತಿ ಬಂದಿದೆ. ಎಲೆಕ್ಟ್ರಿಸಿಟಿ ಬೋರ್ಡ್ ಆಡಳಿತದಿಂದ ಉಪಯೋಗವಾಗಲಿಲ್ಲ. ಈ ದೇಶದಲ್ಲಿ ಹೆಚ್ಚಿಗೆ ತಿಳುವಳಿಕೆ ಇರುವವರು, ವ್ಯವಹಾರವನ್ನು ಅರಿತಿರುವವರೂ ಇದ್ದಾರೆ. ವಿಷಯಗಳನ್ನು ಕೂಲಂಕಷವಾಗಿ ಜನಗಳಿಗೆ ಹೇಳಿ, ಬಂದಿರತಕ್ಕವರಿಗೆ ಸಮಾಧಾನ ಹೇಳಿ ಅವರು ಏನಾದರೂ ಚಾರ್ಜು ಜಾಸ್ತಿ ಮಾಡಿದ್ದರೆ ಅದನ್ನು ಒಪ್ಪಿಸುವ ರೀತಿಯಲ್ಲಿ ಹೇಳುವ ತಾಳ್ಮೆ ಅವರಿಗೆ ಇರಬೇಕು. ಇವತ್ತು ಕೆಲವು ಸದಸ್ಯರು ಚೇರಮನ್ನರನ್ನು ನೋಡಲಿಕ್ಕೆ ಹೋದಾಗ ಅಲ್ಲಿನ ಚೇರಮನ್ ಅಧಿಕಾರದಿಂದ ಹೇಳುವ ಉತ್ತರವನ್ನು ಇಲ್ಲಿ ಯಾರಾದರೂ ಕೇಳಿದರೆ ನಿಜವಾಗಿ ವ್ಯಸನಪಡಬೇಕಾಗುತ್ತದೆ. ಶಾಸಕರಾದ ನಮಗೆ ಈ ರೀತಿ ನಾಮನೇಜೆಡ್ ಒಬ್ಬ ಚೇರ್‌ಮನ್ ಅವರು ಇನ್‌ಸಲ್ಟ್ ಆಗುವ ರೀತಿಯಲ್ಲಿ ಮಾತನಾಡುವುದಕ್ಕೆ ಕೊರಟರು ಎಂಬುದಾಗಿ ಆಗಬಾರದು. ದೇಶದಲ್ಲಿ ಜನ ಏನು ತಿಳಿಯುತ್ತಾರೆಂದು ನಾನು ಹೇಳಬೇಕಾಗಿದೆ. ಈ ದೃಷ್ಟಿಯಿಂದ ಎಲೆಕ್ಟ್ರಿಸಿಟಿ ಬೋರ್ಡ್ ಸರಿಯಾದ ರೀತಿಯಲ್ಲಿ ಕೆಲಸಮಾಡುವ ವ್ಯವಸ್ಥೆ ಇಲ್ಲ. ನಾನು ಕನ್‌ಸಲ್ಟೇಟಿವ್ ಕಮಿಟಿಯಲ್ಲಿದ್ದಾಗ ಅನೇಕ ಸಾರಿ ಇಂತಹ ವಿಚಾರಗಳನ್ನು ನೋಡಿದ್ದೇನೆ.

ಇನ್ನೊಂದು ವಿಷಯ. ಕಲ್ಕತ್ತಾ ಬೊಂಬಾಯಿಗಳಿಂದ ಯಾರ್ಯಾರೋ ಏಜೆಂಟುಗಳು ಸೀದಾ ವಿಮಾನದಲ್ಲಿ ಇಲ್ಲಿಗೆ ಬರುತ್ತಾರೆ. ಅವರು ಅಲ್ಲಿಗೆ ಹೋದ ಕಾಲದಲ್ಲಿ ಯಾವ ಪ್ರತಿನಿಧಿ ಸೋದರೂ ಅವಕಾಶ ಸಿಗುವುದಿಲ್ಲ. ಅವರು ಬರುವುದು ನಮ್ಮ ಕಂಪೆನಿಯಲ್ಲಿ ಇಂತಿಂಥ ಸಾಮಾನುಗಳನ್ನು ತಯಾರು ಮಾಡುತ್ತೀವೆ, ನಮಗೆ ಆರ್ಡರ್ಸ್ ಕೊಡಿ ಎಂದು ಕೇಳುವುದಕ್ಕೆ ಬರುತ್ತಾರೆ. ಅವರಿಂದ ಕೊಟೇಷನ್ ಕಾರ್ಪೊರೇಟ್ ಮಾಡಿ, ಆಮೇಲೆ ಅವರಿಂದ ಸಾಮಾನುಗಳನ್ನು ತರಿಸಿ ಸ್ಟೋರ್ ರೂಂನಲ್ಲಿ ಡಂಪ್ ಮಾಡುತ್ತಾರೆ. ಆ ಸಾಮಾನುಗಳ ಅವಶ್ಯಕತೆ ಇದೆಯೋ ಇಲ್ಲವೋ ನೋಡುವುದಿಲ್ಲ. ನಮ್ಮಲ್ಲಿ ಹಣವು ಬಂಡವಾಳವೆಷ್ಟು? ಸಾಲ ಮಾಡಿದರೆ ಅದಕ್ಕೆ ಬಡ್ಡಿ ಎಷ್ಟು ಕೊಡಬೇಕಾಗುತ್ತದೆ ಎನ್ನುವ ಅಭಿಪ್ರಾಯ ಅವರಿಗೆ ಇರುವುದಿಲ್ಲ. ಇವತ್ತು ಎಲೆಕ್ಟ್ರಿಸಿಟಿ ವಿಷಯದಲ್ಲಿ ರೇಟ್ ಜಾಸ್ತಿ ಮಾಡಿರುವುದನ್ನು ಯೋಚನೆಮಾಡಿ ನೋಡಿದರೆ, ಅದಕ್ಕೆ ನಿಜವಾದ ಕಾರಣ, ಹೇರಳವಾಗಿ ಖರ್ಚು ಜಾಸ್ತಿಮಾಡುವುದು ಆಗಿದೆ. ಅಲ್ಲಿ ಬೇಕಾದಷ್ಟು ಅವ್ಯವಸ್ಥೆ ಇವೆ.

ಅವರು ಎಲ್ಲಾ ಇಂಡಿಪೆಂಡೆಂಟ್ ಆಗಿ ಬಿಟ್ಟಿದ್ದಾರೆ. ಕೊನೆ ಕೊನೆಯಲ್ಲಿ ನಮಗೆ ಕೇಳುವುದಕ್ಕೂ ಏನೂ ಅಧಿಕಾರವಿರುವುದಿಲ್ಲವೆಂದು ಕಾಣುತ್ತದೆ. ಈ ರೀತಿಯಲ್ಲಿ ವ್ಯವಹಾರ ನಡೆಯುತ್ತಾ ಹೋದರೆ, ಈ ವಿಷಯದಲ್ಲಿ ಸರ್ಕಾರದವರಿಗೆ ಕಂಟ್ರೋಲ್ ಇಲ್ಲವೇ ಎಂಬ ಅನುಮಾನ ಬರುತ್ತದೆ. ನಾನಾದರೂ ತಿಳಿದುಕೊಂಡಿದ್ದೇನೆ, ಸರ್ಕಾರದವರಿಗೆ ಸಾಕಷ್ಟು ಕಂಟ್ರೋಲ್ ಇದೆಯೆಂದು, ಮಾನ್ಯ ಮುಂತ್ರಿಯವರು ಆ ಕಡೆ ದೃಷ್ಟಿ ಇಟ್ಟಿಲ್ಲವೆಂದು ಕಾಣುತ್ತದೆ. ಅನೇಕರು ಹೇಳುತ್ತಾರೆ. ಸರ್ಕಾರದವರು ಸಬ್ಸಿಡಿ ಕೊಟ್ಟು ಮಿನಿಮಂ ಚಾರ್ಜಸ್ ಕಡಿಮೆ ಮಾಡಿ ಎಂದು ಹೇಳುತ್ತಿದ್ದಾರೆ. ನನಗೆ ಇದು ಆಶ್ಚರ್ಯವಾಗಿ ಕಾಣುತ್ತದೆ. ಒಂದೊಂದು ವ್ಯಾಪಾರ ಸಂಸ್ಥೆ ನಿಮ್ಮ ಊರಿಗೆ ರೈಲ್ ಹಾಕಬೇಕಾದರೆ, ಎಷ್ಟು ಖರ್ಚಾಗುತ್ತದೆ; ಎಷ್ಟು ಮಿನಿಮಂ ಆಗುತ್ತದೆ, ಅಷ್ಟಕ್ಕೆ ಅಗ್ರಿಮೆಂಟ್ ಬರೆದು ಕೊಟ್ಟರೆ ಹಾಕುವಂತ ಪದ್ಧತಿ ಎಲೆಕ್ಟ್ರಿಸಿಟಿ ಬೋರ್ಡಿನವರಲ್ಲಿ ಇವೆ. ಸರ್ಕಾರದವರು ಯಾರ ಮೇಲಾದರೂ ಟ್ಯಾಕ್ಸ್ ಹಾಕಿ ಸಬ್ಸಿಡಿ ಕೊಟ್ಟು ಕಡಿಮೆಮಾಡಬೇಕೆಂದು ಹೇಳಿದರೆ, ಅದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಆದ್ದರಿಂದ ನಾನಾದರೂ ಹೇಳುತ್ತೇನೆ— ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಆಗತಕ್ಕ ಲಾಭ ನಷ್ಟಗಳಿಗೆ ಅವರೇ ಹೊಣೆಯಾಗಬೇಕು. ಇವತ್ತು ಮಿನಿಮಂ ಚಾರ್ಜಸ್ ಕಡಿಮೆ ಮಾಡುವುದಕ್ಕೋಸ್ಕರ ಒಂದು ಕಮಿಟಿ ಮಾಡಿ. ಇವತ್ತು ಅಲ್ಲಿ ನೇಮಕಾತಿಗಳ ಬಗ್ಗೆಯೂ ಕೂಡ ಸರಿಯಾದ ಒಂದು ಪದ್ಧತಿ ಇಲ್ಲ. ಇವತ್ತು ನನಗೆ ಬೇಕಾದವರು ಯಾರಾದರೂ ಇದ್ದರೆ, ಅಲ್ಲಿ ಅವನು ಒಂದು ರಿಪೋರ್ಟ್ ಮೇಲಾಧಿಕಾರಿಗಳಿಗೆ ಕಳಿಸುತ್ತಾನೆ— ನನಗೆ ಅಗತ್ಯವಾಗಿ ಎರಡು ಹ್ಯಾಂಡ್ಸ್ ಕೊಡಬೇಕು ಎಂದು. ನಂತರ ಎರಡು ತಿಂಗಳು ಆದ ಮೇಲೆ ಪ್ರಪೋಸಲ್ಸ್ ಪರ್ಮನೆಂಟಾಗಿ ಮಾಡಬೇಕಾಗಿದೆ. ಈ ರೀತಿ ಎಲ್ಲಾ ಮಾಡಿದಮೇಲೆ ಅಪ್ಲಿಕೇಷನ್ಸ್ ಕಾಲ್ ಫಾರ್ ಮಾಡುತ್ತಾರೆ. ಆದರೆ ಇವರು ಈ ಅಡ್ವರ್ಟೈಸ್‌ಮೆಂಟ್ ಮಾಡಿದ್ದನ್ನು ನೋಡಿಕೊಂಡು ಕೆಲವು ಬಡವರು ನಮ್ಮಂತವರ ಹತ್ತಿರ ಬಂದು—ಸ್ವಾಮಿ, ಅಲ್ಲಿ ಕೆಲಸಗಳಿಗೆ ಕಾಲ್ ಫಾರ್ ಮಾಡಿದ್ದಾರೆ, ನಮಗೆ ಒಂದು ಅವಕಾಶ ಮಾಡಿಕೊಡಿ. ಎಂದು ಕೇಳುವರು. ಆದರೆ ಅಲ್ಲಿ ಮೊದಲೇ ನೇಮಕಮಾಡಿಕೊಂಡಿರುವವರಿಂದ ಅರ್ಜಿ ಹಾಕಿಸಿ ಅವರನ್ನೇ ಅಪಾಯಿಂಟ್‌ಮಾಡಿಕೊಳ್ಳುತ್ತಾರೆ. ಈ ರೀತಿ ತಮ್ಮ ಸ್ನೇಹವನ್ನೇ ಬೆಳೆಸಿಕೊಂಡಿದ್ದಾರೆ. ಅಲ್ಲಿ ಯಾವ ಒಂದು ನೀತಿಯೂ ಇಲ್ಲ, ಯಾವ ಒಂದು ಕಮಿಟಿಯೂ ಇಲ್ಲ. ನಾನು ತಿಳಿದುಕೊಂಡಿದ್ದೇನೆ. ಸುಮಾರು 8—9 ಸಾವಿರ ಜನರು ಡಿಪ್ಲೊಮಾ ಹೋಲ್ಡರ್ಸ್ ಕೆಲಸವಿಲ್ಲದೆ, ಸಂಬಳ ತೆಗೆದುಕೊಳ್ಳು

ತ್ತಿದ್ದಾರೆಂದು. ಈ ಒಂದು ಎಲೆಕ್ಟ್ರಿಸಿಟಿ ಬೋರ್ಡ್ ಎನ್ನತಕ್ಕಂತದ್ದು, ಒಂದು ಸಂಸ್ಥಾವನ್ನು ಬೆಳೆಸತಕ್ಕ ರೀತಿಯಲ್ಲಿ ಇಟ್ಟುಕೊಂಡು, ಪೂರ್ತಿಯಾಗಿ ಎಷ್ಟು ಖರ್ಚಾದರೂ ಕೂಡ, ಯೋಚಿಸುತ್ತಿಲ್ಲ. ಖರ್ಚುಕಡಿಮೆಮಾಡುವ ಯೋಚನೆ ಇಲ್ಲ. ಅದರಲ್ಲೂ ಮೊದಲನೆಯದಾಗಿ ರೈತರಮೇಲೆ ಕಡಿಮೆ ದರವನ್ನು ಹಾಕಬೇಕು. ಇವತ್ತು ಅವರಿಗೆ ಯಾವುದಾದರೂ ಲುಕ್ಸಾನು ಆಗುತ್ತದೆ ಎನ್ನುವ ಸಂದರ್ಭ ಬಂದಾಗ ಅವರು ಸ್ವಲ್ಪವಾದರೂ ಅದನ್ನು ಖರ್ಚುಕಡಿಮೆಮಾಡುವುದನ್ನು ಯೋಚಿಸಿದ್ದಾರೆಯೇ ಎಂಬುದನ್ನು ಅವರಿಗೆ ಶಕ್ತಿ ಇದ್ದರೆ ಹೇಳಲಿ. ಇವತ್ತು ಇಲ್ಲಿ ಅನೇಕ ಜನರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಶಿವಮೊಗ್ಗದಲ್ಲಿ ಒಂದು ಕಡೆ, 50 ಲೀಟರ್ ಪೆಟ್ರೋಲ್ ಹಾಕುವ ಬದಲು, 350 ಲೀಟರ್ ಹಾಕಿಸಿ, ಆ 300 ಲೀಟರ್ ಪಟ್ರೋಲನ್ನು ಬೇರೆ ಕಡೆ ಮಾರಿದ್ದಾರೆಂದು ತಿಳಿದುಬಂದಿದೆ. ಇವರಿಗೆ ಎಫೀಸಿಯಂಟಾಗಿ ನಡೆಸಲು ಕೊಟ್ಟರೆ, ಇವರು ಎಲ್ಲಾ ಮೊನೋಪಲಿ ಮಾಡಿಬಿಟ್ಟಿದ್ದಾರೆ. ನಾವು ಅನೇಕ ವೇಳೆ ಏನಾದರೂ ಇಂಥ ಕೇಸುಗಳ ಬಗ್ಗೆ ಪತ್ರ ಬರೆದರೆ, ಸರಿಯಾದ ಕ್ರಮ ತೆಗೆದುಕೊಳ್ಳುವುದಿಲ್ಲ. 13-5-69ರಲ್ಲಿ ಒಂದು ಪತ್ರ ತಾನು ಬರೆದಿದ್ದೇನೆ. ಸರ್ಕಾರದ ನೀತಿಯಂತೆ 3 ವರ್ಷದ ನಂತರ ಬದಲಾವಣೆ ನೀತಿ ನಿಮ್ಮಲ್ಲಿಲ್ಲವೇ ? ಇಂಥಿಂತಹ ಕಡೆಗಳಲ್ಲಿ ಬಹಳ ತೊಂದರೆಯಾಗಿದೆ, ಅದಕ್ಕೆ ಏನು ಹೇಳುತ್ತೀರಿ? ಎಂದು ಕೇಳಿದರೆ, ಎರಡು ತಿಂಗಳಮೇಲೆ ಉತ್ತರ ಬರುತ್ತದೆ ಅದನ್ನು ಕನ್‌ಸರ್ನ್‌ಡ್ ಆಫೀಸರ್ಸಿಗೆ ಕಳಿಸಿದ್ದೇವೆಂದು. ಯಾವುದೂ ರಾಜು ವಾತು ಆಗಿಲ್ಲ, ಸ್ಪೆಸಿಫಿಕಾಗಿ ಏನಾದರೂ ಕೊಟ್ಟರೆ ಎನ್‌ಕ್ವಾಯರಿ ಮಾಡುತ್ತೇವೆಂದು ಹೇಳುತ್ತಾರೆ. ಲೈನು ಹಾಕುವಾಗಲೂ, ಹಳ್ಳಿಯವರ ಗಾಡಿ ಉಪಯೋಗಿಸಿಕೊಂಡು ವೈಯರ್, ಪೋಲು ತೆಗೆದುಕೊಂಡು ಹೋಗಿ, ನಂತರ ಅದಕ್ಕೆ ಇಲ್ಲ ದುಡ್ಡು ತೆಗೆದುಕೊಳ್ಳುತ್ತಾರೆ. ನಮ್ಮಲ್ಲಿ ಒಂದು ಕಡೆ ಟೂರಿಂಗ್ ಟಾಕೀಸ್ ಬಂದಾಗ 5 ನಿಮಿಷಕ್ಕೊಮ್ಮೆ ಕರೆಂಟ್ ಹೋಗಲಿಕ್ಕೆ ಪ್ರಾರಂಭವಾಯಿತ್ತು ಯಾವಾಗಲೂ ಹೀಗೆ ಆಗುತ್ತಿರಲಿಲ್ಲ. ಟೂರಿಂಗ್ ಟಾಕೀಸ್ ಬಂದಮೇಲೆ ಹೀಗೆ ಆಗಲು ಕಾರಣವೇನೆಂದು ನಾನು ಆಪರೇಟರ್‌ನ್ನು ಕೇಳಿದರೆ, ಅವರು ಏನೂ ಇಲ್ಲವಲ್ಲ ಎಂದು ಹೇಳುತ್ತಾರೆ. ಆದು ಹೇಗೆ ಎಂದು ಕೇಳಿದ್ದಕ್ಕೆ ನನ್ನ ಹತ್ತಿರ ಮಾತನಾಡುವುದೇ ಬಿಟ್ಟರು; ವಿಶ್ ಮಾಡುವುದೂ ಬಿಟ್ಟರು. ನಂತರ ಆ ವಿಚಾರ ಸೂಪರಿಂಟೆಂಡಿಂಗ್ ಇಂಜಿನಿಯರ ಹತ್ತಿರ ಬಂದು, ಅವರು ಆ ಮನುಷ್ಯನಿಗೆ ಸ್ವಲ್ಪ ಸೂಚನೆ ಕೊಟ್ಟುಬಿಟ್ಟರು. ನಂತರ ಆ ಮನುಷ್ಯ ನನ್ನಲ್ಲಿ ಬಂದು, ಏನು ಸ್ವಾಮಿ, ಸೂಪರಿಂಟೆಂಡಿಂಗ್ ಇಂಜಿನಿಯರ ಹತ್ತಿರ ಬಹಳ ಪುಕಾರು, ಗಲಾಟೆ ಮಾಡಿದ್ದೀರಂತೆ. ಹಾಗೇನೂ ತಿಳಿದುಕೊಳ್ಳಬೇಡಿ, ಎಂದು ರಾಜಿಮಾಡಿಕೊಂಡ. ಹೀಗೆ ಕತೆಗಳು ನಡೆಯುತ್ತಿದೆ. ಇವತ್ತು ಪಂಪ್‌ಸೆಟ್ಟು ಸ್ಯಾಂಕ್ಷನ್ ಆಗಿ ಅದಕ್ಕೆ ಕರೆಂಟ್ ಕೊಡಬೇಕಾದರೆ, ಒಂದು ಪಂಪ್‌ಸೆಟ್ಟಿಗೆ 100 ರೂಪಾಯಿ ಮಾತ್ರ ಕೊಟ್ಟರೆ, ಅಲ್ಲಿಗೆ ಇವರ ಸಾಮಾನು ಹೋಗುತ್ತದೆ. ಇಲ್ಲದಿದ್ದರೆ ಇಲ್ಲ. ಅದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದರೆ ಏನೂ ಇಲ್ಲವೆಂದು ಹೇಳುತಾರೆ. ಇವತ್ತು ಯಾವ ಲೈನ್ ಹಾಕುವುದಾದರೂ ಮಿನಿಮಂ ಅಲ್ಲಿ ಫಿಕ್ಸ್ ಮಾಡಿದ್ದಾರೆ. ಇವತ್ತು ಒಂದು ಕಡೆ ಸಾವಿರ ರೂಪಾಯಿಗೆ ಕೆಲಸವಾದರೆ, ಮೈಸೂರಿಗೆ 10 ಸಾವಿರವಾಗಬಹುದು. ಎಲ್ಲಿ ಜಾಸ್ತಿ ಖರ್ಚಾಗುತ್ತದೆ, ಅಲ್ಲಿ ಮಿನಿಮಂ ಫಿಕ್ಸ್ ಮಾಡಬೇಕಾಗುತ್ತದೆ, ಇವತ್ತು ಆ ಖರ್ಚನ್ನು ಆ ಪಾರ್ಟಿಯವರ ಹತ್ತಿರ ವಸೂಲು ಮಾಡಬೇಕೇ ಏನಹ ಎಲ್ಲಾ ಜನರ ಮೇಲೆ ಹಾಕತಕ್ಕಂತದ್ದು ನ್ಯಾಯವಲ್ಲ, ಆದ್ದರಿಂದ ಸರ್ಕಾರದವರು ಆ ವಿಷಯವನ್ನು ವಿಮರ್ಶೆ ಮಾಡಬೇಕು. ಇವತ್ತು ಬೋರ್ಡಿನವರು ತಮ್ಮ ಸ್ವೈನ್ಯವನ್ನು ಕಡಿಮೆಮಾಡಬೇಕು. ಅದಕ್ಕೆ ಒಂದು ಕಮಿಟಿಯನ್ನು ಮುಖ್ಯಮಂತ್ರಿಯವರು ಮಾಡಬೇಕು, ಮತ್ತು ಈ ವಿಪರೀತ ಸ್ಟಾಫ್ ಏನಿದೆ ಅದನ್ನು ಕಡಿಮೆಮಾಡಿ, ಆದರಲ್ಲಿ ಉಳಿತಾಯ ಮಾಡಿ, ಮಿನಿಮಂ ಜಾಸ್ತಿ ಮಾಡಿದ್ದನ್ನು ಕಡಿಮೆ ಮಾಡಬೇಕು. ಇವತ್ತು ರೈತರಿಗೆ ಕಡಿಮೆ ಬೆಲೆಗೆ ಕೊಟ್ಟರೆ, ಆಹಾರಧಾನ್ಯ ಕೂಡ ಹೆಚ್ಚು ಹೆಚ್ಚು ಬೆಳೆಯಬಹುದು ಮತ್ತು ಅದು ಕಡಿಮೆ ಬೆಲೆಗೆ ನಷ್ಟೆತ್ತೆ ಕೂಡ ಆಗಬಹುದು. ರೈತನಮೇಲೆ ಟ್ಯಾಕ್ಸ್ ಹಾಕತಕ್ಕಂತದ್ದು ನ್ಯಾಯವಲ್ಲ. ಇವತ್ತು ಅಲ್ಲಿ ರಾಸ್ ಆಗುವುದಿದ್ದರೆ, ನಮಗೆ ಎರಡುವರೆ ಸಾವಿರ ರೂಪಾಯಿಯ ಸಂಬಳದ ಚೇರ್‌ಮನ್ ಬೇಡ, ಒಂದು ಸಾವಿರ ಸಂಬಳದ ವರನ್ನು ಇಡಬೇಕು. ಅಲ್ಲಿ ಲಾಭವಾಗಲಿ, ನಷ್ಟವಾಗಲಿ, ಇಂಥ ಖರ್ಚನ್ನು ಮಾಡಿಯೇ ತೀರಬೇಕೆಂಬುದನ್ನು ನಾನು ಒಪ್ಪಲಾರೆ, ಮತ್ತು ಅದನ್ನು ಮಾಡುವುದೂ ಸರಿಯಲ್ಲ. ಆದ್ದರಿಂದ ಈ ರೀತಿ ಜರೂರಾಗಿ ಎಲೆಕ್ಟ್ರಿಸಿಟಿ ಬೋರ್ಡಿಗೆ ಒಂದು ಕಮಿಟಿಯನ್ನು ನೇಮಕ ಮಾಡಿ ಅಲ್ಲಿ ನಡೆಯುತಕ್ಕ ಅವ್ಯವಹಾರ, ಮತ್ತು ವಿದ್ಯುಚ್ಛಕ್ತಿ ಬೋರ್ಡಿನಲ್ಲಿರತಕ್ಕ ವಿಪರೀತ ಸಿಬ್ಬಂದಿ ಇವುಗಳನ್ನು ಕಡಿಮೆ ಮಾಡಿ ಅಲ್ಲಿ ಆಗತಕ್ಕಂಥ ಖರ್ಚನ್ನು ಕಡಮೆ ಮಾಡುವುದಕ್ಕೆ ಸರ್ಕಾರದವರು ಗಮನ ಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† Sri V. N. PATIL (Humnabad).—Sir, one is at a loss to find suitable words to condem the Mysore State Electricity Board; the less we say the better because the State of Affairs there is so bad. Previously, there used to be some other Departments which were known for their bungling with the rights and privileges of the people, but now the Mysore State Electricity Board has surpassed them in the matter of bungling with the essential needs of the people. The Mysore State Electricity Board which is supposed to give light to the people, has now become under the Congress regime public enemy No. 1 against the prosperity of the people of the State. When a peasant applies for an I.P. Set he has to butter all the people in the Board from A to Z right from the Supervisor to the gangman and the man who erects the ploe. If after all that he gets his I.P. set energised, what is the result? Every alternate day there will be breakdown of power and he will not be able to operate the pumpset, but he will still have to pay the minimum charge irrespective of whether there is water in his well, irrespective of whether he used the pumpset or not. For whose benefit is the Board functioning? I do not think the Board has any answer to this qutstion. It may try to say that it is functioning for the benefit and the welfare of the people of the State. It is very unfortunate that some hon. members in this very august House are saying something against the welfare State and democratic socialism. When Maharajas and Nizams have vanished giving place to democratic forces, what right have some of these privileged classes to say why the people of Mandya should pay for erecting electric pole in Kolar and so on? We also hear loud cries of old Mysore people being made to sacrifice for the people of new Mysore and so on. If this is the tendency that is developing among the people, then our former Maharajas and Nizam may also legitimately ask why they should sacrifice their kingdom which they have inherited from their ancestors? Unfortunately, I heard several voices here saying why they should be made to pay for the welfare of the backward areas of the State, why they should be made to pay the minimum and questioning the increase in the minimum charges. I want to state that unless the people in the developed areas make some sacrifices, it will not be possible to develop the backward areas. I want to ask them, do they want the people of the backward areas to remain backward for another 50 years? We the legislators are elected to this House by the people of the State to work for the welfare of the people of the State as a whole and it is our duty to see that Mysore State as a whole prospers.

While the Government are unable to sell all the electricity produced and they are inviting industrialists from all over India to come here and establish industries promising them all facilities, they are forcing our people to pay minimum charges for their installations. As against this we find the Minister for Industries and the Chief Minister and the Congress President wooing the industrialists outside Mysore State to

†Indicates that the remarks or speeches have not been revised by the member concerned.

establish industries here promising to give them electricity at a very cheap rate of 3 paise per unit. Why do they want to give them at such a cheap rate ? Is it not because these industrialists pay for the election fund of the Congress party ? When the Government are offering electricity to these industrialists at such a very cheap rate, what are they doing to the agriculturists of Mysore State ? Instead of reducing their rate, they are insisting on their paying a minimum rate and even the minimum charge has been raised.

It is very unfortunate to hear members saying here that old Mysore is made to pay for the development of Gulbarga District and the rest of, new Mysore and that new Mysore is developed at the cost old Mysore. Whoever be the Chief Minister, it is the duty of Government to develop the backward areas and there is no question of old Mysore or new Mysore in this.

Coming to the working of the Mysore State Electricity Board, the Board is like a Bhasmasura and it is dancing like a Bhasmasura. It is, therefore, necessary that the Government should have direct control over the Board and it should not be an autonomus Board for doing only misdeeds. I can cite here some of the misdeeds of the Board. A retired officer of the Mysore State Electricity Board was re-employed in the same office. He was sent to Bombay and he stayed there for more than a month. He was sent there to fetch a loan of Rs. 50 lakhs from some Bombay banker. Was it not possible for the said officer to negotiate that loan with some of the banks in Mysore State and why should he has been sent to Bombay ? It only goes to show that they wanted to share some percentages or some margin from this deal with the Bombay bank. Is this the way the Board should work for the prosperity of the State of Mysore ? I can even state the name of this officer who was sent to Bombay. His name is M. Narasimha Iyengar, a retired officer, who was re-employed by the Board.

Then coming to the working of the Board, we are hearing complaints from the people that hundreds of poles are getting spoiled every day. Most of the people are damaging the poles and are making use of the iron bars inside. How about copper wire and other wires ? These things are being sold in the market by blacksmiths. We have to see why the Electricity Board is suffering losses. If the State Electricity Board were to continue like this and the Mysore Government continues to shield these people, it will be very difficult to collect the land revenue. People will rise in revolt and will be compelled to take law in their own hands.

11-30 P.M.

I would like to make some suggestions I am sure the Government will be able to carry out these suggestions, and they are :—

(1) reduce the rate of power charges on par with the generation cost, if not less ;

(SRI V. N. PATIL)

(2) waive the interest that is being charged on the areas of power purchase;

(3) pay subventions on schemes taken up by the Mysore State Electricity Board at the instance of the State Government at least to an extent of the losses incurred by the Board;

(4) convert all its loans or at least the capital transferred on 30th September into interest-free loan.

This is very essential for the progress of the Electricity Board. I would like to suggest the following points for consideration of the Electricity Board :—

(1) make a better and effective arrangement for the full collection of the revenue demands.

Big consumers, who owe in thousands are left off, but the poor people are made to pay by removing service connections.

(2) take over the collection work from the Banks to see that liquid cash is at their disposal instead of keeping their current account on overdraft and keeping much bigger sums with the Banks on short term loans.

Let not the funds of the Electricity Board be at the disposal of the private bankers some of them have luckily been nationalised.

3. Suitably revise all the tariffs,

I can say that the Board owes a duty to help the agriculturists. The additional tariff should not be levied on the agriculturists. The agriculturists have to produce our food requirements. Therefore, it is the duty of the Board to see that electricity is supplied to them as far as possible at the minimum possible rates.

(4) make inter-state power sales at least on no-loss basis if not on profits.

Do not use the Board for your political purposes. Give electricity wherever it is needed irrespective of the area. In several villages, electricity was sanctioned in the year 1968, but some work was kept pending so that some Ministers can inaugurate it on the eve of the Taluk Board Elections to secure the maximum votes possible. Such things should not happen. This kind of a thing is a dis-service to the nation and the State. Whether it is in old Mysore area or North Karnatak area, a list of backward areas should be first prepared, and lift irrigation work, rural electrification and I.P. sets should be taken up so that our food production increases. In order to satisfy a particular section of the people, works in already developed areas should not be taken up. It is the duty of the Government as well as the Electricity Board to see that backward areas are developed on the basis of Mysore State as one and it shall continue to be one.

(5) Give power to I.P. sets at the rates provided to industries ;

(6) reduce losses by improving efficiency and productivity with better working and service conditions, etc. in the industry.

With these words, I thank the Chair.

MR. SPEAKER.—The time available for discussion of this item is upto 1-00 P.M. The Hon. Chief Minister may require at least half-an-hour for his reply to the debate. So, the general debate will close by 12-30 P.M. But I find even now the Whips are sending the list of members desiring to participate in the debate. It may not be possible for me to accommodate all. Anyway I request that hon. members may please mention their points briefly within 5 minutes.

† ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ನನ್ಮಾನ್ಯ ಸಭಾಧ್ಯಕ್ಷರೇ, 1968-69 ಮತ್ತು 1969-70ನೇ ಸಾಲಿನ ವಿದ್ಯುಚ್ಛಕ್ತಿ ಮಂಡಲಯ ಬಡ್ಜೆಟ್‌ನ್ನು ಸಭೆಯ ಮುಂದೆ ಇಡ ರಾಗಿದೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಈ ವಿದ್ಯುಚ್ಛಕ್ತಿ ಮಂಡಲಿಯ ಕಾರ್ಯಾಚರಣೆಯ ಬಗ್ಗೆ, ಅದರ ಆಡಳಿತದ ಬಗ್ಗೆ ಮತ್ತು ಪಂಪ್‌ಸೆಟ್ಟುಗಳ ಮೇರೆ ಹೊಸದಾಗಿ ಹಾಕಿರುವಂಥ ಟ್ಯಾರಿಫ್ ಬಗ್ಗೆ, ಸೂಕ್ತವಾದ ಸಲಹೆಗಳನ್ನು ಕೊಟ್ಟು ಮಾತನಾಡಿದ್ದಾರೆ. ಕೆಲವರು ಈ ಬಡ್ಜೆಟ್‌ನ್ನು ವಿರೋಧಿಸಿ ಮಾತನಾಡಿದ್ದಾರೆ. ಈ ವಿದ್ಯುಚ್ಛಕ್ತಿ ಮಂಡಲಿ ಸಂಯುಕ್ತ ಆಡಳಿತ ಮಂಡಲಿಯಾಗಿರು ವುದರಿಂದ, ಹಳ್ಳಿಯ ರೈತರ ಸಮಸ್ಯೆಗಳನ್ನು ಚೆನ್ನಾಗಿ ಅರಿತವರು, ಅದರ ಹಿನ್ನೆಲೆಯನ್ನು ಉಳ್ಳ ವರು ಮತ್ತು ಆ ಬಗ್ಗೆ ಆಸಕ್ತಿ ಇರುವವರನ್ನು ಆ ಮಂಡಲಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡುವದು ಸಾಧುವಾಗಿತ್ತು. ಸರ್ಕಾರ ಈ ವಿಚಾರವನ್ನು ಏತಕ್ಕೆ ಪರಿಶೀಲಿಸಲಿಲ್ಲವೆಂದು ಕೇಳುತ್ತೇನೆ. ಈಗ ಒಬ್ಬ ನಿವೃತ್ತ ಅಧಿಕಾರಿಯನ್ನು ಈ ಮಂಡಲಿಯ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ನಿವೃತ್ತ ಅಧಿಕಾರಿ ಯನ್ನು ನೇಮಕ ಮಾಡಿರುವುದರಿಂದ ಈ ಒಂದು ಪರಿಸ್ಥಿತಿ ಬಂದಿದೆ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದರು. ಈಗಲಾದರೂ ಕೂಡ ಸರ್ಕಾರದವರು ಆ ನಿವೃತ್ತ ಅಧಿಕಾರಿಯನ್ನು ತೆಗೆದುಹಾಕಿ, ಎರ್ರಾ ಸಮಸ್ಯೆಗಳನ್ನು ಅರಿತಂಥ ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಆಡಳಿತವನ್ನು ನಡೆಸಿಕೊಂಡು ಹೋಗತಕ್ಕಂಥ ಒಬ್ಬರು ಖಾಸಗೀಯವರನ್ನು ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು ಹೇಳುತ್ತಾ ನನ್ನ ಮಾತನ್ನು ಪ್ರಾರಂಭ ಮಾಡುತ್ತೇನೆ ಮತ್ತು ನ್ಯಾಯಮಾಡಳಿತ ಮಂಡಳಿಯಾಗಿರುವ ಈ ವಿದ್ಯುತ್ ಮಂಡಲಿ ಇಂದು ದೇಶದ ಯಾವುದೇ ಕ್ಷೇತ್ರದರ್ಲಾಗಲೇ ವಿದ್ಯುಚ್ಛಕ್ತಿಯನ್ನು ಉಪಯೋಗ ಮಾಡಬೇಕು ಎಂದು ಜನ ಕೇಳಿದರೆ ಅದಕ್ಕನುಗುಣವಾಗಿ ಇಲ್ಲಿರುವ ಕೆಲಸಗಾರರು ಹಾಗೂ ನೌಕರ ವರ್ಗದವರು ನಡೆಯುತ್ತಿಲ್ಲ. ಇಲ್ಲಿರುವ ನೌಕರರುಗಳ ವರ್ಗದವರಿಗಾಗಿ ಖರ್ಚು ಮಾಡತಕ್ಕ ಪಟ್ಟಿಯನ್ನು ನೋಡಿದರೆ ಯಾರಿಗಾದರೂ ಆಶ್ಚರ್ಯವಾಗುತ್ತದೆ. ವಿದ್ಯುತ್ ಮಂಡಲಿಯ ಅಧ್ಯಕ್ಷರು ಮತ್ತು ಈ ಇಲಾಖೆಗಳಲ್ಲಿ ಅವರು ನೇಮಿಸಿರುವ ಅಧಿಕಾರಿಗಳು ಈ ರಾಜ್ಯದಲ್ಲಿ ಮಾಡುತ್ತಿರುವ ಕೆಲಸಗಳಿಗೆ ಅನುಗುಣವಾಗಿದೆಯೇ ಇಲ್ಲವೇ, ಹೆಚ್ಚಾಗಿದೆಯೇ ಎನ್ನುವುದನ್ನು ತನಿಖೆ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ. ವಿದ್ಯುತ್ ಮಂಡಲಿಯವರು ಯೋಜನೆಗಳನ್ನು ಮಾಡಬೇಕೆಂದು, ಪೆಡ್ ಕ್ವಾರ್ಟರ್ಸ್‌ನಲ್ಲಿ ಒಂದು ಸ್ಕ್ವೋರು, ಡಿವಿಜನಲ್ ಕ್ವಾರ್ಟರ್ಸ್‌ನಲ್ಲಿ ಒಂದು, ಸಬ್ ಡಿವಿಜನಲ್ ಹೆಡ್ ಕ್ವಾರ್ಟರ್ಸಿನಲ್ಲಿ ಒಂದು ಸ್ಕ್ವೋರು ಎಂದು ಮಾಡಿ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಸಾಮಾನುಗಳನ್ನು ತುಂಬಿಕೊಂಡಿದ್ದಾರೆ. ಅದಕ್ಕೆ ಯಾವ ಲೆಕ್ಕಾಚಾರಗಳೂ ಇಲ್ಲ ಎಂದು ಕಾಣುತ್ತದೆ. ಇಲ್ಲಿರುವ ಕೆಲಸಗಾರರು ಯಾವ ಕಾರಣದಿಂದ ಇಷ್ಟು ಸಾಮಾನುಗಳನ್ನು ಪಡೆದಿದ್ದಾರೆ ? ಯಾರದೋ ದಾಕ್ಷಿಣ್ಯಕ್ಕಾಗಿ ಹಾಗೂ ಅವರ ಒತ್ತಾಯ ಕ್ಕಾಗಿ ಉಪಯೋಗಕ್ಕೆ ಬಾರದ ರೀತಿಯಲ್ಲಿ ಸಾಮಾನುಗಳನ್ನು ಸ್ಟೋರುಗಳಲ್ಲಿ ತುಂಬಿದ್ದಾರೆ. ಇನ್ನೂ ಕೋಟಿಗಟ್ಟಲೆ ರೂಪಾಯಿಗಳಷ್ಟು ಸಾಮಾನುಗಳು ಪ್ರತಿಯೊಂದು ಸ್ಟೋರಿನಲ್ಲೂ ಗುಡ್ಡೆ ಗಟ್ಟಲೆ ತುಂಬಿದೆ. ಇದರ ಮೇಲೆ ಇಲ್ಲಿರುವ ನೌಕರುಗಳಿಂದಲೇ ಕಳವಾಗಿರತಕ್ಕ ಎಷ್ಟೋ ಸಾಮಾನುಗಳು ಹೊರಗಡೆ ವ್ಯಾಪಾರವಾಗುತ್ತಿವೆ. ಸ್ಟೋರ್ಸ್‌ಗಳ ಲೆಕ್ಕವನ್ನು ಸರಿಯಾಗಿ ಇಡದೇ ಇರುವುದರಿಂದ ಸುಮಾರು ಹತ್ತಾರು ಕೋಟಿ ರೂಪಾಯಿಗಳ ಬೆಲೆ ಬಾಳುವ ಸಾಮಾನುಗಳು ದುರುಪಯೋಗವಾಗುತ್ತಿವೆ. ಇಲ್ಲಿರುವ ಸೆಂಟ್ರಲ್ ಸ್ಟೋರ್ಸ್‌ನಲ್ಲಿರುವ ಸಾಮಾನುಗಳನ್ನು ಪರಿಶೀ ಲನೆ ಮಾಡಲು ಸರಕಾರವೇ ಆಗಲೇ ಒಬ್ಬರು ಅಧಿಕಾರಿಗಳನ್ನು ತನಿಖೆ ಮಾಡಲು ನೇಮಕ ಮಾಡ ಬೇಕು. ಇಲ್ಲದೆ ಇದ್ದರೆ ಒಂದು ಸಮಿತಿಯನ್ನಾದರೂ ನೇಮಕ ಮಾಡಬೇಕು. ಸ್ಟೋರ್ಸ್‌ಗಳಲ್ಲಿರುವ

(ಶ್ರೀ ಎಸ್. ಪುಟ್ಟಸ್ವಾಮಿ)

ವರು ತಪ್ಪು ಲೆಕ್ಕಗಳನ್ನು ಇಟ್ಟು ದುರುಪಯೋಗ ಮಾಡುತ್ತಿರುವುದನ್ನು ನರಿಯಾಗಿ ವಿಚಾರಣೆ ನಡೆಸಿ ಯಾರು ಇಂತಹ ದುರುಪಯೋಗಕ್ಕೆ ಜವಾಬುದಾರರು ಆಗಿರುತ್ತಾರೋ ಅಂತಹವರಿಂದ ಇವರ ನಷ್ಟ ವನ್ನು ವಸೂಲು ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ವಿದ್ಯುತ್ ಮಂಡಳಿಯವರು ಸರಕಾರದ ಅನುಮತಿ ಪಡೆದಿದ್ದೇವೆ ಎಂದು ಈಗಾಗಲೇ ಫೆಬ್ರವರಿಯಲ್ಲಿ ವಿದ್ಯುಚ್ಛಕ್ತಿ ಮೇಲೆ ಸರ್ ಚಾರ್ಜು ಎಂದು ಹಾಕಿದರು. ಈಗಾಗಲೇ ಮಿನಿಮಂ ಒಂದಕ್ಕೆರಡರಷ್ಟು ಆಗಿ ನುಮಾರು 5 ಹೆ ಚ್.ಪಿ. ಪವರಿಗೆ 75 ರಿಂದ 150 ರೂಪಾಯಿಗಳವರೆಗೆ ಕೊಡಬೇಕೆಂದು ವಸೂಲು ಮಾಡುತ್ತಿದ್ದಾರೆ. ಈ ಮಂಡಲಯವರು ಕೊಟ್ಟಿರುವ ವರದಿ ಪ್ರಕಾರ ನಮ್ಮ ರಾಜ್ಯದಲ್ಲಿ ನುಮಾರು ಒಂದು ಲಕ್ಷದ ತೊಂಬತ್ತೈದು ಸಾವಿರ ಪಂಪುಸೆಟ್ಟುಗಳಿವೆ. ಇವು ಎಲ್ಲ ಜಿಲ್ಲೆಗಳಲ್ಲೂ ಇವೆ. ಆದರೆ ವರ್ಷದ ಹನ್ನೆರಡು ತಿಂಗಳೂ ಇವು ಕೆಲಸ ಮಾಡುವುದಿಲ್ಲ. ಬರೀ ಮೂರು ನಾಲ್ಕು ತಿಂಗಳ ಕಾಲ ಪಂಪುಗಳು ಕೆಲಸ ಮಾಡುತ್ತವೆ ಮತ್ತು ನುಮಾರು 5-8 ಗಂಟೆಗಳ ಕಾಲ ನೀರನ್ನು ಪಡೆಯುತ್ತವೆ. ಕೆಲವು ಕಡೆ ಬಾವಿಗಳಲ್ಲಿ ನೀರೇ ಇಲ್ಲದಿರುವುದರಿಂದ ಇಲ್ಲಿ ಎರಡು ಮೂರು ಗಂಟೆಗಳಾದರೂ ನೀರು ಒದಗದೇ ಇರುವುದು ನಮಗೆ ಸಬ್ ಸ್ಟೇಷನ್ ಯೂನಿಟ್ಸ್‌ಗಳಿಂದ ಗೊತ್ತಾಗುತ್ತದೆ. ಕೆಲವು ಕಡೆ ಇರುವ ಬಾವಿಗಳಲ್ಲಿ ನುಮಾರು 50, 60 ಅಥವಾ 70 ಅಡಿಗಳಷ್ಟು ತೋಡಿದರೂ ನೀರೇ ಬರುವುದಿಲ್ಲ. ಹೀಗಿರುವ ಕಡೆಗಳಲ್ಲಿ ಪಂಪುಸೆಟ್ಟುಗಳ ಉಪಯೋಗವೇ ಇರುವುದಿಲ್ಲ. ಪಂಪುಸೆಟ್ಟು ಗಳನ್ನು ಹಾಕುವ ಲೆಕ್ಕಗಳನ್ನು ನೋಡಿದರೆ ವಿದ್ಯುಚ್ಛಕ್ತಿ ಒದಗಿಸಬೇಕಾದರೆ ಎಷ್ಟು ಕಡೆ ಸಬ್ ಸ್ಟೇಷನ್‌ಗಳನ್ನು ಮಾಡಬೇಕು ಮತ್ತು ಎಷ್ಟು ಸ್ಟೆಪ್ ಡೌನ್ ಸ್ಟೇಷನ್‌ಗಳನ್ನು ಹಾಕಿಕೊಳ್ಳಬೇಕು, ಇವನ್ನು ನರಿಯಾಗಿ ತಿಳಿದುಕೊಳ್ಳಲು ಇದರಲ್ಲಿ ಎಲ್ಲ ವಿವರಗಳನ್ನೂ ಕೊಡಬೇಕಾಗಿತ್ತು. ಇವೊಂದನ್ನೂ ಕೊಡದೇ ಮಿನಿಮಂ ಚಾರ್ಜನ್ನು ಹೆಚ್ಚು ಮಾಡಬೇಕೆಂದು ಇಲ್ಲಿ ಬೋರ್ಡಿನವರು ಬಡ್ಡೆಟ್ಟನ್ನು ತೋರಿಸಿ ಇದರಂತೆ ನುಮಾರು ಒಂದು ಲಕ್ಷ ಐ.ಪಿ. ಸೆಟ್‌ಗಳಿಗೆ ನರ್ವಿಸ್ ಕೊಡಬೇಕೆಂದು ಅನೇಕ ಕಾರ್ಯಕ್ರಮಗಳನ್ನು ಇದರಲ್ಲಿ ತೋರಿಸುತ್ತಿದ್ದಾರೆ. ಇದರ ವಿವರವಾದ ಪಟ್ಟಿ ಇಲ್ಲಲ್ಲ. ಅನೇಕ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದಾರೆ. ನಮ್ಮ ಚಾಮರಾಜನಗರದ ಅನುಭವದ ಪ್ರಕಾರ ಎರಡು ಸಾವಿರ ಕಿಲೋವ್ಯಾಟುಗಳ ಒಂದು ಟ್ರಾನ್ಸ್‌ಮಿಷನ್ ಲೈನು ಎಳೆದು ಮಾಡಲು ನಮ್ಮಲ್ಲಿ ಒಂದು ಟ್ರಾನ್ಸ್‌ಫಾರ್ಮರ್ ಇಟ್ಟಿದ್ದಾರೆ. ಇದಕ್ಕೆ ನಂಜನಗೂಡು ಕಡೆಯ ಲೈನುಗಳ ಹಾಗೂ ಟಿ. ನರಸೀಪುರದ ಲೈನ್‌ಗಳ ಕಡೆಗೂ ಆಗುವ ಕನ್‌ನೆಕ್ಷನ್ನು ಚಾಮರಾಜ ನಗರಕ್ಕೆ ಚಾರ್ಜು ಮಾಡುತ್ತಿದ್ದಾರೆ. ಬಹುಶಃ ಇದರಿಂದಲೋ ಏನೋ ನಮ್ಮ ಚಾಮರಾಜನಗರದಲ್ಲಿ ಮೂರು ನಾಲ್ಕು ದಿನಗಳು ದೀಪಗಳೇ ಇಲ್ಲದಿರುವಂತಾಗಿದೆ. ಇದರ ಬಗ್ಗೆ ವಿದ್ಯುತ್ ಮಂಡಲಯ ವರು ಸರಿಮಾಡಬೇಕೆಂದು ಎಷ್ಟು ಕಾಗದ ಬರೆದರೂ ಅವರಿಂದ ಯಾವ ಕಾಗದಕ್ಕೂ ಜವಾಬೇ ಬರುವುದಿಲ್ಲ. ನಮ್ಮ ವಿದ್ಯುತ್ ಮಂಡಲ ಪಂಪುಸೆಟ್ಟುಗಳನ್ನು ಸರ್ವಿಸ್ಸು ಮಾಡುವುದೇ ನಮ್ಮ ಗುರಿ ಎಂದು ಭಾವಿಸಿರುವಂತಿದೆ. ಒಂದು ಕಡೆ ಒಂದು ಟ್ರಾನ್ಸ್‌ಫಾರ್ಮರು ಕೆಟ್ಟುಹೋಗಿದೆ, ಅದನ್ನು ದುರಸ್ತಿ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದರೂ ಇದರ ಕಡೆಗೇ ಗಮನ ಕೊಡುತ್ತಿಲ್ಲ. ಲೈನು ಗಳನ್ನು ಎಳೆಯಲು ಸಬ್ ಸ್ಟೇಷನ್‌ಗಳು ಹಾಗೂ ಸ್ಟೆಪ್ ಡೌನು ಸ್ಟೇಷನ್‌ಗಳು ಎಂದು ಮಾಡಿ ಕೊಂಡು ಎರಡು ಮೂರು ಮೈಲಿಗೆ ಲೈನನ್ನು ಹಾಕಿ ಅವನ್ನು ಅರ್ಧದಲ್ಲೇ ಬಿಟ್ಟು ಕೆಲಸವಾಗದೇ ನಿಂತಿರುವುದನ್ನು ನಾವು ಎಷ್ಟೋ ಕಡೆಗಳಲ್ಲಿ ನೋಡಬಹುದು. ಇಂತಹ ಅವ್ಯವಸ್ಥಿತವಾದ ರೀತಿ ಯಲ್ಲಿ ಕೆಲಸ ಮಾಡುತ್ತಿರುವ ಮಂಡಲಯಿಂದ ನಮಗೆ ನುಮಾರು 2.20 ಕೋಟಿಯಷ್ಟು ನಷ್ಟವಾಗುತ್ತಿದೆ ಎಂದು ಇಲ್ಲ ನಮಗೆ ಒದಗಿಸಿರುವ ಅಂಕೆ ಸಂಖ್ಯೆಗಳಿಂದ ಗೊತ್ತಾಗುತ್ತದೆ. ಬಹುಶಃ ಈಗ ಇರತಕ್ಕ ಮಿನಿಮಂ ರೇಟು ಕನ್ಸ್ಯೂಮರ್ ಮೇಲೆ ಚಾರ್ಜು ಮಾಡು ತ್ತಿರುವುದು ಇತರ ಅಭಿವೃದ್ಧಿ ಕಾರ್ಯಗಳಿಗೆ ಚಾರ್ಜು ಮಾಡುತ್ತಿರುವುದಕ್ಕಿಂತ ಹೆಚ್ಚಾಗಿದೆ. ಡವಲಪ್‌ಮೆಂಟಿಗಾಗಿ ಕಡಿಮೆ ರೇಟು ಹಾಕಿ ಕನ್ಸ್ಯೂಮರು ಮೇಲೆ ಹೆಚ್ಚು ರೇಟು ಚಾರ್ಜು ಮಾಡುವುದು ಸರಿಯಾದುದಲ್ಲ. ಸರಕಾರ ಇದನ್ನು ಕೈಬಿಡಬೇಕು ಎಂದು ಸಲಹೆ ಮಾಡುತ್ತೇನೆ. ಮತ್ತು ಈ ಮಂಡಲಯ ಕೆಲಸಗಳು ಸರಿಯಾಗಿ ನಡೆಯುತ್ತಿವೆಯೇ ಇಲ್ಲವೇ ಎನ್ನುವುದಕ್ಕೆ ಒಂದು ಪರಿಶೀಲನಾ ಸಮಿತಿಯನ್ನು ನೇಮಿಸಿದರೆ ಅದರಿಂದ ಎಲ್ಲ ವಿಚಾರಗಳನ್ನೂ ವಿಚಾರ ಮಾಡಿ ಸರಿಯಾದ ಕೆಲಸಗಳು ಆಗುವಂತೆ ಮಾಡಲು ಅನುಕೂಲವಾಗುತ್ತದೆ. ಐ.ಪಿ. ಸೆಟ್‌ಗಳಿಗೆ ಹಾಲ ಇರತಕ್ಕ ರೇಟುಗಳನ್ನೇ ಇಡುವುದು ಸೂಕ್ತ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ 1969--70ನೇ ಸಾಲಿನ ವಿದ್ಯುತ್ ಮಂಡಲಯ ಫೈನಾನ್‌ಷಿಯಲ್ ಸ್ಟೇಟು ಮೆಂಟು ಎಂದು ಇಲ್ಲಿ ಮಂಡಿಸಿರುವು ದನ್ನು ನೋಡಿದರೆ ಖಂಡಿತವಾಗಿಯೂ ಬಹಳ ನಿರಾಶಾದಾಯಕವಾಗಿರುವುದು ಕಂಡುಬರುತ್ತದೆ.

ಬಹುಶಃ ಎಲೆಕ್ಟ್ರಿಸಿಟಿ ಬೋರ್ಡ್ ಅಸ್ತಿತ್ವಕ್ಕೆ ಬಂದಮೇಲೆ ಇದರ ಆದಾಯ ಎಷ್ಟು ಮತ್ತು ವೆಚ್ಚ ಎಷ್ಟು ಎನ್ನುವುದನ್ನು ಆಯಾ ಸಾಲಗನುಗುಣವಾಗಿ ಕೊಟ್ಟಿದ್ದರೆ ಇದರಲ್ಲಿ ಆಗುತ್ತಿರುವ ಅವ್ಯವಸ್ಥೆ ಇನ್ನೂ ಚೆನ್ನಾಗಿ ಗೊತ್ತಾಗುತ್ತಿತ್ತು. ಇದರಲ್ಲಿ ಇಂದು ಇಲ್ಲಿ ಅಡಳಿತ ವೆಚ್ಚ ಏಪರೀತವಾಗಿ ಏರಿ ಹೋಗುತ್ತಿದೆ. ಇದಕ್ಕೆ ಮುಖ್ಯ ಕಾರಣ ಇಲ್ಲಿ ನಾನಾ ತರಹದ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿರುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಇದನ್ನು ಯೋಚನೆ ಮಾಡಿದ ಪಕ್ಷದಲ್ಲಿ ಹಿಂದೆ ಇವರು ಚಾರ್ಜು ಮಾಡುತ್ತಿದ್ದ ದರಕ್ಕೂ ಈಗ ಇರುವುದಕ್ಕೂ ಹೋಲಿಸಿ ನೋಡಿದರೆ ನಮಗೆ ಗೊತ್ತಾಗುತ್ತದೆ. 1956ರಲ್ಲಿ ಒಂದು ಎಚ್. ಪಿ. ಗೆ 7-50 ರೂಪಾಯಿಗಳು ಇದ್ದದ್ದು 1960ರಲ್ಲಿ 17-50 ಆಯಿತು. 1963ರಲ್ಲಿ 24 ರೂಪಾಯಿಗಳಾದವು ಮತ್ತು 1969ರ ವೇಳೆಗೆ ಇದು 48 ರೂಪಾಯಿಗಳಷ್ಟು ಆಯಿತು. ಇದರ ಮೇಲೆ ಇನ್‌ಸ್ಟಲೇಷನ್ ಚಾರ್ಜನ್ ಹೋಲಿಸಿದರೆ ಒಂದಕ್ಕೆ ಒಂದೂವರೆಯಷ್ಟು ಏರಿದೆ. ಇದರಲ್ಲಿ ಎರಡು ತರಹದ ಡಿಫಿಕಲ್ಟೀಸ್ ಬಂದಿವೆ. ಒಂದು ಟೆಕ್ನಿಕರ್ ಡಿಫಿಕಲ್ಟೀಸ್‌ಗಳು, ಇನ್ನೊಂದು ಅಡ್ಮಿನಿಸ್ಟ್ರೇಟಿವ್ ಡಿಫಿಕಲ್ಟೀಸ್. ಟೆಕ್ನಿಕರ್ ಡಿಫಿಕಲ್ಟೀಸ್‌ನ್ನು ನೋಡಿದರೆ ಎಲೆಕ್ಟ್ರಿಸಿಟಿ ಬೋರ್ಡಿನಿಂದ ಮೈಸೂರು ಸಂಸ್ಥಾನದೊಳಗಡೆ ಕರೆಂಟು ಎಷ್ಟು ಲೀಕೇಜ ಆಗುತ್ತಿದೆ ಅಷ್ಟು ಜೇರೆ ಯಾವ ರಾಜ್ಯಗಳಲ್ಲೂ ಆಗಿಲ್ಲ, 1968-69ನೇ ಸಾಲಿನಲ್ಲಿ ಸುಮಾರು 15·6 ಪರ್ಸಂಟ್‌ನಷ್ಟು ಲೀಕೇಜುಗಳು ಆಗಿದೆ.

ರಾಜ್ಯದಲ್ಲಿ ಒಟ್ಟು ವಿದ್ಯುಚ್ಛಕ್ತಿಯು ಲೀಕೇಜ 15.6 ಪರ್ಸಂಟು ಇದೆ. ಇದರಲ್ಲಿ ಕನಿಷ್ಠ ಪಕ್ಷ 5 ಪರ್ಸೆಂಟ್ ಅಷ್ಟು ಲೀಕೇಜ ತಪ್ಪಿಸಿದ ಪಕ್ಷದಲ್ಲಿ ಲುಕ್ಸಾನು ಆಗುವ ಪ್ರಮೇಯವೇ ಇರುವುದಿಲ್ಲವೆಂದು ನಾನು ಹೇಳಬೇಕಾಗಿದೆ. ಈವೊತ್ತಿನವರೆಗೆ ಡಿಪಾರ್ಟ್‌ಮೆಂಟ್‌ನಲ್ಲಿ ಇಷ್ಟೊಂದು ಲಾಸ್ ಆಗುತ್ತಾ ಇರುವುದಕ್ಕೆ ಕಾರಣ ಹೇಳಬೇಕಾದರೆ ಡಿಪಾರ್ಟ್‌ಮೆಂಟಿನವರ ಮಿಸ್‌ಮ್ಯಾನೇಜಮೆಂಟಿನಿಂದ ಆಗಿರಬಹುದು. ಹೇಗೆಂದರೆ ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಮೀಟರುಗಳನ್ನು ಕಿತ್ತುಹಾಕಿ ನೇರವಾಗಿ ಮೈನಲೈನಿನಿಂದ ಕನೆಕ್ಷನ್ ಕೊಟ್ಟುಬಿಟ್ಟು 500, 1,000 ರೂಪಾಯಿ ಆದಾಯ ಬರುವ ಕಡೆ ಲುಕ್ಸಾನು ಮಾಡುತ್ತಾ ಇದ್ದಾರೆ. ಮೀಟರ್ ರೀಡಿಂಗ್ ನೋಡುವುದಕ್ಕೆ ಹೋದರೆ ಮೀಟರ್ ರನ್ ಆಗಿರುವುದಿಲ್ಲ. ಕೇಳಿದರೆ ಟ್ರಾನ್ಸ್‌ಮಿಷನ್‌ನಲ್ಲಿ ದೋಷ ಇದೆಯೆಂದು ಹೇಳುತ್ತಾರೆ. ಇದಕ್ಕೆ ಸಂಬಂಧಪಟ್ಟ ಅಸಿಸ್ಟೆಂಟ್ ಇಂಜಿನೀಯರ್, ಮತ್ತು ಇತರಾ ಅಧಿಕಾರಿಗಳು ಸೇರಿವಾರೆ. ಒಂದು ಉದಾಹರಣೆ ಹೇಳುವುದಾದರೆ ಸರ್ಕಾರದವರು ರೈಸ್ ಕಂಟ್ರೋಲ್ ಮಾಡಿದಾಗ ಮಿಲ್ಲನ್ನು ನಡೆಸಕೂಡದು ಎಂದು ಮಾಡಿದರು. ಆಗ ಎಲೆಕ್ಟ್ರಿಕಲ್ ಇನ್‌ಸ್ಪೆಕ್ಟರ್, ಎಲ್ಲರನ್ನೂ ಸರಿಮಾಡಿಕೊಂಡು ರಾತ್ರಿವೇಳೆಯಲ್ಲಿ ಕಳ್ಳಕರಂಟನ್ನು ತೆಗೆದುಕೊಂಡಿದ್ದರು. ಇನ್ನು ಮೀಟರ್ ರೀಡಿಂಗ್ ಹೋಗಿ ನೋಡಿದರೆ ಲೆಕ್ಕ ಏನು ಸಿಕ್ಕುತ್ತದೆ ! ಈ ರೀತಿಯಾಗಿ ಭ್ರಷ್ಟಾಚಾರ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಸುಮಾರು 10—12 ವರ್ಷದಿಂದಲೂ ನಡೆಯುತ್ತಾ ಇದೆ. ಇದು ದಿನೇ ದಿನೇ ಜಾಸ್ತಿಯಾಗುತ್ತಾ ಇದೆಯೇ ವಿನಃ ಕಡಿಮೆಯಾಗುವುದಿಲ್ಲ.

ಇನ್ನು ಹೈಡಲ್ ಪವರ್ ನಮ್ಮ ಮೈಸೂರು ದೇಶಕ್ಕೆ ಕೊಟ್ಟಿರುವುದು ಒಂದು ವರ ಇದ್ದ ಹಾಗೆ. ನಮ್ಮಲ್ಲಿ ವಿದ್ಯುಚ್ಛಕ್ತಿ ಹೆಚ್ಚಿಗೆ ಇದ್ದರೂ ಕೂಡ ಇವರು ಮದ್ರಾಸ್, ಆಂಧ್ರವನ್ನು ನೋಡಿ ದರ ಹೆಚ್ಚಿಸಿದ್ದೇವೆ ಎಂದು ಹೇಳುತ್ತಾರೆ. ಆದರೆ ನೈವೇಲಿಯಲ್ಲಿ ಥರ್ಮಲ್ ಕರಂಟ್ ಉತ್ಪತ್ತಿ ಮಾಡುತ್ತಾರೆ. ಅಲ್ಲಿ ವಿದ್ಯುಚ್ಛಕ್ತಿ ತಯಾರು ಮಾಡುವ ಖರ್ಚು ಇಲ್ಲಿಗಿಂತ 1½ ಪಟ್ಟು ಜಾಸ್ತಿಯಾಗಿರುತ್ತೆ. ಆದುದರಿಂದ ಅವರು ಅಲ್ಲಿ ಜಾಸ್ತಿ ಮಾಡಿರುತ್ತಾರೆ. ಅದೇ ರೀತಿ ಇಲ್ಲೂ ಜಾಸ್ತಿ ಮಾಡುವುದು ಸರಿಯಲ್ಲ. ನಮ್ಮಲ್ಲರುವ ಹೈಡಲ್‌ಪವರನ್ನು ಲೆಕ್ಕ ಹಾಕಿಕೊಂಡು ಅವರ ಮಟ್ಟಕ್ಕೆ ಹೋಲಿಸ ಬಾರದು. ಏತಕ್ಕೆಂದರೆ ನಮ್ಮಲ್ಲಿ ವಿದ್ಯುಚ್ಛಕ್ತಿ ತಯಾರು ಮಾಡಲು ಕಡಿಮೆ ಖರ್ಚಿನಲ್ಲಿ ಆಗುತ್ತದೆ. ಆದುದರಿಂದ ಜನರಿಗೆ ಉಪಕಾರ ಮಾಡಬೇಕು ಎನ್ನುವ ಭಾವನೆ ಬರಬೇಕು. ಮದ್ರಾಸ್‌ನಲ್ಲಿ ಹಾಗೆ ಇದೆ, ಬಾಂಬೆನಲ್ಲಿ ಹೀಗೆ ಇದೆ ಎನ್ನುವಂಥ ಹೋಲಿಕೆ ಮಾಡಿ ಈ ರೀತಿ ಹೆಚ್ಚಿಸುವುದರಲ್ಲಿ ಅರ್ಥವಿಲ್ಲ. ನಮ್ಮಲ್ಲಿ ಮೊದಲು 1965ರಲ್ಲಿ ಒಂದು ಹೆಚ್. ಪಿ. ಗೆ 7-50 ಇತ್ತು. 1966ರಲ್ಲಿ 17-50 ಆಯಿತು ; 1967ರಲ್ಲಿ 24-00 ರೂಪಾಯಿ ಆಯಿತು. 1968ರಲ್ಲಿ 48-00 ರೂಪಾಯಿ ಇದೆ. ಇಷ್ಟು ಜಾಸ್ತಿ ಮಾಡಿದರೂ ನಮಗೆ ಲಾಸ್ ಆಗುತ್ತಾ ಇದೆ ಎಂದು ಹೇಳುವುದಾದರೆ ಇದರಲ್ಲಿ ನಿಜವಾಗಿಯೂ ಲೋಪದೋಷಗಳು ಇವೆ. ಇದನ್ನು ವಿಮರ್ಶೆ ಮಾಡಬೇಕು. ಈವೊತ್ತು 1962-63ರ ಆಡಿಟ್ ರಿಪೋರ್ಟ್ ನೋಡುವುದಾದರೆ ಅದರಲ್ಲಿ ಏನು ಭ್ರಷ್ಟಾಚಾರ ನಡೆಯುತ್ತಾ ಇದೆ, ಏನು ಲೋಪದೋಷಗಳು ಇವೆ ಎನ್ನುವುದು ಗೊತ್ತಾಗುತ್ತದೆ. ಇಷ್ಟು ಲೋಪದೋಷಗಳು ಇದ್ದರೂ ಚೀಫ್ ಇಂಜನೀಯರ್ಸ್ ಏನೂ ಕ್ರಮ ತೆಗೆದುಕೊಂಡಿಲ್ಲ. ಇಂಥ ಚೀಫ್ ಇಂಜಿನೀಯರ್ಸ್ ಇದ್ದಾರೆ. ಯಾವ ಸ್ಕೋರ್ಸ್ ತೆಗೆದುಕೊಂಡರೂ 1, 2, 3 ಲಕ್ಷ ರೂಪಾಯಿಗಳಷ್ಟು ಷಾರ್ಟ್‌ಫೀಜ್ ಆಗುತ್ತಾ ಇದೆ. ಶರಾವತಿ ಹೈಡೆಲ್ಸ್ ಎಲೆಕ್ಟ್ರಿಕ್ಸ್ ಸ್ಕೋರ್‌ನಲ್ಲಿ 10 ಲಕ್ಷ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ರೂಪಾಯಿನಷ್ಟು ಷಾರ್ಜೇಜ್ ಇದೆ. ಇವೆಲ್ಲಾ ಅಡಿಟ್ ರಿಪೋರ್ಟಿನಲ್ಲಿ ಇವೆ. ಹೀಗಿದ್ದರೂ ಅಲ್ಲಿ ಯಾವ ಅಧಿಕಾರಿಗಳನ್ನೂ ಟ್ರಾನ್ಸ್‌ಫರ್ ಮಾಡಿಲ್ಲ, ಈ ಅಧಿಕಾರಿಗಳಿಂದ ಎಷ್ಟು ನಷ್ಟವಾಗುತ್ತಾ ಇದೆ, ಎಷ್ಟು ಅಕ್ರಮಗಳು ಆಗುತ್ತಾ ಇವೆ, ಎನ್ನುವುದರ ಬಗ್ಗೆ ಸರ್ಕಾರದವರು ಏನೂ ನಿಗಾ ತೆಗೆದುಕೊಂಡಿಲ್ಲ. ಇದನ್ನು ಪರಿಶೀಲನೆಮಾಡಬೇಕೆಂದು ಹೇಳುತ್ತೇನೆ. ಶ್ರೀಮಾನ್ ನಂಜೇಗೌಡರು ಹೇಳಿದರು. ಹಳೇ ಮೈಸೂರಿನಲ್ಲಿ ಒಂದು ಹೆಚ್. ಪಿ. ಪಂಪುಸೆಟ್ಟಿಗೆ 3700 ರೂಪಾಯಿ ಖರ್ಚಾಗುತ್ತದೆ. ಆದೇ ಹೆಚ್. ಪಿ. ಪಂಪುಸೆಟ್ಟಿಗೆ ಗುಲ್ಬರ್ಗಾದಲ್ಲಿ somehow ಮ್ಯಾನೇಜ್ ಮಾಡಿ ಎಂದು ಮಂತ್ರಿಗಳು ಅಧಿಕಾರಿಗಳಿಗೆ ಹೇಳುತ್ತಾರೆ ಎಂದು. ಹೀಗೆ ಹೇಳಿದ ಮೇಲೆ ಅಧಿಕಾರಿಗಳು ತಾನೇ ಏನು ಮಾಡಿಯಾರು ? ಒಂದು ಪಂಪುಸೆಟ್ಟಿಗೆ ಇನ್‌ಸ್ಟಲೇಷನ್ ಹಾಕಬೇಕಾದರೆ 5-6 ಸಾವಿರ ರೂಪಾಯಿ ಏನೂ ಖರ್ಚಾಗುವುದಿಲ್ಲ. ಇದರಲ್ಲಿ ಒಂದು ನಿಯಮವನ್ನು ಪರಿಪಾಲನೆ ಮಾಡಬೇಕು. ಒಂದು ಅಶ್ವಶಕ್ತಿಗೆ 5-6 ಸಾವಿರ ರೂಪಾಯಿ ಖರ್ಚಾಗಬಹುದು ಎಂದು ಇಟ್ಟುಕೊಳ್ಳೋಣ. ಅದರಲ್ಲಿ ಒಂದು ಪರಿಮಿತಿ ಇಟ್ಟುಕೊಂಡು ಸರ್ಕಾರದವರು 2½ ಸಾವಿರ ರೂಪಾಯಿ ಸಬ್ಸಿಡೈಸ್ ಮಾಡಲಿ, ಉಳಿದ ಮೊಬಲಗನ್ನು ವಸೂಲ್ಮಾಡಲಿ. ಸರ್ಕಾರದವರು ಅಷ್ಟಾದರೂ ಸಹಾಯ ಮಾಡಿ.

ಇನ್ನು ಮಂತ್ರಿಗಳು ಹೊರಗಡೆ ಹೋಗಿ ಭಾಷಣ ಮಾಡುತ್ತಾರೆ. ಏನೆಂದರೆ 4ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಒಂದು ಲಕ್ಷ ಪಂಪುಸೆಟ್ಟನ್ನು ಹಾಕುತ್ತೇವೆ ಮತ್ತು 25 ಸಾವಿರ ಬಾವಿಗಳನ್ನು ತೋಡಿಸುತ್ತೇವೆ ಇದಕ್ಕಾಗಿ ಇಂತಿಷ್ಟು ಮೊಬಲಗನ್ನು ಒದಗಿಸಿದ್ದೇವೆ ಎಂದು ಪ್ರಚಾರ ಮಾಡಿದರು ಆದರೆ 1968-69ರಲ್ಲಿ ಎಷ್ಟು ಖರ್ಚ ಮಾಡಿದ್ದೀರಿ ಎನ್ನುವ ಪ್ರಶ್ನೆ ತಮ್ಮನ್ನು ಕೇಳಬೇಕಾಗಿದೆ. ಕಳೆದವರ್ಷ 210 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಈ ವರ್ಷ 160 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಮತ್ತು 546 ಪಂಪು ಸೆಟ್ಟುಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಅದೂ ಕೂಡ ಪೂರ್ತಿ ಮುಟ್ಟಿಲ್ಲ ಎಂದು ಹೇಳಬೇಕಾಗಿದೆ. ಹೀಗಾದರೆ ನೀವು ಹಾಕಿಕೊಂಡಿರುವ ಗುರಿ ಮುಟ್ಟುವುದು ಯಾವಾಗ, ಎಂದು ಕೇಳುತ್ತೇನೆ. ಇವೆಲ್ಲಾ ಫೈನಾನ್ಷಿಯಲ್ ಸ್ಟೇಟ್‌ಮೆಂಟಿನಲ್ಲಿ ಮುಂಕುಡುಪಿ ಹಾಕುವ ಸೋಗು ಎಂದು ಹೇಳಬೇಕಾಗಿದೆ. ಈ ಕಾರಣ ಅಂಟ್‌ನಲ್ಲಿ ನಷ್ಟವಾಗುತ್ತಿರುವುದಕ್ಕೆ ಕಾರಣ ಅಲ್ಲಯ ಲೀಕೇಜಿನಿಂದ ಮತ್ತು ಸ್ಪೋರೇಜ್‌ನಲ್ಲಿ ನಷ್ಟವಾಗುವುದು, ಓವರ್ ಸ್ಟಾಫ್ ಇರುವುದು ಮತ್ತು ಅಧಿಕಾರಿಗಳ ಅಶ್ರದ್ಧೆ ಇವುಗಳಿಂದ ಆಗುತ್ತಾ ಇದೆ. ಆದುದರಿಂದ ಇದನ್ನೆಲ್ಲಾ ಪುನರ್ಪರಿಶೀಲಿಸಿ ಇದಕ್ಕೊಸ್ಕರ ಒಂದು ಕಮಿಟಿ ಮಾಡಿ We should give a purge to the Board ಎಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಆಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಅನೇಕ ಮಾನ್ಯ ಸದಸ್ಯರು ಹೆಚ್ಚಾಗಿ ಗುಲ್ಬರ್ಗಾದ ವಿಷಯಗಳ ಬಗ್ಗೆ ಮಾತನಾಡಿದರು. ಏನೆಂದರೆ ಈಗಿನ ಮುಖ್ಯ ಮಂತ್ರಿಗಳು ಗುಲ್ಬರ್ಗಾದಿಂದ ಬಂದಿರುವ ಕಾರಣ ಮತ್ತು ಅವರು ಹಿಂದಿನ ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿದ್ದ ಕಾರಣ ಗುಲ್ಬರ್ಗ ಡಿವಿಷನ್‌ಗೆ ಹೆಚ್ಚು ವಿದ್ಯುಚ್ಛಕ್ತಿಯನ್ನು ಸದಬರಾಜು ಮಾಡಿದ್ದಾರೆ ಎಂದು ಆರೋಪ ಮಾಡಿದರು. ಇದರ ಬಗ್ಗೆ ನನಗೆ ಅನಿಸುವುದು ಏನೆಂದರೆ ಮಾನ್ಯ ಸದಸ್ಯರು ಈ ರೀತಿ ಆರೋಪ ಮಾಡುವುದಕ್ಕೆ ಮುಂಚಿತವಾಗಿ ಆರೋಪ ಮಾಡದೆ ನನ್ನ ಪರಿಯಾಕ್ಕೆ ಅಂದರೆ ಗುಲ್ಬರ್ಗಾ ಡಿವಿಷನ್‌ಗೆ ಬಂದು ಒಂದು ಹಳ್ಳಿಗಾದರೂ ಭೇಟಿ ಮಾಡಿ ಅಲ್ಲಿಯ ಜನಗಳನ್ನು ಎಲೆಕ್ಟ್ರಿಸಿಟಿ ಏನು ಎಂದು ಕೇಳಿದರೆ ಎಲೆಕ್ಟ್ರಿಸಿಟಿ ಗೊತ್ತಿಲ್ಲ ಎಂದು ಹೇಳುತ್ತಾರೆಯೇ ವಿನಃ ಬೇರೆ ಏನಾದರೂ ಹೇಳಿದರೆ ನಾನು ಸದಸ್ಯನಾಗಿ ಇಲ್ಲಿರಲಿಕ್ಕೆ ಸಾಧ್ಯ ಇಲ್ಲ ಎಂದು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ಸುಮಾರು 20-25 ವರ್ಷಗಳಿಂದಲೂ ನಮಗೆ ಎಲೆಕ್ಟ್ರಿಸಿಟಿ ಬರುತ್ತದೆ ಎಂದು ನಮ್ಮ ಕಡೆ ಜನರಲ್ಲಿ ಒಂದು ಕಲ್ಪನೆ ಇತ್ತು. ಆ ಕಲ್ಪನೆಯನ್ನು ಹೋಗಲಾಡಿಸುವುದಕ್ಕಾಗಿ 2-3 ವರ್ಷದಲ್ಲಿ ಒಂದೊಂದು ತಾಲ್ಲೂಕಿನಲ್ಲಿ 8-10 ಹಳ್ಳಿಗಳನ್ನು ಬಿಟ್ಟರೆ ಅಥವಾ 50-60 ಪಂಪುಸೆಟ್ಟು ಕರೆಂಟ್ ಕೊಡುವುದನ್ನು ಬಿಟ್ಟರೆ ಬೇರೆ ಎಲ್ಲಾದರೂ ಕರೆಂಟ್ ಇದೆ ಎನ್ನುವ ಶಬ್ದವಾದರೂ ನಮ್ಮ ಗುಲ್ಬರ್ಗಾ ಡಿವಿಜನ್‌ನಲ್ಲಿ ಸಿಕ್ಕುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ. ಅದುಬಿಟ್ಟು ಯಾವುದೇ ಒಂದು ರಾಜಕೀಯ ಉದ್ದೇಶದಿಂದಾಗಲಿ, ಪಕ್ಷಪಾತದ ದೃಷ್ಟಿಯಿಂದಾಗಲಿ ಗುಲ್ಬರ್ಗಾ ಡಿವಿಜನ್‌ಗೆ ಹೆಚ್ಚು ಕರೆಂಟ್ ಹೋಗಿದೆ ಎಂದು ಹೇಳಿದರೆ ಅದನ್ನು ನಾನು ಒಪ್ಪಲಿಕ್ಕೆಸಾಧ್ಯವಿಲ್ಲ. ಗುಲ್ಬರ್ಗಾ ಡಿವಿಜನ್ ಅಷ್ಟೂ ಹಿಂದುಳಿದಿದೆ. ಇದಕ್ಕೆ ಎಲೆಕ್ಟ್ರಿಸಿಟಿಬೋರ್ಡ್‌ನ ಎಸ್ಟಾಬ್ಲಿಷ್‌ಮೆಂಟಿನವರು ಏನು ಮಾಡಿಯಾರು ? ಗುಲ್ಬರ್ಗಾ ಡಿವಿಷನ್‌ಗೆ ಕಡಿಮೆ ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ ಎಂದು ಹೇಳುತ್ತೇನೆ. ರಾಜಕೀಯ ದೃಷ್ಟಿಯಿಂದ ಯಾವುದೇ ಒಂದು ಕಾರ್ಯಕ್ರಮವನ್ನು ಡೆವಲಪ್ ಮಾಡಿದರೆ ಆ ರಾಜ

ಕೇಯವನ್ನು ಯಾವುದಕ್ಕೋ ತರುವುದನ್ನು ನಾನು ಒಪ್ಪುವುದಿಲ್ಲ. ಅಭಿವೃದ್ಧಿ ಮಾಡುವ ಕಾರ್ಯಗಳಲ್ಲಿ ಡೆವಲಪ್‌ಮೆಂಟ್ ಮಾಡುವ ದೃಷ್ಟಿಯಿಂದ ಕಾಂಗ್ರೆಸ್‌ಮನ್ ಮತ್ತು ನಾನ್ ಕಾಂಗ್ರೆಸ್‌ಮನ್ ಎನ್ನುವ ರಾಜಕೀಯವನ್ನು ಇದರಲ್ಲಿ ಸೇರಿಸಬಾರದು. ಇದರಲ್ಲಿ ರಾಜಕೀಯವನ್ನು ವಿರೋಧ ಮಾಡಲಿಕ್ಕೆ ನಾನು ತಯಾರಿಲ್ಲ.

12-00 NOON

ಈ ಮನೆಯು ಸದಸ್ಯರು ಹೆಚ್ಚಾಗಿ ತುಂಗಭದ್ರಾಕ್ಕೆ ಹೆಚ್ಚು ಇನ್‌ವೆಸ್ಟ್ ಮಾಡಿದ್ದಾರೆ, ಅದರಿಂ ಪ್ರತಿಫಲ ಬಂದಿಲ್ಲ, ತುಂಗಭದ್ರಾಕ್ಕೆ ನಮ್ಮ ಹಣ ದುರುಪಯೋಗವಾಗಿದೆ, ಆ ಕಡೆ ಡೆವಲಪ್ ಆಗಿದೆ, ಈ ಕಡೆ ಆಗಿಲ್ಲ ಎಂದು ಹೇಳಿದರು. ತುಂಗಭದ್ರದಿಂದ ಎಷ್ಟು ಬೆಳೆಯಾಯಿತು, ಅಲ್ಲಿ ಎಷ್ಟು ಕ್ವಿಂಟಾಲ್ ಧಾನ್ಯ ಪ್ರೊಕ್ಯೂರ್ ಆಗಿದೆ, ಅದರ ಪೈಕಿ ಆ ಜಿಲ್ಲೆಯಲ್ಲಿ ಎಷ್ಟು ಹಂಚಿಕೆಯಾಗಿದೆ, ಇತರ ಕಡೆಗಳಲ್ಲಿ ಎಷ್ಟು ಹಂಚಿಕೆಯಾಗಿದೆ ಎಂದು ಹೇಳುವುದಾದರೆ, ರಾಯಚೂರು ಜಿಲ್ಲೆಯಿಂದ ಸುಮಾರು 4 ಲಕ್ಷ ಕ್ವಿಂಟಾಲ್ ಬತ್ತ ಪ್ರೊಕ್ಯೂರ್ ಆಗಿ ಅದರಲ್ಲಿ 81 ಸಾವಿರ ಕ್ವಿಂಟಾಲ್ ಮಾತ್ರ ರಾಯಚೂರು ಜಿಲ್ಲೆಯಲ್ಲಿ ಹಂಚಿಕೆಯಾಗಿ ಉಳಿದುದನ್ನು ಇತರ ಕಡೆಗಳಲ್ಲಿ ಹಂಚಿದ್ದಾರೆ. ಇದನ್ನು ನೋಡಿದರೆ ಯಾವ ತರಹ ಭೇದವನ್ನೂ ತೋರಿಸುವುದಕ್ಕೆ ಸಾಧ್ಯವಿಲ್ಲ, ಆ ರೀತಿ ತೋರಿಸಿಲ್ಲ ಎಂಬುದು ವ್ಯಕ್ತವಾಗುತ್ತದೆ. ರಾಯಚೂರು ಜಿಲ್ಲೆಯ ರೈತರು ರಾಜ್ಯದ ಅಭಿವೃದ್ಧಿಗಾಗಿ ಮತ್ತು ರಾಜ್ಯದ ಆಹಾರಾಭಾವ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಸಹಾಯ ಮಾಡಿದ್ದಾರೆ ಮತ್ತು ತುಂಗಭದ್ರ ಯೋಜನೆಗೆ ಕೊಟ್ಟ ಹಣ ದುರುಪಯೋಗವಾಗಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

ನೀರಾವರಿ ಪಂಪ್‌ಸೆಟ್‌ಗಳ ವಿಷಯವನ್ನು ತೆಗೆದುಕೊಂಡರೆ ಒಂದು ವರ್ಷಕ್ಕೆ 120 ರೂಪಾಯಿ ಇದ್ದುದನ್ನು 240 ರೂಪಾಯಿಗೆ ಹೆಚ್ಚು ಮಾಡಿದ್ದಾರೆ. ಇದನ್ನು ನಾನು ವಿರೋಧಿಸುತ್ತೇನೆ. ಕೈಗಾರಿಕಾ ಉದ್ಯಮಕ್ಕೆ ಯಾವ ರೀತಿಯಾಗಿ ಕಡಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೀರೋ ಅದೇ ರೀತಿಯಲ್ಲಿ ವ್ಯವಸಾಯಕ್ಕೂ ಕಡಮೆ ದರದಲ್ಲಿ ಒದಗಿಸಿದರೆ ಅಧಿಕ ಆಹಾರ ಬೆಳೆಯುವ ದೃಷ್ಟಿಯಿಂದ, ರೈತರ ಮತ್ತು ದೇಶದ ಹಿತದೃಷ್ಟಿಯಿಂದ, ಆಹಾರಾಭಾವವನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಸಹಾಯವಾಗುತ್ತದೆ. ಆದ್ದರಿಂದ ಕಡಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸ ಬೇಕೆಂದು ನಾನು ಹೇಳಬಯಸುತ್ತೇನೆ.

ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಆಡಳಿತ ಯಾವ ರೀತಿ ನಡೆದಿದೆ ಎಂದು ತಿಳಿಸುತ್ತ ಅಲ್ಲಿ ಬಹಳ ಬೇಜವಾಬ್ದಾರಿಯುತವಾದ ಆಡಳಿತ ನಡೆಯುತ್ತಿದೆ ಎಂದು ಕೆಲವು ಸದಸ್ಯರು ಹೇಳಿದರು. ಎಲ್ಲ ಇಲಾಖೆಗಳಲ್ಲಿಯೂ ಇದೇ ರೀತಿ ಇದೆ. ನನ್ನ ಮಟ್ಟಿಗೆ ಹೇಳುವುದಾದರೆ ಯಾವ ಇಲಾಖೆಯೇ ಆಗಲಿ ಅದು ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತಿದೆ ಅಥವಾ ಬೇಜವಾಬ್ದಾರಿಯುತವಾಗಿ ಕೆಲಸ ಮಾಡುತ್ತಿದೆ ಎಂದು ಹೇಳುವುದಕ್ಕೆ ತಯಾರಿಲ್ಲ.

ಎಲೆಕ್ಟ್ರಿಸಿಟಿ ಬೋರ್ಡಿನ ಸಾಮಾನುಗಳ ಬಗ್ಗೆ ಪ್ರಸ್ತಾಪ ಮಾಡುತ್ತ ಟ್ರಾನ್ಸ್‌ಫಾರ್ಮರುಗಳು ಕಂಬಗಳು ಮತ್ತು ತಂತಿ ಇವುಗಳ ಬಗ್ಗೆ, ಮಾನ್ಯ ಮಿತ್ರರಾದ ಎ. ಎನ್. ಪಾಟೀಲ್ ಅವರು ಹೇಳಿದ್ದು ಸತ್ಯವಾದ ಸಂಗತಿ. ಅಧಿಕಾರಿಗಳು ಇದರ ಕಡೆಗೆ ಲಕ್ಷ್ಯ ಕೊಟ್ಟಿಲ್ಲ. ಎಲ್ಲಿ ನೋಡಿದರೂ ಎಲೆಕ್ಟ್ರಿಸಿಟಿ ಬೋರ್ಡಿನ ಸಾಮಾನುಗಳು ಸಿಕ್ಕಬಹುದು. ಯಾರು ಎಲ್ಲಿಗೆ ಒಯ್ಯುತ್ತಾರೆ ಯಾವ ರೀತಿಯಿಂದ ದುರುಪಯೋಗವಾಗುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಅಂಶ. ಇವೆಲ್ಲ ದುರುಪಯೋಗವಾಗುವುದಕ್ಕೆ ಕಾರಣವೇಂದರೆ ಸರಿಯಾದ ಉಸ್ತುವಾರಿ ಇಲ್ಲದೇ ಇರುವುದು. ಇದರಿಂದಾಗುವ ನಷ್ಟವನ್ನೂ ರೈತರ ಮೇಲೆ ಹಾಕುವುದಕ್ಕೆ ಬರುತ್ತಾಗಿ ಒಬ್ಬನೇ ಒಬ್ಬ ಪಾಲೀಕನಾಗಿರುವ ಕೈಗಾರಿಕೆಗಳ ಮೇಲೆ ಅಥವಾ ಶ್ರೀಮಂತರ ಮೇಲೆ ಹಾಕಿದರೆ ವ್ಯವಸಾಯಗಾರನ ಮೇಲೆ ಹೊರೆ ಕಡಮೆಯಾಗುತ್ತದೆ. ಇದಕ್ಕೆ ಅವಶ್ಯ ತೀವ್ರ ಗಮನ ಕೊಡಬೇಕೆಂದು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಎಲ್. ಶಿವಪ್ಪ (ತಿಪಟೂರು).—ಸ್ವಾಮಿ, ಮೈನೂರು ಸಂಸ್ಥಾನದ ವಿದ್ಯುಚ್ಛಕ್ತಿ ಮಂಡಲಿಯ ಆಯವ್ಯಯ ಪಟ್ಟಿಯ ಬಗ್ಗೆ ಮಾತನಾಡುತ್ತ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ವ್ಯವಸಾಯವನ್ನು ಕೈಗಾರಿಕೆಯ ಮಾದರಿಯಲ್ಲಿ ನೋಡಿ, ಅವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದರೆ ಬಹಳ ಚೆನ್ನಾಗಿ ಬೆಳೆಯಬಹುದು ಎಂದು ಅಲೋಚನೆ ಮಾಡಿ, ಶರಾವತಿ ಯೋಜನೆ ಕಾರ್ಯಗತವಾಗಿ ಅದರಿಂದ ವಿದ್ಯುತ್ ಉತ್ಪಾದನೆ ಪ್ರಾರಂಭವಾದ ಮೇಲೆ ರೈತರಿಗಿರತಕ್ಕ ಬಡತನ ನಿವಾರಣೆಯಾಗಿ ರಾಜ್ಯದಲ್ಲಿನ ಆಹಾರದ ಕೊರತೆಯನ್ನು ಹೋಗಲಾಡಿಸಲು ಅನುಕೂಲವಾಗುತ್ತದೆ, ಆದು ರೈತರಿಗೆ ವರವಾಗಿ ಪರಿಣಮಿಸುತ್ತದೆ ಎಂದು ಭಾವನೆ ಮಾಡಿದ್ದೆವು. ಆದರೆ ತಿಪಟೂರು

(ಶ್ರೀ ವಿ. ಎರ್. ಶಿವಪ್ಪ)

ತಾಲ್ಲೂಕಿನಲ್ಲಿ ಒಂದು ಸಾವಿರ ಬಾವಿಗಳನ್ನು ತೋಡಿಕೊಂಡಿದ್ದರೂ 300 ಬಾವಿಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ. ಇದಕ್ಕೆ ಕಾರಣವೇನೆಂದರೆ ಒಂದು ಹಾರ್ಸ್ ಪವರ್‌ಗೆ ಇಷ್ಟು ರೂಪಾಯಿ ಖರ್ಚು ಮಾಡಬೇಕೆಂದಿದೆ. ಅದಕ್ಕಿಂತ ಜಾಸ್ತಿ ಖರ್ಚಾಗುವುದರಿಂದ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ಭಾಗ ಸಾಧಾರಣವಾಗಿ ನೀರಾವರಿ ಕಡಮೆ ಇರುವ ಜಾಗ. ಬಾವಿಗಳಲ್ಲಿ ನುಮಾರು ಮೂರು ನಾಲ್ಕು ದಿವಸ ಕಾದರೂ ಎರಡು ಗಂಟೆ ಕಾಲ ಮಾತ್ರ ವಿದ್ಯುತ್ತನ್ನು ಉಪಯೋಗಿಸಬಹುದಾದಷ್ಟು ನೀರು ಸಿಕ್ಕುತ್ತದೆ. ಇಂಥ ಸಂದರ್ಭದಲ್ಲಿ ಮಿನಿಮಂ ರೇಟ್ ಒಂದು ಹಾರ್ಸ್ ಪವರಿಗೆ 18 ರೂಪಾಯಿ ಇದ್ದುದನ್ನು 24 ರೂಪಾಯಿ ಮಾಡುವುದಲ್ಲದೆ, 48 ರೂಪಾಯಿ ಮಾಡತಕ್ಕ ಅಧಿಕಾರವನ್ನು ಬೋರ್ಡ್ ಏನು ಇಟ್ಟುಕೊಂಡಿದೆಯೋ ಅದನ್ನೆಲ್ಲ ನೋಡಿದರೆ ಯೋಗ್ಯವಾದ ರೀತಿಯಲ್ಲಿ ವಿದ್ಯುಚ್ಛಕ್ತಿ ಮಂಡಲ ಕೆಲಸ ಮಾಡುತ್ತಿಲ್ಲ ಎಂದು ಹೇಳಬಹುದು. ಬೋರ್ಡಿನಲ್ಲಿ ಆಗುವ ದುರುಪಯೋಗಕ್ಕೆ ಯಾರು ಜವಾಬ್ದಾರರು? ಅಲ್ಲಿ ಆಗತಕ್ಕ ನಷ್ಟವನ್ನೆಲ್ಲ ರೈತರ ಮೇಲೆ ಹಾಕತಕ್ಕುದು ಎಷ್ಟರಮಟ್ಟಿಗೆ ಸಾಧುವಾದುದು ಎನ್ನುವುದನ್ನು ಪರಿಶೀಲನೆ ಮಾಡಬೇಕು. ಬೆಳಗಾಂನಿಂದ ಪೂನಾಕ್ಕೆ 110 ಕೆ.ವಿ. ಲೈನ್ ಹಾಕಿ ಅದರಲ್ಲಿ 220 ಕೆ.ವಿ. ವಿದ್ಯುತ್ತನ್ನು ಹರಿಸಿದುದರಿಂದ ಟ್ರಾನ್ಸ್‌ಫಾರ್ಮರುಗಳು ಸುಟ್ಟುಹೋದುವು ಎಂದರೆ ಅದರಿಂದ ಎಷ್ಟು ಹಣ ಲುಕ್ಸಾನಾಯಿತು? ಇದಕ್ಕೆಲ್ಲ ಜವಾಬ್ದಾರರು ಯಾರು? ಸಂಬಂಧಪಟ್ಟ ಟೆಕ್ನಿಕಲ್ ಅಧಿಕಾರಿಗಳ ಮೇಲೆ ಏಕೆ ಕ್ರಮ ತೆಗೆದುಕೊಂಡಿಲ್ಲ? ಬಂಡೆಯಷ್ಟು ಶಕ್ತಿವಂತರು ಎಂದು ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆಯ ದಿವಸ ಹೇಳಿದರು. ಆದರೆ ಕೆಲವು ಬಂಡೆಗಳು ತಾವಾಗಿಯೇ ಸಿಡಿದು ಹೋಗತಕ್ಕ ಪರಿಸ್ಥಿತಿ ಇರುತ್ತದೆ, ಮನುಷ್ಯ ಪ್ರಯತ್ನದಿಂದ ಕೆಲವು ಸಿಡಿಯುತ್ತವೆ, ಕೆಲವು ಭಗವಂತನ ಇಚ್ಛೆಯಿಂದ ಸಿಡಿದು ಹೋಗುತ್ತವೆ. ಲೈನ್ ಮಿನಿಮಂ ಏನೇ ಆದರೂ ಒಂದು ಹಾರ್ಸ್ ಪವರಿಗೆ ಹೆಚ್ಚಾಗಿ ಖರ್ಚಾಗುವುದರಿಂದ ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಆ ಕಡೆ ಮಾತ್ರ ಏನೂ ಇಂತಹ ತೊಂದರೆಗಳಿಲ್ಲದೆ ಕೆಲಸ ಕಾರ್ಯಗಳು ನಡೆಯುತ್ತಿವೆ. ಅಲ್ಲಿ ಲೈನ್ ಮಿನಿಮಂಗಿಂತ ಹೆಚ್ಚಾಗಿ ಖರ್ಚಾಗುತ್ತಿಲ್ಲವೇ ಎಂದು ನಾನು ಕೇಳಬೇಕಾಗುತ್ತದೆ. ಕರ್ನಾಟಕ ರಾಜ್ಯ ಆಗಬೇಕೆಂಬುದನ್ನು ನಾವು ನಂತೋಷದಿಂದ ಒಪ್ಪಿಕೊಂಡೆವು. ಅದನ್ನು ಅನುಭವಿಸಿಕೊಂಡು ಬರುವುದಕ್ಕೆ ಮುಂದೆ ಬರುತ್ತೇವೆ ಎನ್ನುವವರು ಒಂದು ಕಡೆ ಒಂದು ನೀತಿ ಇನ್ನೊಂದು ಕಡೆ ಇನ್ನೊಂದು ನೀತಿ ಹೀಗೆ ಭೇದ ಭಾವವನ್ನು ತೋರಿಸುವುದಕ್ಕೆ ಅವಕಾಶ ಕೊಡಬಾರದು ಮತ್ತು ಅಂಥ ಅಧಿಕಾರಿಗಳಿಗೆ ಅವಕಾಶ ಕೊಡಬಾರದು. ಬೋರ್ಡ್ ಚೇರ್ಮನ್ ಆಗಿ ಕೆಲಸ ಮಾಡಲು ನೇಮಕ ಮಾಡುವವರಿಗೆ ಹೆಚ್ಚು ಸಂಬಳ ಕೊಟ್ಟು ಇಟ್ಟುಕೊಂಡಿದ್ದಾರೆಂದರೆ ಎಲ್ಲಿ ಬೇಕೋ ಅಲ್ಲಿ ಬಗಿಯಿಸಿದ ಆಡಳಿತ ನಡೆಸಿ, ಎಲ್ಲಿ ಬೇಕೋ ಅಲ್ಲಿ ನಡಲವಾಗಿ ಆಡಳಿತ ನಡೆಸಲು ಇಟ್ಟುಕೊಂಡಿದ್ದಾರೆಯೇ? ಚೇರ್ಮನ್ ಆಗಿ ನಿಮಗೆ ಬೇಕಾದವರನ್ನು ನೇಮಕ ಮಾಡಿಕೊಂಡಿರುವುದರಿಂದ ಆಡಳಿತ ಯೋಗ್ಯವಾಗಿ ನಡೆಯುತ್ತಿಲ್ಲ, ನೀವು ಕೊಡುವ ಹಣ ಅನ್ಯಾಯವಾಗಿ ಬೋರ್ಡಿನ ಉತ್ಪನ್ನ ಕಡಮೆಯಾಗುತ್ತಿದೆ ಎಂದು ಹೇಳಬಹುದು. ಯಾವಾಗ ಕೇಳಿದರೂ ಹಣವಿಲ್ಲ ಎಂದು ಹೇಳುತ್ತಾರೆ. ಹಣವನ್ನು ಸರಿಯಾದ ರೀತಿಯಲ್ಲಿ ವಾಪಸು ತೆಗೆದುಕೊಂಡಿಲ್ಲ. ತುಂಗಭದ್ರ ಡ್ಯಾಂ ಕಟ್ಟಿದಾಗ 130 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಅದಕ್ಕೆ ಪ್ರತಿ ವರ್ಷವೂ 8-10 ಕೋಟಿ ರೂಪಾಯಿ ಬಡ್ಡಿಯನ್ನು ಕೊಡುತ್ತಿದ್ದೇವೆ. 10-12 ವರ್ಷದಿಂದ ಸರ್ಕಾರ ಬರಬೇಕಾದ ಹಣವನ್ನು ಆ ಪ್ರಾಂತದಲ್ಲಿ ವಸೂಲು ಮಾಡದೇ ಇರುವುದು ಯಾರ ತಪ್ಪು? ಹೆಚ್ಚು ದರ ಹಾಕಿದರೆ ರೈತರ ಹಿತಸಾಧನೆ ಯಾಗುವುದೇ! ಎಲ್ಲ ಭಾಗವನ್ನೂ ಯೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕು. ಸಿಬ್ಬಂದಿ ವರ್ಗಕ್ಕೆ ಹೆಚ್ಚು ಖರ್ಚುಮಾಡಿ ಅದನ್ನು ರೈತರ ಮೇಲೆ ಹೇರುವುದು, ಅದಕ್ಕಾಗಿ ದರ ಏರಿಸುವುದು ನೂಕ್ತವಲ್ಲ, ರೈತರ ಮೇಲೆ ಭಾರ ಹೇರಿ ಆದಾಯ ಪಡೆಯುವುದು ಯೋಗ್ಯವಲ್ಲ, ಈ ರೀತಿಯ ಮನೋಭಾವನೆಯಿರುವುದು ಸರಿಯಲ್ಲ. ದುರುಪಯೋಗವಾಗಿರುವುದು, ದುರಾಡಳಿತವಿರುವುದು ನೋಡಿ ಸಂಬಂಧಪಟ್ಟವರಮೇಲೆ ನೂಕ್ತಕ್ರಮ ತೆಗೆದುಕೊಳ್ಳಬೇಕು. ಯಾವುದೂ ವೇಸ್ಟ್ ಆಗದಂತೆ ನೋಡಿಕೊಳ್ಳಬೇಕು. ನುಮ್ಮನೆ ರೈತರ ಮೇರೆ ಹೊರೆ ಹೊರಿಸಿದರೆ ದೇಶ ಕಟ್ಟಲು ಸಾಧ್ಯವಾಗುವುದಿಲ್ಲ, ಅಭಿವೃದ್ಧಿಯು ಕುಂಠಿತವಾಗುವುದು. ಆದುದರಿಂದ 240 ರೂಪಾಯಿ ಮಿನಿಮಂ ಎಂದಿರುವುದನ್ನು ಬದಲಾಯಿಸಿ ಕಡಮೆ ದರದಲ್ಲಿ ಒದಗಿಸಬೇಕಾದ್ದು ಅವಶ್ಯಕ. ಇದನ್ನು ಬಹಳ ಬೇಗ ಮಾಡಬೇಕು ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ನಂಜಪ್ಪ (ಶಾಂತಿನಗರ).—ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿ ಬೋರ್ಡಿನ ವಿಷಯದಲ್ಲಿ ಈಗಾಗಲೇ ಅನೇಕರು ಮಾತನಾಡಿದ್ದಾರೆ, ನಾನು 5 ನಿಮಿಷಗಳಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ರೈತರಿಗೆ ಅನೇಕ ಬಾಬುಗಳಿಗೆ ಸಾಲ ಕೊಟ್ಟು ವ್ಯವಸಾಯಾಭಿವೃದ್ಧಿಗೆ ಉತ್ಪತ್ತಿ

ಹೆಚ್ಚಿಸುವುದಕ್ಕೆ ಸರಕಾರ ಯೋಚನೆಮಾಡುತ್ತಿದೆ. ಆದರೆ ವಿದ್ಯುಚ್ಛಕ್ತಿ ಇರಾಜೆ ರೈತರಿಗೆ ಅನ್ಯಾಯ ಮಾಡುತ್ತಿದೆ. ಇದು ಸರಿಯಲ್ಲ. ವಿದ್ಯುತ್ ದರವನ್ನು ಏರಿಸಿರುವುದರಿಂದ ರೈತರಿಗೆ ಹೊರೆಯಾಗಿದೆ. ಅಧಿಕಾರಿಗಳಿಗೆ ರೈತರ ಕಷ್ಟಸುಖ ಗೊತ್ತಿರುವುದಿಲ್ಲ, ಅವರು ಈಗ ಏರಿಸಿರುವ ದರವನ್ನು ಕಡಮೆ ಮಾಡಬೇಕು. ಮಳೆ ಬಂದರೆ ರೈತರಿಗೆ ಕೆಲಸ, ಇಲ್ಲದಿದ್ದರೆ ಇಲ್ಲ. 10 ವರ್ಷಗಳಿಂದ ಸರಿಯಾದ ಮಳೆಯಿಲ್ಲ, ಕೆಲಪು ಕಡೆ ಜನರಿಗೆ, ದನಕರುಗಳಿಗೆ ಕುಡಿಯಲು ನೀರಿಲ್ಲ. ಹೀಗಿರುವಾಗ ದರ ಹೆಚ್ಚಿಸುವುದು ಸರಿಯಲ್ಲ. ಅಧಿಕಾರಿಗಳ ಸಂಬಳ ವಗೈರೆ ಜಾಸ್ತಿ ಮಾಡಿಕೊಳ್ಳಲು ರೈತರ ಮೇಲೆ ಹೊರೆ ಹಾಕುವುದು ಸೂಕ್ತವಲ್ಲ. ಜನರು ತಮ್ಮ ಕಷ್ಟಸುಖ ಹೇಳಿಕೊಂಡರೆ ಬೋರ್ಡು ಲಕ್ಷ ಕೊಡುವುದಿಲ್ಲ. ಹಳ್ಳಿಗಳ ಕಡೆ ಅಧಿಕಾರಿಗಳು ಹೋದರೆ ಜನರು ಅವರಿಗೆ ತಿಂಡಿ, ಕಾಫಿ, ಹಣ್ಣು ಮುಂತಾದುವುಗಳನ್ನು ಸರಬರಾಯಿ ಮಾಡುವರು. ಹಾಗಿರುವಾಗ ಅವರಿಗೆ ಅನುಕೂಲ ಮಾಡಬೇಕೇ ಹೊರತು ತೊಂದರೆ ಮಾಡಬಾರದು.

ಅನೇಕ ಸಲ ಜನರ ಪ್ರತಿನಿಧಿಗಳಾದ ನಾವು ಆಫೀಸಿಗೆ ಹೋಗಿ ಜನರ ಕುಂದುಕೊರತೆಗಳನ್ನು ತಿಳಿಸಿದರೆ ಅದಕ್ಕೆ ಗಮನವೇ ಕೊಡುವುದಿಲ್ಲ. ಬಲ್ಬುಗಳು ಹೋಗಿದ್ದರೆ ಹೇಳಿದರೆ ಅವುಗಳ ದಾಸ್ತಾನಿಲ್ಲ ಎಂದು ಏನಾದರೂ ನೆವ ಹೇಳುವರು. ಅವುಗಳನ್ನು ಹಾಕುವುದು ಯಾವಾಗ? ಜನರ ಕಷ್ಟ ಬೋರ್ಡಿನವರಿಗೆ ಗೊತ್ತಾಗುವುದಿಲ್ಲ. ಅನೇಕ ಸಲ ನಾನೇ ಕಾಗದ ಬರೆದಿದ್ದೇನೆ. ಎಷ್ಟೋ ಸಲ ಮನವಿಮಾಡಿದ್ದೇನೆ. ಆದರೆ ನಮಗೆ ಗೊತ್ತಿಲ್ಲದಿರುವುದು ನಿಮಗೇನು ಗೊತ್ತಿದೆ ಎಂದು ಹೇಳುವರು. ಯಾವರೀತಿ ನಾಗರೀಕರ ಬಳಿ ನಡೆದುಕೊಳ್ಳಬೇಕೆಂಬುದು ಸಹ ಗೊತ್ತಿಲ್ಲ. ಬಲ್ಬುಗಳು ಅನೇಕವೇಳೆ ಹೋದಾಗ ಆದನ್ನು ಬೇಗ ಬದಲಾಯಿಸದೆ ಜನರಿಗೆ ತೊಂದರೆಯಾಗುತ್ತಿದೆ. ಮೊಸರಂ ಹತ್ತಿರ ಬಂತು, ಬಲ್ಬುಗಳು ಕೆಟ್ಟುಹೋಗಿರುವ ಜಾಗದಲ್ಲಿ ಬೇರೆ ಹಾಕಬೇಕೆಂದು ನಾನು ಹೇಳಿದರೆ ನನ್ನಮೇಲೆ ಅನತ್ಯವಾದ ವರದಿಮಾಡಿದ್ದಾರೆ. ಯಾರೋ ಕಂಟ್ರಾಕ್ಟರಿಗೆ ಕರೆಂಟ್ ಕೊಡಿಸಲು ಪ್ರಯತ್ನಮಾಡಿದ್ದಾರೆ ಎಂದು ಆಪವಾದ ಹೊರಿಸಿದ್ದಾರೆ. ನಾನು ಯಾವ ಕಂಟ್ರಾಕ್ಟರಿಗೂ ಸಹಾಯಮಾಡಲು ಹೋಗಲಿಲ್ಲ, ನಂತರ ಎಸ್ಕೈರಿ ಮಾಡಿದಾಗ ನಾನು ಏನೂ ಹೇಳಿಲ್ಲವೆಂದು ಸೂಪರ್‌ವೈಜರು ಹೇಳಿದರೂ ಅಸಿಸ್ಟೆಂಟ್ ಎಂಜಿನಿಯರ್ ಮತ್ತು ಎಗ್ಸಿಕ್ಯೂಟಿವ್ ಎಂಜಿನಿಯರು ತಪ್ಪು ವರದಿ ಮಾಡಿರುವುದು ಸರಿಯಲ್ಲ. ಅನೇಕ ಅಧಿಕಾರಿಗಳು ಬೆಂಗಳೂರಿನಲ್ಲೇ ಸುಮಾರು 15 ವರ್ಷಗಳಿಂದಲೂ ಇದ್ದಾರೆ, ಅವರನ್ನು ಸರಕಾರದವರು ಅಧಿಕಾರಿಗಳನ್ನು 3 ವರ್ಷಗಳಿಗೊಂದು ಸಲ ವರ್ಗ ಮಾಡುವಂತೆ ಮಾಡುತ್ತಿಲ್ಲ. ಇದರಿಂದ ಅವರು ಬೇರೂರಿಕೊಂಡು ತಮಗೆ ಬೇಕಾದಂತೆ ಮಾಡಲು ಅವಕಾಶವಾಗಿದೆ. ಏಕೆ ಅವರನ್ನು 3 ವರ್ಷಗಳಿಗೊಂದು ಸಲ ವರ್ಗ ಮಾಡಬಾರದು? 50 ರೂಪಾಯಿ ಬೆಲೆ ಬಾಳುವ ಬಲ್ಬುಗಳನ್ನು ಇಂದು ಹಾಕಿದರೆ ನಾಳೆ ಸುಟ್ಟುಹೋಗುವುವು. ಅಂಥ ಬಲ್ಬುಗಳನ್ನೆಲ್ಲಕೆ ತರಿಸಬೇಕು? ಹಣ ಯಾಕಾದು ಹಾಗೆ ಮಾಡುವುದರಿಂದ ವ್ಯರ್ಥವಾಗುವುದು! ಈ ರೀತಿ ಇರಾಜೆ ಮಾಡುತ್ತಿದೆ. ಕಾರ್ಪೋರೇಷನ್ ಹಣ ಕೊಡುವುದು, ಆದರೆ ಬಲ್ಬುಗಳು ಒಳ್ಳೆಯವನ್ನು ಹಾಕುತ್ತಿಲ್ಲ. ದೂರುಗಳಿಗೆ ಗಮನ ಕೊಡುತ್ತಿಲ್ಲ. ಬೆಂಗಳೂರಿನಲ್ಲಿ ಸಾಯಂಕಾಲ ಹೋಗಿ ನೋಡಿದರೆ ಅನೇಕ ಕಡೆ ರಸ್ತೆಯಲ್ಲಿ ಬಲ್ಬುಗಳಿರುವುದಿಲ್ಲ. ಬೇಕಾದರೆ ನಾನು ತೋರಿಸುತ್ತೇನೆ. ಕತ್ತಲ್ಲಲ್ಲಿ ಇದರಿಂದ ಓಡಾಡುವುದು ಕಷ್ಟವಾಗಿದೆ. ಕೆಲವು ಕಡೆ ಮಾರ್ಕ್ಯುರಿ ಬಲ್ಬ ಹಾಕಿದ್ದಾರೆ, ಅದು ಕೆಟ್ಟುಹೋದರೆ ಸಣ್ಣ ಬಲ್ಬುಗಳನ್ನು ಹಾಕುತ್ತಿದ್ದಾರೆ.

ಯಾವುದಕ್ಕೆ ಕೇಳಿದರೂ ದುಡ್ಡಿಲ್ಲ. ಅನ್ಯಾಯ ಮಾಡಿ ಲುಕ್ಸಾನಾಯಿತು ಅಂತ ರೇಟ್ ಹೆಚ್ಚಿಸುತ್ತಾ ಇದ್ದೀರಿ, ನಿಮ್ಮ ಖರ್ಚು ಕಮ್ಮಿ ಮಾಡಿಕೊಳ್ಳಿ, ಅದನ್ನು ಬಿಟ್ಟು ರೇಟು ಹೆಚ್ಚು ಮಾಡುತ್ತಾ ಮಾಡುತ್ತಾ 4 ಪೈಸೆಯಿಂದ 28 ಪೈಸೆವರೆಗೂ ಇವತ್ತಿನ ದಿವಸ ಬಂದಿದೆ. ನಾಗರಿಕರು ಕೊಡತಕ್ಕ ದುಡ್ಡಿನಿಂದ ನೀವು ಇವತ್ತಿನ ದಿವಸ ಅಧಿಕಾರದಲ್ಲಿ ಇದ್ದೀರಿ, ಹಾಗಿರುವಾಗ ನೀವು ಅವರನ್ನು ಕಾಪಾಡಬೇಕು ಅಂತಹ ಒಂದು ಭಾವನೆ ನಿಮ್ಮ ಎದೆಯಲ್ಲಿ ಇರಬೇಕು. ಮೂರು ದಿವಸದಿಂದ ಈ ಮಾನ್ಯ ಸಭೆಯಲ್ಲಿ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರ ಬಗ್ಗೆ ತಾವು ಗಮನಕೊಟ್ಟು ನಾಗರೀಕರಿಗೆ ಅನುಕೂಲ ಮಾಡಿಕೊಡಬೇಕು. ಸಂಬಳ ಕಮ್ಮಿ ತೆಗೆದುಕೊಳ್ಳಿ, ಜನಗಳಿಗೆ ಉಪಯೋಗವಾದರೆ ಅವರೇ ನಿಮಗೆ ಹೆಚ್ಚು ಸಂಬಳ ಕೊಡುತ್ತಾರೆ. ಆದ್ದರಿಂದ ಅವರ ಹಿತವನ್ನು ಕಾಪಾಡಬೇಕೆಂದು ಹೇಳಿ ಕೊನೆಯದಾಗಿ ತಮ್ಮ ಆತ್ಮಸಾಕ್ಷಿಯಾಗಿ ನಡೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಂಡು ಮಾತನಾಡಲು ಅವಕಾಶಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಕೆ. ಬೊಮ್ಮೇಗೌಡ (ಕೃಷ್ಣರಾಜಪೇಟೆ).—ಮಾನ್ಯ ಸಭಾಪತಿಗಳೇ, ಈ ವಿದ್ಯುಚ್ಛಕ್ತಿ ಮೊದಲು ಶುರುವಾದದ್ದು ನಮ್ಮ ಮಂಡ್ಯ ಜಿಲ್ಲೆಯಲ್ಲಿ. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇವೆ. ನಮ್ಮ

(ಶ್ರೀ ಎಂ. ಕೆ. ಬೊಮ್ಮೇಗೌಡ)

ದೇಶದಲ್ಲಿ ಹೇರಳವಾಗಿ ವಿದ್ಯುಚ್ಛಕ್ತಿ ಉತ್ಪಾದನೆಯಾಗುವುದಕ್ಕೆ ಪ್ರಾರಂಭವಾದುದು ಶರಾವತಿ, ಗೇರುಸೊಪ್ಪೆ, ತುಂಗಭದ್ರಾ ವಿದ್ಯುತ್ಪಾದನಾ ಕೇಂದ್ರಗಳು ಸ್ಥಾಪನೆಯಾದಮೇಲೆ ಎಂದು ಹೇಳಬಹುದು. ನಮ್ಮಲ್ಲಿ ಹೇರಳವಾಗಿ ವಿದ್ಯುಚ್ಛಕ್ತಿ ಉತ್ಪಾದನೆಯಾದರೂ ಕೂಡ ಜನಗಳ ಬೇಡಿಕೆಗಳನ್ನು ಈಡೇರಿಸುವುದಕ್ಕೆ ನಮ್ಮ ಈ ವಿದ್ಯುಚ್ಛಕ್ತಿ ಮಂಡಲಿಯಿಂದ ಆಗಲಿ ಅಥವಾ ಇರಾಖೆಯವರಿಂದ ಆಗಲಿ ಸಾಧ್ಯವಾಗಿಲ್ಲ. ಹೊರಪ್ರಾಂತ್ಯಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತಾ ಇದ್ದೇವೆ ಎಂದು ಹೇಳುತ್ತಾ ಇದ್ದಾರೆ. ಗ್ರಾಮಾಂತರಗಳ ಬೇಡಿಕೆಯನ್ನು ಪೂರೈಸಲು ಶಕ್ತಿ ಇಲ್ಲದೇ ಇರುವಾಗ ಹೊರಪ್ರಾಂತಗಳಿಗೆ ಏಕೆ ಕಳುಹಿಸುತ್ತಾ ಇದ್ದಾರೆ ಎಂಬುದು ಅರ್ಥವಾಗದ ಒಂದು ಪ್ರಶ್ನೆಯಾಗಿದೆ. ನಮ್ಮ ಏರಿಯಾದಲ್ಲಿ ಒಂದು ವರ್ಷಕ್ಕೆ ಒಂದು ಊರಿಗೂ ಸಹ ವಿದ್ಯುತ್ ಸರಬರಾಯಿ ಆಗುತ್ತಾ ಇಲ್ಲ. ಕೇಳಿದರೆ ಅದು ಇಲ್ಲ, ಇದು ಇಲ್ಲ, ಟ್ರಾನ್ಸ್‌ಫಾರ್ಮರ್ ಇಲ್ಲ, ಕಂಬ ಇಲ್ಲ ಅಂತ ಹೇಳುತ್ತಾರೆ. ಅದಕ್ಕಿಂತ ಹೆಚ್ಚಾಗಿ ದುಡ್ಡಿಲ್ಲ ಎಂದು ಅನ್ನುತ್ತಾರೆ. ಹಿಂದೆ ಬೆಳಕಿಗಾಗಿ ಗ್ರಾಮಗಳಲ್ಲಿ ಮತ್ತು ಮನೆಗಳಲ್ಲಿ ವಿದ್ಯುತ್ತನ್ನು ಉಪಯೋಗ ಮಾಡುವ ಕೇಳುತ್ತಾ ಇದ್ದರು. ಈಗ ಅದನ್ನು ಅನೇಕ ತರಹದಲ್ಲಿ ಉಪಯೋಗಿಸುತ್ತಾ ಇದ್ದಾರೆ. ವ್ಯವಸಾಯಕ್ಕೆ, ಕೈಗಾರಿಕೆಗಳಿಗೆ ಉಪಯೋಗಮಾಡುತ್ತಾ ಇರುವುದರಿಂದ ಇದರ ಬೆಲೆಯನ್ನು ಜನರು ಬಹಳ ಚೆನ್ನಾಗಿ ತಿಳಿದುಕೊಳ್ಳುತ್ತಾ ಇದ್ದಾರೆ. ಈ ವಿದ್ಯುತ್ ಮಂಡಲಿ ಬಂದಮೇಲೆ ಜನಗಳಿಗೆ ಅದರಿಂದ ಆಗಿರತಕ್ಕ ಅನುಕೂಲ ಮೊದಲಿಗಿಂತಲೂ ಕಡೆಯಾಗಿದೆ. ಕೆಲವು ಡಿವಿಜನ್‌ಗಳನ್ನು ಮಾಡಿ ಕೊಂಡಿದ್ದಾರೆ. ರೆವಿನ್ಯೂ ಡಿವಿಜನ್, ಪಿ. ಡಬ್ಲ್ಯೂ. ಡಿ. ಡಿವಿಜನ್, ಎಲೆಕ್ಟ್ರಿಸಿಟಿ ಡಿವಿಜನ್ ಅಂತ. ಇದು ಡಿಸ್ಟ್ರಿಕ್ಟ್‌ವಾರ್ ಆಗಿದ್ದರೆ ಬಹಳ ಸುಲಭವಾಗಿ ಅಲ್ಲಿಯ ಪ್ರತಿನಿಧಿಗಳು ವ್ಯವಹಾರ ನಡೆಸಬಹುದಾಗಿತ್ತು. ನನ್ನ ಏರಿಯಾ ವಿಷಯ ಹೇಳುವುದಾದರೆ ನನ್ನ ಏರಿಯಾ ಹಾಸನಕ್ಕೆ ಸೇರಿದೆ. ಬಾಕಿ ಏರಿಯಾ ಮಂಡ್ಯಕ್ಕೆ ಸೇರಿದೆ. ಇದರಿಂದ ಜನರಿಗೆ ಆಗತಕ್ಕ ಕಷ್ಟ ನುಖ ಹೇಳಬೇಕೆಂದರೆ ಆ ಕಡೆ ಈ ಕಡೆ ಓಡಾಡಬೇಕಾಗಿ ಬಂದು ಬಹಳ ಅನಾನುಕೂಲವಾಗಿದೆ. ಆದ್ದರಿಂದ ಎಲ್ಲಕ್ಕಿಂತ ಮೊದಲು ಕೂಡಲೇ ಡಿಸ್ಟ್ರಿಕ್ಟ್‌ವಾರು ಡಿವಿಜನ್ ಮಾಡುವುದನ್ನು ಕಾರ್ಯಗತ ಮಾಡಿದರೆ ಎಷ್ಟೋ ಸಮಸ್ಯೆಗಳನ್ನು ಬಗೆಹರಿಸಿದ ಹಾಗೆ ಆಗುತ್ತದೆ. ಅದನ್ನು ಮೊದಲು ಮಾಡಬೇಕು. ಎರಡನೆಯದಾಗಿ ಈಗ ಮಾತನಾಡಿದವರೆಲ್ಲರೂ ಘಳಿಗೆ ಘಳಿಗೆಗೂ ವಿದ್ಯುಚ್ಛಕ್ತಿ ನರಬರಾಯಿ ಆಗುತ್ತಿರುವುದು ಕೆಟ್ಟುಹೋಗುತ್ತಾ ಇದೆ ಎಂದು ಹೇಳಿದ್ದಾರೆ. ಇದರಿಂದ ಜನರಿಗೆ ಬಹಳ ಬೇಜಾರಾಗಿದೆ. ವಿದ್ಯುತ್ತನ್ನು ಉಪಯೋಗಮಾಡುತ್ತಾ ಇರುವವರು ಮತ್ತೆ ಯಾವುದಾದರೂ ಒಂದು ಬೇರೆ ಏರ್ಪಾಡನ್ನು ಮಾಡಿಕೊಂಡಿರಬೇಕು. ಈ ರೀತಿ ಆಗುವುದಕ್ಕೆ ಏನು ಕಾರಣವೋ ಗೊತ್ತಿಲ್ಲ. ಬೇಕಾದಷ್ಟು ತಜ್ಞರು, ಇಂಜನಿಯರುಗಳು ಇದ್ದಾರೆ. ಹಾಗಿದ್ದರೂ ಇದನ್ನು ಬಗೆಹರಿಸದೇ ಇರುವುದಕ್ಕೆ ಕಾರಣವೇನೋ ಗೊತ್ತಿಲ್ಲ.

ಐ. ಪಿ. ಸೆಟ್ಟುಗಳನ್ನು ವ್ಯವಸಾಯ ಇಲಾಖೆಯವರು ವ್ಯಾಪಾರ ಮಾಡಿದ್ದಾರೋ, ಆಹಾರದ ಇಲಾಖೆಯವರು ವ್ಯಾಪಾರ ಮಾಡಿದ್ದಾರೋ ನಮಗೆ ಗೊತ್ತಿಲ್ಲ. ಆ ಪಂಪ್‌ಸೆಟ್ಟುಗಳನ್ನು ತಂದ ಕೂಡಲೇ ಕೆಟ್ಟು ಹೋಗುತ್ತಿವೆ. ಮೊನ್ನೆ ದಿವಸ ಒಂದು ಡೆಪ್ಯೂಟೇಷನ್ ಬಂದಿದ್ದರು, ಇಂತಹ ಪಂಪ್‌ಸೆಟ್ಟುಗಳನ್ನು ಕೊಟ್ಟರೆ ರೈತರು ಏನು ವ್ಯವಸಾಯ ಮಾಡಬಹುದು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಂ. ಪುಟ್ಟಸ್ವಾಮಿ.–ಮಾನ್ಯ ಸಭಾಧ್ಯಕ್ಷರೇ, ಈ ಎಲೆಕ್ಟ್ರಿಸಿಟಿ ಬೋರ್ಡಿನ ಮೈಬರಿಯ ಬಗ್ಗೆ ಒಂದೆರಡು ಮಾತುಗಳನ್ನು ಸರ್ಕಾರದವರಿಗೆ ತಿಳಿಸಬೇಕೆಂದು ನನ್ನ ಮನಸ್ಸಿನಲ್ಲಿ ಬರುತ್ತಾ ಇದೆ. ಪಾಪ, ಈಗ ಇರತಕ್ಕ ಎಲೆಕ್ಟ್ರಿಸಿಟಿ ಬೋರ್ಡಿನ ಅಧ್ಯಕ್ಷರಾಗಿ ರುವವರು ಜನಸಾಮಾನ್ಯರಿಂದ, ರೈತರಿಂದ ಬಂದಿರತಕ್ಕ ಜನ ಅಲ್ಲ. ರೈತರ ಅನುಕೂಲತೆ ಏನು, ಅವರ ಅನಾನುಕೂಲತೆ ಏನು ಎಂಬ ವಿಷಯವೇ ಅವರಿಗೆ ಗೊತ್ತಿಲ್ಲ, ಪಾಪ. ಅವರಿಗೆ ಪೆನ್‌ಷನ್ ದುಡ್ಡು ಬರುತ್ತದೆ. ಈ ಕಡೆ ಬೋರ್ಡಿನಿಂದ ಎರಡೂವರೆ ಸಾವಿರ ರೂಪಾಯಿ ಬರುತ್ತದೆ. ಈ ಆನಂದದಲ್ಲಿ ರೈತರು ಏನಾದರೂ ಚಿಂತೆ ಇಲ್ಲ, ಸರ್ಕಾರಕ್ಕೆ ಕೆಟ್ಟ ಹೆಸರು ಬಂದರೂ ಚಿಂತೆ ಇಲ್ಲ, ನಾನು ಮಾತ್ರ ಚೆನ್ನಾಗಿರಬೇಕೆಂಬ ಭಾವನೆಯಿಂದ ಅವರು ಇದ್ದಾರೆ. ಈಗ ರೈತರು ಅವರ ಕಣ್ಣಿಗೆ ಮಾತ್ರ ಬಿದ್ದಿದ್ದಾರೆ, ಬಾಕಿ ಯವರು ಅವರ ಕಣ್ಣಿಗೆ ಬಿದ್ದಿಲ್ಲ. 70 ಸಾವಿರ ಪಂಪುಸೆಟ್ಟುಗಳು ಕರೆಂಟ್‌ನಿಂದ ಓಡುತ್ತಾ ಇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯಲ್ಲಿ ಕನಿಷ್ಠ 50 ಸಾವಿರ ಪಂಪ್‌ಸೆಟ್ಟುಗಳು ನಡೆಯುತ್ತಾ ಇವೆ. ಕೋಲಾರದಲ್ಲಿ ಸುಮಾರು 120 ಅಡಿ ಆಳದ ಬಾವಿಯಿಂದ ನೀರನ್ನು ಪಡೆಯಬೇಕು, ಅದಕ್ಕಾಗಿ ಎರಡು ಪಂಪ್‌ಗಳನ್ನು

ಉಪಯೋಗ ಮಾಡಬೇಕಾಗಿದೆ. ಅದರಿಂದ ನೀರು ಎತ್ತಿ ಬೆಳೆ ಬೆಳೆದು ಅಧಿಕಾರಿಗಳಿಗೆ, ಪಟ್ಟಣವಾಸಿಗಳಿಗೆ 54 ರೂಪಾಯಿನಂತೆ ಒತ್ತ ಒದಗಿಸಬೇಕು. ಪಾಪ ಅವರು ಬಹಳ ಶ್ರೇಷ್ಠ ವರ್ಗದ ಮಟ್ಟದಲ್ಲಿ ಸ್ವರ್ಗದಿಂದ ಇಳಿದುಬಂದ ಜನ. ನಾವು ರೈತರು ಹಳ್ಳಿಗಾಡುಗಳಲ್ಲಿ ಸೇರಿ ರಾತ್ರಿಹಗಲು ಎನ್ನದೆ ಕಷ್ಟಪಟ್ಟು ಬೆಳೆದ ಕೊಯಮುತ್ತೂರು ನಣ್ಣ ಅಕ್ಕಿ ಈ ಅಧಿಕಾರಿಗಳಿಗೆ ಬೇಕು.

12-30 P.M.

ದೊಡ್ಡ ಅಕ್ಕಿಯನ್ನೂ ಮತ್ತು ಹಿಟ್ಟನ್ನೂ ತಿನ್ನತಕ್ಕ ರೂಢಿಯೇ ಅವರಿಗಿಲ್ಲ. ಅವರು ರಾಗಿಯ ಹಿಟ್ಟನ್ನು ಕಣ್ಣಲ್ಲಾದರೂ ನೋಡಿದ್ದಾರೋ ಇಲ್ಲವೋ, ಅದೂಕೂಡ ತಿಳಿಯದು. ನಾವು 1936-37 ರಲ್ಲಿ ನಮ್ಮ ಇಡೀ ರಾಜ್ಯಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಾಗಿ ವಾಗ್ದಾನ ಮಾಡಿದ್ದೆವು. ನಮಗೆ ಸ್ವರಾಜ್ಯ ಬಂದು 22 ವರ್ಷಗಳಾಯಿತು. ಇನ್ನೂ ರಾಜ್ಯದಲ್ಲಿ ಈ ವಿದ್ಯುಚ್ಛಕ್ತಿ ಎಂದರೆ ಹೇಗಿರುತ್ತೆ ಎಂಬುದನ್ನು ಅರಿಯದಂಥ ಜನರು ಇದ್ದಾರೆ. ದೊಡ್ಡದೊಡ್ಡ ಪಟ್ಟಣಗಳಲ್ಲಿ ಸೇರಿರತಕ್ಕ ಜನರು ಆ ಹಳ್ಳೀ ರೈತರ ಬೆನ್ನುಮುರಿಯುವ ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಪಟ್ಟಣದಲ್ಲಿರತಕ್ಕ ನೌಕರರಿಗೆ ನೆಗಡಿ ಕೆಮ್ಮು ಏನಾದರೂ ಬಂದರೆ ಅವರಿಗೆ ಔಷಧಿಗಾಗಿ ಇನ್ನೂ ಐದು ರೂಪಾಯಿಗಳನ್ನು ಹೆಚ್ಚಿಗೆ ಕೊಡಿ ಎಂದು ತುಕೋಳ್ ಆಯೋಗದವರು ಹೇಳಿದ್ದಾರಂತೆ. ಅದರಂತೆ ಕೊಟ್ಟು ಇದ್ದಾರೆ. ಆದರೆ ಈ ನೌಕರವರ್ಗಕ್ಕೆ ಆ ಹಳ್ಳಿಯ ರೈತನ ಸ್ಥಿತಿಗತಿಗಳು ಹೇಗೆ ಗೊತ್ತಾಗಬೇಕು ? ಇವರು ಆ ಹಳ್ಳಿಗಳಿಗೆ ಬಂದು ಆ ರೈತನ ಸ್ಥಿತಿಯನ್ನು ನೋಡಲಿ. ಆಗ ಇವರಿಗೆ ಯಾವುದು ನ್ಯಾಯ, ಯಾರದು ಅನ್ಯಾಯ ಎಂಬುದು ಗೊತ್ತಾಗುವುದು. ರೈತಾಪಿ ವರ್ಗದಲ್ಲಿರತಕ್ಕ ಜನಕ್ಕೆ ಬೆಂಗಳೂರು ಪಟ್ಟಣ ನೋಡಬೇಕೆಂದರೆ ಅವನು ವರ್ಷಗಟ್ಟಲೇ ಅನುಸರಿಸಬೇಕು; ಅಲ್ಲಿಗೂ ಸಾಧ್ಯವಾಗುತ್ತದೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಈ ವಿದ್ಯುಚ್ಛಕ್ತಿಯ ಬೋರ್ಡನ್ನು ಏನರ್ಜನೆ ಮಾಡಿಪಡಿಸಿ ರೈತರಿಗೆ ಸುಖ ಸಿಕ್ಕುವುದಿಲ್ಲ. ಸಹಸ್ರಾರು ರೂಪಾಯಿಗಳನ್ನು ತಿಂದು ಕೆಲಸಮಾಡತಕ್ಕವರಿಗೆ ರೈತರ ಗೋಳು ಗೊತ್ತಾಗುವುದಿಲ್ಲ. ಅವನು ತುಂಡುಬಟ್ಟೆಯನ್ನುಟ್ಟು ನೀರನ್ನೆತ್ತಿ ಬೇಸಾಯ ಮಾಡಲು ಎಷ್ಟು ಕಷ್ಟಪಡೆ ಎಂಬುದನ್ನು ನಾವು ಮನಗಾಣಬೇಕು. ಆದ್ದರಿಂದ ಇಂಥ ಕಷ್ಟನುಖಗಳನ್ನು ಅರಿಯದಿರತಕ್ಕ ಬೋರ್ಡನ್ನು ಸರ್ಕಾರದವರು ಕೂಡಲೇ ಡಿಸಾರ್ಬ್ಯೂಮಾಡಿ, ಅವಕಾಶವಿದ್ದರೆ ಅಲ್ಲಿ ಒಬ್ಬ ರೈತನ ಪ್ರತಿನಿಧಿಯನ್ನು ಅಧ್ಯಕ್ಷನನ್ನಾಗಿ ಮಾಡಬೇಕೆಂದು ಪ್ರಾರ್ಥನೆಮಾಡಿಕೊಂಡು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಮೆಗೌಡ (ದೊಡ್ಡಬಳ್ಳಾಪುರ).—ನನಗೆ ತಾವು ಮಾತನಾಡುವುದಕ್ಕೆ ಅವಕಾಶವನ್ನು ಕೊಡದಿದ್ದರೂ ಮುಖ್ಯಮಂತ್ರಿಗಳಿಗೂ ಮತ್ತು ವಿದ್ಯುಚ್ಛಕ್ತಿ ಬೋರ್ಡಿನ ಛೇರ್ಮನ್ನರಿಗೆ ಕಾಗದಪತ್ರಗಳನ್ನು ಬರೆದು ಅವರಿಗೆ ಏನು ಹೇಳಬೇಕೆಂಬುದು ಹೇಗೆ ತಿಳಿಸಬೇಕೆಂಬುದೆಲ್ಲಾ ನನಗೆ ಗೊತ್ತಿದೆ. ಆದರೆ ನಾನು ಕೇಳುತ್ತಿರುವುದು ಅಧ್ಯಕ್ಷರಾದ ತಾವು ವಿಫ್‌ಕೊಟ್ಟಿದ್ದ ಪಟ್ಟಿಯಲ್ಲಿ ನನ್ನ ಹೆಸರಿದ್ದಾಗ್ಯೂ ಏಕೆ ಅದನ್ನು ಕೈಬಿಟ್ಟಿರಿ ಎಂದು ? ಅದಕ್ಕೆ ಕಾರಣವಾದರೂ ಏನು ? ನಾನೇನು ನಿಮಗೆ ಅಂಥ ಅನ್ಯಾಯವನ್ನು ಮಾಡಿದ್ದೆ ! ಭಾನ್ಕರ ಪಟ್ಟರ ಹೆಸರಾದ ಮೇಲೆ ನನ್ನ ಹೆಸರು ಆ ಪಟ್ಟಿಯಲ್ಲಿತ್ತು. ಅದನ್ನು ತಾವೇಕೆ ಕೈ ಬಿಟ್ಟಿರಿ ? ಅಧ್ಯಕ್ಷರು ಇಷ್ಟು ಅನ್ಯಾಯ ಮಾಡುವುದು ತಮಗೆ ತರವಲ್ಲ. ಈ ಸಭೆ ಪ್ರಾರಂಭವಾದಾಗಿನಿಂದಲೂ ತಾವು ನನಗೆ ಇಲ್ಲಿ ಮಾತನಾಡುವುದಕ್ಕೆ ಒಂದು ನಿಮಿಷ ಕೂಡ ಅವಕಾಶವನ್ನು ಕೊಟ್ಟಿಲ್ಲ. ಅಧ್ಯಕ್ಷರಿಗೆ ನಾನೇನು ಅಂಥ ಅನ್ಯಾಯ ಮಾಡಿದ್ದೇನೆ ! ಅಧ್ಯಕ್ಷರಿಗೂ ಕಾನೂನಿದೆ, ನಮಗೂ ಕಾನೂನಿದೆ. ಆದರೆ ಅದನ್ನೆಲ್ಲಾ ಮೀರಿ ಅಧ್ಯಕ್ಷರು ಹೀಗೆ ಮೋಸಮಾಡಬಾರದು.

Mr. SPEAKER.—I have not done it.

ಶ್ರೀ ಎಂ. ಎಸ್. ಕೃಷ್ಣನ್, —ನಾನು ಮಾತನಾಡುವುದಕ್ಕೆ ಇಷ್ಟಪಟ್ಟರಲ್ಲೇ ಇಲ್ಲ. ಆದರೆ ಇಲ್ಲಿ ಕೆಲವರು ಮಾತನಾಡಿದ ಮೇಲೆ ನನಗೂ ಕೂಡ ಕೆಲವು ಮಾತುಗಳನ್ನು ಹೇಳಬೇಕೆಂದೆನಿಸಿದೆ...

ಶ್ರೀ ಜಿ. ರಾಮೇಗೌಡ.—ಅಧ್ಯಕ್ಷರು ಯಾರ ಆಪ್ಪಣೆಯ ಪ್ರಕಾರ ನನ್ನ ಹೆಸರನ್ನು ಕೈಬಿಟ್ಟರು?

Mr. SPEAKER.—I was not in the Chair at that time.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇನ್ನು ಮೇಲೆ ಈ ಲನ್ಸುಗಳನ್ನು ಕೇಳುವುದನ್ನಾದರೂ ಕೈಬಿಟ್ಟರೆ ಒಳ್ಳೆಯದೆಂದು ಕಾಣುತ್ತದೆ.

Mr. SPEAKER.—I now call upon the Chief Minister to give the reply.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿನಗಳಿಂದಲೂ ವಿದ್ಯುಚ್ಛಕ್ತಿ ಬೋರ್ಡಿನವರು ತಯಾರು ಮಾಡಿರುವಂಥ ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ಅಥವಾ ಒಂದು ಹಣಕಾಸಿನ ಅಂದಾಜುಪತ್ರಿಕೆಯ ಬಗ್ಗೆ ಈ ಸಭೆಯಲ್ಲಿ ಸಾಕಷ್ಟು ದೀರ್ಘವಾದ ಚರ್ಚೆಯಾಗಿದೆ. ಅನೇಕ ಮಾನ್ಯ ಸದಸ್ಯರಲ್ಲಿ ಕೆಲವರು ಬಹಳ ಕಟುವಾಗಿಯೂ ಕೆಲವರು ಸಾಧಾರಣವಾಗಿಯೂ ಆ ವಿದ್ಯುಚ್ಛಕ್ತಿ ಮಂಡಳಿಯಲ್ಲಿರತಕ್ಕ ಅಧಿಕಾರಿಗಳ ಬಗ್ಗೆ ಮತ್ತು ಅಲ್ಲಿ ನಡೆಯತಕ್ಕ ವ್ಯವಹಾರಗಳ ಬಗ್ಗೆ ಟೀಕೆಮಾಡಿದ್ದಾರೆ. ಇನ್ನು ಅನೇಕ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನೂ ಮಾಡಿದ್ದಾರೆ. ಈ ಚರ್ಚೆಯಲ್ಲಿ ಭಾಗವಹಿಸಿದವರೆಲ್ಲರೂ ಇತ್ತೀಚೆಗೆ ಆ ವಿದ್ಯುತ್‌ಮಂಡಳಿಯವರು ವಿದ್ಯುತ್ ಸರಬರಾಯಿಯ ವಿನಿಮಯ ದರವನ್ನು ಹೆಚ್ಚು ಮಾಡಿದ್ದರಿಂದ ರೈತರಮೇಲೆ ಹೆಚ್ಚಿನ ಹೊರೆಯಾಯಿತು ಎನ್ನುವುದರ ಬಗ್ಗೆ ಅವರು ತಮ್ಮ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಇದು ಕಮ್ಮಿಯಾಗಬೇಕು ಅನ್ನುವಂಥ ವಿಚಾರವನ್ನೂ ಹೇಳಿದ್ದಾರೆ. ಈ ಚರ್ಚೆಯನ್ನು ನಡೆಸಿದ್ದರಿಂದ ಸರ್ಕಾರಕ್ಕೆ ಅನೇಕ ವಿಷಯಗಳು ತಿಳಿದಂತಾಗಿದೆ. ಅಷ್ಟೇ ಅಲ್ಲ ಆ ವಿದ್ಯುಚ್ಛಕ್ತಿ ಮಂಡಳಿಯವರಿಗೂ ಕೂಡ ತಮ್ಮ ಕೆಲಸಕಾರ್ಯಗಳ ಬಗ್ಗೆ ಅಲ್ಲಿ ನಡೆಯುತ್ತಿರುವ ವ್ಯವಹಾರಗಳ ಬಗ್ಗೆ ಜನಾಭಿಪ್ರಾಯ ಯಾವರೀತಿ ಇದೆ ಅನ್ನುವುದುಕೂಡ ಈ ಚರ್ಚೆಯಿಂದ ಸಾಕಷ್ಟು ಅನುಭವ ಆಗಿದೆಯೆಂದು ನನಗನಿಸುತ್ತಿದೆ. ಹೀಗೆ ಈ ಒಂದು ಚರ್ಚೆಯನ್ನು ನಡೆಸಿದ್ದು ಆ ವಿದ್ಯುಚ್ಛಕ್ತಿ ಮಂಡಳಿಯವರಿಗೂ ಮತ್ತು ಸರ್ಕಾರದವರಿಗೂ ಅನುಕೂಲವೇ ಆಯಿತೆಂದು ನನಗೆನಿಸುತ್ತಿದೆ. ಆದರೆ ಈ ಚರ್ಚೆಯಲ್ಲಿ ಸಲಹೆಗಳನ್ನು ಕೊಟ್ಟವರಿಗೂ ವಿಶೇಷವಾಗಿ ಟೀಕೆಗಳನ್ನು ಪ್ರಾಮಾಣಿಕತಕ್ಕವರಿಗೂ ನಾನು ಮೊದಲನೆಯದಾಗಿ ಅವರೆಲ್ಲರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಈ ಸಂದರ್ಭದಲ್ಲಿ ವಿದ್ಯುಚ್ಛಕ್ತಿಮಂಡಳಿಯವರು ಏನು ಕೆಲಸಮಾಡಿದ್ದಾರೆ. ಆನ್ನತಕ್ಕ ವಿಚಾರದಲ್ಲಿ ಮಾಡಿರತಕ್ಕ ಟೀಕೆಗಳ ಜೊತೆಗೆ ಅವರ ಕಾರ್ಯಗಳನ್ನು ಏನುಮಾಡಿದ್ದಾರೆ, ಅದರ ಬಗ್ಗೆ ಅವರಿಗೊಂದು ಪ್ರಶಂಸೆಯ ಮಾತನ್ನೂ ಸೇರಿಸಿ ಹೇಳಿದ್ದರೆ ಚೆನ್ನಾಗಿತ್ತೆಂದು ನನಗನಿಸುತ್ತಿದೆ. ಆ ವಿದ್ಯುಚ್ಛಕ್ತಿ ಬೋರ್ಡು ಅಸ್ತಿತ್ವಕ್ಕೆ ಬಂದಮೇಲೆ ಅನೇಕ ಕೆಲಸಗಳನ್ನು ಅವರು ಮಾಡಿದ್ದಾರೆ. ಕೆಲವು ಅಭಿಮಾನಪೂರ್ವಕತಕ್ಕ ಕೆಲಸಗಳನ್ನೂ ಕೂಡ ಅವರು ಮಾಡಿದ್ದಾರೆ. ಜನರಿಗೆ ಒಂದು ಹೆಚ್ಚಿನ ಸಮಾಧಾನ ಮಾಡುವ ಅವರು ನಡೆಸಿರತಕ್ಕ ಕೆಲಸ ಕಾರ್ಯಗಳ ಬಗ್ಗೆ ಅಂಕಿಅಂಶಗಳನ್ನೂ ಸಂಗ್ರಹಣೆಮಾಡಿ ತಿಳಿಸಬಹುದು. ವಿದ್ಯುಚ್ಛಕ್ತಿ ಮಂಡಲಿ ಆಡಳಿತದಲ್ಲಿ ದೋಷದೋಷಗಳಿಲ್ಲ, ವ್ಯವಹಾರ ಚೆನ್ನಾಗಿ ನಡೆಯುತ್ತಿದೆ, ಅಲ್ಲಿ ನಡೆಯುವಂಥ ಆಡಳಿತ ಮತ್ತು ವ್ಯವಹಾರದಲ್ಲಿ ಇನ್ನೂ ಹೆಚ್ಚಿನಮಟ್ಟಿಗೆ ಸುಧಾರಣೆ ಮಾಡುವುದಕ್ಕೆ ಅವಕಾಶವಿಲ್ಲವೆಂದು ನಾನು ವಾದ ಮಾಡುವವನಲ್ಲ. ಸಾಕಷ್ಟು ಅವಕಾಶವಿದೆ. ಸಾಕಷ್ಟು ದೋಷದೋಷಗಳಿವೆ. ಸಾಕಷ್ಟು ಇನ್ನೂ ಸುಧಾರಣೆಮಾಡುವುದಕ್ಕೆ ಅಲ್ಲಿ ಅವಕಾಶವಿದೆಯೆಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಆ ರೀತಿಯಿಂದ ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರಾಗಲೀ, ಚೀಫ್ ಇಂಜನಿಯರ್ ಆಗಲೀ ಮತ್ತು ಉಳಿದ ಅಧಿಕಾರಿಗಳು ಯಾರೇ ಆಗಲೀ ಅವರು ನನ್ನ ಹತ್ತಿರ ಬಂದಾಗ್ಗೆ ಅವರಿಗೂ ನನ್ನ ಅಭಿಪ್ರಾಯಗಳನ್ನು ಮತ್ತು ನನ್ನ ವಿಚಾರಗಳನ್ನು ಹೇಳುತ್ತೇನೆ. ಯಾವ ರೀತಿ ಯಾವ ವೇಗದಿಂದ ಜನತೆ ಎಷ್ಟರಮಟ್ಟಿಗೆ ಈ ಮಂಡಲಿಯಿಂದ ಕೆಲಸಕಾರ್ಯಗಳನ್ನು ಅಪೇಕ್ಷಿಸುತ್ತದೆ, ಅಂತಹ ಕೆಲಸಗಳನ್ನು ಮಾಡುವುದಕ್ಕೆ ಅನೇಕ ವಿಚಾರಗಳನ್ನು ಅವರ ಜೊತೆಯಲ್ಲಿ ಚರ್ಚೆಮಾಡಿದ್ದೇನೆ. ಅವರೂ ಕೂಡ ಇನ್ನುಮುಂದೆ ಈ ಮಂಡಲಿಯ ಕೆಲಸಕಾರ್ಯಗಳನ್ನು ಬಹಳ ಚುರುಕಾಗಿ ಮಾಡಬೇಕು, ಹೆಚ್ಚಿನ ಮಟ್ಟಿಗೆ ಜನಸಾಮಾನ್ಯರಿಗೆ ಅನುಕೂಲವಾಗಬೇಕು, ಅದರಲ್ಲಿಯೂ ಹಳ್ಳಿಗಳಿಗೆ ಹೆಚ್ಚಿನ ಅನುಕೂಲತೆ ವಿದ್ಯುಚ್ಛಕ್ತಿಯಿಂದ ಆಗಬೇಕಾಗಿದೆ, ಅವರೂ ಕೂಡ ಈ ಸಮಸ್ಯೆಗಳನ್ನು ಯಾವರೀತಿ ಪರಿಹರಿಸುವುದಕ್ಕೆ ಸಾಧ್ಯವೆಂದು ವಿಚಾರಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ನಾನು ಕಳೆದ ಕೆಲವು ದಿವಸಗಳಿಂದಲೂ ನೋಡುತ್ತಿದ್ದೇನೆ. ಈ ಮಾನ್ಯ ಸಭೆಯಲ್ಲಿ ಚರ್ಚೆಗೆ ಅವಕಾಶ ಸಿಕ್ಕಿದಾಗ ಕೆಲವು ಮಾನ್ಯ ಸದಸ್ಯರು ಒಂದು ಮಾತನ್ನು ತಪ್ಪಲಾರದೆ ಪ್ರತಿಯೊಂದು ಸಲವೂ ಹೇಳುತ್ತಿದ್ದಾರೆ. ಈ ಪರಿಯಾವನ್ನು ಹಿಂದೆ ಹಾಕಿದ್ದಾರೆ, ಆ ಪರಿಯಾವನ್ನು ಹಿಂದೆ ಹಾಕಿದ್ದಾರೆ ಇವತ್ತು ಮುಖ್ಯ ಮಂತ್ರಿಗಳ ಕ್ಷೇತ್ರವಾದ ಗುಲ್ಬರ್ಗ ಡಿವಿಷನ್ನಿನಲ್ಲಿ ಎಲ್ಲಾ ಕೆಲಸಕಾರ್ಯಗಳು ಆಗುತ್ತಿಪೆ ಎಂಬುದಾಗಿ ಕೆಲವರು ಹೇಳುತ್ತಿದ್ದಾರೆ. ಕೆಲವರು ಪೂರ್ತಿಯಾಗಿ ವಿಚಾರ ತಿಳಿದುಕೊಂಡು ಹೇಳಲಾರದೆಯೂ ಇರಬಹುದು. ಆದರೆ ಕೆಲವರು ರಾಜಕೀಯ ದೃಷ್ಟಿಯಿಂದ ಹೇಳುತ್ತಿದ್ದಾರೆಂದು ಇತ್ತೀಚೆಗೆ ನನ್ನ ಮನಸ್ಸಿಗೆ ಹೆಚ್ಚುಹೆಚ್ಚಾಗಿ ಕಿಡಿನುಡಿದಿದೆ. ಇದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಿಮ್ಮ ಕೈಗೆ ಫೈನಾನ್ಷಿಯಲ್ ಸ್ಟೇಟ್‌ಮೆಂಟನ್ನು ಕೊಟ್ಟಿದ್ದೇವೆ. ಅದರಲ್ಲಿ ಎಲ್ಲಾ ಅಂಕಿಅಂಶಗಳನ್ನೂ

ಕೊಟ್ಟಿದ್ದೇವೆ. ಎಷ್ಟು ಹಳ್ಳಿಗಳಲ್ಲಿ ಎಲೆಕ್ಟ್ರಿಫೈ ಆಗಿದೆ, ಎಷ್ಟು ಐ.ಪಿ. ಸೆಟ್ಸ್ ಪ್ರತಿಯೊಂದ ಡಿವಿಷನ್ನಿನಲ್ಲಿ ಕೊಟ್ಟಿದ್ದೇವೆಂಬುದನ್ನು ಲೆಕ್ಕ ಹಾಕಿ ನೋಡಿದರೆ ಯಾವ ಏರಿಯಾದಲ್ಲಿ ಹೆಚ್ಚಾಗಿದೆ, ಯಾವ ಏರಿಯಾದಲ್ಲಿ ಕಡಿಮೆಯಾಗಿದೆ, ಯಾವ್ಯಾವ ಏರಿಯಾಗಳಲ್ಲಿ ಹೆಚ್ಚಿನ ಅನುಕೂಲತೆಗಳನ್ನು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆಯೆಂಬುದನ್ನು ಕಾಣಬಹುದು. ಕಣ್ಣಿನಲ್ಲಿ ಕಾಣಿಸುವಂಥ ಕನ್ನಡಿ ಇರುವಾಗ ಮತ್ತೆ ಒಂದು ರೀತಿಯ ವಾತಾವರಣ ನಮ್ಮ ರಾಜ್ಯದಲ್ಲಿ ಎಬ್ಬಿಸುವಂಥ ಪ್ರಯತ್ನವನ್ನು ಅನೇಕ ಸದಸ್ಯರು ಮಾಡುತ್ತಿದ್ದಾರೆ. ಅದಕ್ಕೆ ನಾನು ಬಹಳವಾಗಿ ವಿಷಾದ ಪಡುತ್ತೇನೆ.

Sri H. N. NANJE GOWDA.—This House should not be misled. I had quoted even pages also. I mentioned two or three districts also.

ಶ್ರೀ ವೀರೇಂದ್ರ ಪಾಟೀಲ್.—ನಾನು ಈರ್ಷ್ಯೆ ಆಗುವುದಿಲ್ಲ. ನನ್ನಲ್ಲಿರುವ ಅಂಕಅಂಶಗಳನ್ನು ನೋಡಿ ಹೇಳುತ್ತಿದ್ದೇನೆ. ಯಾರ ನವಾಚಾರವನ್ನೂ ತಿಳಿದುಕೊಂಡು ನಾನು ಹೇಳುತ್ತಾ ಇಲ್ಲ.

Sri H. N. NANJE GOWDA.—I had quoted pages and mentioned the districts also. The Chief Minister was not present when I was speaking.

ಶ್ರೀ ವೀರೇಂದ್ರ ಪಾಟೀಲ್.— ನಾನು ಇಲ್ಲಿ ಹೇಳುವುದೇನೆಂದರೆ, ಇದು ಮೂರು ದಿವಸಗಳ ವರೆಗೂ ಚರ್ಚೆಯಾಗಿದೆ. ಅನೇಕ ಸದಸ್ಯರು ಏನೇನು ಹೇಳಿದ್ದಾರೆಂಬುದು ಗೊತ್ತು. ಆದರೆ ನಾನು ಹೆಚ್ಚು ಹೊತ್ತು ಇರಲಿಲ್ಲ. ಅವರು ಭಾಷಣ ಮಾಡುವಾಗ ನಾನು ಮಧ್ಯೆ ಏಳಲಿಲ್ಲ. ಆದ್ದರಿಂದ ಅವರೂ ಸಹ ನಾನು ಉತ್ತರ ಕೊಟ್ಟಮೇಲೆ ಏನಾದರೂ ನಂದೇಹವಿದ್ದರೆ ಕೇಳಲಿ, ನಾನು ಉತ್ತರ ಕೊಡಬಹುದು. ನಾನು ಮಾತನಾಡುವಾಗ ಏನೇನೋ ಮಾತನಾಡುವುದಕ್ಕೆ ಹೋಗದೆ ಒಂದು ಲಿಂಕ್ ತಪ್ಪದೆ ಇರಬೇಕು. ಆ ಒಂದು ನಿರ್ಣಯಕ್ಕೆ ನಾನು ಕೂತಾಗ ಯಾವ ಸದಸ್ಯರಾದರೂ ಮಧ್ಯೆ ಮಾತನಾಡಿ ಆ ರೀತಿ ಒಂದು ವಾತಾವರಣ ಹುಟ್ಟಿಸುವ ಪ್ರಯತ್ನ ನಡೆಯುತ್ತಿದೆ. ನಾವೆಲ್ಲರೂ ರೈತರ ಪ್ರತಿನಿಧಿಗಳಾಗಿ ಜನಗಳ ಪ್ರತಿನಿಧಿಗಳಾಗಿ ಮಾತನಾಡಿದಾಗ ಅದು ಪೇಪರ್ ನಲ್ಲಿ ಬಂದಾಗ ಎಲ್ಲಾ ಈ ರೀತಿ ಅನ್ಯಾಯವಾಗಿದೆ ಎಂದು ಹೇಳಿದೆ ಹೋದರೆ, ನಮ್ಮ ಪ್ರತಿನಿಧಿಗಳು ಈ ರೀತಿ ಮಾತನಾಡುವುದರಿಂದ ವಾತಾವರಣ ಕಲ್ಮಶವಾಗುವುದಕ್ಕೆ ಅವಕಾಶವಾಗುತ್ತದೆ. ಅವರ ಮನಸ್ಸಿನಲ್ಲಿ ಒಂದು ಕಹಿ ವಿಚಾರ ಮೂಡುವುದಕ್ಕೆ ಅವಕಾಶವಾಗುತ್ತದೆ. ನಿಮಗೆ ಬೇಕಾದ ಅಂಕ ಅಂಶಗಳನ್ನು ಶೇಖರಣೆ ಮಾಡುತ್ತೇನೆ. ನಿನ್ನು ಮುಂದೆ ಎಲ್ಲಾ ಅಂಕಅಂಶಗಳನ್ನೂ ಇಡುತ್ತೇನೆ. ಯಾವತ್ತು ಅವರಿಗೆ ಅವಕಾಶ ಸಿಕ್ಕಿದಾಗ ಒಂದೇ ಸ್ಲೋಗನ್, ಹಳೆಯ ಮೈಸೂರಿಗೆ ಅನ್ಯಾಯವಾಗಿದೆ, ಹೊಸ ಮೈಸೂರಿಗೆ ಎಲ್ಲಾ ಆಗುತ್ತದೆ, ಎಂದು. ಇದನ್ನು ಅವರು ಎಲ್ಲಿಯ ವರೆಗೂ ತೆಗೆದುಕೊಂಡು ಹೋಗುತ್ತಾರೋ ನನಗೆ ಗೊತ್ತಾಗುವುದಿಲ್ಲ. ಅವಕ್ಕಾಗಿ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ.

Sri H. N. NANJE GOWDA.—I rise to a point of order. ನಾನು ಮಾನ್ಯ ಸಭಾಧ್ಯಕ್ಷರಿಗೆ ಈಗಾಗಲೇ ಹೇಳಿದ್ದೇನೆ. ಯಾವ ಫೈನಾನ್ಸಿಯಲ್ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೋ ಗೊತ್ತಿಲ್ಲ. ನಾನು ಅಂಕಅಂಶಗಳನ್ನು ಬೇಕಾದರೆ ಕೊಡುತ್ತೇನೆ. ಅದಕ್ಕೆ ನೇರವಾಗಿ ಅವರು ಉತ್ತರ ಕೊಟ್ಟರೆ the reply would be in order. ಅದಿಲ್ಲದೆ ಸುಬ್ಬರಾಯನ ಕೆರೆ ಭಾಷಣವನ್ನು ಇಲ್ಲಿ ಕೇಳುವುದಕ್ಕೆ ನಾವು ಕೂತುಕೊಳ್ಳಬೇಕೆ? ನಮಗೆ ಸ್ಪೆಸಿಫಿಕ್ಕಾಗಿ ಉತ್ತರ ಹೇಳಬೇಕು. ನಾನು ಹೇಳುವುದು ಗುಲ್ಬರ್ಗಾ ಮತ್ತು ಹುಬ್ಬಳ್ಳಿ ವಿಷಯ. This general talk of the Chief Minister would not be in order.

Mr. SPEAKER.—I cannot direct the Hon. Chief Minister to reply in a particular manner. It is left to the option of the Hon. Chief Minister. There is no force in the point of order.

ಶ್ರೀ ವೀರೇಂದ ಪಾಟೀಲ್.—ಅಧ್ಯಕ್ಷರೇ, ಇದರ ಅವಶ್ಯಕತೆ ಇಲ್ಲವೆಂದು ನನಗನ್ನಿಸುತ್ತಿದೆ. ಸಮಯ ಬಹಳ ಓಡುತ್ತಿದೆ. ನನಗೆ ಗತ್ಯಂತರವಿಲ್ಲ. ಪುಟ 9ರಲ್ಲಿ ಜಿಲ್ಲೆಯ ಹೆಸರು ಮತ್ತು ಪಂಪುಸೆಟ್ಟುಗಳು, 1968ನೇ ವರ್ಷದ ಅಂತ್ಯದವರೆಗೆ ಎಷ್ಟು ಐ.ಪಿ. ಸೆಟ್ಟುಗಳು ಸರ್ವಿಸ್ ಆಗಿದೆ ಎಂಬ ಪಟ್ಟಿ ಇದೆ. 83,816 ಐ.ಪಿ. ಸೆಟ್ಟುಗಳು ಇಲ್ಲಿಯವರೆಗೂ ಸರ್ವಿಸ್ ಆಗಿದೆ. ಇವರಲ್ಲಿ ಗುಲ್ಬರ್ಗಾಕ್ಕೆ 1,162, ಬಿದರೆಗೆ 2,496, ರಾಯಚೂರಿಗೆ 1,383. ಹೀಗೆ ಸುಮಾರು 5 ಸಾವಿರ ಐ.ಪಿ. ಸೆಟ್ಟುಗಳು ಸರ್ವಿಸ್ ಆಗಿವೆ. 83,816 ಐ.ಪಿ. ಸೆಟ್ಟುಗಳಲ್ಲಿ

(ಶ್ರೀ ವೀರೇಂದ್ರ ಪಾಟೀಲ್)

ಎಷ್ಟೆಷ್ಟು ಐ.ಪಿ. ಸೆಟ್ಟುಗಳು ಸರ್ವಿಸ್ ಆಗಿವೆಯೆಂಬುದನ್ನು ಮಾನ್ಯ ಸದಸ್ಯರು ನೋಡಬೇಕು. ಯಾವ್ಯಾವ ಪ್ರದೇಶದಲ್ಲಿ ಏನೇನಾಗುತ್ತದೆಂಬುದನ್ನು ವಿಚಾರಮಾಡಬೇಕು. ಆ ಏರಿಯಾದಲ್ಲಿ ಎಲೆಕ್ಟ್ರಿಸಿಟಿ ಎಂಬ ಶಬ್ದ ಅವರ ಕಿವಿಗೆ ಬಿದ್ದಿದ್ದರೆ 1964ರಿಂದೀಚೆಗೆ ಅಷ್ಟೇ. ಗುಲ್ಬರ್ಗಾದಲ್ಲಿ ಯಾಗಲೀ, ಬಿಜಪುರದಲ್ಲಿಯಾಗಲ, ಬಿದರೆಯಲ್ಲಾಗಲೀ ಎಲೆಕ್ಟ್ರಿಸಿಟಿ ಎಂಬುದು ಗೊತ್ತಿರಲಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಹಾಗಾದರೆ 1965ರಿಂದ 1967ರವರೆಗೆ ಎಲೆಕ್ಟ್ರಿಸಿಟಿ ಬೋರ್ಡಿನವರು ಕೊಟ್ಟಿರುವ ವರದಿಯನ್ನು ನುಡಬೇಕೇ ಆಥವಾ ಬಿಸಾಡಬೇಕೇ ? ಏತಕ್ಕೋಸ್ಕರ ಈ ಡಾಕ್ಯುಮೆಂಟ್ಸ್ ? ಗುಲ್ಬರ್ಗಾ ಡಿವಿಷನ್‌ಗೆ 24,400 ಪಂಪ್‌ಸೆಟ್ಟುಗಳು. ಅದರಲ್ಲಿ ಇದಕ್ಕೆ 5.4 ಲಕ್ಷ ರೂಪಾಯಿಗಳ ರಿವೈಜ್ಡ್ ಎಸ್ಟಿಮೇಟ್. ಹುಬ್ಬಳ್ಳಿ ಡಿವಿಷನ್ ಬೇರೆ ಹೇಳಿದೆ. ಹಾಸನ ಡಿವಿಷನ್ನಿಗೆ 4 ಲಕ್ಷ ರೂಪಾಯಿಗಳ ಎಸ್ಟಿಮೇಟ್. ಇದು 1964ರಿಂದ ಈಚೆಗೆ ಇಷ್ಟು ಆಗಿದೆಯಲ್ಲವೇ?

Sri VEERENDRA PATIL.—At this rate it is impossible for me to reply to the Debate. It is open to the hon. Members to put any question after I complete the debate. If they have got any doubt in their mind, then they can ask for clarifications.

ಶ್ರೀ ಎಸ್. ಚನ್ನಯ್ಯ.—ಮಧ್ಯೆ ಮಾತನಾಡುವುದಕ್ಕೆ ಅರೊ ಮಾಡಬೇಕು, ಸ್ವಾಮಿ. ಮಾತ ನಾಡಿದರೆ, ಮಾಡಕೂಡದು ಎಂದು ಹೇಳಿದರೆ ಹೇಗೆ ?

ಶ್ರೀ ಬಿ. ರಾಮೇಗೌಡ.—ಈಗ ಹೆಚ್ಚಿಸಿದ ರೇಟನ್ನು ಕಡಿಮೆಮಾಡುವುದಕ್ಕೆ ಏನು ಹೇಳುತ್ತೀರಿ ಎಂಬುದನ್ನು ಇಲ್ಲಿ ಹೇಳಿ. ಸುಮ್ಮನೆ ನಿಮ್ಮ ರಾಜಕೀಯ ಇಲ್ಲಿ ಒಕೆ ತಂದು ಇಡುತ್ತೀರಿ !

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ರಾಮೇಗೌಡರಿಗೆ ರಾಜಕೀಯ ಇರಲಿಕ್ಕಿಲ್ಲ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕೆಲವರು ಕೇಳುವುದಕ್ಕೆ ಉತ್ತರ ಹೇಳುವ ಅಧಿಕಾರ ನಮಗೆ ಇಲ್ಲವೆ ? ಅವರು ಕೇಳಿದಾಗ ಹೇಳಬೇಕಾಗುತ್ತದೆ. 1964ರ ವರೆಗೆ ನಮ್ಮಲ್ಲಿ ವಿದ್ಯುಚ್ಛಕ್ತಿಯ ಅಭಾವ ಇತ್ತು. ನಮ್ಮಲ್ಲಿ ಪೊದಲನೆಯ ಶರಾವತಿ ಕಮಿಶನ್ ಆಗುವವರೆಗೆ ಇದರ ಅಭಾವ ಇತ್ತು.

Sri S. SIVAPPA.—It looks as if the Chief Minister is giving a personal explanation. We want him to reply to the debate.

Sri VEERENDRA PATIL.—That is what I am doing.

Sri S. SIVAPPA.—It looks as if he is a guilty man.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಶಿವಪ್ಪನವರ ಬಗ್ಗೆ ನನಗೆ ಆದರವಿದೆ. ಈ ರೀತಿ ಚಾರ್ಜಸ್ ಮಾಡಿದ್ದಾರೆಂದು ಯಾರಾದರೂ ಹೇಳಿದರೂ ನಾನು ನಂಬುವ ಹಾಗೆ ಇಲ್ಲ. ಎಲ್ಲರೂ ಈ ರೀತಿ ಮಾತನಾಡಿದರೆ, ನಾನು ಭಾಷಣ ಮಾಡುವ ಅವಶ್ಯಕತೆಯೇ ಇಲ್ಲ. ಏನೂ ಇಲ್ಲದೆ, ಕೆನರೂ ಇಲ್ಲದೆ ನೀರು ಇದೆಯೆಂದು ಹೇಳುತ್ತಾರಲ್ಲ, ಅದು ನನಗೆ ನೋವಾಗುತ್ತದೆ. ನಾವು ಒಂದೇ ನಾಡ, ಒಂದೇ ದೇಶವೆಂದು ಹೇಳುತ್ತಿದ್ದೇವೆ. ಎಲ್ಲಿ ವಿದ್ಯುಚ್ಛಕ್ತಿ ಇಲ್ಲವೋ, ಅಲ್ಲಿಗೆ ವಿದ್ಯುಚ್ಛಕ್ತಿ ಕೊಡಬೇಕಾಗಿದೆ. ನಾನು ಹೇಳುವುದೇನೆಂದರೆ, 1964ರ ವರೆಗೆ ಕೊಟ್ಟಂತಹ ವಿದ್ಯು ಚ್ಛಕ್ತಿಗಳಿಗೆ, ಐ. ಪಿ. ಸೆಟ್ಟುಗಳನ್ನು ಹಗಲು ನಡೆಸಬಾರದು, ರಾತ್ರಿ ನಡೆಸಿ ಎಂದು ಕೂಡ ಹೇಳು ತ್ತಿದ್ದೆವು. ನಾವು ಒಂದು ಸ್ಯಾಗರಿಂಗ್ ಮಾಡುತ್ತಿದ್ದೆವು. ಅದಕ್ಕೂ ಮೊದಲು ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಡೀಸಲ್ ಇಂಜಿನಿಂದ ವಿದ್ಯುಚ್ಛಕ್ತಿ ಹುಟ್ಟಿಸಿ ಕೊಡುತ್ತಿದ್ದರು. ಗುಲ್ಬರ್ಗದಲ್ಲಿ ಎರಡು ಕಡೆ ಇಂತದ್ದು ಇತ್ತು. ಬೇರೆ ಎಲ್ಲೂ ಇರಲಿಲ್ಲ. 1961ರಿಂದೀಚೆಗೆ ವಿದ್ಯುಚ್ಛಕ್ತಿ ಹೆಚ್ಚಾಗಿದೆ. ಆದಕ್ಕೆ ಲೈನ್ ಹಾಕಬೇಕಾದರೆ, ಖರ್ಚಾಗುತ್ತದೆ. ಸ್ಪೆಪ್ ಡಾನ್ ಸ್ಟೇಶನ್ಸ್ ಆಗಬೇಕಾಗಿದೆ. ಲೈನ್ ಹಾಕಬೇಕಾಗಿದೆ. ವಿದ್ಯುಚ್ಛಕ್ತಿ ಎಲ್ಲಿ ಮುಟ್ಟಿಸಬೇಕೋ, ಅಲ್ಲಿಗೆ ಲೈನ್ ಹಾಕದಿದ್ದರೆ, ಹೇಗೆ ಮಾಡುವುದಕ್ಕಾಗುತ್ತದೆ! ಎಲ್ಲಿ ವಿದ್ಯುಚ್ಛಕ್ತಿ ಇಲ್ಲವೋ, ಅಲ್ಲಿ ಲೈನ್ ಹಾಕಬೇಕಾದರೆ, ಟ್ರಾನ್ಸ್‌ಫಾರ್ಮರ್ ಹಾಕಬೇಕಾದರೆ, ಸ್ಟೆಪ್ ಡಾನ್ ಹಾಕಬೇಕಾದರೆ ಎಲ್ಲಾ ಖರ್ಚಾಗುತ್ತದೆ. ಅದನ್ನೆಲ್ಲಾ ಲೆಕ್ಕ ಹಾಕಿಕೊಂಡು, ಆ ಕಡೆ ಖರ್ಚು ಮಾಡಿದ್ದೀರಿ, ಈ ಕಡೆ ಖರ್ಚು ಮಾಡಿಲ್ಲವೆಂದು ಹೇಳಿದರೆ ಹೇಗೆ ! ಹಾಗೆ ಮಾತನಾಡುವುದಕ್ಕೆ ಮೊದಲು ಅಂಕೆ

ಸಂಖ್ಯೆಗಳನ್ನು ಸಂಗ್ರಹ ಮಾಡಿಕೊಂಡರೆ ಎಷ್ಟು ಹಳ್ಳಿಗಳಿಗೆ ಕೊಟ್ಟಿದ್ದಾರೆ, ಎಷ್ಟು ಐ. ಪಿ. ಸೆಟ್ಟುಗಳಿಗೆ ಕೊಟ್ಟಿದ್ದಾರೆ ಎಂಬುದು ಗೊತ್ತಾಗುತ್ತದೆ. ಅದನ್ನೆಲ್ಲಾ ನೋಡಿದ್ದರೆ, ಈ ಮಾತು ಬರುತ್ತಾ ಇರಲಿಲ್ಲ.

ಅಲ್ಲಿಂದ ಇನ್ನು ಕೆಲವು ವಿಚಾರಗಳನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ. ನಮ್ಮಲ್ಲಿ ಹೆವಿ ಸ್ಯಾಕ್ ಇದೆಯೆಂದು ಕೆಲವರು ಹೇಳಿದರು. ಆದರೆ ಸ್ಯಾಕ್ ಇಡದೆ ಹೋದರೆ, ಕೆಲಸಗಳಾಗುವುದಕ್ಕೆ ಸಾಧ್ಯವಿಲ್ಲ. ಅನೇಕ ಸಲ ಅನೇಕ ತರದ ಕಂಪ್ಲೈಂಟ್ ಬರುತ್ತವೆ. ಕೆಲವರು ಸ್ಪೇರ್ ಪಾರ್ಟ್ಸ್ ಇಲ್ಲವೆಂದು ಹೇಳುತ್ತಿದ್ದಾರೆ. ಮುತ್ತು ಹೆಚ್ಚು ಹೆಚ್ಚು ಕಾರ್ಯಕ್ರಮ ಹಾಕಿಕೊಳ್ಳಬೇಕಾದರೆ ಅದಕ್ಕೆ ಬೇಕಾಗುವ ಸ್ಯಾಕ್ಸ್ ಬೇಕು. ಮಾನ್ಯ ಶಿವಪ್ಪನವರು ಇಂಟರೆಸ್ಟ್ ಬಹಳ ಕೊಡುತ್ತಿದ್ದಾರೆ ಎಂದು ಹೇಳಿದರು. ಹೌದು, ಪ್ರತಿವರ್ಷ ಸಾಲ ಮಾಡುತ್ತಿದ್ದಾರೆ. ಇಲ್ಲದಿದ್ದರೆ, ಇಲ್ಲಿ ಸಾಕಷ್ಟು ದುಡ್ಡು ಇಲ್ಲದಿರುವುದರಿಂದ ಕಷ್ಟವಾಗುತ್ತದೆ. ಸರ್ಕಾರದವರೂ ಸಾಕಷ್ಟು ಸಹಾಯ ಮಾಡುವುದಕ್ಕಾಗುವುದಿಲ್ಲವೆಂದು ನಾವು ಅವರಿಗೆ ಹೇಳಿದ್ದೇವೆ. ಮುತ್ತು ಏನು ಹೇಳಿದ್ದೇವೆಂದರೆ, ನಿಮ್ಮ ಪ್ರೋಗ್ರಾಂ ಯಾವ ರೀತಿಯಿಂದಲಾದರೂ ಕಡಿಮೆ ಮಾಡಬಾರದು. ಪ್ರತಿವರ್ಷ 20 ಸಾವಿರ ಐ.ಪಿ. ಸೆಟ್ಸ್ ಸರ್ವಿಸ್ ಮಾಡಬೇಕೆಂದು ಹೇಳುತ್ತಿದ್ದೇವೆ. 500 ಗ್ರಾಮಗಳಿಗೆ ಎಲೆಕ್ಟ್ರಿಫಿಕೇಶನ್ ಮಾಡಬೇಕೆಂದು ಹೇಳುತ್ತಿದ್ದೇವೆ. ಆದ್ದರಿಂದ ಸಾಲ ಮಾಡದೆ ಗತ್ಯಂತರವಿಲ್ಲ. ಸಾಲ ಹೆಚ್ಚಿದಂತೆ ಬಡ್ಡಿ ಹೆಚ್ಚು ಕೊಡಲೇಬೇಕಾಗುತ್ತದೆ.

ಅಲ್ಲಿಂದ ಎಂ. ಎಸ್. ಇ. ಬಿ. ಯನ್ನು ಸುಪರಸೀಡ್ ಮಾಡಬೇಕೆಂದು ಹೇಳಿದರು. ಅದು ಆಗಲಾರದ ವಿಚಾರ. ಜೇರೆ ಕಡೆ ಚೆನ್ನಾಗಿ ನಡೆಯುತ್ತಿದೆ, ಇಲ್ಲಿ ಚೆನ್ನಾಗಿ ನಡೆಯುತ್ತಿಲ್ಲವೆಂಬುದನ್ನು ಒಪ್ಪುವುದಕ್ಕಾಗುವುದಿಲ್ಲ. ಕೆಲವು ಕುಂದುಕೊರತೆಗಳು ಇವೆ. ಅವುಗಳನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ನನಗನಿಸುತ್ತದೆ, ಮುಂದಿನ ಚರ್ಚೆಗೆ ಇಂಥ ಕ್ಷುತರವಾದ ಟೀಕೆ ಮಾಡುವುದಕ್ಕೆ ಅವಕಾಶ ಸಿಗಲಾರದು ಎಂದು. ಇವನ್ನೆಲ್ಲಾ ಗಮನಿಸಿ ಇರಾಖೆಯವರು ನರಿಪಡಿಸುವರೆಂದು ತಿಳಿದಿದ್ದೇನೆ. ಇನ್ನು ಅನೇಕ ಸದಸ್ಯರು ಹೇಳುತ್ತಾರೆ, ಈಗ ಕೈಗಾರಿಕೆಗಳಿಗೆ ಬಹಳ ಕಡಿಮೆ ದರದಲ್ಲಿ ಕೊಡುತ್ತಿದ್ದಾರೆ, ಮತ್ತು ಇತರ ರಾಜ್ಯಗಳಿಗೆ ಕಡಿಮೆ ರೇಟಿನಲ್ಲಿ ಕೊಡುತ್ತಿದ್ದಾರೆ, ಆದರೆ ರೈತರಿಗೆ ದರ ಜಾಸ್ತಿ ಮಾಡಿದ್ದಾರೆಂದು. ಪ್ರತಿಯೊಂದು ಕೈಗಾರಿಕೆಗೆ ಕೊಟ್ಟರೂ, ಅಲ್ಲಿಂದ 18 ಪರ್ಸೆಂಟ್ ಮಿನಿಮಂ ರಿಟರ್ನ್ ಬರುತ್ತದೆ. ಆದರೆ ಈ ಕೈಗಾರಿಕೆಗಳಿಗೂ ಚಿನ್ನದ ದರದಲ್ಲಿ ನರಬರಾಜು ಮಾಡಿದರೆ, ಆ ಕೈಗಾರಿಕೆಗಳು ಉಳಿಯಲಾರದು. ಆ ಕೈಗಾರಿಕೆಗಳಿಂದ 18 ಪರ್ಸೆಂಟ್ ರಿಟರ್ನ್ ಬರುತ್ತಿದೆ. ಆದರೆ ರೂರಲ್ ಎಲೆಕ್ಟ್ರಿಫಿಕೇಶನ್, ಐ. ಪಿ. ಸೆಟ್ಟುಗಳಿಗೆ ಬಹಳ ಹಣ ಖರ್ಚುಮಾಡಿದರೂ, ಬಹಳ ಕಡಿಮೆ ರಿಟರ್ನ್ ಬರುತ್ತದೆ. ಬಹಶಃ ಅವರ ಬಡ್ಡಿ ಕೂಡಾ ಬರುವುದಿಲ್ಲವೆಂದರೆ ಅತಿಶಯೋಕ್ತಿಯಾಗದಾರದು. ಒಂದರಲ್ಲಿ ಏನು ಲಾಸ್ ಆಗುತ್ತಿದೆ. ಅದನ್ನು ತುಂಬಿಕೊಳ್ಳುವುದಕ್ಕೆ ಎರಡನೇ ಸೆಕ್ಟರಿನಲ್ಲಿ ಇನ್‌ಕಂ ಅನ್ನು ತುಂಬಿಕೊಳ್ಳುತ್ತಿದ್ದೇವೆ. ಪೂರ್ತಿಯಾಗಿ ಇದನ್ನು ತುಂಬಲಾರದಂಥಹ ಪರಿಸ್ಥಿತಿ ಇದೆ. ಈ ಸೆಕ್ಟರಿನವರು ಕೇಳುತ್ತಿದ್ದಾರೆ, ಈ ಹಳ್ಳಿಗಳಿಗೆ ಎಲೆಕ್ಟ್ರಿಸಿಟಿ ಕೊಡುವುದಕ್ಕೆ ನಮ್ಮಮೇರೆ ಹೊರೆಹಾಕುತ್ತಿದ್ದೀರಾ ಎಂದು ಕೇಳುತ್ತಿದ್ದಾರೆ, ಡೊಮೆಸ್ಟಿಕ್ ಕನ್‌ಸೆಂಶನವರೂ ಕೇಳುತ್ತಿದ್ದಾರೆ. ಅದಕ್ಕಾಗಿ ಇಂಡಸ್ಟ್ರೀಸ್‌ಗೆ ಏನು ಕೊಡುತ್ತಿದ್ದೇವೆ ಅದರಿಂದ ಎಲೆಕ್ಟ್ರಿಸಿಟಿ ಬೋರ್ಡಿಗೆ ಲಾಭವಾಗುತ್ತಿದೆ, ಅದರಿಂದ ಲಾಸ್ ಆಗುತ್ತಿಲ್ಲ. ಈಗ ರೈತರಿಗೆ ವಿದ್ಯುಚ್ಛಕ್ತಿ ಉಪಯೋಗ ಮಾಡುವುದಕ್ಕೆ ಎಷ್ಟು ಮಿನಿಮಮ್ ಕೊಡಬೇಕೆಂದು ಹೇಳಿದ್ದಾರೆಯೋ ಅದೇ ರೀತಿ ಪ್ರತಿ ಇಂಡಸ್ಟ್ರೀಸ್‌ಗೂ ಹಾಕಿದ್ದಾರೆ. ಇದರಲ್ಲಿ ಯಾರು ಯಾರು ಕೆನ್ಸ್ಯೂಮರ್ಸ್ ಇದ್ದಾರೆ ಅವರಿಗೆ ಈ ದರವನ್ನು ಕಡಿಮೆ ಮಾಡಬೇಕು ಎನ್ನುವ ವಿಚಾರವನ್ನು ಎಲ್ಲರೂ ಹೇಳಿದ್ದಾರೆ.

1-00 P.M.

ಐ. ಪಿ. ಸೆಟ್ಟಿನ ಬಗ್ಗೆ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಆ ಕಡೆಯವರು ಮುತ್ತು ಈ ಕಡೆಯವರು ಎಲ್ಲರೂ ಕೂಡ ಈ ಐ.ಪಿ. ಸೆಟ್ಟಿನ ಬಗ್ಗೆ ತಮ್ಮ ವಿಚಾರವನ್ನು ವ್ಯಕ್ತ ಮಾಡಿದ್ದಾರೆ. ಈ ಬಗ್ಗೆ ನನ್ನ ಪಾರ್ಟಿಯವರ ಒತ್ತಾಯ ಪೂರ್ತಿ ಇದೆ. ಒಂದುವೇಳೆ ಎಲೆಕ್ಟ್ರಿಸಿಟಿ ಬೋರ್ಡಿನವರು ಈಗ ವಿಧಿಸಿರತಕ್ಕ ರೇಟನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಸರ್ಕಾರದವರೇ ಸಬ್ಸಿಡೈಜ್ ಮಾಡಿ ವಿದ್ಯುಚ್ಛಕ್ತಿಯ ದರವನ್ನು ಕಡಿಮೆ ಮಾಡಬೇಕು ಎಂದು ನನ್ನ ಪಕ್ಷದ ಸದಸ್ಯರು ಒತ್ತಾಯದಿಂದ ಹೇಳುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಕೊಟ್ಟರೆ ಅದು ಮಾನ್ಯ ಸದಸ್ಯರಿಗೆ ಮನವರಿಕೆ ಆಗಬಹುದು. ರೈತರಿಗೆ ಏನು ಕಷ್ಟ ಇದೆ ಎಂಬುದನ್ನು ನಾನು ಬಲ್ಲೆ. ರೈತರ ಕಷ್ಟವನ್ನು ಮರೆತು ಈ ರೀತಿ

(ಶ್ರೀ ವೀರೇಂದ್ರ ಪಾಟೀಲ್)

ವಿದ್ಯುಚ್ಛಕ್ತಿಯ ದರವನ್ನು ಹೆಚ್ಚಿಸಿದ್ದಾರೆ ಎನ್ನುವ ಮಾತನ್ನು ತಾವುಗಳು ಯಾರು ತಿಳಿದುಕೊಳ್ಳ ಬಾರದು. ಈಗ ನಮ್ಮ ರಾಜ್ಯದಲ್ಲಿ ಭರತಕ್ಕ ಹಳೆಯ ಪಂಪುಸೆಟ್ಟುಗಳಿಗೂ ಅದೇ ಮಿನಿಮಮ್ ಚಾರ್ಜನ್ ಹಾಕಿದ್ದಾರೆ, ಹೊಸ ಪಂಪುಸೆಟ್ಟುಗಳಿಗೂ ಅದೇ ಮಿನಿಮಮ್ ಚಾರ್ಜ್ ಹಾಕುತ್ತಿದ್ದಾರೆ, ಹಿಂದೆ ಖರ್ಚು ಮಾಡಿ ಸಾಕಿದಂತಹ ಪಂಪುಸೆಟ್ಟುಗಳಿಗೆ ಅದೇ ಮಿನಿಮಮ್ ಹಾಕುವುದು ಸರಿಯಿಲ್ಲ ಎಂದು ಮಾನ್ಯ ಸದಸ್ಯರು ಕೆಲವರು ಹೇಳಿದರು. ಆದರೆ ಹಳೆಯ ಪಂಪುಸೆಟ್ಟುಗಳಿಗೆ ಹಿಂದಿನ ರೇಟನ್ನೇ ಹಾಕುವುದಕ್ಕಾಗುವುದಿಲ್ಲ. ಹಳೆಯ ಪಂಪುಸೆಟ್ಟಿಗೆ ಒಂದು ರೇಟು, ಹೊಸ ಪಂಪುಸೆಟ್ಟಿಗೆ ಒಂದು ರೇಟು ಎಂದು ಡಿಸ್‌ಕ್ರಿಮಿನೇಟ್ ಮಾಡುವುದಕ್ಕೆ ಕಾನೂನು ಪ್ರಕಾರ ಅವಕಾಶವಿಲ್ಲ. ಹಳೆಯ ಪಂಪುಸೆಟ್ಟುಗಳ ಬಗ್ಗೆ ಹೇಳಬೇಕಾದರೆ ಈಗ ಸುಮಾರು 95 ಸಾವಿರ ಪಂಪುಸೆಟ್ಟುಗಳಿಗೆ ಸರ್ವಿಸ್ ಮಾಡಿದ್ದಾರೆ. ಈ 95 ಸಾವಿರ ಪಂಪುಸೆಟ್ಟುಗಳ ಹೈಕ್ಕ 1957ನೇ ಇಸವಿಗಿಂತ ಹಿಂದೆ ಸರ್ವಿಸ್ ಆದದ್ದು 11,065 ಪಂಪುಸೆಟ್ಟುಗಳು. 1957ರಿಂದ ಈಚೆಗೆ ಸರ್ವಿಸ್ ಆಗಿರುವುದು 84 ಸಾವಿರ ಪಂಪುಸೆಟ್ಟುಗಳು. ಬಹುಶಃ 10-12 ಪರ್ಸೆಂಟ್ ಹಳೆಯ ಸರ್ವಿಸ್ ಆದದ್ದು ಇದೆ. ಇನ್ನು ಸುಮಾರು 85 ಪರ್ಸೆಂಟ್ ಪಂಪುಸೆಟ್ಟುಗಳು ಇತ್ತೀಚೆಗೆ ಸರ್ವಿಸ್‌ನಾಗಿವೆ. ಆದ್ದರಿಂದ ಹೊಸ ಪಂಪುಸೆಟ್ಟುಗಳಿಗೇ ಬೇರೆ ರೇಟು, ಹಳೆಯ ಪಂಪುಸೆಟ್ಟುಗಳಿಗೇ ಬೇರೆ ರೇಟು ಹಾಕುವುದಕ್ಕೆ ಸಾಧ್ಯವಿಲ್ಲ. ಐ. ಪಿ. ಪಂಪುಸೆಟ್ಟುಗಳಿಗೆ ಸರ್ವಿಸ್ ಕೊಡುವುದಕ್ಕಾಗಿ ಎಲೆಕ್ಟ್ರಿಸಿಟಿ ಬೋರ್ಡಿನವರು 23 ಕೋಟಿ 64 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದರಮೇಲೆ ಪ್ರತಿವರ್ಷ ಎಲೆಕ್ಟ್ರಿಸಿಟಿ ಬೋರ್ಡಿನವರು 4½-5 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ರಾಜ್ಯಸರ್ಕಾರದವರು ಪಂಪುಸೆಟ್ಟುಗಳನ್ನು ಸರ್ವಿಸ್ ಮಾಡುವುದಕ್ಕಾಗಿ ಒಂದು ಕೋಟಿ 30 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಅದರಿಂದ 20 ಸಾವಿರ ಪಂಪುಸೆಟ್ಟುಗಳನ್ನು ಸರ್ವಿಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಎಲೆಕ್ಟ್ರಿಸಿಟಿ ಬೋರ್ಡಿನವರನ್ನು ರಾಜ್ಯಸರ್ಕಾರದವರು ಕೇಳಿದ್ದಾರೆ. ಈ ಪ್ರೋಗ್ರಾಮನ್ನು ನಡೆಸಿಕೊಂಡು ಹೋಗುವುದಕ್ಕೆ ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಹೆಚ್ಚಿನ ಹಣ ಬೇಕಾಗುತ್ತದೆ. ಅದಕ್ಕಾಗಿ ನಮ್ಮ ಹಣಕಾಸಿನ ಸಚಿವರು ಬೊಂಬಾಯಿಗೆ ಹೋಗಿ ಅಲ್ಲಿ ಬ್ಯಾಂಕಿನಲ್ಲಿ 5 ಕೋಟಿ ರೂಪಾಯಿಗಳನ್ನು ಸಾಲ ಕೊಡುವ ಬಗ್ಗೆ ಒಪ್ಪಿಸಿದ್ದಾರೆ. ಆದ್ದರಿಂದ ಬೊಂಬಾಯಿನಲ್ಲಿ 5 ಕೋಟಿ ರೂಪಾಯಿಗಳ ಸಾಲ ಸಿಕ್ಕುತ್ತದೆ ಎನ್ನುವ ಭರವಸೆ ಇದೆಯೆಂದು ಶ್ರೀಮಾನ್ ರಾಮಕೃಷ್ಣಹೆಗಡೆಯವರು ಬೊಂಬಾಯಿನಿಂದ ಬಂದಮೇಲೆ ನನಗೆ ತಿಳಿಸಿದ್ದಾರೆ. ಈ ರೀತಿಯಾಗಿ ಬ್ಯಾಂಕುಗಳಿಂದ ಎಲ್.ಐ.ಸಿ. ಯಿಂದ ಸಾಲ ಪಡೆದು ಪ್ರತಿವರ್ಷ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಸಾಮಾನ್ಯವಾಗಿ ರೂರರ್ ಎಲೆಕ್ಟ್ರಿಫಿಕೇಷನ್‌ನಲ್ಲಿ ಲಾಸ್ ಆಗುತ್ತದೆ. ನಮ್ಮ ದೇಶವನ್ನಲ್ಲಿ 100ಕ್ಕೆ 85ರಷ್ಟು ಜನ ಹಳ್ಳಿಗಳಲ್ಲಿ ಇರುತ್ತಾರೆ. ಸುಮಾರು 100ಕ್ಕೆ 45-50ರಷ್ಟು ರೂರಲ್ ಎಲೆಕ್ಟ್ರಿಫಿಕೇಷನ್, ಮತ್ತು ಐ.ಪಿ. ಸೆಟ್ಟುಗಳ ಮೇಲೆ ಖರ್ಚಾಗುತ್ತಿದೆ. ಇವ್ಲಿಯವರೆಗೂ ಪಂಪುಸೆಟ್ಟುಗಳಮೇಲೆ ಖರ್ಚು ಮಾಡಿರುತಕ್ಕ 23-24 ಕೋಟಿ ರೂಪಾಯಿಗಳಿಗೆ, ಬರುವಂತಹ ವರಮಾನ 147ಲಕ್ಷ ರೂಪಾಯಿಗಳು ಮಾತ್ರ. 1968ನೇ ಇಸವಿಯ ಲೆಕ್ಕದ ಪ್ರಕಾರ ಒಂದು ಐ.ಪಿ. ಸೆಟ್ಟಿಗೆ 160 ರೂಪಾಯಿ ರೆವಿನ್ಯೂ ಬರುತ್ತದೆ. ಆದರೆ ಬೋರ್ಡಿಗೆ ಅವರು ಒಂದು ಐ. ಪಿ. ಸೆಟ್ಟಿಗೆ ಸರ್ವಿಸ್ ಕೊಡಬೇಕಾದರೆ ಸರಾಸರಿ ಒಂದು ಸಾವಿರ, ಎರಡು ಸಾವಿರ, 3 ಸಾವಿರ, 5 ಸಾವಿರ, 10 ಸಾವಿರ 15 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಒಟ್ಟಿನ ಸರಾಸರಿಯನ್ನು ತೆಗೆದುಕೊಂಡರೆ ಒಂದು ಪಂಪುಸೆಟ್ಟಿಗೆ ಸರ್ವಿಸ್ ಕೊಡಬೇಕಾದರೆ ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ 3,000 ರೂಪಾಯಿಗಳು ಖರ್ಚಾಗುತ್ತದೆ. ಒಂದು ಐ.ಪಿ. ಸೆಟ್ಟು ಸರ್ವಿಸ್ ಮಾಡಿದರೆ ಬೋರ್ಡಿನವರು ಅದಕ್ಕೆ 200 ರೂಪಾಯಿ ಬಡ್ಡಿ ಕೊಡಬೇಕಾಗುತ್ತದೆ. ಇವೊತ್ತು ಎಲೆಕ್ಟ್ರಿಸಿಟಿ ಬೋರ್ಡಿನವರು ಬ್ಯಾಂಕಿಗೆ ಅವರು ತಂದಂಥ ಸಾಲಕ್ಕೆ 7-8 ಪರ್ಸೆಂಟ್ ಬಡ್ಡಿಯನ್ನು ಕೊಡುತ್ತಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಇಂಟರೆಸ್ಟ್ ಚಾರ್ಜಸ್, ಡಿಪ್ರಿಸಿಯೇಷನ್ ಮೇಂಟೆನೆನ್ಸ್, ಅಪರೇಷನ್ ಚಾರ್ಜಸ್ ಎಲ್ಲಾ ಹೋಗಿ 18 ಪರ್ಸೆಂಟ್ ರಿಟರ್ನ್ ಬಂದಿದೆ, ವಿದ್ಯುಚ್ಛಕ್ತಿ ಮಂಡಲ ನೋ ಲಾಸ್ ನೋ ಪ್ರಾಫಿಟ್ ಬೇಸಿಸ್‌ಮೇಲೆ ಕೆಲಸ ಮಾಡಿದರೆ ಪ್ರತಿ ಪಂಪುಸೆಟ್ಟಿಗೆ ಒಂದು ವರ್ಷಕ್ಕೆ 540 ರೂಪಾಯಿ ಆದಾಯ ಬರಬೇಕು. ಆದರೆ ಈಗ ಒಂದು ಪಂಪುಸೆಟ್ಟಿಗೆ ಆದಾಯ ಬರುವಂಥಾದ್ದು 160 ರೂಪಾಯಿಗಳು, ಮಿನಿಮಮ್ ಚಾರ್ಜಸ್ ಅನ್ನು ಜಾಸ್ತಿ ಮಾಡಿರುವುದರಿಂದ 240 ರೂಪಾಯಿಗಳು ಒಂದು ವರ್ಷಕ್ಕೆ ಆದಾಯ ಬರುತ್ತದೆ. ಇದರಿಂದ ವಿದ್ಯುಚ್ಛಕ್ತಿ ಬೋರ್ಡಿಗೆ ಒಂದು ಐ. ಪಿ. ಸೆಟ್ಟಿಗೆ ಒಂದು ವರ್ಷಕ್ಕೆ 3 0 ರೂಪಾಯಿಗಳು ಲಾಸ್ ಆಗುತ್ತದೆ. ಈಗ 20 ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಬೋರ್ಡಿನವರು ಸರ್ವಿಸ್ ಮಾಡುತ್ತಾರೆ. ಇದರಿಂದ ಪ್ರತಿವರ್ಷ ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಎಷ್ಟು ಹಾನಿಯಾಗುತ್ತದೆ,

ಎಷ್ಟು ರಾಸ್ ಆಗುತ್ತದೆ ಎಂಬುದು ನಾನು ಕೊಟ್ಟಂತಹ ಅಂಕ ಅಂಶಗಳಿಂದ ಗೊತ್ತಾಗುತ್ತದೆ. ಇದೇರೀತಿ ನಮ್ಮ ಅಕ್ಕಪಕ್ಕದ ಪ್ರಾಂತಗಳವರು ಪಂಪುಸೆಟ್ಟುಗಳಮೇಲೆ ವಿಧಿಸಿರತಕ್ಕ ದರಕ್ಕೂ ನಮ್ಮ ರಾಜ್ಯದಲ್ಲಿರುವ ದರಕ್ಕೂ ಹೋಲಿಸಿ ನೋಡಿದರೆ ನಮ್ಮ ರಾಜ್ಯದ ರೈತರಮೇಲೆ ಹೆಚ್ಚಿನ ವಿದ್ಯುಚ್ಛಕ್ತಿ ದರವನ್ನು ಹಾಕಿಲ್ಲ ಎಂದು ಗೊತ್ತಾಗುತ್ತದೆ. ನಮ್ಮ ನೆರೆ ಪ್ರಾಂತ್ಯಗಳವರು ಪಂಪು ಸೆಟ್ಟುಗಳಿಗೆ ಮಿನಿಮಮ್ ಚಾರ್ಜಸ್ 50–75 ರೂಪಾಯಿಗಳ ದರವನ್ನು ವಿಧಿಸಿದ್ದಾರೆ. ಈ ದೃಷ್ಟಿಯಿಂದ ನಮ್ಮ ರಾಜ್ಯದಲ್ಲಿ ಪಂಪುಸೆಟ್ಟುಗಳಿಗೆ ಉಪಯೋಗಿಸತಕ್ಕ ವಿದ್ಯುಚ್ಛಕ್ತಿಯ ದರವನ್ನು ವಿಧಿಸಿರುವುದು ಅಷ್ಟು ಹೆಚ್ಚಾಗಿದೆ ಎಂದು ತೋರಿಸುವುದಿಲ್ಲ. ಇಪ್ಪೊತ್ತು ನಮಗೆ ಹೆಚ್ಚಿನ ಹಣ ಸಹಾಯ ಬೇಕಾಗಿರುವುದರಿಂದ ವರ್ಲ್ಡ್ ಬ್ಯಾಂಕಿನಿಂದ ಹಣಸಹಾಯವನ್ನು ಪಡೆಯುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಈ ರೀತಿಯಾಗಿ ಪ್ರತಿವರ್ಷ ಬಹಳ ಹೇರಳವಾಗಿ ವಿದ್ಯುಚ್ಛಕ್ತಿ ಬೋರ್ಡಿನವರು ಹಣವನ್ನು ಖರ್ಚು ಮಾಡುತ್ತಿದ್ದಾರೆ. ನಮ್ಮಲ್ಲಿ ವಿದ್ಯುಚ್ಛಕ್ತಿಗೆ ಡಿಮ್ಯಾಂಡ್ ಹೆಚ್ಚಾಗಿದೆ. ಪ್ರತಿ ಜಿಲ್ಲೆಯವರು ನಮಗೆ ವಿದ್ಯುಚ್ಛಕ್ತಿ ಹೆಚ್ಚು ಬೇಕು ಎಂದು ಒತ್ತಾಯ ಮಾಡುತ್ತಿದ್ದಾರೆ. ಆದ್ದರಿಂದ ನಾವು ವಿದ್ಯುಚ್ಛಕ್ತಿ ಮಂಡಲಿಯವರಿಗೆ ಹೇಳುತ್ತಿದ್ದೇವೆ ನಿಮ್ಮ ಕಾರ್ಯಕ್ರಮವನ್ನು ಹೆಚ್ಚು ಮಾಡಿಕೊಂಡು ಹೋಗಿ ಎಂದು. ಎಷ್ಟರಮಟ್ಟಿಗೆ ಹಣದ ಸಹಾಯ ಸಿಕ್ಕುತ್ತದೆ ಅಷ್ಟರ ಮಟ್ಟಿಗೆ ಅವರು ಕಾರ್ಯಕ್ರಮವನ್ನು ಹಾಕಿಕೊಂಡು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಬಹುಶಃ ಅವರು ಇವೊತ್ತು ಬಹಳ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಗ್ರಾಮಾಂತರ ಪ್ರದೇಶಕ್ಕೆ ಸಾವಿರಾರು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದೆ. ಸುಮಾರು 95 ಸಾವಿರ ಐ.ಪಿ. ಸೆಟ್ಟುಗಳಿಗೆ ಸರ್ವಿಸ್ ಮಾಡಿದ್ದಾರೆ. ಕನ್‌ಸಾಲಿಡೇಷನ್ ವರ್ಕ್ ಸರಿಯಾಗಿ ಆಗಬೇಕು, ಎಫಿಷಿಯೆಂಟಾಗಿ ಕರೆಂಟ್ ಸಪ್ಲೈ ಬೇಕು, ಸರ್ವಿಸ್ ಬೇಕು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕನ್ ಸಾಲಿಡೇಷನ್ ವರ್ಕ್ ಹೆಚ್ಚಿನ ರೀತಿಯಲ್ಲಿ ಸರಿಯಾದ ರೀತಿಯಲ್ಲಿ ಮಾಡಬೇಕಾದರೆ ಬಹಳ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಸಬ್ ಸ್ಟೇಷನ್ ಮಾಡಬೇಕು, ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಬೇಕು. ಸ್ವಿಚ್ ಗೇರ್ ಕಂಟ್ರೋಲ್ ಪ್ಯಾನಲ್ ಬದಲಾಯಿಸಬೇಕಾಗುತ್ತದೆ. ಇಪ್ಪೆಲ್ಲವನ್ನೂ ಮಾಡಬೇಕಾದರೆ ಹೇರಳವಾಗಿ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಈಗ ಹಣ ಇಲ್ಲ.

ಹಣ ಅವರ ಹತ್ತಿರ ಹೆಚ್ಚು ಇಲ್ಲ. ಹೆಚ್ಚು ಹಣ ಒದಗಿಸಿದರೆ ಇನ್ನೂ ಹೆಚ್ಚಿನ ಕಾರ್ಯಕ್ರಮ ಕೈಗೊಳ್ಳುತ್ತೇವೆಂದು ಅವರು ಪದೇ ಪದೇ ಹೇಳುತ್ತಿದ್ದಾರೆ. ಜನರು ಸಹ ವಿದ್ಯುಚ್ಛಕ್ತಿ ಬೇಕೆಂದು ಬೇಡುತ್ತಿದ್ದಾರೆ. ಜನರ ಬೇಡಿಕೆಯನ್ನು ಪೂರೈಸುವುದಕ್ಕಾಗಿ ಡೆವಲಪ್‌ಮೆಂಟಿಗಾಗಿ ಹೆಚ್ಚು ಹಣ ಖರ್ಚು ಮಾಡಿ ಎಂದು ನಾವು ಸಹ ಅವರಿಗೆ ಒತ್ತಿ ಒತ್ತಿ ಹೇಳುತ್ತಿದ್ದೇವೆ. ಇಂಟ್ರಪ್‌ಷನ್ ಕೆಲವು ಕಡೆ ದಿನಕ್ಕೆ ಎರಡು—ಮೂರು ಸಾರಿ ಆಗುತ್ತಿದೆ, ಮತ್ತೆ ಕೆಲವು ಕಡೆ ದಿನಗಟ್ಟಲೆ ಆದರೆ ಇನ್ನೂ ಕೆಲವು ಕಡೆ ಎಂಟು ದಿವಸದವರೆಗೆ ಹೋದ ಕರೆಂಟ್ ಬರುತ್ತಿಲ್ಲ. ಈ ವಿಚಾರ ಕೂಡ ಗೊತ್ತಿದೆ. ಒಂದೊಂದು ಟ್ರಾನ್ಸ್‌ಫಾರ್ಮರ್ ಎರಡರಿಂದ ನಾಲ್ಕು ಲೈನ್‌ಗಳನ್ನು ಕಂಟ್ರೋಲ್ ಮಾಡಬೇಕಾಗಿದೆ. ಈ ಕಾರಣದಿಂದ ಇಂಟ್ರಪ್‌ಷನ್ ಆಗುತ್ತಿದೆ. ಇದನೆಲ್ಲಾ ನಿರಪಡಿಸುವುದಕ್ಕೆ ಬಹಳವಷ್ಟಿಗೆ ಹಣ ಖರ್ಚು ಮಾಡಬೇಕಾಗುತ್ತದೆ. ಈಗ ನಡೆಯುತ್ತಿರುವ ಕೆಲಸ ಸಮಾಧಾನವಾಗಿಲ್ಲ. ವಿದ್ಯುಚ್ಛಕ್ತಿ ಬೋರ್ಡಿಗೆ ಎಷ್ಟೇ ಕಷ್ಟಗಳು ಇದ್ದರೂ ಕೂಡ ಇನ್ನೂ ಹೆಚ್ಚಿನ ಭಾಗಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ನಾವು ಹೇಳುತ್ತಿದ್ದೇವೆ. ಅವರು ಸಹ ಪ್ರಯತ್ನ ಮಾಡುತ್ತಿದ್ದಾರೆ. ಇವತ್ತು ಅನೇಕ ಕುಂದುಕೊರತೆಗಳು ಮತ್ತು ನ್ಯೂನತೆಗಳು ಆಲ್ಲಿ ಇವೆ. ಇವುಗಳನ್ನು ಸರಿಪಡಿಸಿಕೊಳ್ಳಲು ಬೋರ್ಡಿನವರಿಗೆ ಸಾಕಷ್ಟು ಅವಕಾಶ ಇದೆ ಎಂದು ತಿಳಿದಿದ್ದೇನೆ. ರೈತರಮೇಲೆ ಹೆಚ್ಚಿನ ಹೊರೆ ಬೀಳದಂತೆ ನೋಡಿಕೊಳ್ಳಬೇಕೆಂದು ಮಾನ್ಯ ಸದಸ್ಯರೆಲ್ಲರೂ ಕೂಡ ಹೇಳಿದ್ದಾರೆ. ಅದನ್ನು ನಾನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆ. ಆ ವಿಚಾರದಲ್ಲಿ ಒಂದು ನಿರ್ಣಯಕ್ಕೆ ಬರುವುದಕ್ಕೆ ಸಾಧ್ಯವಾಗಬಹುದು ಎಂದು ಕಾಣುತ್ತದೆ. ರೈತರ ಮೇಲಿನ ಹೊರೆಯನ್ನು ಕಡಿಮೆ ಮಾಡಿದರೆ, ಆ ಹೊರೆಯನ್ನು ಹೊರುವುದಕ್ಕೆ ವಿದ್ಯುಚ್ಛಕ್ತಿ ಬೋರ್ಡಿನವರಿಗೆ ಸಾಧ್ಯವಿದೆಯೇ ಎಂಬುದನ್ನು ಯೋಚನೆ ಮಾಡಿ, ಅವರಮೇಲೆ ಬೀಳುವ ಹೊರೆಯನ್ನು ತಪ್ಪಿಸಲು ಸಬ್ಸಿಡಿ ಕೊಡಬೇಕೇ ಅಥವಾ ಏನು ಮಾಡಬೇಕು ಎಂಬ ವಿಚಾರ ಇದೆ. ರೈತರ ಮೇಲೆ ಹೆಚ್ಚಿನ ಹೊರೆ ಹಾಕುವುದು ಸರಿಯಲ್ಲ ಎಂಬುದನ್ನು ಎಲ್ಲಾ ಭಾಗದ ಪ್ರತಿನಿಧಿಗಳು ವಿಶೇಷವಾಗಿ ನಮ್ಮ ಪಕ್ಷದ ಪ್ರತಿನಿಧಿಗಳು ಒಂದೇ ಸಮನೆ ಹೇಳುತ್ತಿದ್ದಾರೆ. ಅದನ್ನು ನಾನು ಮನಗಂಡಿದ್ದೇನೆ. ಮತ್ತು ಮನವರಿಕೆಯಾಗಿದೆ. ರೈತರಮೇಲೆ ಹೆಚ್ಚಿನ ಹೊರೆ ಬೀಳದಂತೆ ಮಾಡಲು ನನ್ನ ಸರ್ವಪ್ರಯತ್ನವನ್ನೂ ಮಾಡುತ್ತೇನೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಶಿವಪ್ಪ.—ನಮ್ಮ ರಾಜ್ಯದಲ್ಲಿ ನೀರಾವರಿ ಸೌಕರ್ಯ ಸರಾಸರಿ 8 ಭಾಗ ಮಾತ್ರ ಇದೆ. ಇಡೀ ದೇಶಕ್ಕೆ ಹೋಲಿಕೆ ಮಾಡಿ ನೋಡಿದರೆ ನಮ್ಮ ರಾಜ್ಯದ್ದು ಕಡಿಮೆ ಇದೆ. ನೀರಾವರಿ ಸೌಕರ್ಯವನ್ನು ಒದಗಿಸಿಕೊಡತಕ್ಕಂಥ ಅನುಕೂಲ ಸರ್ಕಾರಕ್ಕೆ ಇಲ್ಲದಿರುವುದರಿಂದ ರೈತರೇ ಭೂ

(ಶ್ರೀ ಎಸ್. ಶಿವಪ್ಪ)

ಗರ್ಭದಲ್ಲಿರತಕ್ಕಂಥ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಭೂ ಗರ್ಭ ದಲ್ಲಿ ಇರುವ ನೀರನ್ನು ಮೇಲೆ ಎತ್ತಲು ಉಪಯೋಗಿಸುವ ಪಂಪ್‌ಸೆಟ್ಟಿನಮೇಲೆ ದರವನ್ನು ಜಾಸ್ತಿ ಮಾಡಿರುವುದು ರೈತನ ಹಿತಕ್ಕೆ, ರಾಜ್ಯದ ಹಿತಕ್ಕೆ ಧಕ್ಕೆಯಾಗಿದೆ. ಈ ವಿಚಾರದಲ್ಲಿ ಮುಖ್ಯಮಂತ್ರಿ ಗಳು ತೀರುವಾತನ್ನು ಹೇಳಿದೆ ಹಿಂದಿನ ದರವನ್ನೇ ವಿಧಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ಒಂದು ಐ.ಪಿ. ಸೆಟ್‌ಗೆ 3,000 ಸಾವಿರ ಚಿಲ್ಲರೆ ಖರ್ಚು ಬರುತ್ತ ದೆಂದು ಮುಖ್ಯಮಂತ್ರಿಗಳು ಹೇಳಿದರು. ನನಗೆ ಅನುಮಾನ ಬಂದಿದೆ. ಈ ಬಗ್ಗೆ ಬೇರೆ ರಾಜ್ಯದಲ್ಲಿ ಎಷ್ಟು ಖರ್ಚು ಬರುತ್ತದೆಂದು ನೋಡಿಕೊಂಡು ಈ ಖರ್ಚನ್ನು ಕಡಿಮೆ ಮಾಡುವುದಕ್ಕಾಗುವು ದಿಲ್ಲವೇ ಎಂಬುದನ್ನು ನೋಡಬೇಕು. ಆ ಭಾಗ ಈ ಭಾಗ ಎಂದು ಮಾತನಾಡಬೇಡಿ, ಆ ರೀತಿ ಮಾತನಾಡಿದರೆ ಅದು ಪತ್ರಿಕೆಗಳಲ್ಲಿ ಬರುತ್ತದೆ, ನಂತರ ಜನರು ತಪ್ಪು ತಿಳಿದುಕೊಳ್ಳುವುದಕ್ಕೆ ಅವ ಕಾಶವಾಗುತ್ತದೆಂದು ಮುಖ್ಯಮಂತ್ರಿಗಳು ಕಳಕಳಿಯಿಂದ ಹೇಳಿದರು. ಮುಖ್ಯಮಂತ್ರಿಗಳಲ್ಲಿರುವ ಸಂಶಯವನ್ನು ನಿವಾರಣೆ ಮಾಡುವ ಸನ್ನಿವೇಶವಿದೆ. ಏಕೆಂದರೆ ನಾವು ಏನು ಟೀಕೆ ಮಾಡುತ್ತೇವೋ ಅದನ್ನು ಪತ್ರಿಕೆಗಳಲ್ಲಿ ಹಾಕುತ್ತಿಲ್ಲ. ಮತ್ತು ಹಿತರಕ್ಷಣೆ ಮಾಡುತ್ತಿದ್ದಾರೆ. ಆದ್ದರಿಂದ ಆ ಒಂದು ಸಂಶಯ ಮುಖ್ಯಮಂತ್ರಿಗಳಿಗೆ ಬೇಡ ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಬೋರ್ಡಿಗೆ ನಷ್ಟವಾಗುತ್ತಿರುವುದರಿಂದ ಐ.ಪಿ. ಸೆಟ್ಟುಗಳ ಮೇಲೆ ಮತ್ತು ನಗರದ ಬಳಕೆದಾರರಮೇಲೆ ಟ್ಯಾರಿಫ್ ರೇಟನ್ನು ಜಾಸ್ತಿ ಮಾಡಬೇಕಾಯಿತು ಎಂದು ಹೇಳಿದರಿ. ಈ ವಿಚಾರದಲ್ಲಿ ಸರ್ಕಾರದವರು ಎರಡು ಮೂರು ಅಂಶಗಳನ್ನು ಗಮನಿಸ ಬೇಕು. ರೂರಲ್ ಎಲೆಕ್ಟ್ರಿಫಿಕೇಷನ್‌ಗೆ ಮಹಾರಾಷ್ಟ್ರ, ಗುಜರಾತ್, ತಮಿಳುನಾಡು ಮುಂತಾದ ರಾಜ್ಯಗಳಲ್ಲಿ ಸಬ್‌ವೆನ್‌ಷನ್ ಕೊಡುತ್ತಿದ್ದಾರೆ. 59 ಮತ್ತು 63ನೇ ಕ್ಲಾಸ್ ಪ್ರಕಾರ ಸಬ್‌ವೆನ್‌ಷನ್ ಕೊಡುವುದಕ್ಕೆ ಸರ್ಕಾರಕ್ಕೆ ಅವಕಾಶವಿದೆ ಎಂದು ಕೇರಳಾ ಹೈಕೋರ್ಟಿನ ಜಡ್ಜ್ ಆದ ಶಂಕರನ್ ಅವರು ತೀರ್ಮಾನ ಕೊಟ್ಟಿದ್ದಾರೆ. ಆವಕಾರಣ ನಮ್ಮ ಸರ್ಕಾರದವರು ಸಬ್ ವೆನ್‌ಷನ್ ಕೊಟ್ಟರೆ ಲಾಸ್ ಪ್ರಶ್ನೆ ಬರುವುದಿಲ್ಲ. ಎರಡನೆಯ ಅಂಶ ಏನಂದರೆ, ಎಂ.ಎಸ್.ಇ.ಬಿ. ಅವರು ಕಾಸ್ಟಿಂಗ್ ಆಫ್ ದಿ ಎಲೆಕ್ಟ್ರಿಸಿಟಿ ಪರ್ ಯೂನಿಟ್ ಮಾಡಿರುವುದು ಸರಿಯಿಲ್ಲವೆಂದು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಹೇಳುತ್ತಾರೆ. ಮತ್ತು ಪ್ರೊಡಕ್ಷನ್ ಎರಡು ಹೈಕೆಯಾಗುತ್ತದೆ, ಎಂ.ಎಸ್.ಇ.ಬಿ. ಅವರು ಸರ್ಕಾರದಿಂದ ಕೊಂಡುಕೊಳ್ಳುವುದು 4.2 ಹೈಕೆಯಂತೆ ಎಂದು ಪಿ.ಎ.ಸಿ. ಅವರು ಹೇಳಿದ್ದಾರೆ. ಈ ಕಾರಣದಿಂದ ಬೋರ್ಡಿನವರಿಗೆ ಲಾಸ್ ಆಗುತ್ತಿರಬಹುದು. ಅಲ್ಲದೆ ಮದ್ರಾಸ್ ಸರ್ಕಾರಕ್ಕೆ ಈಗ ವಿದ್ಯುಚ್ಛಕ್ತಿಯನ್ನು ಮಾರಾಟ ಮಾಡುತ್ತಿದ್ದಾರೆ, ಆ ಮಾರಾಟದ ಕ್ರಮ ಸರಿಯಲ್ಲ, ಅದರಿಂದ ಕೂಡ ಲಾಸ್ ಆಗುತ್ತಿದೆ ಎಂದು ತಿಳಿದುಬಂದಿದೆ. ಇನ್ನು ಕೊನೆಯ ದಾಗಿ ಇಲ್ಲಿ ಕೊಟ್ಟಿರುವ ಅಂಕಿಗಳನ್ನು ನೋಡಿದರೆ, ಇಂಡಸ್ಟ್ರಿಗಳಿಂದ 1967-68ರಲ್ಲಿ 645 ಲಕ್ಷ ರೂಪಾಯಿಗಳು, ಡೊಮೆಸ್ಟಿಕ್ ಕನ್ಸ್ಯೂಮರ್ಸ್ ಕಡೆಯಿಂದ 411 ಲಕ್ಷ ರೂಪಾಯಿಗಳು, ಇರಿಗೇಷನ್ ಪಂಪ್‌ಸೆಟ್ಟುಗಳಿಂದ 119 ಲಕ್ಷ ರೂಪಾಯಿಗಳು ವರಮಾನ ಬಂದಿದೆ ಎಂದು ಹೇಳಿದ್ದಾರೆ. ಇಂಡಸ್ಟ್ರೀಗಳಿಗೆ ಒದಗಿಸುವ ವಿದ್ಯುಚ್ಛಕ್ತಿಯಮೇಲೆ ಇನ್ನೂ ಹೆಚ್ಚಿನ ದರವನ್ನು ಹಾಕುವುದಕ್ಕೆ ಆಗುವುದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಜಿ. ರಾಮೇಗೌಡ.—4 ½ ಯೂನಿಟ್ ಪಂಪ್‌ಸೆಟ್ಟು ಮೂಲಕ ಖರ್ಚಾಗಿರುವುದಕ್ಕೆ 12 ರೂಪಾಯಿ 87 ಪೈಸೆ ಚಾರ್ಜ್ ಮಾಡಿರುವ ಒಂದು ಬಿಲ್ ನನ್ನಲ್ಲಿ ಇದೆ. ಅಂದರೆ ಒಂದು ಯೂನಿಟ್‌ಗೆ 32 ಪೈಸೆಯಂತೆ ಚಾರ್ಜು ಮಾಡಿದ್ದಾರೆ. ಕೈಗಾರಿಕೆಗೂ ಇದಕ್ಕೂ ಏನು ತಾರತಮ್ಯ ತೋರಿಸಿದ್ದೀರಿ ಎಂಬುದನ್ನು ಹೇಳಬಲ್ಲಿರಾ ?

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಈಗ ವಿದ್ಯುಚ್ಛಕ್ತಿ ಮಂಡಲಿಯಲ್ಲಿರುವ ಅಧ್ಯಕ್ಷರ ಬಗ್ಗೆ ಹೇಳಿದ್ದೇನೆ. ಇನ್ನು ಮುಂದೆ ನಿವೃತ್ತ ಅಧಿಕಾರಿಗಳನ್ನು ನೇಮಕ ಮಾಡಬಾರದೆಂದು ಹೇಳಿದ್ದೇವೆ. ಮತ್ತು ಬೋರ್ಡಿನಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ನಾವು ತಮಾಷೆಗೆ ಹೇಳಲಿಲ್ಲ. ಆ ಬಗ್ಗೆ ಒಂದು ತನಿಖಾ ಮಂಡಲಿಯನ್ನು ನೇಮಿಸಬೇಕು. ಈ ಬಗ್ಗೆ ಮುಖ್ಯ ಮಂತ್ರಿಗಳ ಅಭಿಪ್ರಾಯ ಏನು ?

ಶ್ರೀ ಬಿ. ಭಾಸ್ಕರಶೆಟ್ಟಿ.—ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಐ.ಪಿ. ಸೆಟ್ಟುಗಳ ಮೇಲಿನ ಮಿನಿಮಮ್ ದರವನ್ನು ಜಾಸ್ತಿ ಮಾಡಿದ್ದರಿಂದ 22 ಲಕ್ಷ ರೂಪಾಯಿಗಳ ಹೆಚ್ಚಿನ ವರಮಾನ ಬರುತ್ತದೆಂದು. ಇವತ್ತು ಹೇಳುತ್ತಾರೆ, ಮೊದಲು ಒಂದು ಪಂಪ್‌ಸೆಟ್ಟಿನಿಂದ 160 ರೂಪಾಯಿಗಳ

ಆದಾಯ ಬರುತ್ತಿದ್ದರೆ ಈಗ 240 ರೂಪಾಯಿಗಳ ಆದಾಯ ಬರುತ್ತಿದೆ ಎಂದು. ಒಂದು ಪಂಪ್ ಸೆಟ್ಟಿಗೆ 80 ರೂಪಾಯಿಗಳ ವರಮಾನ ಹೆಚ್ಚು ಬಂದಂತೆ ಆಗುತ್ತದೆ. ಒಟ್ಟು ಲೆಕ್ಕ ತೆಗೆದುಕೊಂಡರೆ 76 ಲಕ್ಷ ರೂಪಾಯಿಗಳ ಹೆಚ್ಚಿನ ವರಮಾನ ಬರುವಂತೆ ತೋರುತ್ತದೆ. ಈ ರೀತಿ ಜನತೆಗೆ ವಂಚಿಸುವ ಅಂಕಿಅಂಶಗಳನ್ನು ಏತಕ್ಕೆ ಕೊಡುತ್ತೀರಿ ಎಂದು ಕೇಳುತ್ತೇನೆ. ಯಾವ ಅಂಕಿಅಂಶಗಳು ನಿಜ ಎಂಬುದನ್ನು ಹೇಳಬೇಕು.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಪಂಪ್‌ಸೆಟ್ಟಿನ ಮೇಲಿನ ದರ ನಮ್ಮ ರಾಜ್ಯಕ್ಕಿಂತ ಆಂಧ್ರದಲ್ಲಿ ಜಾಸ್ತಿ ಇದೆ ಎಂದು ಹೇಳುತ್ತೀರಿ. ಅಲ್ಲಿ ಒಬ್ಬ ರೈತ ಒಂದು ಐ.ಪಿ. ಸೆಟ್‌ನಿಂದ 5 ಎಕರೆ ಸಾಗು ಮಾಡುತ್ತಾನೆ. ಮತ್ತು ಅಲ್ಲಿ ನೀರಿನ ಅನುಕೂಲ ಚೆನ್ನಾಗಿದೆ. ಆದರೆ ಇಲ್ಲಿ ನೀರಿನ ಅನುಕೂಲ ಸಾಕಷ್ಟು ಇಲ್ಲ. ಮತ್ತು ಒಬ್ಬ ರೈತ ಒಂದು ಐ.ಪಿ. ಸೆಟ್‌ನಿಂದ ಎರಡು ಎಕರೆ ಮಾತ್ರ ಸಾಗು ಮಾಡುತ್ತಾನೆ. ಇರಿಗೇಷನ್ ಪ್ರಾಜೆಕ್ಟ್ ವಿರಿಯದಲ್ಲಿರುವ ಜಮೀನಿಗೆ ಎಕರೆಗೆ 16 ರೂಪಾಯಿಗಳಂತೆ ಕಂದಾಯ ಹಾಕುತ್ತೀರಿ, ಸಬ್‌ಸಾಯಿಲ್‌ಗೂ ಚಾರ್ಜು ಮಾಡುತ್ತೀರಿ, ಇಷ್ಟೆಲ್ಲಾ ಚಾರ್ಜು ಮಾಡಿ ಪಂಪ್‌ಸೆಟ್ಟಿನ ಮೇಲಿನ ಮಿನಿಮಮ್ ದರವನ್ನು ಒಂದಕ್ಕೆ ಎರಡರಷ್ಟು ಜಾಸ್ತಿ ಮಾಡಿರುವುದು ಸರಿಯೇ ಎಂಬುದನ್ನು ಹೇಳಬೇಕು; ಕರೆಂಟ್ ಉಪಯೋಗಿಸಲಿ ಬಿಡಲಿ, ಮಿನಿಮಮ್ ದರವನ್ನು ಕಟ್ಟಲೇಬೇಕು, ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಆದಕಾರಣ ಈ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ಒಂದು ತಾಲ್ಲೂಕಿನಲ್ಲಿ ಒಂದೆರಡು ಹಳ್ಳಿಗಳಿಗೆ ಮಾತ್ರ ಲೈನುಗಳನ್ನು ಎಳೆದು ದೀಪಗಳ ಸೌಕರ್ಯ ಕೊಡುವಾಗ ದಾರಿಯಲ್ಲಿ ಬೇರೆ ಕೆಲವು ಊರುಗಳಿದ್ದರೆ ಅವರಿಗೂ ದೀಪಗಳ ಸೌಕರ್ಯ ಸಿಗುವಂತೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಬಿ. ದೊಡ್ಡಬೋರೇಗೌಡ.—ಐ. ಪಿ. ಸೆಟ್ಟುಗಳಿಗಾಗಿ ನಮ್ಮ ಕಡೆಯಿಂದ ಕೆಲವರು ಅರ್ಜಿಗಳನ್ನು ಹಾಕಿದ್ದರೂ ಅದಕ್ಕೆ ಸರಕಾರವ ಕಡೆಯಿಂದ ಇದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತ ಬರುತ್ತಿದ್ದಾರೆ. ಇದನ್ನು ಇನ್ನೂ ಎಷ್ಟು ವರ್ಷಗಳಕಾಲ ಪರಿಶೀಲನೆ ಮಾಡಬೇಕೆಂದಿದ್ದೀರಿ?

ವಿದ್ಯುಚ್ಛಕ್ತಿ ಮಂಡಲಿಯವರು ಸುಮಾರು ಮೂರು ಕೋಟಿಯಷ್ಟು ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದರೂ ವ್ಯವಸಾಯಗಾರರಿಗೆ ಇನ್ನೂ ಸಕಾಲದಲ್ಲಿ ವಿದ್ಯುಚ್ಛಕ್ತಿ ಸಿಗುತ್ತಿಲ್ಲ. ಎಲ್ಲ ವ್ಯವಸಾಯಗಾರರಿಗೂ ಪೂರ್ಣವಾಗಿ ಯಾವಾಗ ವಿದ್ಯುಚ್ಛಕ್ತಿಯನ್ನು ಖಚಿತವಾಗಿ ಕೊಡುತ್ತಾರೆ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಪಿ. ಎನ್. ಪಾಟೀಲ್.—ಸರಕಾರದವರು ಎಂ.ಎಸ್.ಐ.ಬಿ.ಗೆ ಸಾಲ ಕೊಡುತ್ತಿರುವುದು ಶೇಕಡಾ ನಾಲ್ಕರ ಬಡ್ಡಿಯ ದರದಂತೆ. ಎಲ್.ಐ.ಸಿ.ನಲ್ಲಿ ಸಾಲ ತೆಗೆದುಕೊಳ್ಳುವುದು ಶೇಕಡಾ 7 ರಷ್ಟು ಬಡ್ಡಿಮೇಲೆ ಮತ್ತು ಸರಕಾರ ಸಾಲ ತೆಗೆದುಕೊಳ್ಳುತ್ತಿರುವುದು ಶೇಕಡಾ ಎಂಟರಂತೆ. ಆದರೆ ಎಂ.ಎಸ್.ಐ.ಬಿ.ಗಾಗಿ ಇಷ್ಟು ಕಡಿಮೆ ದರದಲ್ಲಿ ಬಡ್ಡಿ ಕೊಡುವಾಗ ಅಗ್ರಿಕಲ್‌ಚರಿಸ್ಟ್‌ಗಾಗಿ ಕೊಡುವ ಐ. ಪಿ. ಸೆಟ್ಟುಗಳಮೇಲೆ ಕೊಡುವ ರೇಟನ್ನು ಕಡಿಮೆ ಮಾಡಲು ಕನ್‌ಸಿಡರು ಮಾಡುತ್ತೇವೆಂದು ಹೇಳಿದಿರಿ. ಇದನ್ನು ಕಡಿಮೆ ಮಾಡಬೇಕು ಎನ್ನುವ ತೀರ್ಮಾನವನ್ನು ತೆಗೆದುಕೊಳ್ಳಲು ಸರಕಾರಕ್ಕೆ ಇನ್ನೂ ಎಷ್ಟು ಕಾಲಾವಕಾಶ ಬೇಕಾಗುತ್ತದೆ? ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಟ್ಯಾಕ್ಸ್ ಜಾಸ್ತಿ ಮಾಡುತ್ತಿದ್ದರೂ ಕೊರತೆ ಇದೆ ಎಂದು ಹೇಳುತ್ತಿದ್ದಾರೆ. ಇದನ್ನು ಸರಿದೂಗಿಸಲು ಇಲ್ಲಿರುವ ಟಾಪ್ ಹೆವಿ ಅಡ್ಮಿನಿಸ್ಟ್ರೇಷನ್ ಹೆಚ್ಚಾಗಿರುವುದನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವಿಲ್ಲವೇ? ಎರಡನೆಯದು, ಬೋರ್ಡಿನವರು ಅಲ್ಲಲ್ಲಿ ಸಿಮೆಂಟು ಪೋಲುಗಳನ್ನು ತಯಾರು ಮಾಡುತ್ತಿದ್ದಾರೆ. ಇದರಲ್ಲಿ ಇವರು ಸರಿಯಾದ ಒಂದು ಸ್ಪೆಸಿಫಿಕೇಷನ್ ಕೂಡ ಕೊಟ್ಟಿರುತ್ತಾರೆ. ಒಂದೊಂದು ಪೋಲು ಕನಿಷ 30 ಅಡಿ ಇರಬೇಕೆಂದು ಹೇಳಿದ್ದಾರೆ. ಚಿತ್ರದುರ್ಗದಲ್ಲಿ ಒಂದು ಕಡೆ ತಯಾರಾಗುವ ಪೋಲು 26 ಅಡಿಯಷ್ಟು ಇದ್ದರೂ ಅದನ್ನು 30 ಅಡಿಗಳ ಪೋಲು ಎಂದು ಲೆಕ್ಕಕ್ಕೆ ತೆಗೆದುಕೊಂಡು ಮಂಡಳಿಗೆ ವೋನ ಮಾಡುತ್ತಿರುವುದು ಗಮನಕ್ಕೆ ಬಂದಿದೆಯೇ! ಹಾಗೆ ಬಂದಿದ್ದರೆ ಅವರಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮೀ ರಾಜ್ಯದಲ್ಲಿ ಗ್ರಾಮಾಂತರಗಳಲ್ಲಿ ವಿದ್ಯುಚ್ಛಕ್ತಿ ಕೊಡಬೇಕೆಂದು ಸಬ್‌ಸಿಡೈಸ್ಡ್ ರೇಟಿನಂತೆ ಕೊಡುತ್ತೇವೆಂದು ಹೇಳಿದ್ದಾರೆ. ಇದರಂತೆ ಎಷ್ಟುಕಡೆಗಳಲ್ಲಿ ಈ ರೇಟು ಕೊಡಲಾಗಿದೆ ಎಂದು ನೋಡುವಾಗ ಇದರಲ್ಲಿ ಮಿನಿಮಂ ರೇಟು ವರ್ಕ್ ಔಟು ಆಗುವುದಿಲ್ಲ. ಸರಿಯಾಗಿ ಲೆಕ್ಕ ಹಾಕಿ ಮಿನಿಮಂ ರೇಟು ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ?

Sri J. P. SARVESH. —Sir, small farmers below five acres are not at all benefited by this scheme of I. P. sets. What schemes have the Government formulated it order to benefit such raiyats?

Secondly, wherever there is rural electrification, the Harijan localities are not at all electrified—the S.C. and S.T. tandas are not electrified.

ಶ್ರೀ ಎನ್. ಎ. ಚನ್ನೇಗೌಡ.—ವಿದ್ಯುಚ್ಛಕ್ತಿ ಮಂಡಳಿಯ ಅದಕ್ಷತೆಯಿಂದ ಇಲ್ಲಿ ಬರುವ ವರಮಾನ ಕಡಿಮೆಯಾಗುತ್ತಿದೆ. ಇಂತಹ ಅಧಿಕಾರಿಗಳಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ! ನಮ್ಮ ತುಮಕೂರು ಜಿಲ್ಲೆ ಬಳಿ ಕ್ಯಾತಸಂದ್ರ, ಗುಳೂರು ಹತ್ತಿರ 4.6 ಕೆ. ವಿ. ಲೈನು ಎಳೆಯಲು 1959 ರಲ್ಲಿ ಸುಮಾರು ನಲವತ್ತು ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿ ಇದನ್ನು ಮುಗಿಸುವು ದರಲ್ಲಿದ್ದಾರೆ. ಆದರೆ ಇದೇ ಲೈನಿನಲ್ಲಿರುವ ಮೂರು ಹಳ್ಳಿಗಳಲ್ಲಿ ಈ ಲೈನಿನ ದಾರಿಯೂ ಬರುತ್ತಿರುವುದರಿಂದ ಇಲ್ಲಿಗೂ ದೀಪಗಳನ್ನು ಕೊಟ್ಟರು. ಆದರೆ ಇಲ್ಲ ಪಂಚಾಯತಿಯವರು ಶೇಕಡಾ 18ರಷ್ಟು ದರ ನಿಗದಿ ಮಾಡಿ ಇದರಲ್ಲಿ ಶೇಕಡಾ ಹತ್ತರಷ್ಟು ರಿಬೇಟು ಕೊಡುತ್ತೇನೆ ಎಂದು ಹೇಳಿದ್ದಾರೆ. ಹೀಗೆ ಇಷ್ಟು ವ್ಯತ್ಯಾಸಗಳು ರೇಟಿನಲ್ಲಿರಲು ಕಾರಣವೇನು?

Sri B. B. SAYANAK.—The Electricity Board is recovering minimum charges now-a-days monthly. Formerly, this minimum charge was annually recovered. In our area, we are not using pumpsets for six months in the year. Therefore, I am requesting the Government to recover the minimum charges annually.

Secondly, the R.C.C. poles are purchased by the Government at 25 per cent more than at the cost which the M.S.E.B.can produce.

ಶ್ರೀ ಪಿ. ವೆಂಕಟಗಿರಿಯಪ್ಪ.—ವಿದ್ಯುತ್ ಪಂಪು ಸೆಟ್ಟುಗಳನ್ನು ಹಿಂದೆ ಕೊಟ್ಟಾಗ ಸುಮಾರು ಹತ್ತು ಪರ್ಸೆಂಟು ಹಾಗೂ ಹನ್ನೆರಡು ಪರ್ಸೆಂಟಿನಷ್ಟು ರೇಟುಗಳು ಇತ್ತು. ಈಗ ಒಬ್ಬ ರೈತ ಒಂದು ಪಂಪು ಸೆಟ್ಟು ಹಾಕಿಕೊಳ್ಳಬೇಕಾದರೆ ಸುಮಾರು ಮೂರು ನಾಲ್ಕು ಸಾವಿರ ರೂಪಾಯಿ ಖರ್ಚು ಮಾಡಿ ಪಂಪುಗಳನ್ನು ಹಾಕಿಸಬೇಕಾಗುತ್ತದೆ. ಅಲ್ಲದೆ ರೈತರು ಪಂಪು ಸೆಟ್ಟುಗಳನ್ನು ವರ್ಷದ ಪೂರ್ತಿ ಕಾಲ ಉಪಯೋಗಿಸಲು ಆಗುವುದಿಲ್ಲ. ಸುಮಾರು ಏಳೆಂಟು ತಿಂಗಳ ಕಾಲ ಮಳೆ ಬರುತ್ತೆ ಮತ್ತು ವ್ಯವಸಾಯದ ಕೆಲಸದಲ್ಲಿರುತ್ತಾರೆ. ಕೇವಲ ಮೂರು ಅಥವಾ ನಾಲ್ಕು ತಿಂಗಳ ಕಾಲ ಅವರು ಪಂಪುಗಳನ್ನು ಉಪಯೋಗಿಸಬಹುದು. ಮೂರು ಅಥವಾ ನಾಲ್ಕು ಮೈಲಿಗಳ ಒಂದು ಲೈನು ಎಳೆದರೂ ಅದರಲ್ಲಿ ಬರುವ ಬಾವಿಗಳಿಗೆ ಪವರು ಸಿಗುತ್ತದೆ. ಈಗ ಒಂದು ಬಾವಿ ತೆಗೆಯಬೇಕಾದರೆ ಇದರ ಖರ್ಚು ಸುಮಾರು 15 ಸಾವಿರದವರೆಗೆ ಬರುತ್ತದೆ. ಇದರಲ್ಲಿ ಕರೆಂಟು ಚಾರ್ಜು ಸುಮಾರು 50, 60 ಅಥವಾ ನೂರು ರೂಪಯಿಗಳವರೆಗೆ ಬರುತ್ತದೆ. ಇಷ್ಟು ಹೆಚ್ಚು ಖರ್ಚುಮಾಡಲು ರೈತರಿಗೆ ಶಕ್ತಿ ಇರುವುದಿಲ್ಲ. ಹತ್ತು ಸಾವಿರ ರೂಪಾಯಿ ಖರ್ಚು ಮಾಡಿ ಒಂದು ಬಾವಿ ತೆಗೆಸಿದ ರೈತರಮೇಲೆ ಹೆಚ್ಚು ತೆರಿಗೆ ಹಾಕಿದರೆ ಅವನು ಕೊಡಲು ಸಾಧ್ಯವಿಲ್ಲ. ಹೀಗೆ ಜಾಸ್ತಿ ಮಾಡಿರುವ ರೇಟನ್ನು ಕಡಿಮೆ ಮಾಡುವುದು ನ್ಯಾಯ ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಯಲಿಲ್ಲವೇ?

ಶ್ರೀ ಕೆ. ಪಿ. ಚಿಕ್ಕೇಗೌಡ.—ಇಲ್ಲಿರುವ ಚೇರ್ಮನ್ನರು ಮತ್ತು ಇತರ ಚೀಫ್ ಇಂಜಿನೀಯರು ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಇಲ್ಲಿರುವ ಸದಸ್ಯರು ಹಾಗೂ ಇತರರು ಸರಕಾರಕ್ಕೆ ಎಷ್ಟು ಬುದ್ಧಿವಾದಗಳನ್ನು ಹೇಳಿದರೂ ಕೇಳುತ್ತಿಲ್ಲ. ಇಂತಹ ಮಂಡಳಿಯ ಅಧಿಕಾರ ತೆಗೆದು ಇದನ್ನು ಸರಕಾರವೇ ಕಂಟ್ರೋಲ್‌ನಲ್ಲಿ ತೆಗೆದುಕೊಳ್ಳುವಂತೆ ಏಕೆ ಏರ್ಪಾಡು ಮಾಡಬಾರದು?

ಶ್ರೀ ಮಹದೇವ ಜಿ. ಬಣಕಾರ್.—ರಾಜ್ಯದಲ್ಲಿ ಇಂದು ಪಂಪು ಸೆಟ್ಟುಗಳಿಗಾಗಿ ಹೆಚ್ಚು ಆಸಕ್ತಿ ಇದೆ ಎಂದು ಸುಮಾರು 95 ಸಾವಿರ ಪಂಪು ಸೆಟ್ಟುಗಳಿಗೆ ಸರ್ವಿಸ್ ಕೊಟ್ಟಿದ್ದಾರೆ. ಇದರಿಂದ ಬೋರ್ಡಿಗೆ ರೆವ್ನ್ಯೂ ಕೂಡ ಹೆಚ್ಚಾಗಿ ಬರುತ್ತಿದೆ. ಆದರೆ ಬಡವರಾಗಿರುವ ರೈತರಿಗೆ ಹೆಚ್ಚು ಹೊರೆಯನ್ನು ಪಂಪು ಸೆಟ್ಟುಗಳಮೇಲೆ ಹಾಕುವುದು ಸರಿಯಲ್ಲ. ಇದಕ್ಕಾಗಿ ಇದನ್ನು ರದ್ದು ಮಾಡುವ ಅಭಿಪ್ರಾಯ ಸರಕಾರದಲ್ಲಿದೆಯೆ?

ಶ್ರೀ ನದಾಫಿವಪ್ಪ ಪಾಟೀಲ್.—ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡಿನವರು ಎಲೆಕ್ಟ್ರಿಸಿಟಿ ಒದಗಿಸುವ ಕಾಲಕ್ಕೆ ಮುನಿಸಿಪಾಲಿಟಿಗಳವರು ಹೆಚ್ಚಾಗಿ ಸ್ಟ್ರೀಟ್ ಲೈಟ್ ಬಲ್ಬುಗಳನ್ನು ಉಪಯೋಗಿಸ

ಬೇಕೆಂದು ಹೇಳಿದ್ದರು. ಅವರಂತೆ ಒದಗಿಸುತ್ತೇವೆ ಎಂದು ಆಶ್ವಾಸನೆ ಕೂಡ ಕೊಟ್ಟಿದ್ದರು. ಎಷ್ಟೋ ಕಡೆಗಳಲ್ಲಿ ಇಂತಹ ಸ್ಕ್ರಾ ಟೈಪ್ ಬಲ್ಬುಗಳನ್ನು ಒದಗಿಸಿಲ್ಲ. ಇವಕ್ಕಾಗಿ ಒದಗಿಸಿರುವ ಹಣ ಏನಾಗುತ್ತದೆ! ಗುಲ್ಬರ್ಗಾದಲ್ಲಿರುವ ಅಧಿಕಾರಿಗಳನ್ನು ಕೇಳಿದರೆ ಇಲ್ಲಿ ಎಲ್ಲ ಕೆಲಸ ಮಾಡುವುದು ಮಂಡಳಿಯವರು ಎಂದು ಅವರಮೇಲೆ ಬ್ಲೇಂ ಹಾಕುತ್ತಾರೆ. ಈಗಾದರೂ ಮುಖ್ಯ ಮಂತ್ರಿಗಳು ಇದರ ಕಡೆಗೆ ಗಮನ ಕೊಡುತ್ತಾರೆಯೇ!

ಶ್ರೀ ಡಿ. ಎಸ್. ಗೌಡ.—ನಮ್ಮಲ್ಲಿ ಹೇರಳವಾದ ವಿದ್ಯುಚ್ಛಕ್ತಿ ಏನೋ ಇದೆ. ಆದರೆ ರೈತ ಒಂದು ಪಾಪಿ ತೆಗೆದು ವಿದ್ಯುಚ್ಛಕ್ತಿ ಪಡೆಯಬೇಕಾದರೆ ನುಮಾರು ಒಂದು ವರ್ಷ ತಿರುಗಿ ಅದನ್ನು ಪ್ರಯಾರಿಟಿ ರೀತಿಯಲ್ಲಿ ಪಡೆಯಬೇಕಾಗಿದೆ. ಆದರೆ ಇದರಿಂದ ವ್ಯವಸಾಯದ ಅಭಿವೃದ್ಧಿ ಮಾಡಬೇಕೆಂದು ಯಾವ ಒಂದು ನೀತಿ ಇದೆಯೋ ಅದಕ್ಕೆ ತದ್ವಿರುದ್ಧವಾಗುತ್ತದೆ. ನಮ್ಮಲ್ಲಿರತಕ್ಕ ಹೇರಳವಾದ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ ಜನಕ್ಕೆ ಅನುಕೂಲ ಮಾಡಿ ಕೊಡಬೇಕಾದರೆ 5 ಹೆಚ್. ಪಿ. ನಿಂದ 50 ಹೆಚ್. ಪಿ ಯವರೆಗೆ ಕರೆಂಟು ಕೊಡಲು ಆಯಾ ರೈತರೆ ಇರುವ ತಾಲ್ಲೂಕುಗಳನ್ನೇ ಒಂದು ಕೇಂದ್ರವಾಗಿ ಮಾಡಿಕೊಂಡು ಅರ್ಜಿಗಳನ್ನು ಮಂಜೂರು ಮಾಡಿದರೆ ಕೇವಲ ಒಂದೆರಡು ಗಂಟೆಗಳಲ್ಲೇ ರೈತರಿಗೆ ಅವರ ಕೆಲಸಗಳಾಗುತ್ತವೆ ಮತ್ತು ರೈತರು ಕರೆಂಟನ್ನು ಬೇಗ ಪಡೆಯಲು ಸಹಾಯವಾಗುತ್ತದೆ. ಇದಕ್ಕಾಗಿ ವಿದ್ಯುತ್ ಹಂಚುವ ಕೇಂದ್ರಗಳನ್ನು ಆಯಾ ತಾಲ್ಲೂಕುಗಳಲ್ಲಿ ಇಡುವ ವಿಚಾರ ಪರಿಶೀಲಿಸುತ್ತೀರಾ? ಹೀಗೆ ಮಾಡಿದರೆ ಒಂದೆರಡು ದಿನಗಳಲ್ಲೇ ಪವರು ಸಿಗುತ್ತದೆ. ಇದನ್ನು ವಿಚಾರ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎದುರು ಪಕ್ಷದ ಸದಸ್ಯರು ಮಾಡುವ ಸಲಹೆಗಳಿಗೆ ತಾವು ಮಣಿದು ಇದರಲ್ಲಿ ವಿಶೇಷ ರಿಯಾಯಿತಿ ಕೊಡಬೇಇದ್ದರೂ ತಮ್ಮ ಪಕ್ಷದವರಿಂದ ಬಂದಿರುವ ಅಭಿಪ್ರಾಯಗಳನ್ನು ತೆಗೆದುಕೊಂಡು ರೈತರ ಹಿತದೃಷ್ಟಿಯಿಂದ ತೀರ್ಮಾನ ತೆಗೆದುಕೊಳ್ಳುತ್ತೀರಾ? ಆ ತೀರ್ಮಾನವನ್ನು ಇನ್ನೆಷ್ಟು ದಿನಗಳಲ್ಲಿ ತೆಗೆದುಕೊಳ್ಳುತ್ತೀರಿ! ಇದನ್ನು ತೆಗೆದು ಕೊಳ್ಳಲು ಪ್ರಯತ್ನ ಮಾಡುತ್ತೀರಾ!

ಶ್ರೀ ಕೆ. ಪ್ರಭಾಕರ್.—ಸ್ವಾಮಿ, ಪಂಪು ಹೌಸ್‌ಗೆ ಇನ್ಸುಲೇಷನ್ ಮಾಡುವ ಕೆಲಸ ಲೋಕರ್ ಕಂಟ್ರಾಕ್ಟರ್ಸ್ ಕೈಕೆಳಗೆ ಇದೆ. ಈ ಸಣ್ಣಪುಟ್ಟ ಕೆಲಸಗಳನ್ನೆಲ್ಲಾ ಅವರನ್ನು ಹಿಡಿದು ಮಾಡಿಸಬೇಕು ಎಂದರೆ ಕಷ್ಟ. ಈಗ ಆ ಕಂಟ್ರಾಕ್ಟರುಗಳು ಎಲೆಕ್ಟ್ರಿಸಿಟಿ ಬೋರ್ಡ್ ಕೈಕೆಳಗೆ ಇಲ್ಲ. ಆದುದರಿಂದ ಕೂಡಲೇ ಪಕ್ಷಕ್ಕೆ ಆ ಕಂಟ್ರಾಕ್ಟರುಗಳನ್ನು ಎಲೆಕ್ಟ್ರಿಸಿಟಿ ಬೋರ್ಡ್‌ನವರ ಒಂದು ಅಫೀನಕ್ಕಾದರೂ ತೆಗೆದುಕೊಂಡು ಈ ತೊಂದರೆಯನ್ನು ತಪ್ಪಿಸಲು ಸೂಕ್ತ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತಿರಾ?

1-30 P.M.

ಶ್ರೀ ಕೆ. ಹೆಚ್. ಶ್ರೀನಿವಾಸ.—ಸ್ವಾಮಿ, ವಿದ್ಯುಚ್ಛಕ್ತಿ ಸೌಲಭ್ಯವನ್ನು ಒದಗಿಸುವುದರಲ್ಲಿ ಆಗತಕ್ಕಂಥ ವಿಳಂಬವನ್ನು ತಪ್ಪಿಸುವ ದೃಷ್ಟಿಯಿಂದ ತಾಲ್ಲೂಕು ಮಟ್ಟದಲ್ಲಿ, ಡಿವಿಷನ್ ಮಟ್ಟದಲ್ಲಿ ಸಾರ್ವಜನಿಕ ಪ್ರತಿನಿಧಿಗಳಿಂದ ಕೂಡಿರತಕ್ಕಂಥ ಒಂದು ಸಲಹಾ ಮಂಡಲಿಯನ್ನು ಮಾಡಬೇಕೆಂದು ಸರ್ಕಾರ ಪರಿಶೀಲಿಸುತ್ತಾ ಇರುವುದು ನಿಜವೇ! ಅದನ್ನು ತೀವ್ರಗತಿಯಲ್ಲಿ ಮಾಡುತ್ತೀರಾ?

ಶ್ರೀ ಎಸ್. ಭೀಮಣ್ಣ.—ಸ್ವಾಮಿ, ರಾಜ್ಯದಲ್ಲಿ ಎಷ್ಟು ನದಿಗಳಲ್ಲಿ ನೀರು ಹರಿಯುತ್ತದೆ! ಅಲ್ಲಿ ನೀರನ್ನು ಉಪಯೋಗ ಮಾಡಿಕೊಳ್ಳುವ ದೃಷ್ಟಿಯಿಂದ ಅಲ್ಲಿ ನಾಲೆಗಳಿಗೆ ಎಲೆಕ್ಟ್ರಿಸಿಟಿ ಕೊಡುತ್ತೀರಾ? ಅದನ್ನು ಈ ವರ್ಷವೇ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಅನೇಕ ಮಾನ್ಯ ಸದಸ್ಯರು ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ. ಕೆಲವು ವಿಚಾರಗಳನ್ನು ನೋಟ್ ಮಾಡಿಕೊಂಡಿದ್ದೇನೆ. ಎಲೆಕ್ಟ್ರಿಸಿಟಿ ಬೋರ್ಡ್ ಅಧಿಕಾರಿಗಳ ಜೊತೆಯಲ್ಲಿ ಎಲ್ಲಾ ಚರ್ಚೆ ಮಾಡುತ್ತೇನೆ, ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತೇನೆ. ಇದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಿ ರೈತರಮೇಲೆ ಏನು ಹೆಚ್ಚು ಹೊರೆ ಇದೆಯೋ ಅದನ್ನು ಇಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದು ಇನ್ನು ಕೆಲವು ವರ್ಷ ಆಗುವುದಿಲ್ಲ, ಕೆಲವು ತಿಂಗಳು ಆಗುವುದಿಲ್ಲ, ಕೆಲವು ದಿವಸದಲ್ಲೇ ಪರಿಶೀಲನೆ ಮಾಡಿ ಒಂದು ನಿರ್ಣಯಕ್ಕೆ ಬರುತ್ತೇನೆ.

ಎರಡನೆಯದಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಕೇಳಿದ್ದಾರೆ. ಏನೆಂದರೆ ಈವೊತ್ತಿನ ದಿವಸ ನಾವಾರಿ ಆಧಾರದಮೇಲೆ ಒಂದು ಪಂಪುಸೆಟ್‌ಗಳ ಸೌಲಭ್ಯವನ್ನು

(ಶ್ರೀ ವೀರೇಂದ್ರ ಪಾಟೀಲ್)

ದೊರೆಕಿಸಿಕೊಡಲು 3,000 ರೂಪಾಯಿ ಖರ್ಚಾಗುತ್ತದೆ ಅದನ್ನು ಇಳಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿದರು. ಇವನ್ನು ರಾಜ್ಯಸರ್ಕಾರದವರೂ ಪ್ರಯತ್ನ ಮಾಡುತ್ತಾರೆ, ಕೇಂದ್ರ ಸರ್ಕಾರದವರೂ ಪ್ರಯತ್ನ ಮಾಡಬೇಕು. ಮತ್ತು ನಮ್ಮ ಅಧಿಕಾರಿಗಳೂ ಸಹ ಮದ್ರಾಸಿನಲ್ಲಿ ಯಾವ ರೀತಿ ಕಡಿಮೆ ಮಾಡಿದ್ದಾರೆ ಎನ್ನುವುದನ್ನೂ ಸಹ ನೋಡುತ್ತಾರೆ. ಈಪೊತ್ತಿನ ದಿವಸ ಪೋಲಿನ ಡ್ಯೂರಬಲಟಿ ನೋಡಿಕೊಂಡು ಮಾಡಬೇಕು. ಈವಾಗ ಬಲಗ್ ಪೋಲು, ಕಟ್ಟಿಗೆ ಪೋಲು ಉಪಯೋಗ ಮಾಡುತ್ತಾರೆ, ಅದು ಗಾಳಿಗೆ ತೂರಿಕೊಂಡು ಹೋಗುತ್ತವೆ. ಆದುದರಿಂದ, ಹೆಚ್ಚಿಗೆ ಸಿಮೆಂಟ್ ಪೋಲುಗಳನ್ನು ಉಪಯೋಗ ಮಾಡುತ್ತಿದ್ದೇವೆ, ಸ್ವಲ್ಪಮಟ್ಟಿಗೆ ಹೆಚ್ಚು ಖರ್ಚಾಗುತ್ತಾ ಇದೆ. ಪೋಲ್ ಮಾಡುವುದರಲ್ಲಿ ಬೆಲೆ ಏನಾದರೂ ಕಡಿಮೆ ಖರ್ಚಿನಲ್ಲಿ ಆಗುವುದಾದರೆ ಪ್ರಯತ್ನ ಮಾಡುತ್ತೇನೆ.

ಮೂರನೆಯದಾಗಿ ಮಾನ್ಯ ಕೃಷ್ಣನ್‌ರವರು ಸರ್ಕಾರದವರೇ ಸಬ್ಸಿಡಿ ಕೊಡಬೇಕು ಎಂದು ಹೇಳಿದರು. ಸಬ್ಸಿಡಿ ಬೇಕಾದರೆ ಮತ್ತಾವುದಾದರೂ ಬಾಬಿನಿಂದ ತೆಗೆದುಕೊಡಬೇಕಾಗುತ್ತದೆ. ಅದಕ್ಕೆ ಮತ್ತಾವ ಫಂಡ್ ಸಹ ಇಲ್ಲ. ಒಂದು ಕಡೆ ಸಬ್ಸಿಡಿ ಕೊಟ್ಟರೆ ಎರಡನೇ ಕಡೆ ಡೆವಲಪ್‌ಮೆಂಟ್ ಆಕ್ಟಿವಿಟಿ ಕಡಿಮೆ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಈಪೊತ್ತು ರೂರಲ್ ಎಲೆಕ್ಟ್ರಿಫಿಕೇಷನ್‌ನಿಂದ ಐ.ಪಿ. ಸೆಟ್‌ಗಳ ಸರ್ವೀಸ್‌ನಿಂದ ನಮಗೆ ರಾಸ್ ಆಗುತ್ತಾ ಇವೆ. ಅವರಿಗೂ ಕೂಡ ಎಷ್ಟುಮಟ್ಟಿಗೆ ಸಹಾಯ ಮಾಡುವುದಕ್ಕೆ ಸಾಧ್ಯ ಇದೆಯೋ ಅದನ್ನು ವಿಚಾರ ಮಾಡುತ್ತೇನೆ ಎಂದು ಈಗಾಗಲೇ ಹೇಳಿದ್ದೇನೆ.

ಇನ್ನು ಕೆಲವು ಸದಸ್ಯರು ಕೇಳಿದರು, ಮದ್ರಾಸ್‌ಗೆ ವಿದ್ಯುಚ್ಛಕ್ತಿಯನ್ನು ಕಡಿಮೆ ದರದಲ್ಲಿ ಕೊಡುತ್ತಿದ್ದಾರೆ ಎಂದು. ಈಪೊತ್ತು ನಮ್ಮಲ್ಲಿ ಸೇರಳವಾಗಿ ಇದ್ದಾಗ ಆ ವಿದ್ಯುಚ್ಛಕ್ತಿಯನ್ನು ಪೂರ್ತಿಯಾಗಿ ಉಪಯೋಗ ಮಾಡಿಕೊಂಡು ಏನಾದರೂ ರಾಭ ಪಡೆಯುವುದರಲ್ಲೂ ಹಾನಿತನ ಇದೆ. ಇಷ್ಟಕ್ಕೆ ಕೊಟ್ಟು ತೆಗೆದುಕೊಳ್ಳಬೇಕು ಎಂದು ಹೇಳಿದರೆ ಅವರು ತೆಗೆದುಕೊಳ್ಳುವಾರದೇ ಹೋದರೆ, ಹೆಚ್ಚು ವಿದ್ಯುಚ್ಛಕ್ತಿಯನ್ನು ಇಟ್ಟುಕೊಂಡಿರುವುದಕ್ಕಾಗುವುದಿಲ್ಲ. ಅವರು ಮೊದಲು ಬಂದು ಕೇಳಿದಾಗ 9 ಪೈಸೆಯಂತೆ ಕೇಳಿದರು. ಈಪೊತ್ತು ಅವರಲ್ಲೇ ಜಾಸ್ತಿ ಇರುವುದರಿಂದ ಅವರಿಗೆ ಬೇಕಾಗಿಲ್ಲ. ಆದುದರಿಂದ ಈ ದಿನ $4\frac{1}{2}$—5 ಪೈಸೇಯಂತೆ ಕೊಟ್ಟಿದ್ದೇವೆ. ಅದೇ ರೀತಿ ಮಹಾರಾಷ್ಟ್ರದವರಿಗೂ ತಾತ್ಕಾಲಿಕವಾಗಿ ವಿದ್ಯುಚ್ಛಕ್ತಿ ಕೊಡುತ್ತಿದ್ದೇವೆ. ನಮ್ಮ ಜನತೆಗೆ ಅನ್ಯಾಯ ಮಾಡಿಕೊಂಡು ಎರಡನೆಯವರಿಗೆ ಕೊಡುತ್ತಾ ಇಲ್ಲ. ನರ್‌ಷ್ಟಸ್ ಪವರ್ ಇದ್ದುದನ್ನು ಉಪಯೋಗಿಸಿಕೊಳ್ಳದೇ ಇದ್ದರೆ ಅಷ್ಟು ದುಡ್ಡು ಬರುವುದೂ ನಿಲ್ಲುತ್ತದೆ.

ಇನ್ನು ಶ್ರೀಮಾನ್ ರಾಮೇಗೌಡರು ಹೇಳಿದರು, ಒಬ್ಬ ರೈತ 42 ಯೂನಿಟ್ ಉಪಯೋಗಿಸಿಕೊಂಡಿದ್ದಾನೆ, ಅವನಿಗೆ ಬಿಲ್ ಬಂದಿರುವುದು, 12 ರೂಪಾಯಿ 87 ಪೈಸೇ ಛಾರ್ಜು ಬಂದಿರುತ್ತೆ ಎಂದು ಹೇಳಿದರು. ಮಿನಿಮಮ್ ಇದ್ದರೆ ಬಂದರೂ ಬರಬಹುದು. ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಮಂತ್ಲಿ ಮಿನಿಮಮ್ ಹಾಕುತ್ತಾರೆ. ಅವರಿಗೆ ಇಯರ್ಲಿ ಮಿನಿಮಮ್ ಹಾಕಿ ಎಂದು ಶ್ರೀಮಾನ್ ಸ್ವೈಸಿಕ್‌ರವರು ಕೇಳಿದರು. ಏತಕ್ಕೆಂದರೆ ಮಂತ್ಲಿ ಮಿನಿಮಮ್ ಹಾಕಿರುವುದರಿಂದ, ಬೇಸಿಗೆಯಲ್ಲಿ ಬಾವಿಯಲ್ಲಿ ನೀರು ಇಲ್ಲದೇ ಇರುವುದರಿಂದ ಕರೆಂಟ್ ಹೆಚ್ಚು ಉಪಯೋಗಿಸಿಕೊಂಡಿರುವುದಿಲ್ಲ, ಆದರೂ ಕರೆಂಟ್ ಚಾರ್ಜಸ್ ಕಟ್ಟಬೇಕಾಗುತ್ತದೆ. ಮಳೆಗಾಲದಲ್ಲಿ ಹೆಚ್ಚು ನೀರು ಬರುವುದರಿಂದ, ಅದರ ಉಪಯೋಗವೂ ಬಹಳ ಜಾಸ್ತಿಯಾಗುವುದರಿಂದ, ಹೆಚ್ಚು ಕರೆಂಟನ್ನು ಉಪಯೋಗಿಸಿಕೊಂಡಿರುತ್ತಾನೆ. ಇದಕ್ಕೆ ಮೊದಲಿಗಿಂತ 3—4 ಪಟ್ಟು ಛಾರ್ಜು ಜಾಸ್ತಿ ಬರುತ್ತದೆ. ಇದರಿಂದಾಗಿ ಅನೇಕ ಮಾನ್ಯ ಸದಸ್ಯರೂ ಕೂಡ ಇಯರ್ಲಿ ಮಿನಿಮಮ್ ಹಾಕಿ ಎಂದು ಕೇಳಿದರು. ಆದುದರಿಂದ ಮಂತ್ಲಿ ಮಿನಿಮಮ್ ಬಂದಿರುವುದರಿಂದ ಆ ರೀತಿ ಜಾಸ್ತಿಯಾಗಿರಬಹುದು ಎಂದು ಶ್ರೀ ರಾಮೇಗೌಡರಿಗೆ ಹೇಳುತ್ತೇನೆ. ಮತ್ತೆ ಯಾವುದೂ ಕಾರಣ ಇರಲಿಕ್ಕಿಲ್ಲ ಎಂದು ನನಗೆ ಅನಿಸುತ್ತದೆ.

ಇನ್ನು ಶ್ರೀಮಾನ್ ಭಾಸ್ಕರಶೆಟ್ಟಿಯವರು ಪಂಪುಸೆಟ್ಟಿನ ವಿಚಾರದಲ್ಲಿ ಒಂದು ಪಂಪುಸೆಟ್ಟಿಗೆ ವಿಧಿಸಲಾಗಿದ್ದ ಕನಿಷ್ಠ ದರ 16 ರೂಪಾಯಿ ಇದ್ದುದನ್ನು 24 ರೂಪಾಯಿಗೆ ಹೆಚ್ಚಿಸಿದ್ದಾರೆ, ಇದರಿಂದ 22 ಲಕ್ಷ ರೂಪಾಯಿ ಹೆಚ್ಚಿಗೆ ಬರುತ್ತದೆ ಎಂದು ಹೇಳಿದರು. ಯಾವ ರೀತಿ ಲೆಕ್ಕಾಚಾರ ಹಾಕಿ ಹೇಳಿದರೋ ಗೊತ್ತಿಲ್ಲ. ಮ್ಯಾಕ್ಸಿಮಮ್ ಹೆಚ್ಚಿಸುವುದರಿಂದ ಅನೇಕ ರೈತರಿಗೆ ತೊಂದರೆಯಾಗುತ್ತದೆ. 10-20 ಪರ್ಸೆಂಟ್ ರಾಭ ಬರಬಹುದು. ಇದರಿಂದ ಬೆಂಗಳೂರು, ತುಮಕೂರು ಹಾಗೂ ಕೋಲಾರ ಜಿಲ್ಲೆಯವರಿಗೆ ಕಷ್ಟವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯವರೂ ಸಹ ನನ್ನ ಹತ್ತಿರ ಬಂದಿದ್ದರು. ಅವರು ನಾವು ಮಂತ್ಲಿ ಮಿನಿಮಮ್ ಕೊಡುತ್ತಿದ್ದೇವೆ, ಅದನ್ನು ಇಯರ್ಲಿ

ಮಿನಿಮಮ್ ಮಾಡಬೇಕು ಎಂದು ಕೇಳಿದರು. ಅನೇಕ ಹಳ್ಳಿಗಳಲ್ಲಿ ವ್ಯಾಲ ಇರುತ್ತದೆ ಅಲ್ಲಿ ಪಂಪು ಸೆಟ್ಟು ಹಾಕಕೊಂಡು ಒಬ್ಬೊಬ್ಬರು ನೀರನ್ನು 500 ಅಲ್ಲ, 800 ಅಲ್ಲ, 1,000 ರೂಪಾಯಿವರೆಗೆ ವಿದ್ಯುಚ್ಛಕ್ತಿ ಉಪಯೋಗಿಸುತ್ತಾರೆ. ಇದರಿಂದ ತೊಂದರೆ ಬರುವುದು ಬೆಂಗಳೂರು, ತುಮಕೂರು ಮತ್ತು ಕೋಲಾರ ಜಿಲ್ಲೆಯವರಿಗೆ ಮಾತ್ರ. ಮಂತ್ರಿ ಮಿನಿಮಮ್ ಕಟ್ಟಿದ್ದೇ ಹೋದರೆ ಡಿಸ್‌ಕನೆಕ್ಷನ್ ಮಾಡುತ್ತಾರೆ. ಅವರ ಜೀವನ ಕಷ್ಟದ ಜೀವನ. ಬಾವಿಯಲ್ಲಿ ನೀರು ಇದ್ದು ಹೆಚ್ಚು ಬೆಳೆ ಬೆಳೆದರೆ ಅನುಕೂಲ, ಇಲ್ಲದಿದ್ದರೆ ತೊಂದರೆ. ಈಗ 7—8 ಪರ್ಸೆಂಟ್‌ದ ಕೆಳಗೆ ಎಲ್ಲಾ ಬಾವಿಗಳಲ್ಲೂ ನೀರು ಇರುತ್ತಿತ್ತು. ಆದರೆ ಅದೇ ಬಾವಿಗಳಲ್ಲಿ ನೀರು ಇಲ್ಲ. ಮಳೆ ಕಡಿಮೆಯಾಗಿದೆ ಎಂದು ಹೇಳಿದರು, ಅದೂ ಒಂದು ಕಾರಣ. ಮತ್ತೆ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಬಾವಿಗಳನ್ನು ತೆಗೆದಿರುವುದರಿಂದ ಈ ಸಬ್‌ಸಾಯಿಲ್ ವಾಟರ್ ಒಳಗಡೆಯೇ ಹಂಚಿಹೋಗಿದೆ. ಆದುದರಿಂದ ಒಂದು ಗಂಟೆ, ಎರಡು ಗಂಟೆಯೂ ಕೂಡ ಉಪಯೋಗಿಸಲಿಕ್ಕೆ ನೀರು ಸಿಕ್ಕುವುದಿಲ್ಲ. ಆದರೂ ಮಿನಿಮಮ್ ಛಾರ್ಜು ಏನು ಇದೆಯೋ ಅದನ್ನು ಕಟ್ಟಬೇಕಾಗುತ್ತದೆ. ಆದ್ದರಿಂದ ಬಾವಿಯಲ್ಲಿ ಹೆಚ್ಚು ವಿದ್ಯುಚ್ಛಕ್ತಿಯನ್ನು ಉಪಯೋಗಮಾಡುವ ಸ್ಥಿತಿಯಲ್ಲಿಲ್ಲದಿದ್ದರೂ ಅನೇಕ ಜಿಲ್ಲೆಗಳಲ್ಲಿ ಹೆಚ್ಚು ಮಿನಿಮಮ್ ಛಾರ್ಜು ಕಟ್ಟಬೇಕಾಗುತ್ತದೆ.

ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಮನೆಗಳಿಗೂ ಎಲೆಕ್ಟ್ರಿಸಿಟಿ ಕನೆಕ್ಷನ್ ಕೊಡಬೇಕು ಎಂದು ಹೇಳಿದರು. ಯಾವ ಊರಿಗೆ ಎಲೆಕ್ಟ್ರಿಸಿಟಿ ಕೊಡುತ್ತಾರೋ ಅಲ್ಲಿ ಮನೆಗೆ ಎಲೆಕ್ಟ್ರಿಸಿಟಿ ಕೊಡುವುದಕ್ಕೆ ಏನೂ ಕಷ್ಟವಿಲ್ಲ. ಎಲೆಕ್ಟ್ರಿಸಿಟಿ ಕೊಡುವುದಕ್ಕೆ ನಮ್ಮಲ್ಲಿ ಅನುಕೂಲ ಇರುತ್ತದೆ. ಆ ರೀತಿ ಕನೆಕ್ಷನ್ ಕೊಡುವುದಕ್ಕೆ ಯಾರಾದರೂ ಹಿಂದು ಮುಂದು ನೋಡಿದರೆ ಅದನ್ನು ನನ್ನ ಗಮನಕ್ಕೆ ತಂದರೆ ನಾನು ಎಲೆಕ್ಟ್ರಿಸಿಟಿ ಬೋರ್ಡ್ ಅಧಿಕಾರಿಗಳಿಗೆ ಹೇಳುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಸರ್ವೇಶ್ವರವರು ಹರಿಜನರ ಕಾಲೋನಿಗೆ ಎಲೆಕ್ಟ್ರಿಸಿಟಿ ಕೊಡಬೇಕೆಂದು ಹೇಳಿದ್ದಾರೆ. ಎಲ್ಲೆಲ್ಲ ಹರಿಜನರ ಕಾಲೋನಿಗೆ ಎಲೆಕ್ಟ್ರಿಸಿಟಿ ಕೊಟ್ಟಿಲ್ಲ ಅದು ಎಲೆಕ್ಟ್ರಿಸಿಟಿ ಬೋರ್ಡ್‌ನವರ ತಪ್ಪಲ್ಲ. ಏತಕ್ಕೆಂದರೆ ವಿದ್ಯುಚ್ಛಕ್ತಿ ಸರಬರಾಜು ಮಾಡುವಾಗ ಪಂಚಾಯಿತಿಯವರು ಹೇಳಿದಂತೆ ಎಷ್ಟು ಪೋಲ್ ಬೇಕೋ ಅಷ್ಟನ್ನು ಮಾತ್ರ ಕೊಡುತ್ತಾರೆ. ಇದು ಪಂಚಾಯಿತಿ ಜವಾಬ್ದಾರಿ. ಅದರಲ್ಲಿ ಪಂಚಾಯಿತಿ ಮೆಂಬರುಗಳು ತಮ್ಮ ಮನೆ, ತಮ್ಮ ಕೇರಿಗಳಲ್ಲಿ ಪೋಲು ಹಾಕಿಸಿಕೊಂಡು ಅನಂತರ ಹರಿಜನರ ಕೇರಿಗಳಿಗೆ ಕೊಡುತ್ತಾರೆ. ಇದರಿಂದ ಹರಿಜನ ಕೇರಿಗೆ ಸಿಕ್ಕುತ್ತಾ ಇಲ್ಲ. ಅದಕ್ಕಾಗಿ ಹರಿಜನ ಕೇರಿಗೆ ಕೊಡಬೇಕೆಂದು ಕಟ್ಟಪ್ಪಣೆ ಮಾಡುತ್ತಿದ್ದೇನೆ. ಈ ಸಭೆಯಲ್ಲಿ ಮಾನ್ಯ ಸದಸ್ಯರೂ ಕೂಡ ಹೇಳಿದ್ದಾರೆ. ನಾನೂ ಕೂಡ ಸಂಪೂರ್ಣವಾಗಿ ತತ್ವತಃ ಒಪ್ಪುತ್ತೇನೆ. ಒಂದು ಊರಿಗೆ ಕೊಟ್ಟಮೇಲೆ ಹೊಟ್ಟೆಪೊದಲು ಹರಿಜನ ಕೇರಿಗೆ ಕೊಡಬೇಕಾದುದು ನಮ್ಮ ಕರ್ತವ್ಯ. ಅದಕ್ಕೆ ಪೂರ್ಣ ಸಹಾನುಭೂತಿಯನ್ನು ನಾನು ನೀಡುತ್ತೇನೆ.

ಹಳ್ಳಿಗಳಿಗೆ ವಿದ್ಯುತ್ತನ್ನು ಕೊಡುವಾಗ 18 ಪರ್ಸೆಂಟ್ ರಿಟರ್ನ್ ಬರಬೇಕೆಂದು ಕೇಳುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಅದು ಬರೀ ಕಾಗದದಲ್ಲಿ ಕುಳಿತುಕೊಂಡಿದೆ ಎಲ್ಲಿಯೂ ಆ ರೀತಿ ಪ್ರತಿಫಲ ಬರುತ್ತಿಲ್ಲ. 18 ಪರ್ಸೆಂಟ್ ಪ್ರಕಾರ ರಿಟರ್ನ್ ಬಂದರೆ ಇಷ್ಟೊಂದು ನಷ್ಟವಾಗತಕ್ಕ ಪರಿಸ್ಥಿತಿ ಇರುತ್ತಿರಲಿಲ್ಲ. ಮಿನಿಮಂ ಇಷ್ಟು ಬರಬೇಕು ಎಂದು ಒಂದು ಮಿನಿಮಂ ಹಾಕಿಕೊಂಡಿದ್ದಾರಾದರೂ ಅದು ಬರುತ್ತಿಲ್ಲ ಎನ್ನುವಂಥ ಮಾತನ್ನು ನಾನು ಹೇಳುತ್ತೇನೆ.

ಮಾನ್ಯ ನಯನಕ್ ಅವರು ಮಂತ್ರಿ ಬೇಡ, ಆನ್ಯಾಯರ್ ಮಾಡಿರಿ, ಎಂದು ಹೇಳಿದರು. ಆದರಿಂದ ಬಹಳಮಟ್ಟಿಗೆ ಜನರಿಗೆ ಅನುಕೂಲವಾಗಿದೆ. ಇದನ್ನು ಪರಿಶೀಲನೆ ಮಾಡುವಂಥ ವಿಚಾರವನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಎಂ. ನಾಗಪ್ಪ.—ಅಪ್ಪರ್ ಕೃಷ್ಣ ಯೋಜನೆ ಬಗ್ಗೆ ನಾನು ಒಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೆ. ಶ್ರೀಮಾನ್ ಚನ್ನಯ್ಯನವರು ಕಳಿಸಿದಂಥ ಸೂಚನೆಗೆ ನಾವೆಲ್ಲರೂ ಸಹಿ ಮಾಡಿದ್ದೇವೆ. ನಮಗೂ ಅವರು ಕಳಿಸಿರುವ ಸೂಚನೆಗೂ ಯಾವ ತರಹ ಭಿನ್ನಾಭಿಪ್ರಾಯವೂ ಇಲ್ಲ ಎನ್ನುವ ಮಾತನ್ನೂ ಸ್ಪಷ್ಟಪಡಿಸುತ್ತೇನೆ. ಈ ದಿವಸ ಕಾವೇರಿ ಬೇಸಿನ್‌ನಲ್ಲಿರುವ ಕಾರ್ಯಗಳನ್ನು ಪೂರ್ಣ ಮಾಡಬೇಕು ಎನ್ನುವ ನಿರ್ಣಯ ಬಂದಿದೆ. ಅಪ್ಪರ್ ಕೃಷ್ಣ ಯೋಜನೆಗೆ 20 ಕೋಟಿ ರೂಪಾಯಿ ಮತ್ತು 10 ಕೋಟಿ ರೂಪಾಯಿ ಕಾವೇರಿ ಬೇಸಿನ್‌ಗೆ ಕೊಡಬೇಕು ಎನ್ನುವ ನಿರ್ಣಯ ಈ ಸಭೆಯಮುಂದೆ ಹಿಂದೆ ಬಂದಿತ್ತು. ಈ ಹೊತ್ತು ಕಾವೇರಿ ಬೇಸಿನ್ ಬಗ್ಗೆ ಎಷ್ಟು ಆತುರತೆ ಇದೆಯೋ ಅದಕ್ಕಿಂತ ಹೆಚ್ಚು ಆತುರತೆ ಕೃಷ್ಣ ಬೇಸಿನ್‌ಗೆ ಇದೆ ಎಂದು ನಾನು ಸ್ಪಷ್ಟಪಡಿಸಬೇಕಾಗಿದೆ. ಕಾವೇರಿ ನೀರಿನ ಒಪ್ಪಂದ 1974 ಕ್ಕೆ ಮುಗಿಯುಬಹುದು. ಆದರೆ ಕೃಷ್ಣ ಗೋದಾವರಿ ನೀರಿನ ಬಗ್ಗೆ ಒಂದು ಟ್ರಿಬ್ಯುನರ್ ರಚನೆಯಾಗಿದೆ. ಅದರ ತೀರ್ಮಾನ ಬರುವುದಕ್ಕೆ ಮುಂಚಿತವಾಗಿ, ನೀರಿನ ಅಲಾಟ್‌ಮೆಂಟ್ ಆಗುವುದಕ್ಕೆ ಮೊದಲೇ ನಾಗಾರ್ಜುನ ಸಾಗರವನ್ನು ಆಂಧ್ರದವ್ರಲ್ಲಿ ಕಟ್ಟಿದ್ದಾರೆ. ಅದರ ಎರಡು ಹಂತದ ಕಾರ್ಯವಾಗಿದೆ. ಇಂಥ ಪರಿಸ್ಥಿತಿಯಲ್ಲಿ ನಾವು ಏನೂ ಕೆಲಸವನ್ನು ತೆಗೆದುಕೊಳ್ಳದೆ ಹಾಗೆಯೇ ಇದ್ದೇವೆ. ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ 1.76 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದು ಸಂಬಳಸಾರಿಗೆಗಳಿಗಾಗಿ ಖರ್ಚಾಗಿರಬಹುದು. ಐದನೇ ಹಣಕಾಸಿನ ಆಯೋಗದ ವರದಿ ಬರಲಿ ಎಂದು ಹೇಳಿದರು, ಅದೂ ಆಯಿತು. ಈಗ ಯಾವುದೋ ಇನ್ನೊಂದು ರಿಸೋರ್ಸಸ್ ಕಮಿಟಿ ರಿಪೋರ್ಟ್ ಬರಬೇಕು ಎಂದು ಹೇಳುತ್ತಾರೆ. ಅದು ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಕಾವೇರಿ ಬೇಸಿನ್ ಮತ್ತು ಕೃಷ್ಣ ಬೇಸಿನ್ ಇವೆರಡರ ಬಗ್ಗೆಯೂ ಸಭೆಯಲ್ಲಿ ಚರ್ಚೆಯಾಗಬೇಕು, ಸರ್ಕಾರ ತನ್ನ ಖಚಿತವಾದ ಅಭಿಪ್ರಾಯವನ್ನು ಸ್ಪಷ್ಟಪಡಿಸಬೇಕು, ಕೃಷ್ಣ ಬೇಸಿನ್‌ನಲ್ಲಿರುವ ಮತ್ತು ಕಾವೇರಿ ಬೇಸಿನ್‌ನಲ್ಲಿರುವ ಎಲ್ಲ ಒಕ್ಕಲುತನ ಮಾಡುವ ಜನರಿಗೂ ನ್ಯಾಯ ದೊರೆಯಬೇಕು ಎನ್ನುವಂಥ ಮಾತನ್ನು ಪ್ರತಿಪಾದಿಸುವುದಕ್ಕೆ ಒಂದು ಅವಕಾಶವನ್ನು ಈ ಸಭೆಯಲ್ಲಿ ತಾವು ಒದಗಿಸಿಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಒಂದು ಕ್ರಿಯಾತ್ಮಕ ಸ್ವಾಮಿ, ಸಭೆಯಲ್ಲಿ ಯಾವ ಕಾರ್ಯಕಲಾಪಗಳೂ ನಡೆಯುತ್ತಿಲ್ಲ. ನಮ್ಮ ಅಜೆಂಡಾದಲ್ಲಿರುವ ಪ್ರಕಾರ ಕಾರ್ಯಕ್ರಮ ನಡೆಸಬೇಕೇ ಹೊರತು ಅದರಲ್ಲಿಲ್ಲದ ವಿಚಾರಗಳನ್ನು ಪದೇ ಪದೇ ಪ್ರಸ್ತಾಪ ಮಾಡಿ ಕಾಲ ತಳ್ಳಿಕೊಳ್ಳುವುದಾದರೆ ನಡೆಯಬೇಕಾದ ಯಾವ ಕಾರ್ಯಕಲಾಪವೂ ಅಜೆಂಡಾದಂತೆ ನಡೆಯುವುದಿಲ್ಲ. ಅದುದರಿಂದ ಅಜೆಂಡಾದಲ್ಲಿರುವಂತೆ ಕಾರ್ಯಕ್ರಮ ನಡಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಚನ್ನಯ್ಯ.—ಅವನ್ನು ಒಪ್ಪುತ್ತೇವೆ. ಆದರೆ ಒಂದು ಸೂಚನೆ ಕೊಟ್ಟು 8–10 ದಿವಸವಾಗಿದೆ.

Mr. SPEAKER.—I accept the point raised by the Hon. Minister for Parliamentary Affairs. Some hon. Members have given notice of certain special motions. So they wanted a minute or two to speak on them. But it is necessary because I am going to admit those motions for discussion.

Sri D. M. SIDDIAH.—I rise to a point of order. I was listening to what was going on for the last few minutes. May I humbly submit to the Chair to give a ruling so that the time available may be made use of to our best advantage? The Chair has given an indication, assuring the House that the Resolutions will be permitted. So, in the fitness of things, it is better a ruling is given instantaneously allowing the resolutions so that entire House can speak on them.

Mr. SPEAKER.—There is one difficulty. In all these resolutions there is no sense of urgency and therefore, they do not satisfy the conditions laid down in Rule 148. They are not of recent occurrence. Still I do not want to throttle discussion. At the same time, I do not want the rule to be flouted. If any hon. Member moves for the suspension of operation of Rule 148, I shall immediately give my consent.

Suspension of rule 148 for disscusion of the Resolutions *re*: the River Projects.

Sri S. SIVAPPA.—Under Rule 322, I move that Rule 148 (iv) be suspended for discussion of the Resolutions under advertence.

Mr. SPEAKER.—The question is :

"That under Rule 322, Rule 148(iv) be suspended to enable discussion of resolutions pertaining to Cauvery and Upper Krishna Waters."

The motion was adopted.

Mr. SPEAKER.—There are a number of resolutions. One of them relates to the utilisation of the Cauvery water and the remaining four or five resolutions given notice of by Sriyuths : V. N. Patil, Siddiah Kasimath, N. A. Channe Gowda and a few other relate to Krishna and Godavari waters. All these resolutions are inter-related and so I shall allow a day for the discussion of all these resolutions.

Sri H. M. CHANNABASAPPA.—The resolutions that have been tabled in respect of Krishna, in respect of Cauvery and also the resolution tabled by me go together.

Mr. SPEAKER.—As regards the hon. Member's resolution I have one difficulty in admitting it. It pertains to the report of the Technical Committee. The Chair cannot act on copy of report which is not an authorised one. In view of the fact that other resolutions are there and hon. Members can discuss about it, is not necessary to take it up.

Sri H. M. CHANNABASAPPA.—I am coming to your point. I gave the motion last Friday and it was open to the Government to have supplied the report to you. Obviously, it has not been done and the Chair has not been supplied with it and I do not know whether the Chair called for it. In view of the fact that a discussion on the Cauvery Projects is going to be taken up and the purpose of my motion is the same and the report of the committee also expresses the same idea that the projects should be taken up before 1974. I have no objection.

3-00 P. M.

MR. SPEAKER.—The notice given by the hon. Member Sri Channabasappa is dropped.

SRI H. N. NANJE GOWDA.—I am on a point of order. The Chair has just now given the ruling and I am not questioning it. It has admitted the motions pertaining to Krishna and Cauvery after suspending rule 148 (4). The motions pertaining to Cauvery and Krishna have to be taken up seperately and I am not worried as to which should be taken up first. The problems of two basins are quite different and the House is quite anxious to understand the different problems in detail. We want to know what are the problems of Cauvery and Krishna basins and we want a categorical statement on Cauvery. Therefore a separate discussion will have to take place and separate assurance from the Government is necessary. According to rule 148 also, such motions should raise one definite issue. Krishna and Cauvery cannot be one issue. I think I am correct in raising this. Anyway the Speaker has admitted both the motions and I request the Speaker that one of the motions may be taken up today and the other motion the next day.

SRI V. N. PATIL.—The Krishna and Cauvery issues deal with the sharing of riparian rights and we are interested in discussing them together.

SRI H. M. CHANNABASAPPA.—I would like to add one word. The House is interested in the irrigation development in both the basins. The issues will have to be clinched. The motion pertaining to Cauvery deals with the idea that before 1974 some of the projects must be taken up and completed. A decision will have to be taken on that issue by this House. Again I am told that there is another motion a decision on which also has to be taken. Therefore if we commence discussion on the issues pertaining to the Cauvery and the issue pertaining to the Krishna it may be all right but at the time if we want to take a decision or put the matter to the vote of the House, they will have to be dealt with separately. Therefore, I submit there is some force in what the hon. member Sri Nanje Gowda has stated. We are happy that the Chair is in a mood to allow discussion on both the issues. I am grateful, the House is grateful and the State is also grateful. I submit that these motions may be put separately. Otherwise the issues cannot be clinched. I hope the Chair will see the force of my argument. I am anxious that this should not end in a fiasco. I therefore request the Chair to kindly allot separate times, whatever time we have at your disposal, for these issues, so that each motion may be discussed on its merit.

SRI K. PUTTASWAMY.—Sir, I am at a loss to know where exactly I stand. The Chair have been pleased to say that the resolutions are admitted. I suppose you Sir, would be fixing up some time for discussion of this resolution. Even though these resolutions are not before the House, certain other aspects arising out of those resolutions are being discussed in preference to the agenda that is before the House.

Mr. SPEAKER.—I am aware of it. Of course, we shall proceed immediately with the agenda. Since one or two points are raised, I shall give my ruling. I understand that one motion pertains exclusively to Cauvery and the other motion includes Cauvery, Krishna and Godavari also. The issue of Cauvery is common in both the motions. All of us are agreed about the need to take up irrigation projects in our State. There is no difficulty in considering and discussing both the motions together. For the sake of economy of time we should do it. As suggested by the hon. Member they will be put to vote separately.

ಶ್ರೀ ಎಚ್. ಎನ್. ನಂಜೇಗೌಡ.—ಸ್ಪೀಕರ್, ನಾವಾದರೂ ಸರ್ಕಾರದವರ ಮುಂದೆ ಇಂಥ ಒಂದು ಸೂಚನೆಯನ್ನು ಪತ್ರಕ್ಕಾಗಿ ತರುತ್ತೇವೆ ? ಸರ್ಕಾರದವರಿಂದ ಇಂಥ ವಿಚಾರದಲ್ಲಿ ಅವರ ನಿರ್ದಿಷ್ಟವಾದ ನಿಲುವು ಏನಿದೆ ಎಂಬುದನ್ನು ತಿಳಿಯುವುದಕ್ಕಾಗಿ ತರುತ್ತೇವೆ. ಇದಕ್ಕೆ ಸಂಬಂಧಪಟ್ಟ ರೂಲ್ಸ್ ನೇಮುಗಳನ್ನೆಲ್ಲಾ ನಾನು ಅರಿಕೆಮಾಡಿಕೊಂಡಿದ್ದೇನೆ. ಆದರೆ ಅಧ್ಯಕ್ಷರಾದ ತಾವು ಕೃಷ್ಣಾನದಿ ನೀರಿನ ವಿಚಾರ ಮತ್ತು ಕಾವೇರಿನದಿ ನೀರಿನ ವಿಚಾರ ಎರಡನ್ನೂ ಒಟ್ಟಿಗೆ ಕಲಬೆರಿಕೆ ಮಾಡಿ ಚರ್ಚೆ ಮಾಡಿ ಎಂದು ಹೇಳುತ್ತಿದ್ದೀರಿ. ಕೃಷ್ಣಾ ನದೀ ನೀರಿನ ಸಮಸ್ಯೆಯೇ ಬೇರೆ. ಕಾವೇರಿ ನದೀ ನೀರಿನ ಸಮಸ್ಯೆಯೇ ಬೇರೆ. ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರು ಅನೇಕ ವರ್ಷಗಳಿಂದ ಚರ್ಚೆ ಮಾಡಿ ಈ ಜಲಾಶಯಗಳೆಲ್ಲಾ ತ್ವರಿತವಾಗಿ ತೀವ್ರಗತಿಯಿಂದ ಆಗಬೇಕೆಂದು ಬಹಳ ಕಳಕಳಿಯಿಂದ ಹೇಳುತ್ತಿದ್ದಾರೆ. ಕಾವೇರಿ ನೀರಿನ ಬಗ್ಗೆ ನಾವು ಚರ್ಚೆಮಾಡುವುದಕ್ಕೆ ಸೂಚನೆಯನ್ನು ಕೊಟ್ಟಿದ್ದು ಯಾವಾಗ ? ಈ ಕೃಷ್ಣಾ ನೀರಿನ ಬಗ್ಗೆ ಚರ್ಚೆಗೆ ಸೂಚನೆಯನ್ನು ಕೊಟ್ಟಿರುವುದು ಯಾವಾಗ ? ತಮಗೆ ಇಂಥ ವಿಷಯಗಳ ಬಗ್ಗೆ 10 ದಿನಗಳ ಕೆಳಗೆ ಸೂಚನೆ ಕೊಟ್ಟರೂ ಒಂದೇ, ಈ ದಿವಸ ಕೊಟ್ಟರೂ ಒಂದೇ ಅನ್ನುವಂತಾಯಿತು. ಕೊನೆಗಾದರೂ ಅಧ್ಯಕ್ಷರು ಈ ಸೂಚನೆಯನ್ನು ಅಡ್ಮಿಟ್ ಮಾಡಿಕೊಂಡಿದುದಕ್ಕಾಗಿ ನಾನು ಅವರಿಗೆ ಚಿರಋಣಿಯಾಗಿದ್ದೇನೆ.

Mr. SPEAKER.—I have already given my ruling that there is no difficulty in discussing the matters together. The Government will give separate answers and the motions will be put to vote separately.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ವಿಷಯಗಳು ಎರಡೂ ಚರ್ಚೆಯಾಗಿವೆ. ತಮ್ಮ ಹಿಂದೆ ಇದ್ದಂಥ ಮಾನ್ಯ ಅಧ್ಯಕ್ಷರು ಒಂದು ದಿವಸ ಕಾವೇರಿ ವಿಷಯದಲ್ಲಿಯೂ ಇನ್ನೊಂದು ದಿವಸ ಕೃಷ್ಣಾ ಬೇಸಿನ್ ವಿಷಯದಲ್ಲಿಯೂ ಚರ್ಚೆಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದರು. ಏಕೆಂದರೆ ಎರಡಕ್ಕೂ ಅಂತರವಿದೆ. ಒಂದೇ ಚರ್ಚೆಯಲ್ಲಿ ಎರಡನ್ನೂ ವಿವರಿಸಿಕೊಂಡು ಹೋದರೆ ಅದು ವ್ಯತ್ಯಾಸವಾಗುತ್ತದೆ.

ಶ್ರೀ ಎಸ್. ಭೀಮಣ್ಣ.—ಒಂದು ಸಾರಿ ಅಧ್ಯಕ್ಷರು ರೂಲಿಂಗ್ ಕೊಟ್ಟನಂತರ ಮತ್ತು ಈ ಚರ್ಚೆ ಒಟ್ಟಿಗೆ ನಡೆಯುವುದರಿಂದ ಗೊಂದಲವಿದೆಯೆಂದು ಕಾಣುತ್ತದೆ. ಈಗ ಈ ಎರಡನ್ನೂ ಒಟ್ಟಿಗೆ ಚರ್ಚೆ ಮಾಡಬೇಕೆಂದು ಹೇಳಿದರೆ ನಿಜವಾಗಿ ಗೊಂದಲವಾಗುತ್ತದೆ. ಒಂದೊಂದು ದಿವಸ ಬೇರೆಬೇರೆ ಕಾಲದಲ್ಲಿ ಪ್ರತ್ಯೇಕವಾಗಿ ಅವನ್ನು ಚರ್ಚೆಮಾಡಿ ಅವುಗಳ ವಿವರಗಳನ್ನು ಚೆನ್ನಾಗಿ ತಿಳಿದು ಕೊಳ್ಳುವುದು ಒಳ್ಳೆಯದು.

ಅಧ್ಯಕ್ಷರು.—ಕಾವೇರಿ ನೀರಿನ ಬಗ್ಗೆ ಪ್ರತ್ಯೇಕವಾಗಿ ಅವಕಾಶ ಕೊಡಬೇಕೆಂದು ಹೇಳುವುದು ಸರಿಯಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಅವರು ಹೇಳಿದ ಪ್ರಕಾರ ಒಟ್ಟಿಗೆ ಸೇರಿಸಿದ್ದೀರಿ. ನಿರ್ಣಯಕ್ಕೇನೋ ಮನ್ನಣೆ ಕೊಡುತ್ತೀರಿ. ಆದರೆ ಕಾವೇರಿಗೆ ಮತ್ತು ಕೃಷ್ಣಾಗೆ ಬೇರೆಬೇರೆ ಅವಕಾಶವನ್ನು ಕೊಟ್ಟಿಲ್ಲವೆಂದು ನಾನು ಹೇಳಬೇಕಾಗಿದೆ. ನಾನು 8—10 ದಿವಸಗಳ ಮೊದಲೇ ಸೂಚನೆ ಕೊಟ್ಟಿದ್ದೆ. ಯಾವುದೋ ಕಾರಣದಿಂದ ಇಲ್ಲಿ ಇದರ ಚರ್ಚೆಗೆ ಅವಕಾಶವಾಗಲಿಲ್ಲ. ಮಾನ್ಯ ಶ್ರೀ ಚನ್ನಬಸಪ್ಪನವರೂ ಕೂಡ ಬೇರೆ ರೂಪದಲ್ಲಿ ಕೊಟ್ಟರು. ಅದೂ ಸಹ ಇಲ್ಲಿ ಚರ್ಚೆಗೆ ಬರಲು ಅವಕಾಶವಾಗಲಿಲ್ಲ. ಇಪತ್ತು 50 ಜನರು ರುಜುಮಾಡಿ ನಿರ್ಣಯ ಕೊಟ್ಟಿದ್ದೇವೆ. ಪ್ರತ್ಯೇಕವಾಗಿ ಚರ್ಚೆಮಾಡದೆ ಒಟ್ಟಿಗೆ ಚರ್ಚೆಮಾಡುವುದು ಗೊಂದಲವಾಗುತ್ತದೆ. ಆದ್ದರಿಂದ ಒಂದೊಂದಾಗಿ ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲ್ಲದಿದ್ದರೆ ಈ ಚರ್ಚೆ ಸಮನ್ವಯವಾಗುವುದಿಲ್ಲ. ಪ್ರತ್ಯೇಕವಾಗಿ ಚರ್ಚೆಮಾಡುವುದಕ್ಕೆ ಅವಕಾಶ ಕೊಡದೇ ಇರಲು ಕಾರಣವೇನು? ಹಿಂದೆ ಆ ರೀತಿ ಅವಕಾಶ ಕೊಟ್ಟಿದ್ದಾರೆ. ಅದನ್ನು ಅನುಸರಿಸಿ ಒಂದೊಂದು ದಿವಸ ಪ್ರತ್ಯೇಕವಾಗಿ ಚರ್ಚೆಮಾಡುವುದಕ್ಕೆ ಅವಕಾಶಕೊಡುವುದು ಸೂಕ್ತ. ತಾವು ಪುನರಾಲೋಚನೆ ಮಾಡಬೇಕೆಂದು ತಮ್ಮನ್ನು ಪ್ರಾರ್ಥಿಸುತ್ತೇನೆ.

ಶ್ರೀ ಎಚ್. ಎಮ್. ಚನ್ನಬಸಪ್ಪ.—ತಮ್ಮ ರೂಲಿಂಗಿಗೆ ಮನ್ನಣೆ ಕೊಡುವುದು ನಮ್ಮ ಇಚ್ಛೆ ಮತ್ತು ನಮಗೆ ಆ ರೀತಿ ಅಸಕ್ತಿ ಇದೆ. ಸೆಕ್ಷನ್ 148 (1) ರ ಪ್ರಕಾರ ನಾವು ಒಂದು ಡಿಫಿನಿಟ್ ಇಷ್ಯೂವನ್ನು ರೈಜ್ ಮಾಡಿದ್ದೇವೆ. ಅದು ಕಾವೇರಿನದಿಗೆ ಸಂಬಂಧಪಟ್ಟಹಾಗೆ ಇಂತಿಂಥ ಪ್ರಾಜೆಕ್ಟ್‌ಗಳನ್ನು ಇಂತಿಂಥ ಕಾಲದಲ್ಲಿ ಹೀಗೇ ಮಾಡಬೇಕೆಂಬುದು. ಇದು ಸಬ್‌ಸ್ಟಾನ್ಷಿಯಲ್ ಇಷ್ಯೂ. ಈ ಇಷ್ಯೂವನ್ನು ಕನ್‌ಸಿಡರ್ ಮಾಡುವುದು ಒಂದು ವಿಷಯ. ತಾವು ಅದನ್ನು ಆಡ್ಮಿಟ್ ಮಾಡಬೇಕು ಎಂಬುದಾಗಿ ಹೇಳಿ ಆಡ್ಮಿಟ್ ಮಾಡಿದ್ದೀರಿ. ಬಹಳ ಸಂತೋಷ. ಆದರೆ ಒಂದು ಇಷ್ಯೂ ಜೊತೆಗೆ ಇನ್ನೊಂದು ಇಷ್ಯೂವನ್ನು ಸೇರಿಸಿ ಅದರ ಮೇಲೆ ವಾಖ್ಯಾನ ಮಾಡುವುದು ಸಾಧುವಾದುದಲ್ಲ. ನಾನು ಕೃಷ್ಣಾ ವಿಷಯದಲ್ಲಿ, ಕಾವೇರಿ ವಿಷಯದಲ್ಲಿ, ಎಲ್ಲದರಲ್ಲೂ ವಾದ ವಿವಾದಗಳನ್ನು ನಡೆಸಿದ್ದೇನೆ. ಕಾವೇರಿಗೆ ಸಂಬಂಧಪಟ್ಟ ಅಂಶಕ್ಕೂ ಕೃಷ್ಣಾ ನದಿಯ ಅಂಶಕ್ಕೂ ವ್ಯತ್ಯಾಸ ಇದೆ. ಅದನ್ನು ಬೇರೆ ಬೇರೆ ದೃಷ್ಟಿಯಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಆದ್ದರಿಂದ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಏನೆಂದರೆ, ಎಲ್ಲವನ್ನೂ ಚರ್ಚೆ ಮಾಡುವುದು ಅದು ಇರಿಗೇಶನ್ ಡೆವಲಪ್‌ಮೆಂಟ್ ಇನ್ ಮೈನೂರು ಎನ್ನುವ ಬಗ್ಗೆ. ಪೋಷಿನಿನಲ್ಲಿ ಕಾವೇರಿ ಡೆವಲಪ್‌ಮೆಂಟ್ ಪೋಷನ್ ಒಂದು, ಕೃಷ್ಣಾ ಡೆವಲಪ್‌ಮೆಂಟ್ ಪೋಷನ್ ಒಂದು. ಎರಡನ್ನೂ ಏಕ ಕಾಲದಲ್ಲಿ ಚರ್ಚೆ ಮಾಡಿದರೆ, ಒಂದಕ್ಕೊಂದು ಘರ್ಷಣೆಯಾಗುತ್ತದೆ; ಒಂದಕ್ಕೊಂದು ಅನ್ವಯವಾಗುವುದಿಲ್ಲ. ಆದಕಾರಣ ಈ ಒಂದು ಇಶ್ಯೂ ಏನಿದೆ, ಅದನ್ನು ಪರ್ಮಿಟ್ ಮಾಡಿ, ಅದನ್ನು ಚರ್ಚೆ ಮಾಡೋಣ, ಅದರಮೇಲೆ ಒಟ್ಟಿಗೆ ಹ ಕೆ ಕೃಷ್ಣಾ ನದಿಯ ವಿಚಾರವನ್ನೂ ಕೊಟ್ಟಿದ್ದಾರೆ, ಅದನ್ನು ಬೇಕಾದರೆ ಚರ್ಚೆ ಮಾಡೋಣ. ಅದಲ್ಲದೆ ಎರಡನ್ನೂ ಒಟ್ಟಿಗೆ ಮಾಡಿ ಅಂದರೆ, ಅದು ಸರಿಹೋಗುವುದಿಲ್ಲ ಮತ್ತು ಮಾಡುವುದಕ್ಕಾಗುವುದಿಲ್ಲ, ಕಷ್ಟವಾಗುತ್ತದೆ.

Mr. SPEAKER.—I have fully understood the hon. Members. There is one motion exclusively relating to Cauvery Basin and there are half a dozen motions relating to Cauvery, Krishna and Godavari basins. According to the Hon. Member's suggestion on the first day the motion on Cauvery Basin may be discussed, and the second motion may be taken up separately. Hon. Members may think about it. There will not be any confusion. The Hon. Minister will reply to the debate on both the motions and as suggested by the hon. Member Sri Channabasappa, I shall see that both the motions are put to vote separately. So, let the matter be taken as closed. I shall call the hon. Members to my chamber as regards the allotment of days for discussion.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಂತಿಂಥದನ್ನು ಇಂತಿಂಥ ಕಾಲದವರೆಗೆ ತೆಗೆದುಕೊಳ್ಳಬೇಕು ಎಂದು ಮಾಡಬೇಕು, ಇಲ್ಲದೆ ಹೋದರೆ ಗೊಂದಲವಾಗುತ್ತದೆ.

Sri S. SIVAPPA.—The Chair has agreed to take votes on the two motions separately and my friends want that time should be allocated to the two motions in such a way that there will be two separate decisions.

Notice of Adjournment motion *re*: Strike by the Students of the Bangalore University

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸ್ವಾಮಿ, ನಾನು ಶ್ರೀಮಾನ್ ಕೃಷ್ಣನ್ ಅವರು ಮತ್ತು ಶಾಮಣ್ಣನವರು ಹಾಗೂ ಗಂಗಾಧರ್ ಅವರೂ ಸೇರಿ ಬೆಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಸ್ಟ್ರೈಕ್ ಮಾಡುತ್ತಿರುವ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿ

ಸಿದ್ದೇವೆ. ಇವೊತ್ತು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಒಂದು ಕಲುಷಿತ ವಾತಾವರಣ ನೃಷ್ಟಿಯಾಗಿದೆ. ಈ ಬಗ್ಗೆ ವಿದ್ಯಾರ್ಥಿಗಳು ನಿನ್ನೆ ದಿವಸ ಒಂದು ಪ್ರಚಂಡ ಪೆರವಣಿಗೆಯನ್ನು ನಡೆಸಿದ್ದಾರೆ. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರದವರಿಗೆ ಸಲಹೆ ಮಾಡುವುದು ಏನೆಂದರೆ ಸರ್ಕಾರದವರು ಮತ್ತು ವಿಶ್ವವಿದ್ಯಾನಿಲಯದವರು ಒಂದು ಕಾನ್‌ಫರೆನ್ಸ್ ಮಾಡಿ ವಿಚಾರ ಮಾಡಿ ಒಂದು ಇತ್ಯರ್ಥ ಮಾಡಿ ವಿಶ್ವವಿದ್ಯಾನಿಲಯದಲ್ಲಿ ಶಾಂತಿ ವಾತಾವರಣವನ್ನು ಕಲ್ಪಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳು ಈಗ ಈ ಸಭೆಯಲ್ಲಿ ಇದ್ದಾರೆ, ಅವರು ಇದನ್ನು ಸ್ವಲ್ಪ ಗಮನಿಸಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—The notice was received at 12 O'clock. It should have come 2 hours before the commencement of the sitting.

Secondly, it has been ruled from time to time in this House that strike cannot be the basis for any adjournment motion and so I do not admit the motion.

ಶ್ರೀ ವಾಟಾಳ್ ನಾಗರಾಜ್.—ವಿದ್ಯಾರ್ಥಿಗಳ ಚಳುವಳಿಯ ಬಗ್ಗೆ ಸರ್ಕಾರದವರು ಒಂದು ಹೇಳಿಕೆ ಕೊಟ್ಟು ಏನಾದರೂ ಒಂದು ತೀರ್ಮಾನ ಮಾಡಬೇಕು.

Mr. SPEAKER.—Ruling is given that consent is not given. Strike cannot be a subject matter for an adjournment motion. I do not give my consent.

ಶ್ರೀ ಎಂ. ಎಸ್. ಕೃಷ್ಣನ್.—ನಾನು ನಿಮ್ಮ ರೂಲಿಂಗ್‌ನ ವಿರುದ್ಧ ಹೋಗುತ್ತಿಲ್ಲ. ನಮ್ಮ ಸೂಚನೆ ಏನೆಂದರೆ ಇದು ಬಹಳ ಮುಖ್ಯ ವಿಷಯವಾಗಿರುವುದರಿಂದ ಸರ್ಕಾರದವರು ಒಂದು ಹೇಳಿಕೆ ಕೊಟ್ಟರೆ ಒಳ್ಳೆಯದು ಎಂದು ಕೇಳುತ್ತಿದ್ದೇವೆ. ಅಲ್ಲಿ ಎರಡು ಗುಂಪುಗಳು ಇವೆ. ಎರಡು ಗುಂಪುಗಳಿಗೂ ಘರ್ಷಣೆಯಾಗುವ ಸಂಭವವಿದೆ. ಒಂದು ಗುಂಪಿನವರು ಸ್ಟ್ರೈಕ್ ಮಾಡಬೇಕೆಂದು ಹೊರಟಿದ್ದಾರೆ. ಇನ್ನೊಂದು ಗುಂಪಿನವರು ಅದಕ್ಕೆ ವಿರೋಧವಾಗಿದ್ದಾರೆ. ಲಂಚಗುಳಿತನ ವಿಶ್ವವಿದ್ಯಾನಿಲಯದಲ್ಲಿ ಇದೆ ಎಂದು ಹೇಳುತ್ತಿದ್ದಾರೆ. ಅದು ನಮಗೆ ಗೊತ್ತಿಲ್ಲ. ವಿದ್ಯಾಮಂತ್ರಿಗಳು ಈ ಬಗ್ಗೆ ಒಂದು ಸ್ಟೇಟ್‌ಮೆಂಟ್ ಕೊಡಬೇಕೆಂದು ನಾವು ಕೇಳುತ್ತಿರುವುದು ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ. ಮತ್ತು ಇದು ಒಂದು ಪ್ರಾಮುಖ್ಯವಾದ ವಿಷಯ ವಾದ್ದರಿಂದ ನಾನು ತಮ್ಮ ಗಮನವನ್ನು ಸೆಳೆಯಬೇಕಾಯಿತು.

Mr. SPEAKER.—I have heard the hon. Member. I have disallowed the motion. I stand by my decision. I do not give my consent to the motion.

Sri H. SIDDAVEERAPPA.—Reverting back to the earlier subject that was under discussion when Sri Vatal Nagaraj intervened, namely, the question whether to allow one common debate or separate debates as has been urged by my friend Sri Channabasappa, if we carefully examine the issues involved and also the points that may come up for discussion, I personally feel in the interests of all concerned and in the interests of clarity of thought and also for understanding the problems of the two basins, they must be separately discussed so that each case may be highlighted and the two resolutions may be examined in their proper perspective. The motion on Cauvery basin may be taken up first or later. It does not matter when it is taken up, but in the other motion reference to Cauvery may be deleted so that there may be two separate motions. Separate timings may be given for their discussion. If only one day is allotted for the discussion, you may allot different timings for the two resolutions so that members may have their full say on each of the two separate resolutions and leave the decision to the

House. If both the motions are discussed together it may be something like a general discussion of the budget where all matters crop up and in which the important issue may be lost sight of. The Chair may please examine this aspect.

Mr. SPEAKER.—I shall consider.

Papers laid on the Table

Sri B. VITHALDAS SHETTY (Minister of State for Food and Civil Supplies).—Sir, I beg to lay on the Table of the House, a costing sheet of Jawar in pursuance of answer given to starred question No. 66 on 25th August 1969*.

Nineteenth Report of the Business Advisory Committee

(Presentation)

Mr. SPEAKER.—I present the Nineteenth Report of the Business Advisory Committee.

Sri D. MANJUNATH (Hiriyur).—Sir, I move :

"That this Assembly agrees with the 19th report of the the Business Advisory Committee."

Mr. SPEAKER.—The question is :

"That this Assembly agrees with the Nineteenth Report of the Business Advisory Committee."

The motion was adopted.

Mr. SPEAKER.—The report is adopted.

3.00 P.M.

Bills for Introduction

Sri K. PUTTASWAMY.—Sir, the Hon. Minister for Finance is in the Upper House. May I request the Chair to take up the Legislative Business now and thereafter the Appropriation Bill ?

Mr. SPEAKER.—Yes.

* Copy laid in the Mysore Legislature Library.

Mysore Irrigation (Levy of Betterment Contribution and Water Rate) (Amendment) Bill, 1969

Sri K. PUTTASWAMY.—On behalf of the Chief Minister Sir, I beg to move :

" That the Mysore Irrigation (Levy of Betterment Contribution and Water Rate) (Amendment) Bill, 1969, be taken into consideration."

Mr. SPEAKER.—Motion moved :

" That the Mysore Irrigation (Levy of Betterment Contribution and Water Rate) (Amendment) Bill, 1969, be taken into consideration."

Sri H. N. NANJE GOWDA.—Sir, I rise on a Point of Order. The Mysore Irrigation (Levy of Betterment Contribution and Water Rate) (Second Amendment) Bill, 1968, was introduced in this House on 3rd September 1968. This Bill purports to amend the same clauses of the original Bill.

Mr. SPEAKER.—That Bill is not before the House; it has lapsed.

Sri H. N. NANJE GOWDA.—Sir, I have another Point of Order. Article 199 (1) (a) says :

"The imposition, abolition, remission, alteration or regulation of any tax."

This Bill purports to regulate the tax. The other side may plead that under the original Act, Rs. 500 per acre is already levied and therefore it cannot be a Finance Bill. My submission is that the mode of collection is regulated. According to the original Act, it would have been collected only after the completion of the project or 10 or 15 years thereafter. By this Bill we are regularising the payment of this particular tax even before the completion of the Project, and therefore, it comes under Article 199 (1) (a). There is no recommendation of the Governor for this Bill. Therefore, please do not permit this Bill for the consideration of the House.

Sri K. PUTTASWAMY.—The recommendation of the Governor has already been received.

†Sri H. M. CHANNABASAPPA.—Sir, I would like to point out that this House may not be competent to take up this Bill. This Bill purports to provide for enforcement of payment of the betterment levy before the project is constructed and benefits accrue to the parties. It also purports to say, whether a person has agreed or not, he will be bound to pay the contribution contemplated by the Notification issued by the Government before actually he receives any benefit at all. It would be a step, which is, in my humble opinion, *ultra vires* of the Constitution. The Bill says that if 66 per cent of the people holding lands agree to make payment in advance, the rest of the 33 people are

deemed to have agreed and they will be called upon to pay the advance contribution before any benefits accrue to them. There is no binding on the part of the Government to specify the dates on which the benefits will accrue to him nor is there an assurance of that kind. Article 19 (f) is clear on the point that all citizens shall have the right to acquire, hold and dispose of the property. It is also said that any law that is passed by this House should not restrict the reasonable rights that a person enjoys on his property. You can only impose certain reasonable restrictions and not take away the right altogether.

MR. SPEAKER.—Then what is the hon. Member's constitutional objection ?

SRI H. M. CHANNABASAPPA.—My constitutional objection is that it is not in order to impose certain restrictions on a man or call upon a man who has not agreed to make a payment, to make a payment although the benefits are not given to him, in anticipation of certain benefits that might accrue later. This Bill purports to force the man to agree to pay advance payment. Therefore, it would be *ultra vires* of the Constitution to pass such a Bill in this House and I am afraid this House may not be competent to pass this Bill into law.

SRI K. PUTTASWAMY.—I just want to bring to your kind notice sub-clause (5) of article 19 of the Constitution. Hon. Member Sri Channabasappa pointed out that every person is entitled to acquire, hold and dispose of property as per article 19 (1) (f) and that is a fundamental right guaranteed by the Constitution. He seems to feel that enacting a law of this nature would come in the way of freedom to acquire, hold and dispose of property. Perhaps he did not notice the existence of sub-clause (5) of article 19 which reads as follows :

> "19. (5) Nothing in sub-clauses (d), (e) and (f) of the said clause shall affect the operation of any existing law in so far as it imposes, or prevents the State from making any law imposing, reasonable restrictions on the exercise of any of the rights conferreed by the said sub-clauses either in the interests of the general public or for the protection of the interests of any Scheduled Tribe."

Sir, the Bill that we have placed before this House lays reasonable restrictions on the right of the person to acquire, hold and dispose of property and that is in the interest of the public and therefore it does not violate article 19 (1) (f) as pointed out by hon. Member Sri Channabasappa.

MR. SPEAKER.—I have heard both the hon. Member and the Hon. Minister. As regards the point in regard to recommendations of the Governor under article 207 of the Constitution, I would like to bring to the notice of the Hon. House that the recommendation of the Governor has already been received. I shall bring that recommendation to the notice of the House within a short time.

(MR. SPEAKER)

As regards the constitutional point raised by the hon. Member Sri Channabasappa, there is nothing to show that unreasonable restrictions have been laid on the persons to hold, acquire or dispose of property and even the property could be mortgaged and money obtained from the bank if the person so desires. There is no compulsion laid on any person. The Bill is in the interest of the general public. Therefore there is no constitutional point as mentioned by the hon. Member Sri H. M. Channabasappa. If the hon. Member wants to oppose this measure, he is quite welcome and he may do so during the debate on the Bill.

Hon. Members Sri H. N. Nanje Gowda and Sri Doddaboregowda have given notice of a motion for circulation of the Bill in order to elicit public opinion. The hon. Member Sri Nanje Gowda may move the motion.

Sri H. N. NANJE GOWDA.—Sir, I beg to move:

"That the Mysore Irrigation (Levy of Betterment Contribution and Water Rate) (Amendment) Bill, 1969 be circulated for purposes of eliciting public opinion."

Mr. SPEAKER.—Motion moved:

"That the Mysre Irrigation (Levy of Betterment Contribution and Water Rate) (Amendment) Bill, 1969 be circulated for purposes of eliciting public opinion."

Both the consideration motion and the motion for circulation of the Bill are before the House for discussion.

[MR. DEPUTY SPEAKER in the Chair].

† ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಈ ಮಸೂದೆಯನ್ನು ಈ ಸಭೆಯ ಪರಿಶೀಲನೆಗೆ ಮುಂಡಿಸುತ್ತಾ ಕೆಲವು ಪ್ರಾಮುಖ್ಯವಾದ ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಭೆಯಲ್ಲೂ ಹಾಗೂ ಅನೇಕ ಸಾರ್ವಜನಿಕರ ಸಭೆಗಳಲ್ಲೂ ಮೈಸೂರು ರಾಜ್ಯದಲ್ಲಿರತಕ್ಕಂಥ ದೊಡ್ಡ, ಸಣ್ಣ ಮತ್ತು ಮಧ್ಯಮ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂಬ ಒತ್ತಾಯ ಇದೆ. ಸ್ವಾಮಿ, ತಮಗೆ ತಿಳಿದಂತೆ ರಾಜ್ಯದಲ್ಲಿ ಆಹಾರ ಅಭಾವ ಇದೆ ಮತ್ತು ನಮ್ಮ ರಾಜ್ಯದಲ್ಲಿ ಇರುವ ನೀರಾವರಿ ಬಹಳ ಕಡಿಮೆ. ಶೇಕಡ 10 ಭಾಗ ಕೂಡ ಇಲ್ಲ. ಅಂಥಾದ್ದರಲ್ಲಿ ನಮ್ಮಲ್ಲಿರತಕ್ಕಂಥ ನೀರಾವರಿ ಆಶ್ರಯದಲ್ಲಿ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳನ್ನೂ, ಮಧ್ಯಮ ಹಾಗೂ ಸಣ್ಣ ನೀರಾವರಿ ಕಾಮಗಾರಿಗಳನ್ನೂ ಆದಷ್ಟು ಜಾಗ್ರತೆ ಕೈಗೊಂಡು ಕಾರ್ಯವನ್ನು ಮುಗಿಸುವುದು ಅತ್ಯಗತ್ಯವಿದೆ. ಆದರೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕಾರ್ಯವನ್ನು ಕೈಗೆಳ್ಳಬೇಕಾಗಿರುವುದರಿಂದ ಅದಕ್ಕೆ ಬೇಕಾದಂಥ ನಂಪನ್ಮೂಲಗಳು ನಮ್ಮಲ್ಲಿ ಒದಗದೇ ಇರುವುದರಿಂದ ಅನೇಕ ಕಡೆ ಬೆಟರ್‌ಮೆಂಟ್ ಲೆವಿಯನ್ನು ಅಂದರೆ ತರೀ ಮೇಲೆ ಕೊಡಬೇಕಾದಂಥ ಕಾಂಟ್ರಿಬ್ಯೂಷನ್ನನ್ನು ಮುಂಗಡವಾಗಿ ಅನೇಕರು ಕೊಡುವುದಾಗಿ ಒತ್ತಾಯ ಮಾಡುತ್ತಿದ್ದಾರೆ. ಹಿಂದಿನ ಕಾನೂನು ಪ್ರಕಾರ ಮುಂಗಡವಾಗಿ ಕಾಂಟ್ರಿಬ್ಯೂಷನ್ ಕೊಟ್ಟರೆ ತೆಗೆದುಕೊಳ್ಳುವುದಕ್ಕೆ ಅವಕಾಶ ಇರಲಿಲ್ಲ. ಈ ವಿಚಾರವನ್ನು ಯಾವರೀತಿಯಾಗಿ ಮಾಡಬೇಕೆಂದು ಪರಿಶೀಲನೆ ಮಾಡುತ್ತಾ ಇದ್ದೆವು. ಮತ್ತು ಕೆ. ಆರ್. ನಗರದಲ್ಲಿ ದೊಡ್ಡ ರೈತರ ಸಭೆ ಸೇರಿ ಅವರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಾಗಿಯೂ ಮತ್ತು ಅಲ್ಲಿ ಹೊಸದಾಗಿ ಕಾಲುವೆ ಕೆಲಸಗಳನ್ನು ಕೂಡಲೇ ತೆಗೆದುಕೊಳ್ಳಲು

ವ್ಯಾಶನ್ಯ ಕೊಡಬೇಕೆಂದು ಸಹ ನಿರ್ಣಯವನ್ನೂ ಕೂಡ ಮಾಡಿದ್ದಾರೆ. ಮುಖ್ಯಮಂತ್ರಿಗಳಲ್ಲಿ ಅನೇಕ ಜನರು ಬಂದು ಅರಿಕೆ ಮಾಡಿಕೊಂಡಿದ್ದಾರೆ. ಮತ್ತು ಇದು ಅತ್ಯಂತ ಅಗತ್ಯವಾದುದು ಎಂದು ಈ ಸಭೆಯಲ್ಲೂ ಕೂಡ ಪ್ರಶ್ನೆಗಳ ಮೂಲಕ ಆಯವ್ಯಯದ ಅಂದಾಜಿನ ಸಮಯದಲ್ಲಿ ಅನೇಕ ಸದಸ್ಯರು ಸಲಹೆ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು ಕಳೆದ ವರ್ಷವೇ ಈ ಕಾನೂನಿನ ತಿದ್ದುಪಡಿ ತರಬೇಕಾಗಿತ್ತು ಎಂದು ಹೇಳಿದ್ದರು. ಅದನ್ನು ನಾವು ಈ ಸಭೆಯ ಪರಿಶೀಲನೆಗೆ ಇಡುವುದಕ್ಕೆ ಕೆಲವು ವಿಷಯಗಳನ್ನು ಪರಿಶೀಲಿಸಬೇಕಾಗಿದ್ದುದರಿಂದ ಆಗಲಿಲ್ಲ. ಅಲ್ಲಿಂದೀಚೆಗೆ ಇದನ್ನು ಪರಿಶೀಲಿಸಿ ಅನೇಕ ತಿದ್ದುಪಡಿಗಳನ್ನು ಮಾಡಿ ಈಗ ಈ ತಿದ್ದುಪಡಿಯನ್ನು ಸಭೆಯ ಮುಂದೆ ತಂದಿದ್ದೇವೆ. ಈ ತಿದ್ದುಪಡಿ ಮಸೂದೆಯಲ್ಲಿ ಕಡಿಗಿರತಕ್ಕಂಥ ವಿಚಾರಗಳನ್ನು ನಾನಾದರೂ ತಿಳಿಸುತ್ತೇನೆ. ಇದರಲ್ಲಿ ರೈತರ ವಾದಗ್ರಸ್ತವಾದಂಥ ಭಾವನೆ ಏನೂ ಇಲ್ಲ. ಮಾನ್ಯ ಶ್ರೀಮಾನ್ ಚೆನ್ನಬಸಪ್ಪನವರು ಇದು ರೈತರ ಮೇಲೆ ಒತ್ತಾಯ ಬರುತ್ತದೆ ಎನ್ನುವ ಮಾತನ್ನು ಹೇಳಿದರು. ಅವರು ಈ ಮಸೂದೆ ಮೇಲೆ ಮಾತನಾಡುವಾಗ ಯಾವರೀತಿ ರೈತರ ಮೇಲೆ ಪರಿಣಾಮವಾಗುತ್ತದೆ ಎನ್ನುವುದನ್ನು ವಿವರಿಸುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸಮಯದಲ್ಲಿ ಅವರ ಮೇಲೇನಾದರೂ ಅನ್‌ರೀಸನಬಲ್ ಆಗಿ, ಅನ್ಯಾಯದ ಹೊರೆ ಆದಪಕ್ಷದಲ್ಲಿ ಅವರು ಹೇಳುವಂಥ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಸರ್ಕಾರ ಹಿಂಜರಿಯುವುದಿಲ್ಲ ಎನ್ನುವ ಭರವಸೆಯನ್ನು ಕೊಡುತ್ತೇನೆ. ಈಗ ಇರುವ ಬಿಲ್ಲಿನಲ್ಲಿ ಬಹಳ ಸ್ಪಷ್ಟವಾಗಿದೆ. ಈಗ ಕಾಂಟ್ರಿಬ್ಯೂಷನ್ ಕೊಡಬೇಕಾದರೆ ಕಾಮಗಾರಿ ಕೆಲಸ ಮುಗಿದ ಮೇಲೆ, ಅವರಿಗೆ ನೀರು ಒದಗಿಸಿಕೊಟ್ಟ ಮೇಲೆ ಕಾಂಟ್ರಿಬ್ಯೂಷನ್ ವಸೂರ್ಮಾಡುತ್ತಿದ್ದೇವೆ. ಇದು ಕಂತುವಾರಾಗಿ 20 ಕಂತುಗಳಲ್ಲಿ ವಸೂರ್ಮಾಡಬಹುದು ಎಂದು ಇದೆ. ಈಗ ನಮಗೆ ಹೆಚ್ಚು ಸಂಪನ್ಮೂಲಗಳು ಇಲ್ಲದೆ ಅಗತ್ಯವಾದ ಕಾಮಗಾರಿಗಳನ್ನು ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ರೈತರು ನೀರಾವರಿಗೋಸ್ಕರ ಅರೆಯುತ್ತಿದ್ದಾರೆ. ಅದರಲ್ಲೂ ಕೆಲವು ಭಾಗದ ರೈತರು ನೀರಿಗಾಗಿ ತವಕ ಪಡುತ್ತಿದ್ದಾರೆ, ಜಾತಕ ಪಕ್ಷಿಯಂತೆ ಬಾಯಿಬಿಡುತ್ತಿದ್ದಾರೆ, ಅದಕ್ಕಾಗಿಯೇ ಮುಂಚಿತವಾಗಿಯೇ ಹಣವನ್ನು ಕಟ್ಟುವುದಕ್ಕೆ ಮುಂದೆ ಬಂದಿದ್ದಾರೆ. ಆದುದರಿಂದ ಈ ಮಸೂದೆಯಲ್ಲಿರತಕ್ಕಂಥಾದ್ದು, ಶೇಕಡ 66 ಭಾಗದ ಜನರು ಒಪ್ಪಿದರೆ ಅಂದರೆ ⅔ ಭಾಗದ ಜನರು ಮುಂಗಡವಾಗಿ ಹಣಕೊಡುವುದಕ್ಕೆ ಒಪ್ಪಿದರೆ ಆಮೇಲೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಎಂದು ಇದರಲ್ಲಿ ಇದೆ. ಹಾಗೇನಾದರೂ ನಾವು ತೆಗೆದುಕೊಳ್ಳತಕ್ಕ ಎಲ್ಲ ಕಾಮಗಾರಿಗಳಲ್ಲಿಯೂ ಕೂಡ ಇದೇ ಒಂದು ಪದ್ಧತಿಯನ್ನು ಅನುಸರಿಸುತ್ತೇವೆ ಎಂದು ಸದಸ್ಯರು ಯಾರೂ ಭಾವನೆ ಮಾಡಬಾರದು. ಸರ್ಕಾರದ ಕಾರ್ಯಕ್ರಮದಲ್ಲಿರತಕ್ಕ ಕೆಲಸಗಳಿಗೆ ಇದು ಅನ್ವಯವಾಗುವುದಿಲ್ಲ. ಈಗ ಸರ್ಕಾರದ ಕಾರ್ಯಕ್ರಮದಲ್ಲಿಲ್ಲದೆ, ಯಾವುದಾದರೂ ಒಂದು ಭಾಗದ ರೈತರು ಈ ಒಂದು ಪ್ರಯೋಜನವನ್ನು ಪಡೆದು, ಕಾಮಗಾರಿಯನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದರೆ ಆಗ ಮಾತ್ರ ಈ ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೆ ಅಪೇಕ್ಷೆ ಇದೆಯೇ ಹೊರತು ಬೇರೇನೂ ಇಲ್ಲ.

Sri H. SIDDAVEERAPPA.—According to Section 3-A, even if we have to proceed towards the completion with sufficient expedition in respect of the incompleted part or stage of the work, this advance contribution will be called for. You can ask for advance contribution in respect of the incompleted work according to this new section.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಮಾನ್ಯ ಸದಸ್ಯರಿಗೆ ಆಗಲೇ ಹೇಳಿದ್ದು, ಯಾವುದು ಸರ್ಕಾರದ ಕಾರ್ಯಕ್ರಮದ ಪಟ್ಟಿಯಲ್ಲಿಲ್ಲ ಅಂಥ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭದಲ್ಲಿ ಎಂದು. ಕಡಿನಿ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದರು. ಅದು ಸರ್ಕಾರದ ಕಾರ್ಯಕ್ರಮದ ಪಟ್ಟಿಯಲ್ಲಿದೆ. ಅದನ್ನು ಪೂರ್ಣಗೊಳಿಸತಕ್ಕ ಜವಾಬ್ದಾರಿ ಸರ್ಕಾರದ್ದಿದೆ. ಅಂಥದಕ್ಕೆ ಈ ಮಸೂದೆ ಅನ್ವಯವಾಗುವುದಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

Sri H. M. CHANNABASAPPA.—It amouuts to levying contribution. What is stated in Sub-section 1 (b) of Section 3A is this :

> "to proceed towards the completion with sufficient expedition in respect of the incompleted part or stage of the work, the construction, restoration, expansion or alteration of which the Government has already commenced and which is capable of irrigating more than one hundred acres of land."

ಶ್ರೀ ಕೆ. ಪುಟ್ಟಸ್ವಾಮಿ.—ಆ ವಿಚಾರವಿಲ್ಲ ಎಂದು ನಾನು ಹೇಳಲಿಲ್ಲ. ಸರ್ಕಾರದ ಕಾರ್ಯ ಕ್ರಮದ ಪ್ರಕಾರ ಯಾವ ಕಾರ್ಯಗಳನ್ನು ತೆಗೆದುಕೊಂಡು ಮುಗಿಸಬೇಕೆಂದು ಇರುತ್ತೋವೆ ಅದಕ್ಕೆ ಅನ್ಯಯವಾಗುವುದಿಲ್ಲ ಎಂದು ಸ್ಪಷ್ಟವಾಗಿ ಈ ವಿಚಾರದಲ್ಲಿ ನಾನು ಸಭೆಗೆ ಭರವಸೆ ಕೊಡುವುದಕ್ಕೆ ಅಪೇಕ್ಷೆಪಡುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾರಂಗಿ ಪ್ರಾರಂಭ ಮಾಡಿದ್ದೀರಿ, ಕಬಿನಿ ಪ್ರಾರಂಭ ಮಾಡಿದ್ದೀರಿ. ಹೇಮಾವತಿ ಪ್ರಾರಂಭ ಮಾಡಿದ್ದೀರಿ. ಕೆಲಸ ಯಾವ ಯಾವದೋ ಹಂತವಲ್ಲಿದೆ ಅವೆಲ್ಲ ಪೂರ್ತಿಯಾಗುವುದು ಅವಶ್ಯಕ, ನಮ್ಮಲ್ಲಿ ದುಡ್ಡಿಲ್ಲವಾದ್ದರಿಂದ ಇಂಥವುಗಳಿಗೂ ಅನ್ಯಯ ಮಾಡಬೇಕು ಎಂದು ಹೇಳಿದರೆ ಹಾಗೆ ಮಾಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ವಿಚಾರವಾಗಿ ಮಾನ್ಯ ಸದಸ್ಯರು ಮಾತನಾಡಲಿ. ಅವರಿಗೆ ಅಪಾರವಾದ ಅನುಭವವಿದೆ. ಅದರಲ್ಲಿಯೂ ಈ ದೇಶದಲ್ಲಿ ಬಿದ್ದುಂಥ ಪ್ರತಿಯೊಂದು ಹನಿ ನೀರಿನ ತೊಟ್ಟನ್ನೂ ರೈತನಿಗೆ ಉಪಯೋಗವಾಗುವಂತೆ ಮಾಡಬೇಕು ಎನ್ನುವ ಅಭಿಪ್ರಾಯ ಅವರದಾಗಿದೆ. ಸರ್ಕಾರ ಯಾವ ಉದ್ದೇಶದಿಂದ ಈ ಮಸೂದೆಯನ್ನು ಸಭೆಯ ಮುಂದೆ ಇಟ್ಟಿದೆಯೋ ಅದೇ ಉದ್ದೇಶವನ್ನು ಹೊಂದಿರತಕ್ಕ ಶ್ರೀಮಾನ್ ಚನ್ನಬಸಪ್ಪನವರು ಇದರ ಬಗ್ಗೆ ಹಿತವಾದ ಟೀಕೆಯನ್ನು ಮಾಡುತ್ತಾರೆ ಮತ್ತು ಈ ಮಸೂದೆ ಉತ್ತಮವಾದ ಕಾಯಿದೆ ಆಗುವುದಕ್ಕೆ ಸಹಾಯ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಸ್ವಾಮಿ, ನಾನು ಅರಿಕೆ ಮಾಡಿಕೊಳ್ಳುತ್ತಿದ್ದೆ, ಮೂರನೇ ಎರಡು ಭಾಗದ ಜನರು ಒಪ್ಪಿಗೆ ಕೊಟ್ಟ ಸಂದರ್ಭದಲ್ಲಿ ಮಾತ್ರ ಕಾರ್ಯವನ್ನು ತೆಗೆದುಕೊಳ್ಳುವುದು, ಇಲ್ಲದೆ ಇದ್ದರೆ ಇಲ್ಲ. ಅದರಲ್ಲಿಯೂ ಮೂರನೇ ಎರಡು ಭಾಗದ ಜನರು ಒಪ್ಪಿಗೆಯನ್ನು ಕೊಟ್ಟ ಮೇಲೆ ಕೂಡ ನಾಲ್ಕು ಕಂತಿನಲ್ಲಿ ಕೊಡುವುದಕ್ಕೆ ಒಪ್ಪಿರಬೇಕು, ಪ್ರಥಮ ಕಂತನ್ನು ಐದನೇ ಮೂರು ಭಾಗದ ಜನ ಕೊಡಬೇಕು. ಇಂಥ ಸಂದರ್ಭದಲ್ಲಿ ಮಾತ್ರ ಈ ಒಂದು ತಿದ್ದುಪಡಿ ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕಾಗುತ್ತದೆಯೇ ವಿನಾ ಇಲ್ಲದೆ ಇದ್ದರೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಈ ಮಸೂದೆಯನ್ನು ಮೊದಲು ತರಬೇಕೆಂದು ಅಪೇಕ್ಷೆ ಪಟ್ಟ ಕಾಲದಲ್ಲಿ ಅತಿ ದೊಡ್ಡ ದೊಡ್ಡ ಕಾಮಗಾರಿಗಳಿಗೆ ಅನ್ಯಯ ಮಾಡಬೇಕೆಂಬ ಉದ್ದೇಶವಿತ್ತು. ಆದರೆ ದೊಡ್ಡ ದೊಡ್ಡ ಕಾಮಗಾರಿಗಳನ್ನು ಮಾತ್ರ ಕೈಗೊಂಡರೆ ಯಾವ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದೇವೆಯೋ ಆ ಉದ್ದೇಶ ಸಫಲವಾಗುವಾರದು, ಕಾರ್ಯ ಕೈಗೂಡಲಾರದು ಎಂದು ತಿಳಿದು 100 ಎಕರೆಗೆ ಮೇಲ್ಪಟ್ಟ ಎಲ್ಲ ಕಾಮಗಾರಿಗಳಿಗೂ ಇದನ್ನು ಅನ್ಯಯ ಮಾಡಬೇಕೆಂಬ ಅಪೇಕ್ಷೆ ಸರ್ಕಾರಕ್ಕೆ ಬಂತು. ಈ ಮಸೂದೆ ಕಾನೂನಾದ ಮೇಲೆ ರೈತರು ಮುಂಗಡವಾಗಿ ಹಣ ಕೊಡುವ ಹಾಗೆ ಬಂದರೂ ಕೂಡ, ಸರ್ಕಾರದ ಉದ್ದೇಶವಾದರೂ ಕೂಡ ಅವರು ಕೊಡಬೇಕಾದ ಹಣವೇನಿರುತ್ತದೆ ಅದನ್ನು ಬ್ಯಾಂಕುಗಳ ಮೂಲಕ ಕೊಡಿಸಬೇಕು ಎಂಬ ಅಪೇಕ್ಷೆಯನ್ನು ಇಟ್ಟುಕೊಂಡಿದ್ದೇವೆ. ಮತ್ತೆ, ಆ ವಿಚಾರದಲ್ಲಿ ರೈತನ ಮೇಲೆ ಹೆಚ್ಚಿನ ಹೊರೆಯಾಗದಂತೆ ನೋಡಿಕೊಳ್ಳುವುದಕ್ಕೆ ಸರ್ಕಾರ ಸಿದ್ಧವಾಗಿದೆ. ಇದಕ್ಕೆ ಕಾನೂನು ಅಥವಾ ನಿಯಮಾವಳಿಯ ಅಡ್ಡಿ ಆದಚಣೆಯನ್ನು ತರದೆ ಸರ್ಕಾರ ಯಾವ್ಕೆ ಕಾತುರತೆಯಿಂದ ಸಭೆಯ ಮುಂದೆ ಇಟ್ಟಿದೆ ಅದೇ ಕಾತುರತೆಯಿಂದ ಈ ಮಾನ್ಯ ಸಭಾಸದಸ್ಯರು ಈ ವಿಚಾರದಲ್ಲಿ ಈ ಮಸೂದೆಯ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ಅವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

ನಾನು ಒಂದು ಆಶ್ವಾಸನೆಯನ್ನು ಕೊಡುವುದಕ್ಕೆ ಅಪೇಕ್ಷೆಪಡುತ್ತೇನೆ. ರೈತರಿಗೆ ಯಾವುದಾದರೂ ರೀತಿಯಲ್ಲಿ ಇದರಿಂದ ತೊಂದರೆಯಾಗುವುದಾದರೆ ಅದನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆ ಎನ್ನುವ ವಿಚಾರವನ್ನು ಸಭೆಯಲ್ಲಿ ಅರಿಕೆ ಮಾಡಿಕೊಂಡು ಈ ಮಸೂದೆಯನ್ನು ಪರಿಶೀಲಿಸಬೇಕೆಂದು ಕಳಕಳಿಯಿಂದ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ನಾಗಪ್ಪ (ರಾಯಚೂರು). —ಸನ್ಮಾನ್ಯ ಉಪಾಧ್ಯಕ್ಷರೇ, ಶ್ರೀಮಾನ್ ಪುಟ್ಟಸ್ವಾಮಿಯವರು, ಸಂಸದೀಯ ವ್ಯವಹಾರ ಶಾಖೆಯ ಮಂತ್ರಿಗಳಾಗಿ ಈ ಒಂದು ತಿದ್ದುಪಡಿ ಮಸೂದೆಯನ್ನು ನಮ್ಮ ಎದುರಿಗೆ ಇಟ್ಟಿದ್ದಾರೆ. ನಮಗಾದರೂ ಇಂಥ ಒಂದು ಕಾಯಿದೆ ಈ ಸಭೆಯಲ್ಲಿ ಬರಲಿ ಎನ್ನುವ ಆಕಾಂಕ್ಷೆ ಬಹಳ ದಿವಸಗಳಿಂದಲೂ ಇತ್ತು. ಆದರೆ ಈ ಹೊತ್ತು ನಮ್ಮ ಮನಸ್ಸಿಗೆ ಅದಂಥ ದುಃಖವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ನಮ್ಮ ರಾಜ್ಯದಲ್ಲಿ ಈ ಹೊತ್ತು ನಮ್ಮ ರಾಜ್ಯದಲ್ಲಿ ತರೆ ಎತ್ತಿ ನಿಂತಿರತಕ್ಕ ಅಪ್ಪರ್ ಕೃಷ್ಣ, ಹೇಮಾವತಿ, ಕಾವೇರಿ ಮುಂತಾದ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ತೀವ್ರ ಕಾರ್ಯಗತಗೊಳಿಸಬೇಕು, ನಮ್ಮ ರಾಜ್ಯದಲ್ಲಿನ ರೈತರ ಹಕ್ಕುಗಳನ್ನು ಮತ್ತು ರಾಜ್ಯದ ನೀರಿನ ಪೂರ್ಣ ಸಂರಕ್ಷಣೆಯನ್ನು ಮಾಡಬೇಕು ಎಂಬ ಉದ್ದೇಶದಿಂದ ಮಾತ್ರ ಇಂಥ

ಒಂದು ಕಾಯಿದೆಯನ್ನು ತರಬೇಕು ಎನ್ನುವ ಒತ್ತಾಯ ವಿರೋಧಪಕ್ಷದಿಂದಲೂ ಮತ್ತು ಜನತೆಯಿಂದಲೂ ಇತ್ತು ಎನ್ನುತಕ್ಕ ಮಾತನ್ನು ಹೇಳಬಯಸುತ್ತೇನೆ. ಈ ದಿವಸ ಈ ಮನೂದೆಯನ್ನು ತಂದದ್ದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಇದರಿಂದ ಸರ್ಕಾರ ತನ್ನ ಒಂದು ಜವಾಬ್ದಾರಿಯನ್ನು, ತಾನು ಮಾಡಬೇಕಾದ ಕರ್ತವ್ಯವನ್ನು, ತಾನು ನೇರವಾಗಿ ಮಾಡದೆ ಅದನ್ನು ಜನತೆಯ ಮೇಲೆ ಹಾಕಬೇಕು, ಯಾರಲ್ಲಿ ಯಾವ ಜನರಲ್ಲಿ ಜಾಸ್ತಿ ರಾಜಕೀಯ ಎಚ್ಚರಿಕೆ ಇದೆ ಅಥವಾ ಯಾರು ಮುಂದೆ ಬಂದು ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ಇಷ್ಟುಪಡುತ್ತಾರೆ ಅಂಥವರಿಗೆ ಮಾತ್ರ ಇದು ರಾಭದಾಯಕವಾಗುತ್ತದೆಯೇ ಹೊರತು ಮುಂದೆ ಸರ್ಕಾರ ಯಾವ ದೃಷ್ಟಿಯಿಂದ ಜನತೆಯ ಹಿತ ಮಾಡಬಹುದು ಎಂಬ ಉದ್ದೇಶ ಈ ಮನೂದೆಯಲ್ಲಿ ಕಂಡು ಬರುವುದಿಲ್ಲ.

4-00 P. M.

ಕಾಯಿದೆ ತರುವವರೆಗೆ ಸಹಕಾರ ಮಾಡುತ್ತೇವೆಂದು ಹೇಳಿದರು, ಇಂದು ವಿರೋಧಿಸುತ್ತಿದ್ದಾರೆ ಎಂದು ಮಾನ್ಯ ಮಂತ್ರಿಗಳು ಹೇಳಬಹುದು. ಆದರೆ ಕೆರೆ ವಗೈರೆ ಕಟ್ಟಲು ಕಾಂಟ್ರಿಬ್ಯೂಷನ್ ಯಾರಿಂದ ತೆಗೆದುಕೊಳ್ಳುತ್ತೀರೋ ಅವರಿಗೆ ನೀರು ದೊರೆಯದಿದ್ದರೆ ಕಂದಾಯ, ತೆರಿಗೆ ಮುಂತಾದ್ದು ಯಾವುವು ಇವೆಯೋ ಅವನ್ನು ತೆಗೆಯಿರಿ ಎಂದು ಹೇಳಬಹುದು. ಇಂದು ಸರಕಾರ ನಡುವಿನ ಕಂಟ್ರಾಕ್ಟರು, ಕೆಲಸಮಾಡುವ ಏಜೆನ್ಸಿ. ಸರಿಯಾದ ಕಾರ್ಯಸಾಧನೆ ಈ ಕಾಯಿದೆಯಿಂದಾಗುವುದಿಲ್ಲ. ಆದುದರಿಂದ ಈ ವಿಧೇಯಕವನ್ನು ಬಹಳವಾಗಿ ವಿರೋಧಿಸಬೇಕೆಂಬ ಉದ್ದೇಶವಿದೆ. ಇದರಲ್ಲಿ ಸ್ಪಷ್ಟವಾಗಿಲ್ಲ. ರೈತರಿಗೆ ಅನುಕೂಲ ಇದರಿಂದಾಗುವುದೆಂದು ಮಂತ್ರಿಗಳು ಹೇಳಿದರು. ಹಾಗಿರುವುದಾದರೆ ನೂರು ಎಕರೆ ಪರಿಮಿತಿ ಇರುವುದನ್ನು ತೆಗೆದುಹಾಕಬೇಕು. ಕಾವೇರಿ, ಕೃಷ್ಣ ನೀರಿನ ಉಪಯೋಗದ ಬಗ್ಗೆ ಚರ್ಚೆಗೆ ಅವಕಾಶ ಕೊಡುವುದಾಗಿ ಅಧ್ಯಕ್ಷರು ತಿಳಿಸಿದ್ದಾರೆ. ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಸರಕಾರ ತಾನೇ ಮಾಡದೆ ರೈತರಮೇಲೆ ಹಾಕುವುದು ಬಹಳ ನಾಚಿಕೆಗೇಡು. ಸೇಕಡ 66 ಜನರು ಒಪ್ಪಿದರೆ ಸರಕಾರ ಒಂದು ಪ್ರಯಾರಿಟಿ ಲಿಸ್ಟ್ ಕೊಡುವುದು. ಯಾವ ಭಾಗಕ್ಕೆ ಕೊಡಬೇಕು, ತಮಗೆ ಬೇಕಾದವರಲ್ಲದ್ದಾರೆ ಎಂದು ನೋಡಿ ಸರಕಾರ ಸ್ವಾರ್ಥ ಸಾಧಿಸಲು ಅವಕಾಶವಿದೆ, ಅದರ ಪ್ರಕಾರ ಪ್ರಯಾರಿಟಿ ಲಿಸ್ಟ್ ಮಾಡಬಹುದು, ಸರಕಾರದ ಹತೋಟಿ ಇದೆ. ಇಂದು ಜನರು ಬಂದು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಸರಕಾರದ ಮುಂದೆ ಹೇಳಿದರೆ ಅದನ್ನು ಸರಕಾರ ಸ್ವಾಗತಿಸಿ ಇಂಥ ಕೆಲಸಮಾಡುವುದು ಸರಕಾರದ ಕರ್ತವ್ಯ. ಆದರೆ ಅದನ್ನು ಬಿಟ್ಟಿದ್ದಾರೆ. ಅವರು ರೆಲೆಟಿವ್ ಪ್ರಯಾರಿಟಿ ಇರಬೇಕು, ಹಣವಿರಬೇಕು ಎಂದು ಕಂಡೀಷನ್ ಹಾಕಿ ಅದಾದಮೇಲೆ ಮಾಡುತ್ತೇವೆ ಎಂದು ಹೇಳಿದರೆ ಯಾವರೀತಿ ಈ ತಿದ್ದುಪಡಿ ಮನೂದೆಯಿಂದ ಕಾರ್ಯಸಾಧನೆಯಾಗುವುದು. ಉದ್ದೇಶವೇನಿದೆ ಅದು ಇದರಿಂದ ಸಾಧ್ಯವಾಗುವುದಿಲ್ಲ ಎಂದು ಸ್ಪಷ್ಟಪಡಿಸುತ್ತೇನೆ. ಇದಲ್ಲದೆ ಒಂದು ವಿಶೇಷ ವಿಷಯವನ್ನು ಹೇಳುತ್ತೇನೆ. ಸೆಕ್ಷನ್ 3 (ಎ) ಸಬ್ ಸೆಕ್ಷನ್ ಎರಡರಲ್ಲಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಸರಕಾರ ಆಯಾ ನೀರಾವರಿ ಯೋಜನೆಗೆ ನಿಗದಿಮಾಡುವುದು, ಅದರಂತೆ ರೈತರು ಹಣ ಕಟ್ಟಬೇಕು ಎಂದು ತಿಳಿಸಲಾಗಿದೆ. ಆದರೆ ಹಿಂದೆ ಮಾಡಿದ ತಿದ್ದುಪಡಿಯಲ್ಲಿ ಎಕರೆಗೆ 500 ರೂಪಾಯಿ ಕೊಡಬೇಕು ಎಂದಿದೆ. ಹೀಗೆ ಒಂದು ನಿರ್ದಿಷ್ಟವಾದ ಹಣವನ್ನು ತೋರಿಸಿ ಮತ್ತೆ ಯೋಜನೆಗೆ ಹಣ ರೈತರು ಮುಂಗಡವಾಗಿ ಇಷ್ಟು ಕೊಡಬೇಕು ಎಂದು ಸರಕಾರಕ್ಕೆ ಬಿಟ್ಟಿರುವುದು ಅಥವ ಅಧಿಕಾರಿಗೆ ಬಿಟ್ಟಿರುವುದು ಎಂದು ಇಲ್ಲದೆ. ಸರಕಾರ ಈ ರೀತಿಯ ಹಕ್ಕನ್ನಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇದನ್ನು ಸ್ಪಷ್ಟಪಡಿಸಬೇಕು. ಯಾವ ಜಮೀನಿಗೆ ಎಷ್ಟು ಕೊಡಬೇಕು ಎಂದು ಒಂದು ಪಟ್ಟಿಹಾಕಿ ತೋರಿಸಬೇಕು. ಇಷ್ಟು ಕಾಂಟ್ರಿಬ್ಯೂಷನ್ ಕೊಡಬೇಕು ಎಂದು ಸೂಚಿಸಬೇಕು. ಸರಕಾರ ಅಧಿಕಾರಿಗಳ ಕೈಗೊಂಬೆಯಾಗಬಾರದು. ಅಧಿಕಾರಿಗಳಿಗೆ ಬಿಡುವುದು ಸರಿಯಲ್ಲ. ಈ ರೀತಿ ಕಾಯಿದೆ ಇದ್ದರೆ ನಾಳೆ ಹೈಕೋರ್ಟಿನಲ್ಲಿ ಥಾರಿಂಜ್ ಮಾಡದೆ ಬಿಡುವುದಿಲ್ಲ, ಇದು ಕಾರ್ಯಗತವಾಗುವುದಿಲ್ಲ. ಕನಿಷ್ಠ ಮೊಬಲಗನ್ನಾದರೂ ತೋರಿಸಬೇಕು. 500 ರೂಪಾಯಿಗಳಿಗಿಂತ ಹೆಚ್ಚಾಗಿ ಒಂದು ಎಕರೆಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎಂದು ಇಲ್ಲಿ ತೋರಿಸಬೇಕು. ಇಲ್ಲದಿದ್ದರೆ ಇಲ್ಲಿರುವುದು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಎಂದು ಹೈಕೋರ್ಟ್ ಹೇಳಬಹುದು. ನಿಷ್ಕರ್ಷೆ ಮಾಡುವ ಅಧಿಕಾರ ಅಧಿಕಾರಿಗಳಿಗಿರುವುದು ಸರಿಯಲ್ಲ. ಎಕ್ಸಿಕ್ಯುಟಿವ್ ಅಧಿಕಾರಿಗಳಿಗೆ ಲಂಗುಲಗಾಮಿಲ್ಲ, ಇಂಥ ಬಿಲ್ಲು ಮಾಡಿದರೆ ಕಾರ್ಯಗತಮಾಡುವುದಕ್ಕೆ ಬರುವುದಿಲ್ಲ. ಆದಕ್ಕಾಗಿ 3 (ಎ) ಸಬ್‌ಸೆಕ್ಷನ್ ಎರಡರಲ್ಲಿ 100 ರೂಪಾಯಿಗಳಿಗಿಂತ ಹೆಚ್ಚು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ತೆಗೆದುಕೊಳ್ಳುವದಕ್ಕೆ ಬರುವುದಿಲ್ಲ ಎಂದು ಸೇರಿಸಬೇಕು. ಹೈಯರ್ ಲಿಮಿಟ್ ಆದರೂ ತೋರಿಸಿ.

(ಶ್ರೀ ಎಂ. ನಾಗಪ್ಪ)

ಇವಲ್ಲದೆ ಮುಖ್ಯವಾದ ಇನ್ನೊಂದು ಅಂಶವೆಂದರೆ ಕಾಯಿದೆಯಲ್ಲಿರುವ ಪ್ರೊಸೀಜರ್ ಎಚಿತ್ರವಾಗಿದೆ. ಮೊದಲನೆಯದಾಗಿ ಆಯಾ ನೀರಾವರಿ ಯೋಜನೆಯಲ್ಲಿ ಬರುವ ಒಟ್ಟು ರೈತರಲ್ಲಿ ಸೇಕಡ 66 ಮಂದಿ ಒಪ್ಪಿಗೆ ಮೊದಲು ಕೊಡಬೇಕು. ನಂತರ ಐದನೆಯ ಮೂರು ಭಾಗದ ರೈತರು ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೊಡುತ್ತೇವೆಂದು ಒಪ್ಪಬೇಕು. ನಂತರ ಒಂದು ಕರಡು ಯೋಜನೆ ಮಾಡಿ ಪಬ್ಲಿಷ್‌ಮಾಡುವರು. ಫೈನರ್ ಆದಮೇಲೆ ಇಂಥ ತಾರೀಖು ಹಣ ಕಟ್ಟಬೇಕೆಂದು ರೈತರಿಗೆ ನೋಟೀಸು ಕೊಡುವರು. ಹಣ ಕೊಟ್ಟಮೇಲೆ ಸಬ್‌ಸೆಕ್ಷನ್ 4 ರ ಪ್ರಕಾರ ಸೇಕಡ 66 ರೈತರು ಒಪ್ಪಿಗೆ ಕೊಡಬೇಕು ಎಂದು ಸೇರಿಸಲಾಗಿದೆ. ಒಂದು ಸಲ ಸೇಕಡ 66 ಮಂದಿ ರೈತರು ಬರೆದು ಕೊಟ್ಟ ಮೇಲೆ, ಹಣ ಕೊಟ್ಟ ಮೇಲೆ ಮತ್ತೆ ಎರಡನೆಯ ಸಲ ಫೈನಲ್ ಮಾಡಿಲ್ಲ, ಸೇಕಡ 66 ಮಂದಿ ಮತ್ತೆ ಒಪ್ಪ ಬೇಕು ಎಂದು 4 ಮತ್ತು 5ರಲ್ಲಿರುವುದು ಅನ್ಯಾಯ. ಇಂಥ ಒಪ್ಪಿಗೆ ಕೊಡದೇ ಇದ್ದರೆ ಹಣ ಕೊಟ್ಟಿರುವವರಿಗೆ ಸಹ ಸರಿಯಾದ ವ್ಯವಸ್ಥೆ ಮಾಡುವುದಿಲ್ಲ. ಆದುದರಿಂದ ಸಬ್‌ಸೆಕ್ಷನ್ 4 ಮತ್ತು 5 ಏನಿವೆ ಅವನ್ನು ಪರಿಶೀಲನೆಬೇಕು ಎಂದು ಹೇಳುತ್ತೇನೆ.

ಬಹಳ ಉತ್ತಮ ಕಾಯಿದೆ ತಂದಿದ್ದೇವೆ ಎಂದು ತಾವು ಹೇಳಬಹುದು. ಯಾರು ಲಂಚಸಂ ಆಗಿ ಒಂದೇ ಸಾರಿ ಈ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಹಣವನ್ನು ಕೊಡುತ್ತಾರೆ ಅವರಿಗೆ 10 ಪರ್ಸೆಂಟ್ ರಿಬೇಟ್ ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದೀರಿ. ಇದು ಬಡ ರೈತರಿಗೆ ಹಿತ ಮಾಡುವಂತಹ ಮಾತು ಅಲ್ಲ. ಯಾರು ಹಣವಂತ ರೈತರು ಇದ್ದಾರೆ ಅಂತಹವರು ಬ್ಯಾಂಕಿನಲ್ಲಿ ಹಣ ಇಟ್ಟರೆ ಎರಡು ಪರ್ಸೆಂಟ್ ಬಡ್ಡಿ ಬರುವುದಿಲ್ಲ ಅವರಿಗೆ ಇದು ಒಂದು ಒಳ್ಳೆಯ ಅವಕಾಶ ಮಾಡಿ ಕೊಟ್ಟಂತೆ ಆಗುತ್ತದೆ, ಆದ್ದರಿಂದ ಈ ರಿಬೇಟ್ ಬಹಳ ಹೆಚ್ಚಿನದು, ಬ್ಯಾಂಕುಗಳಲ್ಲಿ ಇಟ್ಟರೆ ಯಾವ ಪ್ರಕಾರ 2 ಪರ್ಸೆಂಟ್ ಕೊಡುತ್ತಾರೆ ಅಷ್ಟು ಮಾತ್ರ ಕೊಡಬಹುದಾಗಿತ್ತು. 10 ಪರ್ಸೆಂಟ್ ಕೊಡುತ್ತೇವೆ ಅಂತ ಅನ್ನುವ ಮಾತು ಬಹಳ ಅನ್ಯಾಯ, ದೊಡ್ಡ ರೈತರಿಗೆ ಸಹಕಾರ ಮಾಡಬೇಕು, ಅವರ ಬೆಳವಣಿಗೆಯನ್ನು ಮಾಡಬೇಕು ಎಂಬ ಉದ್ದೇಶದಿಂದ ತಂದಿದ್ದೀರಿ ಎಂಬ ಮಾತನ್ನು ಸ್ಪಷ್ಟ ಪಡಿಸುತ್ತೇನೆ. 10 ಪರ್ಸೆಂಟ್ ರಿಬೇಟ್ ಕೊಡುತ್ತೇವೆ, ಇದು ಬಹಳ ಉತ್ತಮವಾದ ಉದ್ದೇಶದಿಂದ ತಂದಿದ್ದೇವೆ ಅಂತ ಹೇಳುವುದನ್ನು ನಾನು ಕಟುವಾಗಿ ವಿರೋಧಿಸುತ್ತೇನೆ. ಸರ್ಕಾರದವರು ಇಂತಹ ಒಂದು ಕಾಯಿದೆಯನ್ನು ಸಣ್ಣ ಸಣ್ಣ ಯೋಜನೆಗಳಿಗಾಗಿ ಯಾವತ್ತೂ ಮಾಡಕೂಡದು ದೊಡ್ಡ ದೊಡ್ಡ ಯೋಜನೆಗಳು ಯಾವುವು ಪೂರ್ಣವಾಗದೇ ನಿಂತಿವೆ ಅಂತಹ ಯೋಜನೆಗಳನ್ನು ಪೂರ್ಣಗತಿಗೊಳಿಸುವುದಕ್ಕೆ ಪ್ರಯತ್ನ ಮಾಡುವುದಿದ್ದರೆ ಮಾತ್ರ ಇಂತಹ ಕಾಯಿದೆ ಅವಶ್ಯಕ, ಇಲ್ಲದೇ ಇದ್ದರೆ ಇಂತಹ ಕಾಯಿದೆಗೆ ಅವಕಾಶವಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಸರ್ಕಾರದವರ ಮೇಲೆ ಇರತಕ್ಕ ಜವಾಬ್ದಾರಿ ತೆಗೆದು ಹಾಕಿಕೊಳ್ಳುವುದಕ್ಕೆ ಎಂದರೆ ಷರ್ತಿಂಗ್ ದಿ ರೆಸಪಾನ್‌ಸಿಬಿಲಟಿ ಎಂದು ಏನು ಹೇಳುತ್ತೇವೆ ಅದನ್ನು ಮಾಡುವುದಕ್ಕೆ ಈ ಕಾಯಿದೆಯನ್ನು ತಂದಿದ್ದೀರಿ ಎಂದು ಖಚಿತವಾಗಿ ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಶ್ರೀನಿವಾಸ (ಸಾಗರ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಇರತಕ್ಕ ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟ ಮುಂಗಡ ಹಣವನ್ನು ಪಡೆಯುವುದಕ್ಕೆ ಅವಕಾಶ ಮಾಡಿಕೊಡತಕ್ಕ ಈ ತಿದ್ದುಪಡಿ ವಿಧೇಯಕವನ್ನು ನಾನು ಬಹಳ ಸಂತೋಷದಿಂದ ಸ್ವಾಗತಿಸುತ್ತೇನೆ. ಇದರ ಹಿನ್ನೆಲೆ ಬಹುತಃ ಈ ಸಭೆಗೆ ಗೊತ್ತಿದೆ. ನೀರಾವರಿಯ ಪ್ರಮಾಣ ಈ ರಾಜ್ಯದಲ್ಲಿ ಎಷ್ಟು ಮಟ್ಟಿಗೆ ಇದೆ, ನಾವು ಈ ರಾಜ್ಯದಲ್ಲಿ ಸಿಕ್ಕಬಹುದಾದಂತಹ ಒಂದು ತೊಟ್ಟು ನೀರೂ ಅಪವ್ಯಯ ವಾಗದಂತೆ, ಅವಿಯಾಗಿ ಅರಿ ಹೋಗದಂತೆ ತಡೆಗಟ್ಟಿ ನೀರಾವರಿ ಯೋಜನೆಗಳನ್ನು ಮಾಡಿದರೂ ಸಹ ನಾವು ಯಾವ ಮಟ್ಟಕ್ಕೆ ಮುಟ್ಟಿದ್ದೇವೆ ಎಂಬ ಎರ್ನಾ ಅಂಕಿಅಂಶಗಳೂ ಹಲವಾರು ಸಾರಿ ಈ ಸಭೆಯಲ್ಲಿ ಚರ್ಚಿತವರ್ತಣವಾಗಿದೆ ; ಮತ್ತೆ ಪ್ರಸ್ತಾಪ ಮಾಡಬೇಕಾದ್ದು ಅಗತ್ಯ ಎಂದು ಅನಿಸುತ್ತಾ ಇಲ್ಲ. ನೀರಾವರಿ ಯೋಜನೆಯನ್ನು ಅತ್ಯಂತ ಕ್ಷಿಪ್ರಗತಿಯಲ್ಲಿ ಸಾಧ್ಯವಾದಷ್ಟೂ ಹೆಚ್ಚು ಪ್ರಮಾಣದಲ್ಲಿ ಸಾಧಿಸಬೇಕೆನ್ನತಕ್ಕ ತವಕ ಕೇವಲ ಸರ್ಕಾರಕ್ಕೆ ಮಾತ್ರವಲ್ಲ, ಆಳುವ ಪಕ್ಷಕ್ಕೆ ಸೇರಿರತಕ್ಕ ಸದಸ್ಯರಿಗೆ ಮಾತ್ರವಲ್ಲ, ವಿರೋಧ ಪಕ್ಷದ ಅನೇಕ ಸ್ನೇಹಿತರಲ್ಲೂ ಕೂಡ ಬಹಳ ಹೆಚ್ಚಿನ ಪ್ರಮಾಣದಲ್ಲಿ ಇತ್ತೀಚಿನ ದಿವಸಗಳಲ್ಲಿ ಕಂಡುಬಂದಿದೆ. ನೀರಾವರಿ ಯೋಜನೆಯನ್ನು ಸಾಧಿಸುವುದಕ್ಕೆ ಏನೇನು ಮಾಡಲಾಗಿದೆ ಏನೇನು ಮಾಡಿದ್ದಾರೆ, ಏನೇನು ಮಾಡಬೇಕೆಂಬ ಧಾಟಿಯಲ್ಲಿ ನಿರ್ಣಯಗಳನ್ನು ವಿರೋಧಪಕ್ಷದ ಸ್ನೇಹಿತರು ಈ ಸಭೆಯ ಮುಂದೆ ಹಿಂದೆ ಮಂಡಿಸಿದ್ದಾರೆ. ಅಂತಹ ಒಂದು ಹಿನ್ನೆಲೆಯಲ್ಲಿ ಯಾವ ಯಾವ ಪ್ರಾಜೆಕ್ಟುಗಳು ಇವೆ, ಇವುಗಳನ್ನು ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರವೇ ನೇರವಾಗಿ ತನ್ನ ಸಂಪನ್ಮೂಲದ ಬಲದಿಂದ ಸಾಧಿಸಲಿಕ್ಕೆ ಶಕ್ಯವಿಲ್ಲ ಅಂತಹ ಯಾವುದೇ ಪ್ರಾಜೆಕ್ಟಿನ

ನಂಬಂಧದಲ್ಲಿ ಆದರಿಂದ ಯಾರಿಗೆ ಅನುಕೂಲವಾಗುತ್ತದೆ ಆ ಹಿಡುವಳಿದಾರರು ಮುಂದೆ ಬಂದು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ ಎಂದು ಹೇಳಿ ಒಪ್ಪಿಕೊಂಡ ನಂದರ್ಭದಲ್ಲಿ ಅದಕ್ಕೆ ಅವ ಕಾಶಮಾಡಿಕೊಟ್ಟರೆ, ಅವರಿಂದ ಮುಂಗಡವಾಗಿ ಹಣ ಪಡೆದು ಆ ವ್ಯಾಜೆಕ್ಟುಗಳನ್ನು ಮಾಡುವು ದಕ್ಕೆ ಒಂದು ಅವಕಾಶವಿರಬೇಕೆನ್ನುವುದು ಈ ಒಂದು ಮಸೂದೆಯ ಧ್ಯೇಯ. ಇಂಥಾದ್ದು ಇರಬೇಕೆಂದು ಸಾರ್ವತ್ರಿಕವಾಗಿ ಅನೇಕ ದಿವಸಗಳಿಂದ ಅಭಿವ್ಯಾಯಗಳು ಬಂದುದನ್ನು ನಾವು ಅಲ್ಲಲ್ಲಿ ಕೇಳಿದ್ದೇವೆ. ಸರ್ಕಾರ ಇವತ್ತು ವ್ಯವಸ್ಥಿತವಾದಂತಹ ರೀತಿಯಲ್ಲಿ ಅದಕ್ಕೆ ಒಂದು ರೂಪವನ್ನು ಕೊಟ್ಟು ಒಂದು ವಿಧೇಯಕದ ಮೂಲಕ ಪ್ರತಿಪಾದನೆ ಮಾಡಿದೆ. ಇವತ್ತು ಸರ್ಕಾರ ದೊಡ್ಡ ದೊಡ್ಡ ವ್ಯಾಜೆಕ್ಟು ಗಳನ್ನು ತೆಗೆದುಕೊಳ್ಳಬೇಕಾದರೂ ಕೂಡ ಅವಕ್ಕೆ ಯಾವುದಾದರೂ ಒಂದು ರೀತಿಯ ಪ್ರಯಾರಿಟಿ ಯನ್ನು ನಿರ್ಧರಿಸಲೇಬೇಕು. ಕಬಿನಿ ಯೋಜನೆ ಅಥವಾ ಕೃಷ್ಣ ಯೋಜನೆ ಯಾವುದೇ ಆದರೂ ಕೂಡ ಅದಕ್ಕೆ ಯಾವ ರೀತಿ ಸಂಪನ್ಮೂಲವನ್ನು ರೂಢಿಸಬೇಕೆಂಬುದನ್ನು ಯೋಚನೆ ಮಾಡಬೇಕು ಮತ್ತು ಅದೇ ರೀತಿ ಪ್ರತಿಯೊಂದು ವಿಷಯದಲ್ಲೂ ಕೂಡ ಸರ್ಕಾರ ಒಂದು ಪ್ರಯಾರಿಟಿಯನ್ನು ಇಟ್ಟು ಕೊಳ್ಳದೆ ಕೆಲಸ ಮಾಡಲಕ್ಕೆ ಸಾಧ್ಯವಿಲ್ಲ. ಬಡ್ಜೆಟ್ ಮಾಡುವಾಗಲೂ ಸಹ ಬಹುಶಃ ಅನೇಕ ವರ್ಷಗಳಿಂದ ಅದಕ್ಕೆ ಯಾವ ರೀತಿಯಲ್ಲಿ ಹಣ ಒದಗಿಸಬೇಕು, ಯಾವುದು ಅತ್ಯಂತ ಪ್ರಾಮುಖ್ಯ ವಾದುದು ಎಂಬುದಾಗಿ ನಿರ್ಧರಿಸಬೇಕೆನ್ನುವುದು ಸಾಕಾದಷ್ಟು ಜವಾಬ್ದಾರಿಯುತವಾಗಿ ಪೂರ್ವ ಗ್ರಹವಿಲ್ಲದೆ ಅಬ್ಜೆಕ್ಟೀವ್ ಕನ್‌ಸಿಡರೇಷನ್ ಸರ್ಕಾರದ ಮುಂದೆ ಇದೆ. ಈ ಆಧಾರದ ಮೇರೆ ಇವು ಗಳನ್ನು ತೀರ್ಮಾನ ಮಾಡುತ್ತಾರೆ. ಇಷ್ಟೇ ಅಲ್ಲ, ಮಧ್ಯಮ ವರ್ಗದ ನೀರಾವರಿ ಯೋಜನೆ ಇರಲಿ ಅಥವಾ ಸಣ್ಣ ಪ್ರಮಾಣದ ನೀರಾವರಿ ಯೋಜನೆಯಲ್ಲೂ ಕೂಡ ಇಂತಹ ಪ್ರಯಾರಿಟಿ ಹಾಕಿ ಕೊಳ್ಳಬೇಕಾಗುತ್ತದೆ. ಈ ವರ್ಷ 15 ಕೆರೆಗಳ ಕೆಲಸ ತೆಗೆದುಕೊಳ್ಳಬೇಕೆಂದರೆ ಅದಕ್ಕೆ ಎಕ್ಸಿ ಕ್ಯೂಟೀವ್ ಇಂಜನಿಯರು ಅಥವಾ ಅಸಿಸ್ಟೆಂಟ್ ಇಂಜನಿಯರಿಂದ ಪ್ರಾರಂಭವಾಗಿ ಸರ್ಕಾರದವ ರೆಗೂ ಬಂದು ಅದರ ಪ್ರಯಾರಿಟಿ, ಯಾವುದು ತೆಗೆದುಕೊಳ್ಳಬೇಕೆಂಬುದು ನಿರ್ಧಾರವಾಗುತ್ತದೆ. ಇವತ್ತು ಮಾಡಬೇಕಾದಂತಹ ಕೆಲಸ ವಿಪರೀತವಾಗಿದೆ. ಆದರೆ ಅದಕ್ಕೆ ಅಗತ್ಯವಾದ ಹಣ ಬಹಳ ಕಡಿಮೆ ಇದೆ ಅಂತಹ ನಂದರ್ಭದಲ್ಲಿ ಪ್ರಯಾರಿಟಿ ಲಿಸ್ಟ್ ಮಾಡತಕ್ಕದ್ದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಈ ರೀತಿ ಪ್ರಯಾರಿಟಿ ಲಿಸ್ಟ್‌ನಲ್ಲಿ ಬರದೇ ಇರತಕ್ಕ ಯಾವುದಾದರೂ ಒಂದು ಯೋಜನೆ ಯನ್ನು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ ಎಂದು ಹೇಳಿದರೆ ಅದನ್ನು ಕಾರ್ಯಗತ ಮಾಡುವುದಕ್ಕೆ ಒಂದು ವ್ಯವಸ್ಥೆ ಇರಬೇಕೆನ್ನುವುದು ಈ ಮಸೂದೆಯ ಧ್ಯೇಯ. ಇದು ರಾಜಕೀ ಯಕ್ಕೆ ಎಡೆಮಾಡುತ್ತದೆ. ತಮಗೆ ಬೇಕಾದ್ದನ್ನೆಲ್ಲಾ ಕೇವಲ ಸರ್ಕಾರದ ಹಣದಿಂದಲೇ ಮಾಡಿ ತಮಗೆ ಬೇಡವಾದ್ದನ್ನು ಮಾಡುವುದಕ್ಕೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೇಳುವುದಕ್ಕಾಗಿ ಇದು ಉಪಯೋಗವಾಗತಕ್ಕ ಒಂದು ಅಸ್ತ್ರವಾಗಿ ಪರಿಣಾಮವಾಗುತ್ತದೆ ಎಂಬ ಶಂಕೆಯನ್ನು ವ್ಯಕ್ತ ಪಡಿಸಿದ್ದಾರೆ. ಇದಕ್ಕೆ ಆಧಾರ ಸ್ಪಷ್ಟಪಡುತ್ತಿಲ್ಲ. ಹಾಗೆ ಮಾಡತಕ್ಕದ್ದು ಸರ್ಕಾರದ ಉದ್ದೇಶ ಇದ್ದರೆ ಈ ಬಿಲ್ಲನ್ನು ತರದೇ ಕೂಡ ಮಾಡಲಕ್ಕೆ ಸಾಧ್ಯವಿದೆ. ಆದ್ದರಿಂದ ಸರ್ಕಾರ ಇವತ್ತು ಏನು ಮಾಡಿದೆ ಇದು ಸರಿಯಾಗಿದೆ. ಯಾವ ರೀತಿಯಲ್ಲಾದರೂ ಮಾಡಿ ಹಣವನ್ನು ನಂಪಾದನೆ ಮಾಡಲಕ್ಕೆ ಹಕ್ಕು ಇದೆ. ಈ ಬಿಲ್ಲು ತಂದು ಯಾವುದೋ ಕೆಲವು ಭಾಗಗಳನ್ನು, ಕೆಲವು ಜನರನ್ನು ಉದಾಸೀನ ಮಾಡಬೇಕೆನ್ನುವುದಕ್ಕೆ ಈ ಒಂದು ಹೊಸ ಅಸ್ತ್ರದ ಅವಶ್ಯಕತೆ ಇಲ್ಲ. ಸರ್ಕಾರ ನಿಜವಾಗಿಯೂ ಅವ್ಯಾಣಿಕವಾಗಿ ಪ್ರಯಾರಿಟಿ ನಿರ್ಧರಿಸುವುದಿಲ್ಲ, ಸಾರ್ವಜನಿಕ ಹಿತದೃಷ್ಟಿಯಿಂದ, ಎಲ್ಲಾ ಭಾಗ ಗಳೂ ಅಭಿವೃದ್ಧಿ ಹೊಂದಬೇಕು, ಶೀಘ್ರಗತಿಯಲ್ಲಿ ನೀರಾವರಿ ಯೋಜನೆಗಳು ಸಿದ್ಧವಾಗಬೇಕು, ಯಾವುದು ತಕ್ಷಣ ನಮಗೆ ಹೆಚ್ಚಿನ ಪ್ರತಿಫಲ ಕೊಡುತ್ತದೆ ಅಂತಹ ಯೋಜನೆಗಳಿಗೆ ಹೆಚ್ಚಾಗಿ ಕಾನ್‌ಸೆನ್‌ಟ್ರೇಟ್ ಮಾಡಬೇಕು, ಅಂತಹ ಒಂದು ಸಾರ್ವತ್ರಿಕವಾದ, ಉದಾರವಾದ ರಾಜ್ಯದ ಹಿತದೃಷ್ಟಿಯಿಂದ ಯೋಜನೆಗಳನ್ನು ಕೈಕೊಳ್ಳಬೇಕೆಂಬತಕ್ಕ ಒಂದು ಘೋರಣೆಯನ್ನು ಸರ್ಕಾರ ಅನುಸರಿಸದೆ ರಾಜಕೀಯ ದೃಷ್ಟಿಯಿಂದಲೇ ಕೆಲಸಮಾಡಿ ತನ್ನ ಜೀರ್ಣೋದ್ಧಾರ ಮಾಡಿಕೊಳ್ಳ ಬೇಕೆಂದರೆ ಇವತ್ತು ಈ ಬಿಲ್ಲು ತಂದು ಮಾಡಬೇಕಾದ ಅವಶ್ಯಕತೆ ಇಲ್ಲ, ಆದ್ದರಿಂದ ಈ ಬಿಲ್ಲು ತಂದ ಉದ್ದೇಶ ಹಾಗಾಗುತ್ತದೆ ಎಂದು ಶಂಕೆಪಡುವುದು ಅಮ್ಮ ಸರಿಯಲ್ಲ, ದೋಷದೋಷ ಇದ್ದರೆ ಅದನ್ನು ಸರ್ಕಾರದವರ ಗಮನಕ್ಕೆ ತರಬಹುದು, ಅಥವಾ ಅಕಸ್ಮಾತ್ ಪ್ರಯಾರಿಟಿ ಕೊಡುವಾಗ ಯಾವುದಾದರೂ ಸರ್ಕಾರದ ಗಮನಕ್ಕೆ ಬರದಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತರತಕ್ಕ ಹಲವಾರು ಅವಕಾಶಗಳು ಮಾನ್ಯ ಸದಸ್ಯರಿಗೂ ಇದೆ, ಸಾರ್ವಜನಿಕರಿಗೂ ಇದೆ. ಅದನ್ನು ಅವ ಲಂಬಿಸಬೇಕಾಗುತ್ತದೆಯೇ ಹೊರತು ಮಸೂದೆ ಮಾಡುವುದೇ ಸರಿಯಲ್ಲ, ಇಂತಹ ಒಂದು ಅಸ್ತ್ರ ವನ್ನು ನಂಪಾದನೆ ಮಾಡಿಕೊಂಡು ಕೆಲವೊಂದು ಭಾಗಗಳಿಗೆ ಅನ್ಯಾಯ ಮಾಡುತ್ತೀರಿ ಅಂತ ಹೇಳಿ ಶಂಕಿಸುವುದು ಅಷ್ಟೊಂದು ಸರಿಯಾದಂತಹ ಮಾತು ಆಗುವಿಕ್ಕಿಲ್ಲ ಎಂದು ಹೇಳಿ ನಾನು ಅಭಿಪ್ರಾಯ ಪಡುತ್ತೇನೆ. ಇಲ್ಲಿ ಇರತಕ್ಕ ಎಷ್ಟಿ ವಿಧಿಗಳನ್ನು ಸಾಮಾನ್ಯವಾಗಿ ನಾನು ಸ್ವಾಗತಿಸುತ್ತೇನೆ.

(ಶ್ರೀ ಕೆ. ಎಚ್. ಶ್ರೀನಿವಾಸ)

ಈಗಾಗಲೇ ಇದನ್ನು ಮಂಡಿಸಿರತಕ್ಕ ಕಾನೂನು ಮಂತ್ರಿಗಳು ಇದರಲ್ಲಿ ಯಾವುದಾದರೂ ಆದಚಣೆ ಬರುವುದು ರೈತರಿಗೆ ತೊಂದರೆಯಾಗುವುದು ಇದ್ದರೆ ಅದನ್ನು ಪರಿಶೀಲಿಸಲಿಕ್ಕೂ ಕೂಡ ತಯಾರಾಗಿದ್ದೇವೆ ಎಂದು ಹೇಳಿದ್ದಾರೆ. ನನ್ನ ದೃಷ್ಟಿಯಲ್ಲಿ ಈ ರೀತಿ ನೀರಾವರಿ ಅಭಿವೃದ್ಧಿ ಮಾಡಬೇಕೆಂದರೆ ಕಷ್ಟವಾಗುತ್ತದೆ. ಯಾವುದಾದರೂ ಒಂದು ಪ್ರಾಜೆಕ್ಟ್‌ಗಾಗಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಎಂದು ತೆಗೆದುಕೊಂಡಾಗ ಅದಕ್ಕೆ ಬೇಕಾದ ಜಮೀನುಗಳನ್ನು ಮೊದಲು ಹಂಚಿಕೆ ಮಾಡುವುದು ಅಗತ್ಯ. ಇಲ್ಲಿ ತಂದಿರುವ ತಿದ್ದುಪಡಿ ವಿಧೇಯಕದಲ್ಲಿ ಆ ಅವಕಾಶವನ್ನು ನಾವು ಇಟ್ಟುಕೊಳ್ಳಬೇಕಾಗುತ್ತದೆ.

ಸೆಕ್ಷನ್ 3 (ಎ) ನಲ್ಲಿ :

"Advance contribution as provided hereunder is paid by the landholders of all lands which are capable of being benefited by the completion of the construction, restoration, expansion or alteration of a work it is not possible for it..... ....."

ಎಂದು ಇದೆ. ಮತ್ತೆ ಇದೇ 3 (ಎ) ಸೆಕ್ಷನ್ (2) ರಲ್ಲಿ ಈ ರೀತಿ ಇದೆ :

"When the landholders of not less than sixty-six per cent of *such lands* express their willingness in writing within the time specified therefor to make such advance contribution....."

ಒಂದು ಪ್ರಾಜೆಕ್ಟ್‌ನ, ನೀರಾವರಿ ಅನುಕೂಲತೆ ಇಷ್ಟು ಭೂಮಿಯವರೆಗೆ ವಿಸ್ತಾರವಾಗುತ್ತದೆ ಎಂದರೆ, ಅಲ್ಲೇ ಭೂಮಿಯ ಹಂಚುವಿಕೆ ವಿಚಾರ ಬರುತ್ತದೆ. ಯೋಜನೆ ಕೆಳಗಡೆ ಬರುವ ಭೂಮಿಗೆ ಎಂದರೆ ಯಾರು ಡಿಸ್‌ಪ್ಯೂಟ್ ಮಾಡುವುದಿಲ್ಲ. ಆದರೆ ಇಲ್ಲಿ ಶೇಕಡಾ 66ರಷ್ಟು ಎಂದು ಹೇಳಿದರೆ ಯಾವ ರೀತಿ ಲೆಕ್ಕ ಹಾಕಬೇಕು ? ಉಳಿಯತಕ್ಕ ಜಮೀನನ್ನು ಯಾವ ಯೋಜನೆಗೆ ಅನ್ವಯಿಸಬೇಕು? ಇಂತಹ ಎಲ್ಲ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡುವುದು ಅವಶ್ಯ ಇದೆ. ಇದನ್ನು ಆದಷ್ಟು ಶೀಘ್ರಗತಿಯಿಂದ ಮಾಡಬೇಕು ಎಂದರೆ ಇದಕ್ಕೆ ಬೇಕಾಗುವ ಜಮೀನು ಸರಕಾರದ ವಶದಲ್ಲಿದ್ದರೆ ಆ ಭೂಮಿಯನ್ನು ಹಂಚುವ ವ್ಯವಸ್ಥೆ ಸರಕಾರ ಮಾಡಬೇಕು. ಯಾವ ರೀತಿ ಇದನ್ನು ಹಂಚಬೇಕಾಗುತ್ತದೆ ? ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಸಾಮರ್ಥ್ಯ ಇರುವಂಥವರಿಗೆ ಬೇಕಾದ ವರಮಾನ ಇರುವವರಿಗೆ ಮಾತ್ರ ಜಮೀನನ್ನು ಹಂಚುವುದಕ್ಕೆ ಸಾಧ್ಯ ಏಲ್ಲ. ಹೀಗೆ ಮಾಡಿ ಒಟ್ಟಿನಲ್ಲಿ ಜನರ ಹಿತಸಾಧನೆ ಮಾಡುವುದಾದರೆ ಸಮಾಜವಾದದ ವ್ಯವಸ್ಥೆಗೆ ಧಕ್ಕೆ ಬರಲು ಸಾಧ್ಯ ಇದೆ. ನನಗೇನೋ ಶಕ್ತಿ ಇದೆ. ನಾನು ಹತ್ತು ಎಕರೆ ಭೂಮಿ ಕೊಂಡು ಕೊಂಡು ಅದಕ್ಕೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡಬಹುದು. ಇತರ ಜನರು ಶಕ್ತಿ ಇಲ್ಲದವರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಹೇಗೆ ಕೊಡುತ್ತಾರೆ ? ಆದರಲ್ಲಿ ಒಂದು ಪ್ರಶ್ನೆ ಬರುತ್ತದೆ. ಸರಕಾರದ ವಶದಲ್ಲೇ ಶೇಕಡಾ ಮೂವತ್ತರಷ್ಟು ಹಿಡುವಳಿ ಜಮೀನು ಇರುತ್ತದೆ. ಈ ಶೇಕಡಾ 30 ರಷ್ಟು ಭೂಮಿಯನ್ನು ವಿತರಣೆ ಮಾಡಬೇಕಾದರೆ, ಅದನ್ನು ಯಾವ ರೀತಿ ಮಾಡಬೇಕು ? ಇದನ್ನು ಶೀಘ್ರಗತಿಯಲ್ಲಿ ಪರಿಶೀಲನೆಮಾಡಿ ವಿತರಣೆ ಮಾಡುವ ಜವಾಬುದಾರಿಯನ್ನು ನಿರ್ವಹಣೆ ಮಾಡದೇ ಹೋದರೆ ಇದು ಸಾಧ್ಯವಾಗುವುದಿಲ್ಲ. ಉದಾಹರಣೆಯಾಗಿ ಹೇಳಬೇಕೆಂದರೆ, ನಮ್ಮ ಭಾಗದಲ್ಲಿರುವ ವರದಾ ನದಿ ಕೆಳಗಡೆ ಇದಕ್ಕೆ ಸಂಬಂಧಪಟ್ಟ ಹಾಗೆ 10—12 ನೀರಾವರಿ ಯೋಜನೆಗಳಿವೆ ಮತ್ತು ಸರಕಾರವೂ ಇದನ್ನು ಪರಿಶೀಲನೆ ಮಾಡುತ್ತಿದೆ. ಇದರಲ್ಲಿ ಮಾವಿನಕೆರೆ ಹೊಳೆ ಎನ್ನುವ ಒಂದು ನೀರಾವರಿ ಯೋಜನೆಯೂ ಇದೆ. ಇದರಿಂದ ಸುಮಾರು 3500 ಎಕರೆಯಷ್ಟು ಪ್ರದೇಶಕ್ಕೆ ನೀರಿನ ಆನರೆ ಸಿಕ್ಕಿ ನೀರಾವರಿಯಾಗುತ್ತದೆ. ಇದರಲ್ಲಿ ಬಹು ಭಾಗ ಸರಕಾರದ ವಶದಲ್ಲಿಯೇ ಇದೆ. ಹೀಗೆ ಇರತಕ್ಕ ಭೂಮಿಯನ್ನು ಹಂಚಬೇಕು. ಇದರ ಹಂಚಿಕೆ ಪೂರ್ತಿಯಾಗಿ ಮಾಡಬೇಕಾದರೆ ಸುಮಾರು ಇನ್ನೂ ಹತ್ತು, ಹದಿನೈದು ವರ್ಷವಾಗುತ್ತದೆ. ಈ ಜಮೀನುಗಳನ್ನು ಯಾರಿಗೆ ಕೊಡಬೇಕು ? ಇಂತಹ ಒಂದು ಪರಿಸ್ಥಿತಿಯನ್ನು ಸರಕಾರದವರು ಗಮನಿಸಬೇಕಾದರೆ ಇದಕ್ಕೆ ಕಾನೂನಿನಲ್ಲಿ ಮೊದಲೇ ಪ್ರೊವೈಡು ಮಾಡಬೇಕು. ಈ ಬಿಲ್ಲಿನಲ್ಲಿರುವಂತೆ ಆದರೆ, ಯಾರಿಗೆ ಜಮೀನನ್ನು ಕೊಂಡುಕೊಳ್ಳುವ ಶಕ್ತಿ ಇದೆಯೋ ಅವರು ಕಾಂಟ್ರಿಬ್ಯೂಷನ್‌ನ್ನು ಅಡ್ವಾನ್ಸ್ ಆಗಿ ಕೊಡಬಹುದು. ಯಾರಿಗೆ ಜಮೀನಿನ ಅವಶ್ಯಕತೆ ಇದೆಯೋ ಮತ್ತು ಭೂಮಿ ಸಿಗುತ್ತೆ ಎಂದು ಜಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೋ ಅಂತಹ ಜನರು ವಂಚಿತರಾಗಬಹುದು.

ಈ ಒಂದು ವಿಧೇಯಕವನ್ನು ತರುವುದರ ಹಾಂದಿಯಲ್ಲ ಜಮೀನುಗಳನ್ನು ಬ್ಯಾಂಕಿಗೆ ಒತ್ತೆ ಹಾಕಬೇಕು. ಸರಕಾರವೇ ಬ್ಯಾಂಕಿನವರಿಗೆ ಗ್ಯಾರಂಟಿಯಾಗಿ ನಿಲ್ಲಬೇಕಾಗುತ್ತದೆ. ಈಗಲೂ ಕೂಡ ಆದೇ ರೀತಿ ಇದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ವಿಧೇಯಕದಿಂದ ಬ್ಯಾಂಕಿನವರಿಗೆ ಅನುಕೂಲವಾಗುತ್ತದೆಯೇ ವಿನಾ ಜನರಿಗೆ ಇನ್ನೇನೂ ಹೆಚ್ಚಿಗೆ ಅನುಕೂಲ ಮಾಡಲು ಸಾಧ್ಯವಿಲ್ಲ. ಆದುದರಿಂದ ಯಾವ ಯಾವ ಬ್ಯಾಂಕುಗಳವರು ಇಂತಹ ಪರಿಸ್ಥಿತಿಯಲ್ಲಿ ಹಣಕೊಡುವುದಕ್ಕೆ ಮುಂದೆ ಬರುತ್ತಾರೆ ಎನ್ನುವುದನ್ನು ನಿಷ್ಕರ್ಷೆಮಾಡದೇ ಹೋದರೆ ಈ ವಿಧೇಯಕವನ್ನು ಜಾರಿಗೆ ತಂದರೂ ಇದರಿಂದೇನೂ ಪ್ರಯೋಜನವಾಗುವುದಿಲ್ಲ ಎನ್ನುವುದಕ್ಕಾಗಿ ಇವೆರಡು ಅಂಶಗಳನ್ನು ನಾನೂ ಸರಕಾರದ ಗಮನಕ್ಕೆ ತರುತ್ತಿದ್ದೇನೆ. ಎಲ್ಲಿ ನೀರಾವರಿ ಯೋಜನೆ ಆಗಬೇಕೆಂದು ತಂದು ಮಾಡುತ್ತಿದ್ದಾರೋ ಅದರ ಕೆಳಗಡೆ ಇರುವ ಜಮೀನುಗಳು ಮೊದಲು ವಿತರಣೆಯಾಗಬೇಕು ಮತ್ತು ಹಾಗೆ ವಿತರಣೆ ಮಾಡಲು ಸೂಕ್ತವಾದ ಒಂದು ಧೋರಣೆ ರೂಪಿತವಾಬೇಕು. ಅದಕ್ಕೆ ಈ ಕಾಯಿದೆಯಲ್ಲಿ ಸಾಕಷ್ಟು ಅನುಕೂಲ ಮಾಡಿಕೊಡಬೇಕು. ಈಗಿರುವಂತೆ ಕಾಯಿದೆ ತಂದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಭೂಮಿ ಅಧಾರದ ಮೇಲೆ ಸರಿಯಾಗಿ ಹಂಚುವ ವ್ಯವಸ್ಥೆ ಮಾಡಿದರೆ ಆಗ ಈ ವಿಧೇಯಕದ ಉದ್ದೇಶ ನೆರವೇರುತ್ತದೆ ಮತ್ತು ಜನಕ್ಕೂ ಅನುಕೂಲವಾಗುತ್ತದೆ ಎಂದು ಸರಕಾರದ ಗಮನಕ್ಕೆ ತಂದು ಈ ಮಸೂದೆಯನ್ನು ನಾನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯನ್ನು ಮಾನ್ಯ ಸದಸ್ಯರಾದ ಶ್ರೀ ನಾಗಪ್ಪನವರೂ ಸ್ವಾಗತಿಸಿದ್ದಾರೆ ಮತ್ತು ಶ್ರೀ ಶ್ರೀನಿವಾಸರವರೂ ಇದನ್ನು ಸ್ವಾಗತ ಮಾಡಿದ್ದಾರೆ. ನಾವು ಈ ತಿದ್ದುಪಡಿ ಮಸೂದೆಯನ್ನು ಕಟುವಾಗಿ ವಿರೋಧಿಸಬೇಕಾಗಿದೆ. ಇಡೀ ಮಸೂದೆಯ ಬಗ್ಗೆ ಮಾನ್ಯ ಸದಸ್ಯರು ಬಹಳ ದೂರ ದೃಷ್ಟಿ ಇಟ್ಟು ಅರೋಚನೆ ಮಾಡಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ತಿಳಿಸಲು ಅಪೇಕ್ಷೆ ಮಾಡುತ್ತೇನೆ. ಇಂತಹ ಮಸೂದೆ ತರಬೇಕಾದರೆ ಎರಡು ಕಾರಣಗಳು ಇರಬಹುದು, ಒಂದು ಸರಕಾರ ದಿವಾಳಿ ಎದ್ದಿದೆ ಎನ್ನುವುದರ ಅರಿವಾದಾಗ ಈ ಮಸೂದೆಗೆ ಒಪ್ಪಿಗೆ ಕೊಡಬಹುದು. ಇಲ್ಲ ಸರಕಾರ ದಿವಾಳಿ ಎದ್ದಿಲ್ಲ ಎನ್ನುವ ಅಭಿಪ್ರಾಯ ಇಟ್ಟುಕೊಂಡಿದ್ದರೆ ನಾವು ಇದನ್ನು ವಿರೋಧಮಾಡಬೇಕಾಗುತ್ತದೆ. ಅವರಿಗೆ ಹೇಗಿದ್ದರೂ ವೋಟುಗಳು ಬರುತ್ತವೆ ಮತ್ತು ಮಸೂದೆ ಪಾಸಾಗುತ್ತದೆ ಎನ್ನುವ ಒಂದು ಉದ್ದೇಶ ಇದ್ದರೆ ಇಂತಹ ಮಸೂದೆ ಮಂಡಿಸಬಹುದು. ಆದರೆ ಈ ಸಭೆಯ ಸದಸ್ಯರು ತಪ್ಪು ದಾರಿಯನ್ನು ಎಂದಿಗೂ ಹಿಡಿಯುವುದಿಲ್ಲ ಎನ್ನುವ ನಂಬಿಕೆಯನ್ನು ವ್ಯಕ್ತ ಮಾಡುತ್ತೇನೆ. ಈಗಾಗಲೇ ಕಾನೂನು ಮಂತ್ರಿಗಳಾದ ಶ್ರೀಮಾನ್ ಪುಟ್ಟಸ್ವಾಮಿಯವರು ಅಪ್ಪಣೆ ಕೊಡಿಸಿದರು. ಈ ಮಸೂದೆ ಮಂಡಿಸಿದ ಕಾಲದಲ್ಲಿ ಕೃಷ್ಣರಾಜನಗರದಿಂದ ಯಾರೋ ಕೆಲವರು ಬಂದು ನಭಾ ನಾಯಕರಾದ ಮುಖ್ಯ ಮಂತ್ರಿಗಳನ್ನು ಕಂಡು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಅವರು ತಯಾರಾಗಿದ್ದಾರೆ ಎಂದು ಹೇಳಿದರು ಮತ್ತು ರಾಜ್ಯದ ಜನರ ಮನೋಭಾವನೆಯನ್ನು ಪ್ರತಿಬಿಂಬಿಸುವಂತಹ ಜನ ಇಲ್ಲ ಹೇಳುವುದು ತಪ್ಪು ಎನ್ನುವ ಒಂದು ಶಂಕೆಯನ್ನು ಉತ್ಪನ್ನ ಮಾಡಿದರು. ಸರಕಾರಕ್ಕೆ ಬೇಕಾದಾಗ ಎರಡು ಜನ ಹೇಳಿದ ಹುಲ್ಲು ಕಡ್ಡಿಯೇ ಬೆಟ್ಟದ ಹಾಗೆ ಕಾಣುತ್ತದೆ. ಆದರೆ ಇಡೀ ದೇಶದ ಜನತೆ ಹೇಳಿರೂ ಅದು ಹುಲ್ಲು ಕಡ್ಡಿಗೆ ಸಮಾನ ಎನ್ನುವುದು ಇದರಿಂದ ಅರ್ಥವಾಗುತ್ತದೆ. ಆದರೆ ಆ ಭಾಗದ ಜನತೆಯ ಅಭಿಪ್ರಾಯ ಇವರು ಹೇಳಿದ್ದಾರೆಂದು ಹೇಳಿದರೆ ಜನತೆಗೆ ಸಿಟ್ಟುಬರುತ್ತದೆ. ಈ ವಿಚಾರವನ್ನು ಒಬ್ಬ ಶಾಸನಸಭಾನದಸ್ಯನಾದ ನನಗೆ ಬಂದು ಹೇಳಲಲ್ಲ. ಯಾರೋ ಅಧಿಕಾರದ ಪತಿಯಲ್ಲಿ ಕೊಂಚ ಬಲವನ್ನು ಪಡೆದಂಥ ವ್ಯಕ್ತಿ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಈ ರೀತಿ ಮಾಡಿಸಿದ್ದಾರೆಂದು ಜನ ಮಾತನಾಡಿಕೊಳ್ಳುತ್ತಾರೆ. ಅಧಿಕಾರ ಅವರ ಕೈಲಿ ಇದೆ, ರಾಜಕೀಯ ಕಾರಣಗಳಿಗಾಗಿ ಅವರು ಆ ರೀತಿ ಮಾಡುತ್ತಾ ಇದ್ದಾರೆ. ರಾಜಕೀಯದ ಒತ್ತಾಯದಮೇರೆ ಈ ಬಿಲ್ಲನ್ನು ತಂದಿದ್ದೀರೆಂದು ನನಗೆ ಅರ್ಥವಾಗುತ್ತದೆ. ಬೆಟರ್‌ಮೆಂಟ್ ಲೆವಿ 500 ರೂಪಾಯಿಗಳೆಂದು ತೀರ್ಮಾನ ಮಾಡಿದರೆ, 4 ಇನ್‌ಸ್ಟಾರ್‌ಮೆಂಟ್ಸ್ ಕೊಡಬೇಕೆಂದು ತಿದ್ದುಪಡಿಯನ್ನು ತಂದಿದ್ದಾರೆ. 4 ಇನ್‌ಸ್ಟಾರ್‌ಮೆಂಟ್ ಅಂದರೆ 125 ರೂಪಾಯಿಗಳು ಆಯಿತು. ಇನ್ನು ಇದರಲ್ಲಿ 66 ಸಾವಿರ ಎಕರೆ ಪ್ರದೇಶಕ್ಕೆ ಅಂದರೆ ಒಂದು ಸಾವಿರ ಎಕರೆಗೆ ಒಂದು ಇನ್‌ಸ್ಟಾರ್‌ಮೆಂಟಿಗೆ 125 ರೂಪಾಯಿಗಳಂತೆ ಆದರೆ 22ಲಕ್ಷ 50ಸಾವಿರ ರೂಪಾಯಿಗಳು ಆಯಿತು. ಇದರಲ್ಲಿ 3/5 ಅಂದರೆ ರೈತರಿಗೆ 13ಲಕ್ಷ 60ಸಾವಿರ ರೂಪಾಯಿಗಳು ಬಂದರೆ ಅವರು ಆಯೋಜನೆಯನ್ನು ಪ್ರಾರಂಭ ಮಾಡಬಹುದು. 12ಕೋಟಿ ಯೋಜನೆಗೆ 13ಲಕ್ಷ 50ಸಾವಿರ ರೂಪಾಯಿಗಳು ರೈತರಿಂದ ಬಾರದೆ ಈ ಯೋಜನೆ ನಿಂತಿದೆ. ಬೆಟ್ಟ ಆಗೆಯಬೇಕು, ಆಗ ಇಲಿ ಸಿಗುತ್ತದೆ. 12ಕೋಟಿ ಯೋಜನೆಯನ್ನು ಪ್ರಾರಂಭಮಾಡುವುದಕ್ಕೆ ರೈತರಿಂದ 13ಲಕ್ಷ 50ಸಾವಿರ ರೂಪಾಯಿ

(ಶ್ರೀ ಎಚ್. ಎನ್. ನಂಜೇಗೌಡ)

ಗಳು ಬರಬೇಕು. ಅದಕ್ಕಾಗಿ ಇಲಯನ್ನು ಹಿಡಿಯಬೇಕಾದರೆ ಬೆಟ್ಟ ಆಗೆಯಬೇಕಾಗಿದೆ. ಏನೋ ಒಂದುಗಾದೆ ಹೇಳುತ್ತಾರೆ, ತೋಳ ಬಂತು, ತೋಳ ಬಂತು ಎಂದು. ಇದು ಹಾಗಾಗಿದೆ. ಇವರು ಒಂದು ನೋಟಿಫಿಕೇಷನ್, ಎಸ್ಟಿಮೇಟ್, ಪ್ಲಾನ್ ಹಾಕುತ್ತಾರೆ. ಆ ಪ್ಲಾನ್, ಎಸ್ಟಿಮೇಟ್ ಹಾಕುವಾಗ, ಹಾರಂಗಿಗೋಸ್ಕರ ಮೂರು ಸಾರಿ ಕಲ್ಲು ನೆಟ್ಟಿದ್ದಾರೆ. ಹೇಮಾವತಿ ಆಗಬೇಕಾದರೆ ಎರಡು ಸಾರಿ ಕಲ್ಲು ನೆಟ್ಟಿದ್ದಾರೆ. ಇದನ್ನು ವಿಶ್ವೇಶ್ವರಯ್ಯನವರ ಕಾಲದಲ್ಲಿ 2 ಸಾರಿ ಸರ್ವೆ ಮಾಡಿದ್ದರು. ಈಗ ಇವರೇ ಅದಕ್ಕೆ ಅಥಾರಿಟಿಯಾಗಿ ಹೇಳಿದ್ದಾರೆ. ಇವರಿಗೆ ಯಾವ ಹಕ್ಕು ಇದೆಯೆಂದು ನಾನು ಕೇಳುತ್ತೇನೆ. ಇವತ್ತು ಕಪಿನಿ ಪ್ರಾಜೆಕ್ಟ್ ಸ್ಥಳಾಂತರ ವಾಯಿತು. ಅಮೇಲೆ ಪುನಃ ಬದಲಾಯಿಸಿದರು. ಹೀಗೆ ದಿನಂಪ್ರತಿ ಬದಲಾವಣೆಗಳಾಗುತ್ತಿವೆ. ಹೀಗೆ ಹುಚ್ಚು ಸರ್ಕಾರದ ಮುಂದೆ ಯಾರಿಗೆ ನಂಬಿಕೆ ಇದೆ! ಇವರು ಮಾಡುವಂಥ ಹುಚ್ಚು ದರ್ಬಾರ್ ನಿಂದ ಏನೇನೋ ನೋಟಿಫಿಕೇಷನ್ ಮಾಡುತ್ತಾರೆ ಕಾನೂನು ಮಂತ್ರಿಗಳಿಗಾದರೂ ರೈತರ ಸಂಪರ್ಕ ಇದೆ. ಅವರು 13ಲಕ್ಷ 50ಸಾವಿರ ರೂಪಾಯಿಗಳಿಂಥ ಇಲಯನ್ನು ಹಿಡಿಯ ಬೇಕಾದರೆ ಬೆಟ್ಟ ಆಗೆಯಬೇಕು. ಈಗ ಪ್ರತಿಯೊಂದು ಮನೆಯಲ್ಲಿಯೂ ಕುರುಕ್ಷೇತ್ರವಾಗಿದೆ. ಅವರಿಗೆ ಕಮಿಟ್‌ಮೆಂಟ್, ಏನೇನೋ ಇರುತ್ತದೆ. ಪ್ರಾಪರ್ಟಿ ಟೈಟರ್ ಇಲ್ಲದೆ ಏನೂ ಮಾಡುವುದಕ್ಕಾಗುವುದಿಲ್ಲ. ಟೈಟರ್ ಒಬ್ಬರಿಗೇ ಇರುವುದಿಲ್ಲ. ಎಲ್ಲರೂ ಒಪ್ಪಬೇಕಾಗುತ್ತದೆ. ಮೊದಲನೆಯದಾಗಿ ಯಾರೂ ಇದಕ್ಕೆ ಒಪ್ಪುವುದಿಲ್ಲ. ಯಾತಕ್ಕೆಂದರೆ ಅವನಿಗೆ ಮಕ್ಕಳ ಮದುವೆಗೆ ದುಡ್ಡು ಸಿಗುತ್ತದೋ ಇಲ್ಲವೋ ಎಂಬ ಭಯ ಇರುತ್ತದೆ.

ಶ್ರೀ ಬಿ. ದೊಡ್ಡಬೋರೇಗೌಡ.—ಮದುವೆ ಮಾಡಿಸುವ ಪ್ರಶ್ನೆಯಲ್ಲ. ಈಗಾಗಲೇ ರೈತರ ಜಮೀನು ಅನೇಕ ಹಂತಗಳಲ್ಲಿ ಸಾಲಸೋಲಕ್ಕೆ ಸಿಕ್ಕಿ ಸಾಲಸೋಲ ಅತಿಯಾಗಿ ಅವರು ಬದುಕುವುದೇ ಕಷ್ಟವಾಗಿದೆ. ಈಗ ಅವರಿಗೆ ಕೇವಲ ಸೇಕಡ 1 ಅಥವಾ 2 ರೂಪಾಯಿಗಳಷ್ಟು ಕೂಲಮಾತ್ರ ಸಿಗುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಶ್ರೀ ದೊಡ್ಡ ಬೋರೇಗೌಡರು ಹೇಳಿದ ಹಾಗೆ ಈಗಾಗಲೇ ಅವರು ಬಹಳ ಇಕ್ಕಟ್ಟಿಗೆ ಸಿಕ್ಕಿದ್ದಾರೆ. ಸರ್ಕಾರ 100ಕ್ಕೆ 100ರಷ್ಟು ಇದರಲ್ಲಿ ಪ್ರತಿಫಲವಿದೆಯೆಂಬ ಭಾವನೆಯನ್ನು ಅವರಲ್ಲಿ ಉಂಟುಮಾಡಿದರೆ ಆಗ ಇವರ ಕಾನೂನು ಜಾರಿಯಾಗುತ್ತದೆಂದು ನಂಬಿಕೆ ಬರುತ್ತದೆ. ಆ ಪ್ರಶ್ನೆ ಬೇರೆ. ಇಲ್ಲದಿದ್ದರೆ ಸಾಮಾನ್ಯ ಜನರಿಗೆರ್ಸಾ ಒಂದು ರೀತಿ ಅಪನಂಬಿಕೆ ಸರ್ಕಾರದ ಮೇಲೆ ಬರುತ್ತದೆ. ಯಾವುದೋ ಒಂದು ಕಾಮಗಾರಿಯನ್ನು ಮಾಡುತ್ತೇವೆಂದು ಭರವಸೆ ಕೊಟ್ಟರು. ಅದು ಇನ್ನೂ ಆಗಲೇ ಇಲ್ಲ. ಎನ್ನುವ ಒಂದು ಅಪನಂಬಿಕೆಯ ತಳಹದಿಯ ಮೇಲೆ ಈಗ ರೈತ ನಿಂತಿದ್ದಾನೆ. ಪ್ರಾಕ್ಟಿಕಲ್ಲಾಗಿ ರಚನಾತ್ಮಕವಾಗಿ ಏನೇನು ಸಾಧಿಸಿದ್ದೇವೆ, ಇನ್ನೂ ಏನೇನು ಸಾಧಿಸಬೇಕು, ಏನೇನು ಸಾಧಿಸಿಲ್ಲವೆಂಬುದನ್ನು ಮುಂಚೆಯೇ ಎಮರ್ಜಿಸಿ ನೋಡಿದರೆ, ಆಗ ರೈತನ ಇತಿಮಿತಿ ಗೊತ್ತಾಗುತ್ತದೆ. ಅದನ್ನೂ ಕೂಡ ಸರ್ಕಾರದವರು ಅನುಸರಿಸಬೇಕಾಗುತ್ತದೆ. ಆದ್ದರಿಂದ ರೈತರು ಅಡ್ವಾನ್ಸಾಗಿ ಬೆಟರ್‌ಮೆಂಟ್ ರೇಪಿ ಕೊಡ ಬೇಕೆಂದರೆ ಬಹಳ ಕಷ್ಟ. ಎಷ್ಟು ಜನ ಬಂದು ಬೆಟ್ಟ ಆಗೆದರೂ ಇಲಯನ್ನು ಹಿಡಿಯಬೇಕಾದರೆ ಸಾಧ್ಯವಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಷೋಕೀದಾರ್ ಮನುಷ್ಯನ ಹಾಗೆ ಸರ್ಕಾರ ದವರು ಖರ್ಚುಮಾಡ್ಕವನ್ನು ಮಾಡುತ್ತಿದ್ದಾರೆ. ವರ್ಷಕ್ಕೆ ಎಂಟರ್‌ಟೇನ್‌ಮೆಂಟ್ ಚಾರ್ಜಸ್ 8 ಲಕ್ಷ ರೂಪಾಯಿಗಳನ್ನು ಖರ್ಚುಮಾಡುವ ರಾಜ್ಯ 28—30 ಮಂತ್ರಿಗಳನ್ನು ಇಟ್ಟು ಕೊಳ್ಳುವು ದಕ್ಕೆ ಏನು ಕಾರಣ? ಜನತೆಯ ಪ್ರತಿನಿಧಿಗಳ ಬಾಯಿಗೆ ಬೀಗ ಹಾಕಬೇಕೆಂದು ಈ ರೀತಿಯಾಗಿ ಸರ್ಕಾರ ಮಾಡುತ್ತಿದೆ. ಶ್ರೀಮತಿ ನಾಗರತ್ನಮ್ಮನವರು ಮತ್ತು ನಂಜೇಗೌಡರೂ ಏನಾದರೂ ಚುನಾವಣೆಯಾಗಿ ಬರಬೇಕೆಂದರೆ, ಇನ್ನೊಂದು ಸಾರಿ ಅವರು ಗೆದ್ದು ಬರಬಾರದು ಎನ್ನುವ ರೀತಿ ಸರ್ಕಾರದವರು ಮಾಡುತ್ತಿದ್ದಾರೆ.

Mr. SPEAKER.—Hon. Member may conclude early.

Sri H. M. CHANNABASAPPA.—I have a submission, Sir. So far as Bills are concerned, I am afraid the Chair cannot put severe restriction on time. You have got to be a little lenient in these matters because these are matters which cannot be disposed of in a few minutes. Merely because there is limited time, are we to shut our mouths and

simply vote for the Bill ! The entire implication of the Bill will have to be made out and particularly those who oppose the Bill must be given full opportunity to expose all the loopholes in the Bill.

ಶ್ರೀ ಎಚ್. ಎನ್ ನಂಜೇಗೌಡ.—ನಾನು ಪ್ರಾಮುಖ್ಯವಾದ ಅಂಶವನ್ನು ಹೇಳುತ್ತೇನೆ. ಬೆಟ್ಟ ಅಗೆದು ಇಲಿಯನ್ನು ಹಿಡಿಯುತಕ್ಕ ಕಾರ್ಯವೆಂದು ಏಕೆ ಹೇಳುತ್ತಿದ್ದೀನೆಂದರೆ,

(*a*) to commence and complete the construction, restoration, expansion or alteration of any work which is capable of irrigating more than one hundred acres of land; or

(*b*) to proceed towards the completion with sufficient expedition in respect of the uncompleted part or stage of the work, the construction, restoration, expanstion or alteration of which the Government has already commenced and which is capable of irrigating more than one hundred acres of and.....

ಎಂದು ಹೇಳುತ್ತಿದ್ದಾರೆ. ಅಂದರೆ, ಹಾರಂಗಿ ಪ್ರಾರಂಭ ಮಾಡುವುದಕ್ಕಾಗಲು, ಕಂಬದಕಡ ಪ್ರಾರಂಭ ಮಾಡುವುದಕ್ಕಾಗಲು, ಅಪ್ಪರ್ ಕೃಷ್ಣ ಪ್ರಾರಂಭ ಮಾಡುವುದಕ್ಕಾಗಲು, ಘಟಪ್ರಭಾ ಕಬಿನಿ ಮುಂದುವರಿಸುವುದಕ್ಕಾಗಲು, ಹೇಮಾವತಿ ಮುಂದುವರಿಸುವುದಕ್ಕಾಗಲು, ಘಟಪ್ರಭಾ ಮಲಪ್ರಭಾ ಮುಂದುವರಿಸುವುದಕ್ಕಾಗಲು ಎಲ್ಲಾ ಸರ್ಕಾರ ಇದರ ಪ್ರಕಾರ ಮಾಡಬೇಕಾಗುತ್ತದೆ. ಸಣ್ಣ ಸಣ್ಣ ಪ್ರೊಜೆಕ್ಟ್ ಮಾಡುವ ಉದ್ದೇಶ ಇಟ್ಟುಕೊಂಡಿದ್ದರೆ ಆಗುತ್ತಿತ್ತು. ಮೊನ್ನೆ ಮಂತ್ರಿಯವರು ಹೇಳಿದರೂ ದೊಡ್ಡದಕ್ಕ ಎಂದು. ಸರ್ಕಾರದ ಪತಿಯಿಂದ ಬಂದಿರತಕ್ಕ ಕಾರಣಗಳನ್ನು ನೆನೆದುಕೊಂಡಾಗ ಇದು ಒಂದು ನೆಪ ಎಂಬುದರಲ್ಲಿ ಸಂಶಯವಿಲ್ಲವೆಂಬುದನ್ನು ಹೇಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ನೆಪವೆಂದು ಹೇಳುತ್ತಿದ್ದೀರಿ, ಅಸ್ತ್ರ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಅನ್ವಯ ಆಗುತ್ತದೆ. ನಿಮ್ಮ ಸರ್ಕಾರದಲ್ಲಿ ಹಗ್ಗವೆ ಹಾವಾಗುತ್ತದೆ. ಆ ಮೇಲೆ 3A(2) ಹೀಗೆ ಹೇಳಿದೆ :

"(2) The draft scheme referred to in sub section (1) shall specify the lands under the irrigable command of the work which in the opinion of the Government are capable of being benefited by the completion of such work, the approximate amount of advance contribution payable per acre and such other particulars as may be prescribed and state that when the landholders of not less than sixty per cent of such lands express their willingness in writing within the time specified therefor to make such advance contribution towards such work either in one lump sum or in four equal annual instalments etc....."

ಎಂದು. 13 ಲಕ್ಷದ 50 ಸಾವಿರ ಕೊಟ್ಟರು ಎಂದು ಹೇಳಿದರೆ ಅದಕ್ಕೆ ಈ ಸರ್ಕಾರದಿಂದ ನೋಟಿಫಿಕೇಶನ್ ಆಗಬೇಕು, ಅದು ಅಪ್ರೂವ್ ಆಗಬೇಕು, ಆ ಮೇಲೆ ಅಬ್ಜೆಕ್ಷನ್ಸ್ ಕಾಲ್ ಫಾರ್ ಮಾಡಬೇಕು. ಅದೆಲ್ಲಾ ಆಗಬೇಕಾದರೆ, 6 ತಿಂಗಳು, ಒಂದು ವರ್ಷ ಹೋಗುತ್ತದೆ. ಆ ಮೇಲೆ ಹಣ ವಸೂಲುಮಾಡಿ, ನೀವು ಕನ್ವಿದರ್‌ಮಾಡಿ 12 ಕೋಟಿಯ ಪ್ರೊಜೆಕ್ಟನ್ನು ಪ್ರಾರಂಭ ಮಾಡತಕ್ಕಂತಹ ಒಂದು ಘನವಾದ ಉದ್ದೇಶವನ್ನು ಇಟ್ಟುಕೊಂಡಿದ್ದೀರಿ. ಆ ಮೇಲೆ 3 (ಎ) ಸಬ್ ಕ್ಲಾಸ್ 5 ರಲ್ಲಿ :

"(5) Whether the landholders of not less than sixty-six percent of the land specified in the scheme have not expressed their willingness to pay the advance contribution or where the amount contribution so paid is less than three fifths of the first

(ಶ್ರೀ ಎಚ್. ಎನ್. ನಂಜೇಗೌಡ)

instalment of the advance contribution, the Government shall not be bound to commence the execution of the work or to proceed towards the completion of the incompleted part or stage of the work as the case may be, etc....."

ಎಂದು ಹೇಳಿದ್ದಾರೆ. 12 ಕೋಟಿಯ ಹಾರಂಗಿ ಕಟ್ಟಬೇಕಾದರೆ, ಅವರು ಕೊಡುವುದಿಲ್ಲವೆಂದು ಹೇಳಿದರೆ ಗೌರ್ನಮೆಂಟ್ ಶರ್ ನಾಟ್ ಬಿ ಬೌಂಡ್ ಟು ಕಮೆನ್ಸ್ ದಿ ಎಗ್ಸಿಕ್ಯೂಶನ್ ಎಂದು ಹೇಳುತ್ತಾರೆ. ಅಂದರೆ 13 ಲಕ್ಷ 50 ಸಾವಿರ ಕೊಡದೆ ಹೋದರೆ, ದೆ ಆರ್ ನಾಟ್ ಬೌಂಡು ಟು ಕಮೆನ್ಸ್ ಹಾರಂಗಿ. ದೆ ಆರ್ ನಾಟ್ ಟು ಕಂಪ್ಲೀಟ್ ಹೇಗಾಗುತ್ತೆ. 76 ಕೋಟಿಯ ಅಪರ್ ಕೃಷ್ಣಾವನ್ನು ನಿಲ್ಲಿಸುವುದಕ್ಕೆ ಅವಕಾಶ ಇದೆ, ಘಟಪ್ರಭಾ, ಮಲಪ್ರಭಾ ಎರ್ಲಾ ಕೈಬಿಡುವುದಕ್ಕೆ ಹಕ್ಕು ಇದೆ. ನಿಮ್ಮ ಲೆಕ್ಕದ ಪ್ರಕಾರ 13 ಲಕ್ಷ 50 ಸಾವಿರದಲ್ಲಿ ಕಬಿನಿ ಪ್ರಾಜೆಕ್ಟ್ ಆಗುವುದಿಲ್ಲ.

ಇದು ಯಾವ ರೀತಿ ಇದೆಯೆಂದರೆ ಬೆಟ್ಟ ಅಗೆದು ಇಲಿ ದೊರಕಿಸಿಕೊಳ್ಳುವ ನೀತಿಯಂತಾಗಿದೆ. ನಿಮ್ಮ ಲೆಕ್ಕದ ಪ್ರಕಾರ 13 ಲಕ್ಷ 50 ಸಾವಿರ ರೂಪಾಯಿಗಳನ್ನು ಕೊಡದೇ ಹೋದರೆ ಯಾವ ಕಾಲದಲ್ಲಿ ಯಾವ ಅಣೆಕಟ್ಟೆ ಕಟ್ಟುವುದನ್ನು ನಿಲ್ಲಿಸಿದ್ದೀರಿ ಎಂಬುದನ್ನು ಪ್ರಾಮಾಣಿಕವಾಗಿ ಉತ್ತರ ಹೇಳಬೇಕು. ಯಾವುದೋ ಒಂದು ನೆಪ ಮಾಡಿಕೊಂಡು ನೀವು ಈ ರೀತಿ ಮಾಡುವುದಕ್ಕೆ ಹೊರಟಿರುವುದು ಸರಿಯಲ್ಲ. ಈಗ ಯಾವುದೇ ಒಂದು ಪ್ರಾಜೆಕ್ಟ್ ಕಟ್ಟುವಾಗ ಈ ಕಾನೂನು ಪ್ರಕಾರ ಶೇಕಡಾ 60 ಜನ ತಮ್ಮ ಒಪ್ಪಿಗೆಯನ್ನು ಕೊಟ್ಟು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡಬೇಕು ಎಂದು ಇದೆ. ಈ ರೀತಿ ಕಾನೂನು ಇರುವಾಗ ಯಾವುದಾದರೂ ಒಂದು ಪ್ರಾಜೆಕ್ಟ್ ಕಟ್ಟತಕ್ಕ ಸಂದರ್ಭದಲ್ಲಿ ಕೆಲವರು ಅದಕ್ಕೆ ಒಪ್ಪಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಮುಂದೆ ಬಂದು ಕೆಲವರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಮುಂದೆ ಬಾರದೆ ಇದ್ದರೆ ಅಂಥಾ ಸಂದರ್ಭದಲ್ಲಿ ಸರ್ಕಾರದವರು ಆ ಪ್ರಾಜೆಕ್ಟನ್ನು ಕಟ್ಟುವುದಕ್ಕೆ ಕಾನೂನು ಪ್ರಕಾರ ಎಷ್ಟು ಜನ ಗಳು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಮುಂದೆ ಬರಬೇಕೋ ಅಷ್ಟು ಜನ ಮುಂದೆ ಬಂದಿಲ್ಲ ಆದ್ದರಿಂದ ಅದನ್ನು ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಏತಕ್ಕೆಂದರೆ ಈಗಿನ ಮುಖ್ಯಮಂತ್ರಿಗಳ ನಾಯಕತ್ವವನ್ನು ಜನ ಭಾರಿ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಇವರು ಭಾರಿ ಮುತ್ಸದ್ದಿತನದಿಂದ ನಡೆದುಕೊಳ್ಳುತ್ತಾರೆ ಎಂದು ನಾವು ತಿಳಿದುಕೊಂಡಿಲ್ಲ. ಅವರು ರಾಜಕೀಯವಾಗಿ ನಡೆದುಕೊಳ್ಳುತ್ತಾರೆಂದು ನಮಗೆ ಅರ್ಥವಾಗಿದೆ. ಇವೊತ್ತು ಇವರು ಪ್ರಾಮಾಣಿಕವಾಗಿ ಕೆಲಸಮಾಡುತ್ತಿದ್ದಾರೆಯೇ ಎಂದು ನಾವು ಕೇಳಬೇಕಾಗಿದೆ. ಈಗ ಸರ್ಕಾರದವರು ಒದಗಿಸಿಕೊಟ್ಟಿರತಕ್ಕ ನೀರಾವರಿ ಪ್ರಯೋಜನವನ್ನು ತುಂಗಭದ್ರಾ ಕೆನಾಲನ ಕೆಳಗಡೆ ಇರತಕ್ಕ ಕೆಲವು ರೈತರು ಪಡೆದುಕೊಂಡು 6-7 ಬೆಳೆಗಳನ್ನು ಬೆಳೆದಿದ್ದಾರೆ. ಅವರು ಬೆಟರ್‌ಮೆಂಟ್ ಲೆವಿ ಕೊಟ್ಟಿಲ್ಲ ಎಂದು ಗೊತ್ತಾಗಿದೆ. ಇದೇ ರೀತಿ ನಮ್ಮ ರಾಜ್ಯದಲ್ಲಿ ಕೆಲವರು ಹೇಳಿದ ಹಾಗೆ ನುಮಾರು 12 ಕೋಟಿ ರೂಪಾಯಿಗಳು ಬೆಟರ್‌ಮೆಂಟ್ ಲೆವಿ ಬಾಕಿ ಇದೆಯೆಂದು ಗೊತ್ತಾಗಿದೆ. ಸರ್ಕಾರದವರು ಒದಗಿಸಿಕೊಟ್ಟ ನೀರಾವರಿ ಸೌಲಭ್ಯವನ್ನು ಉಪಯೋಗಿಸಿಕೊಂಡು 6-7 ಬೆಳೆಗಳನ್ನು ಬೆಳೆದು ಸಾವಿರಾರು ರೂಪಾಯಿಗಳನ್ನು ಸಂಪಾದನೆ ಮಾಡಿಕೊಂಡು ಅಂಬಾಜಿದರ್ ಕಾರಿನಲ್ಲಿ ತಿರುಗಾಡತಕ್ಕ ಜನಗಳನ್ನು ಬೆಟರ್‌ಮೆಂಟ್ ಲೆವಿಯನ್ನು ಕೇಳುವವರೇ ಇಲ್ಲ. ಈಗಾಗಲೇ ಇರತಕ್ಕಂಥ ಕಾನೂನು ಪ್ರಕಾರ ಬಾಕಿ ಕೊಡಬೇಕಾಗಿರತಕ್ಕವರಿಂದ ಹಣವನ್ನು ವಸೂಲು ಮಾಡುವುದಕ್ಕೆ ನಮಗೆ ಶಕ್ತಿ ಇಲ್ಲ. ಈಗ ಮತ್ತೊಂದು ಕಾನೂನನ್ನು ತಂದು ಗ್ರಾಮಾಂತರ ಪ್ರದೇಶದಲ್ಲಿ ಹರುಕು ಬಟ್ಟೆಯನ್ನು ಹಾಕಿಕೊಂಡು ಮೈ ಕೈ ಕಾಣತಕ್ಕ ಬಡ ಜನಗಳಿಂದ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ವಸೂಲು ಮಾಡಿ ಪ್ರಾಜೆಕ್ಟ್‌ಗಳನ್ನು ಕಟ್ಟುತ್ತೇವೆ ಎಂದು ಹೊರಟಿದ್ದೀರಿ. ಇದು ಸರಿಯೇ? ಇಂಥಹ ಒಂದು ಕಾನೂನನ್ನು ತರುವುದರಲ್ಲಿ ನ್ಯಾಯ ನೀತಿ ಧರ್ಮ ಏನಾದರೂ ಇದೆಯೇ ಎಂದು ನಾನು ಕೇಳಬೇಕಾಗಿದೆ. ನೀರಾವರಿ ಬೆಟರ್‌ಮೆಂಟ್ ತೆರಿಗೆ 12 ಕೋಟಿ ರೂಪಾಯಿಗಳು ಬಾಕಿ ಎಂತಿರುವುದನ್ನು ಗಮನದಲ್ಲಿಟ್ಟುಕೊಂಡು ಫೈನಾನ್ಸ್ ಕಮಿಷನ್ನಿನವರು 18 ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯಕ್ಕೆ ಕಡಿಮೆ ಕೊಟ್ಟಿದ್ದಾರೆ ಎಂದು ನಮಗೆ ಖಚಿತವಾಗಿ ತಿಳಿದುಬಂದಿದೆ. ಈ ಬಗ್ಗೆ ಸರ್ಕಾರ ಸ್ಪಷ್ಟೀಕರಣ ನೀಡಬೇಕು. ಯಾವ ಉದ್ದೇಶಕ್ಕಾಗಿ ಈ ಬಿಲ್ಲನ್ನು ನೀವು ತಂದಿದ್ದೀರಿ. ರಾಜಕೀಯ ಉದ್ದೇಶವನ್ನು ಇಟ್ಟುಕೊಂಡು ಈ ಮಸೂದೆಯನ್ನೇ ನಾದರೂ ತಂದಿದ್ದೀರಾ? ಇದಕ್ಕೆ ಕಾನೂನು ಮಂತ್ರಿಗಳು ಉತ್ತರ ಕೊಡಬೇಕು. ನೀರಾವರಿ ಬೆಟರ್‌ಮೆಂಟ್ ಲೆವಿ ಬಾಕಿಗೆ ಸಂಬಂಧ ಪಟ್ಟಂತೆ 12 ಕೋಟಿ ರೂಪಾಯಿಗಳು ಬರುತ್ತದೆ ಎಂದೇ

ನಾದರೂ ಫೈನಾನ್ಸ್ ಕಮಿಷನ್ನಿನವರು ನಮ್ಮ ರಾಜ್ಯಕ್ಕೆ 18 ಕೋಟಿ ರೂಪಾಯಿಗಳನ್ನು ಕಡಿಮೆ ಕೊಟ್ಟಿದ್ದಾರೆಯೇ ಹೇಗೆ ಎಂಬುದನ್ನು ಈ ಮನಸೂದೆಯು ಪಾಸು ಆಗುವುದಕ್ಕೆ ಮುಂಚೆ ಮಾನ್ಯ ಮಂತ್ರಿಗಳು ಹೇಳಬೇಕು ಎಂದು ನಾನು ಅಗ್ರಹಪೂರ್ವಕವಾಗಿ ಕೇಳುತ್ತೇನೆ. ಇವೊತ್ತು ಈ ದೇಶದಲ್ಲಿ ಸಾಮಾನ್ಯ ರೈತ ಏನಿದ್ದಾರೆ ಅವನಿಗೆ ಈ ಸರ್ಕಾರ ಮಾಡತಕ್ಕಂಥ ಕಾನೂನಿಂದ ಬಹಳ ಕಷ್ಟವಾಗುತ್ತಿದೆ. ಇದರಿಂದ ನಾಳೆ ಒಂದು ಸಾಧ್ಯತೆ ಇದೆ. ಅದು ಏನೆಂದರೆ ಕಾವೇರಿ ಜರಾನಯನದಲ್ಲರತಕ್ಕ ಪ್ರಾಜೆಕ್ಟ್‌ಗಳಾಗಲೀ, ಕೃಷ್ಣಾ ಜರಾನಯನದರಲ್ಲರತಕ್ಕ ಪ್ರಾಜೆಕ್ಟ್‌ಗಳಾಗಲೀ ಅವುಗಳನ್ನು ತೆಗೆದುಕೊಳ್ಳುವಾಗ ಪ್ರಯಾರಿಟಿ ಬೇಸಿಸ್ ಮೇಲೆ ಕೆಲಸವನ್ನು ಪ್ರಾರಂಭ ಮಾಡ ಬಹುದು ಎಂದು ಕಾಣುತ್ತದೆ. ಈ ಕಾನೂನಿನ ಪ್ರಕಾರ ಇಂಥಾ ಒಂದು ನೋಟಿಫಿಕೇಷನ್ ಅನ್ನೂ ಎರ್ಲಾ ಕಡೆಗಳಲ್ಲೂ ಹಾಕಿರುತ್ತಾರೆ. ಆಗ ಪ್ರಯಾರಿಟಿ ಪ್ರಕಾರ ಯಾವ ಪ್ರಾಜೆಕ್ಟನ್ನು ಕಟ್ಟಬೇಕು ಎನ್ನುವ ಒಂದು ದೊಡ್ಡ ಸಮಸ್ಯೆ ಬರುತ್ತದೆ. ಯಾವುದಾದರೂ ಒಂದು ಪ್ರಾಜೆಕ್ಟನ್ನು ಕಟ್ಟ ಇನ್ನೊಂದು ಕಡೆ ನಿಲ್ಲಿಸುತ್ತೇವೆ ಎಂದು ಹೇಳಿದಾಗ ಅದರಿಂದ ತೊಂದರೆಯಾಗುತ್ತದೆ. ಏತ ಕ್ಕೆಂದರೆ ಈಗ ಕಾವೇರಿ ಬೇಸಿನ್‌ನಲ್ಲರಕ್ಕ ಪ್ರಾಜೆಕ್ಟ್‌ಗಳನ್ನು ಪ್ರಯಾರಿಟಿ ಬೇಸಿಸ್ ಮೇಲೆ ತೆಗೆದು ಕೊಳ್ಳುತ್ತೇವೆ ಎಂದರೆ 1974ನೇ ಇಸವಿ ಹತ್ತಿರ ಬಂತು. ಆದ್ದರಿಂದ ಅಗ್ರಿಮೆಂಟ್ ಪ್ರಕಾರ ಕಾವೇರಿ ನೀರಿನಲ್ಲಿ ನಮಗೆ ಬರಬೇಕಾಗಿರತಕ್ಕಂಥ ಹಕ್ಕಿನ ನೀರನ್ನು 1974ನೇ ಇಸವಿಯ ಒಳಗಾಗಿ ಉಪಯೋಗ ಮಾಡಿಕೊಳ್ಳಲೇಬೇಕು. ಆದ್ದರಿಂದ ಆ ಪ್ರಾಜೆಕ್ಟ್‌ಗಳನ್ನು ಕಟ್ಟಲೇ ಬೇಕಾಗುತ್ತದೆ. ಈಗ ಅಪ್ಪರ್ ಕೃಷ್ಣಾ ಪ್ರಾಜೆಕ್ಟನ್ನು ಕಟ್ಟುವುದಕ್ಕೆ ಆ ಯೋಜನೆಯ ಏರಿಯಾದಲ್ಲರತಕ್ಕ ರೈತರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡಲಿಲ್ಲ ಎಂದು ಅದನ್ನು ಕಟ್ಟುವುದನ್ನು ನಿಲ್ಲಿಸುತ್ತೀರಾ? ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಹಾಕತಕ್ಕಂಥ ಕೆಲಸವನ್ನು ಏತಕ್ಕೆ ಮಾಡುತ್ತೀರಿ? ಇದರಿಂದ ಜನಮನದಲ್ಲಿ ಯಾವರೀತಿಯ ಪರಿಣಾಮವುಂಟಾಗುತ್ತದೆ ಎಂಬುದನ್ನು ಯೋಚನೆ ಮಾಡ ಬೇಕು. ರಾಜ್ಯ ಸರ್ಕಾರದ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡತಕ್ಕ ಅವಕಾಶಗಳನ್ನು ಕಲ್ಪನೆ ಮಾಡತಕ್ಕ ಕರಾಳ ಶಾಸನ ಇದು ಎಂದು ಹೇಳಬೇಕಾಗಿದೆ. ಇಂಥ ಒಂದು ಶಾಸನವನ್ನು ಮಾಡುವುದಕ್ಕೆ ಸರ್ಕಾರದವರು ಏತಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ಕೇಳಬೇಕಾಗಿದೆ. ಏಕೆಂದರೆ ಯಾವಾಗಲೂ ನಾವು ಮಾಡತಕ್ಕಂಥ ಕಾನೂನುಗಳೇ ಆಗಲೀ, ನಾವು ಕೈಕೊಳ್ಳ ತಕ್ಕಂಥ ಕ್ರಮಗಳೇ ಆಗಲೀ ಈ ರಾಜ್ಯದ ಜನತೆಯ ಮನಸ್ಸಿನ ಮೇಲೆ ತಳಮಳವನ್ನಾಗಲೀ ಅನುಮಾನವನ್ನಾಗಲೀ ಉಂಟುಮಾಡುವ ಸ್ಥಿತಿಯಲ್ಲ ಇರಬಾರದು. ಜನರಲ್ಲ ಭಾವೈಕ್ಯತೆ ಉಂಟುಮಾಡುವ ಶಾಸನವನ್ನು ನಾವು ಮಾಡಬೇಕು. ಜನರು ಸಿಡಿದೇಳುವಂತಹ ಕಾನೂನು ಮಾಡಬಾರದು. ಈಗ ತಂದಿರುವ ಶಾಸನವನ್ನು ನೋಡಿದರೆ ನನ್ನ ಮನಸ್ಸು ತಳಮಳಗುಟ್ಟುತ್ತಿದೆ.

5-00 P.M.

ಶ್ರೀ ಬಿ. ಪಿ. ಗಂಗಾಧರ.—ನಮ್ಮ ರಾಜ್ಯದಲ್ಲರತಕ್ಕಂಥ ಕೋಟ್ಯಾಂತರ ರೂಪಾಯಿಗಳ ನ್ಯಾಯವನ್ನು ಈಡು ಮಾಡುವುದಕ್ಕಾಗಿ ಈ ಒಂದು ಬಿಲ್ಲನ್ನು ತಂದಿದ್ದಾರೆ. ಈಗಾಗಲೇ ನಮ್ಮ ರಾಜ್ಯ ದಲ್ಲರತಕ್ಕಂಥ ಅನೇಕ ಸೊಸ್ಯೆಟಿಗಳು ಲಿಕ್ವಿಡೇಟ್ ಆಗಿವೆ. ಕೆಲವು ಸ್ಮಾಲ್ ಸ್ಕೇರ್ ಇಂಡಸ್ಟ್ರೀಗಳು ಲಿಕ್ವಿಡೇಟ್ ಆಗುವ ಸ್ಟೇಜಿಗೆ ಬಂದಿವೆ. ಈಗ ಮತ್ತೆ ಈ ಒಂದು ಶಾಸನವನ್ನು ತಂದು ಜನರಲ್ಲರುವ ನ್ಯಾಯವನ್ನು ಈಡು ಮಾಡಿಸಿ ಆ ಮೂಲಕ ಬರತಕ್ಕಂಥ ಹಣವನ್ನು ದುಂದು ಮಾಡುವುದಕ್ಕೆ ಹೊರಟಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಈ ಒಂದು ತಿದ್ದುಪಡಿಯನ್ನು ಸರ್ಕಾರದವರು ತಂದಿರುವ ಮುಖ್ಯ ಉದ್ದೇಶವೇನೆಂದರೆ ತಮ್ಮ ಒಂದು ಜವಾಬ್ದಾರಿಯನ್ನು ಜಾರಿಸಿಕೊಳ್ಳುವುದಕ್ಕಾಗಿ ಹೊರ ಟಿದ್ದಾರೆ ಎಂದು ಹೇಳಬಹುದು. ಈಗಾಗಲೇ ನಮ್ಮ ಸರ್ಕಾರದವರು ಅನೇಕ ನೀರಾವರಿ ಯೋಜ ನೆಗಳನ್ನು ಮಾಡಿ ಮುಗಿಸಿದ್ದಾರೆ. ಆ ಯೋಜನೆಗಳಿಂದ ಅನೇಕ ಜನ ಪ್ರಯೋಜನ ಹೊಂದು ತ್ತಿದ್ದಾರೆ. ಈಗ ಫಲ ಉಣ್ಣುತ್ತಿರುವ ನಮ್ಮುದಾಯದಿಂದ ಎಷ್ಟು ಹಣವನ್ನು ಎಕರೆಗೆ 500 ರೂಪಾಯಿಗಳಂತೆ ವಸೂಲ ಮಾಡಿದ್ದಾರೆ ಎಂಬ ಲೆಕ್ಕವನ್ನು ಮೊದಲು ಕೊಡಲಿ. ಆ ಒಂದು ಲೆಕ್ಕವನ್ನು ಕೊಟ್ಟಮೇಲೆ ಈ ತಿದ್ದುಪಡಿಯನ್ನು ಬೇಕಾದರೆ ಪರಿಸೀಲನೆ ಮಾಡಬಹುದು. ಈ ಲೆಕ್ಕವನ್ನೇ ಕೊಡದೆ ಸರ್ಕಾರ ಮುಂದೆ ಈ ತಿದ್ದುಪಡಿ ಪ್ರಕಾರ ಮುಂಗಡ ಅಭಿವೃದ್ಧಿ ವಂತಿಗೆಯನ್ನು ವಸೂಲ ಮಾಡಿದ ಮೇಲೆ ನೀರಾವರಿ ಯೋಜನೆಗಳನ್ನು ಕೈಕೊಳ್ಳುತ್ತದೆ ಎಂಬ ನಂಬಿಕೆಯಾದರೂ ಏನು? ಈಗಾಗಲೇ ನಾನು ಈ ಮನಸೂದೆಯ ಜೊತೆಗೆ ಒಂದು ಅಮೆಂಡ್‌ಮೆಂಟನ್ನು ಕಳಿಸಿದ್ದೇನೆ. ಒಂದು ಉದ್ದೇಶದಿಂದ ಅದನ್ನು ಕಳಿಸಬೇಕಾಯಿತು. ಈ ಮನಸೂದೆಯನ್ನು ಮಂಡಿಸುವುದಕ್ಕೆ ಮೊದಲು ನಾನು ಒಂದು ಕ್ರಿಯಾರೋಪವನ್ನು ಎತ್ತಿದಾಗ, ಆ ಬಗ್ಗೆ ಕೇಳುವುದಕ್ಕೆ ನನಗೆ ಅಧಿಕಾರ

(ಶ್ರೀ ಎಚ್. ಎನ್. ನಂಜೇಗೌಡ)

ಇಲ್ಲ ಎಂದು ಅಧ್ಯಕ್ಷರು ರೂಲಿಂಗ್ ಕೊಟ್ಟರು. ಕಾನ್ಸ್‌ಟಿಟ್ಯೂಷನರ್ ಪ್ರಶ್ನೆ ಬಂದಾಗ. Whether a legislation is *ultra vires* or not the Chair shall not sit in judgment ಎಂದು ಹೇಳಿದರು. ಇದನ್ನು ಏತಕ್ಕೆ ಹೇಳಿದೆ ಎಂದರೆ, ಮಾನ್ಯ ಚೆನ್ನ ಬಸಪ್ಪನವರು ಆರ್ಟಿಕಲ್ 19(1) (ಎಫ್) ಪ್ರಕಾರ it becomes *ultra vires* we should not pass such a bill ಎಂಬ ಒಂದು ಅಬ್ಜೆಕ್ಷನ್ನನ್ನು ರೈಜ್ ಮಾಡಿದರು. ಆಗ ಅಧ್ಯಕ್ಷರು ಏನೋ ಒಂದು ತೀರ್ಮಾನ ಕೊಟ್ಟರು. ಕಾನ್ಸ್‌ಟಿಟ್ಯೂಷನರ್ ಪಾಯಿಂಟ್ ಬಂದಾಗ ಅಧ್ಯಕ್ಷರು ತಾವೇ ಒಂದು ತೀರ್ಮಾನ ಕೊಡುವುದು ಸರಿಯಲ್ಲ. ಏಕೆಂದರೆ ಈ ಒಂದು ತಿದ್ದುಪಡಿಯಿಂದ ನಾಳೆ ಹೆಚ್ಚು ಕಡಿಮೆಯಾಗಬಹುದು. ಇಂತಹ ಒಂದು ಕಾನೂನನ್ನು ತರುವುದಕ್ಕೆ ಸರ್ಕಾರಕ್ಕೆ ಸಾಧ್ಯವಿದೆಯೇ ಎಂಬುದು ಮುಖ್ಯವಾದ ಪ್ರಶ್ನೆ. ಸರ್ಕಾರದವರು ಅತುರಾತುರವಾಗಿ ಇದನ್ನು ಪಾಸ್ ಮಾಡುವುದಕ್ಕೆ ಹೊರಟಿದ್ದಾರೆ. ಈ ತರಹದ ಮನೂದೆ ಬಂದಾಗ Though there are precedents that the Chair shall not sit in judgement on constitutional points ಎಂದು ಇದ್ದರೂ ಕೂಡ, ಸಭಾಧ್ಯಕ್ಷರು ತೀರ್ಮಾನ ಕೊಡುತ್ತಿದ್ದಾರೆ. ಅದು ಸರಿಯಲ್ಲ. ಈ ಒಂದು ಮನೂದೆಯನ್ನು ಸಾರ್ವಜನಿಕರ ಅಭಿಪ್ರಾಯಕ್ಕಾಗಿ 3-12-69ರ ವರೆಗೆ ಕಳಿಸಬೇಕೆಂದು ನಾನು ಒಂದು ಅಮೆಂಡ್‌ಮೆಂಟನ್ನು ಕಳಿಸಿದ್ದೇನೆ. ಈ ಅಮೆಂಡ್‌ಮೆಂಟನ್ನು ಮಾನ್ಯ ಸಿಂಗಾರಿ ಗೌಡರು ಸಹ ಒಪ್ಪುತ್ತಾರೆಂದು ನಾನು ತಿಳಿದಿದ್ದೇನೆ. ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವವರು ಎಲ್ಲಿಯೋ ಇದ್ದಾರೆ. ಆದರೆ ನಾವು ಬೆಟ್ಟ ಅಗೆಯುವುದಕ್ಕೆ ಹೊರಟಿದ್ದೇವೆ. ಈ ಒಂದು ಮನೂದೆಯನ್ನು ಸಾರ್ವಜನಿಕರು ಒಪ್ಪುವುದು ಸಹ ಕಷ್ಟವಾಗುತ್ತದೆ. ಇದನ್ನು ಪಾಸ್ ಮಾಡುವುದು ಸರಿಯೇ ಎಂದು ಅಡ್ವೊಕೇಟ್ ಜನರಲ್ ಅವರನ್ನು ಸಹ ಕೇಳುವುದು ಒಳ್ಳೆಯದು. ನಾನು ಕೇಳಿಕೊಳ್ಳುವುದು ಇಷ್ಟೆ, ಇದನ್ನು ಸಾರ್ವಜನಿಕರ ಅಭಿಪ್ರಾಯಕ್ಕೆ ಕಳಿಸುವುದಕ್ಕೆ ಒಪ್ಪಬೇಕು, ಇಲ್ಲದಿದ್ದರೆ ಈ ಒಂದು ಕರಾಳ ಶಾಸನವನ್ನು ವಾಪಸ್ ತೆಗೆದುಕೊಳ್ಳುವುದು ಒಳ್ಳೆಯದು. ವಾಪಸ್ ತೆಗೆದುಕೊಳ್ಳುವುದಕ್ಕೆ ಆಗದಿದ್ದರೆ ಸಾರ್ವಜನಿಕರ ಅಭಿಪ್ರಾಯಕ್ಕೆ ಕಳಿಸಿ. ನಂತರ ಮಂತ್ರಿಗಳೆಲ್ಲರೂ ಕೂಡ ಎರ್ಲಾ ಕಡೆಗೂ ಪ್ರವಾಸ ಹೋದರೆ ಮುಖಕ್ಕೆ ಮಂಗಳಾರತಿ ಮಾಡುತ್ತಾರೆ. ಕಾರಿನ ಮುಂದೆ ಬಾವುಟ ಹಾಕಿಕೊಂಡು ಪ್ರವಾಸ ಹೋಗುವುದಕ್ಕೆ ಮೊದಲು 29 ಜನ ಮಂತ್ರಿಗಳೂ ಕೂಡ ಒಂದು ಪತ್ರಿಕಾ ಪ್ರಕಟಣೆ ಹೊರಡಿಸಬೇಕು. ಏನೆಂದರೆ ಅಡ್ವಾನ್ಸ್ ಬೆಟರ್‌ಮೆಂಟ್ ರೆವಿ ಹಾಕುವುದಕ್ಕೆ ತಮ್ಮ ಅಭಿಪ್ರಾಯ ಕೇಳುವುದಕ್ಕೆ ಬರುತ್ತೇವೆ ಎಂದು. ಅನಂತರ ಎರ್ಲಾ ಮಂತ್ರಿಗಳೂ ಸಹ ಎರ್ಲಾ ಊರುಗಳಿಗೆ ಹೋಗಲಿ, ಜನಾಭಿಪ್ರಾಯವನ್ನು ಶೇಖರಣೆ ಮಾಡಲಿ. ಆಗ ಜನರು ಇವರ ಕಾರುಗಳಿಗೆ ಎಷ್ಟು ಕಲ್ಲು ಏಟು ಹೊಡೆದು ಕಾರುಗಳನ್ನು ಜಖಂ ಮಾಡುತ್ತಾರೋ ಮಾಡಲಿ. ಅನಂತರ ಬೇಕಾದರೆ ನಾವು ಅವರಿಗೆ ಆ ಕಾರುಗಳನ್ನು ರಿಪೇರಿ ಮಾಡಿಸಿಕೊಳ್ಳಲು ಬಡ್ಜೆಟ್‌ನಲ್ಲಿ ಹಣವನ್ನು ಒದಗಿಸಿಕೊಡುತ್ತೇವೆ. ಹಾಗೆ ಪ್ರಜಾಭಿಪ್ರಾಯ ಪಡೆದನಂತರ ಈ ಬಿಲ್ಲನ್ನು ತರಲೆಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸಂಸದೀಯ ಸಚಿವರು ಸಭೆಯಮುಂದೆ ಮುಂಡಿಸಿರತಕ್ಕಂತ ಮೈಸೂರು ಇರಿಗೇಷನ್ ರೆವಿ ಆಫ್ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಅಂಡ್ ವಾಟರ್ ರೇಟ್ (ಅಮೆಂಡ್‌ಮೆಂಟ್) ಬಿಲ್-1969, ಇದನ್ನು ಬಹಳ ಕಟುವಾಗಿ ವಿರೋಧಿಸುತ್ತ ನಾಲ್ಕು ಮಾತುಗಳನ್ನಾಡಬೇಕೆಂದಿದ್ದೇನೆ.

ಸ್ವಾಮಿ, ರೈತರಮೇಲೆ ಒಂದು ಹೊಸ ತೆರಿಗೆಯನ್ನು ಹಾಕಬೇಕು ಎಂಬ ಒಂದು ಸೂಚನೆಯನ್ನು ವ್ಯಕ್ತಪಡಿಸತಕ್ಕ ಈ ಮನೂದೆಯನ್ನು ಜನರು ಬಹಳವಾಗಿ ವಿರೋಧಿಸುತ್ತಾರೆ. ಈ ಹಿಂದೆ ನೀರಾವರಿ ಕಾಮಗಾರಿಗಳ ಬಗ್ಗೆ ಬೆಟರ್‌ಮೆಂಟ್ ಲೇವಿಯನ್ನು ಹಾಕಬೇಕು ಎನ್ನತಕ್ಕ ವಿಚಾರದಲ್ಲಿ ಚರ್ಚೆ ನಡೆದ ಕಾಲದಲ್ಲಿ ನಾನೂ ಕೂಡ ಮಾತನಾಡಿದ್ದೇನೆ. ಜನರು ಹೆಚ್ಚು ಹೆಚ್ಚು ನೀರಾವರಿ ಸೌಕರ್ಯಗಳನ್ನು ಅಪೇಕ್ಷಿಸುವಾಗ ಅವರೂ ಕೂಡ ಕೆಲವು ಭಾಗವನ್ನು ಮುಂಗಡ ರೂಪದಲ್ಲಿ ಕಾಂಟ್ರಿಬ್ಯೂಷನ್ ಕೊಡುವ ಮೂಲಕ ಸಹಕಾರ ನೀಡಬೇಕೆಂದು ನಾನು ಕೂಡ ಹೇಳಿದ್ದುಂಟು. ಹಾಗೆ ಸಹಕಾರ ನೀಡಿದಿದ್ದರೆ ಸರ್ಕಾರದವರು ಈ ಕೆಲಸಕಾರ್ಯಗಳನ್ನು ತ್ವರಿತವಾಗಿ ನಡೆಸುವುದಕ್ಕಾಗುವುದಿಲ್ಲ ಎಂದು ಹೇಳಿದ್ದೂ ಉಂಟು. ಆದರೆ ಮಾನ್ಯನಭೆ ನಾವು ಆ ದಿವಸ ಅನುಮತಿ ಕೊಟ್ಟಂಥ ಒಂದು ಮನೂದೆಯೇನಿತ್ತು, ಅದನ್ನೇ ಈ ದಿವಸ ಒಂದು ರಾಜಕೀಯ ಅಸ್ತ್ರವನ್ನಾಗಿ ಮಾಡಿಕೊಳ್ಳುವುದಕ್ಕೆ ಸರ್ಕಾರದವರು ಹೊರಟಿದ್ದಾರೆ. ಸರ್ಕಾರದವರು ಈ ವಿಚಾರದಲ್ಲಿ ಎರ್ಲಾ ಸ್ಥಳೀಯ ಮುಖಂಡರುಗಳ ಅಭಿಪ್ರಾಯವನ್ನು ತೆಗೆದುಕೊಂಡು ಅವರೆಲ್ಲರ ಅಭಿಪ್ರಾಯದಂತೆ

ಕೆಲಸವನ್ನು ಕೈಗೊಳ್ಳುವುದೊಳ್ಳೆಯದು. ರೈತನಿಗೆ ಸಂಬಂಧಪಟ್ಟ ಏನಾದರೂ ಇಂಥ ಒಂದು ನೀರಾವರಿ ಕಾಮಗಾರಿಯನ್ನು ಕೈಗೊಳ್ಳಬೇಕೆಂದು ಸರ್ಕಾರದವರನ್ನು ಕೇಳಿಕೊಂಡರೆ ರೈತರು ಆ ಕಾಮಗಾರಿಯ ಬಗ್ಗೆ ಖರ್ಚಾಗತಕ್ಕ ಒಟ್ಟು ಮೊಬಲಗೇನಿದೆ ಅದರಲ್ಲಿ ಇಂತಿಷ್ಟು ಹಣವನ್ನು ಮೊದಲು ಮುಂಗಡರೂಪದಲ್ಲಿ ಕೊಡಬೇಕು ಎಂದು ಏನು ಈ ದಿವಸ ಇಲ್ಲಿ ಒಂದು ಬಿಲ್ಲನ್ನು ತಂದಿದ್ದಾರೆ ಇದೇ ರೀತಿಯಾಗಿ ರಾಜ್ಯದಲ್ಲಿ ಒಂದು ಊರಿನಿಂದ ಇನ್ನೊಂದು ಊರಿಗೆ ಒಂದು ಸಾರ್ವಜನಿಕರಿಗಾಗಿ ಬಸ್ಸನ್ನು ಓಡಿಸತಕ್ಕ ಬೇಡಿಕೆ ಬಂದಾಗ ಆ ಬೇಡಿಕೆಯ ಖರ್ಚಿನಲ್ಲಿ ಇಂತಿಷ್ಟು ಮುಂಗಡ ಹಣ ಕೊಡಬೇಕೆಂದು ಕೇಳಿರತಕ್ಕ ನಿದರ್ಶನ ಎಲ್ಲಾದರೂ ಇದೆಯೇ ? ಬಸ್‌ರೌಟ್ಸ್ ಬಗ್ಗೆ ಕೇಳಿದ್ದಿದ್ದರೆ ಹೋಗಲಿ, ದೇಶದಲ್ಲಿ ಎಲ್ಲಾದರೂ ಹೊಸ ರೈಲ್ವೇರೈನುಗಳನ್ನು ಹಾಕತಕ್ಕ ಸಂದರ್ಭದಲ್ಲಿ ತಗುಲುವ ವೆಚ್ಚದ ಬಗ್ಗೆ ಎಲ್ಲಾದರೂ ಮುಂಗಡ ಹಣವನ್ನು ಕೊಡಬೇಕೆಂದು ಜನರನ್ನು ಒತ್ತಾಯಮಾಡಿದ ನಿದರ್ಶನಗಳಿವೆಯೇ ?

ಅದೇರೀತಿ ಒಂದು ಆಸ್ಪತ್ರೆಯನ್ನು ಕಟ್ಟತಕ್ಕ ಸಂದರ್ಭದಲ್ಲಿ ಪ್ರಜೆಗಳು ಮುಂಗಡವಾಗಿ ಇಂತಿಷ್ಟು ಹಣವನ್ನು ಕೊಟ್ಟರೆ ಮಾತ್ರ ನಾವು ಜನರಿಗೆ ಔಷಧಿಯನ್ನು ಕೊಡುತ್ತೇವೆ, ಎಂದು ಹೇಳಿರತಕ್ಕ ನಿದರ್ಶನಗಳಿವೆಯೇ ? ಇಂಥ ಯಾವ ಒಂದು ಸಂದರ್ಭದಲ್ಲೂ ಸಾರ್ವಜನಿಕರನ್ನು ಪೀಡಿಸದೆ ಕೆಲಸಗಳನ್ನು ಮಾಡಿ ಬಡ ರೈತರ ವಿಷಯದಲ್ಲಿ ಹೀಗೆ ಮುಂಗಡ ಹಣ ಕೊಡಬೇಕೆಂದು ಒತ್ತಾಯ ಮಾಡುವುದು ನ್ಯಾಚುರಲ್ ಜಸ್ಟೀಸ್ ತತ್ವಕ್ಕೆ ಬಹಳ ವಿರೋಧವಾದದ್ದು. ನೀರಾವರಿ ಕಾಮಗಾರಿಗಳನ್ನು ರಾಜ್ಯದಲ್ಲಿ ಕೈಗೊಂಡರೆ ಅವುಗಳ ಉಪಯೋಗವೆಲ್ಲಾ ರೈತಾಪಿವರ್ಗ ಒಂದಕ್ಕೆ ಆಗುತ್ತದೆಯೆ ? ರೈತರು ಬೆಳೆದ ಅಕ್ಕಿ ರಾಗಿ ಇತ್ಯಾದಿ ದವಸಗಳನ್ನು ರಾಜ್ಯದಲ್ಲಿರತಕ್ಕ ಪ್ರಜೆಗಳೆಲ್ಲರೂ ಬಳಸುವುದಿಲ್ಲವೇ ? ರೈತರು ಉತ್ಪತ್ತಿ ಮಾಡಿದ ಹತ್ತಿಯಿಂದ ಮಾಡಿದ ಬಟ್ಟೆಗಳನ್ನು ಜನರೆಲ್ಲಾ ಉಪಯೋಗಮಾಡುವುದಿಲ್ಲವೇ ! ರೈತರು ಬೆಳೆದ ಕಬ್ಬಿನಿಂದ ತಯಾರಿಸಿದ ಸಕ್ಕರೆಯನ್ನು ದೇಶ ಪರದೇಶವರು ಬಳಸುವುದಿಲ್ಲವೇ ! ಹೀಗೆ ರೈತರು ಉತ್ಪಾದನೆ ಮಾಡತಕ್ಕ ವಿಶಿಷ್ಟ ವಸ್ತುಗಳು ದೇಶದ ಎಲ್ಲಾ ಜನರೂ ಬಳಸುತ್ತಿರುವಾಗ ಅತನೊಬ್ಬನೇ ಏಕೆ ಈ ನೀರಾವರಿ ಯೋಜನೆಗಳಿಗೆ ಮುಂಗಡವಾಗಿ ಹಣವನ್ನು ಕೊಡಬೇಕು ? ಇದರಲ್ಲಿ ಅಡಗಿರತಕ್ಕ ನೀತಿಯಾವರೂ ಏನು !

ಒಂದುನೂರು ಎಕರೆಗಳಿಗೆ ನೀರನ್ನು ಒದಗಿಸತಕ್ಕ ಕೆರೆಗಳನ್ನು ನಿರ್ಮಾಣ ಮಾಡತಕ್ಕ ಎಲ್ಲಾ ಸಂದರ್ಭಗಳಲ್ಲೂ ರೈತ ಆ ಖರ್ಚಿನಲ್ಲಿ ಇಂತಿಷ್ಟು ಮುಂಗಡವಾಗಿ ಕೊಡಬೇಕೆಂದು ಕೇಳತಕ್ಕದ್ದು ಎಷ್ಟು ಅನ್ಯಾಯ ? ಅಂದಾಜು ಒಂದು ಲಕ್ಷ ಇಪ್ಪತ್ತು ಸಾವಿರದಲ್ಲಿ ಒಂದು ಕೆರೆಯನ್ನು ಕಟ್ಟತಕ್ಕ ನನ್ನವೇಶದಲ್ಲಿ ರೈತರಿಂದ ಮುಂಗಡವಾಗಿ ಹಣವನ್ನು ಪಡೆದು ಕೆಲಸವನ್ನು ಮಾಡಬೇಕೆಂಬುದು ಸರ್ಕಾರದವರ ನಿಲುವಾದರೆ ಆ ಸರ್ಕಾರವರು ಇನ್ನು ಮಾಡತಕ್ಕ ಕೆಲಸವಾದರೂ ಏನು ! ಅಂಥ ಸರ್ಕಾರವಾದರು ಏತಕ್ಕಿರಬೇಕು ? ಮೊದಲು ಹೀಗೆ ಕೆರೆಗಳ ನಿರ್ಮಾಣಕ್ಕಾಗಿ ಮುಂಗಡವಾಗಿ ಹಣವನ್ನು ಪಡೆದು ಕೆರೆಗಳನ್ನು ಕಟ್ಟಿದಮೇಲೆ ಮತ್ತೆ ನೀರು ತೆರಿಗೆ ಹಾಕತಕ್ಕದ್ದು ಯಾವ ತತ್ವ ? ಯಾವ ನ್ಯಾಯ ? ಇಂಥ ಒಂದು ''ಅಸಮಾನ್ಯ ಅಭಿಪ್ರಾಯ''ವನ್ನು ಸರ್ಕಾರಕ್ಕೆ ಯಾವ ಮಹನೀಯ ಹೇಳಿಕೊಟ್ಟನೋ ನಾನು ಕಾಣೆ. ಆ ಅಭಿಪ್ರಾಯ ಹೇಳಿಕೊಟ್ಟ ಶಕುನಿ ಮಹನೀಯನಿಗೆ ನನ್ನ ಅನಂತ ನಮನಗಳು. ನಮ್ಮ ರಾಜ್ಯದಲ್ಲಿ ಈ ದಿವಸ ಸುಮಾರು 29 ಸಾವಿರ ಮೇಜರ್ ಮೈನರ್ ಕೆರೆಗಳಿರುತ್ತವೆ. ಅವುಗಳನ್ನು ದುರಸ್ತಿಮಾಡಿ ಬಹಳ ಕಾಲವಾಯಿತು. ಆ ಕೆರೆಗಳನ್ನು ಜೀರ್ಣೋದ್ಧಾರ ಮಾಡುತ್ತೇವೆ ಅದಕ್ಕಾಗಿ ರೈತರು ಮುಂಗಡವಾಗಿ ಹಣವನ್ನು ಕೊಡಲಿ ಎಂದು ಈ ಮಸೂದೆಯ ಅಧಾರದಮೇರೆ ನಾಳೆ ಕೇಳೇ ಕೇಳುತ್ತಾರೆ. ಒಂದು ಕೆರೆಯ ಕೆಳಗೆ ಕೇವಲ 100 ಎಕರೆ ತರೀ ಭೂಮಿ ಇರಬಹುದು. ಅಲ್ಲಿ ಹೊಸದಾಗಿ ಅನುಕೂಲವಿದೆ ಇನ್ನೂ 50 ಎಕರೆ ತರಿ ಮಾಡಬಹುದು, ಅದಕ್ಕೆ ಅವಕಾಶ ಮಾಡಿಕೊಡಿ ಎಂದರೆ ಆಗಲೂ ಸರಕಾರ ಮುಂಗಡವಾಗಿ ಹಣವನ್ನು ಕೇಳಲೇಬೇಕಾಗುವುದು. ಇದು ಬಹಳ ವಿಚಿತ್ರವಾದ ಮಸೂದೆ. ಅತ್ತಕಡೆಯಲ್ಲಿ ಮಾತನಾಡಿದ ಶ್ರೀ ಶ್ರೀನಿವಾಸ್‌ರವರು ಸರ್ಕಾರದವರು ಈ ಒಂದು ಹೊಸ ಮಸೂದೆಯನ್ನು ತಂದು ಇವರಿಂದ ಅವರೇನೋ ಒಂದು ಹೊಸದಾಗಿ ರಕ್ಷಣೆ ಪಡೆದುಕೊಳ್ಳಬೇಕೆಂಬ ಉದ್ದೇಶ ಇಲ್ಲ. ಸರ್ಕಾರಕ್ಕೆ ಈಗಾಗಲೇ ಅನೇಕ ಕಡೆ ಬೇಕಾದಷ್ಟು ಜನ ಅನ್ಯಾಯ ಮಾಡಿದ್ದಾರೆ ಎಂದು ಹೇಳಿದರು. ಅದು ಅವರ ಅಭಿಪ್ರಾಯ. ನಾಳೆ ಮತ್ತೆ 1972 ಕ್ಕೆ ಜನರಲ್ ಎಲೆಕ್ಷನ್ ಬರುತ್ತೆ. ಆಗ ಇವರು ಊರುಗಳಿಗೆ ಪ್ರಚಾರ ಕಾರ್ಯಕ್ಕೆ ಹೋದಾಗ ಅಲ್ಲಿ ಜನರು ನೀವು ಈ ಕಳೆದ ಐದುವರ್ಷಗಳಲ್ಲಿ ಎಷ್ಟು ಹೊಸದಾಗಿ ಕೆರೆಗಳನ್ನು ಕಟ್ಟಿಸಿದಿರಿ. ಎಷ್ಟು ಹಳೆಯ ಕೆರೆಗಳನ್ನು ಜೀರ್ಣೋದ್ಧಾರ ಮಾಡಿದಿರಿ ಎಂದು ಕೇಳಿದರೆ ಆಗ ಅಡಳಿತ ಪಕ್ಷದ ಜನರು ನಾವೇನುಮಾಡೋಣ ಶೇ 66 ರಷ್ಟು ಜಮೀನ್ದಾರರು ಮುಂಗಡವಾಗಿ ಹಣವನ್ನು ಕೊಟ್ಟಿದ್ದಾರೆ, ಇನ್ನುಳಿದ ಶೇ 33 ಮಂದಿ ಜಮೀನ್ದಾರರು ಅವರ ಮುಂಗಡವ ಹಣವನ್ನು ಕೊಡಲಿಲ್ಲ. ಅದಕ್ಕಾಗಿ ನಾವು ಆ ನೀರಾವರಿ ಕೆಲಸಗಳನ್ನು ನಡೆಸುವು

(ಶ್ರೀ ಎನ್. ಎ ಚನ್ನೇಗೌಡ)

ದಕ್ಕೆ ಆಗಲಿಲ್ಲ ಎಂದು ಹೇಳಿ ಇರುವ ಜನರಿಂದ ಸುಲಭವಾಗಿ ಪಾರಿಕೊಳ್ಳುವುದಕ್ಕೆ, ಈ ಮನೂದೆಯನ್ನು ಒಂದು ರಾಜಕೀಯ ಅಸ್ತ್ರವನ್ನಾಗಿ ಬಳಸುವುದಕ್ಕೆ ಹೊರಟಿದ್ದಾರೆಂದು ಕಾಣುತ್ತದೆ. ಅದ್ದರಿಂದ ಈಗ ಇರತಕ್ಕ ಈ ಸರ್ಕಾರವೇನಿದೆ ಇದು ರೈತನ ಹಿತವನ್ನು ರಕ್ಷಣೆಮಾಡತಕ್ಕ ಸರ್ಕಾರವಲ್ಲ, ಇದು ರೈತನಿಗೆ ದ್ರೋಹವೆಣಿಸತಕ್ಕ ಸರ್ಕಾರ ಎಂದು ಹೇಳಬೇಕಾಗುತ್ತದೆ.

ಈ ಉದ್ದೇಶ ಸಾಧನೆಗೆ ಜನರ ಆರ್ಥಿಕಸ್ಥಿತಿ ನೋಡಿಕೊಂಡು ಯಾರಲ್ಲಿ ಮುಂಗಡ ಹಣವನ್ನು ಕೊಡುವುದಕ್ಕೆ ಶಕ್ತಿ ಇದೆಯೋ ಅಂತಹವರ ಹತ್ತಿರ ಮಾತ್ರ ತೆಗೆದುಕೊಳ್ಳುವ ಏರ್ಪಾಡು ಮಾಡಿದರೆ ನನ್ನ ವಿರೋಧ ಇರುವುದಿಲ್ಲ. ಈ ಜಟಿಲ ಸಮಸ್ಯೆಯನ್ನು ಕೂಲಂಕಷವಾಗಿ ಚರ್ಚಿಸಿ ತೀರ್ಮಾನಕ್ಕೆ ಬರಲು ಒಂದು ಸೆಲೆಕ್ಟ್ ಸಮಿತಿ ಮಾಡಿ ಎಂದು ಹೇಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಡಿ. ಎಂ. ಸಿದ್ದಯ್ಯ (ಬಳಿಗೆರೆ).—ಮಾನ್ಯ ಅಧ್ಯಕ್ಷರೇ, ಪಾರ್ಲಿಮೆಂಟ್ ಆಫೇರ್ಸ್ ಸಚಿವರು ತಂದಿರತಕ್ಕಂಥ ಈ ಒಂದು ಮಸೂದೆಗೆ ನನ್ನ ಬೆಂಬಲ ಕೊಡುತ್ತೇನೆ. ಈ ಮಸೂದೆ ಬಹಳ ಪ್ರಾಮುಖ್ಯವಾದುದು ಎಂದು ಹೇಳುತ್ತೇನೆ. ಸರ್ಕಾರದವರು ಇದನ್ನು ತಂದಿರುವುದಕ್ಕೋಸ್ಕರ ಅವರನ್ನು ಅಭಿನಂದಿಸುತ್ತೇನೆ.

ನನಗೆ ಇದರಲ್ಲಿ ಆಶ್ಚರ್ಯವಾದ ವಿಷಯ ಏನೆಂದರೆ ಯಾರು ಈಪೊತ್ತಿನ ದಿವಸ ಕಾವೇರಿ ಪ್ರಾಜೆಕ್ಟ್ ಮತ್ತು ಕೃಷ್ಣಾ ಪ್ರಾಜೆಕ್ಟ್ ವಿಷಯದಲ್ಲಿ ಇದು ಬಹಳ ಆವಶ್ಯಕತೆ ಎಂದು ದೇಶಾಭಿಮಾನದಿಂದ, ಪಕ್ಷಾತೀತವಾದ ಭಾವನೆಯಿಂದ ಪ್ರೋತ್ಸಾಹಿಸಬೇಕೆಂದು ಹೆಣಗಾಡಿ ಮತ್ತು ಸಾಹಸಪಟ್ಟು ಅಧ್ಯಕ್ಷರಿಂದ ಈ ವಿಷಯವನ್ನು ಚರ್ಚಿಸಲು ಹೇಗೆ ಅವಕಾಶ ಕಲ್ಪಿಸಿಕೊಂಡರೋ ಅವರೇ ಈ ಒಂದು ಮಸೂದೆಯನ್ನು ವಿರೋಧಿಸತಕ್ಕಂಥಾದ್ದು ನೋಡಿದರೆ ತುಂಬಾ ವಿಷಾದವಾಗುತ್ತದೆ.

ಶ್ರೀ ಬಿ. ಪಿ. ಗಂಗಾಧರ್.—ತಾವು ಪಕ್ಷಾತೀತವಾಗಿ ದೇಶಾಭಿಮಾನದಿಂದ ಮನಸ್ಫೂರ್ತಿಯಾಗಿ ಮಾತನಾಡುತ್ತೀರಾ ಅಥವಾ ಕಾಂಗ್ರೆಸ್ಸಿನ ಪರವಾಗಿ ನಪೋರ್ಟ್ ಮಾಡಬೇಕೆಂದು ಮಾತನಾಡುತ್ತೀರಾ ?

ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಸ್ನೇಹಿತರು ಆ ರೀತಿ ಕೇಳುತ್ತಿದ್ದಾರೆ. ಆದರೆ ನನ್ನ ಮನಸ್ಸಿನಲ್ಲಿ ಏನು ಇದೆಯೋ ಅದನ್ನು ಖಂಡಿತವಾಗಿಯೂ ಮಾತನಾಡಿಬಿಡುತ್ತೇನೆ. ಈ ಮಾತನ್ನು ಅಧ್ಯಕ್ಷರ ಮೂಲಕ ತಿಳಿಸುತ್ತೇನೆ. ಈ ವಿಚಾರ ಶ್ರೀಮಾನ್ ಚೆನ್ನಬಸಪ್ಪನವರಿಗೂ ಗೊತ್ತಿದೆಯೆಂದು ಹೇಳಲು ಇಷ್ಟಪಡುತ್ತೇನೆ. ಈಪೊತ್ತಿನ ದಿವಸ ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ಅದರಲ್ಲೂ ಮುಖ್ಯವಾದ ಸದಸ್ಯರುಗಳು ಮಂತ್ರಿಗಳಾಗಿದ್ದರು. ಅವರು ಯಾವ ಪಕ್ಷದಲ್ಲೇ ಇರಲಿ ಸಾಕಷ್ಟು ಅನುಭವ ಪಡೆದಿದ್ದಾರೆ. ಅಂತಹವರು ಈಪೊತ್ತಿನ ದಿವಸ ವಿರೋಧಿಸುತ್ತಿದ್ದಾರೆ. ನಾನಾದರೂ ಕೂಡ ಅವರಲ್ಲಿ ವಿನಂತಿ ಮಾಡಿಕೊಳ್ಳುವುದು ಈ ಸಮಸ್ಯೆಗಳನ್ನು ನಾವೆಲ್ಲರೂ, ಕರ್ನಾಟಕ ಪಕ್ಷಾತೀತ ಮನೋಭಾವನೆಯಿಂದ ಆರೋಡನೆ ಮಾಡೋಣ ಎಂದು. ಈಪೊತ್ತಿನ ದಿವಸ ನಮ್ಮ ಪರಿಸ್ಥಿತಿ ಹೇಗಿದೆ ಮತ್ತು ಕಾವೇರಿ ಬೇಸಿನ್, ಕೃಷ್ಣಾ ಪ್ರಾಜೆಕ್ಟ್ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ಸ್ಪಷ್ಟವಾಗಿ ಯೋಚನೆ ಮಾಡಬೇಕು. 1974ನೇ ಇಸವಿ ತನಕ ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಜಲಾಶಯುಗಳನ್ನು ಕಟ್ಟದೇಹೋದರೆ ನಮಗೆ ಖಂಡಿತವಾಗಿಯೂ ಒಂದು ತೊಟ್ಟು ನೀರು ಸಿಕ್ಕುವುದಿಲ್ಲ. ಇದು ನಿರ್ವಿವಾದ ವಿಚಾರ. ಈಗಾಗಲೇ ಹೇಮಾವತಿ ಪ್ರಾಜೆಕ್ಟಿಗೆ ಕ್ಲಿಯರೆನ್ಸ್ ಕೇಳಿದ್ದಕ್ಕೆ ಮದ್ರಾಸಿನ ಮುಖ್ಯ ಮಂತ್ರಿಗಳಾಗಿರುವ ಶ್ರೀ ಕರುಣಾನಿಧಿಯವರು ಆಕ್ಷೇಪಣೆ ಎತ್ತಿದ್ದಾರೆ. ಅವರು ದೆಲ್ಲಿಗೆ ಹೋಗಿ ಚರ್ಚೆ ಮಾಡುವುದಕ್ಕೆ ಹವಣಿಸಿಕೊಳ್ಳುತ್ತಿದ್ದಾರೆ. ಇನ್ನೂ ಕೂಡ ಹೇಮಾವತಿ ಪ್ರಾಜೆಕ್ಟ್ ಪ್ರಾರಂಭ ಮಾಡಿಲ್ಲ.

ಇನ್ನು ಹಾರಂಗಿ ಪ್ರಾಜೆಕ್ಟ್ ಪ್ರಾರಂಭ ಮಾಡಬೇಕು, ಕಂಬದಕಡ ಪ್ರಾಜೆಕ್ಟ್ ಪ್ರಾರಂಭ ಮಾಡಬೇಕು, ಕಪಿನಿ ಪ್ರಾಜೆಕ್ಟ್ ಅಸ್ತಿತ್ವದಲ್ಲಿದೆ. ಕಾವೇರಿ ಯೋಜನೆ 30 ಕೋಟಿ ರೂಪಾಯಿ ಯೋಜನೆ, ಇವಕ್ಕೆಲ್ಲಾ ಎಷ್ಟು ಹಣ ಬೇಕಾಗುತ್ತದೆ ? ಸರ್ಕಾರದವರನ್ನು ಕೇಳಿದರೆ ಅವರ ಗ್ರಾಂಟಿನಿಂದ 10—20 ಲಕ್ಷ ರೂಪಾಯಿ ಹಣಕೊಡಬಹುದು, ಉಳಿದಿದ್ದನ್ನಾದರೂ ಯಾವ ಬಾಬು ನಿಂದಲಾದರೂ ಉಳಿಸಿ ಖರ್ಚು ಮಾಡಬೇಕು. ಇಲ್ಲದಿದ್ದರೆ ಆ ಕೆಲಸವೆಲ್ಲಾ ನಿಂತು ಹೋಗುತ್ತದೆ. ಇದೇ ರೀತಿಯಲ್ಲಿ ಕಪಿನಿ ಪ್ರಾಜೆಕ್ಟ್‌ಕೂಡ ಶೈಶವಾವಸ್ಥೆಯಲ್ಲಿದೆ. ಇದೇ ರೀತಿ ಮುಂದುವರಿಸಿದರೆ ಇನ್ನು 60—70 ವರ್ಷವಾದರೂ ಈ ಪ್ರಾಜೆಕ್ಟ್ ಮುಗಿಯುವಂತೆಯೇ ಕಾಣುವುದಿಲ್ಲ. ಹಾಗೆಯೇ

ಕಾವೇರಿ, ಕಂಬದಕಡ, ಹೇಮಾವತಿ, ಹಾರಂಗಿ ಈ ಪ್ರಾಜೆಕ್ಟ್‌ಗಳು ನಿಜವಾಗಿಯೂ ಪ್ರಾಜೆಕ್ಟ್ ಆಗುವ ಪರಿಸ್ಥಿತಿಯಲ್ಲವೆಯೇ ? ಇದಕ್ಕೆಲ್ಲಾ ಸರ್ಕಾರದವರು ಎಷ್ಟು ಹಣ ಎಂತ ಒದಗಿಸುವುದ ಕ್ಕಾಗುತ್ತದೆ, ಖಂಡಿತವಾಗಿಯೂ ಒದಗಿಸುವುದಕ್ಕಾಗುವುದಿಲ್ಲ ಎನ್ನುವುದು ನನ್ನ ಅಭಿ ಪ್ರಾಯ.

ಇನ್ನು ಕೃಷ್ಣಾ ಪ್ರಾಜೆಕ್ಟ ಕಡೆ ಹೋಗೋಣ. ಆಂಧ್ರದವರು ಈವೊತ್ತಿನ ದಿವಸ ನಾಗಾರ್ಜುನ ಸಾಗರಕ್ಕೆ ಒಂದು ಕ್ರೆಸ್ಟ್‌ಗೇಟನ್ನು ಹಾಕುವುದಕ್ಕೆ ಈಗಾಗಲೇ ಸಿದ್ಧಮಾಡಿಕೊಂಡಿದ್ದಾರೆ. ಅಲ್ಲಿಗೆ ನಾವು 8–10ಜನ ಹೋಗಿದ್ದಾಗ ನೋಡಿಕೊಂಡು ಬಂದೆವು. ಬಹಳ ಸಂತೋಷವಾಯಿತು. ಆದರೆ ನಾವು ಕೃಷ್ಣಾಪ್ರಾಜೆಕ್ಟ್ ಕಟ್ಟಲಲ್ಲವಲ್ಲಾ ಎಂದು ಅಷ್ಟೇ ದುಃಖವಾಯಿತು. ಈವೊತ್ತಿನ ದಿವಸ ಅಲ್ಲಿ 30ಲಕ್ಷ ಎಕರೆ ನೀರಾವರಿ ಆಗತಕ್ಕಂಥ ಪ್ರದೇಶ ಇದೆ. ಈಗ 5 ಲಕ್ಷ ಎಕರೆಗೆ ನೀರು ಕೊಟ್ಟಿದ್ದಾರೆ. ಅವರ ಸಾಹಸಶಕ್ತಿ ಅವರು ಯಾವ ರೀತಿ ಕಟ್ಟಿದರು ಎನ್ನುವುದನ್ನು ನೋಡಬೇಕು. ಅವರು ರಸ್ತೆ ಮಾಡುವುದನ್ನು ನಿಲ್ಲಿಸಿದರು, ಸೇತುವೆ ಕಟ್ಟುವುದನ್ನು ನಿಲ್ಲಿಸಿದರು, ಬಿಲ್ಡಿಂಗ್ ಕಟ್ಟುವುದನ್ನು ನಿಲ್ಲಿಸಿದರು. ಕೇಂದ್ರ ಸರ್ಕಾರದ ಸಹಾಯ ಪಡೆದರು, ಮತ್ತು ಆವರಿಂದ ಸಾಲ ತೆಗೆದು ಕೊಂಡರು ಇದರ ಜೊತೆಗೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ತೆಗೆದುಕೊಂಡರು. ಹೀಗೆ ಎಷ್ಟೆಷ್ಟೋ ರೀತಿಯಿಂದ ಹಣ ಒದಗಿಸಿಕೊಂಡು ಪ್ರಾಜೆಕ್ಟ್ ಕಟ್ಟಿದ್ದಾರೆ. ಆದುದರಿಂದ ನಾವು ಈವಾಗ ಅವರ ಮಾದರಿಯನ್ನು ಅನುಸರಿಸಬೇಕು. ನಾವು ಈವೊತ್ತಿನ ದಿವಸ ಕೃಷ್ಣಾ ಪ್ರಾಜೆಕ್ಟನ್ನು ಪ್ರಾರಂಭ ಮಾಡಬೇಕೆಂದಿದ್ದೇವೆ ; ಕಾವೇರಿ ಪ್ರಾಜೆಕ್ಟನ್ನು ಕಟ್ಟಬೇಕೆಂದಿದ್ದೇವೆ. ಇವೆಲ್ಲಾ 100—120 ಕೋಟಿ ರೂಪಾಯಿ ಯೋಜನೆಗಳು. ಅದಕ್ಕಿಂತ ಕಡಿಮೆ ಆಗುವುದಿಲ್ಲ. ಜೊತೆಗೆ ಇನ್ನೂ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳು ಇವೆ. ಅವೆಲ್ಲಾ 250—300 ಕೋಟಿ ರೂಪಾಯಿ ಪ್ರಾಜೆಕ್ಟ್‌ಗಳು, ಇವು ಗಳನ್ನೆಲ್ಲಾ ಕಾರ್ಯಗತ ಮಾಡಬೇಕಾದರೆ ಈವೊತ್ತಿನ ಪರಿಸ್ಥಿತಿಯಲ್ಲಿ ನಾವು ಯಾವರೀತಿ ಇದ್ದೇವೆ, ಹೇಗೆ ಕಟ್ಟಬೇಕು ಎನ್ನುವುದನ್ನು ಯೋಚನೆ ಮಾಡಬೇಕು. ರಿಸೋರ್ಸಸ್ ಕಮಿಟಿ ಎಂದು ಸರ್ಕಾರ ದವರು ಒಂದು ಕಮಿಟಿಯನ್ನು ನೇಮಕ ಮಾಡಿದ್ದಾರೆ. ಅದರಲ್ಲಿ ವಿರೋಧ ಪಕ್ಷದ ನಾಯಕರು ಗಳಾದ ಶ್ರೀಮಾನ್ ಚನ್ನಬಸಪ್ಪನವರು, ಶ್ರೀಮಾನ್ ಸಿದ್ದವೀರಪ್ಪನವರು ಮತ್ತು ನಾನೂ ಇದ್ದೇನೆ. ಅವರಿಗೂ ಇವೆಲ್ಲಾ ಕಾಣುತ್ತದೆ. ಇವಕ್ಕೆಲ್ಲಾ ಹಣ ಹೇಗೆ ಒದಗಿಸಬೇಕೆಂದು ನಾವು ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದೇವೆ. ಈವೊತ್ತಿನ ದಿವಸ ವರ್ಷಕ್ಕೆ 10ಕೋಟಿ ರೂವಾಯಿ ಉಳಿಸ ಬೇಕಾದರೂ ಕಷ್ಟ. ಅಷ್ಟನ್ನಾದರೂ ಉಳಿಸುವುದಕ್ಕೆ ಪ್ರಯತ್ನ ಮಾಡಿದರೆ 10 ವರ್ಷಕ್ಕೋ ಅಥವಾ 20 ವರ್ಷಕ್ಕೋ ಒಂದು ಪ್ರಾಜೆಕ್ಟನ್ನು ಮಾಡಬಹುದು. ಇಲ್ಲದೇ ಹೋದರೆ ಕಾವೇರಿ ಪ್ರಾಜೆಕ್ಟ್ ಆಗಲಿ, ಕೃಷ್ಣಾ ಪ್ರಾಜೆಕ್ಟ್ ಆಗಲಿ ಪೂರ್ಣವಾಗುತ್ತದೆ ಎನ್ನುವ ಆಸೆಯನ್ನು ಇಟ್ಟು ಕೊಳ್ಳುವುದಕ್ಕಾಗುವುದಿಲ್ಲ. ಇಲ್ಲಿಯವರೆಗೆ ನಮ್ಮಮೇಲೆ ಇರತಕ್ಕಂಥ ಕೇಂದ್ರ ಸರ್ಕಾರದ ದೃಷ್ಟಿ ನೋಡಿದರೆ ನಿರ್ದಾಕ್ಷಿಣ್ಯವಾಗಿ ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರದವರು ನಾವೇನು ಬದುಕಿ ದ್ದೇವೆಯೇ, ಸತ್ತಿದ್ದೇವೆಯೇ ಎಂದು ಅವರು ಕೇಳುತ್ತಾ ಇಲ್ಲ. ಮೈಸೂರಿನ ಮೇಲೆ ಕೇಂದ್ರ ಸರ್ಕಾರದ ಸಹಾನುಭೂತಿ ಇಲ್ಲ. ಮೈಸೂರು ರಾಜ್ಯದಲ್ಲಿ ಸರ್ಕಾರ ಇದೆಯೋ, ಇಲ್ಲವೋ ಎಂದು ತಿಳಿದುಕೊಂಡಿದ್ದಾರೆಯೋ, ತಿಳಿದುಕೊಂಡಿಲ್ಲವೊ ? ಎಂದು ಕೇಳಬೇಕಾಗಿದೆ. ಮೈಸೂರು ರಾಜ್ಯದ ಸ್ಥಿತಿ ಏನಾಗಿದೆ ಎಂಬುದನ್ನು ಅವರು ವಿಚಾರಿಸುತ್ತಾ ಇಲ್ಲ. ಆಂಧ್ರ, ಮದ್ರಾಸಿನವರಿಗೆ ಬೇಕಾ ದಷ್ಟು ಹಣ ಕೊಟ್ಟು ಒಬ್ಬೊಬ್ಬರಿಗೆ ಒಂದೊಂದು ರೀತಿ ತಾರತಮ್ಯ ತೋರಿಸಿದ್ದಾರೆ. ಇದು ಏನಾಗಿದೆ ಎಂದರೆ ಬೇರೆ ರಾಜ್ಯಗಳಲ್ಲಿ ನೀರಾವರಿ ಪ್ರದೇಶ 30—40 ಪರ್ಸೆಂಟು ಇದ್ದರೆ, ಇನ್ನೂ ಕೂಡ ನಮ್ಮಲ್ಲಿ 11 ಪರ್ಸೆಂಟು ಇದ್ದರೂ ಸಹ ನಮಗೆ ಏನೂ ಪ್ರೋತ್ಸಾಹ ಕೊಡುತ್ತ ಇಲ್ಲ. ಕೇಂದ್ರ ಸರ್ಕಾರ ಮೈಸೂರನ್ನು ಕಡೆಗಾಣಿಸಿರುವುದು ತುಂಬಾ ವಿಷಾದಕರ.

ಇನ್ನು ಕೃಷ್ಣಾ ನದಿ ವಿವಾದವನ್ನು ಟ್ರಿಬ್ಯೂನರ್‌ಗೆ ಹಾಕಬೇಕೆಂದು ನಾನು 6 ವರ್ಷದ ಹಿಂದೆಯೇ ಹೇಳಿದ್ದೆ. ಈವೊತ್ತು ನಿಜವಾಗಿಯೂ ಟ್ರಿಬ್ಯೂನರ್‌ಗೆ ಹೋಗಿದೆ 5—6 ವರ್ಷ ಗಳಿಂದಲೂ ಕೂಡ ನಮ್ಮಲ್ಲಿ ರಸ್ತೆಗಳನ್ನೂ, ಸೇತುವೆಗಳನ್ನೂ, ಬಿಲ್ಡಿಂಗ್‌ನ್ನೂ ಕಟ್ಟಿಸಿ ವರ್ಷೇ ವರ್ಷೇ ಸಾಲ ಮಾಡಿಕೊಂಡಿದ್ದೇವೆ. ಇದು ಏತಕ್ಕೆ ಮಾಡಬೇಕಾಗಿತ್ತು ಎಂದು ಹೇಳುತ್ತೇನೆ. ಈವೊತ್ತು ಪ್ರಾಜೆಕ್ಟ್‌ಗಳನ್ನು ಬಾಯಿಮಾತಿನಲ್ಲಿ ಕಟ್ಟುವುದಕ್ಕಾಗುವುದಿಲ್ಲ, ನಿರ್ಣಯಮಾಡಿ ಕಟ್ಟು ವುದಕ್ಕಾಗುವುದಿಲ್ಲ, ಮನೆಮನೆ ಪಾಸು ಮಾಡಿ ಕಟ್ಟುವುದಕ್ಕಾಗುವುದಿಲ್ಲ. ಮಾನ್ಯ ವಿರೋಧಪಕ್ಷದ ಸ್ನೇಹಿತರು ಅರ್ಥಮಾಡಿಕೊಂಡಿರಬಹುದು. ಇದನ್ನು ಕಾಂಗ್ರೆಸ್ಸಿನ ಪಕ್ಷದ ಸದಸ್ಯರು ತಂದಿದ್ದಾರೆ, ಇದನ್ನು ವಿರೋಧಿಸಬೇಕು ಎನ್ನುವ ಮನೋಭಾವನೆ ಇದೆ; ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಹೇಳುವುದು ಏನೆಂದರೆ ಇದು ಪಕ್ಷಾತೀತವಾದ ವಿಷಯ. ಇದು 2½ ಕೋಟಿ ಕನ್ನಡಿಗರ ಪ್ರಶ್ನೆ. ಇದನ್ನು ಯಾರು ಮಾಡಿದರೂ ಮಹದುಪಕಾರ ಮಾಡಿದ ಹಾಗೆ ಆಗುತ್ತದೆ. ಇದು

(ಶ್ರೀ ಡಿ. ಎಂ. ಸಿದ್ದಯ್ಯ)

ದೇಶದ ಹಿತದೃಷ್ಟಿ ಎಂದು ಇಟ್ಟುಕೊಂಡು, ಕರ್ನಾಟಕ ಜನದ ಆಶೋತ್ತರಗಳು ಎಂಬುದನ್ನು ಅರಿತುಕೊಂಡು ನಮ್ಮ ನೀರಾವರಿ ಯೋಜನೆಗಳನ್ನು ನಿಯಮಿತ ಕಾಲದಲ್ಲಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಮತ್ತು ನಮಗೆ ಕೆಲಸದಲ್ಲಿ ಏನೇನು ಅಡ್ಡಿ ಆತಂಕಗಳು ಬಂದರೂ ಕೆಲಸ ಮಾಡಿಕೊಂಡು ಹೋಗುವ ಹಾಗೆ ನಮ್ಮ ತಂಡ ಬರಲಿ ಎಂದು ಸರ್ಕಾರವನ್ನೂ, ವಿರೋಧ ಪಕ್ಷದವರನ್ನೂ ಕೇಳಿಕೊಳ್ಳುತ್ತೇನೆ. ಇದು ಜೀವನ ಮರಣದ ಪ್ರಶ್ನೆ. ಒಂದು ಕಡೆ ಹಣದ ಅಭಾವವಿದ್ದರೆ ಮತ್ತೊಂದು ಕಡೆ ನೀರಿನ ಕೊರತೆ ಹಾಗೆಯೇ ಇದೆ ಎನ್ನುವುದು. ಕೃಷ್ಣ ಬೇಸಿನ್‌ನಲ್ಲಿ ಜಾಸ್ತಿ ಯಾಗಿದೆ, ಪೆನ್ನಾರ್ ಕಡೆಗೂ ಅವರ ಪ್ರಭಾವವನ್ನು ಹರಿಸಿದ್ದಾರೆ, ನೀರಿನ ಹಂಚಿಕೆಯಲ್ಲಿಯೂ ಕಡಮೆ ಮಾಡಿದ್ದಾರೆ. ಟ್ರಿಬ್ಯೂನರ್ ಮುಂದೆ ಕೇಸು ಇದೆ. ನೀರನ್ನೂ ಒದಗಿಸಿಕೊಳ್ಳಬೇಕು, ಹಣವನ್ನೂ ಒದಗಿಸಿಕೊಳ್ಳಬೇಕು. 1974ನೇ ಇಸವಿ ಮುಗಿಯುವುದರೊಳಗಾಗಿ ಕಾವೇರಿ ಬೇಸಿನ್‌ನಲ್ಲಿ ನೀರನ್ನು ಉಪಯೋಗ ಮಾಡಿಕೊಳ್ಳದೆ ಇದ್ದ ಪಕ್ಷದಲ್ಲಿ ಒಂದು ತೊಟ್ಟು ನೀರು ನಮಗೆ ಸಿಕ್ಕುವುದಿಲ್ಲ ಎನ್ನುವುದು ನಿರ್ವಿವಾದವಾದ ವಿಚಾರ. ಕೇಂದ್ರದವರು ಕೊಟ್ಟರೆ ಎಷ್ಟು, ಬಿಟ್ಟರೆ ಎಷ್ಟು, 1974ರೊಳಗೆ ಮಾಡಬೇಕೆಂದು ಸೂಚನೆಯನ್ನು ಕೊಟ್ಟಿದೀರಾ ? ಕೇಂದ್ರದವರು ಕ್ಲಿಯರೆನ್ಸ್ ಕೊಡಲಿ ಬಿಡಲಿ ನಮ್ಮ ಕಾಲ ಮೇಲೆ ನಾವು ನಿಂತುಕೊಂಡು ಹಣವನ್ನು ಸರ್ವವಿಧ ದಿಂದಲೂ ಸಂಗ್ರಹ ಮಾಡಿ, ಯುದ್ಧಕಾಲದಲ್ಲಿ ಹೇಗೆ ಹಣವನ್ನು ಆ ಕಾರ್ಯಕ್ಕೆ ಒದಗಿಸರಾಗುತ್ತದೆಯೋ ಅದೇ ರೀತಿಯಲ್ಲಿ ಹಣವನ್ನು ಒದಗಿಸಿಕೊಂಡು ಪ್ರಾಜೆಕ್ಟ್‌ಗಳನ್ನು ಪೂರೈಸಬೇಕು. ಕರ್ನಾಟಕ ರಾಜ್ಯವನ್ನು ನಾವು ರೂಪಿಸಬೇಕು, ನಾವು ಇದರ ಭವ್ಯತೆಯನ್ನು ಕಾಪಾಡಿಕೊಂಡು ಬರಬೇಕು, ಆದರ್ಶ ರಾಜ್ಯವನ್ನು ಕಟ್ಟಬೇಕು ಎನ್ನುವುದನ್ನು ಮುಂದಿನ ಪೀಳಿಗೆಗೆ ಕೃತಿಯಲ್ಲಿ ಮಾಡಿ ತೋರಿಸೋಣ. ಈ ಮನೂದೆಯನ್ನು ವಿರೋಧಿಸಿದ ಮಾನ್ಯ ಮಿತ್ರರನ್ನು ನಾನು ಕೇಳುತ್ತೇನೆ, ಹಣವನ್ನು ಹೇಗೆ ಹೊಂದಿಸಿಕೊಳ್ಳಬೇಕು.? ಸುಮ್ಮನೆ ಟೀಕೆ ಮಾಡುವುದರಿಂದ ಹಣ ಒದಗುವುದಾದರೆ, ಹಣ ಬರುವುದಾದರೆ ನಾನು ಒಪ್ಪಿಕೊಳ್ಳುತ್ತೇನೆ.

5-30 P.M.

ನಾನು ಈ ಸಮಸ್ಯೆಯನ್ನು ಎಂದೆಂದಿಗೂ ಪಕ್ಷದ ದೃಷ್ಟಿಯಿಂದ ನೋಡುವವನಲ್ಲ, ಪಕ್ಷಾತೀತವಾಗಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ, ಇಡೀ ಶಾಸನ ಸಭೆ ಸಾಮೂಹಿಕವಾಗಿ ಸಮಾಜವನ್ನು ಬದಲಾಯಿಸುವುದಕ್ಕೆ ಪ್ರಯತ್ನಪಟ್ಟರೆ ಆಗುತ್ತದೆ. ರಿಸೋರ್ಸಸ್ ಕಮಿಟಿಯಿಂದ ಎಷ್ಟು ಹಣವನ್ನು ಕೂಡಿ ಹಾಕುವುದು ಸಾಧ್ಯ ? ಐದನೇ ಏತ್ತಿನೆಯ ಅಯೋಗ ಏನು ಕೊಟ್ಟಿತು? ರಿಸೋರ್ಸಸ್ ಕಮಿಟಿಯಲ್ಲಿ ಹೇಳಿದರು, ಐದನೆ ಏತ್ತಿನೆಯ ಆಯೋಗ ಏನು ಕೊಡುತ್ತದೆ ನೋಡೋಣ ಎಂದು ನಭೆಯನ್ನು ಎರಡು ತಿಂಗಳು ಮುಂದಕ್ಕೆ ಹಾಕಿದರು. ಐದನೆ ಆಯೋಗದಿಂದ ನಮಗೆ 18 ಕೋಟಿ ರೂಪಾಯಿ ಕಡಮೆಯಾಯಿತು. ಮಾನ್ಯ ಮುಖ್ಯ ಮಂತ್ರಿಯವರು ಮಹಾಪ್ರಧಾನಿಯವರನ್ನು ಕೇಳಿದಾಗ ಮೈಸೂರನ್ನು ಏಕೆ ಸಿಂಗರ್ ಔಟ್ ಮಾಡಿದ್ದಾರೆ. ನೋಡುತ್ತೇನೆ ಎಂದು ಹೇಳಿದರು. ಅವರು 18 ಕೋಟಿ ರೂಪಾಯಿಗಳನ್ನು ಒದಗಿಸಿಕೊಡುತ್ತಾರೆ ಎನ್ನುವ ಆಸೆ ನನಗೆ ಕಾಣುಬರುತ್ತಿಲ್ಲ. ಹತ್ತು ಕೋಟಿ ರೂಪಾಯಿಗಳಿಗಿಂತ ಜಾಸ್ತಿ ವೆಚ್ಚವಾಗುವ ಎಲ್ಲ ಪ್ರಾಜೆಕ್ಟ್‌ಗಳನ್ನೂ ನ್ಯಾಷನಲ್ ಪ್ರಾಜೆಕ್ಟ್‌ಗಳೆಂದು ಮಾಡಿ ಎಂದು ಎಷ್ಟು ಕೇಳಿದರೂ ಅದಕ್ಕೆ ಕಡೆಗಣ್ಣನ್ನೂ ತೋರಿಸಿಲ್ಲ, ಒಂದು ಕಾಸನ್ನೂ ಕೊಟ್ಟಿಲ್ಲ. ಅಭಾವಪರಿಸ್ಥಿತಿ ಇದೆ ಎಂದು ಹೇಳಿದಾಗ ಪ್ರಾಣ ಉಳಿಸಿಕೊಳ್ಳುವುದಕ್ಕೆ ಸ್ವಲ್ಪ ಹಣವನ್ನು ಚೆಲ್ಲಿದ್ದಾರೆ. ಊಟ ಮಾಡಿ ಶ್ರೀಮಂತರಾದವರು ಎಂಜಲು ಬಿಸಾಕುವ ಹಾಗೆ, ಅಂಥದೃಷ್ಟಿಯಲ್ಲಿ ನಮ್ಮನ್ನು ಕೇಂದ್ರ ಸರ್ಕಾರ ನೋಡುತ್ತಿದೆ. ಕೇಂದ್ರದ ವರಿಗೆ ಚಾಲೆಂಜ್ ಮಾಡಬೇಕು. ಬೇಕಾದರೆ ಸರ್ಕಾರವನ್ನು ನೀವೇ ನಡೆಸಿಕೊಳ್ಳಿ, ನಾವೆಲ್ಲ ರಾಜೀನಾಮೆ ಕೊಡುತ್ತೇವೆಂದು ಹೇಳಬೇಕು. ಮಲತಾಯಿ ಧೋರಣೆಯನ್ನು ಅವರು ತೋರಿಸುವುದಕ್ಕೆ ಆಗುವುದಿಲ್ಲ. ಮೈಸೂರು ರಾಜ್ಯ ಇಂಡಿಯಾದಲ್ಲಿದೆ. ರಾಜಕೀಯವನ್ನು ತಂದು ರಾಜ್ಯದ ಎರಡೂವರೆ ಕೋಟಿ ಜನರನ್ನು ಕೊಂದುಹಾಕುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದಿಂದ ನಮಗೆ ಯಾವರೀತಿಯು ನೆರವೂ ಸಿಕ್ಕುವುದಿಲ್ಲ ಎನ್ನುವುದು ನನ್ನ ಖಚಿತವಾದ ಅಭಿಪ್ರಾಯ. ನಮ್ಮ ಕಾಲಮೇಲೆ ನಾವು ನಿಂತುಕೊಂಡು ನಮ್ಮ ಪ್ರಾಜೆಕ್ಟ್‌ಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಿ ಪ್ರೊಗ್ರೆಸ್ ತೋರಿಸಿದರೆ ಮಾತ್ರ ಅವರು ಕಣ್ಣು ಬಿಡುತ್ತಾರೆ. ಈಗಿನ ಕಾಲದಲ್ಲಿ ಶಕ್ತಿ ಇದ್ದವರನ್ನು ಮಾತ್ರ ಮಾತನಾಡಿಸುತ್ತಾರೆ ಇಲ್ಲದೆ ಹೋದರೆ ಯಾರೂ ಕೂಡ ಕೇಳುವುದಿಲ್ಲ ಯಾವ ದೇವರ ಒಕ್ಕಲು ಎಂದು ಕೂಡ ಕೇಳುವುದಿಲ್ಲ. ನಾನು ಸರ್ಕಾರಕ್ಕೆ ಈ ನಂದರ್ಭದಲ್ಲಿ ಬಿನ್ನವಿಸಿ

ಕೊಳ್ಳುವುದೇನೆಂದರೆ ಪ್ರತಿಯಾಬ್ಬ ಮಾನ್ಯ ಮಂತ್ರಿಗಳೂ ಅವರವರ ಇರಾಖೆಯಲ್ಲಿ ಸರಿಯಾದ ರೀತಿಯಲ್ಲಿ ಖರ್ಚಾಗುತ್ತಿರುವುದು ಯಾವುದು, ಅನಾವಶ್ಯಕವಾಗಿ ಖರ್ಚಾಗುತ್ತಿರುವುದು ಯಾವುದು ಎನ್ನುವುದನ್ನು ಬಹಳ ಖಡಾಖಂಡಿತವಾಗಿ ನೋಡಿ, ಯುದ್ಧಕಾಲದಲ್ಲಿ ಹೇಗೆ ಹೊಟ್ಟೆ ಬಟ್ಟೆ ಕಟ್ಟಿಕೊಂಡು ದೇಶದ ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಬೇಕೋ ಅದಕಿಂತಲೂ ಬಹಳ ಸೀರಿಯಸ್ಸಾಗಿ ಈ ಸಮಸ್ಯೆಯನ್ನು ಬಿಡಿಸಿ, ಪ್ರತಿಯೊಬ್ಬರೂ ಎಷ್ಟೆಷ್ಟು ಹಣವನ್ನು ಕೂಡಿಸಿ ಕೊಡಬಹುದೋ ಅಷ್ಟನ್ನೂ ಕೊಟ್ಟು ಮಹಾ ಯೋಜನೆಗಳನ್ನು ಮಾಡುವುದಕ್ಕೆ ನೆರವಾಗಬೇಕು.

ರಿಸೋರ್ಸಸ್ ಕಮಿಟಿಯಲ್ಲಿ ಅರ್ಬನ್ ಪ್ರಾಪರ್ಟಿ ಟ್ಯಾಕ್ಸ್ ಹಾಕಿ ಎಂದು ಹೇಳಿದ್ದೇವೆ. ಬೇಕಾದಷ್ಟು ಜನ ಬೇಕಾದ ರೀತಿಯಲ್ಲಿ, ಒಂದು ದೃಷ್ಟಿಯಿಂದ ಹೇಳುವುದಾದರೆ ಮಾಡಬಾರದ ರೀತಿಯಲ್ಲಿ ಬೇಕಾದಷ್ಟು ಹಣವನ್ನು ಗಳಿಸಿದ್ದಾರೆ. ಅದನ್ನೆಲ್ಲ ಕಿತ್ತುಕೊಂಡು, ಸಾಲವೆತ್ತಿ, ಬಹಳ ಪ್ರಾಮುಖ್ಯವಾದ ಈ ಮನೂದೆಯಲ್ಲಿ ಸೂಚಿಸಿರುವಂತೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ತೆಗೆದು ಕೊಳ್ಳಬೇಕು ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಕಮಿಟಿಯ ಮುಂದೆ ಹೇಳಿದ್ದೇನೆ. ನಾನು ಬಹಳ ಹೆಮ್ಮೆಯಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ನಮ್ಮ ಜಿಲ್ಲೆಯಲ್ಲಿ ಹಾರಂಗಿ ಭಾಗದ ಜನರು, ನಂಜರಾಜ್ ಅರಸ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ ಎನ್ನುವುದನ್ನು ಕರಪತ್ರಗಳ ಮೂಲಕ ಪಬ್ಲಿಷ್ ಮಾಡಿದ್ದಾರೆ. ಕಬಿನಿ ಜಲಾಶಯದಿಂದ ನೀರಾವರಿ ಸೌಲಭ್ಯವನ್ನು ಪಡೆಯುವ ಜನರೂ ಸಹ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ರೈತರಿಗೆ ಹೊಟ್ಟೆ ಬಟ್ಟೆಗೆ ಆಗಿ ಅವರು ಅನುಕೂಲವಾಗಿದ್ದಾರೆ, ಅದರಿಂದ ವ್ಯವಸಾಯ ಮಾಡುತ್ತಿದ್ದಾರೆ, ಅದಕ್ಕಾಗಿ ಮುಂಗಡವಾಗಿ ಹಣ ಕೊಡುತ್ತಾರೆಂದು ಯಾರೂ ಭಾವಿಸಬೇಕಾಗಿಲ್ಲ. ಅವರು ಜಮೀನನ್ನು ಬ್ಯಾಂಕುಗಳಿಗೆ ಅಡವೀಟ್ಟು, ಬ್ಯಾಂಕಿನಿಂದ ಸಾಲವನ್ನು ಪಡೆಯುವುದಕ್ಕೆ ಸರ್ಕಾರದವರು ಸಹಾಯ ಮಾಡಬೇಕು. ಆಗ ಅವರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತಾರೆ. ನೀರಾವರಿ ಯೋಜನೆಗಳನ್ನು ಪಡೆದು, ಅದರಿಂದ ಬೇಕಾದಷ್ಟು ಶ್ರೀಮಂತರಾಗಿರುವವರು ಎಷ್ಟೋ ಕಡೆ ಬೆಟರ್‌ಮೆಂಟ್ ಲೆವಿಯನ್ನು ಕೊಟ್ಟಿಲ್ಲ. ಹಾಗಿರುವಾಗ ಬಡ ರೈತರು ಎಲ್ಲಿಂದ ಕೊಡುತ್ತಾರೆ? ಆದ್ದರಿಂದ ಅವರ ಭೂಮಿಯನ್ನು ಬ್ಯಾಂಕಿಗೆ ಅಡವಾಗಿಟ್ಟುಕೊಂಡು ಸರ್ಕಾರ ಮಧ್ಯೆ ನಿಂತು ಹಣವನ್ನು ಜೋಡಿಸಿಕೊಡಬೇಕು ಎನ್ನುವುದು ಈ ಮನೂದೆಯ ಮುಖ್ಯ ಉದ್ದೇಶ.

ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ್ದಾರೆ. ಈ ವಿಷಯದಲ್ಲಿ ಪ್ರಧಾನಿಯವರನ್ನು ಅಭಿನಂದಿಸಬೇಕು. ಸಮಾಜವಾದದ ತತ್ವವನ್ನು ಜಾರಿಗೆ ತರುತ್ತೇವೆ ಎಂದು ಭಾರಿ ನಿರ್ಣಯಗಳನ್ನು ಪಾಸು ಮಾಡಿದೆವು, ಈ ಸಂಬಂಧದಲ್ಲಿ ಬೆಂಗಳೂರು ಒಂದು ಚರಿತ್ರೆಯನ್ನು ಬರೆಯಿತು. ಶ್ರೀಮತಿ ಗಾಂಧಿ ಅವರು ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿ ಹಿಂದೂಸ್ಥಾನದಲ್ಲಿ ಕೀರ್ತಿಯನ್ನು ಗಳಿಸಿರುವ ವಿಚಾರದಲ್ಲಿ ಹೆಮ್ಮೆ ಪಡಬೇಕು. ಬ್ಯಾಂಕುಗಳಲ್ಲಿ ನಾಲ್ಕು ಸಾವಿರಕೋಟಿ ರೂಪಾಯಿ ಗಳಷ್ಟು ಹಣ ಡಿಪಾಜಿಟ್ ರೂಪದಲ್ಲಿದೆ. ಇದನ್ನು ಯಾವ ರೀತಿ ಸಣ್ಣ ಕೈಗಾರಿಕೆಗಳಿಗೆ ಹಾಗೂ ರೈತರಿಗೆ ಸಹಾಯ ಮಾಡುವುದರ ಜೊತೆಗೆ ಇಂಬ್ಯಾಲೆನ್ಸಸ್ ಎಲ್ಲೆಲ್ಲಿದೆ, ಯಾವ ಯಾವ ರಾಜ್ಯಗಳು ಹಿಂದುಳಿದಿದ್ದು ಆ ರಾಜ್ಯಗಳ ಉದ್ಧಾರಕ್ಕೆ ಖರ್ಚು ಮಾಡಬೇಕೆಂಬ ನಿಯಮವನ್ನು ಹಾಕಿದ್ದಾರೆ. ರಾಷ್ಟ್ರೀಕರಣವಾಗಿರುವುದರಿಂದ ಬ್ಯಾಂಕುಗಳಿಂದ ನಮಗೆ ನೂರಾರು ಕೋಟಿ ರೂಪಾಯಿಗಳ ನೆರವು ದೊರೆಯಬಹುದು. ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳು ಯಾರೇ ಆಗಿರಲಿ ತಮ್ಮ ಪಕ್ಷ ಅಥವಾ ರಾಜಕೀಯ ಜಂಜಾಟ ಅಥವಾ ವೈಯಕ್ತಿಕ ಪ್ರತಿಷ್ಠೆಯನ್ನು ಬಿಟ್ಟು ಇಡೀ ಪ್ರಕರಣವನ್ನು ಸಮತೆಯ ದೃಷ್ಟಿಯಿಂದ ನೋಡಿ, ನ್ಯಾಯವಾಗಿ ಮಾಡಬೇಕು ಎನ್ನುವುದು ನಿಜವಾದರೆ ಕೇಂದ್ರ ಸರ್ಕಾರ ನಮಗೆ ನೂರಾರು ಕೋಟಿ ರೂಪಾಯಿಗಳನ್ನು ಕೊಡಬೇಕು. ಅದಕ್ಕೆ ನಾವು ದಿಟ್ಟತನದಿಂದ ನಮ್ಮ ಸಮಸ್ಯೆಗಳನ್ನು ಎಳೆಎಳೆಯಾಗಿ ತಿಳಿಸಿ, ರಾಜಕೀಯ ಕಾರಣವನ್ನು ತಂದು ಹಾಕದೆ ಈ ಸಮಸ್ಯೆಯನ್ನು ಬಿಡಿಸುವಂತೆ ನಾವು ಕೂಡ ನಡೆದುಕೊಳ್ಳಬೇಕು, ಅವರೂ ಕೂಡ ನಡೆದುಕೊಳ್ಳುವ ಹಾಗೆ ಪ್ರೇರೇಪಿಸಬೇಕು. ರಾಷ್ಟ್ರೀಕರಣದಿಂದ ಹಣ ಕೇವಲ ಕೆಲವು ಪ್ರಾಂತಗಳಿಗೆ ಸೇರುವುದಲ್ಲ. ಈ ಹೊತ್ತಿನ ಪರಿಸ್ಥಿತಿಯಲ್ಲಿ ಮೈಸೂರು ದೇಶಕ್ಕೆ ಸಂಬಂಧಪಟ್ಟ ಹಾಗೆ ರಾಜಕೀಯ ಭಿನ್ನಾಭಿಪ್ರಾಯಗಳು ಉನ್ನತ ಮಟ್ಟದಲ್ಲಿರುವವರಲ್ಲದ್ದರೂ ಕೂಡ ಯಾರೂ ಶಾಶ್ವತವಾಗಿ ಬೆಣ್ಣೆ ಹೊಡೆಸಿಕೊಂಡಿರುವುದಿಲ್ಲ. ಮುಂದಿನ ಪೀಳಿಗೆಯನ್ನು ನಾವು ನೋಡಬೇಕು. ಪ್ರಜಾಪ್ರಭುತ್ವದಲ್ಲಿ ಎಷ್ಟೋ ಬಂದು ಹೋಗಿದೆ. ಪ್ರಜಾಪ್ರಭುತ್ವದಲ್ಲಿ ಉಳಿಯಬೇಕು, ದೇಶದ ಜನತೆಯ ಕಲ್ಯಾಣವಾಗಬೇಕು, ಯಾವ ದೇಶ ಬಡತನದಲ್ಲಿರುತ್ತದೆ, ಎಲ್ಲಿ ಜಟಿಲ ಸಮಸ್ಯೆಗಳಿರುತ್ತವೆ, ಅಂಥ ಸಂದರ್ಭಗಳಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವವರು ಘನತೆಯಿಂದ ವರ್ತಿಸಬೇಕು. ಇಲ್ಲದೆ ಹೋದರೆ ಆ ಸ್ಥಾನವನ್ನು ಬಿಟ್ಟು ಬರಬೇಕು. ಪ್ರಜಾಪ್ರಭುತ್ವದಲ್ಲಿ ಸ್ಥಾನಮಾನಗಳು ಯಾರಿಗೂ

(ಶ್ರೀ ಡಿ. ಎಂ. ನಿದ್ದಯ್ಯ)

ಶಾಶ್ವತವಲ್ಲ. ಡಿಕ್ಟೇಟರಷಿಪ್ ರೀತಿಯಲ್ಲಿ ಆ ಸ್ಥಾನವನ್ನು ಯಾರೂ ಗಳಿಸಿಲ್ಲ. ಯಾವ ವ್ಯಕ್ತಿಯೇ ಆಗಲೀ ತಾನು ದೇಶಕ್ಕೆ ಸೇವೆ ಮಾಡಬೇಕು. ಆದಕಾರಣ ಸೇವೆ ಮಾಡುವುದಕ್ಕೆ ನಿಷ್ಠೆ, ದೇಶಾಭಿಮಾನ ಇಲ್ಲದೆ ಇದ್ದರೆ ಯಾರೂ ತಮ್ಮ ಸ್ಥಾನದಲ್ಲಿ ಇರಕೂಡದು ಎನ್ನುವುದು ಪ್ರಜಾಪ್ರಭುತ್ವದ ಧರ್ಮ. ಈ ದೃಷ್ಟಿಯಿಂದ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೇಳಲಾಗುತ್ತಿದೆ. ಅಡ್ವಾನ್ಸ್ ಇಲ್ಲದೆ ಮಹಾ ಯೋಜನೆಗಳೇನಿವೆ ಅವನ್ನು 74ನೆಯ ಇಸವಿಯೊಳಗಾಗಿ ಮಾಡುವುದಕ್ಕೆ ಸಾಧ್ಯವೇ? ಕಾವೇರಿ ಬೇಸಿನ್‌ನಲ್ಲಿ ಇರುವ ಯೋಜನೆಗಳನ್ನು ಪೂರ್ಣಮಾಡಲು ಅಡ್ವಾನ್ಸ್ ಹಣ ದೊರೆಯದಿದ್ದರೆ ಅಸಾಧ್ಯ. ನರಕಾರವೂ ಪ್ರಯತ್ನಮಾಡಬೇಕು, ಕೇಂದ್ರ ಸರಕಾರದ ನೆರವೂ ಬೇಕು. ನಾವು ಬ್ಯಾಂಕುಗಳ ರಾಷ್ಟ್ರೀಕರಣದ ಫಲವನ್ನೂ ಪಡೆಯಬೇಕು.ಅನುಭವಿಗಳ ಸಹಾಯವನ್ನೂ ಉಪಯೋಗಿಸಿಕೊಳ್ಳಬೇಕು, ಸರಕಾರ ಪಕ್ಷಾತೀತವಾಗಿ ಈ ಮಸೂದೆಯನ್ನು ನೋಡಿ ಇರುವ ಬೃಹತ್ ಸಮಸ್ಯೆಯನ್ನು ಬಗೆಹರಿಸಲು ಎಲ್ಲರನಸಹಾಯ ಸಹಕಾರ ಪಡೆದು ಮುಂದುವರೆಯಬೇಕು. ಇಂದು ಈ ಬಿಲ್ಲು ಮಹತ್ವಪೂರಿತವಾದುದು. ಇಂದು ನಮ್ಮ ಇರಿಗೇಷನ್ ಪೊಟೆನ್‌ಷಿಯಾಲಿಟಿ ಸೇಕಡ 11 ಇದೆ, ಅದು 25ಕ್ಕೆ ಬರುವುದು ಕಷ್ಟ. ಕಾವೇರಿ ಮತ್ತು ಕೃಷ್ಣ ಬೇಸಿನ ವಿಚಾರ ಬಂದಾಗ ಭಿನ್ನಭಾವನೆ ಇಲ್ಲ ಎಂದು ಕೆಲವರು ಹೇಳಿದರು. ಕೃಷ್ಣ ಬೇಸಿನ್ ತುಮಕೂರಿನವರೆಗೂ ಬಂದಿದೆ. ಸುಮಾರು 4 –5 ಜಿಲ್ಲೆಗಳನ್ನು ಬಿಟ್ಟು ಎಲ್ಲಾ ಜಿಲ್ಲೆಗಳನ್ನೂ ಅದು ಆವರಿಸಿದೆ. ಕೃಷ್ಣ ಬೇಸಿನ್ ಮತ್ತು ಕಾವೇರಿ ಬೇಸಿನ್ ಎಂದು ಭಿನ್ನಾಭಿಪ್ರಾಯವಿಲ್ಲ. ಎಲ್ಲಾ ಪ್ರಾಜೆಕ್ಟುಗಳೂ ಆಗಬೇಕು. ಈ ಎಲ್ಲಾ ಆಗಬೇಕಾದರೆ ಜವಾಬ್ದಾರಿ ಇರುವವರು, ಮುಖ್ಯಮಂತ್ರಿಗಳು, ಮಂತ್ರಿಮಂಡಲ ಅಥವ ಇಡೀ ನಭೆ ಒಬ್ಬ ಮನುಷ್ಯನ ಹಾಗೆ ಪ್ರಯತ್ನ ಪಟ್ಟರೆ 1974 ರೊಳಗೆ ಕಾವೇರಿ ಬೇಸಿನ್ನಿನ ಪ್ರಾಜೆಕ್ಟುಗಳನ್ನು ಮುಗಿಸಬಹುದು. ಹಾಗೆಯೇ ಕೃಷ್ಣ ಬೇಸಿನ್ನಿನ ಯೋಜನೆಗಳನ್ನೂ ತೆಗೆದು ಕೊಳ್ಳಬಹುದು. ಆದುದರಿಂದ ಪಕ್ಷ ಭೇದವಿಲ್ಲದೆ ಎಲ್ಲರೂ ಕೂಡ ಈ ಮಸೂದೆಯನ್ನು ಸರ್ವಾನುಮತದಿಂದ ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಈ ಮಸೂದೆಯನ್ನು ಮಂಡಿಸುವಾಗ ನಮ್ಮ ಪಾರ್ಲಿಮೆಂಟರಿ ವ್ಯವಹಾರಗಳ ಮಂತ್ರಿಗಳು ತಮ್ಮ ವಾಕ್‌ಚಾತುರ್ಯದಿಂದ ಇದರ ಮಹತ್ವ ಬಹಳವಿದೆ, ಇದಕ್ಕೆ ತಮ್ಮ ಸಹಕಾರ ಬೇಕು ಎಂದು ಹೇಳಿದರು. ಅವರ ಮಾತನ್ನು ಕೇಳಿದವರು ಎಷ್ಟು ಸೊಗಸಾಗಿದೆ, ಬಹಳ ಉಪಯುಕ್ತವಾದ ಬಿಲ್ಲು, ಇದಕ್ಕೆ ವಿರೋಧ ಎಲ್ಲಿಂದ ಬರುತ್ತದೆ ಎಂದು ಭಾವಿಸಿರಬಹುದು. ಈಗ ಮಾತನಾಡಿದ ಯುವಕ ಮಿತ್ರರು ಬಹಳ ಚೆನ್ನಾಗಿ ಭಾಷಣ ಮಾಡಿದರು. ಅವರ ವಾಗ್ಮೈವಾವ ಭಾಷಣ ಕೇಳಿದಾಗ ನಾನು ವಿರೋಧ ಮಾಡುವುದು ಸರಿಯೇ ಎಂದು ನನಗನ್ನಿಸಿತು ನೋಡುವುದಕ್ಕೆ ಬಹಳ ಸುಂದರವಾಗಿದೆ ಹಣ್ಣು, ಆದರೆ ಒಳಗೆ ಹುಳ ತುಂಬಿದೆ, ಈಗ ನುಮಾರು ಏಳೆಂಟು ವರ್ಷಗಳಿಂದೇನು ನಡೆದಿದೆ ಎಂಬುದನ್ನು ವಿವರವಾಗಿ ಹೇಳಿದರು ಅವರಿಗೆ ಶಕ್ತಿಯಿಲ್ಲ, ಇದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಅಡಳಿತ ಸೂತ್ರ ವಹಿಸಿರುವವರಿಗೆ, ದೇಶದ ಭವಿಷ್ಯ ನಿರ್ಮಾಣ ಮಾಡುವವರಿಗೆ ಶಕ್ತಿಯಿದ್ದರೆ ಹೀಗೆ ನಮ್ಮನ್ನು ಮಾತನಾಡಿಸುವುದಕ್ಕೆ ಬರುತ್ತಿರಲಿಲ್ಲ. ಒಂದು ಸಂತೋಷದ ಸಂಗತಿಯೇನೆಂದರೆ ಸತ್ಯ ನುಡಿದರು, ನಾನು ಅಧಿಕಾರದಲ್ಲಿದ್ದರೆ ಇಷ್ಟು ಹೊತ್ತಿಗೆ ಹಾರಂಗಿ, ಕಂಬದಕಡ ಯೋಜನೆಗಳು ಇದುವರೆಗೆ ಕಾರ್ಯಗತವಾಗದೆ ಇರುತ್ತಿರಲಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಪರ ರಾಜ್ಯದ ಪಿತೂರಿಯಿಂದ ಕೈಬಿಡಬೇಕಾಯಿತೆಂದು ಹೇಳಿದರು. ಈಗ ನಿಜಾಂಶ ಹೇಳುತ್ತೇನೆ. ಇದು ಹಾಗಲ್ಲ; ನಮ್ಮ ರಾಷ್ಟ್ರದ ಮುಖಂಡರ ಪಿತೂರಿಯಿಂದರೇ ಆಗಿರುವುದು. ಇದಕ್ಕೆ ಅವಕಾಶ ಕೊಟ್ಟಿದ್ದೇಕೆ? ಇದು ಅತ್ಯಂತ ಕಡೆಯ ಮಾತು. ಈಗ ನಿಮಗೆ ಬೇಕಾಗಿರುವುದೇನು? ಪರಮಾವಧಿ ಎಂದರೆ ಒಂದು ಎಕರೆಗೆ 500 ರೂಪಾಯಿ ಹಾಕಬಹುದು, ಇಲ್ಲದಿದ್ದರೆ 300 ಅಥವಾ 200 ರೂಪಾಯಿ ಹಾಕಬಹುದು. ಮೈಸೂರು ರಾಜ್ಯದಲ್ಲಿ ಕಾವೇರಿ ಬೇಸಿನ್ನಿನಲ್ಲಿ ಎಲ್ಲಾ ಪ್ರಾಜೆಕ್ಟುಗಳನ್ನೂ ತೆಗೆದುಕೊಂಡರೆ 6 ಲಕ್ಷ ಎಕರೆಯಮೇಲೆ ನೀರಾವರಿಯಾಗುವುದಿಲ್ಲ, 6 ಲಕ್ಷ ಎಕರೆಗೆ ಪರಮಾವಧಿ 500 ರೂಪಾಯಿ ಪ್ರಕಾರ ಹಾಕಿದರೆ 30 ಕೋಟಿ ಆಯಿತು ನಮಗೆ ಬೇಕಾಗಿರುವುದು 120 ಕೋಟಿ. ಪ್ರಾಜೆಕ್ಟುಗಳನ್ನು ಮಾಡಿ 4 ವರ್ಷವಾಯಿತು. ಈಗ ಸಂಬಂಧಪಟ್ಟ ರೈತರನ್ನು ನದೆಬಡಿದು ವಸೂಲುಮಾಡೋಣ, ಸಹಕಾರ ಮಾಡಿ ಎಂದು ಹೇಳುವಾಗ ಆ ಸಹಕಾರಕ್ಕೆ ಅರ್ಹರಾಗಬೇಕು, ನಂಬಿಕೆಗೆ ಅರ್ಹರಾಗಬೇಕು ಅರ್ಹತೆ ಮತ್ತು ನಂಬಿಕೆ ಇಲ್ಲದೆ ಸಹಕಾರ ಕೊಡುವುದು ಹೇಗೆ? ವಸೂಲುಮಾಡುವುದಿಲ್ಲ, ಆಸ್ತಿ ಹರಾಜುಮಾಡಿ ನಾವು ಸಾಲ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಇದು ಸರಿಯೇ ಎಂದು ಕೇಳುವುದು. ಇಂದು ಎಲ್ಲಾ ಸೇರಿ 30 ಕೋಟಿ

ಬರಬಹುದು. ಅಷ್ಟು ಬಂದರೆ ಇನ್ನು ನಾಲ್ಕೂವರೆ ವರ್ಷಗಳಲ್ಲಿ 6 ಲಕ್ಷ ಎಕರೆಗೆ ನೀರು ಕೊಡುತ್ತೇವೆ ಎಂದು ಜನರಿಗೆ ಭರವಸೆ ಕೊಡಬೇಕು. ಇಲ್ಲಿ ಹಾಗೆ ಮಾಡುತ್ತೇವೆ, ಪ್ಯೆನೂರು ಹಕ್ಕನ್ನು ಕಾಪಾಡುತ್ತೇವೆ ಎಂದು ಆಶ್ವಾಸನೆ ಕೊಡುವವರು ಯಾರು ?

Sri H. SIDDAVEERAPPA.—Here is a challenge thrown. If the Union Government gives that assurance we will agree to this Bill. Is there no Government here to agree to it ?

Sri H. M. CHANNABASAPPA.—Absolutely there is no Government.

Sri K. H. SRINIVASA.—The Government is not run by challenges. It is here to meet the real challenges.

Sri H. M. CHANNABASAPPA.—Ten years ago I had forecast what will happen. I had told the Hon. Member's Leader and the Chief Minister three years ago. ನೋಡಿ ಕಾಂಟ್ರ್ಯಾಕ್ಟ್ ಕರೆದಿದ್ದೇವೆ, ನಾಳೆ ಬೆಳಿಗ್ಗೆ ಮಾಡುತ್ತೇವೆ, ಅಪ್ಪರ್ ಕೃಷ್ಣ ಆಯಿತು, ನಂಬಿ ಎಂದು ಹೇಳಿದರು. ನಂಬಿ ಕೆಟ್ಟೆವು. ಈ ಅಪದ್ಧ ನುಡಿಯುವುದರಿಂದ ರೈತರಿಗೆ ನಿಮ್ಮಲ್ಲಿ ನಂಬಿಕೆ ಇಲ್ಲವಾಗಿದೆ. ಜನರಿಗೆ ನಿಮ್ಮಲ್ಲಿ ನಂಬಿಕೆಯಿಲ್ಲ. ಒಂದು ತೊಟ್ಟು ನೀರೂ ಕೂಡ ಕೃಷ್ಣ ಬೇಸಿನ್‌ನಿಂದ ಬಿಡುವುದಿಲ್ಲ ಎಂದು ಮುಖ್ಯ ಮಂತ್ರಿಗಳು ಹೇಳಿದ್ದರು. ನಾಗಾರ್ಜುನ ಸಾಗರದ ಕೆಲಸ ಮುಗಿದು ಆಗಲೇ ನೀರು ಪೆನ್ನಾರ್ ಮತ್ತು ಗೋದಾವರಿ ಪ್ರಾಂತದಲ್ಲಿ ಹರಿಯಿತು. ಅವರು ಇನ್ನೂ ಹೇಳುತ್ತಿದ್ದಾರೆ—ಬಿದ್ದರೂ ಮಾಸೆ ಮಣ್ಣಾಗಿಲ್ಲ ಎಂದು. ಈ ರೀತಿ ಪದೇಪದೇ ನಿರಾಧಾರವಾದ, ಅನತ್ಯವಾದ ಆಶ್ವಾಸನೆ ಕೊಟ್ಟರೆ ಪ್ರಯೋಜನವಿಲ್ಲ.

ಆದ್ದರಿಂದ ತಾವು ಸ್ವಲ್ಪ ತಮ್ಮ ಹೃದಯವನ್ನು ನೋಡಿಕೊಳ್ಳಬೇಕು, ಪಕ್ಷಾತೀತವಾಗಿ ನಡೆಯಬೇಕೆನ್ನುವುದನ್ನು ನಾನು ಖಂಡಿತ ಒಪ್ಪುತ್ತೇನೆ. ಇದು ಒಂದು ಪಕ್ಷ, ಪರಪಕ್ಷಗಳ ಮೇಲೆ ಮಾತನಾಡುವುದು ಅಲ್ಲ, ದೇಶದ ಭವಿಷ್ಯವನ್ನು ನಿರ್ಮಾಣ ಮಾಡುವುದು. ಪಕ್ಷ, ಪರಪಕ್ಷಗಳ ಆಧಾರವನ್ನು ಇಟ್ಟುಕೊಂಡು ಇವತ್ತಿನವರೆಗೂ ಕೆಲಸ ಮಾಡಿ ನೀವು ನಂಬಿಕೆಗೆ ಪಾತ್ರರಾಗಿಲ್ಲ, ಇದೇ ಕಾವೇರಿ ನದಿ ನೀರಿನ ವಿಷಯವನ್ನು 5 ವರ್ಷಗಳ ಹಿಂದೆ ಮಾತನಾಡುವಾಗ ನಾನು ಹೇಳಿದ್ದಿರಿ ? ಒಂದು ತೊಟ್ಟು ನೀರನ್ನು ಬಿಟ್ಟುಕೊಡುವುದಿಲ್ಲ ಎಂದು ಹೇಳಿದ್ದಿರಿ. ಆಗಲೇ ಎಷ್ಟೋ ವರ್ಷಗಳು ಉರುಳಿ ಹೋದವು. ಏಕೆ ಈ ಹೆತ್ತಲೆಯನ್ನು ಕೊಟ್ಟೆನೆಂದರೆ ನಿಮ್ಮಿಂದ ಸಹಕಾರ ಕೇಳುತ್ತಾ ಇದ್ದೀರಿ, ಅದಕ್ಕೆ ನಿಮಗೆ ಅರ್ಹತೆ ಇದೆಯೇ ಎಂಬುದನ್ನು ನೀವೇ ತುಲನೆ ಮಾಡಿರಿ. ಬಹುಶಃ ಈ ಅಸೆಂಬ್ಲಿ ಪ್ರಾರಂಭವಾದಂದಿನಿಂದಲೂ, ಹೋದ ಅಸೆಂಬ್ಲಿಯಿಂದಲೂ ಕೂಡ ಹೇಳುತ್ತಾ ಇದ್ದೇನೆ :"ಹೋಯಿತು, ಹೋಯಿತು, ಕಾವೇರಿ ನೀರು ಹೋಯಿತು, ಎಚ್ಚರಿಕೆ ಎಚ್ಚರಿಕೆ" ಅಂತ ಮುಖ್ಯಮಂತ್ರಿಗಳ ಒಂದು ರೋಮವೂ ಅಲ್ಲಾಡಲಿಲ್ಲ. ಹಣ ಕೊಡ್ರಿ, ಹಣ ಕೊಡ್ರಿ, ಎಲ್ಲಿಂದ ಕೊಡುವುದು ! ಏಕೆ ಕೊಡುವುದು ! ಮುಳುಗಿ ಹೋಗಿರತಕ್ಕ ಕೈಗಾರಿಕೆಗೆ ಶ್ರೀಮಾನ್ ರಾಜಶೇಖರ ಮೂರ್ತಿಗಳಿಗೆ ನಿನ್ನೆ 46 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳಿರಿ ಎಂದು ಕೊಟ್ಟು ಬಿಟ್ಟೆವು. ರೆಂಕೊನಲ್ಲಿ ಪ್ರತಿವರ್ಷ ನಷ್ಟವಾಗುತ್ತಾ ಇದೆ. ಬಡ ಬೋರೇಗೌಡನ ಹೆಸರನ್ನು ಈ ಕೈಗಾರಿಕೆಗಳಿಗಾಗಿ ಹಾಳು ಮಾಡಿ ಇವತ್ತು ನೀರಿನ ಸಾಲಭ್ಯ ಮಾಡಿಕೊಡುವುದಕ್ಕೆ ಹಣಕೊಡಿ ಎಂದು ಕೇಳುವುದಕ್ಕೆ ತಮಗೆ ಯಾವ ಮಾರಲ್ ರೈಟ್ ಇದೆ ? ಎಂದು ಕೇಳುತ್ತಾ ಇದ್ದೇನೆ. 90 ಕೋಟಿ ರೂಪಾಯಿ ಸರ್ಕಾರ ಒದಗಿಸಬೇಕು, 30 ಕೋಟಿ ರೂಪಾಯಿ ರೈತರಿಂದ ಕೇಳುತ್ತಾ ಇದ್ದೀರಿ. ಮೊದಲು ನಾಲ್ಕೂವರೆ ವರ್ಷದಲ್ಲಿ ನೀವು ಖರ್ಚುಮಾಡಬೇಕಾಗಿರುವ 90 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನಂತರ 30 ಕೋಟಿ ರೂಪಾಯಿ ಬರಬೇಕಾದ್ದಕ್ಕೆ ನೀವೆಲ್ಲ ತ್ಯಾಗ ಮಾಡಿರಿ ಎಂದರೆ ಎಲ್ಲರೂ ಸಂತೋಷದಿಂದ ಕೊಡುತ್ತಾರೆ, ಅದು ಬಿಟ್ಟು ಆ ಬಡಪಾಯಿಗಳನ್ನು ನೀವೆ ಕೊಟ್ಟರೇ ಕೆಲಸ ಪ್ರಾರಂಭ ಮಾಡುವುದು ಅಂತ ಯಾವ ಬಾಯಿಂದ ಹೇಳುತ್ತೀರಿ ? ನೀವು ಮಾಡುತ್ತೀರಿ ಎಂಬ ನಂಬಿಕೆಯಾದರೂ ಏನು ಇದೆ ? ಈ ವಿಷಯವನ್ನು ತಮಗೆ ಹೇಳುವಾಗ ಬಹಳ ದುಃಖವಾಗುತ್ತದೆ. ನಮ್ಮ ದೇಶದಲ್ಲಿ ಬಡ ಬೋರೇಗೌಡ ತನ್ನ ಆಸ್ತಿಯನ್ನು ಈಡುಮಾಡಿ ಅದರಿಂದ ಹಣ ತಂದುಕೊಟ್ಟರೆ ಅಣೆಗಳನ್ನು ಕಟ್ಟುತ್ತೇವೆ ಎಂದರೆ ಇದಕ್ಕಿಂತಲ್ಲೂ ದುಃಖದ ವಿಷಯ ಬೇರೊಂದಿಲ್ಲ. ಪ್ರಥಮ ಜವಾಬ್ದಾರಿ ನಿಮ್ಮದು. ಪ್ರತಿದಿನ ಅನ್ನ ಬಟ್ಟೆ ಒದಗಿಸತಕ್ಕ ಅನ್ನದಾತ ಅವನು, ಅವನ ಹತ್ತಿರ ಹಣ ಕೇಳಬೇಕಾದ್ದು ಅನಾವಶ್ಯಕ, ಒಂದು ವೇಳೆ ಅವನೇ ತ್ಯಾಗ ಮಾಡುತ್ತೇನೆ ಎಂದರೆ ಮಾಡಲಿ. ಅವನ ತ್ಯಾಗಕ್ಕೆ ನ್ಯಾಯಾದಂತಹ ಪ್ರತಿಫಲ ಅವನಿಗೆ ದೊರಕುತ್ತದೆಯೇ ಎಂಬುದನ್ನು ಇವತ್ತು ನಾವು ಯೋಚನೆ ಮಾಡಬೇಕಾಗಿದೆ. ಆದ್ದರಿಂದ ತಮ್ಮಲ್ಲಿ ಅರಿಕೆ

(SRI H. M. CHANNABASAPPA)

ಮಾಡುವುದು ಇಷ್ಟೆ, ಬೆಂಗಳೂರು ಪಟ್ಟಣದ ಜನರೆಲ್ಲಾ ಸುಖವಾಗಿ ಇರಲಿ ಅಂತ ಹೇಳಿ ರಾಜ್ಯದ ಬೊಕ್ಕಸದಿಂದ ಹಣ ತೆಗೆದು ಮನೆಗಳನ್ನು ಕಟ್ಟಿ ರೈತಾಪಿ ಜನರ ಸುಖವನ್ನುಂಟುಮಾಡಲು ಅವರಿಂದ ಹಣವನ್ನು ಸಾಲವಾಗಿ ಕೇಳುತ್ತಾ ಇರುವುದು ಸರ್ವಥಾ ನ್ಯಾಯವಾದುದಲ್ಲ. ನೀರು ಕೊಡುತ್ತೇವೆ, ಅಡ್ವಾನ್ಸ್ ಕೊಡು ಎಂದು ಕೇಳುತ್ತಾ ಇರುವುದು ಯಾವ ಧರ್ಮ! ನಾಚಿಕೆ ಯಾಗುವುದಿಲ್ಲವೇ ಎಂದು ಕೇಳುತ್ತಾ ಇದ್ದೇನೆ. ಈಗಾಗಲೇ 450 ಕೋಟಿ ರೂಪಾಯಿಗಳ ಸಾಲಗಾರರಾಗಿದ್ದೇವೆ, 15 ಕೋಟಿ ರೂಪಾಯಿ ಬಡ್ಡಿ ಕೊಡುತ್ತಾ ಇದ್ದೇವೆ. ಈಗ ಕೇಳುತ್ತಾ ಇದ್ದೀರಿ, ನಮ್ಮ ಸಾಲ ತೆಗೆದುಕೊಳ್ಳತಕ್ಕ ಶಕ್ತಿ ಮುಗಿದು ಹೋಯಿತು, ಯಾರೂ ದುಡ್ಡು ಕೊಡುವಲ್ಲ, ನಿಮ್ಮ ಆಸ್ತಿ ಈಡುಮಾಡಿ ಕೊಡಿ ಎಂದು ಕೇಳತಕ್ಕ ಸ್ಥಿತಿಗೆ ಬಂದಿದ್ದೀರಿ. 30 ಕೋಟಿ ರೂಪಾಯಿಗಳ ಡಿಬೆಂಚರ್ ಸಾಲ ಕೇಳಿದರೆ ಕೊಡುವುದಿಲ್ಲ ಎಂದು ಯಾರಾದರೂ ದೇಶದಲ್ಲಿ ಹೇಳಿದರೆ ನೀವು ಈ ಸರ್ಕಾರದಲ್ಲಿ ಕೆಲಸ ಮಾಡುವುದಕ್ಕೆ ರಾಯಕರ್ಣಿ.

6.00 P.M.

ಹೇಳುವವನು ನಾನಲ್ಲ. ಹಣ ಬೇಕು. 120 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನಾಲ್ಕೂವರೆ ವರ್ಷಗಳಲ್ಲಿ 6 ಲಕ್ಷ ಎಕರೆ ಜಮೀನನ್ನು ತರೀ ಬೇಸಾಯಕ್ಕೆ ಅಳವಡಿಸಬೇಕಾಗಿದ್ದರೆ ಇಷ್ಟು ಹಣ ಬೇಕೆಂದು ಹೇಳುತ್ತಿದ್ದಾರೆ. ಇಷ್ಟು ಪ್ರೋಗ್ರೆಸ್ ಮಾಡಬೇಕಾದರೆ ಸರ್ಕಾರದವರು 90 ಕೋಟಿ ರೂಪಾಯಿಗಳನ್ನೂ ರೈತರು 30 ಕೋಟಿ ರೂಪಾಯಿಗಳನ್ನೂ ಒದಗಿಸಿಕೊಳ್ಳಬೇಕು, ಈ 30 ಕೋಟಿ ರೂಪಾಯಿಗಳನ್ನು ಒದಗಿಸಲು ರೈತರು ತಮ್ಮ ಜಮೀನುಗಳನ್ನು ಆಧಾರಮಾಡಿ ಸಾರಾಸೋಲ ಮಾಡಿ 30 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಆದರೆ ಇದು ಸರಿಯಾದ ಪ್ರಪೋಜಲ್ ಅಲ್ಲ. ಅದಕ್ಕೆ ನಾನು ಹೇಳುತ್ತೇನೆ—ಸರ್ಕಾರದವರು ಮೊದಲು ಅವರಲ್ಲಿರತಕ್ಕ 90 ಕೋಟಿ ರೂಪಾಯಿ ಗಳನ್ನು ಖರ್ಚುಮಾಡಲಿ, ಕೆಲಸವನ್ನು ಪ್ರಾರಂಭಮಾಡಿ ಅವರಲ್ಲಿರತಕ್ಕ ಆ ಹಣವೆಲ್ಲಾ ಮುಗಿಯಲಿ. ಆನಂತರ ಅವರು ನಾವಿಷ್ಟು ಕೆಲಸಮಾಡಿದ್ದೇವೆ, ಅದನ್ನು ಮುಂದುವರಿಸಿ ಪೂರ್ಣಮಾಡುವುದಕ್ಕೆ ಇನ್ನಿಷ್ಟು ಹಣಬೇಕು ಅದನ್ನು ನೀವು ಕೊಡಬೇಕೆಂದು ಅವರು ಕೇಳಲಿ. ಆಗ ನಾನೇ ಈ ಸಭೆಯಲ್ಲಿ ಎಲ್ಲರ ಕೈಕಾಲುಗಳನ್ನು ಹಿಡಿದು ಸರ್ಕಾರದವರ ಡಿಮ್ಯಾಂಡಿಗೆ ಅವರ ಒಪ್ಪಿಗೆಯನ್ನು ಕೊಡಿಸು ತ್ತೇನೆ. ಹಾಗೆ ಅವರು ಇನ್ನೂ ಕೆಲಸವನ್ನು ಪ್ರಾರಂಭವನ್ನೇ ಮಾಡದೆ ರೈತರು ಮೊದಲು ಅವರಲ್ಲಿರತಕ್ಕ ಆಸ್ತಿಯನ್ನು ಪರಭಾರೆ ಮಾಡಿ 30 ಕೋಟಿ ಕೊಡಲಿ ಎಂದು ಕೇಳತಕ್ಕದ್ದು ಧರ್ಮ ವಾದ್ದಲ್ಲ. ಇವರ ಕೈಗೆ ಮೊದಲು ದುಡ್ಡನ್ನು ಕೊಟ್ಟರೆ ಇವರು ನಾಳೆ ಕೆಲಸವನ್ನು ಪ್ರಾರಂಭ ಮಾಡುತ್ತಾರೆಂಬ ಭರವಸೆಯಾರಿಗಿದೆ? ಇವರ ಕೈಗೆ ಹೇಗೆ ದುಡ್ಡನ್ನು ಕೊಡುವುದು ಎಂಬ ಅಪನಂಬಿಕೆ ಜನರಲ್ಲಿ ಬಾರದಿರಲಿ. ಹಾಗೆ ಇವರು ಕೆಲಸಗಳನ್ನು ನಡೆಸಬೇಕು. ಸರ್ಕಾರದವರು ನಡೆಸತಕ್ಕ ಕೆಲಸಗಳೆಲ್ಲ ಬಹಳ ಅಸಮರ್ಪಕವಾಗಿವೆ. ಆದ್ದರಿಂದ ನಿಮ್ಮ ಕೈಗೆ ಹಣವನ್ನು ಕೊಡುವುದಕ್ಕೆ ನಮಗೆ ಅನುಮಾನವಿದೆ. ಹಾರಂಗಿ ಪ್ರಾಜೆಕ್ಟ್‌ನ್ನು ಕೈಗೊಳ್ಳುತ್ತೇವೆಂದು ಜನರಿಗೆ ಭರವಸೆಯನ್ನು ಕೊಟ್ಟು ಇಲ್ಲಿಗೆಷ್ಟು ವರ್ಷಗಳಾಯಿತು? ಸರ್ಕಾರದವರೇನಾದರೂ ಅಷ್ಟು ವರ್ಷಗಳು ಕಳೆದಿದ್ದರೂ ಒಂದು ಹೆಜ್ಜೆಯನ್ನೇನಾದರೂ ಮುಂದಕ್ಕಟ್ಟಿದ್ದಾರೆಯೇ? ಹೇಮಾವತಿ ಪ್ರಾಜೆಕ್ಟ್ ಪ್ರಾರಂಭವಾಗುವುದು ಇನ್ನೂ ಎಂದೋ. ಇನ್ನು ಕಬಿನೀ ಪ್ರಾಜೆಕ್ಟಿನ ವಿಷಯ ಬಹಳ ದುಸ್ತರವಾಗೇ ಇದೆ. ಶ್ರೀಮಾನ್ ನಂಜೇಗೌಡರು ಹೇಳಿದರು. ಆದರೆ ಈ ಸರ್ಕಾರಕ್ಕೆ ಹಿಂದೆ ಫೈನಲ್ಸ್‌ಜಾಗಿದ್ದಂಥ ಕಾರ್ಯಗಳನ್ನು ಕೈಗೊಳ್ಳುವುದಕ್ಕೇ ಶಕ್ತಿಯಿಲ್ಲದಿರುವಾಗ ಇವರಿನ್ನು ಬಾಕಿ ಕಾರ್ಯಗಳನ್ನು ಮಾಡತಕ್ಕ ಅವಕಾಶವೆಲ್ಲಿ ಬಂತು? ಹಿಂದೆ ಮಂಜೂರಾಗಿದ್ದಂಥ 8—10 ಕೆಲಸಗಳೇ ಇನ್ನೂ ಆಗಿಲ್ಲ. ಇನ್ನು ಹೊಸವಾಗಿ ಕೆಲಸಗಳನ್ನು ಮಾಡತಕ್ಕ ಅಸಕ್ತಿ ಇವರಿಗೆಲ್ಲಿಂದ ಬರಬೇಕು? ಇನ್ನು ಒಂದೆರಡು ವರ್ಷಗಳು ಕಳೆಯುವುದರೊಳಗೇ ಶ್ರೀ ವೀರೇಂದ್ರಪಾಟೀಲರು ಗುಲ್ಬರ್ಗದಲ್ಲಿ ಇರುತ್ತಾರೆ ಅಥವಾ ರಾಯಚೂರಲ್ಲಿ ಇರುತ್ತಾರೆ.

ಒಬ್ಬ ಮಾನ್ಯ ಸದಸ್ಯರು.—ಆಗ ನೀವೆಲ್ಲಾ ಎಲ್ಲಿರುತ್ತೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.— ನಾನು ಈ ದಿವಸ ಈ ಸಭೆಯಲ್ಲಿ ಒಂದು ವಿಷಯವನ್ನು ಹೇಳಬೇಕೆಂದರೆ ಇಲ್ಲಿಗೆ 9 ವರ್ಷಗಳ ಕೆಳಗೆ ಒಂದು ಸಣ್ಣ ಕೆರೆಯನ್ನು ಕಟ್ಟಿಸಲು ಅದಕ್ಕೆ ಮಂಜೂ ರಾತಿ ದೊರೆತಿತ್ತು. ಅದನ್ನು ಹೈಕೋರ್ಟಿನವರೂ ಕೂಡ ಮಂಜೂರು ಮಾಡಿದ್ದರು. ಆ ಕೆಲಸ ಇನ್ನೂ ಈ ಘಳಿಗೆಯವರೆಗೂ ಆಗಿಲ್ಲ. ಅದನ್ನು ಪ್ರಾರಂಭ ಮಾಡಿಲ್ಲ. ಇನ್ನು ಹಾರಂಗಿ ಪ್ರಾಜೆಕ್ಟಿನ ವಿಷಯಕ್ಕೆ ಬಂದರೆ ಅದು ಮೇಲಾಗಬೇಕು, ಅದು ಕೆಳಗಾಗಬೇಕು. ಅದು ಅಲ್ಲಿ

ಆಗಬೇಕು, ಅದು ಇಲ್ಲಿ ಆಗಬೇಕು; ಎನ್ನತಕ್ಕ ಆ ರಾಜಕೀಯದಲ್ಲೇ ಅದನ್ನು ಮೂರೆ ಗೊತ್ತಾಗಿದೆ. ಸರ್ಕಾರದವರಲ್ಲಿ ಹಣವಿರಲಿಲ್ಲ ಎಂದರೆ ಏತಕ್ಕೆ ಇವರು ಚೆಂಡರನ್ನು ಕಾರ್ ಪಾರ್ ಮಾಡಿದರು? ಚೆಂಡರನ್ನು ಕರೆದು, ಅದು ಬಂದ ನಂತರ ಹಣವಿಲ್ಲ ಎಂದು ಚೆಂಡರನ್ನು ಕ್ಯಾನ್‌ಸಲ್ ಮಾಡಿದ್ದಾರೆ. ಹೀಗೆರ್ಲಾ ಇವರು ಹಿಂದಿನಿಂದ ಮಾಡಿಕೊಂಡು ಬಂದಿರತಕ್ಕ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಇವರಿಗೆ ಆಗರೇಬೇಕು. ಇವರು ಮಾಡಿದಂಥ ಪಾಪ ಕರ್ಮಗಳು ಇವರನ್ನು ಬಿಡುವುದಿಲ್ಲ. ಪ್ರಾಯಶ್ಚಿತ್ತವಾದ ನಂತರ ಆಗ ಇವರು ಸರಿಹೋಗಬಹುದು. ಈಗತಾನೇ ಒಬ್ಬ ಮಾನ್ಯ ಸದಸ್ಯರು ಹೇಳಿದರು ಕೆ. ಆರ್. ನಗರದಲ್ಲಿ ಒಂದು ಭಾರಿ ನಭೆಯನ್ನು ಮೊಡಿದ್ದರೆಂದೂ ಅಲ್ಲಂತಕ್ಕ ಜನರೆರ್ಲಾ ನೀವು ಹಾರಂಗಿ ಪ್ರಾಜೆಕ್ಟನ್ನು ನಿರ್ಮಿಸಿಕೊಡಿ ಸರ್ಕಾರಕ್ಕೆ ಎಷ್ಟು ದುಡ್ಡು ಬೇಕಾದರೂ ನಾವು ಕೊಡುವುದಕ್ಕೆ ಸಿದ್ಧವಾಗಿದ್ದೇವೆಂದು ಹೇಳಿದರೆಂದು ಎಂದು ತಿಳಿಸಿದರು. ನನಗೂ ಕೆ. ಆರ್. ನಗರದ ಮೂಲೆ ಮೂಲೆಗಳೆಲ್ಲಾ ಗೊತ್ತು. ಈ ದಿವಸ ಅಧ್ಯಕ್ಷರು ಅವರ ವೇಷವನ್ನು ಮರೆಸಿಕೊಂಡು ನನ್ನ ಜೊತೆಯಲ್ಲಿ ಬರಲಿ, ನಾನು ವೇಷವನ್ನು ಮರೆಸಿಕೊಂಡು ತಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ಅಲ್ಲಿ ತಾವೇ ೨ ಜನರನ್ನು ಈ ವಿಚಾರದಲ್ಲಿ ಸ್ಕೌಂಡ್ ಮಾಡಿನೋಡಿ. ಆಗ ಅವರೇನು ಹೇಳುತ್ತಾರೆಂಬುದು ತಮಗೆ ವೇದ್ಯವಾಗುತ್ತದೆ. ಅಲ್ಲಿ ಒಬ್ಬರೇನಾದರೂ ಹಣಕೊಡುತ್ತೇವೆಂದು ಹೇಳಿದ ಪಕ್ಷದಲ್ಲಿ ನಾನು ತಾವು ಹೇಳತಕ್ಕ ಯಾವ ಶಿಕ್ಷೆಗೂ ಸಿದ್ಧ; ಇಂಥ ನಾಟಕವನ್ನೆರ್ಲಾ ಏಕೆ ಆಡುತ್ತಿದ್ದಾರೋ ತಿಳಿಯದು. ಅಲ್ಲರತಕ್ಕ ಜನರ ಬಾಳೇನೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಒಂದಾವರ್ತಿ ನಾನು ಅಲ್ಲಿದ್ದಾಗ ಕೆಲವು ಜನರು ಒಂದು ಪ್ರಿಂಟ್ ಮಾಡಿದ್ದ ಕಾಗದವನ್ನು ತಂದು ನನಗೂ ತೋರಿಸಿದ್ದರು. ಕೆರೆಕಟ್ಟುವುದಕ್ಕೆ ಹಣವನ್ನು ಕಲೆಕ್ಟ್ ಮಾಡಬೇಕೆಂದು ಅದರಲ್ಲಿತ್ತು. ಆದರೆ ನಾನು ಅವಕ್ಕೆರ್ಲಾ ಒಪ್ಪಲಿಲ್ಲ. ಆಗ ನಾನು ಆ ಜನರಿಗೆ ಹೇಳಿದೆ ಇಂಥ ವಿಚಾರಗಳಲ್ಲಿ ಹೀಗೆ ರಾಜಕೀಯವನ್ನು ಬೆರಸಬೇಡಿ ಎಂದು. ಸರ್ಕಾರದವರು ತಮ್ಮ ಬಾಬತು ಹಣವನ್ನು ಮೊದಲು ಖರ್ಚುಮಾಡಬೇಕು. ಅಲ್ಲಿ ಮುಕ್ಕಾಲು ಕೆಲಸವಾದರೆ ಆ ನಂತರ ಇನ್ನುಳಿಯತಕ್ಕ ಕಾಲುಭಾಗದ ಕೆಲಸಕ್ಕೆ ಜನರ ದುಡ್ಡನ್ನು ನಾನು ವಸೂಲ್ಮಾಡಿ ಕೊಡುತ್ತೇನೆ. ಇದಕ್ಕೇಕೆ ಇಷ್ಟೆರ್ಲಾ ನಾಟಕ? ಸರ್ಕಾರದವರು ಮುಕ್ಕಾಲು ಭಾಗದ ಕೆಲಸವನ್ನು ಮಾಡಿದ ನಂತರ ನಾವು ನಮ್ಮ ಭಾಗದ ಹಣವನ್ನು ಕೊಡುವುದಿಲ್ಲವೆಂದರೆ ಅದಕ್ಕಿಂತ ದೊಡ್ಡ ದೇಶದ್ರೋಹ ಮತ್ತೊಂದಿಲ್ಲ. ಆದರೆ ಹಾಗೆ ಕೆಲಸವನ್ನು ಮಾಡುವುದಕ್ಕೆ ಮುನ್ನ ಸರ್ಕಾರದವರ ಕೈಗೆ ದುಡ್ಡನ್ನು ಕೊಡುವುದಕ್ಕೆ ನಮಗೆ ನಂಬಿಕೆಯಿಲ್ಲ. ಇಲ್ಲಿಯವರೆಗೂ ಆಗಿರತಕ್ಕ ಡೇಂಜರೇ ಸಾಕು. ಯಾವುದೇ ಒಂದು ಪ್ರದೇಶದಲ್ಲಿ ನೂರಕ್ಕೆ 66 ಜನರು ಒಂದು ಕಾಮಗಾರಿಯನ್ನು ಪ್ರಾರಂಭಮಾಡುವುದಕ್ಕೆ ಒಪ್ಪಿದ್ದಾರೆ ಎಂದರೆ ಹಾಗೆ ಸರ್ಕಾರದವರು ಒಂದು ನೋಟಿಫಿಕೇಷನ್ ಹೊರಡಿಸಿಬಿಟ್ಟರೆ ಇನ್ನು ಆ ಭಾಗದಲ್ಲಿರತಕ್ಕ ಶೇಕಡ 33 ಭಾಗದ ಜನರು ಒಪ್ಪಲಿ—ಒಪ್ಪದೆ ಇರಲಿ, ಆ ಶೇಕಡ 66 ರಷ್ಟು ಜನ ಒಪ್ಪಿರುವಾಗ ಇವರೇಕೆ ಆ ಕೆಲಸವನ್ನು ಪ್ರಾರಂಭ ಮಾಡಬಾರದು! ಆದರೆ ಇಲ್ಲದ ಸಲ್ಲದ ವಿಷಯಗಳನ್ನು ಏಕೆ ಹೇಳಬೇಕು? ನಿಮಗೆ ಬೇಕು ಎಂದರೆ ಬ್ಯಾಂಕಿನವರು ಸಾಲ ಕೊಡುವುದಕ್ಕೆ ಸಿದ್ಧವಾಗಿದ್ದಾರೆ ಎಂದು ಜನರನ್ನು ಏಕೆ ವಂಚನೆ ಮಾಡುತ್ತಿದ್ದಾರೋ ಕಾಣೆ. ಈ ಮಸೂದೆಯಲ್ಲಿ ಎಲ್ಲಿ ಬ್ಯಾಂಕಿನವರು ಸಾಲ ಕೊಡುತ್ತಾರೆ ಎಂದು ತಿಳಿಸಿದೆ ಹೇಳಲಿ? ಈ ಬಿಲ್ ಪಾಸಾದ ಕೂಡಲೆ ಒಂದು ನೋಟಿಫಿಕೇಷನ್ ಹೊರಡಿಸಿ ಬಿಡುತ್ತಾರೆ. ಆದರೆ ಈಗಾಗಲೇ ಅನೇಕ ರೈತರು ತಮ್ಮ ತಮ್ಮ ಭೂಮಿಕಾಣಿಗಳನ್ನು ಆಧಾರ ಮಾಡಿದ್ದಾರೆ. ಸಾಲ ಎತ್ತಿದ್ದಾರೆ. ಹಾಗೆ ಸಾಲ ಎತ್ತಿರತಕ್ಕ ಭೂಮಿಯ ಮೇಲೆ ಮತ್ತೆ ಯಾರು ಸಾಲ ಕೊಡುತ್ತಾರೆ! ಹಾಗೆ ತಮ್ಮ ಆಸ್ತಿಗಳನ್ನು ಬೇರೆಯವರಿಗೆ ಅಡಮಾನ ಮಾಡದಿರುವ ಜನರು ನೂರಕ್ಕೆ 5—6 ಇದ್ದರೆ ಹಾಸ್ತಿಯಾಯಿತು. ಈ ದಿವಸ ರೂರಲ್ ಇಂಡೆಬೆಡ್ ಆಕ್ಟ್ ನೋಡಲಿ. ಅವರು ಆಧಾರ ಮಾಡಿಕೊಂಡಿರತಕ್ಕ ಭೂಮಿಯ ಮೇಲೆ ಯಾರು ಸಾಲ ಕೊಡುತ್ತಾರೆ! ಈ ರೂರಲ್ ಇಂಡೆಬೆಡ್ ಸಾಲ ಎಷ್ಟಿದೆ ಎಂಬುದನ್ನೇನಾದರೂ ಸರ್ವೆ ಮಾಡಿಸಿದ್ದಾರೆಯೇ! ಇಂಥಾ ಜಮೀನುಗಳ ಮೇಲೆ ಯಾರೂ ಸಾಲ ಕೊಡುವುದಿಲ್ಲ. ಮತ್ತೆ ಈ ಕಾನೂನು ಪ್ರಕಾರ ಪ್ರಯತ್ನಮಾಡುವುದು, ಕೆಲವು ಯೋಜನೆಗಳನ್ನು ಎಕ್ಸ್‌ಪ್ಯಾನ್‌ಷನ್ ಮಾಡುವುದು, ಅದು ಅರ್ಧ ಆಗಿರುವುದು—ಇವೆಲ್ಲವೂ ಇದರಲ್ಲಿ ಬರುತ್ತದೆ. ಕಪಿನಿ ಪ್ರಾಜೆಕ್ಟ್ ಅರ್ಧ ಆಗಿದೆಯೆಂದು ಹೇಳುತ್ತೀರಿ. ನಾಳೆ ನೀವೇ ಬರುತ್ತೀರಿ. ಕಾನೂನು ಪಾಸ್ ಮಾಡಿದ್ದೇವೆ. ನಾವು ಅದನ್ನು ನೋಟಿಫೈ ಮಾಡಿದ್ದೇವೆ. ಸೇಕಡ 66ರಷ್ಟು ಜನರೂ ದುಡ್ಡು ಕೊಡುವುದಕ್ಕೆ ಮುಂದೆ ಬರಲಲ್ಲ, ಆದ್ದರಿಂದ ಅದರ ಬಗ್ಗೆ ಮುಂದಿನ ಕೆಲಸ ಮಾಡುವುದಕ್ಕೆ ಸಾಧ್ಯವಾಗಲಲ್ಲವೆಂದು ಹೇಳುತ್ತೀರಿ. ಇದು ನಿಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳುವ ಕುಹಕ ಮಾರ್ಗವೆಂದು ನಾನು ಹೇಳ ಬಯಸುತ್ತೇನೆ. ಈ ಜವಾಬ್ದಾರಿ ನಿಮ್ಮ ತಲೆಯ ಮೇರೆ ಇದೆ. ನಿಮ್ಮ ಭಾಗದ ಕೆಲಸವನ್ನು ಮಾಡಿ. ಸಾಲದೆ ಇರುವ ಕಾಲದಲ್ಲಿ ನಮ್ಮ ಮನಸ್ಸನ್ನು ಒಲಿಸಿಕೊಳ್ಳುವುದು ಯೋಗ್ಯ. ಅಷ್ಟು ಏನಹ ಈಗ ಬಂದು

(ಶ್ರೀ ಎಚ್. ಎಂ. ಚನ್ನಬಸಪ್ಪ)

ಅಂಗೈಯಲ್ಲಿ ಕೊಡಿ ಎಂದು ಹೇಳಿದರೆ ನಮ್ಮನ್ನು ಆ ರೀತಿ ಕೇಳುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಪ್ರಾಜೆಕ್ಟುಗಳು ಆಗುವುದಿಲ್ಲ. ಕಾವೇರಿನದಿ ಪಾತ್ರದಲ್ಲಿ ಏನೇನು ಕಟ್ಟಬೇಕಾಗಿದೆ, ಕೃಷ್ಣಾನದಿ ಪಾತ್ರದಲ್ಲಿ ಏನೇನು ಕಟ್ಟಬೇಕಾಗಿದೆ ಎಂಬುದಕ್ಕೆ ಯಾವುದಾದರೂ ನಿಮ್ಮಲ್ಲಿ ಯೋಜನೆಗಳಿವೆಯೇ, ನೋಡೋಣ, ತೋರಿಸಿ. ಸುಮ್ಮನೆ ರೈತರು ಯಾರೂ ಮುಂದೆ ಬರಲಿಲ್ಲ, ಹಣವಿದ್ದಷ್ಟು ಮಾಡುತ್ತೇವೆಂದು ಹೇಳುತ್ತೀರಿ. ನೀವು ಖರ್ಚುಮಾಡುವ ಹಣವನ್ನು ಖರ್ಚುಮಾಡಿ. ಸೇಕಡ 95ಕೋಟಿ ರೂಪಾಯಿಗಳಷ್ಟು ಕೆಲಸವನ್ನು ಪೂರೈಸಿ. ಆಮೇಲೆ ಎಷ್ಟು ಹಣ ನಿಂತಿದೆ, ಎಷ್ಟು ಕೆಲಸ ಬಾಕಿ ಇದೆಯೆಂದು ಗೊತ್ತಾದಮೇಲೆ ಆಗ ನಿಮಗೆ ಸಹಕಾರ ಕೊಡುತ್ತೇವೆ. ಅದನ್ನು ಬಿಟ್ಟು ಇವತ್ತು ನಮ್ಮ ಸಹಕಾರ ಕೇಳುವುದು ಸಾಧುವಾದುದಲ್ಲ. ಇದನ್ನು ಮಾನ್ಯ ಶ್ರೀ ಸಿದ್ಧಯ್ಯನವರೂ ಸಹ ಒಪ್ಪುತ್ತಾರೆ. He is a realist; he is a man, who always goes by his conscience.

ಮತ್ತೊಂದು ವಿಷಯ. ಈ ದೇಶದಲ್ಲಿರತಕ್ಕ ಮುಕ್ಕಾಲುಪಾಲು ಜನರ ಆಗು ಹೋಗುಗಳನ್ನು ಅವಲಂಬಿಸಿರತಕ್ಕದ್ದು ಇದು. ಇವತ್ತು ನಾವು ನಿಮಗೆ ಪುರಸ್ಕಾರ ಕೊಟ್ಟು ನಾವು ಶಾಸನ ಮಾಡಿದ್ದೇವೆಂದು ತಿಳಿಸಿದರೆ ವಾಸ್ತವವಾಗಿ ನಿಮಗೆ ಪುರಸ್ಕಾರ ಬರಲಿಕ್ಕಿಲ್ಲ. ನನಗೆ ಗೊತ್ತಿರುವ ಹಾಗೆ ಪಾರ್ಟಿಯಲ್ಲಿಯೂ ಕೂಡ ಈ ವಿಷಯವನ್ನು ಚರ್ಚೆಮಾಡಿಲ್ಲ. ಏನೋ ಅವಸರದಲ್ಲಿ ತಂದು ಈ ಸಭೆಯಲ್ಲಿ ಮಂಡಿಸಿದ್ದಾರೆ. ಇಡೀ ದೇಶಕ್ಕೆ ಮಹತ್ವವಾದಂಥ ಕಾನೂನನ್ನು ಪಾರ್ಟಿಯಲ್ಲಿ ಕೂತು ಅದರ ಆಗುಹೋಗುಗಳನ್ನು ಮೊದಲೇ ಚರ್ಚೆಮಾಡಿದ್ದರೆ ಬಹಳ ಚೆನ್ನಾಗಿತ್ತು.

Sri K. H. SRINIVASA.—It has been discussed and we have taken a decision.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಬ್ಯಾಂಕಿನಿಂದ ಹಣ ಕೊಡಿಸುತ್ತೇವೆಂದು ಹೇಳಿದ ಬಗ್ಗೆ ಒಂದು ಅಕ್ಷರವೂ ಇವರಲ್ಲಿ ಹೇಳಲಿಲ್ಲ. ಬ್ಯಾಂಕಿಗೆ ನನ್ನನ್ನು ಕರೆದುಕೊಂಡು ಹೋಗಿ. ಈಗಾಗಲೇ ಎಷ್ಟೋ ಜನ ರೈತರು ಸಾಲ ಮಾಡಿದ್ದಾರೆಂಬುದನ್ನು ತೋರಿಸುತ್ತೇನೆ. ನೀವು ಆ ಸಾಲವನ್ನು ವಜಾ ಮಾಡಿಸಿ ಬೇರೆ ಸಾಲ ಕೊಡಿಸುತ್ತೀರಾ? ಎರಡನೆಯದಾಗಿ ಅವರಿಗೆ ಆಗಿರುವ ಸಾಲದ ಜೊತೆಗೆ ನೀವು 20–30 ವರ್ಷಗಳ ಸಾಲ ತೋರಿಸಿದರೆ, ಅಲ್ಲಿಯವರೆಗೂ ಅವರು ಖರ್ಚು ಪೆಚ್ಚುಗಳಿಗೆ ಹೋಗುವ ಹಾಗಿಲ್ಲ. ಅದಕ್ಕೂ ಹಣ ಕೊಡಿಸುತ್ತೀರಾ? ಈಗ ಒಂದು ಕಡೆ ಸೊಕ್ಕೆಟಿಗಳು ಹಾಳಾಗುತ್ತಿವೆ. ಅಂದಮೇಲೆ ಅಲ್ಲಿಂದ ಏನು ಹಣ ಕೊಡಿಸುತ್ತೀರಿ! ಪಾರ್ಲಮೆಂಟರಿ ಅಫೇರ್ಸ್ ಮಿನಿಸ್ಟರ್ ಯಾವುದಾದರೂ ಕನ್‌ಸ್ಟ್ರಕ್ಟಿವ್ ಸಜೆಷನ್ ಕೊಟ್ಟರೆ ಅದನ್ನು ಒಪ್ಪಿಕೊಳ್ಳುತ್ತೇವೆಂದು ಹೇಳಿದ್ದಾರೆ. ಪ್ರಾಜೆಕ್ಟ್‌ಗಳನ್ನು ಪ್ರಾರಂಭ ಮಾಡಲಿಕ್ಕೆ ನಮ್ಮ ಹತ್ತಿರ ಭಿಕ್ಷೆ ಬೇಡಬೇಡಿ. ಕೆಲಸಗಳನ್ನು ಪ್ರಾರಂಭ ಮಾಡಿ. ಒಟ್ಟು 150 ಕೋಟಿ ರೂಪಾಯಿಗಳಲ್ಲಿ 30 ಕೋಟಿ ರೂಪಾಯಿಗಳನ್ನು ನಾವು ಕೊಡಲಿಕ್ಕೆ ಸಿದ್ಧ. ಸೇಕಡ 95 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಕಾವೇರಿ ಪಾತ್ರದಲ್ಲಿರತಕ್ಕ ಹಲವಾರು ಪ್ರಾಜೆಕ್ಟ್‌ಗಳನ್ನು ಒಂದು ಸ್ಟೇಜಿಗೆ ತೆಗೆದುಕೊಂಡು ಬನ್ನಿ. ಆಗ ಅದನ್ನು ನಾವು ಬಹಳ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.

ಎರಡನೆಯದಾಗಿ, ಇನ್ನು ಬೆಟರ್‌ಮೆಂಟ್ ಲೆವಿ ಏನಿದೆಯೋ ಇವನ್ನು ಬೆಂಗಳೂರು ಪಟ್ಟಣವಲ್ಲ ವಿಧಿಸಿದ್ದಿರಾ? ಇಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಹಣವನ್ನು ಹಾಕಿರುತ್ತೀರಿ. ಪಟ್ಟಣದ ಪಕ್ಕದಲ್ಲಿರುವ ಭೂಮಿಗೆ ಒಂದಕ್ಕೆ ನೂರರಷ್ಟು ಬೆಲೆ ಇರುವಾಗ ಯಾವ ರೀತಿ ಅದರ ಬಗ್ಗೆ ಸರ್ಕಾರದ ಬೊಕ್ಕಸಕ್ಕಾಗಿ ಹಣ ಕೂಡಿಸಲು ಬೆಟರ್‌ಮೆಂಟ್ ಲೆವಿಯನ್ನು ಹಾಕಿದ್ದೀರಿ! ಸರ್ಕಾರದ ಬೊಕ್ಕಸದಿಂದ ಖರ್ಚುಮಾಡಿ ಅನೇಕ ಸೌಧಗಳನ್ನು ಕಟ್ಟುತ್ತೀರಿ. ಅಂದಮೇಲೆ ಬೆಂಗಳೂರು ಪಟ್ಟಣದ ಪಕ್ಕದಲ್ಲಿರುವ ಜಮೀನುಗಳಿಗೆ ಒಂದು ಎಕರೆಗೆ ಮೂರು—ನಾಲ್ಕು ಸಾವಿರ ರೂಪಾಯಿಗಳಷ್ಟು ಬೆಲೆ ಇದೆ. ಏತಕ್ಕೋಸ್ಕರ ಅವೇ ರೀತಿ ಬೆಟರ್‌ಮೆಂಟ್ ಲೆವಿ ಹಾಕಬಾರದು?

Sri K. PUTTASWAMY.—It is really a constructive suggestion and it will be considered.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಮೊದಲು ಮಾಡಿ ನಮ್ಮ ಹತ್ತಿರ ಬನ್ನಿ. ಆಮೇಲೆ ಯಾರು ನಿಮಗೆ ಫೇರಾವೋ ಮಾಡುತ್ತಾರೆ, ಯಾರು ಪ್ರಪರ್ ಮಾಡುತ್ತಾರೆ, ನೋಡೋಣ.

ಆದ್ದರಿಂದ ನಾನು ಆರಿಕೆ ಮಾಡಿಕೊಳ್ಳುವುದೇನೆಂದರೆ, ಈ ಬೆಟರ್‌ಮೆಂಟ್ ಲೆವಿಯನ್ನು ಬೆಂಗಳೂರು ಪಟ್ಟಣದಲ್ಲಿ ಸೈಟುಗಳನ್ನು ಮಾರಿಕೊಂಡು ಯಾರು ಕುಬೇರರಾಗಿದ್ದಾರೋ, ಅವರಿಂದ

ವಸೂಲು ಮಾಡಬೇಕು. ಎರ್ಲ್ಲೋ ಕೆರೆ ಕಟ್ಟಿಕೊಂಡು, ಬೆಳೆಯನ್ನು ಬೆಳೆಯತಕ್ಕ ರೈತನಿಗೆ ಹಾಕ ಬೇಡಿ. ಅವನು ಕಷ್ಟಪಟ್ಟು ಹೆಚ್ಚು ಬೆಳೆ ಬೆಳೆಯುತ್ತಿದ್ದಾನೆ. ತಾವು ಹಾರಂಗಿಯನ್ನು ಪ್ರಾರಂಭ ಮಾಡಿದ್ದೀರಿ. ಎಷ್ಟು ವರ್ಷದ ಕಾಲದ ಮೇಲೆ ಅದನ್ನು ಬದರಾವಣೆ ಮಾಡಿದ್ದೀರಿ, ಏನು ಕಾರಣ ಅದಕ್ಕೆ? I refuse to mortgage my land. What is it that you are going to do? ಮತ್ತೆ ಇವನು ಹಣ ಕೊಡದೆ ಹೋದರೆ ನೀವು ಮಾತಕ್ಕದ್ದು ಏನು? 66 ಜನರು ಬರೆದು ಕೊಡುತ್ತಾರೆ, ನೀವು ಪ್ರಾರಂಭ ಮಾಡುತ್ತೀರಿ. ನಿಮ್ಮ ನೀತಿ ಇವತ್ತು ಸರಿಯಾಗಿಲ್ಲ. Let the hon. Revenue Minister tomorrow declare that we have nationalised the lands. 66 ಜನರು ಬರೆದು ಕೊಡುತ್ತಾರೆ. ಇನ್ನು 33 ಜನರ ಮೇರೆ ಏನು ಮಾಡುತ್ತೀರಿ? ನಾನು ಹೇಳುತ್ತೇನೆ ಬೇಡ ಎಂದು. ಆಬಾದು ಮಾಡದೆ ಹೋದರೆ ಏನು ಮಾಡುತ್ತೀರಿ ಎಂದು ಹೇಳುವ ಪ್ರೊವಿಜನ್ ಇಲ್ಲ ಇಲ್ಲ. ಮತ್ತು ಅವನನ್ನು ಫೋರ್ಸ್ ಮಾಡುವುದಕ್ಕೆ ಅಧಿಕಾರ ಎಲ್ಲ. ನನ್ನ ಭೂಮಿಯನ್ನು ಹ್ಲೆಜ್ ಮಾಡುತ್ತೇನೆ. ಮತ್ತೆ ಕೇಳುವುದಕ್ಕೆ ಯಾವ ಅಧಿಕಾರ ಇದೆ? ಇವತ್ತು ಒಂದು ನಾಲ್ಕು ಎಕರೆ ಭೂಮಿ ಒಬ್ಬನಿಗೆ ಇರುತ್ತದೆ. ಅದು ಖುಷ್ಕಿ ಭೂಮಿ. ಅದನ್ನೆಲ್ಲಾ ಆಧಾರವಾಗಿ ಕೊಟ್ಟು ಬಿಟ್ಟು, ನಾಳೆ ಅವನು 50 ರೂಪಾಯಿ ಸಾಲ ಬೇಕಾದರೂ ಯಾರ ಹತ್ತಿರ ಹೋಗಬೇಕು?

ಶ್ರೀ ಕೆ. ಪುಟ್ಟಸ್ವಾಮಿ.—ನಿಮ್ಮ ತಾಲ್ಲೂಕಿನವರೇ ಹೇಳಿದ್ದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಮಗೆ ಏನು ವರದಿ ಬಂದಿದೆಯೋ ಅದು ದೂರವಾದ ಮಾತು. ಇದು ಯಾವ ಕಡೆಯಿಂದ ಬಂತು ಎಂಬುದನ್ನು ನಾನು ಬಲ್ಲೆ. ಯಾರೋ, ಏನೋ ಹೇಳಿದರಂತೆ, ಇದನ್ನು ಕಾನೂನು ಮಾಡಿಬಿಡಿರಿ ಎಂದು. ಆದ್ದರಿಂದ ಈ ಕಷ್ಟಪರಂಪರೆಗಳಿಗೆ ರೈತನನ್ನು ಈಡು ಮಾಡಬೇಡಿ. ಈಗ ಇರತಕ್ಕ ಸಾಲದ ಹೊರೆಯೇ ಅವನಿಗೆ ಸಾಕು. ನಿಮಗೆ ವಾಸ್ತವವಾಗಿ ಕಷ್ಟ ಬಂದಾಗ ನಮ್ಮ ಹತ್ತಿರ ಬನ್ನಿ, ನಾವು ಸಹಕಾರ ಕೊಡುತ್ತೇವೆ. ನಿಮಗೆ ನಮ್ಮ ನಂಬಿಕೆ ಇಲ್ಲ. ಇದರ ಬಗ್ಗೆ ಅನೇಕರು ನಿನ್ನೆಯ ದಿನ ಕೂಡ ಹೇಳಿದ್ದಾರೆ. ನೀವು ಅನೇಕ ದುರ್ವ್ಯಯಗಳನ್ನು ಮಾಡುತ್ತಿದ್ದೀರಿ. ಅದನ್ನೆಲ್ಲಾ ಶೇಖರಣೆ ಮಾಡಬೇಕು. ಮತ್ತು ಇಂಥ ಕೆಲಸಗಳಿಗೆ ಉಪಯೋಗಿಸಬೇಕು. ನಮ್ಮ ಪಿತ್ರರು ಏನು ಸೂಚನೆ ತಂದಿದ್ದಾರೆ, ಇದನ್ನು ಸಾರ್ವಜನಿಕ ತಿಳಿವಳಿಕೆಗೆ ಹಾಕಬೇಕೆಂದು, ಅದು ಹಾಗೆಯೇ ಆಗಬೇಕು. ಇವತ್ತು ರೈತರಿಗೆ ಏನೂ ಗೊತ್ತಿರುವುದಿಲ್ಲ. ಇದು ಸಾರ್ವಜನಿಕ ತಿಳಿವಳಿಕೆಗೋಸ್ಕರ ಅವರ ಅಭಿಪ್ರಾಯವನ್ನು ಕ್ರೋಢೀಕರಿಸುವುದಕ್ಕೋಸ್ಕರವಾಗಿ, ಮೂರು ತಿಂಗಳ ಅವಕಾಶ ಕೊಟ್ಟು, ಪಬ್ಲಿಷ್ ಮಾಡಿ, ಆಗ ಅವರ ಅಭಿಪ್ರಾಯ ಏನು ಬರುತ್ತದೆ, ಅದನ್ನು ಮುಂದಿಟ್ಟುಕೊಂಡು ರಚನಾತ್ಮಕವಾದ ಕೆಲಸ ವನ್ನು ಮಾಡೋಣ. ಅದಲ್ಲದೆ ಸುಮ್ಮನೆ ಹಣವನ್ನು ಕೊಡಬೇಕು ಎಂದು ಹೇಳಿದರೆ ಸರಿಯಾಗಿರು ವುದಿಲ್ಲ. ಮಾನ್ಯ ಸಿದ್ದಯ್ಯನವರೂ ಇದನ್ನು ಒಪ್ಪಿಕೊಂಡರು. ಎಲ್ಲರೂ ಸಹಕರಿಸಿ, ಈ ತೊಂದರೆ ಗಳನ್ನು ನಿವಾರಣೆ ಮಾಡುವುದಕ್ಕೆ ಜನರ ಅಭಿಪ್ರಾಯವನ್ನು ಸಂಗ್ರಹಣೆ ಮಾಡಿ, ಆ ಮೇಲೆ ವಾಸ್ತವವಾಗಿ ತೊಂದರೆ ಇಲ್ಲವೆಂದು ಕಂಡುಬಂದರೆ, ಆಮೇರೆ ಯೋಚನೆ ಮಾಡೋಣ. ಆದ್ದರಿಂದ ಇಲ್ಲಿರತಕ್ಕ ಎರ್ಲಾ ನದಸ್ಯರಿಗೂ ನನ್ನ ವಿನಂತಿ ಏನೆಂದರೆ, ಇವತ್ತು ಬಡ ಜನರಿಗೆ ಸರ್ಕಾರದವರು ಬಹಳ ತೊಂದರೆ ಕೊಟ್ಟಿದ್ದಾರೆ, ಮತ್ತು ಅನೇಕ ಕಾನೂನುಗಳನ್ನು ಇದರ ಬಗ್ಗೆ ಮಾಡಿದ್ದಾರೆ; ಇದರಿಂದ ಇದನ್ನು ಮೂರು ತಿಂಗಳು ಅವಧಿಗೆ ಸಾರ್ವಜನಿಕ ತಿಳಿವಳಿಕೆಗೋಸ್ಕರ ಕಳಿಸಬೇಕು ಮತ್ತು ಈಗ ಇರತಕ್ಕಂತಹ ರೀತಿಯಲ್ಲಿ ಒಪ್ಪುವುದಕ್ಕಾಗುವುದಿಲ್ಲವೆಂದು ರೈತಾಪಿ ಜನರ ಪರವಾಗಿ ಹೇಳು ತ್ತೇನೆ, ಇದಕ್ಕೆ ಎಲ್ಲರೂ ಬೆಂಬಲ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-30 P.M.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಸಭಾಧ್ಯಕ್ಷರೇ, ಈಗ ಈ ಸಭೆಯ ಮುಂದೆ ತಂದಿರತಕ್ಕ ಮೈಸೂರು ಇರಿಗೇಷನ್ ರೆವಿ ಆಫ್ ಬೆಟರ್‌ಮೆಂಟ್ ಕಾಂಟ್ರಿ ಬ್ಯೂಷನ್ ಅಂಡ್ ವಾಟರ್ ರೇಟ್ ಅಮೆಂಡ್‌ಮೆಂಟ್ ಬಿಲ್ ಏನಿದೆ ಇದನ್ನು ನಾನು ಪ್ರಬಲವಾಗಿ ವಿರೋಧಿಸುವುದಲ್ಲದೆ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಡಲು ಆಶೆ ಪಡುತ್ತೇನೆ. ಸರ್ಕಾರದವರು ಮೊನ್ನೆ ತಾನೆ 39 ಕೋಟಿ 42 ಲಕ್ಷ ರೂಪಾಯಿಗಳ ನಪ್ಲಿಮೆಂಟರಿ ಬಡ್ಜೆಟ್ ಎಸ್ಟಿಮೇಟಿನ್ನು ಈ ಸಭೆಯ ಮುಂದೆ ತಂದು ಅವ್ಯವಸ್ಥೆಯಲ್ಲರತಕ್ಕ ಸಹಕಾರ ಸಂಘಗಳಿಗೂ, ಶಿಥಿಲವಾಗಿರತಕ್ಕ ಕೈಗಾರಿಕೆಗಳಿಗೂ ಎರಡೂವರೆ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇವೊತ್ತು ಈ ವಸೂಲಿಯನ್ನು ತಂದು ರೈತನ ಜಮಾನನ್ನು ಬ್ಯಾಂಕಿಗೆ ಗಿರವಿ ಮಾಡುತ್ತೇವೆ, ಹಣವನ್ನು ತೆಗೆದುಕೊಂಡು ಪ್ರಾಜೆಕ್ಟನ್ನು ಕಟ್ಟುತ್ತೇವೆ ಎಂದರೆ ಅದು ಎಷ್ಟರಮಟ್ಟಿಗೆ ನಮಂಜಸ

(ಶ್ರೀ ಬಿ. ದೊಡ್ಡಬೋರೇಗೌಡ)

ವಾಗುತ್ತದೆಯೋ ಗೊತ್ತಿಲ್ಲ. ಈಗಾಗಲೇ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೈತರ ಜಮೀನು, ಆಸ್ತಿಪಾಸ್ತಿಗಳು ಶೇಕಡಾ 90 ರಷ್ಟು ಜಿರ್ಲಾ ಬ್ಯಾಂಕುಗಳಿಗೆ, ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಮತ್ತು ಖಾಸಗೀ ಲೇವಾದೇವಿ ಮಾಡತಕ್ಕ ಸಾಹುಕಾರರಿಗೆ ಆಧಾರ ಮತ್ತು ಭೋಗ್ಯ ಆಗಿವೆ. ಇಂಥಾ ಒಂದು ಸಂದರ್ಭದಲ್ಲಿ ಸರ್ಕಾರದವರು ಈ ಒಂದು ಮಸೂದೆಯನ್ನು ತಂದಿದ್ದಾರಲ್ಲಾ ಎಂದು ನಾನು ವ್ಯಥೆ ಪಡಬೇಕಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಈಗ ಸುಮಾರು 4—5 ವರ್ಷಗಳಿಂದ ಸರಿಯಾಗಿ ಮಳೆಯಾಗದೆ ಜನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ತಿನ್ನುವುದಕ್ಕೆ ಅನ್ನವಿಲ್ಲ. ಜನಗಳು ತಮ್ಮ ದನಕರುಗಳನ್ನೂ ಮತ್ತು ಕುರಿಗಳನ್ನೂ ಮಾರಿಕೊಂಡಿದ್ದಾರೆ. ಆಳುವ ಪಕ್ಷದವರೂ ಸಹ ಗ್ರಾಮಾಂತರ ಪ್ರದೇಶಗಳ ಜನತೆಯ ಕಷ್ಟಸುಖಗಳನ್ನು ನೋಡಿದ್ದರೂ ಕೂಡ ಇಂಥಾ ಒಂದು ಮಸೂದೆಯನ್ನು ಈ ಸಭೆಯುಮುಂದೆ ತರುವುದಕ್ಕೆ ನಲಕೆ ಮಾಡಿರುವುದು ಜನತೆಯ ದುರ್ದೈವ ಎಂದು ನಾನು ಹೇಳುತ್ತೇನೆ. ಇದು ಕೂಸು ಹುಟ್ಟುವುದಕ್ಕಿಂತ ಮುಂಚೆಯೇ ಕುಲಾವಿಯನ್ನು ಹೊಲಿಸಿಕೊಂಡಂತಾಗಿದೆ. ಈಗಾಗಲೇ ಕಾವೇರಿ ಬೇಸಿನ್‌ನಲ್ಲಿರತಕ್ಕ ಪ್ರಾಜೆಕ್ಟ್‌ಗಳಾದ ಹಾರಂಗಿ, ಕಂಬದಕಡ, ಹೇಮಾವತಿ, ಲಕ್ಷ್ಮಣತೀರ್ಥ, ಮಂಚನಬೆಲೆ, ಕಪಿನಿ ಮುಂತಾದುವುಗಳ ಎಸ್ಟಿಮೇಟುಗಳೆನ್ನು ಏನಾದರೂ ಮಾಡಿದ್ದಾರೆಯೇ! ಆ ಪ್ರಾಜೆಕ್ಟುಗಳಲ್ಲಿ ಎಷ್ಟು ಎಕರೆ ಜಮೀನು ನೀರಾವರಿಯಾಗುತ್ತದೆ. ಎಷ್ಟು ಗ್ರಾಮಗಳಿಗೆ ನೀರು ಒದಗಿಸಬಹುದು, ಎಷ್ಟು ಕೋಟಿ ರೂಪಾಯಿಗಳು ಆ ಪ್ರಾಜೆಕ್ಟಗಳಿಗೆ ಬೇಕಾಗುತ್ತದೆ, ಎಷ್ಟು ವರ್ಷಗಳಲ್ಲಿ ಆ ಪ್ರಾಜೆಕ್ಟುಗಳನ್ನು ಮುಗಿಸುತ್ತಾರೆ ಎನ್ನತಕ್ಕಂಥ ಯೋಜನೆಗಳನ್ನು ಸರ್ಕಾರದವರು ಇದುವರೆಗೂ ತಯಾರು ಮಾಡಿಲ್ಲ. ಈ ಪ್ರಾಜೆಕ್ಟುಗಳಿಗೆ ಕೇಂದ್ರ ಸರ್ಕಾರದಿಂದ ಕ್ಲಿಯರೆನ್ಸ್ ಸರ್ಟಿಫಿಕೇಟ್ ತೆಗೆದು ಕೊಂಡಿಲ್ಲ. ಈಗ 15 ತಿಂಗಳಿಂದ ಮಂಚನಬೆಲೆ ಪ್ರಾಜೆಕ್ಟಿಗೆ ಕಲ್ಲು ಹಾಕಿಸುವ ಕೆಲಸವನ್ನು ಮಾತ್ರ ಮಾಡಿದ್ದೀರಿ. ಈಗ ಒಂದು ಪ್ರಾಜೆಕ್ಟನ್ನು ಕಟ್ಟುವುದಕ್ಕೆ 66 ಜನ ದುಡ್ಡು ಕೊಡುತ್ತೇವೆಂದು ಹೇಳಿ, ಅದರಲ್ಲಿ 64 ಜನ ದುಡ್ಡು ಕೊಟ್ಟು ಇನ್ನು ಇಬ್ಬರು ದುಡ್ಡು ಕೊಡುವುದಕ್ಕೆ ಒಪ್ಪಿಕೊಳ್ಳದಿದ್ದರೆ ಪ್ರಾಜೆಕ್ಟ್ ಮಾಡುವುದಿಲ್ಲ ಎಂದು ಈ ಮಸೂದೆಯ ಪ್ರಕಾರ ಇದೆ. ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ ಎಂದು ಹೇಳಿ 65 ಜನ ರುಜು ಹಾಕಿ ಇನ್ನು ಇಬ್ಬರು ರುಜು ಹಾಕದಿದ್ದರೆ ಅಂಥಾ ಪ್ರಾಜೆಕ್ಟಿನ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ತಯಾರು ಇಲ್ಲ. ಈಗ ಉತ್ತರ ಕರ್ನಾಟಕಕ್ಕೆ ಸಂಭಂಧಪಟ್ಟಹಾಗೆ ಮಲಪ್ರಭಾ, ಘಟಪ್ರಭಾ, ಕಾಳಿ, ತುಂಗಭದ್ರಾ, ಕೃಷ್ಣಾ ಮೇಲ್ದಂಡೆ, ಗೋದಾವರಿ ಈ ಪ್ರಾಜೆಕ್ಟುಗಳ ಎಸ್ಟಿಮೇಟು ಆಗಿವೆಯೇ? ಆ ಯೋಜನೆಗಳಿಂದ ಎಷ್ಟು ಎಕರೆ ನೀರಾವರಿಯಾಗುತ್ತದೆ? ಅವುಗಳಿಗೆ ಎಷ್ಟು ಹಣವನ್ನು ಒದಗಿಸಿದ್ದೀರಿ, ಎಷ್ಟು ಹಣ ಖರ್ಚಾಗುತ್ತದೆ, ಆ ಯೋಜನೆಗಳಿಗೆ ಕೇಂದ್ರದಿಂದ ಮಂಜೂರಾತಿ ದೊರಕಿದೆಯೇ? ಕಾವೇರಿ ಬೇಸಿನ್‌ನಲ್ಲಿರತಕ್ಕ ಎಲ್ಲಾ ನೀರಾವರಿ ಯೋಜನೆಯನ್ನೂ ಕಾರ್ಯಗತ ಮಾಡುತ್ತೀರಾ? ಈಗ ಸರ್ಕಾರದವರು ಏನೊಂದು ಮಸೂದೆಯನ್ನು ಇಲ್ಲಿ ತಂದಿದ್ದಾರೆಯೋ ಇದು ಅವಿವೇಕದ ಕೆಲಸ ಎಂದು ಹೇಳಿದರೆ ತಪ್ಪಾಗಲಾರದು. ನಿಮಗೆ ಅಧಿಕಾರಮದ ಧನಮದ ಜಾಸ್ತಿಯಾಗಿದೆಯೋ ಏನೋ ಕಾಣುವುದಿಲ್ಲ. ಇವರಿಗೆ ಜನತೆಯ ಕಷ್ಟಸುಖಗಳು ಏನು ಎಂಬುದು ಗೊತ್ತಾಗುವುದಿಲ್ಲ. ಅದ್ದರಿಂದ ಜನತೆಯ ಕಷ್ಟಸುಖಗಳನ್ನು ಸ್ವಲ್ಪ ಕಣ್ಣು ಬಿಟ್ಟು ನೋಡಬೇಕೆಂದು ನಾನು ಹೇಳುತ್ತೇನೆ. ಈಗ 10 ವರ್ಷಗಳಿಂದ ಪ್ರಯತ್ನ ಮಾಡಿ ಕಪಿನಿ ಪ್ರಾಜೆಕ್ಟ್ ಅನ್ನು ಪ್ರಾರಂಭ ಮಾಡಿದರು. ಅದಕ್ಕೆ ಈ ಶಾಸನ ಸಭೆಯವರು 320 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಆದರೆ ಈ ಪ್ರಾಜೆಕ್ಟನ್ನು ಕಾರ್ಯಗತ ಮಾಡುವ ಪ್ರಯತ್ನವನ್ನು ಸರ್ಕಾರದವರು ಮಾಡಿದ್ದಾರೆಯೇ ಎಂದು ನಾನು ಕೇಳಬೇಕಾಗಿದೆ. ಈ ಕಪಿನಿ ಯೋಜನೆಯನ್ನು ತಯಾರು ಮಾಡಿದಂತಹ ತಜ್ಞರು, ಇಂಜಿನಿಯರು ಈ ಯೋಜನೆಯಿಂದ 16 ಟಿ. ಎಂ. ಸಿ. ಎಫ್. ಟಿ. ನೀರು ಸಿಕ್ಕುತ್ತದೆ, ಒಂದು ಲಕ್ಷ 20 ಸಾವಿರ ಎಕರೆ ನೀರಾವರಿಯಾಗುತ್ತದೆ ಎಂದು ಹೇಳಿದ್ದಾರೆ; ಮತ್ತು ಈ ಯೋಜನೆಗೆ 21¼ ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ಈಗ 2-3 ಮೂರು ವರ್ಷಗಳಿಂದಲೂ ಈ ಯೋಜನೆಗೆ ವರ್ಷಕ್ಕೆ 25 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದರಲ್ಲಿ 5 ಲಕ್ಷ ಕಲ್ಲು ಹಾಕುವುದಕ್ಕೆ ಹೋಗುತ್ತಿದೆ. ಇನ್ನು 20 ಲಕ್ಷ ರೂಪಾಯಿಗಳು ಕಂಟ್ರಾಕ್ಟರಿಗೆ ಹೋಗುತ್ತದೆ. ಇದೇರೀತಿ ಈ ಪ್ರಾಜೆಕ್ಟಿಗೆ ಹಣವನ್ನು ಒದಗಿಸಿದರೆ ಇನ್ನು 80 ವರ್ಷಗಳಾದರೂ ಈ ಯೋಜನೆಯು ಮುಗಿಯುವುದಿಲ್ಲ. ಈ ಯೋಜನೆಯನ್ನು ಅದಷ್ಟು ಜಾಗ್ರತೆ ಕಾರ್ಯಗತ ಮಾಡುತ್ತೇವೆ ಎಂದು ಹೇಳತಕ್ಕ ಧೈರ್ಯ ನಿಮಗೆ ಇದೆಯೇ? ಈಗ ಇವರು ಯಾವ ಯಾವ ಪ್ರಾಜೆಕ್ಟುಗಳಿಗೆ ಕಲ್ಲು ಹಾಕಿದ್ದಾರೆಯೋ ಅವು ಅಲ್ಲಯೇ ಹಾಗೆಯೇ ಉಳಿದಿವೆ. ನಿಮ್ಮ ಜೀವಮಾನದಲ್ಲಿಯೇ ಈ ಪ್ರಾಜೆಕ್ಟುಗಳನ್ನೆಲ್ಲಾ ಕಾರ್ಯಗತ ಮಾಡುವುದಿಲ್ಲ. ಮುಂದಿನ ಪೀಳಿಗೆ ನಿಮಗೆ ಶಾಪ ಹಾಕುತ್ತದೆ. ಈ

ಸರ್ಕಾರ ದಿವಾಳಿಯಾಗಿದೆ ರೈತರು ಸಹಾಯ ಮಾಡಿ ನಿಮ್ಮ ಜಮೀನನ್ನು ಬ್ಯಾಂಕುಗಳಿಗೆ ಆಧಾರ ಥೋರ್ಯ ಮಾಡಿ ಪ್ರಾಜೆಕ್ಟ್ ಕಟ್ಟುವುದಕ್ಕೆ ಸರ್ಕಾರಕ್ಕೆ ಹಣ ಕೊಡಿ ಎಂದು ಕೇಳಿದರೆ ಇದು ಯಾವ ನೀತಿ? ಇವೊತ್ತು ಎಲ್ಲಾ ಮಕ್ಕಳಿಗೂ ಹೈಸ್ಕೂಲುವರೆಗೆ ಮುಫತ್ತಾದ ವಿದ್ಯಾಭ್ಯಾಸವನ್ನು ಒದಗಿಸುತ್ತೇವೆಂದು ಹೇಳುತ್ತೀರಿ, ಒಬ್ಬ ಹುಡುಗನನ್ನು, ಒಬ್ಬ ಮಗಳನ್ನು ಹೈಸ್ಕೂಲಿಗೆ ಕಾನ್‌ವೆಂಟಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸಬೇಕಾದರೆ ಒಂದು ತಿಂಗಳಿಗೆ 9 ರೂಪಾಯಿ ಮತ್ತು 7 ರೂಪಾಯಿ ಫೀಜು ಕೊಡಬೇಕು. ಈ ರೀತಿಯಿಂದ ರೈತ ತನ್ನ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕಾದರೆ ಎಷ್ಟೊಂದೇ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಸಹಕಾರ ಸಂಘಗಳಿಂದ ರೈತರ ಅಭ್ಯುದಯ ಮತ್ತು ದೇಶದ ಕಲ್ಯಾಣವಾಗುತ್ತದೆ ಎಂದು ಸರ್ಕಾರದವರು ಅದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಆದರೆ ನಿಜವಾಗಿಯೂ ಈ ಸಹಕಾರ ಸಂಘಗಳಿಂದ ದೇಶದ ಅಭ್ಯುದಯವಾಗುವುದಿಲ್ಲ. ಸಹಕಾರ ಸಂಘಗಳಲ್ಲಿ ಪಾರ್ಟಿ ವೈಷಮ್ಯಗಳು ಬಂದು ಶೇಕಡಾ 30 ರಷ್ಟು ಸಹಕಾರ ಸಂಘಗಳು ದಿವಾಳಿಯಾಗಿವೆ. ಶೇಕಡಾ 35 ರಷ್ಟು ಮಾತ್ರ ನರಿಯಾಗಿ ನಡೆಯುತ್ತಿವೆ. ಶೇಕಡಾ 35 ರಷ್ಟು ಅವ್ಯವಸ್ಥೆಯಾಗಿವೆ. ಎಂಬುವುದಾಗಿ ಹಿಂದೆ ಸಹಕಾರ ಮಂತ್ರಿಗಳು ಈ ಸಭೆಯಲ್ಲಿ ಹೇಳಿದ್ದಾರೆ. ಈ ಸಹಕಾರ ಸಂಘಗಳು ಸಾಲಕೊಡುವ ವ್ಯವಸ್ಥೆಯನ್ನು ನೋಡಿದರೆ ನಾಚಿಕೆಗೇಡಿನ ಪ್ರಸಂಗವಾಗಿದೆ. ದೊಡ್ಡ ದೊಡ್ಡ ವರ್ತಕರು, ದೊಡ್ಡ ದೊಡ್ಡ ವ್ಯಾಪಾರಗಳನ್ನು ಮಾಡುವುದಕ್ಕೆ ರೈಸೆನ್ಸ್ ಪಡೆದಿರತಕ್ಕವರು, ಸರ್ಕಾರದ ಆಶ್ರಯ ಪಡೆದಿರತಕ್ಕ ಶ್ರೀಮಂತರು ಏನಿದ್ದಾರೆ ಅವರಲ್ಲಿರತಕ್ಕ ಕಪ್ಪು ಹಣವನ್ನು ಬಿಳಿಸೂಲು ಮಾಡಿ. ಬಡ ರೈತನಿಗೆ ಖತಕ್ಕೆ ಈ ಭಾರವನ್ನು ಹೊರಿಸುತ್ತೀರಿ. ಕಂಟ್ರಾಕ್ಟುರುಗಳಲ್ಲಿ ಮೊದಲನೆಯ ವರ್ಗದ ಕಂಟ್ರಾಕ್ಟರು, ಎರಡನೆಯ ವರ್ಗದ ಕಂಟ್ರಾಕ್ಟರು ಎಂದು ವಿಂಗಡಿಸಿ ಯಾವ ಯಾವ ಪ್ರಾಜೆಕ್ಟು ಕಟ್ಟುವಾಗ ಯಾವ ಯಾವ ಕಂಟ್ರಾಕ್ಟಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ, ಅವರ ಹತ್ತಿರ ಹಣವನ್ನು ವಸೂಲು ಮಾಡಿ. 30 ಕೋಟಿ ರೂಪಾಯಿಗಳ ಹಣ ಸಿಗುತ್ತದೆ. ಈ ರೀತಿ ಹಣ ಕೊಡುತ್ತೇವೆಂದು ಅನೇಕ ಕಡೆಯಿಂದ ಜಾತಾ ಬಂದಿದೆ ಎಂದು ನ್ಯಾಯಾಂಗ ಮಂತ್ರಿಗಳಾದ ಶ್ರೀ ಪುಟ್ಟಸ್ವಾಮಿ ಅವರು ಹೇಳಿದರು. ಅವರು ಹುಟ್ಟಿದ ಸ್ಥಳವಾದ ಅರಕೆರೆಯಲ್ಲಿ ಒಂದು ಸಾವಿರ ಮನೆಗಳು ಇವೆ. ಈ ಒಂದು ಸಾವಿರ ಸಂಸಾರದಲ್ಲಿ 300 ಸಂಸಾರದವರಿಗೆ ವಾಸಕ್ಕೆ ಸರಿಯಾದ ಮನೆಗಳೇ ಇಲ್ಲ. ಜೇರೆಯವರನ್ನು ಆಶ್ರಯ ಮಾಡುವ ಸ್ಥಿತಿಯಲ್ಲಿ ಇದ್ದಾರೆ. ಅನೇಕ ಜನರು ಅಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಕೆಲವರ ಬಳಿ ಹಣ ಇರಬಹುದು. ಆದರೆ ಎಲ್ಲರ ಬಳಿಯೂ ಇಲ್ಲ. ನ್ಯಾಯಾಂಗ ಮಂತ್ರಿಗಳು ಕಳೆದ 7 ವರ್ಷಗಳಿಂದ ಮಂತ್ರಿಗಳಾಗಿದ್ದಾರೆ. ಅವರು ಹೌಸಿಂಗ್ ಇರಾಖೆ ಮಂತ್ರಿಗಳಾಗಿದ್ದಾಗ ಮೈಸೂರು ಹೌಸಿಂಗ್ ಬೋರ್ಡಿನ ಮೂಲಕ ಅವರ ಊರಿನಲ್ಲಿ 40 ಮನೆಗಳನ್ನು 20ರಿಂದ 40 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿಸಿ ಶ್ರೀಮಂತರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಕಳೆದ 22 ವರ್ಷಗಳಿಂದ ಆಡಳಿತ ನಡೆಸುತ್ತಿರುವ ಈ ಸರ್ಕಾರದವರು 450 ಕೋಟಿ ರೂಪಾಯಿಗಳವರೆಗೆ ಸಾಲ ಮಾಡಿದ್ದಾರೆಯೇ ಹೊರತು ಯಾವ ಒಂದು ನೀರಾವರಿಯ ಅನುಕೂಲವನ್ನೂ ರೈತರಿಗೆ ಮಾಡಿಕೊಟ್ಟಿಲ್ಲ. ಬಡ ರೈತನ ಮೇಲೆ ಮತ್ತೆ ಮತ್ತೆ ತೆರಿಗೆಯನ್ನು ಹಾಕುತ್ತಿದ್ದೀರಿ. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ನಮ್ಮ ರಾಜ್ಯದ ಬಜೆಟ್ ಮೂರೂವರೆ ಕೋಟಿ ರೂಪಾಯಿಗಳು ಇದ್ದರೂ ಕೂಡ ಮುವತ್ಮೂರೂವರೆ ಕೋಟಿ ರೂಪಾಯಿಗಳವರೆಗೆ ಅಪದ್ಧನವನ್ನು ಇಟ್ಟಿದ್ದರು. ಆ ಹಣವನ್ನು ಸಹ ಖರ್ಚು ಮಾಡಿದಿರಿ. ಆದರೆ ರೈತರ ಶ್ರೇಯಸ್ಸಿಗೆ ಯಾವ ಒಂದು ಅನುಕೂಲವನ್ನೂ ಮಾಡಿಕೊಡಲಿಲ್ಲ. ಹೊರದೇಶಗಳಿಗೆ ಭಿಕ್ಷಾಪಾತ್ರೆಗಳನ್ನು ಹಿಡಿದುಕೊಂಡು ಹೋಗುವುದು ತಪ್ಪಲಿಲ್ಲ. ಕೊನೆಯದಾಗಿ ಸರ್ಕಾರದವರು ತಮ್ಮಲ್ಲಿರುವ ಸಂಪತ್ತಿನ ಮೂಲಕವೇ ನೀರಾವರಿ ಯೋಜನೆಗಳನ್ನು ಕೈಕೊಳ್ಳಬೇಕೇ ಹೊರತು ರೈತರಿಂದ ಮುಂಗಡವಾಗಿ ಅಭಿವೃದ್ಧಿ ವಂತಿಗೆಯನ್ನು ವಸೂಲ್ಮಾಡಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯ ಮೇಲೆ ಮಾತನಾಡುವುದಕ್ಕೆ ಮೊದಲು, ಒಂದು ಯೋಚನೆ ಬರುತ್ತದೆ. ಏನೆಂದರೆ ರೈತನ ಉದ್ಧಾರ ಮಾಡಲು ಈ ರಾಜ್ಯದಲ್ಲಿ ಸರ್ಕಾರ ಇದೆಯೇ ಅಥವಾ ರೈತನನ್ನು ದಿವಾಳಿ ಮಾಡುವುದಕ್ಕೆ ಈ ಸರ್ಕಾರ ಇದೆಯೇ ಎಂಬ ಬಗ್ಗೆ ಕೆಲವು ಭಾವನೆಗಳು ನಮ್ಮ ಮನಸ್ಸಿನಲ್ಲಿ ಬರುತ್ತಿವೆ. "The Mysore Irrigation Levy of Betterment Contribution and Water Rate (Amendment) Bill 1969, ಏನಿದೆ ಇದು ಈಗಾಗಲೇ ಹಲವಾರು ತಿದ್ದುಪಡಿಗಳನ್ನು ಕಂಡಿದೆ. ಈ ಮಸೂದೆಯ ಬಗ್ಗೆ ಹೇಳುವುದಾದರೆ, 1957ನೇ ಇಸವಿಯಲ್ಲಿ ಪಾಸ್ ಮಾಡಿದ ಆಕ್ಟ್‌ನ್ನು 1967ನೇ ಇಸವಿಯಲ್ಲಿ ಜಾರಿಗೆ ಕೊಟ್ಟಿದ್ದಾರೆ. ಆ ರೀತಿ ಜಾರಿಗೆ ಕೊಡುವಾಗ 1944ನೇ ಇಸವಿಗೆ ಹಿಂದಕ್ಕೆ ಕಟ್ಟಿದ ಕೆರೆಕಟ್ಟೆಗಳ ಅಚ್ಚುಕಟ್ಟಿನ ಪ್ರದೇಶದ ಮೇರೆ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಹಾಕಬಾರದು ಎಂಬ ಬಗ್ಗೆ ಸೆಕ್ಷನ್ 3ರಲ್ಲಿ ಹೇಳಿತ್ತು. 1944ನೇ

(ಶ್ರೀ ಕೆ. ಎಚ್. ರಂಗನಾಥ್)

ಇನವಿಗೆ ಹಿಂದೆ ಕಟ್ಟಿದ ಕೆರೆಕಟ್ಟೆಗಳ ಆಚ್ಚುಕಟ್ಟು ಪ್ರದೇಶದ ಮೇಲೆ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಹಾಕಬಾರದೆಂದು ಹೇಳಿರುವುದರ ಜೊತೆಗೆ ಸೆಕ್ಷನ್ 10 ಕ್ಲಾಸ್ (2)ರಲ್ಲಿ ಅಂತಹ ಕೆರೆ ಕಟ್ಟೆಗಳಿಂದ ಉಪಯೋಗಿಸಿಕೊಳ್ಳುವ ನೀರಿನ ಮೇಲೆ ವಾಟರ್ ರೇಟನ್ನು ಹಾಕಬಾರದೆಂದು ಇತ್ತು. 1965ರಲ್ಲಿ ಒಂದು ಸಣ್ಣ ತಿದ್ದುಪಡಿಯನ್ನು ತಂದು ಸೆಕ್ಷನ್ 10(ಎ) ಅನ್ನು ಡಿಲೀಟೆಡ್ ಎಂದು ಮಾಡಿದರು. ಈ ಒಂದು ಡಿಲೀಟೆಡ್ ಎಂಬ ಶಬ್ದವನ್ನು ತಂದು ತಿದ್ದುಪಡಿ ಮಾಡಿದ್ದರಿಂದ, ಹಳೆಯ ಮೈಸೂರಿನ 9 ಜಿಲ್ಲೆಯ ಸುಮಾರು 26 ಸಾವಿರ ಕೆರೆಕಟ್ಟೆಗಳ ಮೇಲೆ ಮತ್ತು ಎರಡು ದೊಡ್ಡ ಕೆರೆಗಳಾದ ವಾಣಿವಿಲಾಸಸಾಗರ ಮತ್ತು ಕೃಷ್ಣರಾಜಸಾಗರ ಅಣಿಕಟ್ಟಿನ ಭಾಗದ ರೈತರಿಗೆ ತೊಂದರೆಯಾಯಿತು. ಅದರಲ್ಲೂ ಕೂಡ ಸಣ್ಣ ಸಣ್ಣ ರೈತರಿಗೆ ಬಹಳ ತೊಂದರೆಯಾಯಿತು. ಈ ಒಂದು ಸಣ್ಣ ತಿದ್ದುಪಡಿ ಕಾರಣದಿಂದ ನಮ್ಮ ಹಿರಿಯೂರು ತಾಲ್ಲೂಕಿನಲ್ಲಿ ಸುಮಾರು 8 ಲಕ್ಷ ರೂಪಾಯಿಗಳವರೆಗೆ ನೀರಿನ ತೆರಿಗೆಯನ್ನು ಕೊಡಬೇಕಾದ ಪರಿಸ್ಥಿತಿ ಬಂದಿದೆ. ರೈತರ ಉದ್ಧಾರ ವಾಗಬೇಕಾದರೆ ನೀರನ್ನು ಒದಗಿಸುವ ಕರ್ತವ್ಯ ಸರ್ಕಾರದ್ದು. ಈ ಕಡೆ ಸರ್ಕಾರದವರು ಸರಿಯಾದ ಗಮನ ಕೊಡದೆ, 5ನೇ ಆರ್ಥಿಕ ಆಯೋಗದ ಮುಂದೆ ಪರ್‌ಕ್ಯಾಪಿಟಾ ಇನ್‌ಕಮ್ ನಮ್ಮ ರಾಜ್ಯದಲ್ಲಿ ಹೆಚ್ಚಾಗಿದೆ ಎಂಬ ಹೇಳಿಕೆಯನ್ನು ಕೊಟ್ಟು ನಮ್ಮ ರಾಜ್ಯಕ್ಕೆ ಬರತಕ್ಕಂಥ ಆದಾಯ ಕಡಿಮೆಯಾಗುವಂತೆ ಮಾಡಿದ್ದಾರೆ. ರಾಜ್ಯದ ಹಣವನ್ನು ದುಂದು ಮಾಡುತ್ತಿದ್ದಾರೆ. ನಾವುಗಳು ದಿವಾಳಿತನಕ್ಕೆ ಬಂದಿದ್ದೇವೆ ಎಂದು ಹೇಳಿದರೆ ತಪ್ಪಾಗಲಾರದು. ಸುಮಾರು 500 ಕೋಟಿ ರೂಪಾಯಿಗಳವರೆಗೆ ಸಾಲ ಮಾಡಿದ್ದಾರೆ. Pauper Government can only bring a measure of this kind ಎಂದು ನನಗನ್ನಿಸುತ್ತದೆ. ಕ್ಲಾಸ್ 3(ಎ)ಗೆ ಒಂದು ತಿದ್ದುಪಡಿಯನ್ನು ತಂದಿದ್ದಾರೆ ಅದರಲ್ಲಿ ಈ ರೀತಿ ಹೇಳಿದೆ :

> "Notwithstanding anything in this Act, where the Government, having the due regard to the relative priority of works and availability of funds....."

ಇದನ್ನು ನಿರ್ಣಯ ಮಾಡುವವರು ಯಾರು ? ಇಲ್ಲೂ ಕೂಡ ರಾಜಕೀಯ ಮಾಡಬೇಕು. ಈಗ ವಾಣಿವಿಲಾಸಸಾಗರದಲ್ಲಿ ಒಂದು ಅಡಿ ನೀರು ಇಲ್ಲ. ಮೊನ್ನೆ ಮಳೆ ಬರದಿದ್ದರೆ 4 ಸಾವಿರ ಅಡಿಕೆ ಮರಗಳು ಹಾಳಾಗುತ್ತಿದ್ದವು. ಯಗಚಿ ನದಿಯ ನೀರನ್ನು ವಾಣಿವಿಲಾಸ ಸಾಗರಕ್ಕೆ ತಿರುಗಿಸ ಬೇಕೆಂದು ನಾವು ಹತ್ತಾರು ವರ್ಷಗಳಿಂದ ಹೇಳುತ್ತಲೇ ಇದ್ದೇವೆ. ರೈತರನ್ನು ಉದ್ಧಾರ ಮಾಡುವ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತಿಲ್ಲ. ಜನರಿಂದ, ರೈತರಿಂದ ಹಣ ವಸೂಲಿ ಮಾಡುವುದಕ್ಕಾಗಿ ಇಂತಹ ಒಂದು ಕಾನೂನನ್ನು ತರುತ್ತಿದ್ದಾರೆ. ದುಂದು ವೆಚ್ಚ ಮಾಡತಕ್ಕಂಥ ಈ ಸರ್ಕಾರಕ್ಕೆ ಇಂತಹ ಕಾನೂನನ್ನು ತರುವ ಹಕ್ಕಾದರೂ ಕೂಡ ಎಲ್ಲಿದೆ ಎಂದು ಕೇಳುತ್ತೇನೆ. ಸುಮಾರು 400 ಪಂಪ್‌ಸೆಟ್ಟುಗಳಿಗೆ ನೀರನ್ನು ಎತ್ತಲು ಅವಕಾಶವನ್ನು ತಾವು ಕೊಟ್ಟಿದ್ದರಿಂದ ಸುತ್ತಮುತ್ತಲ ಕೆರೆಯ ನೀರೆಲ್ಲಾ ಒಣಗಿಹೋಯಿತು. ಒಬ್ಬ ರೈತ ತಿಳಿಯದೆ ನೀರನ್ನು ತನ್ನ ಜಮೀನಿಗೆ ಬಿಟ್ಟುಕೊಂಡರೆ : not less than 10 times the water rate and not more than 30 times ದಂಡ ಕೊಡಬೇಕೆಂದು ಕಾನೂನು ಮಾಡಿದ್ದಾರೆ.

Sri K. PUTTASWAMY.—Do you know how many of the tailenders have suffered ?

Sri K. H. RANGANATH.—If the Hon. Minister really goes and sees what is happening in Hiriyur Taluk, he will really shed tears.

ಇಲ್ಲಿ ಕುಳಿತು ನಾವು ಮಾತನಾಡುವುದು ಸುಲಭ. ಆಚ್ಚುಕಟ್ಟಿನ ಪ್ರದೇಶವಲ್ಲದೆ ಇರತಕ್ಕ ಆರು ಎಕರೆ ಭೂಮಿಗೆ ಹಿರಿಯೂರು ತಾಲ್ಲೂಕಿನಲ್ಲಿ 7 ಸಾವಿರ ರೂಪಾಯಿಗಳ ಟಿ.ಟಿ. ಪ್ರೊಸೀಡಿಂಗ್ಸ್ ಬಂದಿದೆ.

ಈ ಮನೂದೆಯಲ್ಲಿ ಸರ್ಕಾರದವರು ಕೇಳುತ್ತಿರುವುದು ಕನ್‌ಸ್ಟ್ರಕ್ಷನ್‌ಗೆ ಮಾತ್ರವಲ್ಲ, ಎಕ್ಸ್‌ಪ್ಯಾನ್‌ಷನ್, ರೆಸ್ಟೋರೇಷನ್ ಎಲ್ಲದಕ್ಕೂ ಕೇಳುತ್ತಿದ್ದಾರೆ. ನೂರು ಎಕರೆ ಆಚ್ಚುಕಟ್ಟು ಇರುವ ಕೆರೆ ಭರ್ತಿ ಆದರೆ ಎರಡು ಮೂರು ತಿಂಗಳು ಮಾತ್ರ ನೀರಿರುತ್ತದೆ. ಹೂಳು ತೆಗೆಯುವುದು ರೈತರ ಕೆಲಸವಲ್ಲ. ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಕೊಟ್ಟರೆ ಹೂಳು ತೆಗೆಯುತ್ತೇವೆ ಎನ್ನುವಂಥ ಕಾನೂನು ಆಗಿದೆ.....

ಶ್ರೀ ಕೆ. ಪುಟ್ಟಸ್ವಾಮಿ.—ಹೂಳು ತೆಗೆಯುತ್ತೇವೆ ಎನ್ನುವುದನ್ನು ಸರ್ಕಾರ ಯಾವತ್ತಿಗೂ ಒಪ್ಪಿಕೊಂಡಿಲ್ಲ.

Sri K. H. RANGANATH.—What is restoration? What is expansion? What is construction? I want to have a reply from the Hon. Minister. ಇಂಥ ಒಂದು ಕರಾಳ ಶಾಸನ ಮನೂದೆಯ ರೂಪದಲ್ಲಿ ನಮ್ಮ ಮುಂದೆ ಬಂದಿದೆ. ಈ ಹೊತ್ತಿನ ದಿವಸ ಪೇಪರ್ ಆಗುವ ಸ್ಥಿತಿಗೆ ಬಂದಿರುವುದರಿಂದ ಸರ್ಕಾರ ಈ ಕಾನೂನು ತಂದಿದೆ. ಈ ಕಾನೂನು ರೈತರ ಹಿತಕ್ಕಾಗಿ ಬಂದಿಲ್ಲ. ಸರ್ಕಾರವನ್ನು ಬೆಂಬಲಿಸಿರತಕ್ಕ ಸದಸ್ಯರಲ್ಲಿ ರೈತರ ಬಗ್ಗೆ ಅನುಕಂಪ, ಕಳಕಳಿ ಇದ್ದರೆ, ಈ ಕಾನೂನನ್ನು ವಾಪಸು ತೆಗೆದುಕೊಳ್ಳುವಂತೆ ಸರ್ಕಾರದ ಮೇಲೆ ಒತ್ತಾಯವನ್ನು ತರಬೇಕೆಂದು ಕೇಳಿಕೊಳ್ಳುತ್ತೇನೆ.

ಹೊಸದಾಗಿ ಸೇರಿಸಲು ಸೂಚಿಸಿರುವ ಸೆಕ್ಷನ್ 3 (ಎ) ನಲ್ ಕ್ಲಾಜ್ 7 ಏನಿದೆ ಇದು ರೈತರ ಹಿತಕ್ಕಾಗಿ ಇಲ್ಲ. ಸರ್ಕಾರ ರೈತರಿಗೆ ತೊಂದರೆ ಕೊಡುವ ದೃಷ್ಟಿಯಿಂದ ಇದೆ. ಸೇಕಡ 66ರಷ್ಟು ಅಚ್ಚುಕಟ್ಟುದಾರರು ಮಾಡಬಹುದು ಎಂದರೆ ಸೇಕಡ 33ರಷ್ಟು ಜನ ಬೇಡ ಎಂದರೂ ಕೂಡ ನಾಳೆಯ ದಿನ ದುಡ್ಡನ್ನು ಕಡ್ಡಾಯವಾಗಿ ವಸೂಲು ಮಾಡುತ್ತೀರಿ. This is going to be a charge on the land. ಇದನ್ನೆಲ್ಲ ಸೂಕ್ಷ್ಮವಾಗಿ ಆಲೋಚನೆ ಮಾಡಬೇಕು. ಆದ್ದರಿಂದ ದಯಮಾಡಿ ಸರ್ಕಾರ ಈ ಕಾನೂನನ್ನು ವಾಪಸು ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಬೆಂಬಲ ಕೊಡತಕ್ಕ ರೈತರ ಪ್ರತಿನಿಧಿಗಳೆನಿಸಿ ಕೊಂಡಿರತಕ್ಕ ಸದಸ್ಯರು ಒತ್ತಾಯ ಮಾಡಬೇಕೆಂದು ಹೇಳಿ ಇದನ್ನು ನಾನು ವಿರೋಧಿಸುತ್ತೇನೆ.

†ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಸ್ವಾಮಿ, ಸಭೆಯ ಮುಂದೆ ಇರುವ ಇರಿಗೇಷನ್ (ಲೆವಿ ಆಫ್ ಬೆಟರ್‌ಮೆಂಟ್ ಅಂಡ್ ವಾಟರ್ ರೇಟರ್) ತಿದ್ದುಪಡಿ ಮನೂದೆಯನ್ನು ಸ್ವಾಗತಿಸುವುದೇ ಅಥವಾ ಬಡುವುದೇ ಎನ್ನತಕ್ಕ ಒಂದು ಜಿಜ್ಞಾಸೆ, ಭ್ರಾಂತಿ ನನ್ನ ಮನಸ್ಸಿನಲ್ಲಿ ಉಳಿಯುತ್ತದೆ. ಒಂದು ದೃಷ್ಟಿಯಿಂದ ಈ ಹೊತ್ತಿನ ಹಣಕಾಸಿನ ಪರಿಸ್ಥಿತಿಯಿಂದ ಮತ್ತು ಆಗ ಬೇಕಾದ ಕೆಲಸಕಾರ್ಯಗಳ ದೃಷ್ಟಿಯಿಂದ ಸಾರ್ವಜನಿಕರಿಂದ ಹಣ ಬರಬೇಕು, ಅವರು ಹಣ ತುಂಬಿದರೆ ಕೆಲಸಕಾರ್ಯಗಳು ಆಗುತ್ತವೆ ಎನ್ನುವುದನ್ನು ಸ್ವಾಗತಿಸುತ್ತೇನೆ. ಆದರೆ ಕೆಲವು ಸಂದೇಹಗಳಿಗೆ ಈ ಶಾಸನದಲ್ಲಿ ಸರಿಯಾಗಿ ಉತ್ತರ ದೊರಕುತ್ತಿಲ್ಲ. ಶಾಸನದ ಉದ್ದೇಶ ಯಾವ ಯಾವ ಕಡೆ ಪ್ರಯೋರಿಟಿ ಬೇಸಿಸ್‌ಮೇಲೆ 66 ಪರ್ಸೆಂಟ್ ಜನ ಒಪ್ಪಿಗೆಯನ್ನು ಸೂಚಿಸುತ್ತಾರೋ ಅಲ್ಲಿ ಆ ಕೆಲಸವನ್ನು ಆರಂಭಿಸಬೇಕು ಎನ್ನುವುದಕ್ಕೆ ಅವಕಾಶವಿದೆ. ಇಲ್ಲಿ ಶ್ರೀಮಾನ್ ಚನ್ನಬಸಪ್ಪ ನವರು ಪ್ರಸ್ತಾಪ ಮಾಡಿದ ಪ್ರಶ್ನೆ ಬರುತ್ತದೆ. ದುಡ್ಡು ಹೇಗೆ ಈ 66 ಜನಗಳಿಗೆ ಬರಬೇಕು? ಕೈಯಲ್ಲಿ ದುಡ್ಡಿದ್ದವರು ಕೊಡಬಹುದು. ಉಳಿದವರು ತಮ್ಮ ಜಮೀನನ್ನು ಒತ್ತೆ ಹಾಕಿ ಕೊಡಬೇಕು. ಮಾನ್ಯ ಪುಟ್ಟಸ್ವಾಮಿಯವರು ಮಾತನಾಡುತ್ತ ಬ್ಯಾಂಕುಗಳಲ್ಲಿ ವ್ಯವಹಾರ ನಡೆಸುತ್ತಿದ್ದೇವೆ, ಒತ್ತೆ ಇಡತಕ್ಕ ಜಮೀನುಗಳಿಗೆ ಬ್ಯಾಂಕಿನಿಂದ ದುಡ್ಡಿನ ಸೌಲಭ್ಯ ಒದಗುತ್ತದೆ ಎಂದು ಹೇಳಿದರು. ಸಂತೋಷ. ಹೀಗೆ ಬ್ಯಾಂಕುಗಳಿಂದ ಯಾರು ಅಚ್ಚುಕಟ್ಟುದಾರರಾಗಿರುತ್ತಾರೆ ಅವರಿಗೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಬಗ್ಗೆ ಸಾಲವನ್ನು ಕೊಡುವುದಾದರೆ ನೇರವಾಗಿ ಸರ್ಕಾರ ಸಾಲವನ್ನು ಬ್ಯಾಂಕುಗಳಿಂದ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ? ಅನೇಕ ಕಾಮಗಾರಿಗಳಿಗೆ ಸರ್ಕಾರ ದವರು ಸ್ಟೇಟ್ ಲೋನ್ಸ್ ಎತ್ತುತ್ತಿದ್ದಾರೆ. ಇಂಥ ಪ್ರಾಜೆಕ್ಟ್‌ಗಳನ್ನು ಪ್ರಯಾರಿಟಿ ಮೇಲೆ ತೆಗೆದುಕೊಳ್ಳಬೇಕು ಎಂದು ಒಂದು ಯೋಜನೆಯನ್ನು ಮಾಡಿ, ಇಂಥಿಂಥ ನಿರ್ದಿಷ್ಟ ಗಳಲ್ಲಿ ತೆಗೆದು ಕೊಳ್ಳಬೇಕೆಂದು ತೀರ್ಮಾನ ಮಾಡಿ ಅವಕ್ಕಾಗಿ ಏಕೆ ಸ್ಟೇಟ್ ಲೋನ್ಸ್ ಹೆಚ್ಚಿಸಬಾರದು? ಹೀಗಿರು ವಾಗ ಇದನ್ನು ಒಂದು ಕಾನೂನು ರೂಪದಲ್ಲಿ ಸೆಕ್ಷನ್ 3 (ಎ) ಎಂದು ಸೂಚಿಸಿ ತಂದಿರುವುದರಲ್ಲಿ ಔಚಿತ್ಯವಾದರೂ ಏನು? ಇದರಿಂದ ಯಾವ ಉದ್ದೇಶ ನೆರವೇರುತ್ತದೆ ಎನ್ನುವಂಥ ಬಗೆಹರಿಯದಂಥ ಸಮಸ್ಯೆ ಉಳಿಯುತ್ತದೆ. ಸೆಕ್ಷನ್ 3 (ಎ) ಇರಲಿ ಎಂದು ಇಟ್ಟುಕೊಳ್ಳೋಣ. ಇದರಲ್ಲಿ ಎರಡು ಸ್ಟೇಜ್ ಇದೆ. ಒಂದು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಸ್ಟೇಜ್, ಎರಡನೆಯದು ಅಚ್ಚುಕಟ್ಟಾದ ಮೇಲೆ ಬರಾತ್ಕಾರವಾಗಿ ಇರಿಗೇಷನ್ ಆಕ್ಟ್ ಪ್ರಕಾರವಾಗಿ ನೀರನ್ನು ಉಪಯೋಗಿಸಿ, ಉಪಯೋಗಿಸದೆ ಇರಲಿ ಪ್ರತಿಯೊಬ್ಬ ರೈತನೂ ಕಂದಾಯ, ಲೆವಿ, ವಾಟರ್ ರೇಟ್ ಇವೆಲ್ಲವನ್ನೂ ಕೊಟ್ಟೇ ಕೊಡಬೇಕು. ಇದನ್ನು ಕೊಡುವ ಪೂರ್ವದಲ್ಲಿ 6 ಜನ ಒಪ್ಪಿ, 3 ಜನ ಒಪ್ಪದೆ ಇದ್ದರೂ ಈ ಶಾಸನದ ಪ್ರಕಾರವಾಗಿ ಬರಾತ್ಕಾರ ಪಡಿಸುವುದಕ್ಕೆ ಅವಕಾಶವಿದೆ. ಆರು ಜನ ಒಪ್ಪಲಿ ಎಂದರೆ ವಾಲಂಟರಿಯಾಗಿ ಒಪ್ಪುವುದಾದರೆ ಸೆಕ್ಷನ್ 3 (ಎ) ಇರತಕ್ಕುದರ ಅವಶ್ಯಕತೆ ಏನಿದೆ? ಹಿಂದಿನ ನಡವಳಿಕೆಗಳನ್ನು ನೋಡುತ್ತ ಬಂದರೆ, ಒಂದು ಭಾಗದ ಜನ ದುಡ್ಡು ಹಾಕಿದಮೇಲೆ ಸರ್ಕಾರ ದವರನ್ನು ನಕಾಯ ಮಾಡಿಕೊಡಿ ಎಂದರೆ ಇಂಥ ಶಾಸನವಿಲ್ಲದೆಯೇ ಅನೇಕ ಕಡೆ ಕೆಲಸಕಾರ್ಯಗಳು

(ಶ್ರೀ ಎಲ್. ಶ್ರೀಕಂಠಯ್ಯ)

ನಡೆಯುತ್ತಿವೆ. ಹೀಗಿರುವಾಗ ಸೆಕ್ಷನ್ 3 (ಎ) ಉಪಯೋಗ ಏನು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ; ಇದು ತರೆತಿರೋಭಾರವಾಗುತ್ತದೆ. ಈಗ ಕಾನೂನು ತಂದಿರುವುದನ್ನು ನೋಡಿದರೆ ಗುಂಡು ಯಾರಿಗೆ ಬೇಕಾದರೂ ತಗಲಬಹುದು. 6 ಜನ ಒಪ್ಪಿದ ಪಕ್ಷದಲ್ಲಿ ಸರ್ಕಾರದವರು ಕೆರೆ ಕಟ್ಟಿಸುತ್ತಾರೆ. ಕಾನೂನು ಪ್ರಕಾರ ಉಳಿದ ಮೂರು ಜನರನ್ನು ಒತ್ತಾಯಮಾಡಲು ಯಾವ ವಿಧವಾದ ಹಕ್ಕೂ ಇರುವುದಿಲ್ಲ. ಆದ್ದರಿಂದ ಇದಕ್ಕೆ ಇಂಥ ಒಂದು ಶಾಸನದ ಆವಶ್ಯಕತೆ ಇಲ್ಲ. ನಾನು ಪ್ರಾರಂಭದಲ್ಲಿಯೇ ಒಂದು ಸಂದೇಹವನ್ನು ವ್ಯಕ್ತಪಡಿಸಿದೆ. ಈ ಬಗ್ಗೆ ಮಾನ್ಯ ಪುಟ್ಟಸ್ವಾಮಿಯವರು ಒಂದು ಉಭಯ ಹಸ್ತವನ್ನು ನೀಡಿದ್ದಾರೆ. ಪ್ರಯಾರಿಟಿ ಸ್ಕೀಮಿನಲ್ಲಿದ್ದರೂ ಸಹ ಕಮಿನಿಯೋಜನೆ ಅರ್ಧ ಕೆಲಸವಾಗಿದೆ, ಅದನ್ನು ಪೂರ್ಣ ಮಾಡಬೇಕಾದರೆ, ಸೆಕ್ಷನ್ 3 (ಬಿ) ಪ್ರಕಾರವಾಗಿ ಪೂರ್ತಿ ಹಣವನ್ನು ಕೊಡುವುವಾದರೆ ಈ ಯೋಜನೆಯನ್ನು ಪುಂಡುವರಿಸುತ್ತೇವೆ ಎನ್ನುವ ತಕರಾರು ಹಾಕುವುದಾದರೆ ಆಗ ಏನು ಮಾಡಬೇಕು ಎಂದು ಮಾನ್ಯ ಸಿದ್ದವೀರಪ್ಪನವರು ಕೇಳಿದರು. ಇದರಲ್ಲಿ ಉಂಡಪನೇ ಜಾಣ ಎನ್ನುವ ಪ್ರಶ್ನೆ ಬರುತ್ತದೆ. ಲಕ್ಷಾಂತರ ರೂಪಾಯಿ. ಕೋಟ್ಯಾಂತರ ರೂಪಾಯಿಗಳ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡು ಅರ್ಧ ಕೆಲಸ ಮಾಡಿ ಅದಕ್ಕೆ ತಗಲುವ ಪೂರ್ತಿ ಹಣವನ್ನು ಕೊಡದೆ ಪೂರ್ತಿ ಮಾಡುವುದಿಲ್ಲ ಎಂದು ಹೇಳಿದರೆ ಆ ಜನರು ಏನು ಮಾಡಬೇಕು ! ಇದರ ಬಗ್ಗೆ ಕ್ಲಾಜ್ ಎ ಅಥವಾ ಬಿ ನಲ್ಲಿ ಯಾವ ವಿಧವಾದ ಸ್ಪಷ್ಟೀಕರಣವಿಲ್ಲ. ಇದನ್ನು ಯಾವುದಕ್ಕೆ ಬೇಕಾದರೂ ಅನ್ವಯ ಮಾಡಬಹುದು. ಆದುದರಿಂದ ಈ ಶಾಸನದ ಅಗತ್ಯತೆ ಇಲ್ಲವೆಂದು ನನಗೆ

7-00 P.M.

ತೋರುತ್ತದೆ. ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಅಪ್ಪಣೆ ಕೊಡಿಸಿದರು. ಅದಕ್ಕಾಗಿ ನಾನು ಒಂದು ಸೂಚನೆ ಕೊಡುತ್ತೇನೆ. ಅದು ಏನೆಂದರೆ ಶೇಕಡ 66 ಜನರು ಅಪೇಕ್ಷೆ ಮಾಡಿದರೆ ಬ್ಯಾಂಕುಗಳಿಂದ ಸಾಲ ಕೊಡಿಸಿ ಅವರಿಂದ ನಾವು ತೆಗೆದುಕೊಳ್ಳುವ ಪಕ್ಷಕ್ಕೆ ನಾವೇ ನೇರವಾಗಿ ಸಾಲ ತೆಗೆದುಕೊಳ್ಳುವುದಕ್ಕೆ ಬ್ಯಾಂಕಿಗೆ ಹೋಗೋಣ.

Sri H. N. NANJE GOWDA.—Sir, it is now 7 O' clock.

Mr. SPEAKER.—Probably the hon' Member is finishing his speech in about five minutes.

Sri L. SRIKANTIAH.—No Sir, I want at least another half an hour.

Mr. SPEAKER.—Shall we meet at 12 O' clock tomorrow ?

Sri H. SIDDAVEERAPPA.—If we are going to complete the legislative business on the 5th, I request the Chair not to make us sit like that.

Mr. SPEAKER.—We have admitted the motions. Now we are adjourning. We are sitting for a few days next week so that the elections to several committees also might be held. My only request is let us try to conform to the Business Advisory Committee Report.

Now the House adjourns and will meet tomorrow at 1 p.m.

The House adjourned at Five Minutes past Seven of the Clock, to meet again at One of the Clock on Thursday, the 4th September 1969.

WD 13528—GPB—600—8-12-1969

CONTENTS

		PAGES
1	(i) Starred Questions and Answers ...	167—197
	(ii) Short Notice Question and Answer ...	198—199
	(iii) Questions for Answers on the day (but not taken up) ...	199—201
	(iv) Replies to the supplementaries by Ministers ...	201—204
	(v) Convention to meet the Speaker in his chambers ..	204
	(vi) Procedure for a member to catch the eye of the Speaker ...	205—207
2	Third Report of the Committee on Government Assurances—(Presented) ...	207
3	(A) Mysore Appropriation (No. 5) Bill, 1969—(Presented)	208
	(B) Mysore Appropriation (No. 6) Bill, 1969—(Presented)	208
	(C) Mysore Silkworm Seed and Cocoon (Regulation of Production, Supplies and Distribution)(Amendment) Bill, 1969—(Presentation) ...	208
	(D) Mysore Weights and Measures (Enforcement) (Amendment) Bill, 1969—(Presented) ...	208—209
4	Mysore Irrigation (Levy of Betterment Contribution and Water Rate) (Amendment) Bill, 1969—Motion to refer to a Select Committee—(Adopted) ...	209—235
5	Mysore Appropriation (No. 5) Bill, 1969—(Passed) ...	235—236
6	Mysore Appropriation (No. 6) Bill, 1969—(Passed) ...	236—237
7	Bangalore, Karnatak and Mysore Universities (Amendment) Bill, 1968 as passed by the Legislative Council—(Motion to consider—Debate not concluded) ...	237—252
8	Business of the House ...	252—253
9	Half-an-Hour Discussion arising out of replies to Question No. 342 *re*: Bidar Halikhed Sahakara Sakkare Karkhane ...	253—262

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 4th September 1969

The House met in the Assembly Chamber, Vidhana Soudha, Bangalore, at Two Minutes past One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Supply of Electricity to Village and Pumpsets in each District of the State

49. Sri N. A. CHANNE GOWDA (Pandavapura). —

Will the Chief Minister be pleased to state :—

(*a*) the number of villages electrified in each district of the State ;

(*b*) the number of power pumpsets provided in each of the district of the State ;

(*c*) the number of villages proposed to be electrified in each district during the current year ;

(*d*) the number of pumpsets proposed to be energised in each district during the current year ?

Sri D. PARAMESWARAPPA (Deputy Minister for Major Irrigation and Electricity) [On behalf of SRI VEERENDRA PATIL (Chief Minister)] :—

(*a*) and (*b*) *Vide* statement "A" appended.

(*c*) and (*d*) *Vide* statement "B" appended.

STATEMENT "A"

(SRI D. PARAMESWARAPPA)

Statement showing the number of villages electrified and the number of Irrigation Pumpsets serviced in the State as at the end of May 1969.

Sl. No.	Name of the District	No. of villages electrified	No. of I.P. sets serviced
1.	Bangalore ...	1,023	13,682
2.	Bellary ...	303	3,720
3.	Bijapur ...	205	2,161
4.	Belgaum ...	133	3,600
5.	Bidar ...	135	3,216
6.	Chickmagalur ...	350	1,130
7.	Chitradurga ...	632	7,386
8.	Coorg ...	52	347
9.	Dharwar ...	429	4,212
10.	Gulbarga ...	227	1,420
11.	Hassan ...	355	1,339
12.	Kolar ...	1,046	16,487
13.	Mysore ...	601	5,096
14.	Mandya ...	426	2,810
15.	North Kanara ...	113	1,173
16.	Raichur ...	221	1,790
17.	Shimoga ...	686	2,421
18.	South Kanara ...	327	10,120
19.	Tumkur ...	666	11,598
	Total ...	7,930	93,708

STATEMENT "B"

Statement showing the number of villages proposed to be electrified and the number of pumpsets to be energised during the current year.

Sl. No.	District		No. of villages proposed	No. of Irrigation Pumpsets proposed
1.	Bangalore	...	58	1,950
2.	Bellary	...	38	850
3.	Bijapur	...	38	1,300
4.	Belgaum	...	45	1,600
5.	Bidar	...	23	1,200
6.	Chickmagalur	...	29	300
7.	Chitradurga	...	50	800
8.	Coorg	...	21	250
9.	Dharwar	...	56	1,200
10.	Gulbarga	...	60	1,200
11.	Hassan	...	43	300
12.	Kolar	...	112	2,100
13.	Mysore	...	82	1,050
14.	Mandya	...	48	800
15.	North Kanara	...	26	600
16.	Raichur	...	35	900
17.	Shimoga	...	61	400
18.	South Kanara	...	45	1,600
19.	Tumkur	...	99	1,600
	Total	...	969	20,000

ಶ್ರೀ ಎನ್. ಎ. ಚನ್ನೇಗೌಡ:—ಸ್ಪೀಮ್, ಮುಂದಿನ ಸಾಲಿಗೆ ಕೇವಲ 48 ಹಳ್ಳಿಗಳನ್ನು ಮುಂಡ್ಯ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಕೊಡುವುದಕ್ಕೆ ಗೊತ್ತು ಮಾಡಿದ್ದಾರೆಂದು ಹೇಳಿದ್ದೀರಿ. ಇದು ಯಾವ ಆಧಾರದ ಮೇಲೆ ತೆಗೆದುಕೊಂಡಿದ್ದೀರಿ.?

ಶ್ರೀ ಡಿ. ಪರಮೇಶ್ವರಪ್ಪ.—ಕೆಲವರು ಎಂ.ಎಲ್.ಎ.ಗಳು ಪ್ರೊಪೋಸ್ ಮಾಡಿದ್ದಾರೆ. ಅಂತವುಗಳನ್ನು ಕೆಲವು ಕನ್‌ಸಿಡರ್ ಮಾಡಿದ್ದೇವೆ ಮತ್ತು ವಿಲೇಜರ್ಸಿಂದ ಆಗಾಗ್ಗೆ ರೆಪ್ರಸೆಂಟೇಷನ್ ಬಂದಾಗ ಅವುಗಳನ್ನು ಕೂಡ ನೋಡಿಕೊಂಡು ಇತ್ಯರ್ಥ ಮಾಡಿದ್ದೇವೆ.

ಶ್ರೀ ಎನ್. ಎ. ಚನ್ನೇಗೌಡ.—ರೂರರ್ ಎಲೆಕ್ಟ್ರಿಫಿಕೇಷನ್‌ಗೆ ತಾವು ಹಾಕಿರತಕ್ಕ ಡಿಸ್ಟೈನ್ಸ್, ಹಾಕತಕ್ಕ ಪೋಲ್ಸ್ ಇವೆರ್ಲಾ ಆಂಧ್ರಪ್ರದೇಶದಲ್ಲಿ ಹಾಕತಕ್ಕ ಸಾಮಾನುಗಳಿಗಿಂತ ಹೆಚ್ಚು ಬೆಲೆಯ ವುಗಳಾದ್ದರಿಂದ, ನೀವು ಗೊತ್ತು ಮಾಡಿದ ಮಿನಿಮಂ ಸಂಖ್ಯೆಯನ್ನು ತೆಗೆದುಕೊಳ್ಳಲಾಗದೆ ಇರುವುದು ಒಂದು ಕಾರಣವೇ ?

ಶ್ರೀ ಡಿ. ಪರಮೇಶ್ವರಪ್ಪ.—ಅದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ನಮ್ಮ ದೇಶದಲ್ಲಿರುವ 26 ಸಾವಿರ ಹಳ್ಳಿಗಳಲ್ಲಿ 7,930 ಹಳ್ಳಿಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದೀರಿ, ಈ ರೀತಿ ನೀವು ವಿದ್ಯುಚ್ಛಕ್ತಿಯನ್ನು ಒದಗಿಸುತ್ತಾ ಹೋದರೆ ಎಷ್ಟು ವರ್ಷಗಳಲ್ಲಿ ಮೈಸೂರು ರಾಜ್ಯದಲ್ಲಿರತಕ್ಕ ಎಲ್ಲಾ ಹಳ್ಳಿಗಳಿಗೂ ದೀಪವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ ?

ಶ್ರೀ ಡಿ. ಪರಮೇಶ್ವರಪ್ಪ.—ಈ ಕೆಲಸಗಳಿಗೆ ಹೆಚ್ಚಿಗೆ ಹಣವನ್ನು ಒದಗಿಸಿ ಕೆಲಸವನ್ನು ಮಾಡಬೇಕಾಗುತ್ತದೆ. ಆದ್ದರಿಂದ ಇದು ಹಣದ ಲಭ್ಯತೆಯ ಮೇಲೆ ಅವಲಂಬಿಸುತ್ತದೆ.

Sri J. P. SARVESH.—Just now the Hon. Minister stated that the villages suggested by the M.L.As. are taken up. This is not followed in Gulbarga District. Will the Hon. Minister see that whatever names of villages are suggested by the M.L.As. are taken up ?

Sri D. PARAMESWARAPPA.—I said that out of the villages proposed by the M.L.As. certain villages have been included. So far, the views of the M.L.As. have been considered very favourably.

ಶ್ರೀ ಎಸ್. ಭೀಮಣ್ಣ.—ಸ್ಪೀಮ್, ಬೀದರ್ ಡಿಸ್ಟ್ರಿಕ್ಟ್ ಎಲ್ಲಾ ಡಿಸ್ಟ್ರಿಕ್ಟ್‌ಗಳಿಗಿಂತಲೂ ಬ್ಯಾಕ್‌ವರ್ಡ್ ಏರಿಯಾ. ಆದ್ದರಿಂದ ಬ್ಯಾಕ್‌ವರ್ಡ್ ಏರಿಯಾಕ್ಕೆ ಒಂದು ಸ್ಪೆಷರ್ ಫಂಡ್ ಏನಾದರೂ ಇಟ್ಟಿದ್ದರೆ ಅದಕ್ಕೆ ಡಬ್ಬರ್ ಅಮೌಂಟ್ ಕೊಟ್ಟು ಬೀದರ್ ಡಿಸ್ಟ್ರಿಕ್ಟ್‌ನ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಅದಕ್ಕೆ ಸ್ಪೆಷಲ್ ಪ್ರಾವಿಜನ್ ಏನೂ ಮಾಡಿಕೊಂಡಿಲ್ಲ. ಬ್ಯಾಕ್‌ವರ್ಡ್ ಏರಿಯಾಕ್ಕೆ ಪ್ರಿಫರೆನ್ಸ್ ಕೊಡಬೇಕಾಗುತ್ತದೆ. ಎಷ್ಟು ಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟು ಕೊಡುತ್ತೇವೆ.

ಶ್ರೀ ಡಿ. ಎಂ. ಸಿದ್ದಯ್ಯ.—ಈಗ ಎಂ.ಎಲ್.ಎ.ಗಳು ಪಟ್ಟಿಯನ್ನು ಕಳುಹಿಸುವಾಗ ವಿದ್ಯುಚ್ಛಕ್ತಿ ಯಾವ ಯಾವ ಹಳ್ಳಿಗಳಿಗೆ ಅಗತ್ಯ ಇದೆ, ಯಾವ ಯಾವ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೂಡ ಬೇಕೆಂದು ಯೋಚನೆ ಮಾಡಿ ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಅದನ್ನು ಸರ್ಕಾರದವರು ಬದಲಾವಣೆ ಮಾಡುತ್ತಾರೋ ಅಥವಾ ಅವರು ಯಾವ ಯಾವ ಹಳ್ಳಿಗಳಿಗೆ ಕೊಡಬೇಕೆಂದು ಪಟ್ಟಿ ಮಾಡಿಕಳುಹಿಸಿಕೊಟ್ಟಿರುತ್ತಾರೆಯೋ ಆ ಪ್ರಕಾರವೇ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತಾರೋ ?

ಶ್ರೀ ಡಿ. ಪರಮೇಶ್ವರಪ್ಪ.—ಈ ಬಗ್ಗೆ ನಾವು ಒಂದು ಪ್ರಿನ್ಸಿಪಲ್ ಇಟ್ಟುಕೊಂಡಿದ್ದೇವೆ. ಆ ಪ್ರಿನ್ಸಿಪಲ್ ಅನ್ನು ಗಣನೆಗೆ ತೆಗೆದುಕೊಂಡು ಎಂ.ಎಲ್.ಎ.ಗಳು ಕೊಟ್ಟಂತಹ ಪಟ್ಟಿಯಲ್ಲಿರತಕ್ಕ ಹಳ್ಳಿಗಳನ್ನು ಸೆಲೆಕ್ಟ್ ಮಾಡಿಕೊಳ್ಳುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಂ.ಎಲ್.ಎ.ಗಳು ಕೊಟ್ಟಂತಹ ಪಟ್ಟಿಯಲ್ಲಿರತಕ್ಕ ಹಳ್ಳಿಗಳನ್ನು ಸೆಲೆಕ್ಟ್ ಮಾಡಿಕೊಂಡು ಆ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಹಾಗಾದರೆ ಅದು ವಿರೋಧಪಕ್ಷದ ಸದಸ್ಯರು ಮತ್ತು ಕಾಂಗ್ರೆಸ್ ಪಕ್ಷದವರು ಎಲ್ಲರಿಗೂ ಒಂದೇ ಸಮನಾಗಿ ಅನ್ವಯಿಸುತ್ತದೆಯೇ, ಅಥವಾ ಅದರಲ್ಲಿ ಏನಾದರೂ

ವ್ಯತ್ಯಾಸ ಇದೆಯೇ ! ಮತ್ತು ವಿಧಾನ ಸಭಾ ಸದಸ್ಯರು ಕೊಟ್ಟಂತಹ ಪಟ್ಟಿಯ ಪ್ರಕಾರ ಕೆಲಸ ಮಾಡಿಸುವುದರ ಜೊತೆಗೆ ಯಾವುದಾದರೂ ಜನಸಂಖ್ಯೆಯ ಆಧಾರವನ್ನೋ ಅಥವಾ ಮತ್ತೆ ಯಾವುದಾದರೂ ಒಂದು ತತ್ವವನ್ನೋ ಇಟ್ಟುಕೊಂಡು ಈ ಕೆಲಸವನ್ನು ಮಾಡುವುದು ನೂಕ್ತವಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—ಈ ಬಗ್ಗೆ ನಾವು ಇದುವರೆಗೆ ಯಾವ ತಾರತಮ್ಯವನ್ನೂ ತೋರಿಸಿಲ್ಲ ಎಂದು ಖಚಿತವಾಗಿ ಹೇಳುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ಮೈಸೂರು ದೇಶದಲ್ಲಿರತಕ್ಕ ಎಲ್ಲಾ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಏನಾದರೂ ಒಂದು ಯೋಜನೆಯನ್ನು ತಯಾರು ಮಾಡಿದ್ದೀರಾ ? ಹಾಗಿದ್ದರೆ ಅದಕ್ಕೆ ಎಷ್ಟು ಹಣ ಖರ್ಚಾಗುತ್ತದೆ; ಎಷ್ಟು ವರ್ಷಗಳಲ್ಲಿ ಮೈಸೂರು ರಾಜ್ಯದಲ್ಲಿರತಕ್ಕ ಎಲ್ಲಾ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೀರಿ ?

ಶ್ರೀ ಡಿ. ಪರಮೇಶ್ವರಪ್ಪ.—ಈಗಾಗಲೇ ಒಂದು ಪ್ರೋಗ್ರಾಮ್ ಹಾಕಿಕೊಂಡಿದ್ದೇವೆ; ಆ ಪ್ರೋಗ್ರಾಮ್ ಪ್ರಕಾರ ವರ್ಷಕ್ಕೆ 500 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು 20 ಸಾವಿರ ಪಂಪುಸೆಟ್ಟುಗಳಿಗೆ ಸರ್ವಿಸ್ ಮಾಡಬೇಕೆಂದು ಒಂದು ಪ್ರೋಗ್ರಾಮ್ ಹಾಕಿಕೊಂಡಿದ್ದೇವೆ. ಆ ಪ್ರಕಾರ ಕೆಲಸ ನಡೆಯುತ್ತದೆ.

ಶ್ರೀ ಜಿ. ರಾಮೇಗೌಡ.—ಎಂ.ಎಲ್.ಎ.ಗಳು ಕೊಟ್ಟಿರುವ ಪಟ್ಟಿಯನ್ನು ಬೋರ್ಡಿನವರು ಒಪ್ಪದಿದ್ದರೆ ಪುನಃ ಎಂ. ಎಲ್. ಎ. ಗಳನ್ನು ಕನ್‌ಸಲ್ಟ್ ಮಾಡಿ ತೀರ್ಮಾನ ತೆಗೆದು ಕೊಳ್ಳುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಈಗಾಗಲೇ ಲಸ್ಟ್ ಫೈನಲೈಸ್ ಮಾಡಿ ಕಳಿಸಿರುವುದರಿಂದ ಈಗ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಎಂ.ಎಲ್.ಎ.ಗಳು ಕೊಟ್ಟ ಪಟ್ಟಿಯ ಪ್ರಕಾರ ವಿದ್ಯುಚ್ಛಕ್ತಿಯನ್ನು ಗ್ರಾಮಗಳಿಗೆ ಮತ್ತು ಪಂಪ್‌ಸೆಟ್ಟುಗಳಿಗೆ ಕೊಡಲಾಗುತ್ತದೆ ಎಂದು ಹೇಳಿದಿರಿ; ಸ್ಟೇಟ್‌ಮೆಂಟ್‌ನಲ್ಲಿ ಕೊಟ್ಟಿರುವುದನ್ನು ನೋಡುವುದಾದರೆ, ಬಳ್ಳಾರಿ, ಬಿದರೆ, ಚಿಕ್ಕಮಗಳೂರು, ಧಾರವಾಡ, ಗುಲ್ಬರ್ಗ, ಉತ್ತರಕನ್ನಡ, ದಕ್ಷಿಣಕನ್ನಡ, ರಾಯಚೂರು ಈ ಎಂಟು ಜಿಲ್ಲೆಗಳಿಗೆ ಸೇರಿಸಿ ಒಟ್ಟು 1,763 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಕೊಟ್ಟಿದ್ದರೆ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳೆರಡಕ್ಕೆ ಮಾತ್ರ 2,069 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಕೊಟ್ಟಿದ್ದೀರಿ. ಇಷ್ಟೊಂದು ವ್ಯತ್ಯಾಸ ಇರುವುದರಿಂದ ತಾವು ಯಾವ ತತ್ವವನ್ನು ಅನುಸರಿಸಿ ಕೊಡುತ್ತಿದ್ದೀರಿ ?

ಶ್ರೀ ಡಿ. ಪರಮೇಶ್ವರಪ್ಪ.—ಫೈನಲೈಸ್ ಮಾಡಬೇಕಾದರೆ ಆದಷ್ಟು ಮಟ್ಟಿಗೆ ಫ್ಯಾಕ್ಟ್‌ವನ್ನು ಗಣನೆಗೆ ತಗೆದುಕೊಳ್ಳುತ್ತೇವೆ. ಕೆಲವು ಕಡೆ ಐ. ಪಿ. ಸೆಟ್ಟುಗಳಿಗೆ ಲೈನ್ ಎಳೆಯುವಾಗ ಮಧ್ಯೆ ಹಳ್ಳಿಗಳು ಬಂದರೆ ಆ ಹಳ್ಳಿಗಳಿಗೂ ಕೂಡ ವಿದ್ಯುಚ್ಛಕ್ತಿ ಒದಗಿಸುತ್ತೇವೆ. ಕೋಲಾರ ಜಿಲ್ಲೆಯಲ್ಲಿ ಎಲ್ಲಾ ಕಡೆ ಲೈನ್ ಹೋಗಿದೆ ಮತ್ತು ಹಳ್ಳಿಗಳು ಕೂಡ ಬಹಳ ಹತ್ತಿರದಲ್ಲಿ ಇವೆ. ಹಳ್ಳಿಗಳು ಹತ್ತಿರ ಇದ್ದರೆ 4-5 ಸಾವಿರ ರೂಪಾಯಿಗಳಲ್ಲಿ ಲೈನ್ ಎಳೆದು ವಿದ್ಯುಚ್ಛಕ್ತಿಯನ್ನು ಕೊಡಬಹುದು. ಮತ್ತು ಎಸ್ಟಿಮೇಟ್ ಕೂಡ ಬಹಳ ಕಡಿಮೆಯಾಗುತ್ತದೆ.

ಶ್ರೀ ಎಂ. ಎನ್. ರಾಮಣ್ಣ.—ಎಂ.ಎಲ್.ಎ.ಗಳು ಪಟ್ಟಿ ಕೊಟ್ಟರೆ ಅದರಂತೆ ವಿದ್ಯುಚ್ಛಕ್ತಿ ಒದಗಿಸಲಾಗುತ್ತದೆ ಎಂದು ಹೇಳಿದಿರಿ. ಎಂ.ಎಲ್.ಎ.ಗಳು ಪಟ್ಟಿ ಕೊಡದಿದ್ದರೂ ಕೂಡ ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಕೇಳದೇ ಇರುವವರಿಗೆ ಕೊಡಬೇಕೆಂದರೆ ಕಷ್ಟವಾಗುತ್ತದೆ.

ಶ್ರೀ ಬಿ. ದೊಡ್ಡಬೋರೇಗೌಡ.—1968-69ನೇ ಸಾಲಿನಲ್ಲಿ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ಒಂದು ಲಸ್ಟ್ ಮಾಡಿದ್ದಿರಿ. ಆದರೆ ಆ ಲಸ್ಟ್‌ನಲ್ಲಿರುವ ಎಲ್ಲಾ ಹಳ್ಳಿಗಳಿಗೂ ಕೂಡ ಒದಗಿಸಿಲ್ಲ. ಆ ಸಾಲಿನಲ್ಲಿ ಬಿಟ್ಟಿರುವ ಹಳ್ಳಿಗಳನ್ನು 1969-70ನೇ ಸಾಲಿಗೆ ಸೇರಿಸಿಕೊಂಡಿದ್ದೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಕಳೆದ ಸಾರಿ 55 ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಯೋಜನೆ ಹಾಕಿಕೊಂಡಿದ್ದೆವು. ಆದರೆ ಮೆಟೀರಿಯಲ್ಸ್ ಅಭಾವದಿಂದ ಮತ್ತು ಕೆಲವು ಎರೇಜರ್ಸ್ ತಮ್ಮ ಫಾರ್ಮಾಲಿಟಿಸನ್ನು ಪರಿಪಾಲನೆ ಮಾಡದೇ ಇದ್ದುದರಿಂದ ಕೆಲವು ಹಳ್ಳಿಗಳಿಗೆ ಕೊಡುವುದಕ್ಕಾಗಲಿಲ್ಲ. ಅಂತಹ ಹಳ್ಳಿಗಳನ್ನು ಈ ವರ್ಷದ ಲಸ್ಟ್‌ನಲ್ಲಿ ಸ್ಪಿರ್ ಓವರ್ ವರ್ಕ್ ಎಂದು ಸೇರಿಸಿಕೊಂಡಿದ್ದೇವೆ.

ಶ್ರೀ ಕೆ. ಎಂ. ತಮ್ಮಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿ 29 ಹಳ್ಳಿಗಳಿಗೆ ಮತ್ತು 300 ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೀರಿ. ಇದುವರೆಗೆ ಆ ಜಿಲ್ಲೆಯಿಂದ ಒಟ್ಟು ಎಷ್ಟು ಅರ್ಜಿಗಳು ಬಂದಿವೆ, ಮತ್ತು ಎಷ್ಟು ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಿದ್ದೀರಾ ಎಂಬುದನ್ನು ಹೇಳುತ್ತೀರಾ ?

Sri D. PARAMESWARAPPA.—This is districtwise information that is sought for. If the hon. Member puts a separate question, I shall get the information.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಚಿಕ್ಕಮಗಳೂರು ಜಿಲ್ಲೆಯಿಂದ ಬಂದಿರತಕ್ಕ ಎಂ.ಎಲ್.ಎ.ಗಳು ಕೊಟ್ಟಿರುವ ಲಿಸ್ಟ್ ಏನಿದೆ, ಆ ಲಿಸ್ಟ್‌ನಲ್ಲಿರತಕ್ಕ ಎಲ್ಲಾ ಹಳ್ಳಿಗಳನ್ನು ಸಹ ಸೇರಿಸಿದ್ದೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಎಲ್ಲಾ ಹಳ್ಳಿಗಳನ್ನು ಸೇರಿಸುವುದಕ್ಕಾಗುವುದಿಲ್ಲ. ಸೇರಿಸುವುದಕ್ಕೆ ಸಾಧ್ಯವಾದ ಹಳ್ಳಿಗಳನ್ನು ಸೇರಿಸಿದ್ದೇವೆ.

Committee to mobilise resources for Irrigation Projects

107. Sri H. N. NANJE GOWDA (Arkalgud).—

Will the Chief Minister be pleased to state :—

(*a*) when the Committee to mobilise resources for Irrigation projects was appointed and what are the terms of reference ;

(*b*) the number of times the Committee met (the details with dates may be given) ;

(*c*) the reasons for its postponement from time to time ;

(*d*) whether the Committee have recommended *ad hoc* allotments to any of the projects pending final recommendations ; if so, the details of the same ;

(*e*) whether the Government is aware of the seriousness of the situation arising out of the delay caused by such postponements ?

Sri RAMAKRISHNA HEGDE (Minister for Finance, Excise and Youth Welfare) [On behalf of SRI VEERENDRA PATIL (Chief Minister)].—

(*a*) On 16th April 1969. The terms of reference of the Committee are to examine and make its recommendations to Government on the following :—

(i) Priorities to be given to the various Irrigation Projects having regard to Inter-State Problems in respect of the Krishna and the Cauvery Basins and the resources.

(ii) Measures to be taken to economise the expenditure in various administrative departments with a view to providing maximum funds for Irrigation.

(iii) Finding additional resources to finance Irrigation Projects.

(iv) Feasibility of taking up of Irrigation Projects on self-financing basis.

(v) Any other matter concerning expeditious execution of Irrigation Projects.

(*b*) Formally once on 17th May 1969.

(*c*) The Committee has programmed to collect information from, and have discussions with the concerned Ministers, Secretaries and Heads of various departments.

(*d*) Rs 11.75 crores has already been provided in the Budget.

(*e*) There is no postponement.

Replies as printed subject to the correction in (*b*) that there was another meeting held on 26th of last month.

Sri H. N. NANJE GOWDA.—Supplementary to (*d*) : May I know whether the Committee have allotted on ad hoc basis pending final deicsion ?

Sri RAMAKRISHNA HEGDE.—The Committee has not taken a final decision. The consensus of view in the Committee was that this year if possible at least additional Rs. 5 to 6 crores should be provided for major irrigation.

Sri H. N. NANJE GOWDA.—Has the Committee fixed priorities regarding the projects to be taken up ?

Sri RAMAKRISHNA HEGDE.—Regarding that matter also final decision has not been taken.

Sri C. K. RAJAIAH SHETTY.—Do Government propose to give effect to all the suggestions made by the Resources Committee ?

Sri RAMAKRISHNA HEGDE.—This Committee consists of hon. Members of this House and so due weight will be given to the opinion of this Committee.

Elections to the Bangalore City Corporation

276. Sri VATAL NAGARAJ (Chickpet). —

Will the Minister of State for Municipal Administration be pleased state :—

(*a*) the arrangements made for holding election to the City Corporation ;

(*b*) whether the elections will be held in the month of December or postponed further ?

Sri B. M. PATIL (Minister of State for Municipal Administration).—

(*a*) The Corporation authorities have undertaken all the arrangements in respect of the elections. That means firstly the statement regarding the programme has been prepared and submitted to the

(SRI B. M. PATIL)

Government for its approval. Arrangements have been commenced as per the programme list. Secondly voters list has been prepared by collecting the data as per the rule 1 (4) and 1 (5) of the Eighth Schedule of the amended Section 52 of the Corporation Rules. Two manuscript copies each of the voters list of each division has already been prepared. Tenders are called for printing the same. After the acceptance of the tender, the voters list will be given to the Press for printing the same.

(*b*) The elections will be held in the month of Dece nber as per the present programme list. The Government have no intention of postponing the election.

ಶ್ರೀ ವಾಟಾಳ್ ನಾಗರಾಜ್.—ಚುನಾವಣೆಗಳು ನಡೆಯುಲಿದೆ ಎಂದು ಹೇಳಿದ್ದೀರಿ. ಇದರ ವೇಳಾಪಟ್ಟಿಯನ್ನು ಯಾವಾಗ ಪ್ರಕಟಪಡಿಸುತ್ತೀರಿ ?

†ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. ಒಂದು ಟೆಂಟೆ ಟೀವ್ ಎಲೆಕ್ಷನ್ ಪ್ರೋಗ್ರಾಮನ್ನು ಕಾರ್ಪೊರೇಷನ್ನಿನವರು ಸರಕಾರಕ್ಕೆ ಕಳುಹಿಸಿದ್ದಾರೆ. ಇದರ ಪ್ರಕಾರ ಡಿಸೆಂಬರಿನಲ್ಲೇ ಚುನಾವಣೆಗಳು ನಡೆಯುವೆ ಮತ್ತು ಸರಕಾರಕ್ಕೂ ಚುನಾವಣೆ ನಡೆಸ ಬೇಕೆಂದು ಆತುರವೂ ಇದೆ.

ಶ್ರೀ ವಾಟಾಳ್ ನಾಗರಾಜ್.—ಚುನಾವಣಾ ವೇಳಾ ಪಟ್ಟಿಯನ್ನು ಯಾವ ತಿಂಗಳಲ್ಲಿ ಪ್ರಕಟ ಮಾಡುತ್ತೀರಿ ಎಂದು ಸ್ಪೆಸಿಫಿಕ್ ಆಗಿ ಹೇಳುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಇಷ್ಟರಲ್ಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಗಳನ್ನು ತಿಳಿಸುವುದರಲ್ಲಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್:—ಪೋಟರು ಲಸ್ಟು ಮಾಡಲು ಟೆಂಡರುಗಳನ್ನು ಕರೆಯಲಾಗಿದೆ ಎಂದು ಹೇಳಿದೆ. ಇಲ್ಲಿ ಚುನಾವಣೆ ನಡೆಯದಂತೆ ಕೆಲವು ಹಿತಾಸಕ್ತಿಗಳು ಪ್ರಯತ್ನ ಮಾಡುತ್ತಿರುವುದು ಗೊತ್ತಿದೆಯೇ? ಹಾಗೆ ಇದ್ದರೆ ಇದರ ಬಗ್ಗೆ ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಬಿ. ಎಂ. ಪಾಟೀಲ್.—ಯಾವ ಹಿತಾಸಕ್ತಿಗಳೂ ಚುನಾವಣೆಗೆ ಅಡ್ಡ ಬಂದಿಲ್ಲ. ಇದು ಸರಕಾರದ ಗಮನಕ್ಕೂ ಬಂದಿಲ್ಲ. ಈಗಾಗಲೇ ತೀವ್ರವಾಗಿ ಇದರ ಲಸ್ಟು ಪ್ರಿಂಟು ಮಾಡಬೇಕೆಂದು ಅಧಿಕಾರಿಗಳಿಗೆ ಹೇಳಿದೆ ಮತ್ತು ಟೆಂಟೆಟೀವ್ ಪ್ರೋಗ್ರಾಂ ಕಾರ್ಪೊರೇಷನ್ ಕಳುಹಿಸಿರುವುದಕ್ಕೆ ಸರಕಾರ ಒಪ್ಪಿಗೆ ಕೊಟ್ಟಿದೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಇದರ ಕ್ಯಾಲೆಂಡರ್ ಆಫ್ ಇವೆಂಟ್ಸ್‌ಗಳನ್ನು ಯಾವಾಗ ಪ್ರಕಟ ಮಾಡುತ್ತೀರಿ ?

ಶ್ರೀ ಬಿ. ಎಂ. ಪಾಟೀಲ್.—ಟೆಂಟೆಟೀವ್ ಪ್ರೋಗ್ರಾಂ ಪ್ರಕಾರ ನಿಶ್ಚಿತವಾಗಿ ಇಂತಹ ದಿನ ಎಂದು ಈಗಲೇ ಹೇಳಲಾಗುವುದಿಲ್ಲ. ಚುನಾವಣೆ ನಡೆಸಲು ಪೋಟರು ಲಸ್ಟು ಪ್ರಿಂಟುಮಾಡಲು ಟೆಂಡರುಗಳನ್ನು ಕರೆದು ಎಲ್ಲ ಕಾರ್ಯಕ್ರಮಗಳನ್ನೂ ಮಾಡಬೇಕೆಂದು ಹೇಳಲಾಗಿದೆ.

ಶ್ರೀ ಬಿ. ಪಿ. ಗಂಗಾಧರ್:—ಕಾನ್‌ಸ್ಟಿಟುಯೆನ್ಸಿ ಡೀಲಿಮಿಟ್ ಮಾಡಬೇಕು ಎಂದು ಸರಕಾರವ ಗಮನದಲ್ಲಿದೆಯೇ !

ಶ್ರೀ ಬಿ. ಎಂ. ಪಾಟೀಲ್.—ಕಾನ್‌ಸ್ಟಿಟುಯೆನ್ಸಿ ಡೀಲಿಮಿಟ್ ಮಾಡಬೇಕು ಎನ್ನುವ ವಿಚಾರ ಈಗ ಇಲ್ಲ.

†Indicates that the remarks or speeches have not been revised by the member concerned.

Allegation against the President and Chief Officer of Chitradurga Municipal Council

332. Sri G. DUGGAPPA (Bharamasagara).—

Will the Minister of State for Municipal Administration be pleased to state :—

(*a*) whether the Government has received any representation signed by twelve Municipal Councillors making certain grave allegations against the President and the Chief Officer of Chitradurga Municipal Council;

(*b*) whether the Government has replied to Councillor who is also a member of this House that the allegations made therein were being examined;

(*c*) the allegations made;

(*d*) whether those allegations were examined by the Government;

(*e*) if so, the result of examination;

(*f*) whether any report by the Deputy Commissioner was called for by the Government;

(*g*) whether the Deputy Commissioner has submitted any report to Government;

(*h*) if so, whether the same would be laid on the Table of the House;

(*i*) whether any action was taken by the Government on the report of the Deputy Commissioner?

Sri B. M. PATIL (Minister of State for Municipal Administration).—

(*a*) Yes.

(*b*) No.

(*c*) 1. Non-conducting of monthly meetings.

2. Not getting the monthly receipt and expenditure from April 1968, approved by the Council.

3. Irregular disposal of sites by the President.

4. The execution of works co ıtrary to rules.

5. Not leasing the rooms of Town Municipal Council constructed on the 1st Floor of Tourist Hotel.

(*d*) Yes.

(*e*) Government came to the conclusion that there is no substance in the allegations.

(*f*) Yes.

(*g*) Yes.

(*h*) No.

(*i*) No action was taken by Government since the allegations were found to be baseless.

(SRI B. M. PATIL)

There is one correction in the answer, Sir ಇಂಜೀರಿಮ್ ರಿಪೋರ್ಟ್ ಪ್ರಕಾರ ಕೆಲವು ಸ್ಪೆಸಿಫಿಕ್ ಅಲಗೇಷನ್ಸ್ they are still pending enquiry with Deputy Commissioner.

ಶ್ರೀ ಜಿ. ದುಗ್ಗಪ್ಪ.—ಸ್ವಾಮಿ, 1968ನೇ ಇಸವಿ ಏಪ್ರಿಲ್ ಮಾಹೆಯಿಂದ ಒಂದು ವರ್ಷಕಾಲ ಮಾಹೆಯಾನ ಮೀಟಿಂಗ್‌ಗಳನ್ನು ನಡೆಸಲಿಲ್ಲವೆಂದು 1964ನೇ ಇಸವಿ ಪುರಸಭೆ ಕಾಯಿದೆ ಪ್ರಕಾರ ತಾವು ಅವರಿಗೆ ಷೋಕಾಸ್ ಕೊಟ್ಟಿಲ್ಲವೇ ?

ಶ್ರೀ ಬಿ. ಎಂ. ಪಾಟೀಲ್.—ಷೋಕಾಸ್ ನೋಟೀಸ್ ಕೊಟ್ಟಿದೆ.

ಶ್ರೀ ಜಿ. ದುಗ್ಗಪ್ಪ.—ಪುರಸಭೆಯವರು ಮಾಹೆಯಾನ ಮೀಟಿಂಗ್‌ಗಳನ್ನು ನಡೆಸತಕ್ಕದ್ದು ಅವರ ಆದ್ಯಕರ್ತವ್ಯವಲ್ಲವೇ ?

ಶ್ರೀ ಬಿ. ಎಂ. ಪಾಟೀಲ್.—ಹೌದು, ಆಕ್ಟ್ ಪ್ರಕಾರ ಮುನಿಸಿಪಲ್ ಕೌನ್ಸಿಲ್ ಮಾಡಬೇಕು.

ಶ್ರೀ ಜಿ. ದುಗ್ಗಪ್ಪ.—1968 ರಿಂದ 1969ನೇ ಜೂನ್‌ನವರೆಗೆ ಪುರಸಭೆಯು ಖರ್ಚು ಮಾಡಿರ ತಕ್ಕಂಥ ಹಣಕ್ಕೆ ಜಿಲ್ಲಾಧಿಕಾರಿಗಳಿಂದಾಗಲಿ ಅವರ ಮೇಲ್ಪಟ್ಟ ಅಧಿಕಾರಿಗಳಿಂದಾಗಲಿ ಒಪ್ಪಿಗೆ ಪಡೆದಿಲ್ಲ ಎನ್ನುವ ವಿಚಾರವನ್ನು ನಿನ್ನೆ ದಿವಸ ಉತ್ತರದಲ್ಲಿ ಹೇಳಿಲ್ಲವೇ ?

ಶ್ರೀ ಬಿ. ಎಂ. ಪಾಟೀಲ್.—ನಿನ್ನೆ ಉತ್ತರದಲ್ಲಿ ಹೇಳಿದ್ದೇನೆ. ಈಗ ಕೆಲವು ತಿಂಗಳುಗಳಲ್ಲಿ ಈ ಖರ್ಚು ಮಾಡಿದ್ದಕ್ಕೆ ಡೆಪ್ಯೂಟಿ ಕಮೀಷನರ್ ಒಪ್ಪಿಗೆ ಆಗಬೇಕಲ್ಲ. ಇದು ವೇಗ್ ಅಲಗೇಷನ್ ಆಗಿರುವುದರಿಂದ ಇವರಲ್ಲಿ ಏನಾದರೂ ಇರ್ರೆಗ್ಯುಲ್ಯಾರಿಟೀಸ್ ಇದ್ದರೆ ನೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇವೆ.

ಶ್ರೀ ಹೆಚ್. ಬಿ. ಹ್ಯಾಲನಯ್ಯ.—ಮುನಿಸಿಪಲ್ ಆಕ್ಟ್ ಪ್ರಕಾರ ಚಿತ್ರದುರ್ಗ ಪುರಸಭೆಯಲ್ಲಿ ಬಹುಮತ ಹೊಂದಿರುವ ಕೌನ್ಸಿಲರುಗಳು 12 ಮಂದಿ ಪುರಸಭಾ ಸದಸ್ಯರು ಅಲ್ಲಿರುವ ಚೀಫ್ ಆಫೀಸರ ಮೇಲೆ ಆಪಾದನೆಗಳನ್ನು ಮಾಡಿರುವುದರಿಂದ ಆ ಅಧಿಕಾರಿಯನ್ನು ವಾಪಸ್ಸು ಕಳುಹಿಸುವ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಬಹುಮತ ಹೊಂದಿರುವ ಕೌನ್ಸಿಲರುಗಳು ಆ ಅಧಿಕಾರಿಯ ಮೇಲೆ ಅವಿಶ್ವಾಸ ನೂಚಿಸಿ ಮಾಡಿರುವ ಆಪಾದನೆಗಳಲ್ಲ. ಅಲ್ಲಿಯ ಪುರಸಭೆಯ ಕಾರ್ಯಗಳನ್ನು ಸರಿಯಾಗಿ ಕೆಲಸ ಮಾಡುತ್ತಿಲ್ಲ ಅದನ್ನು ಎನ್‌ಕ್ವೈರಿ ಮಾಡಲು ಎಂದು ಬರೆದಿದ್ದಾರೆ. ಅದನ್ನು ಎನ್‌ಕ್ವೈರಿ ಮಾಡಲಕ್ಕೆ ಡೆಪ್ಯುಟಿ ಕಮೀಷನರಿಗೆ ಬರೆದಿದೆ.

ಶ್ರೀ ಜಿ. ದುಗ್ಗಪ್ಪ.—ಸ್ವಾಮಿ, ತಮ್ಮ ಉತ್ತರದಲ್ಲಿ 12 ಮಂದಿ ಪುರಸಭೆಯವರು ಕಳುಹಿಸಿದ ಮನವಿಯಲ್ಲಿ ಆ ಆಪಾದನೆಗಳಲ್ಲಿ ಹುರುಳಿಲ್ಲವೆಂಬುದಾಗಿ ಹೇಳಿದ್ದೀರಿ. ಸರ್ಕಾರದಿಂದ ತಾ 27-5-1969 ರಲ್ಲಿ ನಂ. ಹೆಚ್. ಎಂ. ಎ. 7 ಟಿ. ಎ. 69 ರ ಮೂಲಕ ಸಾದರಾಗಿರುವ ಷೋಕಾಸ್ ನೋಟೀಸ್‌ನಲ್ಲಿ ಈ ಕೆಳಕಂಡ ಕಾರಣಗಳನ್ನು ತೋರಿಸಿ ಇದನ್ನು ಏತಕ್ಕೆ ರದ್ದು ಮಾಡಬಾರದು ಎಂದು ಕೇಳಿದ್ದೀರಿ. ಆ ಕಾರಣಗಳು ಯಾವುವು ಎಂದರೆ—1964 ರ ಪುರಸಭಾ ಕಾಯಿದೆ ಪ್ರಕಾರ—

(1) ಮಾಹೆಯಾನಾ ಮೀಟಿಂಗ್‌ಗುಗಳನ್ನು ಏಪ್ರಿಲ್ 1968 ರಿಂದ ಒಂದು ವರ್ಷಕಾಲ ನಡೆಸಲು ತಪ್ಪಿರುವುದು.

(2) 1959-60 ರಿಂದ ಸೆಸ್ಸು ಮತ್ತು ರಾಯಲ್ಟಿ ಇತ್ಯಾದಿ ಬಾಬುಗಳಲ್ಲಿ ಸರ್ಕಾರಕ್ಕೆ ಕೊಡಬೇಕಾದ ಹಣವನ್ನು ಪುರಸಭೆಯು ಪಾವತಿ ಮಾಡದೆ ಇರುವುದು (82,405 ರೂ. ಗಳು)

(3) ಮನೆಗಂದಾಯ ಮತ್ತು ಇತರ ಸುಂಕ ವಸೂಲು ಬಾಬನ್ನು ಪುರಸಭೆಯು ಕಾಲ ಕಾಲಕ್ಕೆ ವಿಮರ್ಶೆ ಮಾಡದೇ ಹೋದುದರಿಂದ ಈ ಬಾಬುಗಳಲ್ಲಿ ಅನೇಕ ವರ್ಷಗಳಿಂದ ಹೇರಳವಾದ ಬಾಕಿ ನಿಲ್ಲಲು ಕಾರಣವಾಗಿರುವುದು (2,33,143 ರೂ.)

(4) ಕೌನ್ಸಿಲ್‌ನಲ್ಲಿ ಒಗ್ಗಟ್ಟಿಲ್ಲದೆ ಇರುವ ಕಾರಣದಿಂದ ಸರ್ಕಾರಕ್ಕೆ ಮರುಪಾವತಿ ಮಾಡ ಬೇಕಾದ ಸಾಲವು ಹೇರಳವಾಗಿ ನಿಂತಿರುವುದು. (10,37,514-00 ರೂ. ತಾ 31-3-1969ಕ್ಕೆ).

(5) ಕೌನ್ಸಿಲ್ಲಿನ ಈಗಿನ ಸನ್ನಿವೇಶದಲ್ಲಿ ಪಾಣಿಪರಾನ ಸಾಗರದಿಂದ ಚಿತ್ರದುರ್ಗ ಪವನ್ನಿಗೆ ಬೃಹದಾಕಾರವಾದ ನೀರು ಸರಬರಾಜು ಯೋಜನೆಯನ್ನು ಸಮರ್ಪಕವಾಗಿ ಪೂರೈಸಲು ಅಸಮರ್ಥವಾಗಿರುವುದು. ಮತ್ತು ಈ ಯೋಜನೆಯ ಸಾಲಕ್ಕಾಗಿ ಪುರಸಭೆಯ ಆಯವ್ಯಯ ಅಂದಾಜಿನಲ್ಲಿ ಸಾಕಾದಷ್ಟು ಹಣ ಅವಕಾಶ ಮಾಡಿಕೊಳ್ಳದೆ ಇರುವುದು. (1969-70ರಲ್ಲಿ ಅಸಲು ಮತ್ತು ಬಡ್ಡಿಗಾಗಿ 6,83,750 ರೂ. ಗಳು).

(6) ಪುರಸಭೆಗೆ ಸಂಬಂಧಪಟ್ಟ ಅನೇಕ ಗುತ್ತಾ ಬಾಬುಗಳ ಅವಧಿ ಪೂರ್ತಿಸಿದ ಮೇರೆ ಹೊಸದಾಗಿ ಹರಾಜು ಮಾಡಲು ಕೌನ್ಸಿರ್ ಸಾಕಾದಷ್ಟು ಕ್ರಮ ತೆಗೆದುಕೊಳ್ಳದೆ ಇರುವುದು.

ಅಲ್ಲದೆ 1964ರ ಪುರಸಭಾ ಕಾಯಿದೆ ಪ್ರಕಾರ ಇನ್ನೂ ಅನೇಕ ಹೊಣೆಗಾರಿಕೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಕೌನ್ಸಿರ್ ಅಸಮರ್ಥವಾಗಿರುವುದು. ಈ ರೀತಿ ಷೋಕಾಸ್ ನೋಟೀಸ್ ಕೊಟ್ಟಿದ್ದೀರಿ. Is it not a fact that on account of all these reasons you have superseded the Municipal Council ? 12 ಜನ ಮಾಡಿರುವ ಆಪಾದನೆಗಳು ಹುರುಳಿಲ್ಲ ಎಂದು ಹೇಳಿದರೆ ಇದರಲ್ಲಿ ಯಾವುದು ನಿಜ ಎಂದು ಶ್ರೀಮಾನ್ ಬಿ. ಎಂ. ಪಾಟೀಲರು ತಿಳಿಸುತ್ತಾರೆಯೇ ?

ಶ್ರೀ ಬಿ. ಎಂ. ಪಾಟೀರ್. –12 ಜನ ಅಧ್ಯಕ್ಷರ ಮೇರೆ ಏನು ಆಲಗೇಷನ್ಸ್ ಮಾಡಿದ್ದಾರೆ ಅದರಲ್ಲಿ ಹುರುಳಿಲ್ಲ. ಈ ಆಪಾದನೆ ಮಾಡಿರುವುದು ಅವರು ಸರಿಯಾಗಿ ಮುನಿಸಿಪಲ್ ಆಫೀಸ ಕಾರ್ಯಗಳನ್ನು ನಡೆಸುತ್ತಾ ಇಲ್ಲವೆಂದು. ಅದಕ್ಕೋಸ್ಕರ ಅದನ್ನು ಸೂಪರ್‌ಸೀಡ್ ಮಾಡಿದ್ದೇವೆ.

Peace Corps Volunteers in Bidar District

347. Sri V. N. PATIL. (Humnabad).—

Will the Minister for Development be pleased to state :—

(*a*) the number of Peace Corps Volunteers working in Bidar District (Talukwise and Villagewise figures may be supplied) ;

(*b*) the number of such volunteers in Hummabad Taluk ;

(*c*) the arrangements made for their lodging, whether in privately hired houses or in Government Quarters and who is meeting their expenses ;

(*d*) the Salary or honorarium or stipend that is being paid to the Peace Corps Volunteers by the Government ;

(*e*) the necessity felt for such volunteers to work in Education and other Institutions ;

(*f*) whether it has come to the notice of Government that during the District Seminar of 4th Five Year Plan held at Bidar, the Seminar has unanimously recommended to the Government against the continuance of Peace Corps Volunteers in Bidar District ;

(*g*) if so, the reasons for permitting these volunteers to function under different names in Bidar District, in spite of the representative body of Bidar District, recommending against the continuance of these Volunteers ?

Sri P. M. NADGOUDA (Minister for Development).—

(*a*) 8.

Men	4
Women	4

1. *Bidar Taluk*

(1) Naubad Village	2
(2) Bagdal	2

II Humnabad Taluk

(1) Humnabad	2
(2) Nirna	2

(*b*) 4 [as detailed in item 2 against reply to (*a*) above].

(*c*) 2 Volunteers, ... Accommodated in hire Building. Naubad Village

2 Volunteers ... Bagdal Village — Accommodated in T.D.B. Guest House up to 5-9-1969 for want of accommodation. Now accommodated in Gramasevaks Quarters at Bagdal.

2 Volunteers, ... Humnabad Village — Accommodated in Block Quarters.

2 Volunteers, ... in Nirna Village — Temporary accommodations are provided in a small portion of the School for want of accommodation. Expenditure on rent is debited to the Budgetary provision of the Horticultural Department.

(*d*) No salary, honorarium or stipend is paid to Volunteers by Government.

(*e*) Indents for the services of Volunteers are placed on receipt of requisitions from the Institution and Departments concerned with a view to take full advantage of their technical knowledge in various developmental fields.

(*f*) There was only a mention but no specific reference to Peace Corps Volunteers in the deliberations of the District Seminar on IV Five Year Plan. Hence no suggestion against the continuance of the Volunteers was received by Government.

(*g*) The question does not arise.

ಶ್ರೀ ಪಿ. ಎನ್. ಪಾಟೀಲ್.—ಡಿಸ್ಟ್ರಿಕ್ಟ್ ಪೆಪಿತಾಂಗೆ ನಾನೇ ಅಧ್ಯಕ್ಷನಾಗಿದ್ದೆ. ಅಲ್ಲಿ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳು ಬಂದು ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ನಿರುದ್ಯೋಗಿ ಜನರಿದ್ದಾರೆ ಎಷ್ಟೋ ಜನ ಟೆಕ್ನೀಷಿಯನ್ಸ್ ಇದ್ದಾರೆ. ಅವರಿಗೆ ಕೆಲಸ ಕೊಡುವುದಕ್ಕೆ ಸಾಧ್ಯವಿಲ್ಲದೆ ಇದೆ. ಪರಕೀಯರು, ಪರದೇಶದವರು ಬಂದು ನಮ್ಮಲ್ಲಿ ಯಾವ ಟೆಕ್ನಿಕಲ್ ಅಸಿಸ್ಟೆನ್ಸ್ ಸಹ ಕೊಡುವುದಕ್ಕೆ ಸಾಧ್ಯವಿಲ್ಲ. ವಿಯಟ್ನಾಂನಲ್ಲಿ ಕೋಟ್ಯಾಂತರ ಜನರ ರಕ್ತವನ್ನು ಹರಿಸುತ್ತಿದ್ದಾರೆ; ಅಲ್ಲಿ ವಾರ್ ಸ್ಟೋಗಾನ್ ಹೇಳುತ್ತ ಇಲ್ಲಿ ಪೀಸ್ ಕೋರ್ ವಾಲಂಟೀರ್ಸ್ ಎಂದು ಕಳಿಸಿದ್ದಾರೆ ಮುಂತಾಗಿ ನಿರ್ಣಯ ಮಾಡಿ ಕಳಿಸಲಾಗಿದೆ. ಇದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಸದಸ್ಯರು ಮೂರು ನಾಲ್ಕು ಪ್ರಶ್ನೆಗಳನ್ನು ಕೂಡಿ ಕೇಳಿದ್ದಾರೆ. ಬದರೆಯಲ್ಲಿ ವಾಲಂಟೀರ್ ಕೋರ್ ಇದೆ. ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಆದಂಥ ತೀರ್ಮಾನದ ಪ್ರಕಾರ ಮಾಡಿದ್ದೇವೆ.

American Peace Corps

480. Sri SADASHIVAPPA PATIL (Deodurg).—

Will the Minister for Development be pleased to state :—

(*a*) the number of American Peace Corps Volunteers in Mysore State;

(*b*) the work done by Peace Corps Volunteers;

Sri P. M. NADGOUDA (Minister for Development).—

(*a*) 61. Details as per list appended.

(*b*) As explained in the note placed on the Table of the House.

LIST OF VOLUNTEERS

No. of Volunteers	Department to which they are allotted	Arrival	Period of assignment
16	Animal Husbandry Department (Poultry Section).	September 1968.	September 1970
1	Agriculture ...	October 1966	August 1969 *
13	Agriculture ...	October 1968	December 1970
10	Agriculture ...	December 1968.	January 1971
18	Horticulture Department.	December 1968.	January 1971
3	Secretaries ...	December 1967.	December 1969
		June 1968	June 1970
16			

*Extension in the period of stay is being granted until March 1970.

Sri J. P. SARWESH.—Will the State Government write to the Government of India to find out through an independent agency whether these American Peace Corps Volunteers are really technically qualified persons or people who are unemployed in America who are packed to India ?

† Sri P. M. NADGOUDA.—This question does not arise, since the State Government has already taken a decision that further indents for these volunteers may not be made.

Sri V. N. PATIL.—I would like to know why you have provided accommodation to these volunteers in the Block Development offices and school buildings ?

Sri P. M. NADGOUDA.—There is no other accommodation available and hence we have provided them accommodation in the Block Development offices and School buildings.

1-30 P. M.

ಶ್ರೀ ಸದಾಶಿವಪ್ಪ ಪಾಟೀಲ್.—ಈ ಸ್ವಯಂಸೇವಕರು ಅವರ ಸಂಸ್ಕೃತಿಯನ್ನು ನಮ್ಮಲ್ಲಿ ಬೀರಿ ಸಾಧ್ಯವಿರುವನ್ನು ನಮ್ಮ ದೇಶದ ಸಮಾಚಾರವನ್ನು ತಮ್ಮ ದೇಶಕ್ಕೆ ತಿಳಿಸಲು ಇಲ್ಲಿದ್ದಾರೆಂದು ತಿಳಿದುಬಂದಿದೆ. ಅದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಪಿ. ಎಂ. ನಾಡಗೌಡ.—ಮುಂದಕ್ಕೆ ಈ ಸ್ವಯಂಸೇವಕರನ್ನು ತೆಗೆದುಕೊಳ್ಳಬಾರದೆಂದಿದ್ದೇವೆ. ಸಂಸ್ಕೃತಿಯ ವಿಚಾರದಲ್ಲಿ ಅವರು ಹೇಳುವುದು ಅಷ್ಟು ಸಮಂಜಸವಾಗಿಲ್ಲ. It is an insult to teach culture to a poor man.

ಶ್ರೀ ಎಚ್. ಬಿ. ಜ್ವಾಲನಯ್ಯ.—ಇವರನ್ನು ತೆಗೆದುಕೊಳ್ಳಲೇಬೇಕೆಂದು ಕೇಂದ್ರ ಸರಕಾರ ಒತ್ತಾಯಮಾಡಿದೆಯೇ ? ಇವರು ಸಂಸ್ಥಾನದಲ್ಲಿ ಮಾಡಿರುವ ಕೆಲಸವೇನು ?

ಶ್ರೀ ಪಿ. ಎಂ. ನಾಡಗೌಡ.—ತಾಂತ್ರಿಕ ದೃಷ್ಟಿಯಿಂದ ಅವನ್ನು ತೆಗೆದುಕೊಳ್ಳಲಾಗಿದೆ. ಪ್ಲಾನಿನಲ್ಲಿ ಚೆಕ್ನಿಕಲ್ ನೋ ಹೌ ಕೊಡುವ ಒಂದು ಅಗ್ರಿಮೆಂಟ್ ಇದೆ. ಅದಕ್ಕನುಗುಣವಾಗಿ ರಾಜ್ಯ ಸರಕಾರ ತೆಗೆದುಕೊಂಡಿದೆ. ಮುಂದೆ ಈ ಪ್ರಶ್ನೆ ಬರುವುದಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಅಮೇರಿಕ ಅಲ್ಲದೆ ಉಳಿದ ದೇಶದ ಜನರು ಇವರಲ್ಲಿ ಯಾರಾದರೂ ಇರುವರೇ ?

ಶ್ರೀ ಪಿ. ಎಂ. ನಾಡಗೌಡ.—ಇದ್ದಾರೆ, ಜರ್ಮನಿ ದೇಶದವರೂ ಇದ್ದಾರೆ.

Sri M. S. KRISHNAN.—Are you aware that on a report of the Government of India, it has been found that most of these Peace Corps members are agents of the C. I. A. of America and hence a recommendation has been made that not only should they not be got in but they should be sent away and in accordance with that recommendation the West Bengal and Kerala Governments have already taken a decision ? Will you please take a decision in the same direction ?

Sri P. M. NADGOUDA.—I am not aware of such a recommendation.

ಶ್ರೀ ಬೋಳ ರಘುರಾಮಶೆಟ್ಟಿ.—ಅಮೇರಿಕ ಮುತ್ತಿತರ ದೇಶಗಳು ನಮಗೆ ಸಹಾಯ ಮಾಡುವುದರಿಂದ ಸ್ವಯಂಸೇವಕರು ಕೆಲಸಮಾಡುವರು. ಅದರಿಂದ ಸರಕಾರಕ್ಕೆ ಸಹಾಯವಾಗಿದೆಯೋ ಅಥವಾ ನಷ್ಟವಾಗಿದೆಯೋ ?

ಶ್ರೀ ಪಿ. ಎಂ. ನಾಡಗೌಡ.—ಸಹಾಯವಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಈ ಸ್ವಯಂಸೇವಕರು ಕೆಲಸಮಾಡುವುದು ಕೇಂದ್ರ ಸರಕಾರದ ಪಾಲಸಿ ಪ್ರಕಾರವೋ ಅಥವಾ ರಾಜ್ಯ ಸರಕಾರದ ಪಾಲಸಿ ಪ್ರಕಾರವೊ ?

ಶ್ರೀ ಪಿ. ಎಂ. ನಾಡಗೌಡ.—ಕೇಂದ್ರ ಸರಕಾರದ ಪಾಲಸಿ ಪ್ರಕಾರ.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ಸ್ವಯಂಸೇವಕರ ಬಗ್ಗೆ ನಮ್ಮ ದೇಶದಲ್ಲಿ ಬಹಳ ಬುದ್ಧಿವಂತರೆಲ್ಲಾ ಅನುಮಾನ ವ್ಯಕ್ತಪಡಿಸಿದ್ದಾರೆ, ಅವರು ಬರೀ ಶಾಂತಿ ಕೆಲಸ ಮಾಡುತ್ತಿಲ್ಲ, ರಾಜಕೀಯ ಕೂಡ ಮಾಡುತ್ತಾ ಇದ್ದಾರೆ ಎಂಬ ಅನುಮಾನವಿರುವುದರಿಂದ, ಅವರಿಲ್ಲದೆ ನಮ್ಮ ದೇಶದಲ್ಲಿ ಹಾರ್ಟಿಕಲ್ಚರರ್, ಅಗ್ರಿಕಲ್ಚರರ್ ಡಿಪಾರ್ಟ್‌ಮೆಂಟುಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲ ಎಂದು ತಮ್ಮ ಅಭಿಪ್ರಾಯವೇ ? ಅಥವಾ ಅವರು ಬೇಕಾಗಿಲ್ಲ ಎಂದು ಹೇಳುವುದಕ್ಕೆ ತಮಗೆ ಏನು ಕಷ್ಟ ?

ಶ್ರೀ ಪಿ. ಎಂ. ನಾಡಗೌಡ.—ಬೇಕಾಗಿಲ್ಲ ಎಂದು ಹೇಳಿಬಿಟ್ಟಿದ್ದೇವೆ. ಮೊದಲಿನ ಅಗ್ರಿಮೆಂಟ್ ಪ್ರಕಾರ ತೆಗೆದುಕೊಳ್ಳಬೇಕಾಗಿತ್ತು. ಮುಂದೆ ಕರೆಸಬೇಕಾಗಿಲ್ಲ ಎಂದು ಹೇಳಿದ್ದೇವೆ.

Sri A. R. PANCHAGAVI.—Is Government aware that wherever these Peace Corps volunteers are posted there is a fresh outlook regarding contour irrigation bunding and mechanised cultivation ?

Sri P. M. NADGOUDA.—Yes, Sir.

ಶ್ರೀ ಎಂ. ನಾಗಪ್ಪ.—ಈ ಪಾಲಂಟಿಯುರುಗಳಿಗೆ ಕನ್ನಡ ಭಾಷೆ ಬರದೇ ಇದ್ದು ಅವರಿಂದ ಹಳ್ಳಿಯ ಜನತೆಗೆ ಯಾವ ವಿಧವಾದ ಪ್ರಯೋಜನವೂ ಆಗಿಲ್ಲ, ತಾವು ಯಾವ ಉದ್ದೇಶದಿಂದ ಅವರನ್ನು ಕರೆಸಿದ್ದಿರೋ ಅದು ಸಾಧಿತವಾಗುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅದರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಅವರು ಬೇಡ ಅಂತ ಹೇಳುತ್ತೀರಾ ? ಎರಡನೆಯದಾಗಿ ಮೈನೂರು ರಾಜ್ಯದಲ್ಲೆ ಹೆಚ್ಚಾಗಿ ಇವರನ್ನು ತೆಗೆದುಕೊಂಡಿದ್ದೀರಂತೆ, ಇದರ ಬಗ್ಗೆ ಏನು ನೀತಿ ಇಟ್ಟುಕೊಂಡಿದ್ದೀರಿ ?

ಶ್ರೀ ಪಿ. ಎಂ. ನಾಡಗೌಡ.—ಅವರನ್ನು ಇಂಡೆಂಟ್ ಮಾಡುವ ಮುಂಚೆ ಯಾವರಾಜ್ಯ ಸರ್ಕಾರದವರು ಅವರನ್ನು ತೆಗೆದುಕೊಳ್ಳುತ್ತಾರೆ, ಅವರ ಪ್ರತಿನಿಧಿಗಳು, ಅಧಿಕಾರಿಗಳು ಆ ದೇಶಗಳಿಗೆ ಹೋಗಿ ಅವರಿಗೆ ಆಯಾ ಭಾಷೆಯನ್ನು ಕಲಿಸಿ ನಂತರ ತೆಗೆದುಕೊಳ್ಳುತ್ತಾ ಇದ್ದಾರೆ. ಅದ್ದರಿಂದ ಅವರಿಗೆ ಕನ್ನಡ ಬರುತ್ತದೆ, ನಮಗಿಂತ ಚೆನ್ನಾಗಿ ಮಾತನಾಡ ತ್ತಾರೆ ಎಂದು ಹೇಳುತ್ತೇನೆ.

Sri B. P. KADAM.—Is it not a fact that there are specific allegations that these Peace Corps volunteers do not teach peace but they preach hatred ?

Sri P. M. NADGOUDA.—Government is not aware of the fact. If any such instance is brought to our notice Government will see that necessary action is taken against such volunteers.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸಚಿವರು ಈ ಪಾಲಂಟಿಯುರುಗಳಿಂದ ಸರ್ಕಾರಕ್ಕೆ ಲಾಭವಾಗಿದೆ ಎಂದು ಅನ್ನುವ ಮಾತನ್ನು ಹೇಳಿದರೂ ಸಹ ಈಗ ಅದನ್ನು ಬಂದ್ ಮಾಡಿದ್ದೇವೆ ಅಂತ ಹೇಳಿದರು. ಈ ಪಾಲಂಟಿಯುರುಗಳಿಗೆ ಹೆದರಿ ಬೇಡ ಅಂತ ಬಂದ್ ಮಾಡಿದಿರಾ ಅಥವಾ ಬೇರೆ ರೀತಿಯಿಂದ ಏನಾದರೂ ಒಳಲಾಭ ದೊರಕಿ ಬಂದ್ ಮಾಡಿದರಾ ? ಏಕೆಂದರೆ ಉತ್ತಮ ರೀತಿಯಿಂದ ಕೆಲಸ ಮಾಡುತ್ತಾರೆ ಎಂಬ ಅಭಿಪ್ರಾಯ ಇದ್ದರೂ ಸಹ ಈ ರೀತಿಯ ಧೋರಣೆಯನ್ನು ವಹಿಸಿ ರಾಜ್ಯಕ್ಕೆ ಮತ್ತು ರಾಜ್ಯದ ಜನತೆಗೆ ಲುಕ್ಸಾನು ಮಾಡುತ್ತಿದ್ದೀರಿ ಎಂಬ ಮಾತನ್ನು ಒಪ್ಪುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರದ ಅಗ್ರಿಮೆಂಟ್ ಏನಿದೆ ಅದು ಮುಗಿಯಿತು ಅದಕ್ಕೆ ಬಂದ್ ಮಾಡಿದ್ದೇವೆ.

Sri B. B. SAYANAK.—When there is a Shanti Sena of Vinoba Bhave, what is the use of this Peace Corps ?

(No answer)

ಶ್ರೀ ಪಾಟಾಳ್ ನಾಗರಾಜ್.—ಈ ಶಾಂತಿದಳದವರು ನಮ್ಮ ದೇಶದಲ್ಲಿ ಬಂದು ಅನೇಕರನ್ನು ಮತಾಂತರ ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಇಲ್ಲ.

Major and Medium Irrigation Projects to be taken up under IV Five Year Plan

370. Sri P. VENKATAGIRIYAPPA (Kolar).—Will the Chief Minister be pleased to state :—

(*a*) the major and medium Irrigation Projects that are to be taken up in the Fourth five Year Plan and the estimated amounts to be incurred on each of the projects ;

(*b*) the ways and means of the Government to mobilise necessary resources with a view to complete the project within the Fourth Five Year Plan ;

(*c*) whether there is any proposal before Government to get foriegn assistance to any specific Project ?

Sri VEERENDRA PATIL (Chief Minister).—

(*a*) *Vide* Statement appended.

(*b*) A committee has been set up to examine this.

(*c*) Yes.

STATEMENT

List of New Major and Medium Irrigation Projects out of which projects are proposed to be taken up during IV Plan subject to the availability of funds.

	Name of Project	Outlay proposed during IV Plan
1	Bhima Irrigation Project	
2	Ghataprabha Stage–III	
3	Karanja Project	
4	Yagachi Project	
5	Upper Tungabhadra Project	
6	Maskinala Project	
7	Sathinala Project	
8	Amarja Project	
9	Durgadahalla Project	
10	Madag Masur Project	
11	Hirenala Project	
12	Hulikere Project	
13	Gundal Project	158.00 lakhs
14	Bolare Project	
15	Uttarapinakini Project	
16	Haladi Project	
17	Sagaredoddakere Project	
18	Feeder to Dharmapur Tank	
19	Feeder to Ranikere Tank	
20	Anicut across Hebbahalla	
21	Uduthorehalla Project	
22	Haihole Project	
23	Taraka Project	
24	Narihalla Project	
25	Manchanabele Project	
26	Dandavathy Project	

ಶ್ರೀ ಪಿ. ವೆಂಕಟಗಿರಿಯಪ್ಪ.—ಇದಕ್ಕೆ ಬೇಕಾದಂತಹ ಹಣವನ್ನು ಒದಗಿಸಲಿಕ್ಕೆ ಒಂದು ಸಮಿತಿಯನ್ನು ನೇಮಿಸಲಾಗಿದೆ ಎಂದು ಹೇಳಿದ್ದೀರಿ. ಈ ಸಮಿತಿ ಇದುವರೆಗೂ ಏನಾದರೂ ನೀರಿತ್ತೇ ? ತೀರ್ಮಾನಗಳನ್ನೇನಾದರೂ ಕೈಗೊಂಡಿದೆಯೇ ಎಂಬುದನ್ನು ಈ ಸಭೆಗೆ ತಿಳಿಸುವುದಕ್ಕೆ ಆಗುತ್ತದೆಯೇ ?

†ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಘನವಾನ್ ಮಿನಿಸ್ಟರು ಇದರ ಬಗ್ಗೆ ಈ ಹಿಂದೆ ಬಂದ ಪ್ರಶ್ನೆಗೆ ಎಲ್ಲ ಹೇಳಿರಬಹುದು ಎಂದು ಅಂದುಕೊಂಡಿದ್ದೇನೆ. ಈ ಸಮಿತಿ ಒಂದೆರಡು ಸಲ ಸೇರಿತ್ತು, ಆದರೆ ಇನ್ನೂ ಯಾವುದೇ ರಿಪೋರ್ಟ್‌ನ್ನೂ ತಯಾರು ಮಾಡಿಲ್ಲ. ಸರ್ಕಾರದವರಿಗೆ ಒಪ್ಪಿಸಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ನಮ್ಮ ಮುಂದೆ ಇರತಕ್ಕ ಪಟ್ಟಿಯ ಜೊತೆಗೆ ಇನ್ನೂ ಕೆಲವು ಯೋಜನೆಗಳನ್ನು ಸೇರಿಸತಕ್ಕ ಸಂಭವವಿದೆಯೇ, ಈ ಪಟ್ಟಿಯನ್ನು ಇನ್ನೂ ದೊಡ್ಡದನ್ನಾಗಿ ಮಾಡತಕ್ಕ ಅವಕಾಶವುಂಟೇ ಮತ್ತು ಇವುಗಳಿಗೆಲ್ಲಾ ಈಗ ಒದಗಿಸಿರತಕ್ಕ ಹಣ ಇದು ಇಷ್ಟೇನೋ ಅಥವಾ ಇನ್ನೂ ಹೆಚ್ಚಿಗೆ ಏನಾದರೂ ಇದೆಯೋ ?

ಶ್ರೀ ವೀರೇಂದ್ರ ಪಾಟೀಲ್.—ಅದು ಪ್ಲಾನ್‌ನಲ್ಲಿ ನಮೂದಿಸಿರತಕ್ಕ ಹಣ, ಪ್ಲಾನ್ ಪೀರಿಯೆಡ್ಡಿಗೆ ಎಷ್ಟು ಹಣವನ್ನು ನಮೂದಿಸಬೇಕಾಗಿತ್ತೋ ಅಷ್ಟನ್ನು ಮಾತ್ರ ಅಲ್ಲಿ ನಮೂದಿಸಿದೆ. ಆದರೆ ನಾವು ಈ ರಿಸೋರ್ಸಸ್ ಸಮಿತಿಯನ್ನು ಮಾಡಿದ ಉದ್ದೇಶ ಬೇರೆ. ಇಷ್ಟೇ ಹಣ ಸಾಕು ಅನ್ನುವುದಾಗಿದ್ದರೆ ರಿಸೋರ್ಸಸ್ ಕಮಿಟಿಯನ್ನು ಮಾಡತಕ್ಕ ಅವಶ್ಯಕತೆಯೇ ಇರಲಿಲ್ಲ. ನೀರಾವರಿ ಬಾಬುಗಳಿಗೆ ಆದಷ್ಟೂ ಹೆಚ್ಚು ಹಣವನ್ನು ಒದಗಿಸಬೇಕು ಎಂಬುದನ್ನು ಆಲೋಚಿಸಲು ಮತ್ತು ಅದಕ್ಕೆ ಮಾರ್ಗಗಳನ್ನು ಕಂಡುಹಿಡಿಯಲು ಆ ಸಮಿತಿಯನ್ನು ಮಾಡಲಾಯಿತು. 4ನೇ ಪಂಡ ವಾರ್ಷಿಕ ಯೋಜನೆಯಲ್ಲಿ ನೀರಾವರಿ ಬಾಬುಗಳಿಗೆ ಹೆಚ್ಚು ಹಣವನ್ನು ಒದಗಿಸಬೇಕೆಂಬುದೇ ಸರ್ಕಾರದವರ ಉದ್ದೇಶ.

ಶ್ರೀ ಎಸ್. ಎಂ. ಗುರೆಡ್ಡಿ.—ಇಲ್ಲ (ಸಿ) ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದೆ. ಹಾಗಾದರೆ ಆ ಪ್ರಾಜೆಕ್ಟ್ ಯಾವುದು ?

ಶ್ರೀ ವೀರೇಂದ್ರ ಪಾಟೀಲ್.—ಅಪ್ಪರ್ ಕೃಷ್ಣಾ ನದಿಯ ಬಗ್ಗೆ ವರ್ಲ್ಡ್ ಬ್ಯಾಂಕಿನವರಿಂದ ಸಾಲ ಕೇಳಿದ್ದೆವು. ಅವರೂ ಕೂಡ ಅವರ ಟೀಮನ್ನು ಕಳುಹಿಸಿದ್ದರು. ಅವರ ವರದಿ ಇನ್ನೂ ಬಂದಿಲ್ಲ. ಅದು ಕೇಂದ್ರದವರ ಪರಿಶೀಲನೆಯಲ್ಲಿದೆ.

Sri H. M. CHANNABASAPPA.—Against the provision of Rs. 158 lakhs, what is the total estimated cost of these projects ?

Sri VEERENDRA PATIL.—I have not worked out the total estimated cost of all the projects. I have got the estimated cost of each project. If the hon. Member wants it, I will furnish that information. If he wants the entire total cost of the irrigation projects, I am not in a position to give it.

Sri C K. RAJAIAH SHETTY.—Is it not desirable to complete all the pending projects and make them productive and then think of these new projects?

Sri VEERENDRA PATIL.—This is one of the suggestions. If we go by that suggestion it may not be possible to start any new projects in the five year plan periods. We cannot follow that procedure.

ಶ್ರೀ ಎಂ. ನಾಗಪ್ಪ.—ಆ ವರ್ಲ್ಡ್ ಬ್ಯಾಂಕಿನವರಿಗೆ ಅಪ್ಪರ್ ಕೃಷ್ಣಾ ಯೋಜನೆಯ ಮೊದಲನೇ ಸ್ಟೇಜಿನ ಕಾರ್ಯಗಳ ಪ್ಲಾನನ್ನು ಮಾತ್ರ ಕೊಟ್ಟಿದ್ದಾರೋ ಅಥವಾ ಎರಡನೇ ಸ್ಟೇಜಿನ ವರ್ಕನ್ನೂ ಸೇರಿಸಿ ಕೊಟ್ಟಿದ್ದೀರಾ ?

ಈಗ ಏನಾಗಿದೆ ಎಂದರೆ ಮುಂಚಿತವಾಗಿಯೇ ನಿಮಗೆ ಬೇಕಾದ ಬಿಲ್ಲನ್ನು ತರುತ್ತೀರಿ. ಅದರ ಕಾಪಿಯನ್ನೂ ಸಹ ನಮಗೆ ಕೊಡುವುದಿಲ್ಲ. ಒಂದು ದಿವಸ ಮುಂಚಿತವಾಗಿಯಾದರೂ ಫೈನಾನ್ಷಿಯರ್ ಮೆಮೋರ್ಯಾಂಡಂ ಏನು ಇದೆ ಅದು ಕೂಡ ಕೊಡುವುದಿಲ್ಲ. ಲೆಜಿಸ್ಲೇಚರ್ ಸೆಕ್ರೆಟೇರಿಯೆಟ್‌ನವರು ಒದಗಿಸಬೇಕಾದ ಕಾಪಿಯನ್ನು ಒದಗಿಸುತ್ತಾ ಇಲ್ಲ. ಇಲ್ಲದೇ ಹೋದರೆ ತಾವು ರೂಲನ್ನು ಸಸ್ಪೆಂಡ್ ಮಾಡಬೇಕು. ಇದಕ್ಕಿಂತ ಮುಂಚೆ ಎರಡು ಬಿಲ್ಲು ಬಂದಿತ್ತು. ಅದರ ಕಾಪಿಯನ್ನು ಕೊಡಲಿಲ್ಲ. ಇದನ್ನು ಸೆಕ್ರಟರಿಯವರ ಗಮನಕ್ಕೆ ತಂದೆ. ಮುಂದಾದರೂ ಈ ಬಿಲ್ಲಿನ ಕಾಪಿಯನ್ನು ಕೊಡಿ. ಸರಿಯಾಗಿ ಇಂಟ್ರೊಡಕ್ಷನ್ ಆಗುತ್ತದೆಯೇ ಇಲ್ಲವೇ ಎನ್ನುವುದನ್ನು ನೋಡಬೇಕು. ಈಗ ಶ್ರೀಮಾನ್ ಪಿ. ಎಂ. ನಾಡಗೌಡರು ಇಂಟ್ರಡ್ಯೂಸ್ ಮಾಡುವ ಬಿಲ್ಲು ಏನು ಇದೆ The Mysore Weights and Measures (Enforcement) (Amendment) Bill, 1969 ಈ ಕಾಪಿಯನ್ನು ಕೊಟ್ಟಿಲ್ಲ. ಮತ್ತು ಅಗ್ರಿಕಲ್ಚರಿಸ್ಟ್ ಮಿನಿಸ್ಟರ್ ಅವರು ಇಂಟ್ರಡ್ಯೂಸ್ ಮಾಡತಕ್ಕಂಥ ಬಿಲ್ಲು ಏನು ಇದೆ The Mysore Silkworm Seed and Cocoon (Regulation of Production, Supply and Distribution) (Amendment) Bill, 1969 ಇದರ ಕಾಪಿಯನ್ನೂ ಕೊಟ್ಟಿಲ್ಲ. ತಾವು ದಯವಿಟ್ಟು ಇದರಲ್ಲಿ ತರಕೂಡದು. ಇಂತಹ ಆಬ್ಜೆಕ್ಷನ್ ಇದ್ದರೆ ರೂಲು ಸಸ್ಪೆಂಡ್ ಮಾಡಲು ಪವರ್ ಇದೆ. ಈಗ ಕಾಯಿದೆ ಮಂತ್ರಿಗಳು ಏನು ಮಾಡುತ್ತಿದ್ದಾರೆ ಎಂದು ಕೇಳುತ್ತೇನೆ. ಹಿಂದೆ ಬೆಂಗಳೂರು ಕಾರ್ಪೊರೇಷನ್ ಅಮೆಂಡ್‌ಮೆಂಟ್ ಬಿಲ್ ತಂದಾಗ ಮುಂದಕ್ಕೆ ಹಾಕಿ, ಗವರ್ನರ ಹತ್ತಿರ ಸೈನ್ ಹಾಕಿಸಿಕೊಂಡು ಇಂಟ್ರಡ್ಯೂಸ್ ಮಾಡಿದರು. ಮುಂದೆ ಇಂಥಾದ್ದಕ್ಕೆ ಅವಕಾಶ ಕೊಡದೆ ಮೊದಲೇ ಬಿಲ್ ಕಾಪಿಯನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

Mr. SPEAKER.—The Hon. Member has made out a good point. Rules will be strictly followed.

Mysore Irrigation (Levy of Betterment Contribution and Water Rate) (Amendment) Bill, 1969.

Motion to consider—Debate Continued

(MR. DEPUTY SPEAKER in the Chair)

†ಶ್ರೀ ಎಚ್. ಶ್ರೀಕಂಠಯ್ಯ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಶ್ರೀಮಾನ್ ಪುಟ್ಟಸ್ವಾಮಿಯವರು ಈಪೊತ್ತಿನ ದಿವಸ ಸರ್ಕಾರಕ್ಕೆ ಹಣ ಇಲ್ಲ, ನಾವು ಯೋಜನೆಯನ್ನು ಕೈಗೊಳ್ಳಬೇಕಾಗಿದೆ, ಸಾರ್ವಜನಿಕರ ಹತ್ತಿರಕ್ಕೆ ಹೋಗಿ ಹಣವನ್ನು ಕೇಳಬೇಕಾದ ಪರಿಸ್ಥಿತಿಗೆ

(ಶ್ರೀ ಎಸ್. ಶ್ರೀಕಂಠಯ್ಯ)

ಬಂದಿದ್ದೇವೆ ಎಂದು ಹೇಳಿದರು. ಇದು ತಪ್ಪು ಎಂದು ಹೇಳುತ್ತೇನೆ. ಏಮಗೆ ಬೇರೆ ಮಾರ್ಗಗಳಿಂದ ಹಣ ಬರುವ ಸೂಚನೆಗಳನ್ನು ಕೊಡುತ್ತೇನೆ. ತಾವು ಈ ಬಿಲ್ಲಿನ ಮುಖಾಂತರ ನಿರೀಕ್ಷಿಸಿದಂತೆ ಸಾರ್ವಜನಿಕರಿಂದ ಹಣ ವಸೂಲಾಗುವುದು ಸಾಧ್ಯವೇ ಎಂದು ತಮ್ಮನ್ನು ಪ್ರಶ್ನಿಸಬೇಕಾಗಿದೆ. ಇದರ ಬಗ್ಗೆ ಇನ್ನೊಂದು ವಿಷಯವನ್ನು ಹೇಳಿದರು ಅದು ಏನೆಂದರೆ ಬ್ಯಾಂಕುಗಳಲ್ಲಿ ಜಮೀನು ಒತ್ತೆ. ಇಟ್ಟು ಅವರು ಸರ್ಕಾರಕ್ಕೆ ಸಾಲ ಕೊಡುವುದು ಎಂದು. ಈಗೊತ್ತು ಹಳ್ಳಿಗಾಡಿನ ಜನರ ಪರಿಸ್ಥಿತಿ ಹೇಗಿದೆ ಎಂಬುದು ತಮಗೆ ಚೆನ್ನಾಗಿ ಗೊತ್ತಿದೆ. ಅದನ್ನು ಯೋಚನೆ ಮಾಡಬೇಕು. ರೈತರ ಋಣಪರಿಹಾರ ಮಾಡುವ ದೃಷ್ಟಿಯಿಂದ ಹಿಂದೆ ಅಗ್ರಿಕರ್‌ಚರರ್ ಡೆಟ್ ರಿಲೀಫ್ ಬರ್ ತಂದಿದ್ದರು. ಆದರಲ್ಲಿ ಶೇಕಡ 90 ಭಾಗ ಜನ ಮೊದಲೇ ತಮ್ಮ ಆಸ್ತಿಪಾಸ್ತಿಗಳನ್ನೂ ಈಡು ಮಾಡಿಬಿಟ್ಟಿದ್ದಾರೆ. ಕೋಆಪರೇಟಿವ್ ಬ್ಯಾಂಕಿಗೆ, ರ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ಇನ್ನೂ ಇತರ ಖಾಸಗೀ ಬ್ಯಾಂಕುಗಳಿಗೆ ಈಡು ಮಾಡಿದ್ದಾರೆ. ಇಂಥ ಪರಿಸ್ಥಿತಿ ಇರುವಾಗ ಸರ್ಕಾರದವರು ಶಿಫಾರಸ್ಸು ಮಾಡಿ ಕೊಡಿಸತಕ್ಕಂಥ ಸಾಲ ಬ್ಯಾಂಕುಗಳಿಂದ ಸಿಕ್ಕುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕು. ಒಂದು ಪಕ್ಷ ಸಾಲಕೊಡಿಸಿದರು ಎಂದು ಇಟ್ಟುಕೊಳ್ಳೋಣ. ಆ ಸಾಲಕ್ಕೆ ಸರ್ಕಾರದವರು ಬಡ್ಡಿ ಕೊಡುತ್ತಾರೆಯೇ ? ಇದನ್ನು ನೋಡಿದರೆ ಯಾವನೋ ಒಬ್ಬ ಅಚ್ಚುಕಟ್ಟುದಾರನು ಪ್ರಯೋಜನ ಪಡೆಯಲು ಅವನಿಗೆ ಮಾತ್ರ ಬ್ಯಾಂಕಿನವರು ಹಣ ಕೊಟ್ಟುಬಿಡುತ್ತಾರೆ. ಇದು ಮುಖ್ಯವಾದಂಥ ಪ್ರಶ್ನೆ. ಈಗೊತ್ತು ಸಾಲದ ಹೊರೆಯನ್ನು ತೀರಿಸಿಕೊಳ್ಳಲು ಸಾಧ್ಯ ಇಲ್ಲದೇ ಇರುವ ರೈತನಿಗೆ ನೀವು ಎಲ್ಲರೂ ಸೇರಿ ಬ್ಯಾಂಕಿನಲ್ಲಿ ಸಾಲ ಕೊಡಿಸುತ್ತೀರಿ ಎಂದು ಇಟ್ಟುಕೊಂಡರೂ ಕೂಡ ಅದರ ಮೇಲಿನ ಬಡ್ಡಿಯನ್ನಾದರೂ ಕಟ್ಟುವುದಕ್ಕೆ ಒಂದು ದಾರಿ ಬೇಡವೇ ? ನೀವು ಬ್ಯಾಂಕಿನಲ್ಲಿ ಸಾಲ ಕೊಡಿಸಿದರೂ ಅವನಿಗೆ ಹಣವನ್ನು ಕಟ್ಟುವುದಕ್ಕೆ ಒಂದು ಮಾರ್ಗ ಮಾಡದೇಹೋದರೆ ಅವನಿಗೆ ಎಷ್ಟರಮಟ್ಟಿಗೆ ಸಹಾಯವಾಗಬಹುದು ಅವನು ತೆಗೆದುಕೊಂಡಿರುವ ದುಡ್ಡನ್ನು ವಾಪಸು ಮಾಡುವುದಕ್ಕಾಗುತ್ತದೆಯೇ ! ಇದರಿಂದ ನಿಮ್ಮ ಯೋಜನೆ ಸಫಲವಾಗುತ್ತದೆಯೇ ! ಇದನ್ನು ನೋಡಿದರೆ ನನಗೆ ಅಷ್ಟು ಸೂಕ್ತವಾಗಿ ಕಾಣುವುದಿಲ್ಲ.

ಈಗ ಮಸೂದೆಯನ್ನು ತಂದಿರುವ ರೀತಿಯನ್ನು ನೋಡಿದರೆ ನನಗೆ ಇನ್ನೊಂದು ತರಹ ಹೆದರಿಕೆ ಬರುತ್ತಿದೆ. ಅದನ್ನು ಮಾಡಿಲ್ಲ ಇದನ್ನು ಮಾಡಿಲ್ಲ ಎನ್ನುವ ಟೀಕೆಗೆ ನಾವು ಸರ್ಕಾರವನ್ನು ಒಳಪಡಿಸುತ್ತಿದ್ದೇವೆ. ಆದರೆ ಇನ್ನು ಮುಂದೆ ಈ ಮಸೂದೆಯಲ್ಲಿ ಹೊಸದಾಗಿ ಸೇರಿಸಬೇಕೆಂದಿರುವ ಸೆಕ್ಷನ್ 3(ಎ) ಜನರ ಮುಂದೆ ಇಟ್ಟು ಕೆಲಸಕಾರ್ಯಗಳು ಆಗದೆ ಇರುವುದರಲ್ಲಿ ನಮ್ಮ ತಪ್ಪು ಏನೂ ಇಲ್ಲ, ನಾವು ಮಾಡಬೇಕೆಂಬ ಉದ್ದೇಶವನ್ನಿಟ್ಟುಕೊಂಡಿದ್ದೇವೆ, ನೀವು ಹಣ ಕೊಟ್ಟಿಲ್ಲವಾದ್ದರಿಂದ ನಿಮ್ಮ ಕ್ಷೇತ್ರದಲ್ಲಿ ಕೆಲಸವಾಗಲಿಲ್ಲ ಎಂದು ಹೇಳಲು ಅವಕಾಶವಾಗುವಂಥ ಎಸ್ಕೇಪ್ ಕ್ಲಾಜನ್ನು ಜನರ ಮುಂದೆ ಇಟ್ಟು ಸರ್ಕಾರ ತನ್ನ ಮೇಲಿರುವ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವ ಹಾಗೆ ಇದೆ. ಇದಕ್ಕೆ ಹೊಣೆ ಯಾರು ! ಸರ್ಕಾರ ತನ್ನಲ್ಲಿ ಹಣವಿಲ್ಲ, ಸಾರ್ವಜನಿಕರಿಂದ ಹಣ ಬರಬೇಕು ಎಂದು ಹೇಳುವಾಗ ಇನ್ನೊಂದು ಪ್ರಶ್ನೆ ಬರುತ್ತದೆ. ಸಾರ್ವಜನಿಕರ ಹತ್ತಿರ ಹಣ ಕೇಳಬೇಡಿ ಎಂದು ನಾವು ಹೇಳಿದರೆ ಹಣಕ್ಕೆ ಬೇರೆ ಮಾರ್ಗವನ್ನು ತೋರಿಸಿಕೊಡಿ ಎನ್ನುವ ವಿಚಾರ ಬರುತ್ತದೆ. ಸರ್ಕಾರದಲ್ಲಿ ಹಣವಿಲ್ಲವೇ ಅಥವಾ ಇದ್ದ ಹಣವನ್ನು ಸರಿಯಾಗಿ ಉಪಯೋಗ ಮಾಡಿದ್ದಾರೆಯೇ ಎನ್ನುವುದು ಮೂಲಭೂತ ಪ್ರಶ್ನೆ. ನಪ್ಲಿಮೆಂಟರಿ ಬೇಡಿಕೆಗಳನ್ನು ನೋಡಿದರೆ ಸರ್ಕಾರದ ಹಣವನ್ನು ಯಾವರೀತಿಯಿಂದ ಹಣಕಾಸು ಶಾಖೆ ವ್ಯಯಮಾಡುತ್ತಿದೆ ಎನ್ನುವ ಸ್ಪಷ್ಟ ಚಿತ್ರವನ್ನು ನಾವು ಕಾಣುತ್ತೇವೆ. ಪಿಂಜ್ರಾಪೋರ್ ಕಂಪೆನಿಗಳಿಗೆ ಸಾಲ, ಬಳಿ ಅನಯಂತೆ ಬೆಳೆಸಿಕೊಂಡು ಬಂದಿರುವ ಸಹಕಾರ ಸಂಸ್ಥೆಗಳಿಗೆ ಸಾಲ ಹೇಗೆಕೊಡುತ್ತ ಹೋದರೆ ಹೇಗೆ ? ಇದರಲ್ಲಿ ಎಷ್ಟು ಸಾಲ ವಸೂಲಾಗಿದೆ, ಎಷ್ಟು ಸರ್ಕಾರಕ್ಕೆ ಹಿಂದಕ್ಕೆ ಬಂದಿದೆ ? ಪರಿಸ್ಥಿತಿ ಹೀಗಿರುವುದರಿಂದ ಸಾರ್ವಜನಿಕರು ಸರ್ಕಾರಕ್ಕೆ ಹಣವನ್ನು ಕೊಟ್ಟರೆ ಅದನ್ನು ಯಾವರೀತಿ ವಿತರಣೆ ಮಾಡುತ್ತೀರಿ ? ನಪ್ಲಿಮೆಂಟರಿ ಬೇಡಿಕೆಗಳನ್ನು ನೋಡಿದರೆ ಸರ್ಕಾರ ದುಂದು ವೆಚ್ಚ ಮಾಡುತ್ತಿರುವುದು ಸ್ಪಷ್ಟವಾಗಿದೆ. ಕರ್ನಾಟಕ ಪಬ್ಲಿಸಿಂಗ್ ಹೌಸ್‌ಗೆ 10 ಲಕ್ಷ ರೂಪಾಯಿ, ಕಿತ್ತೂರು ರಾಣಿ ಚೆನ್ನಮ್ಮ ಸ್ಮಾರಕ ಸಂಸ್ಥೆಗೆ 10 ಲಕ್ಷ ರೂಪಾಯಿ ಹೀಗೆಲ್ಲ ಕೊಟ್ಟಿದ್ದಾರೆ. ಇಂಥದನ್ನು ನಪ್ಲಿಮೆಂಟರಿ ಗ್ರಾಂಟಿನಲ್ಲಿ ಎಷ್ಟು ಬೇಕಾದರೂ ತೋರಿಸಬಹುದು. ಇದೆಲ್ಲ ಹಣವಲ್ಲವೇ ? ಇದನ್ನೆಲ್ಲ ಕೂಡಿ ಹಾಕಿದರೆ ಎಷ್ಟು ಕೋಟಿ ರೂಪಾಯಿ ಆಗುತ್ತದೆ ! ಹೀಗಿರುವಾಗ ಯಾವ ನಾಲಗೆಯಿಂದ ಸಾರ್ವಜನಿಕರಿಂದ ಹಣವನ್ನು ಕೇಳುತ್ತೀರಿ ! ನೀವು ರಾಜ್ಯ ಸರ್ಕಾರದ ಸಾಲವನ್ನು ಎತ್ತಬೇಕು ಎಂದರೆ ಸೇಕಡ ಎಂಟು, ಒಂಬತ್ತರಷ್ಟು ಬಡ್ಡಿ ಕೊಡುತ್ತೇವೆಂದು ಆಸೆಯನ್ನು ತೋರಿಸಿದರೆ ಆಗ ಸಾಲ ಪೂರ್ತಿಯಾಗಿ ಭರ್ತಿಯಾಗುತ್ತದೆಯೇ

ಹೊರತು ವಾಲಂಟರಿಯಾಗಿ ಸರ್ಕಾರದಮೇಲೆ ಭರವಸೆಯನ್ನು ಇಟ್ಟು ಯಾರೂ ಹಣವನ್ನು ಕೊಡುವುದಿಲ್ಲ. ಸರ್ಕಾರದ ಹಣಕಾಸಿನ ರೀತಿನೀತಿಯ ವಿಚಾರದಲ್ಲಿ ಸಾರ್ವಜನಿಕರಲ್ಲಿ ಏನಾದರೂ ನಂಬಿಕೆ ಹುಟ್ಟಿದೆಯೇ ಎಂದು ನೋಡಿದರೆ, ಸರ್ಕಾರದವರು ಮೊನ್ನೆ ಮಂಡಿಸಿದ ಸಪ್ಲಿಮೆಂಟರಿ ಬೇಡಿಕೆಗಳನ್ನು ನೋಡುತ್ತ ಹೋದರೆ ಪ್ರತಿಯೊಂದೂ ಕೂಡ ದುಂದು ವೆಚ್ಚದ ಪರಮಾವಧಿಯಾಗಿರುವುದು ಕಾಣುತ್ತದೆ. ಸರ್ಕಾರದವರು ಮಿತವ್ಯಯ ಮಾಡುತ್ತೇವೆ ಎಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಆದರೆ ಯಾವ ಏಕಾನಮಿ ಮಾಡಿದ್ದಾರೆ? ನೆರೆ ಪ್ರಾಂತವಾದ ಮದ್ರಾಸ್ ರಾಜ್ಯದಲ್ಲಿ ಹೆಚ್ಚು ಜನ ನಂಬ್ಕೆ ಇರುವ ಕಡೆ ಮಂತ್ರಿಮಂಡಲದ ಗಾತ್ರವೇನು, ಅದಕ್ಕೆ ಆಗುವ ಖರ್ಚು ಎಷ್ಟು, ಅದಕ್ಕಿಂತ ಜನನಂಖ್ಯೆಯಲ್ಲಿ ಕಡಮೆ ಇರುವ ಮೈಸೂರು ರಾಜ್ಯದ ಮಂತ್ರಿಮಂಡಲದ ಗಾತ್ರವೇನು ಮತ್ತು ಅದಕ್ಕೆ ಆಗುತ್ತಿರುವ ಖರ್ಚು ಎಷ್ಟು? ಇದರ ಜೊತೆಗೆ ಮಂತ್ರಿಗಳ ವಿದೇಶ ಪ್ರವಾಸ ಬೇರೆ. ಶ್ರೀ ಜಿ.ಬಿ. ಶಂಕರರಾಯರೂ, ಶ್ರೀ ವೈ. ರಾಮಕೃಷ್ಣ ಅವರೂ ಈಗ ವಿದೇಶ ಪ್ರವಾಸ ಹೋಗಿದ್ದಾರೆ. ಯಾವ ಫೀರ್ಡ್‌ನಲ್ಲಿ ಅವರು ಎಕ್ಸ್‌ಪರ್ಟ್ಸ್ ಆಗಿದ್ದಾರೆ? ಒಬ್ಬರು ಕುಕ್ಕುಟ ಶಾಸ್ತ್ರದಲ್ಲಿ ಎಕ್ಸ್‌ಪರ್ಟ್ ಇರಬಹುದು, ಇನ್ನೊಬ್ಬರು ಯಾವ ಶಸ್ತ್ರದಲ್ಲಿ ಎಕ್ಸ್‌ಪರ್ಟ್ ಆಗಿದ್ದಾರೆ? ನಿಜವಾಗಿಯೂ ಆತ್ಮಸಾಕ್ಷಿಯಿಂದ ಇವರು ಹಣಕಾಸಿನ ವ್ಯವಹಾರವನ್ನು ನಡೆಸುವುದಾಗಿದ್ದರೆ ಈ ದುಂದು ವೆಚ್ಚವೆಲ್ಲಾ ಏಕೆ ಬೇಕು? ನಾವು ಇರುವ ಕಾಲದಲ್ಲಿ ಸಾರ್ವಜನಿಕರ ದುಡ್ಡು ಸಿಕ್ಕುತ್ತದೆ, ವಿದೇಶ ಪ್ರವಾಸಮಾಡಿ ಮುಗಿಸೋಣ, ಮುಂದಿನ ಸಲ ಚುನಾವಣೆಗಳಲ್ಲಿ ಬರುತ್ತೇವೆ ಎನ್ನುವ ಗ್ಯಾರಂಟಿ ಇಲ್ಲ ಎಂದು ಸಾರ್ವಜನಿಕರ ದುಡ್ಡನ್ನು ವ್ಯಯ ಮಾಡುವುದಕ್ಕೆ ಪ್ರಯತ್ನ ಪಟ್ಟರೆ ಅದು ಬೇರೆ ವಿಷಯ. 'ಶಂಕರ್ಸ್ ವೀಕ್ಲಿ' ಯಲ್ಲಿ ಒಂದು ವ್ಯಂಗ್ಯ ಚಿತ್ರವನ್ನು ನೋಡಿದೆ. ಒಬ್ಬ ದೊಡ್ಡ ಅಧಿಕಾರಿ ಕುಳಿತಿದ್ದಾನೆ. ಬ್ಯಾಂಕ್ ರಾಷ್ಟ್ರೀಕರಣವಾಯಿತು ಎಂದು ತಿಳಿದಮೇಲೆ, ನನಗೆ ಮೊದಲು ರಾಷ್ಟ್ರೀಕರಣವೆಂದರೆ ಅಷ್ಟಾಗಿ ಆಗುತ್ತಿರಲಿಲ್ಲ, ಈಗ ಅದನ್ನು ಸ್ವಾಗತ ಮಾಡುತ್ತೇನೆಂದು ಹೇಳುತ್ತಾನೆ. ಏಕೆ ಎಂದು ಇನ್ನೊಬ್ಬರು ಕೇಳಿದರೆ, ರಾಷ್ಟ್ರೀಕರಣ ಮಾಡಿದ್ದರಿಂದ ನಮ್ಮೇಳನಗಳು, ಬೋರ್ಡುಗಳು, ಸೆಮಿನಾರ್‌ಗಳು, ಆಡ್ವೈಜರಿ ಕಮಿಟಿ ಮೀಟಿಂಗ್‌ಗಳು, ಸ್ಟಾಫ್ ಮೀಟಿಂಗ್‌ಗಳು ಇವೆಲ್ಲ ಸೌಲಭ್ಯಗಳು ಸಿಕ್ಕುತ್ತವೆ, ಅದಕ್ಕಾಗಿ ಸ್ವಾಗತ ಏಕೆ ಮಾಡಬಾರದು ಎಂದು ಕೇಳುತ್ತಾನೆ. ಮೊದಲು ಅಪ್ಲೋಸ್ ಮಾಡಿದವರು ಸೌಲಭ್ಯ ದೊರೆಯುವುದೆಂದು ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಲು ಒಪ್ಪಿದರು. ಸಾರ್ವಜನಿಕ ಹಣ ದುರುಪಯೋಗ ಮಾಡುತ್ತಾ ಹಣವಿಲ್ಲ ವೆಂದು ಹೇಳುವುದು ಸಮಂಜಸವಲ್ಲ, ಹಣವಿದೆ. ನಿಜವಾಗಿಯೂ ಆಸಕ್ತಿಯಿಂದ ಮಾಡುವುದಾದರೆ ಹೇರಳವಾದ ಹಣವಿದೆ, ಸಾರ್ವಜನಿಕರೂ ಸಹಕಾರ ಮಾಡುವರು. ಯೋಜನೆ ಸಫಲಗೊಳಿಸುವುದಕ್ಕೆ ಸೆಕ್ಷನ್ (3) ಎನೇಬ್ಲಿಂಗ್ ಕ್ಲಾಜು ಎಂದು ಹೇಳಿದರು. ಅಪೇಕ್ಷೆ ಪಡುವ ರೈತರಿಗೆ ಸೌಲಭ್ಯ ಮಾಡಿಕೊಡುವರು, ಹಣ ಮುಂದಾಗಿ ಕೊಟ್ಟರೆ ಯೋಜನೆ ಕಾರ್ಯರೂಪಕ್ಕೆ ತರುವರು, ಸಂತೋಷ. ಹಣ ಕೊಡಲು ತೊಂದರೆಯಿಲ್ಲ. ಆದರೆ ಹಣ ಯಾವರೀತಿ ವ್ಯಯವಾಗುತ್ತಿದೆಯೆಂಬುದನ್ನು ನೋಡಿದರೆ ಹಣ ಕೊಡುವುದಕ್ಕೆ ಧೈರ್ಯವಿಲ್ಲ. ಆದುದರಿಂದ ಮೊಟ್ಟಮೊದಲನೆಯದಾಗಿ ಈ ನಿಂಸ್ಥಾನದಲ್ಲಿ ಎಲ್ಲ ಯೋಜನೆಯಾಗಬೇಕೋ ಅದಕ್ಕೆ ಬ್ಲೂ ಪ್ರಿಂಟ್ ತಯಾರಿಸಿದ್ದೀರಾ? ಸಣ್ಣದು, ದೊಡ್ಡದು ಪ್ರತಿಯೊಂದು ಯೋಜನೆಗೂ ತಗಲುವ ವೆಚ್ಚ ಒಂದು ಕಡೆ ಬರೆದಿದ್ದೀರಾ ಎಂದು ಕೇಳಬೇಕಾಗಿದೆ. ಮತ್ತು ನಿಮ್ಮ ಸಿನ್ಸಿಯಾರಿಟಿ ತೋರಿಸಲು ಪ್ರತಿಯೊಂದು ವ್ಯಾಜಕ್ಕೂ ಸೇಕಡ 50 ಭಾಗ ಸರಕಾರ ಇನ್‌ವೆಸ್ಟ್ ಮಾಡುವುದಾಗಿ ಮೊದಲು ಭರವಸೆ ಕೊಡಬೇಕು. ನಂತರ ಉಳಿದ ಸೇಕಡ 50 ಭಾಗ ವಾಲಂಟರಿ ಕಾಂಟ್ರಿಬ್ಯೂಷನ್ನನ್ನು ಕೊಡಬೇಕೆಂದು ರೈತರನ್ನು ಕೇಳಬಹುದು, ಕೇಳಿ ಇಬ್ಬರೂ ಸೇರಿ ಕಾರ್ಯ ಮಾಡೋಣ ಎಂದು ಧೈರ್ಯ ಹೇಳಿ. ಹಾಗಿಲ್ಲದೆ ನೀವು ಜವಾಬ್ದಾರಿ ಜನರಮೇಲೆ ಹಾಕಿ, ಹಳ್ಳಿಗಾಡುಗಳವರಿಗೆ ಸಾಲದ ಹೊರೆ ಹೊರಿಸಿ, ರೈತರು ಹಣ ಕೊಟ್ಟಿಲ್ಲ, ಯೋಜನೆ ಮಾಡುವುದ ಕ್ಕಾಗುವುದಿಲ್ಲ ಎಂದು ಹೇಳಿದರೆ ಅರ್ಥವಾಗುವುದಿಲ್ಲ. ಆದುದರಿಂದ ಸೆಕ್ಷನ್ 3(ಎ) ಪ್ರಕಾರ ಮೂರು ಕಾನೂ ಹುಟ್ಟುವುದಿಲ್ಲ ಎಂದು ಖಂಡಿತವಾಗಿ ಹೇಳಬಹುದು. ಹಳ್ಳಿಗಾಡಿನವರಿಗೆ ಹಣ ಕೊಡಲು ಚೈತನ್ಯವಿಲ್ಲ. ಬ್ಯಾಂಕುಗಳಿಂದ ಹಣ ಪಡೆದರೆ ಬಡ್ಡಿ ಯಾರು ಕೊಡಬೇಕು ಎಂಬ ಪ್ರಶ್ನೆ ಬರುವುದು. ಹಣವಿಲ್ಲದೆ ಯಾವ ಯೋಜನೆಯನ್ನೂ ತೆಗೆದುಕೊಳ್ಳುವುದಿಲ್ಲ. ಈ ಉದ್ದೇಶದಿಂದ ಈ ಸೆಕ್ಷನ್ ತಂದಿದ್ದಾರೆ. ಆಂಧ್ರ ಪ್ರದೇಶದ ಬೆಟರ್‌ಮೆಂಟ್ ಲೆವಿ ಆಕ್ಟ್ ಪ್ರಕಾರ ನೂಕ್ತ ತಿದ್ದುಪಡಿ ಮಾಡುವುದು ಒಳ್ಳೆಯದು, ಅದು ಅಗತ್ಯವಾಗಿರುವುದರಿಂದ ಮಾಡಬೇಕು. ಬರೀ ಎನೇಬ್ಲಿಂಗ್ ಕ್ಲಾಜಿದ್ದರೆ ಸರಕಾರದ ಜವಾಬ್ದಾರಿಯಿಲ್ಲ. ಆದುದರಿಂದ ನೂಕ್ತ ಬದಲಾವಣೆ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಮಸೂದೆಯ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ತಮ್ಮ ಮುಂದಿಡಲು ನಾನು ಎದ್ದು ನಿಂತಿದ್ದೇನೆ. ಈ ಮಸೂದೆಯನ್ನು ಆಂಧ್ರ ಪ್ರದೇಶದ ಇರಿಗೇಷನ್ (ರೆಪಿ ಆಫ್ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್) ಆಕ್ಟ್, 1955 ಏನಿದೆ ಅದರ ಆಧಾರದ ಮೇಲೆ ಆ ಮಾದರಿಯಲ್ಲಿ ತಂದಿರುವುದಾಗಿ ತಿಳಿಸಿದ್ದಾರೆ. ಆಂಧ್ರ ಪ್ರದೇಶದ ಕೋಡ್ ನೋಡಿದಾಗ ಇಂಥ ಯಾವ ಮಸೂದೆಯೂ ಅದರಲ್ಲಿ ಕಾಣುತ್ತಿಲ್ಲ. ಕೋಡ್‌ನಲ್ಲಿರುವುದರಲ್ಲಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವ ವಿಚಾರ ಇಲ್ಲ.

ಆಕ್ಟ್ ನಂಬರ್ 25 ಆಫ್ 1955 ಇದಕ್ಕೆ ಸಂಬಂಧಪಟ್ಟ ಹಾಗೆ ಆಂಧ್ರ ಪ್ರದೇಶದಲ್ಲಿ ಏನಾದರೂ ಕಾಯಿದೆ ಇದೆಯೇ ಅಥವಾ ಇದಕ್ಕೆ ಸಂಬಂಧಪಟ್ಟ ಹಾಗೆ ರೂಲ್ಸ್ ಏನಾದರೂ ಮಾಡಿದ್ದಾರೆಯೇ ಎಂದು ತಿಳಿಸುಕೊಳ್ಳಲು ಪ್ರಯತ್ನ ಪಟ್ಟೆ. ಅದು ಕಾನೂನು ಆಗಿದ್ದರೆ ಗೆಜೆಟಿನಲ್ಲಿ ಇರಬೇಕಾಗಿತ್ತು, ಗೆಜೆಟ್‌ನಲ್ಲಿ ಕಾಣುತ್ತಾ ಇಲ್ಲ. ಆಂಧ್ರ ಪ್ರದೇಶದಲ್ಲಿ ಇಂತಹ ಕಾನೂನು ಇದೆಯೇ ಎಂಬುದನ್ನು ತಿಳಿದುಕೊಳ್ಳಬೇಕೆಂದು ನೆನ್ನೆಯಿಂದ ಪ್ರಯತ್ನ ಮಾಡುತ್ತಾ ಇದ್ದೇನೆ, ಇದುವರೆಗೂ ಸಿಕ್ಕಲಿಲ್ಲ. ನನ್ನ ಹತ್ತಿರ ಒಂದು ಟೈಪ್ಡ್ ಕಾಪಿ ಇದೆ, ಅದನ್ನು ನೋಡಿ ಎಂದು ಸಂಬಂಧಪಟ್ಟ ಮಂತ್ರಿಗಳು ತೋರಿಸಿದರು. ಟೈಪ್ಡ್ ಕಾಪಿ ಇರುವುದೇ ಬೇರೆ, ಈ ಕೋಡ್‌ನಲ್ಲಿ ಇರುವುದೇ ಬೇರೆ, ಆದ್ದರಿಂದ ಸಂದೇಹ ಬಂದಿದೆ, ಆಂಧ್ರ ಪ್ರದೇಶದಲ್ಲಿ ಇಂಥಹ ಕಾನೂನು ಇದೆಯೇ ಇಲ್ಲವೇ ! ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿರುವ ಪ್ರಕಾರ ಇದೆಯೇ ಇಲ್ಲವೇ ಎಂಬುದನ್ನು ಮಾನ್ಯಮಂತ್ರಿಗಳು ಅವರ ಉತ್ತರದಲ್ಲಿ ಸ್ಪಷ್ಟೀಕರಿಸುತ್ತಾರೆ ಎಂದು ತಿಳಿಯುತ್ತೇನೆ. ಆ ರೀತಿ ಇದ್ದರೆ ಅದನ್ನು ಈ ಸಭೆಯ ಗಮನಕ್ಕೆ ತರುವುದು ಅತ್ಯಾವಶ್ಯಕ ಎಂಬುದನ್ನು ಹೇಳುತ್ತೇನೆ.

ಈ ಮಸೂದೆಯ ವಿಚಾರದಲ್ಲಿ ಕೆಲವು ವಿಷಯಗಳನ್ನು ಬಹಳ ದೀರ್ಘವಾಗಿ ಆರೋಚನೆ ಮಾಡಿ ನೋಡಿದ್ದರಲ್ಲಿ, ಅವರು ಏನು ಸ್ಪಷ್ಟೀಕರಿಸುತ್ತಾರೆ ಎಂದರೆ ನಮ್ಮಲ್ಲಿ ದುಡ್ಡಿಲ್ಲ, ನಾವು ಇಂತಿಂಥ ದೊಡ್ಡ ದೊಡ್ಡ ಕಾಂಗಾರಿಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತಾ ಇದ್ದಾರೆ. ದುಡ್ಡಿಲ್ಲದೆ ಏನೂ ಮಾಡುವುದಕ್ಕಾಗುವುದಿಲ್ಲ, ರೈತರೂ ಸಹ ಸ್ವಪ್ರಯತ್ನವನ್ನು ಮಾಡಬೇಕು ಅವರು ಮುಂದೆ ಬಂದರೆ ಇದನ್ನು ಮಾಡಲಿಕ್ಕೆ ದಾರಿಯಾಗುತ್ತದೆ ಎಂಬ ಒಂದು ಆಂಶವನ್ನೂ ಇದರಲ್ಲಿ ವ್ಯಕ್ತಪಡಿಸುತ್ತಾರೆ. ಯಾವ ರೀತಿ ಇದನ್ನು ತಂದಿದ್ದಾರೆಎಂಬುದನ್ನು ನೋಡಿದರೆ ಯಾವ ಶಾಸನದ ಕಡತಕ್ಕೂ ಸೇರತಕ್ಕ ರೀತಿಯಲ್ಲಿ ಈ ಮಸೂದೆ ಇಲ್ಲ. 66 ಪರ್ಸೆಂಟ್ ಜನಗಳು ಯಾವು ದಾದರೂ ಒಂದು ಭಾಗದಲ್ಲಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ ಅಂತ ಹೇಳಿ ಅದರಲ್ಲಿ ಐದನೆ ಮೂರನೆ ಭಾಗದ ಅಂಶ ಕೊಟ್ಟರೆ ಆ ಪ್ರದೇಶದಲ್ಲಿ ಅಂತಹ ಕಾಂಗಾರಿಗಳನ್ನು ತೆಗೆದು ಕೊಳ್ಳುವುದಾಗಲಿ ಅಥವಾ ಮುಂದುವರಿಯುವುದಾಗಲಿ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ ಎಂಬ ಒಂದು ಅಂಶವನ್ನು ಹೇಳಿದ್ದಾರೆ. ಆದರೆ ಈ ಪರಿಸ್ಥಿತಿ ಏಕೆ ಬಂತು ? ಜನಗಳಲ್ಲಿ ಅನೇಕ ಸಂದೇಹಗಳು ಇವೆ, ಸಂಶಯ ಇದೆ. ಸರ್ಕಾರಕ್ಕೆ ಈ ಹಣವನ್ನು ಕೊಟ್ಟರೆ ಅವರು ನಿರ್ವಹಿಸಬಲ್ಲರೇ ? ಈ ಹಣವನ್ನು ಅವರು ತೆಗೆದುಕೊಂಡಮೇಲೆ ಸರಿಯಾದ ರೀತಿಯಲ್ಲಿ ಮಾಡತಕ್ಕ ಮನಸ್ಸು ಇದೆಯೇ, ಈಗ ಇವರು ಹೋಗತಕ್ಕ ಧಾಟಿಯಲ್ಲಿ ಸಾಧ್ಯವೇ ಎಂದು ಸಹಜವಾಗಿ ಜನಗಳು ಅನುಮಾನವನ್ನು ವ್ಯಕ್ತಪಡಿಸುತ್ತಾರೆ. ಏಕೆಂದರೆ ಭಾರತದಲ್ಲಿ ಈಗಿರತಕ್ಕ ದೊಡ್ಡ ದೊಡ್ಡ ನೀರಾವರಿ ಕಾಂಗಾರಿಗಳನ್ನು ನಾವು ತೆಗೆದುಕೊಂಡರೆ ಮೊದಲನೇ ಪಂಚವಾರ್ಷಿಕ ಯೋಜನೆಯಿಂದ ಹಿಡಿದು ಇದುವರೆಗೂ ಬಂದಿರತಕ್ಕ ದೊಡ್ಡ ದೊಡ್ಡ ಕಾಂಗಾರಿಗಳನ್ನೆಲ್ಲಾ ಪ್ಲಾನಿಂಗ್ ಕಮೀಷನ್ ನವರು ಅವರ ಹಣವನ್ನು ಕೊಟ್ಟು ಮಾಡಿಸಿದ್ದಾರೆ. ಭಾಕ್ರಾನಂಗರ್ ತೆಗೆದುಕೊಳ್ಳಿ, ಇನ್ನಿತರ ಕಾಂಗಾರಿಗಳನ್ನು ತೆಗೆದುಕೊಂಡರೆ ಅದು ಕೇಂದ್ರದ ಹಣದಿಂದ ಬಂದಿರುವುದು. ಭದ್ರಾ ಪ್ರಾಜೆಕ್ಟು ನಮ್ಮ ಸುದ್ಯೈವದಿಂದ 1956ನೇ ನವೆಂಬರ್ ಒಂದನೆ ತಾರೀಖಿನ ಒಳಗೆ ಕಟ್ಟಿ ಪೂರ್ಯೆಸರಾಗಿತ್ತು, ಇನ್ನೇನೂ ಉಳಿದಿರಲಲ್ಲ. ಇತ್ತೀಚೆಗೆ 1956ನೇ ನವೆಂಬರ್ ಒಂದನೇ ತಾರೀಖಿನಿಂದ ಯಾವ ಕಾಂಗ್ರೆಸ್ ಅಡಳಿತ ಶ್ರೀಮಾನ್ ನಿಜಲಿಂಗಪ್ಪನವರ ನೇತೃತ್ವದಲ್ಲಿ ಬಂದು ಅವರು ನೀರಾವರಿ ಕಾಂಗಾರಿಗಳ ಕಡೆಗೆ ಕೇಂದ್ರದ ಗಮನವನ್ನು ಸೆಳೆದಿದ್ದರೂ ಕೂಡ ಇದುವರೆಗೂ ದೇಶದಲ್ಲಿ ಏನು ಕಾಂಗಾರಿಗಳು ಆಗಬೇಕಾಗಿತ್ತೋ—ಕೃಷ್ಣಾ ಪ್ರಾಜೆಕ್ಟ್‌ಗಳು, ಕಾವೇರಿ ಬೇಸಿನ್ ನರ್ಮಾಗಳೇ ಯಾವ ಒಂದು ಕಾಂಗಾರಿಯೂ ಕೂಡ ಆಗಿಲ್ಲ. ಆ ಕೆಲಸಗಳನ್ನು ತೆಗೆದುಕೊಂಡಿದ್ದರೆ ಇಷ್ಟು ಹೊತ್ತಿಗೆ ಅವೆಲ್ಲಾ ಪೂರ್ಯೆಸಿ ಇನ್ನೂ ಅಷ್ಟು ದುಡ್ಡು ನಮ್ಮ ದೇಶದಲ್ಲಿ ಉಳಿಯುತ್ತಿತ್ತು. ದೊಡ್ಡ ಲೋಪ ಮಾಡಿದ್ದಾರೆ. ಸ್ಥೂಲವಾಗಿ ವಿಚಾರ ಮಾಡಿದರೆ ದುಡ್ಡಿಲ್ಲ ಅಂದರೂ ಕೂಡ ತಕ್ಕಡಿ ಹಿಡಿದು ವ್ಯಾಪಾರ ಮಾಡತಕ್ಕ ಕನುಬಿನವರನ್ನು ಬೆಳೆಸಲಕ್ಕೆ ಪ್ರಯತ್ನ ಮಾಡಿದರೇ ಹೊರತು ನೇಗಿಲ ಯೋಗಿಯ ಕಡೆಗೆ ಅವರು ಪ್ರಯತ್ನ ಮಾಡಲಲ್ಲ. ನೇಗಿಲ ಎತ್ತನ್ನು ಯಾವಾಗ ನೋಡಿಕೊಳ್ಳುತ್ತಾ

ಇದ್ದಾರೆ ಎಂದರೆ ಓಟಿಗೆ ಹೋದಾಗ ಮಾತ್ರ. ಒಂದು ಸೊಗಸಾದ ಹೋರಿ ಹಿಡಿದು ನೇಗಿಲಿಗೆ ಕಟ್ಟಿ ನೋಡುತ್ತಾರೆಯೇ ಹೊರತು ಈ ಹಣವನ್ನು 500 ಕೋಟಿ ರೂಪಾಯಿಗಳ ಸಾಲವನ್ನು ಮಾಡಿ ಯಾವ್ಯಾವುದಕ್ಕೆ ಹಾಕಿದ್ದಾರೆ ! ಯಾವ್ಯಾವ ಕಾಂಗಾರಿಗಳಿಗೆ ಹಾಕಿದ್ದಾರೆ ಎಂಬುದನ್ನು ನೋಡಿದರೆ ಬಹುಭಾಗ ಸಹಕಾರ ಸಂಘಗಳಲ್ಲೇ ತುಂಬಿ ಹೋಗಿದೆ, ಬಹುಭಾಗ ವ್ಯಾಪಾರದ ಕಂಪೆನಿಗಾಗಿ ಸಾಲ ಕೊಟ್ಟೂ ಕೊಟ್ಟೂ ಭರ್ತಿಯಾಗಿ ಹೋಗಿದೆ. ಇಲ್ಲಿ ಅಸಿಟೈಟ್ ಫ್ಯಾಕ್ಟರಿ ಎನ್ನುವುದೊಂದಿದೆ. ಅದು ಸತ್ತು ಹೋಗಿ ಎಷ್ಟೋ ಕಾಲವಾಯಿತು. ಹಾಗಿದ್ದರೂ ಇನ್ನೂ ಮೊನ್ನೆತಾನೆ ಅದಕ್ಕೆ 90 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮೊದಲು ಅದಕ್ಕೆ 40 ಲಕ್ಷ ಕೊಟ್ಟಿದ್ದರು. ಇತ್ತೀಚೆಗೆ ಮತ್ತೆ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದಕ್ಕೆ ಯಾವಾಗ ರಾಸಾಯಿತು, ಏಕೆ ರಾಸಾಯಿತು ಎಂಬುದನ್ನು ಕಂಡವರು ಯಾರು ? ಇವರು ಅವರನ್ನು ತಬ್ಬಿಕೊಂಡಿದ್ದಾರೆ; ಅವರು ಇವರನ್ನು ತಬ್ಬಿಕೊಂಡಿದ್ದಾರೆ. ಯಾರನ್ನೂ ಯಾರೂ ಬಿಡಿಸಿಕೊಳ್ಳುವಂತಿಲ್ಲ. ಹೀಗೆ ಇವರು ಸಿಕ್ಕಿದಂತೆ ಈ ಕೈಗಾರಿಕಾ ರಂಗದಲ್ಲಿ ಹಣವನ್ನು ಹಾಕಿ ಹಾಳು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇವರು ನೀರಾವರಿ ಯೋಜನೆಗಳಿಗೆ ಯಾವ ಪ್ರಾಶಸ್ತ್ಯವನ್ನೂ ಕೊಡುತ್ತಿಲ್ಲ. ಹಿಂದೆ ಅದೇನೋ ಭದ್ರಾಪ್ರಾಜೆಕ್ಟನ್ನು ಮಾಡಿದ್ದಾಯಿತು. ಅಲ್ಲಿಂದೀಚೆಗೆ ಯಾವುದಾಗಿದೆ ! ಇವರ ಗಮನವೆಲ್ಲಾ ಆ ಟ್ರೇಡ್ ಓರಿಯೆಂಟೇಷನ್ ಕಡೆಗೇ ಓಡುತ್ತಿದೆ. ನಾವು ಇಲ್ಲಿಯವರೆಗೂ ಬೇಕಾದಷ್ಟು ಹೇಳಿದ್ದಾಯಿತು. ಆದರೆ ಇವರೇನೂ ದಾರಿಗೆ ಬರುವಂತೆ ಕಾಣುವುದಿಲ್ಲ. ಬಾಯಲ್ಲಿ ಬೇಕಾದಷ್ಟು ಹೇಳುತ್ತಾರಷ್ಟೇ. ಆದರೆ ನಾನಾಗಲೇ ಹೇಳಿದಂತೆ ಇವರು ನಾಳೆ ದಿವನ ಥಾರ್ಡ್ ಷೀಟನ್ನು ಕೊಟ್ಟು ಹೋಗುವಾಗ ನಮಗೆ ನಿಲ್ ಬ್ಯಾಲೆನ್ಸ್ ಷೀಟನ್ನು ಕೊಡುತ್ತಾರೆ, ಇವರು ನಮ್ಮ ಕೈಗೆ; ಆ ಚಿಕ್ಕನಾಯಕನಹಳ್ಳಿಯ ಕಪ್ಪನ್ನೇ ಕೊಡುವುದು ಎಂಬುದನ್ನು ಅನೇಕಾವರ್ತಿ ಹೇಳಿದ್ದೇನೆ. ಈಗಲೂ ನಾನು ಅದನ್ನೇ ಹೇಳುತ್ತಿದ್ದೇನೆ. ಆ ಕಾಲವೂ ಕೂಡ ಸನ್ನಿಹಿತವಾಗುತ್ತಿದೆ. ಖಜಾನೆಯಲ್ಲಿದ್ದ, ಇವರು ಅಧಿಕಾರಕ್ಕೆ ಬರುವ ಮುನ್ನ ಇದ್ದ ೮ 500 ಕೋಟಿ ರೂಪಾಯಿಗಳನ್ನು ಹೇಗೆ ಪೋಲು ಮಾಡಿದರು ! ದೇಶದಲ್ಲಿ ನೀರಾವರಿ ಬಾವುಗೆಷ್ಟು ಹಣಬೇಕು ಕೈಗಾರಿಕೆಗಳಿಗೆಷ್ಟು ಹಣಬೇಕು ಎಂಬುದನ್ನು ನೋಡಿ ಅದನ್ನು ಉಪಯೋಗ ಮಾಡಿದರೇ ! ಇವರು ಯಾವ ಒಂದು ಆಲೋಚನೆಯೂ ಇಲ್ಲದೆ ಹಣವನ್ನೆಲ್ಲಾ ಪೋಲು ಮಾಡಿದ್ದಾರೆ. ಇದು ನಮ್ಮ ದೇಶದ ದೌರ್ಭಾಗ್ಯ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ಹಿಂದೆ ದೇಶದಲ್ಲಿ ದೊಡ್ಡ ದೊಡ್ಡ 125 ಕೆರೆಗಳನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದ್ದೂ ಹೇಳಿದ್ದೇ. ಒಂದೊಂದು ಕೆರೆಗೂ ಇವರು 10 ವರ್ಷ, 15 ವರ್ಷಗಳನ್ನು ತೆಗೆದುಕೊಂಡು ಒಂದೊಂದು ಕೆರೆಗೂ ಒಂದು ಲಕ್ಷ, ಎರಡು ಲಕ್ಷ ಅಥವಾ ಮೂರು ಲಕ್ಷ ರೂಪಾಯಿಗಳಂತೆ ಖರ್ಚು ಮಾಡುತ್ತಾ ಹೋದರೆ ಆ ಕೆರೆಗಳು ಇನ್ನು 40 ವರ್ಷಗಳಾದರೂ ಆಗುವುದಿಲ್ಲ. ಆದರೆ 1974ರೊಳಗೆ ಕಾವೇರಿ ನದೀ ನೀರನ್ನು ಉಪಯೋಗ ಮಾಡಿಕೊಳ್ಳದೆ ಇದ್ದರೆ ನಾವು ಬಹಳ ಅಪಾಯಕ್ಕೆ ಈಡಾಗುತ್ತೇವೆ. ದೇಶಕ್ಕೆ ಎಂಥಾ ದುರ್ದೈವ ಬಂತೆಂದು ನಾವು ಕಣ್ಣು ಕಣ್ಣು ಬಿಡುತ್ತಿದ್ದರೆ ಈ ಆಗಳಿತ ನಡೆಸತಕ್ಕವರಿಗೇನಾದರೂ ಭಯ ವಿದೆಯೇ ? ಬಾಯಲ್ಲಿ ಹೇಳಿದ್ದೂ ಹೇಳಿದ್ದೇ. ಆದರೆ ನಾನು ಇವರಿಗೊಂದು ನೇರವಾದ ಪ್ರಶ್ನೆಯನ್ನು ಕೇಳುತ್ತೇನೆ ! ಇವರು ಈ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ತೆಗೆದುಕೊಳ್ಳಬೇಕೇ ಬೇಡವೇ ಎನ್ನುವುದಕ್ಕಿಂತ ಮೊದಲು ನಾನು ಕೇಳುತ್ತಿರುವುದು ಈ ಹಿಂದೆ ಹಣಕಾಸಿನ ಸಚಿವರಾಗಿದ್ದ ಶ್ರೀ ಬಿ. ಡಿ. ಜತ್ತಿಯವರು ಒಂದು ಸಾರ್ತಿ ಮಂಗಳೂರಲ್ಲಿ ಮಾತನಾಡುತ್ತ ಇನ್ನು ನಮ್ಮ ಖಜಾನೆಯಲ್ಲಿ ಇರತಕ್ಕ ದುಡ್ಡು 2 ತಿಂಗಳು ನೌಕರರಿಗೆ ಸಂಬಳವನ್ನು ಕೊಡುವಷ್ಟು ಮಾತ್ರ ಇದೆ. ನಮಗೆ 40 ಕೋಟಿ ಓವರ್‌ಡ್ರಾಫ್ಟ್ ಮಾತ್ರ ರಿಜರ್ವ್ ಬ್ಯಾಂಕಿನಿಂದ ಸಿಕ್ಕಿದ್ದು, ಇನ್ನು ಖಜಾನೆಯಲ್ಲಿ ಹಣವಿಲ್ಲ ಎಂದು ಹೇಳಿದ್ದರು. ಹಿಂದೆ ಇದ್ದ ಆಡಳಿತಗಾರರು ಹೀಗೆಲ್ಲಾ ಮಾಡುತ್ತಿರಲಿಲ್ಲ. ಆ ವಿಚಾರವನ್ನು ಇಲ್ಲಿ ಅನೇಕಾವರ್ತಿ ಹೇಳಿದ್ದೇನೆ. ಹಿಂದೆ ಆಡಳಿತಗಾರರು ಅವರಿಗೆ ಒಂದು ರೂಪಾಯಿ ವರಮಾನ ಬಂದರೆ ಅವರಲ್ಲಿ 12 ಆಣೆ ಖರ್ಚು ಮಾಡಿ ಇನ್ನೂ ನಾಲ್ಕಾಣೆಗಳನ್ನು ತಿರುಪತಿ ತಿಮ್ಮಪ್ಪನ ಮುಡುಪೆಂದು ಹೇಳಿ ಹಾಗೇ ಗಂಟು ಕಟ್ಟಿ ಇಡುತ್ತಿದ್ದರು. ಈಗಿನ ಆಡಳಿತಗಾರರು ಹಾಗಲ್ಲ. ಇವರಿಗೆ ಒಂದು ರೂಪಾಯಿನ ವರಮಾನ ಬಂದರೆ ಇವರ ಬಡ್ಜೆಟ್ ಖರ್ಚು 2 ರೂಪಾಯಿ ಇರುತ್ತೆ. ಹೀಗೆ ಇವರು ಸಾಲ ಮಾಡಿ ವ್ಯವಹಾರ ಮಾಡತಕ್ಕ ಜನರು. ಈ ಆಡಳಿತವೂ ಕೂಡ ಒಂದು ಹಿಂದೂ ಅವಿಭಕ್ತ ಕುಟುಂಬವಿದ್ದ ಹಾಗೆ ಇವರು ಸಾಲ ಮಾಡಿ ತಿಂದು ಹಾಕಿದನಂತರ ಇದನ್ನು ತೀರಿಸತಕ್ಕವರು ಯಾರು ! ಹಿಂದೂ ಅವಿಭಕ್ತ ಕುಟುಂಬದ ಮೇಲೆ ದಾವಾ ಹಾಕಿದಾಗ ಸಾಲಗಾರನ ಮಕ್ಕಳು ಈ ಸಾಲದ ವಿಷಯ ನಮಗೆ ಗೊತ್ತಿಲ್ಲ, ನಮ್ಮ ಅಪ್ಪ ಜೂಜಾಡುವುದಕ್ಕೋ ಅಥವಾ ವ್ಯಭಿಚಾರಕ್ಕೋ ಮಾಡಿದಂಥ ಸಾಲ ಇದು. ಇದನ್ನು ನಾವು ಕೊಡಬೇಕಾದ್ದಿಲ್ಲ. ಇದು ನಮಗೆ ಗೊತ್ತಿಲ್ಲ ಎಂದು ಹೇಗೆ ಆ ಅವಿಭಕ್ತ ಕುಟುಂಬದವರು ಕೋರ್ಟಿನಲ್ಲಿ ತಕರಾರನ್ನು ಹಾಕುತ್ತಾರೋ ಹಾಗೇ ಇಲ್ಲಿಯೂ ಮಾಡತಕ್ಕ ಪ್ರಸಂಗ ಬರಬಹುದು.

(ಶ್ರೀ ಎಚ್. ಸಿದ್ಧವೀರಪ್ಪ)

ಇವರು ಮಾಡಿರತಕ್ಕ ಸಾಲಗಳನ್ನು ರೆಫ್ಯುಡಿಯೇಟ್ ಮಾಡಿದರೆ ಮಾತ್ರ ನಮಗೆ ಉಳಿಗಾಲ. ಇಲ್ಲದೇ ಹೋದರೆ ನಾವು ಸಾಲ ತೀರಿಸುವುದಕ್ಕಾಗುವುದಿಲ್ಲ. 500 ಕೋಟಿ ರೂಪಾಯಿಗಳಷ್ಟು ಸಾಲ ಮಾಡಿ ಹಣ ಖರ್ಚು ಮಾಡಿದರೂ ನೀರಾವರಿ ಕಾಮಗಾರಿ ಇಲ್ಲ. ರೈತರ ಕಡೆ ಲಕ್ಷವಿಲ್ಲ. ಯಾರು ಬೇರೆ ರೀತಿಯಿಂದ ಪ್ರತಿಭಟನೆ ಮಾಡುತ್ತಾರೋ ಅಂತಹಕಡೆ ಇವರ ಗಮನ ಹೋಗುತ್ತದೆ. ಸೇಕಡ 80 ರಷ್ಟು ಇರುವ ರೈತರಿಗೆ ಸೋಷಿಯರ್ ಅಂಡ್ ಇಕನಾಮಿಕ್ ಬೆನಿಫಿಟ್ ಮತ್ತು ಸೋಷಿಯರ್ ಅಂಡ್ ಇಕನಾಮಿಕ್ ಅಡ್ವಾನ್ಸ್‌ಮೆಂಟಿಗೆ ಎಷ್ಟು ಹಣ ಖರ್ಚು ಮಾಡಿದ್ದಾರೆಂಬ ಬಗ್ಗೆ ಸರ್ಕಾರ ದವರು ಯಾವರೀತಿಯಾಗಿ ಜವಾಬು ಕೊಡುತ್ತಾರೆಂಬುದನ್ನು ನಾವು ಖುದ್ದಾಗಿ ನೋಡಬೇಕಾಗುತ್ತದೆ. ಇದನ್ನು ನಾನು ಬಹಳ ಸಂಕಟದಿಂದ ಹೇಳಬೇಕಾಗಿದೆ. ಇದು ಮೈಸೂರಿನ ದುರ್ದೈವ. ಇಂತಹ ಕೆಟ್ಟ ಸರ್ಕಾರ ಬೇರೆ ದೇಶದಲ್ಲಿದ್ದಿದ್ದರೆ ಆಂಗ್‌ಸನ್ ಸರ್ಕಾರಕ್ಕೆ ಯಾವರೀತಿಯಲ್ಲ ಮುಕ್ತಯಾಯಿತೋ ಆರೀತಿ ಮುಕ್ತಯಾಗುತ್ತಿತ್ತು. ಪ್ರಜಾಪ್ರಭುತ್ವದಲ್ಲಿ ಕೈಕಟ್ಟಿಕೊಂಡು ಕುಳಿತುಕೊಂಡು ಇವರು ಮಾಡುವ ವ್ಯವಹಾರಗಳನ್ನ ನಾವು ನೋಡಬೇಕಾಗಿದೆ. ಯಾರು ಈ ಸರ್ಕಾರಕ್ಕೆ ಬ್ಲೈಂಡಾಗಿ ಕಣ್ಣುಮುಚ್ಚಿಕೊಂಡು ಸಹಾಯ ಮತ್ತು ಸಹಕಾರ ಕೊಡುತ್ತಾರೆ ? ಕೈಗಾರಿಕೆಗಳಿಗೆ ಬೇಕಾದಷ್ಟು ದುಡ್ಡು ಕೊಟ್ಟಿದ್ದೇವೆ. ಅವೂ ಸಹ ಸರಿಯಾದ ರೀತಿಯಲ್ಲ ವ್ಯವಸ್ಥೆ ಮಾಡಿಲ್ಲ. ಕೆರೆ ಕಟ್ಟುವುದಕ್ಕೆ ದುಡ್ಡು ಇಲ್ಲವೆಂದು ಹೇಳುತ್ತಾರೆ. ಇನ್ನು ಈ ಕಾನೂನು ತಂದಿರುವ ರೀತಿ ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಆಂಧ್ರದ ಆಕ್ಟ್ ನನಗೆ ಸಿಗಲಿಲ್ಲ. ಅಲ್ಲ ಕಾಂಪ್ರಹೆನ್ಸಿವ್ ರೀತಿಯಲ್ಲ ಕಾನೂನು ಇದೆ. ಮಾನ್ಯ ಶ್ರೀ ಚನ್ನಬಸಪ್ಪನವರು ಈ ಕಾಯಿದೆಗೆ ಇನ್‌ಸ್ಪಿರೇಷನ್ ಆದರು ಎಂದು ನನಗೆ ಕಾಣುತ್ತದೆ. ಹೋದಸಾರಿ ಇದು ಬಂದಾಗ್ಗೆ ದುಡ್ಡು ಇಲ್ಲವೆಂದು ಹೇಳಿದರು. ದುಡ್ಡು ಬೇಕಾದರೆ ಇವರು ಆ ಕೆಲಸ ಮಾಡುತ್ತೇವೆಂದು ಹೇಳಿದರೆ ಅಡ್ವಾನ್ಸಾಗಿ ದುಡ್ಡು ಕೊಡಿಸುತ್ತೇವೆ, ನಿಮಗೆ ಏನು ಬೇಕಾದರೂ ಮಾಡುತ್ತೇವೆ ಎಂದು ಹೇಳಿದ್ದು ಈ ಕಾನೂನನ್ನು ಜಾರಿಗೆ ತರಲಕ್ಕೆ ದಾರಿಯಾಯಿತೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ನಾನು ಯಾವತ್ತೂ ನನಗೆ ತಿಳಿದಮಟ್ಟಿಗೆ ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೊಡುತ್ತೇವೆಂದು ಹಿಂದೆ ಹೇಳಲಿಲ್ಲ. ಮುಂದೆ ಹೇಳುವುದಿಲ್ಲ. ಹಿಂದೆ ಮುಖ್ಯಮಂತ್ರಿಗಳು ಹೇಳುತ್ತಿದ್ದರು. ಮಾನ್ಯ ಶ್ರೀ ನಿಜಲಿಂಗಪ್ಪನವರು ಆ ರೀತಿ ಹೇಳಿದ್ದಾರೆಂದು ಇಲ್ಲಿ ಹೇಳುವುದಕ್ಕೆ ಬದಲು ಚನ್ನಬಸಪ್ಪನವರು ಎಂದು ಹೇಳಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ. —ಇನ್ನು ಕಾವೇರಿ ಪ್ರಾಜೆಕ್ಟ್ ಕಟ್ಟುವ ಬಗ್ಗೆ ನಮಗೇನೂ ಪ್ರತಿ ಬಂಧಕವಿಲ್ಲ ನಾವು ಕಟ್ಟಿಯೇ ಕಟ್ಟುತ್ತೇವೆಂದು ಮಾತ್ಯ ಶ್ರೀ ಡಿ. ಎಂ. ಸಿದ್ಧಯ್ಯನವರು ಹೇಳಿದರು ಅಲ್ಲದೆ ಕನ್‌ಸ್ಟ್ರಕ್ಟಿವ್ ಕ್ರಿಟಿಸಿಸಮ್‌ನ್ನ ಇರಬೇಕೆಂದು ಹೇಳಿದರು. ಇದನ್ನು ಯಾವ ರೀತಿ ಮಾಡ ಬೇಕೆಂಬ ಪ್ರಶ್ನೆಯನ್ನು ಇವತ್ತು ತಂದಿಟ್ಟಿದ್ದಾರೆ. ಇದಕ್ಕೊಂದು ಉದಾಹರಣೆ ಹೇಳಬೇಕಾಗಿದೆ. ಒಂದು ಮನೆಯಲ್ಲ ಒಬ್ಬ ಮಗ ಮದುವೆಗೆ ಇದ್ದಾನೆ. ಆದರೆ ಆ ಮನೆಯಲ್ಲ ಮದುವೆ ಮಾಡುವ ಯೋಗ್ಯತೆ ಇಲ್ಲ. ಆಗ ಅಪ್ಪ ಆ ಮಗನನ್ನು ಯಾರ ಮನೆಯಲ್ಲಾದರೂ ಸಂಬಳಕ್ಕೆ ಇಟ್ಟು ಮದುವೆ ಮಾಡುತ್ತೇನೆಂದು ಹೇಳಿದನಂತೆ. ಹಾಗೆ ಸಂಬಳಕ್ಕೆ ಇಟ್ಟು ಮದುವೆ ಮಾಡಬೇಕೆನ್ನುವ ಪರಿಸ್ಥಿತಿ ಯಲ್ಲಿ ನಮ್ಮ ರೈತರು ಇಲ್ಲ. ನಿಮಗೆ ಏನೋ ಅತುರತೆ ಇದೆ.

3-30 P. M.

ಆದಲ್ಲದೆ, ಇವತ್ತಿನ ದಿವಸ ನಮಗೆ ನೀರು ಬೇಕಾಗಿದೆ. ರೈತರು ಬದುಕಬೇಕಾಗಿದೆ. ಒಂದು ಕಡೆ ಜನಸಂಖ್ಯೆಯು ಒತ್ತಡ ಇದೆ, ಒಂದು ಕಡೆ ಜನಗಳಲ್ಲಿ ಬಹಳ ಹೆಚ್ಚಿನ ಆಸಕ್ತಿ ಇದೆ. ಮೈಸೂರು ರಾಜ್ಯ ದಲ್ಲಿ ಯಾವ ಕಡೆಗಳಲ್ಲೂ ಇಲ್ಲದಿರತಕ್ಕ ತೊಂದರೆಗಳಿವೆ. ರೈತರು ಪ್ರತಿ ಸಾರಿ ಮೋಡಗಳನ್ನು ನೋಡುತ್ತಿದ್ದಾರೆ. ಕೆಲವುಸಾರಿ ಎನಿಸುತ್ತದೆ, ನೀರು ಬಂದರೆ ರೈತರು ಯಾವರೀತಿಯಲ್ಲ ಇರ ಬಹುದೆಂದು. ಕೇವಲ ಭದ್ರಾ ಪ್ರಾಜೆಕ್ಟನ್ನು ನೋಡಿದರೆ, ದೇವರು ಕೊಟ್ಟಿರತಕ್ಕ ನೀರನ್ನು ಅವರಿಗೆ ಕೊಟ್ಟರೆ ಅಲ್ಲ ಸುಖವಾದ ಉತ್ಪನ್ನವಾಗುವುದಕ್ಕೆ ಅನುಕೂಲವಾಗುತ್ತದೆ. ಇವತ್ತಿನ ದಿವಸ ಮೈಸೂರು ರಾಜ್ಯದಲ್ಲಿ ಈ ನೀರಾವರಿ ಕಾಮಗಾರಿಗಳನ್ನು ಮಾಡಬೇಕಾದರೆ, ಸರ್ಕಾರದವರು ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೊಡಿ ಎಂದು ಹೇಳುತ್ತಿದ್ದಾರೆ. ಶ್ರೀ ಮಾನ್ ಪುಟ್ಟಸ್ವಾಮಿಯವರು ಈ ಮಸೂದೆಯನ್ನು ಮಂಡನೆ ಮಾಡಬೇಕಾದರೆ, ಅವರಿಗೆ ಬಹುಶಃ ಮಂಡಿಸಲು ಮನಸ್ಸಿರಲಿಲ್ಲವೆಂದು ಕಾಣುತ್ತದೆ, ಅವರು ''ನಾನು ಏನು ಹೇಳಲ, ಯಾವುದು ಬಿಡಲ'' ಎಂದು ಹೇಳಿದರಲ್ಲದೆ; ಮನಸ್ಫೂರ್ತಿಯಾಗಿ ಅವರ ಭಾಷಣ ಬರಲಿಲ್ಲ, ಇದರಿಂದ ನನಗನಿಸುತ್ತದೆ ಏನೆಂದರೆ, ಇವರಲ್ಲೇ

ಭಿನ್ನಾಭಿಪ್ರಾಯ ಇದೆಯೋ ಏನೋ ಎಂದು. ಏನೋ ವಿರೋಧಪಕ್ಷದವರು ಗಲಾಟೆ ಮಾಡುತ್ತಾರೆ ಅದಕ್ಕೆ ತಂದಿವ್ವಾರೋ ಅಥವಾ ಒಳ್ಳೆಯ ನಮದ್ದೇಶದಿಂದ ತಂದಿವ್ವಾರೋ, ಅದನ್ನು ಒಪ್ಪಿಕೊಳ್ಳಬೇಕೋ, ಎಂದು ನನಗಂತೂ ಅರ್ಥವಾಗುತ್ತಿಲ್ಲ. ಇದರಲ್ಲಿ ಕ್ಲಾಜ್ 3(ಎ)ಹಾಕಿದ್ದಾರೆ, ಅದು ಸರ್ವತಾ ನರಿಯುಲ್ಲ. ಒಂದು ತತ್ವವನ್ನು ನಾನು ಒಪ್ಪಿಕೊಳ್ಳುತ್ತೇನೆ, ನಮ್ಮ ಪಕ್ಷದವರೂ ಒಪ್ಪಿಕೊಳ್ಳುತ್ತಾರೆ ಏನೆಂದರೆ, ನೀವು ಒಳ್ಳೆಯ ರೀತಿಯಿಂದ ಕೆಲಸ ಮಾಡಿದರೆ, ನಮ್ಮ ಸಹಕಾಯು ಇದ್ದೇ ಇದೆ. ನಿಮಗೆ ಕೈರಾದ ಸಹಾಯವನ್ನು ನಾವು ಮಾಡುತ್ತೇವೆ. ನಿಮ್ಮ ಸ್ಯಪ್ರಯತ್ನವನ್ನು ಇದರಲ್ಲಿ ಜೋಡಿಸ ಬೇಕು. ಈ ಮಸೂದೆಯ ಒಳ ತತ್ವವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಮಸೂದೆಯಲ್ಲಿ ಇರತಕ್ಕ ರೀತಿಯಲ್ಲಿ ಹೋಗುವುದಕ್ಕಾಗುವುವಿಲ್ಲ. ಮಾನ್ಯ ಮಂತ್ರಿಯವರು ಹೇಳುತ್ತಾರೆ, ಪ್ರಾಜೆಕ್ಟಿನ ಅಭಿವೃದ್ಧಿಯನ್ನು ತಿಳಿದುಕೊಂಡು ಇದನ್ನು ಮಾಡಿದ್ದು ಎಂದು. ಜನರಲ್ಲಿ ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೇಳುತ್ತಿದ್ದೇವೆ ಎನ್ನುವುದಾದರೆ, ಜನರ ಅಭಿಪ್ರಾಯವೂ ಏನೆಂಬುದನ್ನು ತಿಳಿದು ಕೊಳ್ಳುವುದು ಮುಖ್ಯ. ಅದಕ್ಕೂ ಸಹ ಸರ್ಕಾರದವರು ಒಪ್ಪಿದರೆ ಒಳ್ಳೆಯದು. ಒಂದು ವೇಳೆ ನಾವು ಪಬ್ಲಿಕ್ ಒಪೀನಿಯನ್ ಏನೂ ಬೇಡ ಎಂಬ ಅಭಿಪ್ರಾಯದಲ್ಲಿದ್ದರೆ, ಇದು ಸೆಲೆಕ್ಟ್ ಕಮಿಟಿಗಂತೂ ಹೋಗಲೇಬೇಕು. ಏಕೆಂದರೆ, ವಾದಗ್ರಸ್ಥವಾದ ಅನೇಕ ಅಂಶಗಳು ಇವೆ. ಇಲ್ಲಿ ಒಂದು ಕಡೆ ಡಿಸ್ಕ್ರಿಮಿನೇಷನ್ ಮಾಡುತ್ತಾರೆ. 3 (ಎ) ಯಲ್ಲಿ :

> "Notwithstanding anything in this Act, where the Government, having due regard to the relative priority of works and availability of funds, is of opinion that unless advance contribution as provided hereunder is paid by the landholders of all lands which are capable of being benefited by the completion of the construction, restoration, expansion or alteration....."

ಎಂದು ಹೇಳುತ್ತಾರೆ. ಅಂದರೆ ಸರ್ಕಾರದ ದೃಷ್ಟಿಯಲ್ಲಿ due regard to the relative priority of work ಎಂದು ಇದೆ. ಯಾರು ಇದನ್ನು ಹೇಳುವವರು ? ಯಾವ ತತ್ವದಮೇರೆ ಇದನ್ನು ಹೇಳುತ್ತಾರೆ ? ಇಂಥ ಪ್ರಾಜೆಕ್ಟ್, ಇದು ಪ್ರಯಾರಿಟಿಮೇರೆ, ಎಂಬುದನ್ನು ಯಾವ ಯಾರ್ಡ್‌ಸ್ಟಿಕ್ಸ್ ಮೇರೆ ಹೇಳುತ್ತಾರೆ ? ಇದು ಮಾಡಿದ್ದು ನರಿಯುಲ್ಲ. All major irrigation projects which cost more than one crore, regardless of the fact whether they have been started or to be started or they are at some stage of progress like the Kabini, Ghataprabha, Malaprabha, Upper Krishna, or whatever it is. ಎಲ್ಲವೂ ಇದಕ್ಕೆ ಬರಬೇಕು. ಮೇಜರ್ ಪ್ರಾಜೆಕ್ಟ್ಸ್ ಏನಿವೆ, ಅವೆಲ್ಲಕ್ಕೂ ಈ ಕಾನೂನು ಅನ್ವಯಿಸಬೇಕು, ಆವಾಗ ಡಿಸ್ಕ್ರಿಮಿನೇಷನ್ ಬರುವುದಿಲ್ಲ. ಇದರ ಪ್ರಕಾರ ಪ್ರಾಜೆಕ್ಟ್ (ಎ) ಇದು ಪ್ರಯಾರಿಟಿ ಪ್ರಕಾರ ಮುಖ್ಯವಾದುದು, ಇದನ್ನು ತೆಗೆದುಕೊಳ್ಳುತ್ತೇವೆ ; ಎಂದು ಹೇಳಬಹುದು. ಈಗ ಏರಿಯಾ (ಏ) ಯಲ್ಲಿ ಪ್ರಾಜೆಕ್ಟ್ ತೆಗೆದುಕೊಂದು 66 ಪರ್ಸೆಂಟ್ ಖರ್ಚು ಮಾಡಿದ್ದೇವೆಂದು ಹೇಳಬಹುದು. ಇನ್ನೊಂದು ಏರಿಯಾ (ಬಿ) ಯಲ್ಲಿ ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೊಟ್ಟರೆ ಮುಂದುವರಿಯುತ್ತೇವೆಂದು ಹೇಳಬಹುದು. ಈ ರೀತಿಯಾಗಿ ಒಬ್ಬೊಬ್ಬರಿಗೆ ಮನಸ್ಸಿನ ದ್ವೇಷ, ಮನಸ್ಸಿನಲ್ಲಿರುವ ವೈಮನಸ್ಸನ್ನು ಇವುಗಳನ್ನು ಹುಟ್ಟಿಸುವುದಕ್ಕೆ ಸಾಧ್ಯವಾಗುತ್ತದೆ. ಈಗ ಆ ಕಾನೂನಿನಲ್ಲಿ ಯಾವ ಮೇಜರ್ ಪ್ರಾಜೆಕ್ಟ್ಸ್ ಇವೆ, ಅವೆಲ್ಲವನ್ನೂ ಇದಕ್ಕೆ ಅನ್ವಯಿಸಬೇಕು. 'having due regard to the relative priority' ಇದನ್ನು ಸರ್ಕಾರದವರು ಕೇಳುವಾರದು. ಆಗ ಏನಾದರೂ ಇದನ್ನು ಒಪ್ಪಿಕೊಳ್ಳಬಹುದು. ಕ್ಲಾಸ್ (ಎ) ಯಲ್ಲಿ 'ಇರಿಗೇಟಿಂಗ್ ಪೋರ್‌ದ್ಯಾನ್ 100 ಎಕರ್ಸ್' ಎಂದು ಇದೆ. ಅದು ಬೇಡವಾಗಿತ್ತು. ನಾಳೆ ನಮ್ಮ ಊರಿನಲ್ಲಿ ಒಂದು ಕೆರೆ ಕಟ್ಟ ಬೇಕಾವರೆ, ನೀವು ದುಡ್ಡು ಕೊಡಿ ಎಂದು ಹೇಳಬಹುದು. ಇವರು ಅನ್ಯಾಯವಾಗಿ, ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ, ಪುತ್ತು ಕೈಗಾರಿಕೆಗಳನ್ನು ಮಾಡುವುದಕ್ಕೆ, ಇದಕ್ಕೆರ್ಾ ನಮ್ಮ ರೈತರು ದುಡ್ಡು ಕೊಡುವುದಕ್ಕೆ ತಯಾರಾಗಿಲ್ಲ. ಈಗ ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೊಡಬೇಕಾದರೆ, ನಿಮ್ಮಲ್ಲಿ ಅವರಿಗೆ ನಂಬಿಕೆ ಬರಬೇಕು. ನೀವು ಹೋಗಿ ಹೇಳುವಹಾಗೆ ಇರಬೇಕು. ಇಂಥ ಕಾರಣದಿಂದ ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೇಳುತ್ತಿದ್ದೇವೆಂದು ಹೇಳಬೇಕು. ಇಷ್ಟೆರ್ಾ ಕಂಟ್ರಿಬ್ಯೂಷನ್ ಕೊಡುತ್ತೇವೆಂದು ಯಾರೂ ಜನರು ಪಜ್ಜೆ ಬರೆದುಕೊಂಡು ಬರುವುದಿಲ್ಲ. ಹಳ್ಳಿಗಾಡಿನಲ್ಲಿರತಕ್ಕ ಅನೇಕ ಜಮೀನುಗಳು ಬೀಡಾಗಿವೆ. ಅದರಲ್ಲೂ ನೀವು ಎರಡನೇ ಪಾರ್ಟ ಏಕೆ ಕೇಳುತ್ತಿದ್ದೀರೆಂದರೆ, ನಿವಾಗೆ ಭಯ ಬಂದಿದೆ. ಒಪನ್ ಮಾರ್ಕೆಟ್ಟಿನಲ್ಲಿ ನಿಮಗೆ ಸಾಲ ಸಿಗುತ್ತಾ ಇಲ್ಲ. ನೀವು ಬಹುಶಃ ಹೊರಗಡೆ ತೋರಿಸಬೇಕಾಗಿದೆ, ಏನೆಂದರೆ ನಮ್ಮ ಜನರಿಗೆ ಆಸಕ್ತಿ ಇವೆ, ಅವರು

(ಶ್ರೀ ಎಚ್. ಸಿದ್ಧವೀರಪ್ಪ)

ಸಹಾಯ ಮಾಡುವುದಕ್ಕೆ ಬರುತ್ತಿದ್ದಾರೆ, ಆದ್ದರಿಂದ ಕೇಂದ್ರ ಸರ್ಕಾರದವರೂ ಸಹಾಯ ಮಾಡಿ ಎಂದು. ಅಥವಾ ನೀವು ಯಾವ ರೀತಿಯಿಂದಲಾದರೂ ಹಣವನ್ನು ಪಸೂಲು ಮಾಡುವುದಕ್ಕೆ ಜನ ಗಳ ಪ್ರಯತ್ನ ಇದೆ ಎಂಬುದನ್ನು ತೋರಿಸುವುದಕ್ಕೋಸ್ಕರ ಈರೀತಿ ಕಾನೂನನ್ನು ನಮ್ಮ ಮುಂದಿಡು ವುದಕ್ಕೆ ಪ್ರಯತ್ನ ಮಾಡಿದ್ದೀರಾ ಎಂದು ನನಗನಿಸುತ್ತದೆ. ನಿನ್ನೆ ಮಾನ್ಯ ಚನ್ನಬಸಪ್ಪನವರು ಹೇಳಿದ ಹಾಗೆ ನಿಮ್ಮ ಅಡ್ವಾನ್ಸ್ ಕಂಟ್ರಿಬ್ಯೂಷನ್‌ನಲ್ಲಿ ನಿಮ್ಮ ಕರೆ ಆಗುವುದಿಲ್ಲ. ಮೈನರ್ ಇರಿಗೇಷನ್— ಅಂದರೆ ಮಾನ್ಯ ದೊಡ್ಡಮೇಟಿಯವರ ಇಲಾಖೆಯಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದರು, ಲಘ್ಟ್ ಇರಿಗೇಷನ್ ಕೆಲಸಗಳು ಕೆಲವುಕಡೆ ಚೆನ್ನಾಗಿ ಮಾಡುತ್ತಿದ್ದರು.

ಆದರೆ ಅವರಿಗೆ ಏನಾಯಿತೋ ಏನೋ ಆ ಯೋಜನೆಯನ್ನು ಈಗ ನಿಲ್ಲಿಸಿದ್ದಾರೆ. ಇವೊತ್ತು ರೈತರಿಗೆ ಸರ್ಕಾರದವರು ನೀರಾವರಿ ಸೌಲಭ್ಯವನ್ನು ಒದಗಿಸಬೇಕು ಎನ್ನುವುದಾದರೆ 100 ಎಕರೆ ಯಿಂದ 300 ಎಕರೆಯವರೆಗೆ ನೀರಾವರಿ ಆಗತಕ್ಕಂಥ ಕಾಮಗಾರಿಗಳನ್ನು ತೆಗೆದುಕೊಂಡು ಒಂದು ವರ್ಷಕ್ಕೆ ಒಂದು ಲಕ್ಷ ಎಕರೆಗೆ ನೀರಾವರಿ ಸೌಲಭ್ಯವನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. 100 ಎಕರೆಯಿಂದ 300 ಎಕರೆಗಳವರೆಗೆ ಇರತಕ್ಕಂಥ ನೀರಾವರಿಗಳನ್ನು ಮೈನರ್ ಇರಿಗೇಷನ್‌ನಲ್ಲಿ ಸೇರಿಸಬೇಕು. ಮೀಡಿಯಂ ಇರಿಗೇಷನ್‌ನಲ್ಲಿ ಸೇರಿಸಕೂಡದು ಎಂದು ನನ್ನ ಅಭಿಪ್ರಾಯ.

ಈಗ ಈ ಮಸೂದೆಯ ಪ್ರಕಾರ ಯಾವುದಾದರೂ ಒಂದು ಪ್ರಾಜಿಕ್ಟಿನ ಕೆಲಸವನ್ನು ತೆಗೆದು ಕೊಳ್ಳಬೇಕಾದರೆ ಆ ಪ್ರಾಜೆಕ್ಟ್ ಆಗತಕ್ಕಂಥ ಏರಿಯಾದಲ್ಲಿರತಕ್ಕ ಜನರಲ್ಲಿ ಶೇಕಡಾ 66 ಜನರು ಆದಕ್ಕೆ ಒಪ್ಪಿಗೆಯನ್ನು ಕೊಟ್ಟು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಅವರು ಮುಂದೆ ಬರಬೇಕು. ಇನ್ನು 66 ಪರ್ಸೆಂಟ್ ಜನಗಳು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಮುಂದೆ ಬಾರದಿದ್ದರೆ, ಆ ಪ್ರಾಜೆಕ್ಟಿನ ಕೆಲಸವನ್ನು ತೆಗದುಕೊಳ್ಳುವುದಕ್ಕೆ ಪ್ರಾವಿಜನ್ ಇಲ್ಲ. 66 ಜನಗಳು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಒಪ್ಪಿಕೊಂಡು ಆ ಪ್ರಾಜೆಕ್ಟಿನ ಕಾಮ ಕಾರಿಯನ್ನು ತೆಗೆದುಕೊಳ್ಳಿ ಎಂದು ಜನಗಳು ಸರ್ಕಾರಕ್ಕೆ ಹೇಳಿದರು ಆಗ ಸರ್ಕಾರದವರು ಆ ಪ್ರಾಜೆಕ್ಟಿನ ಕಾಮಗಾರಿಯನ್ನು ಮಾಡುತ್ತೇವೆಂದು ಹೇಳಬೇಕಾಗಿದ್ದರೆ ಆ ಬಗ್ಗೆ ಸರ್ಕಾರದವರು ನೋಟಿಫಿಕೇಷನ್ ಹೊರಡಿಸುತ್ತಾರೆ, ಆಗ ಕೆಲಸವನ್ನು ಪ್ರಾರಂಭ ಮಾಡುತ್ತಾರೆ. ಆದರೆ ಆ ಪ್ರಾವಿಜನ್‌ನಲ್ಲಿ ಇಷ್ಟೇ ವರ್ಷಗಳಲ್ಲಿ ಆ ಪ್ರಾಜೆಕ್ಟಿನ ಕಾಮಗಾರಿಯನ್ನು ಪೂರೈಸುತ್ತೇವೆ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅಂಥಾ ಒಂದು ಪ್ರಾವಿಜನ್ ಇದರಲ್ಲಿ ಇಲ್ಲ. ಆ ಬಗ್ಗೆ ಈ ಮಸೂದೆಯಲ್ಲಿ ಸುಮ್ಮನೆ ಮೊಗಂಯಿಗಿ ಹೇಳಿದ್ದಾರೆ. ಸರ್ಕಾರದವರು ಮನಸ್ಸಿನಲ್ಲಿ ಏನೋ ಒಂದು ಅಭಿಪ್ರಾಯವನ್ನು ಇಟ್ಟುಕೊಂಡು ರೈತರಿಗೆ ಹಣ ಕೊಡಬೇಕು ಎಂದು ಒಂದೇ ವಾಕ್ಯದಲ್ಲಿ ಹೇಳಿದರೆ ದುಡ್ಡು ಕೊಡುವವರು ಯಾರು? ಆದಕಾರಣ ಇದಕ್ಕೆ ರೈತರು ಹಣ ಕೊಡಬೇಕಾಗಿಲ್ಲ. ಈ ಹಣವನ್ನು ಬ್ಯಾಂಕಿನಿಂದ ಒದಗಿಸುತ್ತಾರೆ. ಎಂದು ಸ್ಪಷ್ಟವಾಗಿ ಹೇಳಿದರೆ ಆಗ ಯಾವ ಅನುಮಾನಕ್ಕೂ ದಾರಿಇಲ್ಲ. ರೈತರೂ ತಮ್ಮ ಜಮೀನನ್ನು ಬ್ಯಾಂಕಿಗೆ ದೀಡು ಮಾಡಿಕೊಟ್ಟರೂ ಅವರ ಜಮೀನು ಅವರ ಹತ್ತಿರವೇ ಇರುತ್ತದೆ. ರೈತರಿಗೆ ಸಾಲವನ್ನು ಮಾಡುವುದು ಹೊಸದೇನೂ ಅಲ್ಲ. ಅದು ಹಳೆಯದು ಎಂದಾಗುತ್ತದೆ. ಆದರೆ ಈ ವಿಚಾರವನ್ನು ಮಸೂದೆಯಲ್ಲಿ ಏತಕ್ಕೋಸ್ಕರ ಸ್ಪಷ್ಟವಾಗಿ ಕಾಣಿಸಲಿಲ್ಲ? ಹಣವನ್ನು ಭರ್ತಿ ಮಾಡತಕ್ಕಂಥ ಜವಾಬ್ದಾರಿ ಸರ್ಕಾರಕ್ಕೆ ಸೇರಿದೆ. ನಿಮ್ಮ ಜಮೀನನ್ನು ಬ್ಯಾಂಕಿಗೆ ದೀಡು ಮಾಡಿ ಅವರಿಂದ ಹಣವನ್ನು ತೆಗೆದುಕೊಂಡು ಪ್ರಾಜೆಕ್ಟ್ ಕಟ್ಟುತ್ತೇವೆ. ಆ ಪ್ರಾಜಿಕ್ಟಿಗೆ ಇಷ್ಟು ಹಣವನ್ನು ಖರ್ಚುಮಾಡಿ ಇಷ್ಟು ವರ್ಷಗಳಲ್ಲಿ ಕಟ್ಟುತ್ತೇವೆ ಎನ್ನುವ ವಿಷಯವನ್ನು ಇದರಲ್ಲಿ ತೋರಿಸತಕ್ಕದ್ದು ಸರ್ಕಾರದ ಜವಾಬ್ದಾರಿ. ಮುತ್ತು ಬ್ಯಾಂಕಿನಿಂದ ಪಡೆಯತಕ್ಕ ಹಣ ಏನಿದೆ ಅದರ ಬಡ್ಡಿಯನ್ನು ರೈತರಮೇಲೆ ಹಾಕಕೂಡದು. ಬಡ್ಡಿಯನ್ನು ಕೊಡ ತಕ್ಕಂಥ ಜವಾಬ್ದಾರಿಯನ್ನು ಸರ್ಕಾರದವರೇ ವಹಿಸಿಕೊಳ್ಳಬೇಕು. ಬೆಟರ್‌ಮೆಂಟ್‌ಲೆವಿ ಉದ್ದೇಶ ಏನೆಂದರೆ ರೈತನ ಜಮೀನು ಬೆಟರ್‌ಆಯಿತು. ಬೆಲೆ ಜಾಸ್ತಿ ಆಯಿತು ಎಂದು ಹೇಳಿದರು ಪ್ರಾಜೆಕ್ಟಿನ ಕಟ್ಟಡ ಆಗಿ ನೀರಾವರಿ ಬರುವುದಕ್ಕೆ ಮುಂಚೆ ಒಂದು ಎಕರೆಗೆ ಒಂದು ಸಾವಿರ ರೂಪಾಯಿಗಳು ಇತ್ತು. ನೀರಾವರಿ ಬಂದಮೇಲೆ ಆ ಜಮೀನಿನ ಬೆಲೆ ಜಾಸ್ತಿಯಾಗಿದೆ. ಆದ್ದರಿಂದ ನೋಲಾಸ್ ನೋಪ್ರಾಫಿಟ್ ಮೇಲೆ ಒಂದು ಎಕರೆಗೆ 300 ರೂಪಾಯಿ ಬೆಟರ್‌ಮೆಂಟ್ ಲೆವಿ ಫಿಕ್ಸ್ ಮಾಡಿದ್ದೇವೆ. ಈ ಬೆಟರ್‌ಮೆಂಟ್‌ಲೆವಿಯನ್ನು 15-20 ಕಂತುಗಳಲ್ಲಿ ತೆಗೆದುಕೊಳ್ಳಬೇಕು ಎಂದು ಮಾಡಿದ್ದೇವೆ. ಆದ್ದರಿಂದ ಈ ಬೆಟರ್‌ಮೆಂಟ್‌ಲೆವಿ 500 ರೂಪಾಯಿ ಆಗಿದೆ ಎಂದು ಹೇಳಿದ್ದಾರೆ. ಇದು ಬೆಟರ್‌ಮೆಂಟ್‌ಲೆವಿಗೆ ಸಂಬಂಧಪಟ್ಟದ್ದು. ಈಗ ಈ ಅಡ್ವಾನ್ಸ್ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್‌ಅನ್ನು

ನರ್ಕಾರದವರು ಏತಕ್ಕೋಸ್ಕರ ಕೇಳುತ್ತಿದ್ದಾರೆ. ನರ್ಕಾರದಲ್ಲಿ ದುಡ್ಡಿಇಲ್ಲ ಎಂದು ಇದನ್ನು ಕೇಳುತ್ತಿದ್ದಾರೆಯೇ ಎನ್ನುವ ವಿಚಾರ ಗೊತ್ತಿಲ್ಲ. ಇವುಗಳನ್ನೆಲ್ಲಾ ಪರಿಶೀಲನಬೇಕಾದರೆ ಈ ಕಾನೂನನ್ನು ಆಮೂಲಾಗ್ರವಾಗಿ ಪರಿಶೀಲನಬೇಕು. ಈ ಅಡ್ವಾನ್ಸ್ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಬಗ್ಗೆ ಆಂಧ್ರದಲ್ಲಿ ಯಾವ ರೀತಿ ಮಾಡಿದ್ದಾರೆ ಎಂಬುದನ್ನು ನೋಡಬೇಕಾಗಿತ್ತು. ಆದರೆ ಆ ಪುಸ್ತಕ ಸಿಕ್ಕಲಿಲ್ಲ. ಅದು ಏನೇ ಇರಲಿ ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗಬೇಕು. ಇದನ್ನು ಈಗ ಇರುವ ರೀತಿಯಲ್ಲೇ ಪಾನು ಮಾಡುವುದು ಒಳ್ಳೆಯದಲ್ಲ. ಇದು ಸೆಲೆಕ್ಟ್ ಕಮಿಟಿಗೆ ಹೋಗಿ ಅಲ್ಲಿ ಇದನ್ನು ಕೂಲಂಕಷವಾಗಿ ನೋಡಿ ಎಲ್ಲಾ ಆಮೂಲಾಗ್ರವಾಗಿ ವಿಚಾರ ಮಾಡಿ ನರಿಯಾದ ಒಂದು ಕಾನೂನನ್ನು ತಂದು ದೇಶಕ್ಕೆ ಉಪಕಾರ ಮಾಡಬೇಕು ಎನ್ನುವ ದೃಷ್ಟಿಯಿಂದ ಇದು ಸೆಲೆಕ್ಟ್ ಕಮಿಟಿಗೆ ಹೋಗಬೇಕು. ಈ ಮಸೂದೆಯಲ್ಲಿರತಕ್ಕ ಅನೇಕ ವಿಷಯಗಳು ಸೆಲೆಕ್ಟ್ ಕಮಿಟಿಯಲ್ಲಿ ತೀರ್ಮಾನವಾಗಬೇಕಾಗಿದೆ. ಪ್ರಾಜೆಕ್ಟುಗಳನ್ನು ಕಟ್ಟುವಾಗ ಪ್ರಯಾರಿಟಿ ಪ್ರಶ್ನೆ ಬರುವುದಿಲ್ಲ. ಎಲ್ಲಾ ಪ್ರಾಜೆಕ್ಟುಗಳನ್ನೂ ಒಂದೇ ದೃಷ್ಟಿಯಿಂದ ನೋಡಬೇಕು. ಎಲ್ಲಾ ಕಾಮಗಾರಿಗಳ ವಿಷಯದಲ್ಲಿಯೂ ಒಂದೇ ಭಾವನೆ ಇರಬೇಕು, ಹೊಸದಾಗಲೀ ಹಳೆಯದಾಗಲೀ ಮೀಡಿಯಂ ಪ್ರಾಜೆಕ್ಟ್ ಆಗಲೀ, ಮೇಜರ್ ಪ್ರಾಜೆಕ್ಟ್ ಆಗಲೀ ಎಲ್ಲಕ್ಕೂ ಒಂದೇ ಕಾನೂನುಮಾಡಿಕೊಂಡರೆ ಎಲ್ಲರಿಗೂ ಒಂದು ಒಳ್ಳೆಯ ಅಭಿಪ್ರಾಯ ಬರುತ್ತದೆ. ಇದು ಯೂನಿಫಾರಂ ರಾ ಇದೆ. ಇದರಲ್ಲಿ ಡಿಸ್‌ಕ್ರಿಮಿನೇಷನ್ ಇಲ್ಲ, ಭಿನ್ನಾಭಿಪ್ರಾಯ ಇಲ್ಲ ಎಂಬುದು ಬರಬೇಕು. ಈ ದೇಶವನ್ನು ಒಡೆಯುದೇ ಇದು ಈಗ ಇದ್ದ ಹಾಗೆಯೇ ಒಂದೇ ರಾಜ್ಯವಾಗಿ ಇರಬೇಕು, ನಾವು ಅದಷ್ಟೂ ಯಾವ ರೀತಿಯ ಭಿನ್ನಾಭಿಪ್ರಾಯಕ್ಕೂ ಅವಕಾಶಕೊಡದಂತೆ ನಡೆದುಕೊಳ್ಳಬೇಕು, ನೋಡಿಕೊಳ್ಳಬೇಕು ಎನ್ನುವವರಲ್ಲಿ ನಾನೂ ಒಬ್ಬ. ಇವೊತ್ತಿನ ದಿವಸ ಕೃಷ್ಣಾಯೋಜನೆಯಾಗಲೀ, ಕಾವೇರಿಯೋಜನೆ ಯಾಗಲೀ ಎರಡನ್ನೂ ಒಟ್ಟಿಗೇ ಮಾಡಬೇಕು. ಕೃಷ್ಣಾಯೋಜನೆ ಎಷ್ಟು ಮುಖ್ಯವೋ, ಕಾವೇರಿ ಯೋಜನೆಯೂ ಅಷ್ಟೇ ಮುಖ್ಯ. ಆದ್ದರಿಂದ ಈ ಎರಡು ಯೋಜನೆಗಳನ್ನೂ ಕಾರ್ಯಗತ ಮಾಡ ಬೇಕಾಗುತ್ತದೆ. ಅಡ್ವಾನ್ಸ್ ಕಾಂಟ್ರಿಬ್ಯೂಷನ್ ವಸೂಲು ಮಾಡತಕ್ಕಂಥ ಕಾಯಿದೆ ಏನಿದೆ ಅದನ್ನೂ ಇಡೀ ದೇಶಕ್ಕೆ ಅನ್ವಯಿಸುವ ಹಾಗೆ ಮಾಡಬೇಕಾಗುತ್ತದೆ. ಈ ಮಸೂದೆಯನ್ನು ಸೆಲೆಕ್ಟ್‌ಕಮಿಟಿಗೆ ಕಳುಹಿಸಬೇಕು ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†Sri B. P. GANGADHAR (Tumkur).—Sir, this is one of the very important Bills that has come up for discussion this time. Many senior members both from the Ruling Party as well as from the Opposition have given their valuable suggestions in this matter. To some extent I concur with the sentiments expressed by the Hon. Member Sri D. M. Siddiah and I was impressed by the way he tried to project the lapses and deficiencies on the part of the Government in fulfilling the irrigation needs of our State. At the same time I wondered whether my friend Sri D. M. Siddaiah was speaking what he had in mind and whether he was true to his conscience. However, he said that the Bill must be passed.

Apart from that he said that this is a matter which should be taken up on war footing. I fully agree with him there because these are matters which are responsible for the development of the State. In fact, we are suffering from scarcity in every direction, especially in the food front. We are required to import huge quantities of foodgrains from outside where we are treated almost like beggars. To overcome this shartage on our food front, we have to see that every drop of water flowing down the rivers in our State is utilized to the maximum and no water is allowed to pass to another State. I wish we had a strong Government to take up this matter urgently on war footing. The example of Andhra Pradesh was quoted by our friend Sri Siddaiah. They have not spared any pains to go ahead with almost all projects whether it be Nagarjunasagar, Srisailam or any other project. They

(SRI B. P. GANGADHAR)

cared neither for the Centre's technical sanction nor for their money. They have the capacity to demand and coerce the Central Government to give them adequate funds for developing their projects. But so far as we are concerned, at every stage we are in difficulties. I do not know why. It must be because there is poor leadership or no leadership at all in our State or the persons holding the reigns of Government are incapable of getting adequate funds from the Centre or getting technical clearance for the projects. As a result of that all our projects are either half done or not at all commenced. An impression has been created that this Government is not capable of getting anything done. Have they launched any austerity measures? Have they been able to stop some of the lavish spending which is going on in every direction? Without doing any such thing, they are asking the people to give their contribution. The Government have sunk crores of rupees in certain industries which are either dying or which do not pay any return on the investment. That being the case, all the money that we are going to provide for these irrigation projects is likely to be wasted. That is our apprehension.

Before considering the details of the Bill, we want to know whether there is absolute necessity for this Bill at all. They are requesting us to pass this Bill so that they may be able to mortgage all the properties of the people. Before asking us to pass this drastic measure, they must show us sufficient justification for passing this Bill. So long as prohibition was there, we were not getting any money from excise; but now we are getting nearly Rs. 20 crores from excise. I personally feel if proper arrangements are made for auctioning the shops the Excise Department alone will fetch us more than Rs. 30 crores which is the amount required for taking up these irrigation projects. So if we try to augment the revenue from excise and if we adopt all austerity measures and tighten our belt and plug all loopholes in our spending I am sure we can get more than Rs. 30 crores which is required for taking up these irrigation projects and then there will not be any need for mortgaging all the properties of the people. This attempt at liquidation of the properties of the people only exhibits bankruptcy on the part of the Government. This Government has virtually become a bankrupt Government. Is it not shameful for Government to ask the people to mortgage their properties for this purpose to somebody else? Can they not raise this sum of Rs. 30 crores? Over and above the current revenues, they will be getting nearly Rs. 30 crores from excise from the next year and so there is no justification to ask for this contribution from the people.

Coming to the details of the Bill, I think they are very discriminatory. Even for restoration of an old tank they want contribution. Suppose there is an existing tank with 100 acres atchkat and it is breached. Our ancestors have already paid for the construction of this

tank. Even then the Government now expect the people to make their contribution for the restoration of the tank. The poor ryots are unable to make this contribution. If they do not make this contribution the Government will not restore the breached tank. This is what the Minister says here. I would say that whenever Ministers make a statement, they should make responsible statement and they should not simply say what they feel at the moment. This Bill covers not only the construction of new tanks, the repairs of old tanks but also the restoration of breached tanks or tanks which are silted. Desilting of the silted tanks is the responsibility of the Government.

4-00 P.M.

Further, the several sections that have been introduced give a long rope to the Government. They can take up on priority basis whichever tank they think fit and leave the rest. If they want to help a particular set of ryots, they can do it, and if they want to curb down they can do that also. The Government is trying to hoodwink the people by and large and they are making a legislation to suit one section of the people to the detriment of others. Therefore, there is absolutely no justification for bringing such a legislation before this House. I am of the opinion, as demanded by my other friends, that this Bill be circulated for eliciting public opinion or it may be referred to a Select Committee so that the members of the Committee sit coolly and bring in a better legislation. There is scope to bring in a better legislation on the model of other States. The present legislation is anti-social and is opposed to the interests of the ryots. I request the members to vote down this Bill.

Sri B. B. SAYANAK (Belgaum).—Mr. Speaker, Sir, I rise to strongly oppose the Mysore Irrigation (Levy of Betterment Contribution and Water rate) (Amendment) Bill, 1969. I cannot understand the policy of the Mysore Government or the intention of the Government in bringing such a rotton Bill before this House. Clause 3A of the Bill says.—

> "Notwithstanding anything in this Act, where the Government, having due regard to the relative priority of works and availability of funds, is of opinion that unless advance contribution as provided hereunder is paid by the landholders of all lands which are capable of being benefited by the completion of the construction, restoration, expansion or alteration of a work it is not possible for it,....."

By introducing this Bill, the Government is asking for advance contribution from the agriculturists or ryots. I would like to ask the Government whether it is not the duty of the Government to provide irrigation facilities to the agriculturists and provide facilities of electricity to the agriculturists for the "Grow More Food Campaign." When the agriculturists are paying land revenue, why does the

(SRI B. B. SAYANAK)

Government want this advance contribution from the agriculturists ? Do the Government consider agriculturists as rich people and are getting more money for their products in the market ? I am of the opinion that the condition of the agriculturists is worse. They are ignorant and illiterate and they cannot maintain accounts. If they maintain accounts, I am sure, we will find that an agriculturist's income is only four annas a day. It is rather shameful on the part of the Government to ask money from these agriculturists, who are in a pitiable condition. Is it not the duty of the Government to abolish the Khadi Board and other like organisations, which are incurring heavy losses and thus save lot of money ? Is it not the duty of the Government to reduce the number of Ministers and other excess establishments to give some facilities to the agriculturists ? Sub-clause (6) of Clause 3 says :—

> " Where the Government commences the execution of the work or proceeds towards the completion of the uncompleted part or stage of the work, as the case may be, as specified under sub-section (4), it shall be entitled to levy and collect the advance contribution ....."

I would like to know whether the Government has started a business to give rebate in this matter ? You should not harrass the agriculturists. You are getting Central assistance and it is the bounded duty of the Government to further the needs of the agriculturists, who are poor and down-trodden.

Thank you, Sir.

† SRI D. B. KALMANKAR (Aland).—Sir, the Mysore Irrigation (Levy of Betterment Contribution and Water Rate) (Amendment) Bill, 1969, is a classic example to show how the Government has become bankrupt. It is just like saying a prodigal son having taken his share and wasted it here and there, again coming back to the house and again claiming the share from the parents. The Hon. Member Sri Siddaiah with all earnestness spoke the other day saying that the matter is very serious, we have to treat the matter on war footing and we must not take a partisan attitude. As far as this amendment Bill is concerned, I can understand the spirit behind it. But the important problem is whether this Government, which was in power for the last 20 years deserves this sympathy from the public. The Government, which has spent huge amounts just to satisfy its whims and fancies, wants to perpetuate themselves in power regardless of the real difficulties of the people, have gone on spending crores of rupees on Co-operatives, Khadi and Village Industries and so on, and have not taken any steps to check corruption among the rank and file of the party in power. Now, they have come with this Bill.

And the Government want to see that the people contribute in advance for irrigation projects which would irrigate more than 100 acres of land. I know very well how things are going on in the Public Works Department. For instance there was a scheme for constructing 23 annecuts. Each Anecut was constructed by spending 20 to 25, thousand rupees. Now notices have been issued to many persons asking them to pay contribution charges under the Act though not even a drop of water is available in their lands nor any irrigation in these lands. Still they were asked to pay their contribution. Sir, most of the works undertaken are being done in a haphazard manner and it is mainly due to the intervention of the persons in power. Wherever it is a case of helping their own persons, the Government take up such works at the cost of the State Exchequer and wherever it is a case of those who are opposed to them, they are asked to pay contribution under the Act. There are lakhs and lakhs of Rupees spent on some wells. But during last so many years I have been urging the Government to take up some works in my district. I have tabled several starred questions, in this connection, still nothing has been done. Sir majority of the ryots are poor and they cannot afford to pay the contribution as required under the Act. They do not have money even for repairs, alterations etc. This is a great injustice done to the ryots. My submission is that this bill clearly exhibits the bankruptcy and inability of the Government. If the Government is not to carry out any work or construct anecuts on lands which irrigate more than 100 acres and if such constructions have to be done only by raising contributions from the people I do not know what else the Government is going to do. Sir, My humble submission is that either this bill should be sent for eliciting public opinion as demanded by Hon. Member Sri H. N. Nanje Gowda or it should be referred to a Select Committee, so that the pros and cons of the bill may be taken into consideration and then if it is found necessary to be dropped, it may be dropped.

With these words, I conclude my speech.

† ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಈವೊತ್ತು ಈ ವಿಧೇಯಕವನ್ನು ಸರಿಯಾಗಿ ಯೋಜಿಸಿ ತಂದ ಹಾಗೆ ಕಾಣುವುದಿಲ್ಲ. ಕಾರಣ ಅಗ್ರಿಕಲ್‌ಚರ್ ಡೆಟ್ ರಿಲೀಫ್ ಬಗ್ಗೆ ಎಲ್ಲಾ ಕೋರ್ಟುಗಳಲ್ಲಿ ಬಂದಿರುವ ಅರ್ಜಿ ನೋಡಿದರೆ, ಅದು 200 ಕೋಟಿ ರೂಪಾಯಿ ತನಕ ಆಗುತ್ತದೆ. ಇನ್ನು ಸಹಕಾರ ಬ್ಯಾಂಕಿನಲ್ಲಿರುವ ಸಾಲವನ್ನು ನೋಡಿದರೆ ಸುಮಾರು 50 ಸಾವಿರ ರೂಪಾಯಿನಷ್ಟು ಸುಸ್ತಿ ಕೊಡಬೇಕಾಗಿದೆ. ಅವರು ಮಾಡಿರುವ ಎಲ್ಲಾ ಬ್ಯಾಂಕುಗಳ ಸಾಲ ನೋಡಿದರೆ ಸುಮಾರು 500 ಕೋಟಿ ರೂಪಾಯಿಗಳಷ್ಟು ಆಗುತ್ತದೆ. ಹೀಗಿರುವಾಗ ರೈತರ ಪರಿಸ್ಥಿತಿ ಏನು ಎಂದು ತಿಳಿದುಕೊಳ್ಳದೆ ಪುನಃ ಅವರಿಂದ 500 ರೂಪಾಯಿ ಕಾಂಟ್ರಿಬ್ಯೂಷನ್ ತೆಗೆದು ಕೊಳ್ಳೋಣ, ನೀರಾವರಿ ಕೆಲಸ ಮಾಡೋಣ ಎಂದು ಹೇಳಿದರೆ ಅದು ಕನಸು ಆಗುತ್ತದೆ. ಇದು ಕಾರ್ಯರೂಪಕ್ಕೆ ಬರಲು ಸಾಧ್ಯವಿಲ್ಲ ಎಂದು ಹೇಳಬೇಕಾಗಿದೆ. ಈವೊತ್ತು ಆಂಧ್ರದಲ್ಲಿ ದೊಡ್ಡ ನೀರಾವರಿ ಯೋಜನೆಗಳನ್ನು ಸಾಧನೆ ಮಾಡಿದ್ದಾರೆ. ಅದರಿಂದ ಅಲ್ಲಿಯ ಜನತೆಗೆ ಕಲ್ಯಾಣವಾಗಿದೆ. ಮತ್ತು ಅಲ್ಲಿ ಅವರು ಇದಕ್ಕಾಗಿ ಎಷ್ಟುಮಟ್ಟಿಗೆ ದುಡಿಮೆ ಮಾಡಿ ಇದನ್ನು ಸಾಧಿಸಿದ್ದಾರೆ ಮತ್ತು ಆ ಸರ್ಕಾರದ ನಿಲ್ಲುವು ಏನು ಎನ್ನುವುದನ್ನು ಯೋಚನೆ ಮಾಡಬೇಕು. ಅವರು ಮಾಡಿರುವುದರಲ್ಲಿ ಒಂದು ರೂಪಾಯಿಗೆ ನಾಲ್ಕಾಣೆ ಭಾಗವೂ ಕೂಡ ನಾವು ಕೆಲಸ ಮಾಡಿಲ್ಲ. ಈವೊತ್ತಿನ ದಿವಸ ಆಂಧ್ರದಲ್ಲಿ ರಸ್ತೆಗಳ ಕೆಲಸ, ಸೇತುವೆಗಳ ಕೆಲಸ, ಬಿಲ್ಡಿಂಗ್ ಕೆಲಸ ಜೊತೆಗೆ ಹಳೆ ರಸ್ತೆಗಳ ನಿರ್ಮಾಣವನ್ನು ಸಹ ನಿಲ್ಲಿಸಿ ಆ ಹಣವನ್ನು ನಾಗಾರ್ಜುನ ಸಾಗರಕ್ಕೆ ಹಾಕಿ 250 ಕೋಟಿ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ರೂಪಾಯಿಯಲ್ಲಿ ಆ ಪ್ರಾಜೆಕ್ಟನ್ನು ಕಟ್ಟಿದ್ದಾರೆ. ಇದಲ್ಲದೆ ಆ ಸರ್ಕಾರ ಇನ್ನೂ ಬೇರೆ ಬೇರೆ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಿದ್ದಾರೆ. ನಮ್ಮಲ್ಲಿ ಕೋಟ್ಯಾಂತರ ರೂಪಾಯಿ ಸುರಿದು ಬಿಲ್ಡಿಂಗ್‌ಮೇಲೆ, ಸೇತುವೆಗಳಮೇಲೆ, ರಸ್ತೆಗಳಮೇಲೆ ಹಾಕಿ ವರ್ಷೇ ವರ್ಷೇ ಸಾಲ ಹಾಸ್ತಿ ಮಾಡಿಕೊಂಡಿದ್ದಾರೆ. ಇಲ್ಲಿ ಜೀವನ ಮಾಡುವುದೇ ಕಷ್ಟ ಇರುವಾಗ ನೀರಾವರಿ ಯೋಜನೆಗಳನ್ನು ಮಾಡುತ್ತೇವೆಂದು ಹೇಳಿ ಹೊರಲಾರದೇ ಇರುವ ಹೊರೆಯನ್ನು ಜನರಮೇಲೆ ಹೇರಿ ತೊಂದರೆಗಳನ್ನು ಕೊಡುತ್ತಿದ್ದೀರಿ. ಇಂಥ ಕ್ರಮ ಸಾಧುವಾದುದಲ್ಲ. ಇದು ಶುದ್ಧ ಮೋಸ, ಕಪಟ, ಎಂದು ಹೇಳುತ್ತೇನೆ. ದೇಶದಲ್ಲಿ 10 ಭಾಗ ಕೂಡ ನೀರಾವರಿ ಯೋಜನೆ ಕೈಗೊಂಡಿಲ್ಲ. ಈ ರೀತಿ ಮಾಡಿದರೆ ರೈತ ಏನೂ ಉದ್ಧಾರವಾಗುವುದಿಲ್ಲ. ಇದನ್ನು ಸರ್ಕಾರ ಮನಗಾಣಬೇಕು. 22 ವರ್ಷದ ನಂತರ ಈಪೊತ್ತು ಒಂದು ಹೊಸ ಕಾನೂನು ತಂದು ರೈತನನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳಿ ನೀರಾವರಿ ಯೋಜನೆಗೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ತೆಗೆದು ಕೊಳ್ಳುವುದು ಸರಿಯಾದುದಲ್ಲ. ಆದುದರಿಂದ ನಾನು ಈಪೊತ್ತಿನ ದಿವಸ ಹೇಳುವುದಾದರೆ ನಮ್ಮ ದೇಶದಲ್ಲಿ ಮುಕ್ಕಾಲುಭಾಗ ಜನಕ್ಕೆ ಜೀವನ ಮಾಡುವುದೇ ಕಷ್ಟವಾಗಿರುವಾಗ ಅಂಥವರನ್ನು 500 ರೂಪಾಯಿ ಕಾಂಟ್ರಿಬ್ಯೂಷನ್ ಕೊಡಬೇಕು ಎಂದರೆ ಸರ್ಕಾರದ ಧೋರಣೆ ಏನು ಎಂದು ಕೇಳಬೇಕಾಗಿದೆ. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಅನೇಕ ಪ್ರಾಜೆಕ್ಟ್‌ಗಳನ್ನು ಮಾಡುತ್ತೇವೆಂದು ಹೇಳಿ ಆ ಕೆಲಸಗಳು ನಾಲ್ಕನೇ ಪಂಚವಾರ್ಷಿಕ ಯೋಜನೆಯಾದರೂ ಪೂರೈಸಿಲ್ಲ. ಸುಮಾರು 15-20 ವರ್ಷವಾದರೂ ಕೂಡ ರೈತರ ಕಷ್ಟವನ್ನು ಇನ್ನೂ ಸುಧಾರಿಸಿಲ್ಲ. ಈಗ ಬ್ಯಾಂಕಿಂದ 500 ರೂಪಾಯಿ ರೈತನಿಗೆ ಸಾಲ ಕೊಡಿಸಿ ಅದರಿಂದ ಪ್ರಾಜೆಕ್ಟ್ ಕಟ್ಟುತ್ತೇವೆಂದು ಹೇಳಿದರೆ ಆ ರೈತನು ಮಾಡಿರುವ ಸಾಲಕ್ಕೆ ಬಡ್ಡಿ ಕಟ್ಟಿಕೊಂಡು ಅದರ ಪ್ರತಿಫಲವನ್ನು ಪಡೆಯುವುದರೊಳಗೆ ಸಾಲ ಮಾಡಿರುವ ಜಮೀನು ಬೇರೆಯವರ ಜಮೀನು ಆಗಿರುತ್ತದೆ. ಅನೇಕ ಉದಾಹರಣೆಗಳು ತಮಗೆ ಗೊತ್ತಿದೆ. 1, 2, 3, ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾಜೆಕ್ಟ್‌ಗಳ ಕೆಲಸವನ್ನು ತೆಗೆದುಕೊಳ್ಳಬೇಕಾದರೆ 300 ಕೋಟಿ ಚಿಲ್ಲರೆ ಬೇಕು ಎಂದು ಹೇಳಿದಿರಿ ಮತ್ತು ಈವೊತ್ತೂ ಕೂಡ 26 ಪ್ರಾಜೆಕ್ಟ್‌ಗಳ ಲಿಸ್ಟ್ ಇಟ್ಟಿದ್ದೀರಿ. ಆದರೆ ಯಾವುದೊಂದು ಪ್ರಾಜೆಕ್ಟ್ ಕೂಡ ಆಗಿಲ್ಲ. ಇದರ ಬಗ್ಗೆ ನಾನು ಹೇಳುವುದಾದರೆ 200 ಕೋಟಿ ರೂಪಾಯಿಯ ಪ್ರಾಜೆಕ್ಟೇ ಆಗಲಿ, 500 ಕೋಟಿ ರೂಪಾಯಿಯ ಪ್ರಾಜೆಕ್ಟೇ ಆಗಲಿ ನಿಮ್ಮ ಹತ್ತಿರ ಬಂಡವಾಳವೇ ಇಲ್ಲ. ಆದುದರಿಂದ ನೀವು ಎಷ್ಟನ್ನು ನಿರೀಕ್ಷಣೆ ಮಾಡಿಕೊಂಡಿರುತ್ತೀರೋ ಅಷ್ಟಕ್ಕೆ ಮಾತ್ರ ಯಾವ ಪ್ರಾಜೆಕ್ಟ್ ಆಗುವುದಕ್ಕೆ ಸಾಧ್ಯ ಇರುತ್ತದೋ ಅದನ್ನು ತೆಗೆದುಕೊಂಡು ಮುಗಿಸಬೇಕು, ಇಲ್ಲದಿದ್ದರೆ ಯಾವ ಪ್ರಾಜೆಕ್ಟ್ ಕೆಲಸವೂ ಕೂಡ ಮುಗಿಯುವುದಿಲ್ಲ. ಇದಕ್ಕೆ ಎರಡು ಕಾರಣಗಳನ್ನು ಕೊಡುತ್ತೇನೆ. ಮೊದಲನೆಯ ದಾಗಿ ಯಾವ ಕೆಲಸವನ್ನೇ ತೆಗೆದುಕೊಂಡರೂ ಟೈಂ ಷೆಡ್ಯೂಲ್ ಮಾಡಬೇಕು. ಏತಕ್ಕೆಂದರೆ ಇಷ್ಟೇ ದಿವಸದಲ್ಲಿ ಇಂಥ ಪ್ರಾಜೆಕ್ಟ್‌ಗಳ ಕೆಲಸವನ್ನು ತೆಗೆದುಕೊಂಡು, ಆ ಪ್ರಾಜೆಕ್ಟ್ ಕೆಲಸವನ್ನು ಮುಗಿಸಿ ಪೂರ್ತಿ ಪ್ರಯೋಜನವನ್ನು ರೈತರಿಗೆ ಕೊಡುವಂತಾಗಿರಬೇಕು. ಈ ರೀತಿಯಾದ ಒಂದು ಕ್ರಮ ನಿಮ್ಮಲ್ಲಿಲ್ಲ.

ಎರಡನೆಯದಾಗಿ ಇದಕ್ಕೆ ಬೇಕಾಗಿರುವ ಫೈನಾನ್ಷಿಯರ್ ಷೆಡ್ಯೂಲ್ ಮೊದಲೇ ಇಲ್ಲ. ಅದೇನೆಂದರೆ, ಯಾವ ಪ್ರಾಜೆಕ್ಟ್ ಆಗಲಿ ಒಂದು ಕೋಟಿಯೋ, 10 ಕೋಟಿಯೋ ಎಂದು ಅಂದಾಜು ಹಾಕಿದರೆ ಅದನ್ನು ಅಷ್ಟಕ್ಕೇ ಮುಗಿಸಬೇಕು. ಈ ಒಂದು ಕ್ರಮವೂ ನಿಮ್ಮಲ್ಲಿಲ್ಲ. 75 ಕೋಟಿಯ ಒಂದು ಪ್ರಾಜೆಕ್ಟ್ ತೆಗೆದುಕೊಂಡರೆ ಆ ಪ್ರಾಜೆಕ್ಟ್ ಮುಗಿಯುವ ವೇಳೆಗೆ 300 ಕೋಟಿ ರೂಪಾಯಿ ಆಗಿಬಿಡುತ್ತದೆ. ಉದಾಹರಣೆಗೆ ಹೇಳುವುದಾದರೆ ಮಲಪ್ರಭಾ ಪ್ರಾಜೆಕ್ಟ್ ತೆಗೆದುಕೊಳ್ಳಿ. ಇನ್ನೊಂದು ಯಾವುದಾದರೂ ಪ್ರಾಜೆಕ್ಟ್ ತೆಗೆದುಕೊಳ್ಳಿ. 60 ಲಕ್ಷ ರೂಪಾಯಿಗಳ ಪ್ರಾಜೆಕ್ಟ್ 300 ಲಕ್ಷ ಆಗಿ ಬಿಡುತ್ತದೆ. ಹೀಗೆ ಯಾವ ಪ್ರಾಜೆಕ್ಟೇ ಆಗಲಿ ಅದು ಪೂರೈಸುವ ವೇಳೆಗೆ ಒಂದಕ್ಕೆ 4, 5, 6ರಷ್ಟು ಆಗಿಬಿಡುತ್ತದೆ. ಆದುದರಿಂದ ನಾನು ಹೇಳುವುದು ಈ ಕೆಲಸಗಳಿಗೆ ಒಂದು ನಿರ್ದಿಷ್ಟವಾದ ಮೊತ್ತವನ್ನು ಇಟ್ಟುಕೊಂಡರೆ ಅದು ಅಷ್ಟಕ್ಕೆ ಪೂರೈಸಬೇಕು ಎಂದು ಹೇಳುತ್ತೇನೆ. ಈಗ ನಿರ್ದಿಷ್ಟವಾದ ಮೊತ್ತಕ್ಕೆ ಪ್ರಾಜೆಕ್ಟನ್ನು ಪೂರೈಸುವ ಯೋಜನೆ ನಿಮ್ಮಲ್ಲಿಲ್ಲ. ಈ ರೀತಿ ದೇಶ ಪಾಪರ್ ಆಗುವ ನೀತಿ ಅನುಸರಿಸುತ್ತಿದ್ದೀರಿ ಎಂದು ಹೇಳಿದರೆ ತಪ್ಪಾಗುವುದಿಲ್ಲ. ತಾವು ಯೋಚನೆ ಮಾಡಿ. ಈಪೊತ್ತಿನ ದಿವಸ ಯಾವ ಪ್ರಾಜೆಕ್ಟನ್ನೇ ತೆಗೆದುಕೊಳ್ಳಿ. ಶರಾವತಿ ಪ್ರಾಜೆಕ್ಟ್ ಆಗಲಿ, ಹೇಮಾವತಿ ಪ್ರಾಜೆಕ್ಟ್ ಆಗಲಿ, ಮಲಪ್ರಭಾ ಪ್ರಾಜೆಕ್ಟ್ ಆಗಲಿ, ಹಾರಂಗಿ ಪ್ರಾಜೆಕ್ಟ್ ಆಗಲಿ, ಕೃಷ್ಣಾ ಪ್ರಾಜೆಕ್ಟ್ ಆಗಲಿ ಯಾವುದೂ ಕೂಡ ಮೊದಲನೆ ಅಂದಾಜಿಗೆ ಒಂದೂ ಪೂರ್ಣವಾಗಿಲ್ಲ. ಮೊದಲಿಗಿಂತ ಒಂದಕ್ಕೆ 4, 5, 6ರಷ್ಟು ಹೆಚ್ಚಿನ ಅಂದಾಜಾಗಿದೆ ಎನ್ನುವುದನ್ನು ಹೇಳಬಹುದು.

ನೀವು ಎಷ್ಟೇ ರೆಕ್ಕ ಹಾಕಿಕೊಂಡು ಮುಂಗಡವಾಗಿ ಕಾಂಟ್ರಿಬ್ಯೂಷನ್ ಜನರಿಂದ ತೆಗೆದುಕೊಂಡರೂ ಮೊದಲು ಅಂದಾಜು ಮಾಡಿದ್ದಕ್ಕಿಂತ ಐದಾರು ಪಟ್ಟು ಖರ್ಚು ಹೆಚ್ಚಾಗುತ್ತಿರುವುದನ್ನು ನೋಡಿದರೆ ಯಾವ ಪ್ರಾಜೆಕ್ಟ್‌ಗಳಾದರೂ ಇಷ್ಟೇ ಪೊತ್ತಕ್ಕೆ ಮುಗಿಯುತ್ತವೆ ಎನ್ನುವ ನಂಬಿಕೆ ಯಾರಿಗಿದೆ? ಮಾನ್ಯ ಮುಖ್ಯ ಮಂತ್ರಿಗಳಾಗಲೀ, ನೀರಾವರಿ ಮಂತ್ರಿಗಳಾಗಲೀ, ಯಾವ ಪ್ರಾಜೆಕ್ಟೇ ಆಗಲಿ, ಅದನ್ನು ನಿಯಮಿತ ಕಾಲದಲ್ಲಿ, ನಿಯಮಿತ ಪೊತ್ತದಿಂದ, ನಿಯಮಿತವಾದ ಯೋಜನೆಯಿಂದ ಪೂರ್ತಿಸಿ ಅದರಿಂದ ಪ್ರಯೋಜನವನ್ನು ಪಡೆಯುತ್ತೇವೆ, ಆ ಯೋಜನೆಯನ್ನು ಮುಗಿಸುತ್ತೇವೆ ಎಂದು ಹೇಳಿ ಅದರಂತೆ ಮಾಡುತ್ತಾರೆಯೇ? ಅದೇ ನಾವು ಆಂಧ್ರ ಪ್ರದೇಶವನ್ನು ತೆಗೆದುಕೊಂಡರೆ ನಾಗಾರ್ಜುನಸಾಗರವನ್ನು ಇಷ್ಟೇ ಕಾಲದಲ್ಲಿ ಮುಗಿಸುತ್ತೇವೆ, ಅದರ ಪ್ರಯೋಜನವನ್ನು ಇಷ್ಟರ ಮಟ್ಟಿಗೆ ಕೊಡುತ್ತೇವೆ ಎಂದು ಹೇಳಿದಂತೆ ಮಾಡಿ ಜನರಲ್ಲಿ ವಿಶ್ವಾಸವನ್ನು ಹುಟ್ಟಿಸಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಜನಗಳಿಗೆ ಇಂಥ ವಿಶ್ವಾಸ ಬರುವವರೆಗೂ ಒಂದು ಎಕರೆಗೆ 500 ರೂಪಾಯಿ ಪ್ರಕಾರ ಮುಂಗಡವಾಗಿ ಕಾಂಟ್ರಿಬ್ಯೂಷನ್ ಹಣವನ್ನು ಕೊಡಲು ಅವರಿಗೆ ಧೈರ್ಯವಿಲ್ಲ. ಶಂಕಾವತಿ ಯೋಜನೆಯಲ್ಲ ಆರೂವರೆ ಕೋಟಿ ರೂಪಾಯಿ ಖರ್ಚು ಮಾಡಿ ತಲಕಳಲೆ ಡ್ಯಾಂ ಕಟ್ಟಿಸಿದಿರಿ. ಅದರಲ್ಲಿ ವಿಪರೀತ ನೀರು ಬರುತ್ತದೆ ಎಂದು 13 ಲಕ್ಷ ರೂಪಾಯಿ ಖರ್ಚು ಮಾಡಿ ಹೋನ ಪೈಪ್ ಮುಖಾಂತರ ಸಿಮೆಂಟನ್ನು ಒಳಗೆ ತೂರಿಸಿದಿರಿ. ರಾಜ್ಯದಲ್ಲಿ ಕಟ್ಟರಾಗಿರುವ 16 ಸೇತುವೆಗಳಲ್ಲಿ 10 ಸೇತುವೆಗಳು ಹಾನಿಗೊಳಗಾಗಿವೆ ಎಂದು ಅದಕ್ಕೆ ಹಣವನ್ನು ಖರ್ಚು ಮಾಡುತ್ತಿದ್ದೀರಿ. ಮಾಡಿರುವ ಕೆಲಸವನ್ನು ನೋಡಿದರೆ ಈ ರೀತಿ, ಆಗಿರುವ ವೆಚ್ಚವನ್ನು ನೋಡಿದರೆ ಅರೇಳರಷ್ಟು. ಹೀಗಿರುವಾಗ ಯಾವ ರೈತನಾದರೂ ಕಾಂಟ್ರಿಬ್ಯೂಷನ್ ಕೊಡಲು ಮುಂದೆ ಬರುತ್ತಾನೆಯೇ? ರೈತನಿಗೆ ಬ್ಯಾಂಕುಗಳಿಂದ ಸಾಲ ಕೊಡಿಸುವ ವಿಚಾರವನ್ನು ಮಾನ್ಯ ಮಂತ್ರಿಗಳು ಹೇಳಿದರು. ಆ ರೀತಿಯಾಗಿ ಮಾಡಿದ್ದಾದರೆ ಬ್ಯಾಂಕಿನವರು ಅವನಿಗೆ ಬರಬೇಕಾಗಿರುವ ಹಣಕ್ಕಾಗಿ ರೈತನ ಆಸ್ತಿಯನ್ನು ಹರಾಜು ಹಾಕಿ ಅವನನ್ನು ಹಾಳು ಮಾಡತಕ್ಕ ಪರಿಸ್ಥಿತಿ ಬರುತ್ತದೆ. ರೈತ ಈಗ ಯಾವ ಸ್ಥಿತಿಗೆ ಬಂದಿದ್ದಾನೆ ಅದಕ್ಕಿಂತ ಕೀಳು ಸ್ಥಿತಿಗೆ ಬರುತ್ತಾನೆ. ಸಾಲದ ಹೊರೆಯಿಂದ ಸತ್ತು ಸುಣ್ಣವಾಗಿರುವವನ ಮೇರೆ ಹೆಚ್ಚು ಸಾಲವನ್ನು ಹೊರಿಸಿದರೆ ದೇಶದ್ರೋಹ ಮಾಡಿದ ಹಾಗಾಗುತ್ತದೆ. ಆದ್ದರಿಂದ ಈ ವಿಧೇಯಕವನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

† SRI V. N. PATIL (Humnabad).—It is very unfortunate that during this year of Gandhi Centenary, the Government is bent upon breaking the back bone of the down trodden class *i.e.*, the agriculturists. The Government is saying that they are for the agriculturists. This is the slogan they are crying. They have no regard or sympathy towards these poor people. If they love and it is only lip sympathy. Fortunately the Food Minister is here. He is not greatful to the agriculturists who are providing food to the people of the State. Can we be ungreatful to these people who are supplying food to the entire Nation? Instead of being good to them, they are creating all sorts of hardships to them. The are they back bone of the Nation. What is the return we are paying to these people? Do you think this measure is going to be a boon? It is nothing but crushing these down trodden people. Is it brought on them just because they are not having an organisation take the Chamber of commerce? Is this measure brought on them just because they are supporting the country in every respect? It is very unfortunate that this Government is bent upon imposing hardships on these people. The Government is behaving in an irresponsible manner. They say that they are for establishing Socialistic Pattern of Society. Is it to achieve that pattern of society, they are bringing in this legislation? Why not the Government itself spend on the construction of irrigation projects? Does the Government think this measure, if brought, would help the ryots? If such measures are brought into force, the richer classes wil be benefited. That is the position prevailing in the state.

(SRI V. N. PATIL)

What is happening in Tungabhadra and Cauvery basins ? All the lands are not being irrigated and it is only the lands of those who are able to spend, that are being irrigated. Unless the poor ryot is in a position to spend money for levelling his land and all that, there is no possibility of water coming to his land. 90 per cent of population of this State is in the same position. But our Government is pretending as if they are the guardian of the ryots. They are levying betterment fee if more than 100 acres are to be irrigated and contribution will be recovered in advance. Still you want to call it a progressive legislation. It is nothing but oppressive law. By this measure you are trying to crush the ryots. I call this a black Bill. If this Bill is passed it will amount to auctioning the land of a ryot if he does not pay the contribution and betterment fee. After the Bank nationalisation, we thought that wisdom has dawned on some section of the ruling party. In the party meeting of the ruling party I am told that some members have protested for bringing in this measure. It seems they have said that they will have no face to see the agriculturists in their constituency. Ordinarily the ryots will have already mortgaged their lands to meet expenditures connected with the marriages of their sons or daughters. Such being the case if they are compelled to pay the contribution and betterment levy, they have to sell their lands. That would be the position of the agriculturists if you bring this legislation into force.

In a Welfare State you are inviting industrialists from outside to establish industries here. Why don't you extract money from them ? You are not taking anything from firms like Tatas and Birlas. You want to give all facilities to them. You want to open more and more wine shops and distilleries and give encouragement to the richer class. At the same time you want to punish these poor people by way of this measure. You want them to pay in advance the contribution by mortgaging their lands to bank. If they are insisted to pay, I am sure they have to sell the lands and be deprived of their land which is the only source of their livelihood. Your measure will lead them to this extent. Your intention is to snatch away their lands. In the Welfare State of yours what have you done for these poor people ? You are levying all kinds of taxes. You want to grow more food without allowing water to flow on the fields of the ryots. Have you got a real intention of allowing water on the fields without getting any return from them ? In a Welfare State you should have not done like that. Instead of helping them you are allowing them to get into the clutches of the richer people or banks to get the money to pay you and finally deprive them of their land.

4-30 P.M.

So the first duty of the Government will be to create more and more dams and not to demand evey single pie from the agriculturists. What

they are paying now in the shape of surcharge, health cess and education cess is more than what they can spare. After all they are not given any educational facilities; they have no health facilities, but the cess is being collected by the Government. Even then the appetite of the Government, this devilish Government, is not satisfied; they are further demanding more and more from the raiyats. So, I think it is necessary to withdraw this Bill. I say to the Government, do not think of bringing such a Bill. Of course there may be a few people who may be generous and rich and they may say that if the Government builds dams in their area, they have no objection to pay some portion of the cost as advance contribution. Let such philanthropic people by all means invest money. I do not object. If the Government is courageous enough to demand money from the vested interest, let them do it first. But let me tell the Government that none of those who work hard on the fields for creating more food, will be happy with a Bill of this nature. We have it as our slogan GROW MORE FOOD to bring relief to the common man. Instead of bringing relief, we are taking back to the villages such a bad and sad news. Such a Bill is not worth welcoming at all.

Lastly, I want to say one word. I agree with the Government that it requires crores and crores of rupees. I agree that funds are necessary to undertake development works in the State. But so many of my friends have drawn attention of this House that if wastage is stopped, plenty is with us. Some experts in food matters have said that in India food shortage is only to the extent of 17 per cent, but wastage in transportation and rat-menace (including two-legged rats) is 37 per cent. They say that if we stop this wastage, food will be selfsufficient. Why not start this campaign? If we are able to successfully stop wastage, what we are able to produce by the existing irrigation systems, will be quite sufficient. We need not go and beg before anybody. Of course, scarcity of money is being created artificially. It is only to woo a particular area, with political motives and when this discrimination is there, it will certainly take a long time for us to unite harmoniously. Justice and morality requires that this Bill should be scrapped.

Sri N. B. SIRDESAI (Khanapur).—Mr. Deputy Speaker Sir, I rise to oppose strongly the Mysore Irrigation Levy and Betterment Contribution and Water-Rate (Amendment) Bill, 1969 because it is unjust and improper and if it is brought into force, it would cause great harassment to the land-holders and tenants. It is the bounden duty of the Government to undrtake projects and see to the feasibility or otherwise of an irrigation project and provide irrigation facilities to the landlords and tenants. But here, by introducing this Bill, I am not able to discover much sense in the provisions which ask for advance contributions. Government have now come forward to say that unless advance contribution is paid by raiyats who will be beneficiaries under the project, Government will not commence and it is not bound to commence projects. I fail to nderstand what prudence or sense Government have used in bringing

(SRI N. B. SIRDESAI)

this provision Sir, because if the Government wants to make the Grow More Food Campaign successful, they must extend irrigation facilities, to the landlords. Then only the Grow More Food Campaign will be successful. Strictly speaking, Government should not add this condition that 66 per cent of the people of that area should come forward with a request that a project work should be undertaken by Government and that they are prepared to pay advance contribution, and then only work will commence. Otherwise, Government is not bound to take up that project. Why should the Government expect people to come forward ? The feasibility or otherwise of the project should be found out by the Government and it is the bounden duty of the Government to provide irrigation facilities. It is really very strange that the Government have made provision for granting a rebate of 10 per cent to the persons who advance contributions in one lump. Landlords and tenants in the State are very poor and they cannot afford to carry on agricultural operations because these are very hard days. They cannot afford the necessary wherewithal even to purchase the fertilizers. In such circumstances, if they are forced to pay advance contribution, it would be very hard for the cultivators and landlords.

So I think water rate is related to the betterment contribution and advance contribution. And therefore, if I say a few words regarding the water rate, it may not be out of place. It is provided in the relevant Acts that any increase in the levy has to be intimated to the landlords or parties concerned and if the parties have any grievance, they have the right of appeal to the Assistant Commissioner under the rules, and the appellate authorities are not going to decide cases quickly. The Assistant Commissioner says that it is within his discretion to decide the appeals. Meanwhile, the Thasildar is saying that he is bound to collect the water rate. The raiyats are therefore placed in a sad plight. The samething will happen to them if this Bill is passed authorising the Government to collect advance contribution. Notices will be issued by the Deputy Commissioner and officers concerned and they will demand the incorrect assessment of advance contribution.

That is why I strongly oppose this Bill. I thank the Chair for giving methis much of time for making my observations on this Bill.

† SRI P. B. NANDIHALI (Uchagaon).—Mr. Deputy Speaker Sir, I rise to oppose strongly the Mysore Irrigation Levy and Betterment Contribution and Water Rate (Amendment) Bill, 1959.

I shall refer to Clause 3A relating to Levy of Advance Betterment Contribution. I am very sorry to say that the Government has imposed advance contribution on lands to complete irrigation schemes. They have stated that it would not be possible for them to take up irrigation projects capable of irrigating more than 100 acres of land with recovery of advance contribution. They want this contribution to commence and

complete the construction, restoration, expansion or alteration of any work which is capable of irrigating more than 100 acres of land. The minor irrigation schemes cannot be taken up because of this Clause in spite of having so many resources. Therefore, I suggest to the Government to make a change in the clause, substituting 500 acres of land in place of 100 acres of land.

In sub- clause (2) of the same clause, it is stated :

"when the landholders of not less than sixty-six per cent of such lands express their willingness in writing—to make such advance contribution towards such work either in one lumpsum or in four equal annual instalments ..... the Government will commence the work."

I earnestly request the Government to change "66 per cent" to "thirty per cent" of land holders.

In sub-clause (2) it is also stated that

"The draft scheme referred to in sub-section (1) shall specify the lands .. ... which in the opinion of the Government are capable of being benefited by the completion of such work....."

In this connection, let me tell my bitter experience. I have taken so many Executive Engineers, Assistant Engineers and officers to the villages to select minor and major schemes. But unfortunately they won't select the schemes where they are absolutely necessary. When the agriculturists come forward to co-operate with them and when the Gram Panchayats and Taluk Boards pass resolutions that a particular scheme or work is necessary immediately at a particular place, Government must undertake that scheme or work and should not depend only on the recommendations of their Officers.

Forest areas must be exempted from levy of these contributions. Otherwise, it is not possible for the common peasants to come forward and accept the schemes. Since this contribution is such a great burden on the small villagers and poor farmers, that it is not possible at all to expect them to accept the schemes.

My another suggestion is this : The farmers who have only 2 acres of bagayat land must be exempted from this contribution and tax. The farmers who have 4 acres of paddy lands and 8 acres of non-paddy lands and non-bagayath land should also be exempted from this levy because in this country the people by and large, are very poor. Unless and until we have a progressive policy in this democracy to help the poor toiling masses and improve their lot, it is not at all possible to solve their difficulties and problems. By reactionary policies their poverty will increase and the rich people become richer. Government is already collecting land Revenue, water rate, etc., from poor agriculturists, and in addition Government is expecting from them this betterment contribution. This measure will not make our State progressive.

(SRI P. B. NANDIHALI)

In this context, I must give expression to my feelings regarding the attitude of the Government in respect of border areas. We are repeatedly requesting the Government to take developmental works in our area. When they are collecting so many huge taxes from the Marathi people, it is their bounden duty to take development schemes in our areas also. Instead of that, they are arresting the Marathis. They have retained those areas in Mysore against the wishes of the people. Government is purposely neglecting Marathi areas and not taking any projects there. I have suggested so many schemes to the Government. It will not be out of place of I bring to the notice of the House, Bellaranala scheme in Belgaum Taluk, Government every now and then raises the slogan of Grow More Food Campaign but fail to help the peasants in stepping up production of food. Bellaranala scheme is pending with Government for the last several years. Every year the farmers are put to heavy loss on account of floods from Bellaranala. We are pressing for the implementation of that scheme repeatedly. But everything remains as a promise. Up till now the Government have not taken any action to fulfil their promise to implement Bellaranala scheme. For not taking up this scheme, every people are put to lakhs of rupees loss. Thousands of quintals of paddy are lost. Due to the negligence and indifference of the Mysore Government and its officers, we are suffering this great loss. If the attitude of the Government is partial and if they give discriminatory treatment and relegate us to secondary citizenship, I am very sorry to say that the Government is acting against the very spirit of democracy and justice. They are purposely neglecting the development of our area. Under these circumstances, the Government has no right to take any action to tax the people of the Marathi area.

As there is no time to speak further, I conclude by thanking the Chair.

† SRI R. G. WALI (Hubli).—I welcome this Bill at the very outset because it has got some new features which have been very well thought of by the Government. Firstly, this is the one Bill wherein there is a proposal for the first time for participation by the ryots in the financial stake of the Government. Many times the industrialists and businessmen are criticised that they look to their own interest. I want to point out here that if there is contribution there is participation of these people in the industry or business. So also the proposal that is brought before the House is on commercial lines. The people who want to improve their lot, their lands, to produce more and participate in the progress of the country, can participate in this scheme. This is a progressive proposal.

Many apprehensions have been expressed by a number of friends in this House. Because there is the participation of 66 per cent by the ryots, it is misunderstood that this money is collected and utilised for

some other purpose by the Government. The betterment levy proposed is practically a majority decision. If 66 per cent of the people decide that they should have an irrigation project or decided that their future should be improved, they can come and say that they will contribute and pay the betterment levy and the project should be taken up. Even in respect of payment, the Government have stated that they need not pay in lumpsum but can pay in instalments. The idea is that they should participate and improve their lot.

Another important aspect which I want to point out is, many friends on the other side have tried to show that they have the interests of the ryots. I want to say that we the people on this side are more interested improving the lot of the agriculturists.

SRI K. H. PATIL.—May I know whether the Hon. Member will agree if the same betterment levy is imposed on the people in the urban area?

SRI R. G. WALI.—I can say that the urban people are always prepared to take liabilities and they are taking and they are heavily taxed. When we want to develop our country, it is necessary that we should be prepared to contribute. Here is a progressive idea where the people can improve their lot. Supposing an irrigation project in a particular area is taken up today, immediately when the proposal comes and works start, the cost of the land will go up. I can give an example of Davangere where the Bhadra Project was taken up. I had seen only a few years back barren lands but now we see green lands and the people are so happy. Can we not expect our people to prosper like that? The value of the land which was once Rs. 500 has gone upto Rs. 5,000. That shows that the people will prosper. So, many of the apprehensions that our people have, must be removed. The suggestion here is, if the government wants to take up a scheme, and that scheme is supported by 66 per cent of the people it should be taken up and executed. That shows this is a scheme which can work on democratic principles. This is the first time that a scheme on democratic principles is placed before the agriculturists. I feel such a proposal should be wholeheartedly welcomed.

One other aspect is, we want to develop our country and improve the lot of the ryots. All projects cannot be taken up at a time. All projects have to be financed; it is not that the Government has no money. But the thing is, such projects which are meant for the improvement of the lot of the people, have to be financed and completed as quickly as possible. To get finance, is it not the duty of each individual who is concerned with the improvement of his lot, to contribute?

Many of my friends have understood that this idea is meant only for bigger projects. It is not so. Even if a group of people come forward and say that their village should be improved and so some irrigation projects must be taken up and for that they are prepared to give their contribution, the Government, can do it. This is a progressive idea and we must see that this scheme is successful. More stress

(SRI R. G. WALI)

was laid on the amount taken as loan by mortgaging their lands to the bank and that for giving money to the Govern nent the land is mortgaged to somebody. It is not so. Whatever interest that will have to be paid, will be paid by the ryots to the banks because they are getting the money as loan. If I have understood the latest statements of our Prime Minister correctly, she has stated that she wants to help the ryots by giving money from the banks, so that the agriculturists can improve their lands. Here is a proposal and we can get moneys from the banks.

Sri K. H. PATIL.— Does the Hon. Member think that the loan got from the banks is free from any encumbrance on the land?

Sri R. G. WALI.—The procedure and other things are matters to be considered later. This is a policy decision taken by the House. This is one of the progressive Bills and I request the House to support it wholeheartedly.

5-00 P. M.

ಶ್ರೀ ಎ. ಆರ್. ಪಂಚಗಾವಿ.—ಈಗ ಮನೆಯ ಮುಂದೆ ಇರುವ ಬಿಲ್ಲು ಒಂದು ತರಹದ ವಿಚಿತ್ರ ಸನ್ನಿವೇಶದಲ್ಲಿ ಬಂದಿದೆ. ಒಂದು ಕಡೆ ನಮಗೆ ಈ ಹೊತ್ತು ಇರುವ ಪ್ರಶ್ನೆ ನೋಡಿದರೆ ಸುಮಾರು 26 ನೀರಾವರಿ ಯೋಜನೆಗಳನ್ನು ಸದ್ಯದಲ್ಲೇ ತೆಗೆದುಕೊಳ್ಳಬೇಕು, ತೆಗೆದುಕೊಳ್ಳದಿದ್ದರೆ ನಮಗೆ ಮುಂದೆ ಸರಿಯಾದ ಅನುಕೂಲಗಳು ಸಿಗುವುದಿಲ್ಲ. ಇದು ಅಲ್ಲದೆ ನಮ್ಮಲ್ಲಿ ಈಗ ಕೃಷ್ಣಾ ಗೋದಾವರಿ ನದಿ ನೀರಿನ ವಿವಾದ ನಡೆಯುತ್ತಿದೆ. ಇದು ಯಾವ ಪರಿಸ್ಥಿತಿ ಮುಟ್ಟುತ್ತದೋ ನೋಡಬೇಕು. ತೀವ್ರವಾಗಿ ಇದರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ನಮಗೆ ಇದರಿಂದ ಬರುವ ಲಾಭ ಕೈ ಬಿಟ್ಟು ಹೋಗುತ್ತದೆ ಮತ್ತು ಇದರಿಂದ ರೈತರು ಕೂಡ ಕಳವಳಕ್ಕೆ ಈಡಾಗಿದ್ದಾರೆ. ಇನ್ನು ರೈತರಿಗೆ ಸಹಾಯವಾಡುತ್ತೇವೆಂದು ಸರ್ಕಾರದವರು ಬೇಕಾದಹಾಗೆ ಸೊಸೈಟಿಗಳಿಗೆ ಹಾಗೂ ಬ್ಯಾಂಕುಗಳಿಗೆ ಹಣವನ್ನು ಕೊಡುತ್ತಿದ್ದಾರೆ. ಆದರೆ ಹೀಗೆ ಕೊಟ್ಟಿರುವ ಸಾಲಗಳಿಂದ ಸುಮಾರು ನೂರರಷ್ಟು ರೈತರಲ್ಲಿ ಕೂಡ ಕೊಟ್ಟ ಸಾಲಗಳು ವಸೂಲಾಗಿಲ್ಲ. ನಮ್ಮ ಕೋ-ಆಪರೇಷನ್ ಮಿನಿಸ್ಟರವರೂ ಕೂಡ ರೈತರಿಗೆ ಎಷ್ಟು ಮಟ್ಟಿಗೆ ಸಾಲ ಕೊಡಬಹುದೋ ಅಷ್ಟು ಶಕ್ತಿಯನ್ನು ಉಪಯೋಗಿಸಿ ಸಕಾಯ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಎಷ್ಟು ಮಟ್ಟಿಗೆ ಇಂತಹ ರೈತರ ಮೇಲೆ ಕಾರ್ಯಭಾರ ಹೊರಿಸಬಹುದು ಎನ್ನುವುದನ್ನು ಸರಿಯಾಗಿ ವಿಚಾರ ಮಾಡಿ ಹಾಕಬೇಕು. ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಕೊಡಬೇಕು ಎಂದರೆ ಯಾವ ರೀತಿ ಕೊಡಬೇಕು ಎನ್ನುವುದನ್ನು ಸರಿಯಾಗಿ ವರ್ಕ್‌ಔಟ್ ಮಾಡಿ ಅದನ್ನು ಯಾವ ಆಧಾರದಮೇಲೆ ಹಾಕಬಹುದು ಎನ್ನುವುದನ್ನು ರೈತರಿಗೆ ತಿಳಿಸಿ ಅವರಿಂದ ಸುಮಾರು ಇಪ್ಪತ್ತು ಕಂತುಗಳಲ್ಲಿ ಕೊಡಬೇಕೆಂದು ಹೇಳಿದರೆ ಅವರೂ ಕೊಡುತ್ತಾ ಹೋಗಬಹುದು. ಈಗ ದೇಶದಲ್ಲಿ ಅನೇಕ ತರಹದ ನೀರಾವರಿ ಯೋಜನೆಗಳು ಎಂದರೆ ಘಟಪ್ರಭಾ ಹಾಗೂ ಮಲಪ್ರಭಾ ಯೋಜನೆಗಳು ಆಗಬೇಕಾಗಿವೆ, ಇವಕ್ಕೆಲ್ಲ ಹಣ ಒದಗಿಸಬೇಕಾಗಿದೆ, ಇದರ ಬಗ್ಗೆ ಎಷ್ಟು ದುಡ್ಡು ಖರ್ಚಾಗುತ್ತದೆ ಅದನ್ನೂ ನೋಡಬೇಕು. ಮತ್ತು ನಾವು ಮಾಡುವ ಯೋಜನೆಗಳಿಂದ ಮ್ಯಾಕ್ಸಿಮಂ ಬೆನಿಫಿಟ್ ಪಡೆಯುವಂತೆ ಯೋಜನೆಗಳನ್ನು ಹಾಕಿಕೊಳ್ಳಬೇಕು. ಕೆಲವು ಕಡೆ ಸರಕಾರ ಹಾಕಿದ ದುಡ್ಡು ಹಾಳಾಗಿ ರೈತರಮೇಲೆ ಹೆಚ್ಚು ಹೊರೆ ಬೀಳುತ್ತಿದೆ. ಇಲ್ಲ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಎಂದು ಏನು ಹಾಕಬೇಕೆಂದು ಇದ್ದಾರೆ ಇದನ್ನು ನಾಲ್ಕು ಕಂತುಗಳಲ್ಲಿ ಮುಗಿಸಬೇಕು ಎಂದರೂ ರೈತರು ಅವನ್ನು ಕೊಡುವ ಸ್ಥಿತಿಯಲ್ಲಿಲ್ಲ. ಈಗ ದೇಶದಲ್ಲಿ ದುಡ್ಡಿಗೆ ಒಂದು ರೀತಿ ಬಹಳ ಬಿಕ್ಕಟ್ಟಿನ ಪರಿಸ್ಥಿತಿ ಇದೆ. ಇದಕ್ಕಾಗಿ ನಮ್ಮ ಭಾಗದವರಾದ ಘಟಪ್ರಭಾ ಯೋಜನೆಯನ್ನು ನಾವು ಪೂರ್ಣವಾಗಿ ಬೇಗನೆ ಮಾಡಬೇಕು ಎಂದು ಇಲ್ಲಿ ಒತ್ತಾಯ ಮಾಡುತ್ತೇನೆ. ನಾವ್ಯಾರು ವರ್ಷಗಳಿಂದ ರೈತರ ಸ್ಥಿತಿ ಸುಧಾರಿಸುತ್ತದೆ ಎಂದು ಇತ್ತು, ಆದರೆ ಹಾಗಾಗದೆ ಇಂದು ರೈತರು ಬಹಳ ಕಷ್ಟದ ಸ್ಥಿತಿಯಲ್ಲಿದ್ದಾರೆ. ಈಗ್ಗೆ ಸುಮಾರು ಆರು ತಿಂಗಳ ಹಿಂದೆ ಬೆಲ್ಲದ ಧಾರಣೆ ಸುಮಾರು 100 ರಿಂದ 170ರ ವರೆಗೆ ಇತ್ತು, ಈ ಬೆಲ್ಲವನ್ನು

ದೇಶದಿಂದ ಹೊರಗೆ ಕಳುಹಿಸಲು ಪರ್ಮಿಷನ್ ಕೊಟ್ಟಿದ್ದರೆ ಅವರಿಗೆ ನಾಕಷ್ಟು ದುಡ್ಡು ಸಿಗುವುದಕ್ಕೆ ಅವಕಾಶವಾಗುತ್ತಿತ್ತು. ಆದರೆ ಸರಕಾರ ಹೊರಗೆ ಹೋಗಲು ಪರ್ಮಿಷನ್ ಕೊಡಲಿಲ್ಲ ಇದರಿಂದ ರೈತರಿಗೆ ನಷ್ಟವಾಯಿತು. ಅದರಿಂದಾಗಿ ಕಬ್ಬು ಬೆಳೆ ಕಡಿಮೆಯಾಗುತ್ತದೆ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ತೊಂದರೆಯಾಗುತ್ತದೆ. ಇದರಲ್ಲಿ ಹೇಳಿರುವಂತೆ ರೈತರಲ್ಲಿ ನೂರಕ್ಕೆ 66 ಭಾಗ ಮುಂದೆ ಬಂದು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಸರಕಾರಕ್ಕೆ ತಿಳಿಸಿದರೆ ಆಗ ಅದನ್ನು ವಿಚಾರ ಮಾಡಬಹುದು. ಒಟ್ಟಿನಲ್ಲಿ ಈ ಬಿಲ್ಲಿನಲ್ಲಿರುವ ತತ್ವವನ್ನು ನಾವು ಒಪ್ಪಬಹುದು. ಎಷ್ಟು ಮಟ್ಟಿಗೆ ರೈತರು ಭಾರ ಹೊರಬಹುದು ಎನ್ನುವುದನ್ನು ವಿಚಾರ ಮಾಡಿಕೊಂಡು ಇಂತಹ ಯೋಜನೆಗಳನ್ನು ತರಬಹುದು ಮತ್ತು ಅಡ್ವಾನ್ಸಾಗಿ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಕೊಡುವಾಗ ಇಪ್ಪತ್ತು ಕಂತುಗಳಲ್ಲಿ ಕೊಡುವ ಅವಕಾಶ ಮಾಡಿಕೊಡಬೇಕು. ಇಷ್ಟು ಮಾತು ಗಳನ್ನಾಡಲು ಅವಕಾಶ ಕೊಟ್ಟುದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತ್ ಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ (ನ್ಯಾಯ, ಕಾರ್ಮಿಕ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಯವರು).—ಸ್ವಾಮೀ, ಈ ಮಸೂದೆಯಮೇರೆ ತುಂಬ ಉಪಯುಕ್ತವಾದ ಚರ್ಚೆಯಾಗಿದೆ. ಈ ಚರ್ಚೆಯನ್ನು ನಾನು ಕೇಳಿದಮೇರೆ ಈ ಸಭೆಯಲ್ಲಿರುವ ಎಲ್ಲ ಸದಸ್ಯರೂ ರೈತರ ಹಿತಾಸಕ್ತಿಯ ಬಗ್ಗೆ ಎಷ್ಟು ಉತ್ಸುಕತೆಯಿಂದ ಇದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ. ಆದರೆ ಎಲ್ಲರ ಗುರಿಯೂ ಒಂದೇ ಆಗಿದೆ. ಪ್ರತಿಯೊಬ್ಬರೂ ಇದರ ಬಗ್ಗೆ ಮಾತನಾಡಿದರು ಮತ್ತು, ಈ ಮಸೂದೆಯನ್ನು ಯಾವರೀತಿಯಲ್ಲಿ ಉತ್ತಮಪಡಿಸಬೇಕು ಮತ್ತು, ಎಷ್ಟು ಜಾಗ್ರತೆ ರೈತನಿಗೆ ನಿರಾವರಿ ಸೌಲಭ್ಯ ಗಳನ್ನು ಒದಗಿಸಿಕೊಡಬೇಕು ಎನ್ನುವ ಕಾತುರತೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇದು ತೀರಾ ಒಂದು ಹೊಸ ಮಾರ್ಗ. ಈ ಹೊಸಮಾರ್ಗ ಬಂದಮೇರೆ ಇದರ ಪ್ರತಿಕ್ರಿಯೆ ಕೂಡ ಹೆಚ್ಚಿನ ರೂಪ ದಲ್ಲಿರುತ್ತದೆ. ಆ ಕಾರಣದಿಂದಾ ಈ ಸಭಾ ಸದಸ್ಯರು ಈ ಮಸೂದೆಯಮೇರೆ ನಾನಾ ಮುಖವಾದ ಚರ್ಚೆಯನ್ನು ಮಾಡಿ ಹೆಚ್ಚಿನ ಬೆಳಕನ್ನು ಚೆಲ್ಲಿದ್ದಾರೆ. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ಪಾಟೀಲರವರು ಒಂದು ಮಾತು ಹೇಳಿದರು. ಸಾರ್ವಜನಿಕರ ಅಭಿಪ್ರಾಯ ಪಡೆಯಲು ಈ ಮಸೂದೆಯನ್ನು ಕಳುಹಿಸಿ ಎಂದು. ಈ ಮಾತನ್ನು ಮೇಲಿಂದ ಮೇಲೆ ನಿಮ್ಮವರೇ ಹೇಳುತ್ತಲಿದ್ದಾರೆ ಎಂದೂ ಹೇಳಿದರು. ಇದರಲ್ಲಿ ನಮ್ಮವರೇ ಹೇಳಲಿ ಎದುರು ಪಕ್ಷದವರೇ ಹೇಳಲಿ ಜನರಿಗೆ ಒಳ್ಳೆಯದಾಗುತ್ತದೆ ಎಂದು ಯಾರು ಹೇಳಿದರೂ ಅದನ್ನು ಕೇಳಲೇಬೇಕು. ಯಾವು ದಾದರೂ ವಿಚಾರ ಪ್ರಜಾಸತ್ತೆಗೆ ವಿರೋಧವಾದ ವಿಚಾರವಾಗಿದ್ದರೆ ಅದು ಯಾವ ಭಾಗದಿಂದ ಬಂದರೂ ಅದನ್ನು ಹೇಳುವುದಕ್ಕೂ ಆಗುವುದಿಲ್ಲ, ಕೇಳುವುದಕ್ಕೂ ಆಗುವುದಿಲ್ಲ. ನನ್ನ ಅಭಿಪ್ರಾಯ ದಲ್ಲಿ ಈ ಸಭೆಯ ಸದಸ್ಯರು ಪ್ರಜಾಪ್ರತಿನಿಧಿಗಳು ಆದುದರಿಂದ ಪ್ರಜೆಗಳ ಅಭಿಪ್ರಾಯಗಳನ್ನು ಪ್ರತಿಪಾದಿಸಲು ಅವರಿಗೆ ಸಂಪೂರ್ಣ ಶಕ್ತಿ ಇದೆ. ಶಕ್ತಿ ಇಲ್ಲವೆಂದು ಯಾರೂ ಅನುಮಾನ ಪಡಬೇಕಾಗಿಲ್ಲ. ಶ್ರೀಮಾನ್ ಚನ್ನಬಸಪ್ಪನವರು ಪ್ರಜೆಗಳ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ ಮತ್ತು ಅವರ ಅಭಿಪ್ರಾಯಗಳನ್ನು ಕೇಳಿಯೂ ಇದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಇದನ್ನು ಸಾರ್ವಜನಿಕಾಭಿಪ್ರಾಯಕ್ಕೆ ಏತಕ್ಕೆ ಕಳುಹಿಸಬಾರದು ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರ ತಿಳುವಳಿಕೆಗಾಗಿ ಏನು ಹೇಳಬೇಕೋ ಅದನ್ನು ಇಲ್ಲಿ ಹೇಳುತ್ತಿದ್ದೇನೆ. ಇಲ್ಲಿ ಯಾವ ಸದಸ್ಯರು ಮಾತನಾಡಿದರೂ ಅವರು ನಮ್ಮ ರಾಜ್ಯದ ಜನರ ಅಭಿಪ್ರಾಯವನ್ನು ಇಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ಈ ಸಭೆಯಲ್ಲಿ ಚರ್ಚೆಯಾದಮೇರೆ ಅಭಿಪ್ರಾಯ ತೀರ್ಮಾನವಾಗುವಾಗ ಪ್ರಜಾಭಿಪ್ರಾಯದ ತೀರ್ಮಾನವನ್ನು ಅವಲಂಬಿಸಿರುತ್ತದೆ ಎಂದು ನನ್ನ ಭಾವನೆ. ಆದುದರಿಂದ ನನ್ನ ಖಚಿತವಾದ ಅಭಿಪ್ರಾಯ ಈ ಬಿಲ್ಲನ್ನು ಸಾರ್ವಜನಿಕರ ಅಭಿಪ್ರಾಯ ಪಡೆಯಲು ಕಳುಹಿಸುವ ಅಗತ್ಯವಿಲ್ಲ ಎಂದು ನನ್ನ ನಮ್ರ ವಿನಂತಿ. ಶ್ರೀಮಾನ್ ಸಿದ್ಧವೀರಪ್ಪನವರು ಈ ಚರ್ಚೆಯಲ್ಲಿ ಭಾಗವಹಿಸಿದಾಗ ನಾನು ಇಲ್ಲಿರುವುದಕ್ಕೆ ಅನಾಧ್ಯವಾಮದಕ್ಕೆ ವಿಷಾದಿಸುತ್ತೇನೆ. ಕಾರಣ, ಮೇಲ್ಮನೆಯಲ್ಲ ಕೂಡ ಅಧಿವೇಶನ ನಡೆಯುತ್ತಿದೆ. ನನಗೆ ಸಂಬಂಧಪಟ್ಟ ಕೆಲವು ವಿಚಾರ ಗಳು ಅಲ್ಲಿ ಇದ್ದುದರಿಂದ ನಾನು ಅಲ್ಲಿ ಹೋಗಬೇಕಾಯಿತು. ಅವರು ಹೇಳಿದ ಒಂದು ವಿಚಾರ ವನ್ನು ನಾನು ತಿಳಿದುಕೊಂಡಿದ್ದೇನೆಂದರೆ ಶ್ರೀಮಾನ್ ಪುಟ್ಟಸ್ವಾಮಿಯವರು ಈ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸುವಾಗ, ಮನಃಪೂರ್ತಿಯಾಗಿ ಸಮರ್ಥನೆ ಮಾಡಲಿಲ್ಲ, ಎಂದು ಹೇಳಿದರಂತೆ. ಇಲ್ಲಿ ಬರೆದುಕೊಂಡಿರುವ ಟಿಪ್ಪಣಿಯ ಪ್ರಕಾರ ಆ ವಿಚಾರ ನನಗೆ ತಿಳಿಯಿತು. ಶ್ರೀಮಾನ್ ಸಿದ್ಧವೀರಪ್ಪನವರು ಯಾವ ಕಾರಣದಿಂದ ಹಾಗೆ ಹೇಳಿದರೆಂದು ನನಗೆ ಅರ್ಥವಾಗಲಿಲ್ಲ.

(ಶ್ರೀ ಕೆ. ಪುಟ್ಟಸ್ವಾಮಿ)

ಈ ಮಸೂದೆಯಲ್ಲಿ ಅಡಕವಾದಂತಹ ತತ್ವ ಬಹಳ ಗಹನವಾದುದು. ಇದರಿಂದ ನಮ್ಮ ದೇಶದ ಜನರ ಕಲ್ಯಾಣ ಸಾಧನೆಯಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಶ್ರೀಮಾನ್ ಚನ್ನಬಸಪ್ಪನವರು ಮಧ್ಯೆ ಒಂದೆರಡು ವಿಚಾರ ಪ್ರಸ್ತಾಪ ಮಾಡಿದಾಗ ನಾನು ಒಂದು ವಿಚಾರವನ್ನು ಹೇಳಿದೆ. ಈ ಮಸೂದೆಯು ಚರ್ಚೆಯಾಗುವಾಗ, ಅದರಮೇಲೆ ನೀವು ಯಾವುದಾದರೂ ಉಪಯುಕ್ತವಾದ ತಿದ್ದುಪಡಿಗಳನ್ನು ನಲಹೆ ಮಾಡಿದ್ದರೆ, ಅದನ್ನು ಪರಿಶೀಲನೆ ಮಾಡುವುದಕ್ಕೆ ನಾನು ಸಿದ್ಧನಾಗಿದ್ದೇನೆಂದು. ಬಹುಶಃ ಆ ದಾಟಿಯ ಮಾತು ಅಷ್ಟು ಹಿಡಿಸಲಿಲ್ಲವೆಂದೆನಿಸುತ್ತದೆ. ನಾವು ಯಾವುದಾದರೂ ಒಂದು ವಿಚಾರ ಇಲ್ಲಿ ತಂದರೆ, ಕೊನೆಯತನಕ ಅದನ್ನೇ ಪಟ್ಟು ಹಿಡಿದು ಸಾಧನೆ ಮಾಡುವುದು, ಒಂದು ಅಭ್ಯಾಸವೆಂದು ಅವರು ತಿಳಿದುಕೊಂಡಿರಬಹುದು. ನನಗೆ ಹಾಗೆ ಇಲ್ಲ. ನಾನು ಎಲ್ಲವನ್ನು ತಿಳಿವವನೆಂದು ಏನೂ ಅಲ್ಲ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತರ ಸಾಧನೆ ಸುಧಾರಣೆ ಬಗ್ಗೆ ಆಖ್ಯೆರಾದ ಮಾತನ್ನು ಯಾರೂ ಹೇಳುವುದಕ್ಕಾಗುವುದಿಲ್ಲ. ಆಗಿಂದಾಗ್ಗೆ ಅನೇಕ ಶಾಸನಗಳಿಗೆ ತಿದ್ದುಪಡಿಗಳ ಅವಶ್ಯವಿದೆ. ಅನೇಕರು ಇಂಥ ಸಮಯದಲ್ಲಿ ಕಟುವಾಗಿ ಮಾತನಾಡಿದ್ದು ಉಂಟು. ಹೋದ ವರ್ಷ ಈ ಶಾಸನ ಮಾಡುವಾಗ ಇದು ಹೊಳೆಯಲಿಲ್ಲವೇ, ಅಥವಾ ನೀವು ಕೇಳಲಿಲ್ಲವೇ, ಅಥವಾ ಜನಾವಣೆಯಿಂದ ನಿಮಗೆ ಪರಿಶೀಲನೆ ಮಾಡುವುದಕ್ಕೆ ಅವಕಾಶ ಇರಲಿಲ್ಲವೇ, ಅಥವಾ ಶಕ್ತಿ ಇರಲಿಲ್ಲವೇ, ಎಂದು, ಈ ರೀತಿಯಲ್ಲಿ ಮೂದಲಿಸಿದ್ದು ಉಂಟು. ಅದರೆ, ಅಂಥ ಮಾನ್ಯ ಸದಸ್ಯರಲ್ಲ ನನ್ನ ವಿನಂತಿ ಏನೆಂದರೆ, ಯಾರು ಆ ರೀತಿಯ ಭಾವನೆಯನ್ನು ಇಟ್ಟುಕೊಂಡಿದ್ದಾರೋ, ಅವರಿಗೆ ಈ ಶಾಸನವು ಜಾರಿಗೆ ಬಂದ ಮೇಲೆ, ಇದರ ಅವಶ್ಯಕತೆ ಉಹೆಂದು ಸ್ವಷ್ಟವಾಗುತ್ತದೆ. ಅವಶ್ಯಕವಾದ ತಿದ್ದುಪಡಿಗಳನ್ನು ಜಾರಿಗೆ ತರುವುದಕ್ಕೆ ಪರಿಶೀಲನೆ ಮಾಡುತ್ತಿದ್ದಾರೆಂದು, ಭಾವನೆ ಮಾಡಬೇಕೇ ವಿನಹ ಕಣ್ಣು ಮುಚ್ಚಿಕೊಂಡು ನಾವು ಆದಳಿತ ಸಿಬ್ಬಂದಿಯವರು ಅಡ್ಡಿಯಾಗಿದ್ದಾರೆ, ಅಂತಹ ಅಡ್ಡಿಯನ್ನು ತೆಗೆದುಹಾಕುವುದಕ್ಕೆ ಇದನ್ನು ತಂದಿದ್ದೇವೆಂದು ಯಾರೂ ಭಾವಿಸಬೇಕಾಗಿಲ್ಲ. ನಾವು ಎಷ್ಟೋ ಎಚ್ಚರಿಕೆಯಿಂದ ಶಾಸನಗಳನ್ನು ಮಾಡಿದರೂ, ಅದರಿಂದ ತಪ್ಪುಗಳು ಆಗುತ್ತವೆ. ನಮ್ಮ ತಪ್ಪನ್ನು ಹೈಕೋರ್ಟು ನ್ಯಾಯಾಧೀಶರು ಎತ್ತಿ ತೋರಿಸಿದಮೇಲೆ ಪುನಃ ಅದರಮೇಲೆ ಸುಪ್ರೀಂ ಕೋರ್ಟಿನಲ್ಲಿ ಬೇರೇ ತೀರ್ಪಾದ ಅನೇಕ ಸಂದರ್ಭಗಳು ಉಂಟು. ಎಲ್ಲಾ ತೀರ್ಪು ಆದಮೇಲೆ ಆದು ಶಾಸನಕ್ಕೆ ಯಾವ ಒಂದು ಅರ್ಥ ಕೊಡುತ್ತದೆ, ಹಾಗೆ ಅದನ್ನು ಜಾರಿಗೆ ಕೊಡುವುದಾದರೆ, ಯಾವಾಗ ಅದರಿಂದ ಜನರಿಗೆ ನ್ಯಾಯವಾಗುವುದಿಲ್ಲವೋ, ಆಗ ಶಾಸನಕ್ಕೆ ತಿದ್ದುಪಡಿ ಮಾಡುವುದು ಉಂಟು. ಶಾಸನಗಳನ್ನು ಮಾಡುವಾಗ ಎಷ್ಟೋ ಶ್ರದ್ಧೆ ವಹಿಸಿದ್ದಾಗ್ಯೂ ಕೊನೆಯಲ್ಲಿ ಅಡ್ಡಿ ಆತಂಕಗಳು ಬರುವುದು ಉಂಟು. ಈ ಶಾಸನ ಬಹಳ ಮುಖ್ಯವಾದುದು. ಅನೇಕರು ಈ ಮಸೂದೆಯ ಮೇಲೆ ಚರ್ಚೆಮಾಡಿ, ಅನೇಕ ವಿಚಾರಗಳನ್ನು ಹೇಳಿದ್ದಾರೆ. ಕೆಲವರು ತತ್ವಗಳನ್ನು ಒಪ್ಪುವುದು ಕಷ್ಟ ಎಂದು ಕೂಡ ಹೇಳಿದ್ದಾರೆ. ಇಲ್ಲಿ ಮೂಲಭೂತವಾದ ತತ್ವವೇನೆಂದರೆ ನಮ್ಮ ರಾಜ್ಯದಲ್ಲಿ ಹರಿಯುತ್ತಿರತಕ್ಕ ನೀರು, ಮಳೆಯಿಂದ ಬಿದ್ದ ಪ್ರತಿಯೊಂದು ಹನಿ, ಪ್ರತಿಯೊಂದು ತೊಟ್ಟು ನೀರು ಇವೆಲ್ಲವನ್ನೂ ಶೇಖರಿಸಿ ನಮ್ಮ ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳುವುದು. ಸಣ್ಣ ನೀರಾವರಿ ಪದ್ಧತಿ ಮತ್ತು ದೊಡ್ಡ ಕಾಮಗಾರಿಗಳನ್ನು ಆದಷ್ಟು ಜಾಗ್ರತೆಯಾಗಿ ಪೂರೈಸಬೇಕು ಮತ್ತು ನಮ್ಮ ರೈತರ ಜೀವನ ಮಟ್ಟವನ್ನು ಉತ್ತಮಪಡಿಸಬೇಕು, ಮತ್ತು ನಾವು ಪರದೇಶಗಳ ಮೇರೆ ಆಹಾರಕ್ಕಾಗಿ ಅವಲಂಬಿಸಬಾರದು ಎಂಬುದು ಎಲ್ಲರಿಗೂ ಇರುವ ಆಕಾಂಕ್ಷೆ ಮತ್ತು ಕಾತುರತೆಯಾಗಿದೆ. ಈ ಮೂಲಭೂತ ತತ್ವಗಳನ್ನು ಒತ್ತಿ ಒತ್ತಿ ಹೇಳಿರುವುದಕ್ಕಾಗಿ ಮತ್ತು ಈ ನೀರಾವರಿ ಕಾಮಗಾರಿಗಳನ್ನು ಆದಷ್ಟು ಜಾಗ್ರತೆ ಕೈಗೊಂಡು ಪೂರ್ಣಗೊಳಿಸಬೇಕೆಂದು ಹೇಳಿದಂತಹ ಎಲ್ಲ ಸದಸ್ಯರಿಗೂ ನನ್ನ ಅಭಿನಂದನೆಗಳು. ನೀರಾವರಿ ಕಾರ್ಯದಲ್ಲಿ ಲಘ್ ಇರಿಗೇಶನ್ ಬೆಟ್ಟರ್‌ಮೆಂಟ್ ಕಾಂಟ್ರಬ್ಯೂಶನ್ ಅಂಡ್ ವಾಟರ್ ರೇಜ್ ಈ ಸಭೆಯು ಒಪ್ಪಿಕೊಂಡು ಆದು ಆಚರಣೆಯಲ್ಲಿ ಇದೆ. ಅದರಲ್ಲಿರತಕ್ಕ ಮುಖ್ಯ ಅಂಶಗಳನ್ನು ಇಲ್ಲಿ ಹೇಳಬೇಕಾದ ಅವಶ್ಯಕತೆ ಇಲ್ಲ. ಬಹುಶಃ ಒಂದು ಎಕರೆ ನೀರಾವರಿ ಕಾಮಕಾರಿ ಆಗಬೇಕಾದರೆ, ಸರ್ಕಾರದವರು ಅದಕ್ಕೆ ಎರಡು ಸಾವಿರ ರೂಪಾಯಿಗಿಂತ ಹೆಚ್ಚು ಖರ್ಚು ಮಾಡಬೇಕಾಗಿದೆ. ಆ ಮಟ್ಟಕ್ಕೆ ಭೂಮಿಯ ಬೆಲೆ ಹೆಚ್ಚುತ್ತದೆ. ಆ ಭೂಮಿಯ ಬೆಲೆ ಹೆಚ್ಚಬೇಕಾದರೆ, ಆ ಭೂಮಿಯನ್ನು ಆಬಾದು ಮಾಡಬೇಕಾಗುತ್ತದೆ. ಅವನಿಗೆ ಹಣ ಒದಗಿಸಬೇಕು, ಉಪಕರಣಗಳನ್ನು ಒದಗಿಸಬೇಕು, ಮತ್ತು ಸರ್ಕಾರ ಆದಷ್ಟು ಪ್ರೋತ್ಸಾಹ ಕೊಟ್ಟು ಆ ಭೂಮಿಯನ್ನು ಫಲವತ್ತಾಗಿ ಆಗುವಹಾಗೆ ಮಾಡುವುದು ಅವಶ್ಯಕ. ಎಲ್ಲಾ ವಿಧದಲ್ಲೂ ಸರ್ಕಾರದವರು ರೈತನಿಗೆ ಸಹಾಯ ಮಾಡಬೇಕು. ಈ ಮಸೂದೆ ಕಾನೂನಾಗುವಂತಹ ಸಂದರ್ಭದಲ್ಲಿ ರೈತನು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗು

ತ್ತದೆ. ಅದು ಈ ಸಭೆಯಲ್ಲಿರತಕ್ಕ ಎಲ್ಲರಿಗೂ ಗೊತ್ತಿದೆ. ಎಲ್ಲಾ ರೈತರೂ ಋಣಬಾಧೆಯಲ್ಲಿ ಮುಳುಗಿದ್ದಾರೆಂಬುದನ್ನು ಎಲ್ಲರೂ ಹೇಳಿದ್ದಾರೆ. ಇಂಥ ಸಂದರ್ಭದಲ್ಲಿ ನಾವು ಮಾಡಬೇಕಾದದ್ದು ಏನು? ಅದನ್ನು ಕೂಲಂಕುಷವಾಗಿ ಪರೀಕ್ಷಿಲನೆ ಮಾಡಬೇಕು. ಈ ಅಭಿವೃದ್ಧಿಯ ತೆರಿಗೆಯನ್ನು ರೈತ ಕೊಡುವ ಒಂದು ಅವಕಾಶವನ್ನು ಕಲ್ಪನೆ ಮಾಡಬೇಕು. ಮೊದಲನೆಯದು ಕೆಲವು ಮಂದಿ ಮಾನ್ಯ ಸದಸ್ಯರು ವ್ಯಕ್ತಪಡಿಸಿರತಕ್ಕ ಅಭಿಪ್ರಾಯಗಳಲ್ಲಿ ಸತ್ಯ ಉಂಟು. ನಮಲ್ಲಿ ಕಾಮಗಾರಿಗಳನ್ನು ಕೈಗೊಂಡರೆ ಅವು ಮುಗಿಯಬೇಕಾದರೆ ಹಲವಾರು ವರ್ಷಗಳಾಗುತ್ತವೆ ಮತ್ತು ಅದು ಪೂರ್ತಿ ಮುಗಿದನಂತರ ಅದರ ಪ್ರತಿಫಲ ರೈತರ ಕೈಗೆ ಸಿಗುತ್ತದೆ. ಆದುದರಿಂದ ನೀರಾವರಿ ಅಭಿವೃದ್ಧಿ ತೆರಿಗೆಯನ್ನು ಮುಂಗಡವಾಗಿ ಕೊಡಬೇಕೆಂದರೆ, ಅವನು ಕೊಡುವುದಾದರೂ ಹೇಗೆ ಎಂದು ಕೇಳಿದರು.

ಶ್ರೀ ಎರ್. ಶ್ರೀಕಂಠಯ್ಯ.—ರೈತರಿಗೆ ತಾಲ್ಲೂಕಾ ಬೋರ್ಡಿನವರು ಹಣ ಕೊಡುವುದಕ್ಕೆ ಆಗುವುದಿಲ್ಲ. ಸರಕಾರದವರು ಸಾಲ ಕೊಟ್ಟರೆ ಅದರ ಬಡ್ಡಿಯನ್ನು ಯಾರು ತೀರಿಸಬೇಕು?

ಶ್ರೀ ಕೆ. ಪುಟ್ಟಸ್ವಾಮಿ.—ಬಡ್ಡಿ ಕೊಡಬೇಕಾಗಿ ಬರುತ್ತದೆ. ಬಡ್ಡಿ ಕೊಡದೇ ಯಾರೂ ಸಾಲ ಕೊಡುವುದಿಲ್ಲ. ಶ್ರೀಮಾನ್ ಶ್ರೀಕಂಠಯ್ಯನವರು ಇಲ್ಲಿ ಕೇಳಿದ ಪ್ರಶ್ನೆ ನಮ್ಮಯೋಜಿತವಾಗಿದೆ. ತಾಲ್ಲೂಕಾ ಬೋರ್ಡುಗಳವರು ಬರೀ ಸಂಪ್ರದಾಯಕ್ಕೆ ಶರಣಾದರೆ ಆರ್ಥಿಕ ಅಭಿವೃದ್ಧಿಯಾಗುವುದಿಲ್ಲ. ಇದರ ಬಗ್ಗೆ ರಾಜಕೀಯ ಧುರೀಣರು ಗಮನ ಕೊಡಬೇಕು ಎಂದು ಹೇಳುವಾಗ ಇದರ ಬಗ್ಗೆ ಧೈರ್ಯದಿಂದ ಹೆಜ್ಜೆ ಇಡಬೇಕು. ರೈತನ ಪರಿಸ್ಥಿತಿಯನ್ನು ಉತ್ತಮಪಡಿಸುತ್ತೇವೆಂದು ಹೇಳಿದ ಮಾತ್ರಕ್ಕೆ ಅವನ ಉದ್ಧಾರವಾಗುವುದಿಲ್ಲ. ರೈತನು ಮಾಡುವ ಕಸುಬು ಲಾಭದಾಯಕವಾಗಿರಬೇಕು ರೈತರ ಮಕ್ಕಳು ವಿದ್ಯಾವಂತರಾಗಿ ಅವರಿಗೆ ಬೇಕಾಗುವ ಬಟ್ಟೆಬರೆಗಳಿಗೆ ಅನುಕೂಲವಾಗಿ ಸುಖ ಜೀವನ ಮಾಡುವ ಪರಿಸ್ಥಿತಿಗೆ ಬರಬೇಕು. ಅವರ ಕಸುಬು ಲಾಭದಾಯಕವಾಗಿದ್ದರೆ ಅವರು ಸುಖವಾಗಿ ಜೀವನ ಮಾಡುವ ಪರಿಸ್ಥಿತಿಗೆ ಬರುತ್ತಾರೆ. ಸರಕಾರ ಕೂಡ ರೈತನ ಕಸುಬನ್ನು ಲಾಭದಾಯಕವಾಗಿ ಮಾಡಲು ಅವನ ಕಷ್ಟಗಳನ್ನು ಪರಿಹಾರ ಮಾಡಲು ಅವನಿಗೆ ರಕ್ಷಣೆ ಕೊಡಬೇಕು ಮತ್ತು ಅವನಮೇಲೆ ಹೊರೆ ಬೀಳುವಂತೆ ಮಾಡಬಾರದು. ಇಷ್ಟೆಲ್ಲಾ ಭಾವನೆಗಳಿಂದ ಕೂಡಿರುವ ಮಾರ್ಗ ಇಲ್ಲಿವೆ ಎಂದು ಹೇಳುತ್ತಿಲ್ಲ. ಆದಷ್ಟು ಜಾಗ್ರತೆ ಕಾಲವಿಳಂಬವಾಗದ ರೀತಿಯಲ್ಲಿ ರೈತ ತಾನು ಅನುಸರಿಸುತ್ತಿರುವ ಕಸುಬಿಗೆ ರಕ್ಷಣೆ ಒದಗಿಸಿ ಲಾಭದಾಯಕವಾದ ವೃತ್ತಿಯನ್ನು ಮಾಡುವುದು ಅತ್ಯಂತ ಆವಶ್ಯಕವಾಗಿದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಈ ಮಸೂದೆಯನ್ನು ಇದೇ ರೀತಿಯಲ್ಲಿ ಕಾನೂನು ಮಾಡಲು ಸಭೆಯ ಅನುಮತಿ ಪಡೆಯಬೇಕು ಎನ್ನುವ ಆಸೆ ನನಗಿತ್ತು. ಆದಷ್ಟು ಜಾಗ್ರತೆ ಇದು ಕಾನೂನಾಗಲಿ ಆದಷ್ಟು ಜಾಗ್ರತೆ ರೈತನಿಗೆ ಅನುಕೂಲವಾಗಲಿ ಎನ್ನುವ ಒಂದು ಆಸೆಯೂ ಇತ್ತು. ಆದರೆ ಇಲ್ಲಿ ಎಲ್ಲ ಸದಸ್ಯರ ಅಭಿಪ್ರಾಯಗಳನ್ನು ಕೇಳಿದಮೇಲೆ ಇನ್ನೂ ಪ್ರಯೋಜನವಾಗುವಂತೆ ಈ ಮಸೂದೆಯನ್ನು ಪಾರ್ಪಾಡು ಮಾಡಬೇಕು ಎನ್ನುವ ಅಭಿಪ್ರಾಯ ಬಂತು. ಇದನ್ನು ಕೇಳಿದ ಮೇಲೆ ನನಗನಿಸುತ್ತಿರುವುದು ಈ ಸಭೆಯ ಮಾನ್ಯ ಸದಸ್ಯರು ಹೇಳಿರುವ ಅಭಿಪ್ರಾಯಗಳಿಗೆಲ್ಲಾ ಅಮೂರಾಗ್ರವಾಗಿ ಉತ್ತರಕೊಟ್ಟು ಈ ಸಭೆಯ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟ ಪಡುವುದಿಲ್ಲ. ಪ್ರತಿಯೊಬ್ಬ ಸದಸ್ಯರೂ ಹೇಳಿರುವ ಎಲ್ಲ ವಿಚಾರಗಳಿಗೂ ಈಗ ಇಲ್ಲಿ ಉತ್ತರ ಕೊಡುವುದು ಅಷ್ಟು ಸಮಂಜಸವಲ್ಲ. ಈ ಮಸೂದೆಯನ್ನು ಮತ್ತಷ್ಟು ವ್ಯವಸ್ಥಿತವಾದ ರೀತಿಯಲ್ಲಿ ತರಲು ಇದನ್ನು ಒಂದು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದಕ್ಕಾಗಿ ಈ ಸಭೆಯಮುಂದೆ ಒಂದು ಸೂಚನೆಯನ್ನು ಇಡುತ್ತೇನೆ ಮತ್ತು ಅದಕ್ಕೆ ತಮ್ಮೆಲ್ಲರ ಅನುಮತಿಕೊಡಬೇಕೆಂದು ಕೊರುತ್ತೇನೆ. ಈ ಸಭೆಯಲ್ಲಿರುವ ಎಲ್ಲ ಹಿರಿಯ ಸದಸ್ಯರೂ ಇನ್ನೂ ಹೆಚ್ಚು ಉಪಯುಕ್ತವಾದ ರೀತಿಯಲ್ಲಿ ಈ ಮಸೂದೆಯನ್ನು ಬದಲಾವಣೆ ಮಾಡಬೇಕೆಂದು ಕೇಳುವುದರಲ್ಲಿ ಯಾವ ಅಕ್ಷೇಪಣೆಯೂ ಇಲ್ಲ. ಈ ಸೆಲೆಕ್ಟ್ ಸಮಿತಿಯಲ್ಲಿ ಪರಿಣತಿಮಟ್ಟದ ಎಲ್ಲ ಸದಸ್ಯರುಗಳೂ ಇರುವುದರಿಂದ ಮತ್ತು ಅವರು ಸಮಾಜದಲ್ಲಿರುವ ರೈತರ ಆರ್ಥಿಕ ಮಟ್ಟ ಹೇಗಿದೆ ಎಂದು ತಿಳಿದಿರುವುದರಿಂದ ಆದಷ್ಟು ಜಾಗ್ರತೆ ಮುಂದಿನ ಅಧಿವೇಶನದೊಳಗೆ ಈ ಮಸೂದೆಯನ್ನು ಪರಿಶೀಲನೆ ಮಾಡಿ ಅವರು ಶಿಫಾರಸುಗಳನ್ನು ಮಾಡಬೇಕೆಂದು ಕೇಳುತ್ತೇನೆ. ಆಗ ಬಹುತಃ ಹೆಚ್ಚಿನ ಮಟ್ಟದಲ್ಲಿ ಈ ಮಸೂದೆಗೆ ಸಭೆಯ ಅನುಮತಿ ದೊರೆಯುತ್ತದೆ ಎನ್ನುವ ಆಸೆ ನನಗೆ ಇದೆ. ಆ ಕಾರಣದಿಂದ ಈ ಸಭೆಯ ಕಾಲವನ್ನು ಹೆಚ್ಚು ತೆಗೆದುಕೊಳ್ಳದೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri H. N. NANJE GOWDA.—Sir, in the light of the assurance given by the Hon. Minister that he is going to refer the Bill to a Select Committee, I beg leave of the House to withdraw my amendment that the Mysore Irrigation (Levy of Betterment Contribution and Water Rate) (Amendment) Bill, 1969, be circulated for purposes of eliciting public opinion.

Mr. DEPUTY SPEAKER.—The amendment was by leave withdrawn.

The question is :

"That the Mysore Irrigation (Levy of Betterment Contribution and Water Rate) (Amendment) Bill, 1969, be taken into consideration."

The motion was adopted.

Sri K. PUTTASWAMY.—Sir, I move :

"That the Mysore Irrigation (Levy of Betterment Contribution and Water Rate) (Amendment) Bill, 1969, be referred to a Select Committee consisting of 20 members, *viz.*,

Sriyuths :

1. D. Devaraj Urs
2. K. Singari Gowda
3. N. Chikke Gowda
4. B. N. Ramegowda
5. P. Anjanappa
6. S. M. Gureddy
7. S. K. Amin
8. F. S. Patil
9. Virupaksha Gowda
10. M. Ramappa
11. Smt. Sharadavva S. Pattan
12. Neelakanta Patil
13. H. Siddaveerappa
14. H. N. Nanje Gowda
15. D. B. Kalmankar
16. G. Chandrakanth
17. N. G. Halappa
18. N. A. Channe Gowda
19. T. V. Krishnappa
20. H. M. Channabasappa

MR. DEPUTY SPEAKER,—The question is :

"That the Mysore Irrigation (Levy of Betterment Contribution and Water Rate) (Amendment) Bill, 1969, be referred to a Select Committee consisting of 20 members, *viz.*,

Sriyuths :

1. D. Devaraj Urs
2. K. Singari Gowda
3. N. Chikke Gowda
4. B. N. Ramegowda
5. P. Anjanappa
6. S. M. Gureddi
7. S. K. Amin
8. F. S. Patil
9. Virupaksha Gowda
10. M. Ramappa
11. Smt. Sharadavva S. Pattan
12. Neelakanta Patil
13. H. Siddaveerappa
14. H. N. Nanje Gowda
15. D. B. Kalmankar
16. G. Chandrakanth
17. N. G. Halappa
18. N. A. Channe Gowda
19. T. V. Krishnappa
20. H. M. Channabasappa

The motion was adopted.

The Bill stands referred to the Select Committee.

Mysore Appropriation (No. 5) Bill, 1969

Motion to Consider.

SRI K. PUTTASWAMY.—Sir on behalf of the Finance Minister I beg to move :

"That the Mysore Appropriation (No. 5) Bill, 1969 be taken into consideration."

5-30 P.M.

Mr. DEPUTY SPEAKER.—I will put it to the vote of the House. The question is :

"That the Mysore Appropriation (No. 5) Bill, 1969 be taken into consideration."

The motion was adopted.

Mr. DEPUTY SPEAKER.—Now, we will take up clause by clause. The question is :

"That clauses 2 and 3 do stand part of the Bill."

The motion was adopted.

Clauses 2, 3 were added to the Bill.

Mr. DEPUTY SPEAKER.—The question is :

"That Schedule, clause 1, the long Title and the Enacting Formula do stand part of the Bill."

The motion was adopted.

The Schedule, clause 1, long Title and the Enacting Formula were added to the Bill.

Motion to pass.

Sri K. PUTTASWAMY.—I move :

"That the Mysore Appropriation (No. 5) Bill, 1969 be passed."

Mr. DEPUTY SPEAKER.—The question is :

"That the Mysore Appropriation (No. 5) Bill, 1969 be passed."

The motion was adopted.

Mysore Appropriation (No. 6) Bill 1969

Motion to Consider.

Sri K. PUTTASWAMY.—I move on behalf of the Financel Minister :

"That the Mysore Appropriation (No. 6) Bill, 1969 be taken into consideration."

Mr. DEPUTY SPEAKER.—I will put it to the vote. The question is :

" That the Mysore Appropriation (No. 6) Bill, 1969 be taken into consideration."

The motion was adopted.

Mr. DEPUTY SPEAKER.—Now, we will take up clause by clause. The question is :

" That clauses 2 and 3 do stand part of the Bill."

The motion was adopted.

Clauses 2 and 3 were added to the Bill.

Mr. DEPUTY SPEAKER.—The question is :

" That Schedule, Clause 1, long title and the Enacting formula do stand part of the Bill."

The motion was adopted.

The Schedule, Clause 1, the long title and the Enacting formula were added to the Bill.

Motion to pass.

Sri K. PUTTASWAMY.—I beg to move :

" That the Mysore Appropriation (No. 6) Bill, 1969 be passed."

Mr. DEPUTY SPEAKER.—The question is :

" That Mysore Appropriation (No. 6) Bill, 1969, be passed. "

The motion was adopted.

Bangalore, Karnatak and Mysore Universities (Amendment) Bill, 1968—as passed by the Legislative Council

Motion to Consider.

Sri N. M. KOTRABASIAH SOGI (Deputy Minister for Education) :— Sir, I beg to move :

" That the Bangalore, Karnatak and Mysore Universities (Amendment) Bill, 1968 as passed by the Legislative Council, be taken into consideration. "

Mr. DEPUTY SPEAKER.—Motion moved :

"That the Bangalore, Karnatak and Mysore Universites (Amendment) Bill, 1968 as passed by the Legislative Council, be taken into consideration."

† ಶ್ರೀ ಎನ್. ಎಂ. ಕೊಟ್ರಬಸಯ್ಯ ನೋಗಿ.—ಸ್ವಾಮಿ, ಈಗ ನಾನು ಮುಂಡಿಸಿರತಕ್ಕಂಥ ಈ ಮಸೂದೆ ಬಹಳ ಅವಶ್ಯಕವಾದಂಥ ತಿದ್ದುಪಡಿಗಳನ್ನು ಮಾಡುವುದಕ್ಕಾಗಿ ಮುಂಡಿಸಲಾಗಿದೆ. ಅನಿವಾರ್ಯ ಕಾರಣಗಳಿಂದ ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗಿದೆ. ಕೆಲವು ಟೆಕ್ನಿಕಲ್ ವಿಷಯಗಳ ಬಗ್ಗೆ ತಿದ್ದುಪಡಿ ಮಾಡಬೇಕಾಗಿದೆ. ಈಗ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಎಂದು ಇರುವುದನ್ನು ಡೈರೆಕ್ಟರ್ ಆಫ್ ಹೆರ್ತ್ ಅಂಡ್ ಫ್ಯಾಮಿಲಿ ಪ್ಲಾನಿಂಗ್ ಸರ್ವಿಸಸ್ ಎಂದು ಆಗಬೇಕಾಗಿದೆ. ಡಿ.ಪಿ.ಐ. ಅವರು ಇದುವರೆಗೂ ಸಿಂಡಿಕೇಟಿನ ಸದಸ್ಯರಾಗಿ ಪ್ರತಿನಿಧಿಸುತ್ತಿದ್ದರು, ಆದರೆ ಅವರ ಕೆಲಸಕಾರ್ಯಗಳಿಗೆ ತೊಂದರೆಯಾಗುತ್ತಿರುವುದರಿಂದ ಅವರು ಇನ್ನು ಮುಂದೆ ಸಿಂಡಿಕೇಟಿನ ಸದಸ್ಯರಾಗಿರಬೇಕಾಗಿಲ್ಲ ಎಂದು ತಿದ್ದುಪಡಿ ಮಾಡಬೇಕಾಗಿದೆ. ಮತ್ತು, ಈ ಮುಂಚೆ ಕರ್ನಾಟಕ ವಿಶ್ವವಿದ್ಯಾನಿಲಯದ ಅಡಳಿತದಲ್ಲಿ ಇದ್ದ ಕೆಲವು ಕಾಲೇಜ್‌ಗಳು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವರ್ಗವಾಗಿವೆ, ಅದೇ ರೀತಿ ಮೈಸೂರು ವಿಶ್ವವಿದ್ಯಾನಿಲಯದ ಅಡಳಿತದಲ್ಲಿ ಇದ್ದ ಕೆಲವು ಕಾಲೇಜುಗಳು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ವರ್ಗವಾಗಿವೆ. ಈ ಕಾರಣದಿಂದ ಕೆಲವು ಅವಶ್ಯಕ ತಿದ್ದುಪಡಿಗಳನ್ನು ಮಾಡಲು ಈ ಮಸೂದೆಯನ್ನು ತರಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಕೂಡ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† Sri B. P. GANGADHAR.—Now I would like to bring to the notice of the Hon. Deputy Minister, about the situation that has arisen in the City due to the strike by college students. The Cars of the Vice-Chancellor and Registrar of the Bangalore University are being smashed and the Central College and its staff is almost in a state of seige. Immediate attention of the Government in this matter is very necessary. The students are rushing into the laboratories and smashing the properties of the Central College worth lakhs of rupees. I would like that the hon. Minister should give an assurance here that Government will pay immediate attention to the matter and safeguard the lives of the University Staff and the properties of the University.

ಶ್ರೀ ಎಚ್. ಎನ್. ನಂಜೇಗೌಡ —ಶ್ರೀ ಗಂಗಾಧರ್ ಅವರು ಹೇಳಿದ ವಿಚಾರ ನಮಗೂ ಸಹ ತಿಳಿದುಬಂತು. ಅಲ್ಲಿ ಪರಿಸ್ಥಿತಿ ಅಷ್ಟೊಂದು ಪ್ರಕ್ಷೋಪಕ್ಕೆ ಹೋಗುವುದಕ್ಕೆ ಕಾರಣ ಏನಿತ್ತು, ಎಂಬುದನ್ನು ಸರ್ಕಾರದವರು ಸಾಧ್ಯವಿದ್ದರೆ ಈ ಸಭೆಗೆ ತಿಳಿಸಬೇಕು. ನಮಗೆ ಕಳವಳವಾಗಿದೆ. ಆ ಬಗ್ಗೆ ಸರ್ಕಾರದವರು ಒಂದು ಸ್ಟೇಟ್‌ಮೆಂಟ್ ಕೊಡುವುದು ಒಳ್ಳೆಯದು.

Mr. DEPUTY SPEAKER.—If the hon. Members put the matter in a proper form either by way of a calling attention notice or short notice question, I will send it to the concerned Minister and he would make a statement thereto.

Sri B. P. GANGADHAR.—I would give a call attention notice as suggested by the Chair. But what I want to stress is that the Government must immediately send the police to safeguard the lives and properties.

Mr. DEPUTY SPEAKER.—I will convey the information to the Government.

ಶ್ರೀ ಎಂ. ನಾಗಪ್ಪ.—ಮಾನ್ಯ ಉಪಾಧ್ಯಕ್ಷರೇ, ಈ ದಿವಸ ನಾವು ಬೆಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಟ್ಟ ಕಾಯಿದೆಗಳ ತಿದ್ದುಪಡಿ ಮಸೂದೆಯನ್ನು ಚರ್ಚಿಸುತ್ತಿದ್ದೇವೆ. ಈ ನಮ್ಮ

ರಾಜ್ಯದಲ್ಲಿರತಕ್ಕಂಥ ಈ ಮೂರು ವಿಶ್ವವಿದ್ಯಾನಿಲಯಗಳು ಬಹಳ ಮುಖ್ಯವಾದಂಥ ವಿಶ್ವವಿದ್ಯಾನಿಲಯಗಳಾಗಿವೆ. ಇವುಗಳಿಗೆ ನಾವು ಬೇರೆ ಬೇರೆ ಕಾಯಿದೆಗಳನ್ನು ಮಾಡಿದ್ದೇವೆ. ನಾನಾದರೂ ಕೂಡ ಈ ಸಮಯದಲ್ಲಿ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಈಗ ನಾವು ಈ ತಿದ್ದುಪಡಿ ಮಸೂದೆಯ ಎರಡನೇ ಕ್ಲಾಸನ್ನು, ಮೂರನೆಯ ಕ್ಲಾಜನ್ನು ಮತ್ತು 4ನೇ ಕ್ಲಾಜನ್ನು ನೋಡಿದರೆ, ಇದರಲ್ಲಿ ಎರಡನೆಯ ಕ್ಲಾಜು ಬೆಂಗಳೂರು ವಿಶ್ವವಿದ್ಯಾನಿಲಯದ ಮಸೂದೆಗೆ ತಂದಿರುವ ತಿದ್ದುಪಡಿಯಾಗಿದೆ.

ಮೂರನೆಯ ಕ್ಲಾಜಿನಲ್ಲಿ ಕರ್ನಾಟಕ ಯೂನಿವರ್ಸಿಟಿಯ ಕಾಯಿದೆಗೆ ತಿದ್ದುಪಡಿ ತಂದು ಕ್ಲಾಜ್ 4ರಲ್ಲಿ ಮೈಸೂರು ಯೂನಿವರ್ಸಿಟಿಯ ಆಕ್ಟಿಗೆ ತಿದ್ದುಪಡಿಯನ್ನು ತಂದು, ಈ ತಿದ್ದುಪಡಿ ಮಸೂದೆಯಲ್ಲಿ ಮೂರು ಯೂನಿವರ್ಸಿಟಿಗಳಿಗೂ ಸಂಬಂಧಪಟ್ಟಹಾಗೆ ಕಾಯಿದೆಯನ್ನು ತಿದ್ದುಪಡಿ ಮಾಡುತ್ತಿದ್ದಾರೆ ಎನ್ನುವ ವಾತು ಸ್ಪಷ್ಟವಾಗುತ್ತಿದೆ. ರಾಜ್ಯಸರ್ಕಾರದವರು ನಮ್ಮ ರಾಜ್ಯದಲ್ಲಿರತಕ್ಕ ಮೂರು ಯೂನಿವರ್ಸಿಟಿಗಳಿಗೂ ಏಕರೂಪವಾದ ಕಾಯಿದೆಯನ್ನು ಏತಕ್ಕೆ ಮಾಡಲಿಲ್ಲ ? ಒಂದೊಂದು ಯೂನಿವರ್ಸಿಟಿಗೆ ಒಂದೊಂದು ಕಾಯಿದೆಯನ್ನು ಇಡತಕ್ಕದ್ದು ಉಚಿತವೇ ? ಒಂದು ಕಡೆ ಇಂಟಿಗ್ರೇಷನ್ ಆಗಬೇಕು, ರಾಜ್ಯಕ್ಕೆಲ್ಲಾ ಅನ್ವಯಿಸುವಂಥಾ ಏಕರೂಪ ಶಾಸನ ಬರಬೇಕು ಎಂದು ಹೇಳುತ್ತಾರೆ. ಮತ್ತೊಂದು ಕಡೆ ಉತ್ತರ ಕರ್ನಾಟಕ, ಹಳೆಯ ಮೈಸೂರು, ಹೈದರಾಬಾದ್ ಕರ್ನಾಟಕ ಎನ್ನತಕ್ಕಂಥ ಪ್ರತ್ಯೇಕತಾ ಮನೋಭಾವನೆಯು ಕೂಗು ಈ ಮನೆಯಲ್ಲಿ ಹಾಗೂ ಹೊರಗಡೆ ಕೂಡ ಕೇಳಿ ಬರುತ್ತಿದೆ. ಹೀಗಿರುವಾಗ ಕರ್ನಾಟಕ ಯೂನಿವರ್ಸಿಟಿ, ಮೈಸೂರು ಯೂನಿವರ್ಸಿಟಿ, ಬೆಂಗಳೂರು ಯೂನಿವರ್ಸಿಟಿ ಎನ್ನತಕ್ಕಂಥ ಹೆಸರನ್ನು ಪದೇ ಪದೇ ಉಪಯೋಗಿಸುತ್ತಾ ಹೋದರೆ, ಇಂಥಾ ಕಾಯಿದೆಗಳನ್ನು ಜೀವಂತವಾಗಿ ಇಟ್ಟುಕೊಂಡು ಹೋದರೆ ಇಂಟಿಗ್ರೇಟೆಡ್ ಏರಿಯಾಗಳು ಎಲ್ಲಪೂ ಮೈಸೂರು ರಾಜ್ಯದಲ್ಲಿ ವಿಲೀನವಾಗಿರುವಾಗ ಎಲ್ಲಾ ಪ್ರದೇಶಗಳಿಗೂ ಅನ್ವಯಿಸತಕ್ಕಂಥ ಏಕರೂಪತಾ ಕಾನೂನನ್ನು ತಂದು ನಾವೆಲ್ಲರೂ ಒಂದೇ ರಾಜ್ಯದವರು ಎನ್ನುವ ಮನೋಭಾವನೆಯನ್ನು ಜನತೆಯಲ್ಲಿ ಉಂಟು ಮಾಡದಿದ್ದರೆ ನಾವೆಲ್ಲರೂ ಒಂದೇ ರಾಜ್ಯದವರು ಎನ್ನುವಂಥಾ ಭಾವನೆ ಅಳಿಸಿ ಹೋಗತಕ್ಕಂಥ ಪರಿಸ್ಥಿತಿ ಬರಬಹುದು. ಅದಕ್ಕಾಗಿ ನಾನು ಈ ಸಮಯದಲ್ಲಿ ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಗುಲ್ಬರ್ಗಾ ಡಿವಿಜನ್‌ನಲ್ಲಿ ಒಂದು ಯೂನಿವರ್ಸಿಟಿಯನ್ನು ಪ್ರಾರಂಭ ಮಾಡತಕ್ಕಂಥ ವಿಚಾರ ಸರ್ಕಾರಕ್ಕೆ ಇವೆಯೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕಾಗಿ ಒಂದು ಹೊಸ ಕಾಯಿದೆಯನ್ನು ತರಬೇಕಾಗುತ್ತದೆ. ಆದ್ದರಿಂದ ಈಗ ನೀರಾವರಿ ಪೊಟರ್‌ಮೆಂಟ್ ಲೆವಿಗೆ ಸಂಬಂಧಪಟ್ಟಂತೆ ಇಡೀ ದೇಶಕ್ಕೆ ಅನ್ವಯಿಸುವಂಥಾ ಒಂದು ಸಮಗ್ರವಾದ ತಿದ್ದುಪಡಿಯನ್ನು ಯಾವ ರೀತಿ ತಂದಿದ್ದಾರೋ ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿರತಕ್ಕ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಸಂಬಂಧಪಟ್ಟ ಹಾಗೆ ಒಂದು ಏಕರೂಪವಾದ ಕಾಯಿದೆಯನ್ನು ತರಬೇಕೆಂದು ನಾನು ಮಾನ್ಯ ವಿದ್ಯಾ ಮಂತ್ರಿಗಳಿಗೆ ಹೇಳಬಯಸುತ್ತೇನೆ. ಮಾನ್ಯ ಮೊನ್ನೆ ವಿದ್ಯಾ ಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರವನ್ನು ಹೇಳುತ್ತಾ ಇಂಥಾ ಒಂದು ಏಕರೂಪತಾ ಕಾಯಿದೆಯನ್ನು ತರುವುದಕ್ಕೆ ಸಾಧ್ಯವಿಲ್ಲ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿರತಕ್ಕ ವಿಶೇಷ ಪದ್ಧತಿಯನ್ನು, ಮೈಸೂರು ವಿಶ್ವವಿದ್ಯಾನಿಲಯದಲ್ಲಿರತಕ್ಕ ವಿಶೇಷ ಪದ್ಧತಿಯನ್ನು ಬದಲಾಯಿಸುವುದಕ್ಕೆ ಸಾಧ್ಯವಿಲ್ಲ, ಆಯಾಯ ವಿಶ್ವವಿದ್ಯಾನಿಲಯದಲ್ಲಿರತಕ್ಕ ವಿಶೇಷ ಪದ್ಧತಿಯನ್ನು ಅದೇರೀತಿ ಅನುಸರಿಸಿಕೊಂಡು ಹೋಗಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ ಎಂದು ಹೇಳಿದರು. ಇವೊತ್ತು ಈ ತರಹ ಒಂದು ತಿದ್ದುಪಡಿ ಮಸೂದೆಯನ್ನು ತರುವುದಕ್ಕೆ ಬದಲಾಗಿ ಒಂದು ಉತ್ತಮವಾದ ಏಕರೂಪವಾದ ಸಮಗ್ರವಾದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಅನ್ವಯಿಸತಕ್ಕಂಥ ಒಂದು ಮಸೂದೆಯನ್ನು ತಂದಿದ್ದರೆ ಒಳ್ಳೆಯದಾಗುತ್ತಿತ್ತು ಎನ್ನುವಂಥಾ ಒಂದು ವಾದವನ್ನು ಅನೇಕ ಮಾನ್ಯ ಸದಸ್ಯರು ಈ ಸಭೆಯಲ್ಲಿ ಹೇಳಿದ್ದಾರೆ.

ಇನ್ನು ಈ ಮಸೂದೆಯಲ್ಲಿ 12ನೇ ಸೆಕ್ಷನ್ ಸಬ್ ಸೆಕ್ಷನ್ (7)ರಲ್ಲಿ ಹೇಳಿರುವಹಾಗೆ ವೈಸ್ ಛಾನ್ಸಲರ್ ಅವರು ಒಂದುವೇಳೆ ರಾಜೀನಾಮೆ ಕೊಟ್ಟರೆ, ಅಥವಾ ತೀರಿಹೋದರೆ ಅಂಥಾ ಸಂದರ್ಭದಲ್ಲಿ ಒಬ್ಬರು ಚೆಂಪರರಿ ವೈಸ್ ಛಾನ್ಸಲರ್ ಅವರನ್ನು ನೇಮಿಸಬೇಕಾಗುತ್ತದೆ ಎನ್ನತಕ್ಕಂಥ ಒಂದು ತಿದ್ದುಪಡಿಯನ್ನು ಇದರಲ್ಲಿ ತಂದಿದ್ದಾರೆ. ಈ ಚೆಂಪರರಿ ವೈಸ್‌ಛಾನ್ಸಲರನ್ನು ನೇಮಕ ಮಾಡಿದರೆ ಅವರು ಎಷ್ಟು ಅವಧಿಯವರೆಗೆ ಇರಬೇಕು ಎನ್ನತಕ್ಕ ವಿಚಾರ ನಿರ್ದಿಷ್ಟವಾಗಿ ಈ ಕಾಯಿದೆಯಲ್ಲಿಲ್ಲ. ಅಂಥಾ ಸಂದರ್ಭದಲ್ಲಿ ಎಷ್ಟು ದಿವಸಗಳಲ್ಲಿ ಪರ್ಮನೆಂಟ್ ವೈಸ್‌ಛಾನ್ಸಲರನ್ನೂ ಸಹ ನೇಮಕ ಮಾಡುತ್ತಾರೆ ಎನ್ನುವಂಥಾದ್ದು ಇದರಲ್ಲಿ ಕಾಣುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ತಿದ್ದುಪಡಿಯನ್ನು ಸಹ ನಾನು ತಂದಿದ್ದೇನೆ. ಆ ತಿದ್ದುಪಡಿ ಬಂದಂತಹ ಸಮಯದಲ್ಲಿ

(ಶ್ರೀ ಎಂ. ನಾಗಪ್ಪ)

ನಾನು ಅದನ್ನು ಈ ಸಭೆಯ ಮುಂದೆ ಮಂಡಿಸುತ್ತೇನೆ, ಅದನ್ನು ಈ ಮಾನ್ಯ ಸಭೆಯವರು ಒಪ್ಪುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇಷ್ಟು ವಿಷಯುಗಳನ್ನು ಹೇಳಿ ರಾಜ್ಯ ಸರ್ಕಾರದವರು ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಅನ್ವಯಿಸುವಂಥಾ ಒಂದು ಏಕರೂಪ ಕಾಯಿದೆಯನ್ನು ಈ ಸಭೆಯಮುಂದೆ ತರಲಿ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ.—(ಪಾಂಡವಪುರ) ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಶಿಕ್ಷಣ ಮಂತ್ರಿಗಳು ಸಭೆಯಮುಂದೆ ಮಂಡಿಸಿರತಕ್ಕ ಕರ್ನಾಟಕ, ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ತಿದ್ದುಪಡಿ ಮಸೂದೆಯನ್ನು ನಾನು ವಿರೋಧಿಸಿ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಮೈಸೂರು ರಾಜ್ಯದಲ್ಲಿ ನಾಲ್ಕು ವಿಶ್ವವಿದ್ಯಾನಿಲಯುಗಳು ಇವೆ. ಅವು ಯಾವುವೆಂದರೆ ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯ ಕರ್ನಾಟಕ ವಿಶ್ವವಿದ್ಯಾನಿಲಯ ಮತ್ತು ಕೃಷಿ ವಿಶ್ವವಿದ್ಯಾನಿಲಯ. ಇವರಲ್ಲಿ ಕರ್ನಾಟಕ, ಬೆಂಗಳೂರು ಮತ್ತು ಮೈಸೂರು ಈ ಮೂರು ವಿಶ್ವವಿದ್ಯಾನಿಲಯಗಳಲ್ಲಿ ಸಾಮಾನ್ಯವಾಗಿ ಒಂದೇ ತರಹ ಸಾಮಾನ್ಯ ಶಿಕ್ಷಣವನ್ನು ಕೊಡರಾಗುತ್ತಿವೆ. ಈ ವಿಶ್ವವಿದ್ಯಾನಿಲಯಗಳ ಮೂಲ ಉದ್ದೇಶ ಏನೆಂದರೆ ಯುವಕರನ್ನು ವಿದ್ಯಾವಂತರನ್ನಾಗಿ ಸತ್ಪ್ರಜೆಗಳನ್ನಾಗಿ ಮಾಡುವ ಪರಮ ಉದ್ದೇಶವನ್ನು ಹೊಂದಿವೆ. ಅದಕ್ಕೋಸ್ಕರ ಈ ಹಿರಿಯ ವಿಶ್ವವಿದ್ಯಾನಿಲಯಗಳು ಸ್ವಯಂ ಆಡಳಿತವನ್ನು ಇಟ್ಟುಕೊಂಡು ವ್ಯವಹಾರ ನಡೆಸಬೇಕು, ಮತ್ತು ಅವು ಸರ್ಕಾರದ ಅಂಗವಾಗಿರಬಾರದು, ಎನ್ನುವ ಉದ್ದೇಶದಿಂದ ಸ್ವಯಮಾಡಳಿತವುಳ್ಳ ಸ್ವಾಯತ್ತಪಟ್ಟರಿ ಬಾಡಿ ಸ್ಟೆಟಸ್‌ನ್ನು ಆ ವಿಶ್ವವಿದ್ಯಾನಿಲಯಗಳಿಗೆ ಸರ್ಕಾರದವರು ಕೊಟ್ಟರು. ಈ ದಿವಸ ಯಾವ ವಿಶ್ವವಿದ್ಯಾನಿಲಯವೂ ಕೂಡ ಕಾರ್ಯ ರೂಪದಲ್ಲಿ ಸ್ವಯಂ ಆಡಳಿತವನ್ನು ಹೊಂದಿಲ್ಲ. ಕುಲಪತಿಗಳು ಉಪಕುಲಪತಿಗಳು ಇವರನ್ನು ಆರಿಸುವ ವ್ಯವಸ್ಥೆಯಲ್ಲಿ ಯಾವರೀತಿ ಮಾಡಬೇಕು, ಯಾರನ್ನು ಮಾಡಬೇಕೆಂದು ಸರ್ಕಾರದವರ ಮನಸ್ಸಿನಲ್ಲಿದೆಯೋ ಅಂಥವರನ್ನು ತರುವುದಕ್ಕೆ ಅನುಕೂಲವಾದ ಒಂದು ಕಾನೂನನ್ನು ವಿಶ್ವವಿದ್ಯಾನಿಲಯಗಳ ಆಕ್ಟಿನಲ್ಲಿ ನಿರೂಪಿಸಿದ್ದಾರೆ. ಈ ರೀತಿ ಮಾಡುವುದರಿಂದ ವಿಶ್ವವಿದ್ಯಾನಿಲಯಗಳಲ್ಲಿ ಸ್ವಯಂ ಆಡಳಿತ ಬರುವುದಕ್ಕೆ ಬದಲಾಗಿ ವಿಶಿಷ್ಟವಾದ ರಾಜಕೀಯ ಬೆಳೆಯುತ್ತದೆ. ಈಗತಾನೇ ಮಾನ್ಯ ಸದಸ್ಯರಾದ ಶ್ರೀಮಾನ್ ಗಂಗಾಧರ ಅವರು ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಮತ್ತು ಆಫೀಸರನ್ನೂ ವಿದ್ಯಾರ್ಥಿಗಳು ಮುತ್ತಿಗೆ ಹಾಕಿದ್ದಾರೆ, ಆಫೀಸನ್ನು ನೂರೆ ಮಾಡುತ್ತಿದ್ದಾರೆ ಎಂದು ಹೇಳಿದರು. ಇದಕ್ಕೆ ಕಾರಣವೇನೆಂದರೆ ವಿಶ್ವವಿದ್ಯಾನಿಲಯದಲ್ಲಿ ನಡೆಯತಕ್ಕ ವಿದ್ಯಾಮಾನಗಳು ವಿದ್ಯಾರ್ಥಿಗಳನ್ನು ಕೆರಳಿಸಿವೆ. ವಿದ್ಯಾರ್ಥಿಗಳು ಇಂಥಾ ಒಂದು ಪ್ರಕೋಪಕ್ಕೆ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಮೂರು ವಿಶ್ವವಿದ್ಯಾನಿಲಯಗಳಲ್ಲಯೂ ಏಕರೂಪತೆಯನ್ನು ಸಾಧಿಸಿ, ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ "ಅನ್ವಯಿಸುವ ಒಂದು ಮೈಸೂರು ಯೂನಿವರ್ಸಿಟೀಸ್ ಆಕ್ಟನ್ನೇ" ಮಾಡಿ ಎಲ್ಲಾ ಛಾನ್ಸಲರ್ ಮತ್ತು ವೈಸ್ ಛಾನ್ಸಲರ್‌ಗಳನ್ನು ಆರಿಸುವ ವಿಷಯದಲ್ಲಯೂ, ಯೂನಿವರ್ಸಿಟಿಗೆ ಸಂಬಂಧಪಟ್ಟ ಆಡಳಿತ, ವಿದ್ಯಾ ಭ್ಯಾಸಕ್ರಮ, ಪರೀಕ್ಷಾಕ್ರಮ ಮತ್ತು ಇತರ ವಿಷಯಗಳಲ್ಲಯೂ ಒಂದೇ ತೆರನಾದ ಕಾನೂನನ್ನು ಜಾರಿಯಲ್ಲಿ ತಂದರೆ ಈ ರೀತಿಯಾಗಿ ವಿದ್ಯಾರ್ಥಿಗಳು ಉಪಕುಲಪತಿಗಳನ್ನು ಮುತ್ತಿಗೆ ಹಾಕತಕ್ಕಂಥ ಪರಿಸ್ಥಿತಿ ಬರುತ್ತಿರಲಿಲ್ಲ. ಒಂದೊಂದು ವಿಶ್ವವಿದ್ಯಾನಿಲಯಕ್ಕೆ ಒಂದೊಂದು ರೀತಿಯಾಗಿ, ಪ್ರಾದೇಶಿಕ ಜನಗಳಿಗೆ ಅನುಗುಣವಾಗಿ ಒಂದು ರೀತಿಯಲ್ಲಿ ಕೆಲವರಿಗೆ ಅನುಕೂಲಗಳು, ಕೆಲವರಿಗೆ ಅನಾನುಕೂಲಗಳು ಉಂಟಾಗತಕ್ಕಂಥ ಅವಕಾಶವನ್ನು ಮಾಡಿರುವುದರಿಂದ, ಈದಿನ ವಿದ್ಯಾರ್ಥಿಗಳಲ್ಲಿ ಅತ್ಯತ್ತಿ, ಉಪಾಧ್ಯಾಯರಲ್ಲಿ ಅತ್ಯಪ್ಪಿ, ಮತ್ತು ಸಾರ್ವಜನಿಕರಲ್ಲಿ ಅತ್ಯಪ್ಪಿ ಬರುವುದಕ್ಕೆ ಅವಕಾಶವಾಗಿದೆ ಎಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ.

[MR. CHAIRMAN (SRI B. P. KADAM) in the Chair]

ಮೈಸೂರು ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ನಡೆಯತಕ್ಕಂಥ ಅವಿವೇಕಗಳನ್ನು, ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ಈದಿನ ಹೇಗಿದೆ ಎಂದರೆ ಅದನ್ನು ಒಂದು ದೊಡ್ಡ ಲಾಯುಕ್ಕೆ ಹೋಲಿಸಬಹುದು. ಪಬ್ಲಿಕ್ ಪರೀಕ್ಷೆಗಳ ಫಲಿತಾಂಶಕ್ಕೆ ಸಂಬಂಧಪಟ್ಟಹಾಗೆ ಇನ್ನೂ ನಪ್ಪಿಮೆಂಟರಿ ಪಟ್ಟಿಗಳು ಬರುತ್ತಿವೆ. ವಿಶ್ವವಿದ್ಯಾನಿಲಯ ಸ್ವಯ ಮಾಡಳಿತವುಳ್ಳದ್ದು. ಆದ್ದರಿಂದ ಆಡಳಿತದ ಬಗ್ಗೆ ನಾವು ಪ್ರದೇಶ ಮಾಡುವುದಕ್ಕಾಗುವುದಿಲ್ಲ.

ಆಕ್ಟ್ ಪ್ರಕಾರ ಅಕಡೆಮಿಕ್ ಕೌನ್ಸಿಲ್ ಇದೆ, ಸೆನೆಟ್ ಇದೆ, ಸಿಂಡಿಕೇಟ್ ಇದೆ ಜವಬ್ದಾರಿ ಅದಕ್ಕೆ ಸೇರಿದೆ. ಆದ್ದರಿಂದ ಆ ಬಗ್ಗೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಎಂದು ಸರಕಾರ ಕೈ ಅಲ್ಲಾಡಿಸುತ್ತದೆ ಅಲ್ಲಿರತಕ್ಕ ಸೆನೆಟ್ ಮತ್ತು ಸಿಂಡಿಕೇಟು ಯಾವರೀತಿ ರಚನೆಯಾಗಿದೆ ಎಂದರೆ ಸರ್ಕಾರದವರು ತಮಗೆ ಯಾರು ಬೇಕೋ ಅಂಥವರನ್ನು ಮಾತ್ರ ಆ ಸಂಸ್ಥೆಗಳಿಗೆ ಕಳುಹಿಸಬಹುದು. ಈ ಹಕ್ಕನ್ನು ಮಾತ್ರ ಸರಕಾರ ವಹಿಸಿಕೊಂಡಿದೆ. ಆದರೆ ಸೆನೆಟ್‌ನಲ್ಲಾಗಲೀ, ಸಿಂಡಿಕೇಟ್‌ನಲ್ಲಾಗಲೀ ಸರ್ಕಾರದ ಪರವಾಗಿ ಇರತಕ್ಕ ಸದಸ್ಯರು ಮತ್ತು ವೈಸ್‌ಛಾನ್ಸಲರು ಇವರುಗಳು ಏನಾದರೂ ಅವ್ಯವಹಾರ ಮಾಡಿದರೆ ಅದರ ಜವಾಬ್ದಾರಿಯನ್ನು ಸರ್ಕಾರದವರು ವಹಿಸಿಕೊಳ್ಳುವುದಕ್ಕೆ ಸಿದ್ಧರಾಗಿಲ್ಲ.

ಈ ದಿವಸ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳು ಯಾವರೀತಿ ಹಣ ಖರ್ಚು ಮಾಡುತ್ತಿದ್ದಾರೆ ಎಂದರೆ ತಮ್ಮ ಒಂದು ಛೆಂಬರ್ ಮತ್ತು ಕ್ಯಾರ್ಟ್ಸನ್ಸ್ ಫರ್ನಿಷ್ ಮಾಡುವುದಕ್ಕೆ ಸುಮಾರು 40 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಒಬ್ಬ ರಿಜಿಸ್ಟ್ರಾರ್ ಮೇಲುಗಡೆಯಲ್ಲಿ ಇದ್ದ ತಮ್ಮ ಕಛೇರಿಯನ್ನು ಕೆಳಗಡೆ ಬದಲಾಯಿಸುವುದಕ್ಕೆ ಸಹಸ್ರ ರೂಪಾಯಿ ಖರ್ಚು ಮಾಡಿದ್ದಾರೆ. ಈ ರೀತಿಯಾಗಿ ಉಪಕುಲಪತಿಗಳು ತಮಗೆ ಬೇಕಾದಹಾಗೆ ಹಣವನ್ನು ದುಂದು ಖರ್ಚು ಮಾಡುತ್ತಿದ್ದಾರೆ. ಇದನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಮೈಸೂರು ವಿಶ್ವವಿದ್ಯಾಲಯದ ಆಕ್ಟ್ ಪ್ರಕಾರ ಸೆನೇಟ್ ಮೆಂಬರುಗಳು ಯಾರು ಯಾರು ಇದ್ದಾರೆ ಎಂದರೆ The director of Medical Services, The Director of of Agriculture, The Director of Industries and Commerce; the Secretary to Government, Education Department ಮತ್ತು ಇನ್ನೂ 49 ಜನ ಇದ್ದಾರೆ. ಈ ರೀತಿ ಇದ್ದೂ ವಿಶ್ವವಿದ್ಯಾನಿಲಯ ದುರಾಡಳಿತ ನಡೆಸುವುದಾದರೆ, ರಾಜ್ಯದ ಗತಿ ಏನು ? ವಿಶ್ವವಿದ್ಯಾನಿಲಯದಲ್ಲಿ ಚೆಂಪೊರರಿ ಉಪಕುಲಪತಿಗಳಾಗಿ ತಮಗೆ ಬೇಕಾದವರಿಗೆ ಕೆಲಸಗಳನ್ನು ಕೊಡಿಸುವುದಕ್ಕಾಗಿ 6 ತಿಂಗಳಿಗೆ ಮೀರದಂತೆ ನೇಮಿಸಿಕೊಳ್ಳಬಹುದು ಎನ್ನುವ ಬಿಲ್ ತಂದಿದ್ದಾರೆ. ಅದು ಯಾವ ಸಂದರ್ಭದಲ್ಲಿ ನೇಮಿಸಕೊಳ್ಳಬಹುದು ಎಂದರೆ by reason of expiry of his term of office or his resignation or death or otherwise ಎಂದು ಇದೆ. ಈ ರೀತಿ ಅವರು ಎಷ್ಟುಸಾರಿ ಯಾದರೂ ಅನಿರ್ದಿಷ್ಟಕಾಲದವರೆಗೆ ನೇಮಿಸಿಕೊಳ್ಳಬಹುದು. ಈ ಕಾಲದಲ್ಲಿ ಉಪಾಧ್ಯಾಯರನ್ನಾಗಲಿ, ಮತ್ತಾರನ್ನಾಗಲಿ ನೇಮಿಸಿಕೊಳ್ಳಬೇಕಾದರೆ ವೈಸ್ ಛಾನ್ಸಲರ್ ಚೆಂಪೊರರಿ ಆಗಿದ್ದರೂ ಕೂಡ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವ ಅಧಿಕಾರವನ್ನು ಕೊಟ್ಟಿದ್ದಾರೆ. ತಾವು ಯಾರನ್ನು ನೇಮಿಸಿಕೊಳ್ಳಬೇಕೋ ಅವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಈ ಬಿಲ್ಲನ್ನು ತಂದಿದ್ದೀರಿ. ಇಂತಹ ಕಾನೂನು ತರುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಸೆನೆಟ್ ಸಭೆಗೆ ಎಕ್ಸ್ ಆಫಿಷಿಯೋ ಸದಸ್ಯರನ್ನು ನಾಮಕರಣ ಮಾಡುವಾಗ ಯಾವಾಗಲೂ ಒಳ್ಳೆಯ ಕ್ರಮವನ್ನು ಅನುಸರಿಸಬೇಕು, ಒಳ್ಳೆಯ ಸಂಪ್ರದಾಯಗಳು ಬೆಳೆಯಬೇಕು. ಅದಲ್ಲದೆ ತಮಗೆ ಬೇಕಾದವರನ್ನು ಉದಾಹರಣೆಗೆ ಡೈರೆಕ್ಟರ್ ಆಫ್ ಹೆಲ್ತ್ ಅಂಡ್ ಫ್ಯಾಮಿಲಿ ಸರ್ವಿಸಸ್ ಅವರನ್ನಾಗಲಿ ಅಥವಾ ಡೈರಕ್ಟರ್ ಆಫ್ ಅಗ್ರಿಕಲ್‌ಚರ್ ಅವರನ್ನಾಗಲಿ ನಾಮಿನೇಟ್ ಮಾಡುವುದಕ್ಕೆ ಈ ರೀತಿಯಾದ ಒಂದು ಅಮೆಂಡ್‌ಮೆಂಟ್ ತರುವುದು ಈ ಪ್ರಜಾಪ್ರಭುತ್ವ ಕಾಲದಲ್ಲಿ ಒಳ್ಳೆಯದಲ್ಲ ಎಂದು ಹೇಳುತ್ತೇನೆ. ಏನಾದರೂ ವೈಸ್ ಛಾನ್ಸಲರ್ ಕೆಲಸ ಖಾಲಿಯಾದರೆ ಇವರಿಗೆ ಯಾರನ್ನು ಬೇಕೋ ಅವರನ್ನು ತೆಗೆದುಕೊಳ್ಳುವುದಕ್ಕೆ, ಈ ಒಂದು ಅಧಿಕಾರವನ್ನು ಪಡೆಯುವುದಕ್ಕೆ ವಿದ್ಯಾಮಂತ್ರಿಗಳು ಈ ತಿದ್ದುಪಡಿ ಮಸೂದೆಯನ್ನು ಸಭೆಯಮುಂದೆ ತಂದಿದ್ದಾರೆ. ತಿದ್ದುಪಡಿಪ್ರಕಾರ ಸೆನೇಟ್‌ನಲ್ಲಿ ಎಕ್ಸ್ ಆಫಿಷಿಯೋ ಮೆಂಬರ್ಸ್ ಆಗಿ The Director of Medical Services, the Director of Agriculture and the Director of Industries and Commerce ಮುಂತಾದವರನ್ನೆಲ್ಲಾ ಸೇರಿಸುವಿರಿ. ಈ ಇಲಾಖೆಗಳಿಗೆ ಸಂಬಂಧಪಟ್ಟ The Secretary to Medical and Health Service, The Secretary to Muncipal Administration ಮತ್ತು ಸಂಬಂಧಪಟ್ಟ ಇತರೇ ಸೆಕ್ರೆಟರಿಯವರನ್ನು ಹಾಕಬೇಕಾಗಿತ್ತು. ಏತಕ್ಕೆಂದರೆ ಡಿಪಾರ್ಟ್‌ಮೆಂಟ್ಸ್ ಡೈರೆಕ್ಟರುಗಳು ಹೆಚ್ಚುಕಾಲ ಪ್ರವಾಸದಲ್ಲಿ ಇರುತ್ತಾರೆ. ಇವರೆಲ್ಲಾ ಎಕ್ಸಿಕ್ಯೂಟೀವ್ ಆಫೀಸರ್ಸ್. ಒಂದೇ ಕಡೆ ಇರುವಂಥ ಜನವಲ್ಲ. ಸರ್ವೇಸಾಮಾನ್ಯವಾಗಿ ಸೆನೆಟ್ ಮೀಟಿಂಗಿಗೆ ಬರುವುದಿಲ್ಲ. ಅವರು ಬರುವ ಸಂದರ್ಭ ಯಾವಾಗ ಎಂದರೆ ಗೌರ್ನಮೆಂಟಿಗೆ ಯಾವಾಗ ಸೆನೆಟ್ ಅಥವ ಸಿಂಡಿಕೇಟ್ ಚುನಾವಣೆಯಲ್ಲಿ ಸೋಲು ಆಗುತ್ತದೆ ಎನ್ನುವ ಭಯ ಇದ್ದರೆ ಆವಾಗ ಅವರಿಗೆ ಲಪ್ಪ ಕೊಟ್ಟು ಕಳುಹಿಸುವುದಕ್ಕೆ ಬರುತ್ತಾರೆ. ಒಂದು ಉದಾಹರಣೆ ಹೇಳುವುದಾದರೆ 1965ರಲ್ಲಿ ಸಿಂಡಿಕೇಟ್ ಎಲೆಕ್ಷನ್‌ಗೆ ಸರ್ಕಾರದ ಕಡೆ ಅಭ್ಯರ್ಥಿಯಾಗಿ ನಿಂತುಕೊಂಡಿದ್ದ ಒಬ್ಬರನ್ನು ಅಯ್ಕೆ ಮಾಡುವುದಕ್ಕೋಸ್ಕರವಾಗಿ ಗುಲ್ಬರ್ಗಾದಿಂದ ಮೈಸೂರಿಗೆ ಒಬ್ಬ D. M. O. ಬಂದು ಭಾಗವಹಿಸಿದ್ದಾರೆ. ಹೀಗಿದೆ ನೀವು

(ಶ್ರೀ ಎನ್. ಎ. ಚನ್ನೇಗೌಡ)

ಮಾಡತಕ್ಕಂಥ ಅವಿವೇಕತನ. ನೀವು ಯಾರನ್ನು ಅಭ್ಯರ್ಥಿಯನ್ನಾಗಿ ತರಬೇಕೋ ಅಂಥವನನ್ನು ಎಲೆಕ್ಷನ್ ಜ್ಯೂಂನಲ್ಲಿ ತಂದು ಕೂರಿಸುತ್ತೀರಿ. ಈ ಸರ್ಕಾರ ತನ್ನ ಅಧಿಕಾರವನ್ನೂ ಮರ್ಜಸ್ಸನ್ನೂ ಬೀರಿ ಏನೇನು ಅಕ್ರಮಗಳನ್ನು ಸಾಧಿಸಬೇಕೋ ಅವೆಲ್ಲವನ್ನೂ ಮಾಡುತ್ತಾರೆ. ಆದುದರಿಂದ ಈ ಮಸೂದೆಯನ್ನು ವಿರೋಧಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಫೋರ್ಟ್-ಬೆಂಗಳೂರು). —ಮಾನ್ಯ ಸಭಾಪತಿಗಳೇ, ಈ ದಿನ ನಮ್ಮ ಮುಂದಿರತಕ್ಕದ್ದು ಕರ್ನಾಟಕ ಯೂನಿವರ್ಸಿಟಿ ಹಾಗೂ ಬೆಂಗಳೂರು ಯೂನಿವರ್ಸಿಟಿ ಮತ್ತು ಮೈಸೂರು ಯೂನಿವರ್ಸಿಟಿಗೆ ಸಂಬಂಧಪಟ್ಟಂತೆ ಕೆಲವು ತಿದ್ದುಪಡಿಗಳ ಬಿಲ್ಲು ನಮ್ಮ ಮುಂದೆ ಇದೆ. ಈ ಬಿಲ್ಲನ್ನಿರತಕ್ಕಂಥ ಅಂಶ ಚೆಂಪರರಿ ವೈಸ್‌ಛಾನ್ಸಲರನ್ನು ನೇಮಕ ಮಾಡತಕ್ಕಂಥದ್ದು, ಮತ್ತು ಡೀನ್ ಮತ್ತು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ನವರನ್ನು ಅಕಾಡಮಿಕ್ ಕೌನ್ಸಿರ್‌ಗೆ ತೆಗೆದುಕೊಳ್ಳುವಂಥಾದ್ದು ಮತ್ತು ಡಿ.ಪಿ.ಐ. ಮತ್ತು ಮೂರು ಯೂನಿವರ್ಸಿಟಿಯವರೂ ನಾಮ್ಯಿನಿ ಆಗಿ ಎಜುಕೇಷನ್ ಪ್ರತಿನಿಧಿಗಳನ್ನು ಚುನಾವಣೆ ಮಾಡತಕ್ಕಂಥಾದ್ದು ಇದಕ್ಕೆ ಸಂಬಂಧಪಟ್ಟಂಥ ಬಿಲ್ಲು ನಮ್ಮ ಮುಂದೆ ತಂದಿದ್ದಾರೆ. ನಾನು ಶ್ರೀಮಾನ್ ನಾಗಪ್ಪನವರು ಹೇಳಿದ ಹಾಗೆ ಸಣ್ಣ ಸಣ್ಣ ತಿದ್ದುಪಡಿಗಳನ್ನು ತರುವುದಕ್ಕೆ ಬದಲಾಗಿ ಈ ಮೂರು ವಿಶ್ವವಿದ್ಯಾನಿಲಯವನ್ನೂ ನಡೆಸಿಕೊಂಡು ಹೋಗುವಹಾಗೆ ಒಂದು ಸಮಗ್ರವಾದಂಥ ಆಕ್ಟನ್ನು ತೆಗೆದುಕೊಂಡು ಬಂದಿದ್ದರೆ ಬಹಳ ಚೆನ್ನಾಗಿತ್ತು ಎಂದು ಹೇಳುತ್ತೇನೆ. ಈಗ ಒಂದು ಕಡೆ ದೇಶ ಛಿದ್ರ ಛಿದ್ರ ಆಗುತ್ತಾ ಇರುವಹಾಗೆ ಈ ಮೂರು ಯೂನಿವರ್ಸಿಟಿಗಳಲ್ಲೂ ಭಿನ್ನತೆಗಳು ಬರುವಹಾಗೆ ಅನೇಕ ಅವಕಾಶಗಳನ್ನು ಈ ಬಿಲ್ಲಿನಲ್ಲಿ ಒದಗಿಸಿಕೊಟ್ಟಿದೆ. ಇಂದಿನ ವಾತಾವರಣದಲ್ಲಿ ಈ ಯೂನಿವರ್ಸಿಟಿಯಲ್ಲಿ ಜಾತೀಯತೆ, ಗುಂಪಿನ ಮನೋಭಾವ ಬೆಳೆಯುವುದಕ್ಕೆ ಈ ಬಿಲ್ಲಿನಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಇದರಿಂದ ರಾಜ್ಯದ ಒಂದು ವಾತಾವರಣಕ್ಕೆ ಮತ್ತು ಒಂದು ಒಗ್ಗಟ್ಟಿಗೆ ಧಕ್ಕೆ ಬರುತ್ತಾ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಇದರ ಬಗ್ಗೆ ಹೇಳುವುದಾದರೆ ಬೆಂಗಳೂರು ಯೂನಿವರ್ಸಿಟಿ ದೇಶದಲ್ಲಿ ಒಂದು ಮಾದರಿಯಾದಂಥ ಯೂನಿವರ್ಸಿಟಿ ಆಗಬೇಕೆಂದೂ ಮತ್ತು ಇದು ಕೇಂದ್ರದ ಯೂನಿವರ್ಸಿಟಿ ಯಾಗುತ್ತದೆ ಎಂದು ಆಸೆಪಟ್ಟುಕೊಂಡಿದ್ದೆವು. ಇದರ ಬಗ್ಗೆ ಅನೇಕರು ಹಾರೈಸಿದ್ದರು. ಆದರೆ ಇಂದಿನ ಪರಿಸ್ಥಿತಿಯಲ್ಲಿ ನೋಡಿದರೆ ಈ ಯೂನಿವರ್ಸಿಟಿಯಲ್ಲಿ ರಾಜಕೀಯ ಗೊಂದಲ ಬೆಳೆಯುತ್ತಾ ಇದೆ. ಇದರಿಂದ ವಿದ್ಯಾರ್ಥಿಗಳ ಮುಂದಿನ ಪೀಳಿಗೆಯನ್ನು ಸರಿಯಾಗಿ ತಯಾರು ಮಾಡುವುದಕ್ಕೆ ಗುಂಪಿನ ಮನೋಭಾವ ಮತ್ತು ಜಾತೀಯತೆ ಮನೋಭಾವದಿಂದ ರಾಜಕೀಯ ತಂದುಹಾಕಿರುವುದು ಬಹಳ ಶೋಚನೀಯವಾದ ವಿಚಾರ. ಈಗ ವೈಸ್‌ಛಾನ್ಸಲರ್ ಮತ್ತು ರಿಜಿಸ್ಟ್ರಾರ್ ಒಂದು ಗುಂಪು, ಸಿಂಡಿಕೇಟ್ ತೆಗೆದುಕೊಂಡರೆ ಅವರದೇ ಒಂದು ಗುಂಪ್, ಈ ಮಧ್ಯೆ ವಿದ್ಯಾರ್ಥಿಗಳು ಪ್ರವೇಶಮಾಡಿ ತಮ್ಮ ವಿದ್ಯಾಭ್ಯಾಸದ ಕಡೆ ಗಮನ ಕೊಡದೆ ಈ ರೀತಿ ಗೊಂದಲಕ್ಕೆ ಅವಕಾಶ ಆಗಿರುವುದು ತುಂಬಾ ಶೋಚನೀಯ. ಈ ಸಿಂಡಿಕೇಟ್ ಅನ್ನುವುದು ಚಿಕ್ಕದಾಗಿರಬೇಕು. ಇದರಲ್ಲಿ ಯಾರು ತಜ್ಞರು ಇದ್ದಾರೋ, ಯಾರು ಶಿಕ್ಷಣ ವಿಚಾರದಲ್ಲಿ ಆರ್ಹತೆ ಪಡೆದಿದ್ದಾರೋ ಅಂಥವರನ್ನು ಇಡಬೇಕೇ ಹೊರತು ಇದನ್ನು ಇಷ್ಟು ಬಂದ ರೀತಿ ಅಸೆಂಬ್ಲಿ ಇದ್ದಹಾಗೆ ಮಾಡಬಾರದು.

Sri M. NAGAPPA.—On a Point of Order, Sir. A member while speaking should not refer the name of the member; he should refer to the name of the constituency. Somehow, such a thing is going on here. One should be more courteous. My friend, Sri Rajaiah Setty, is an expert in this matter, and he has every right to express his opinion. But, the Hon. Member Shri Bhimanna is making an insinuation. Is this correct?

Mr. SPEAKER.—I am sure, the Hon. Member Sri Bhimanna did not mean any discourtesy to Sri Rajaiah Setty. If the members were to refer to other Hon. Members to their constituencies, then there would be no difficulty. Everybody should try to speak in courteous terms.

ಶ್ರೀ ಎಸ್. ಭೀಮಣ್ಣ.—ಸ್ವಾಮಿ, ನಾನು ಈ ಕಾರ್ಖಾನೆಯ ಚೇರ್‌ಮನ್‌ನಾಗಿರುವುದರಿಂದ್ಯ ಆ ಕಾರ್ಖಾನೆಯ ಕೆಲಸಕಾರ್ಯಗಳ ಬಗ್ಗೆ ಈ ಸಭೆಯಲ್ಲಿ ಪೂರ್ಣವಾಗಿ ಹೇಳುವುದು ನನ್ನ ಕರ್ತವ್ಯವಾಗಿದೆ. ಈ ಕಾರ್ಖಾನೆಗಾಗಿ 40 ಲಕ್ಷ ರೂಪಾಯಿಗಳನ್ನು ಷೇರ್ ಕ್ಯಾಪಿಟಲ್‌ನ್ನಾಗಿ ವಸೂಲು ಮಾಡಲಾಗಿದೆ. ಒಟ್ಟು ಷೇರ್ ಕ್ಯಾಪಿಟಲ್ ಕಲೆಕ್ಟ್ ಮಾಡಬೇಕಾದುದು 85 ಲಕ್ಷ ರೂಪಾಯಿಗಳು. ಬೇರೆ ಬೇರೆ ಏಜೆನ್ಸಿಗಳಿಂದ ಸರ್ಕಾರದ ಗ್ಯಾರಂಟಿ ಮೇರೆ ಐ.ಎಫ್.ಸಿ.ಯಿಂದ 90 ಲಕ್ಷ ರೂಪಾಯಿಗಳು, ಎಲ್.ಐ.ಸಿ.ಯಿಂದ 40 ಲಕ್ಷ ರೂಪಾಯಿಗಳು, ಕೋಆಪರೇಟಿವ್ ಅಪೆಕ್ಸ್ ಬ್ಯಾಂಕಿನಿಂದ 30 ಲಕ್ಷ ರೂಪಾಯಿಗಳು, ಮೈಸೂರು ಸರ್ಕಾರದಿಂದ 4½ ಲಕ್ಷ ರೂಪಾಯಿಗಳಷ್ಟು ಸಾಲವನ್ನು ಈ ಕಾರ್ಖಾನೆ ಪಡೆದಿದೆ. ಈ ಕಾರ್ಖಾನೆಯನ್ನು ಸ್ಥಾಪಿಸುವ ಕೆಲಸವನ್ನು 1966ರಲ್ಲಿ ಪೂರ್ಣವಾದ ಬುಕ್‌ವಾಲ್ಟ್ ಎಂಬ ಕಂಟ್ರಾಕ್ಟರಿಗೆ ವಹಿಸಿತ್ತು. ಈ ಕೆಲಸ 1968ನೇ ಡಿಸೆಂಬರ್ ಅಥವಾ ಜನವರಿಯಲ್ಲಿ ಅವರು ಮುಗಿಸಬೇಕಾಗಿತ್ತು. ದುರದೃಷ್ಟವಶಾತ್ ಈ ಕಂಟ್ರಾಕ್ಟರ್ ಕೈಕೆಳಗೆ ಕೆಲಸ ಮಾಡುವ ಒಬ್ಬ ಪಂಜಾಬಿನ ಜಾನ್ ತಾಂಸನ್ ಎಂಬುವರು ಈ ಕಾರ್ಖಾನೆಗೆ ಬೇಕಾದಂಥ 1,440 ಬಾಯಲರ್ ಪೈಪ್‌ಗಳನ್ನು ಸರಬರಾಜು ಮಾಡಲಿಲ್ಲ. ಅವು ಹರಿಯಾಣಾದ ಕಾರ್ಖಾನೆಯ ಇನ್‌ಸ್ಪೆಕ್ಟರ್ ಅವರಿಂದ ಸರಿಯೆಂದು ಸರ್ಟಿಫಿಕೇಟ್ ಆಗಿದ್ದರೂ ನಮ್ಮ ಚೀಫ್ ಇಂಜಿನಿಯರ್ ಅವರ ಅಭಿಪ್ರಾಯದ ಮೇರೆಗೆ ಅವು ಸೂಕ್ತವಾಗಿಲ್ಲವೆಂದು ಕಂಡುಬಂದ ಮೇಲೆ ಅವುಗಳನ್ನು ಬದಲಾಯಿಸಿ ಕೊಡಬೇಕೆಂದು ಆ ಕಂಟ್ರಾಕ್ಟರಿಗೆ ನಾವು ದೂರು ಕೊಟ್ಟ ಮೇಲೆ ಅವನ್ನು ಬದಲಾಯಿಸುವುದಕ್ಕೆ ಷೆಡ್ಯೂಲ್ ಟೈಂಗಿಂತ ನಮಾರು ಎರಡು ತಿಂಗಳಮೇಲೆಯೇ ಕಾಲಾವಕಾಶ ತೆಗೆದುಕೊಂಡರು. ನಂತರ ಆ ಕಾರ್ಖಾನೆ 18-3-1968ರಲ್ಲಿ ಪ್ರಾರಂಭವಾಯಿತು. ಇಂಡಿಯಾ ಸರ್ಕಾರದ ಆಹಾರ ಸಚಿವರಾದ ಶ್ರೀ ಜಗಜ್ಜೀವನರಾಂ ಅವರಿಂದ ಅದರ ಪ್ರಾರಂಭೋತ್ಸವ ಆಯಿತು. ಅದರ ಅಧ್ಯಕ್ಷತೆಯನ್ನು ನಮ್ಮ ಮುಖ್ಯ ಮಂತ್ರಿಗಳಾದ ಮಾನ್ಯ ಶ್ರೀ ವೀರೇಂದ್ರ ಪಾಟೀಲ್ ಅವರು ವಹಿಸಿದ್ದರು. ಈ ಕಾರ್ಖಾನೆ 25-4-1969ರವರೆಗೆ ಕಬ್ಬು ಅರೆದಿದ್ದು 17 ಸಾವಿರ ಮೆಟ್ರಿಕ್ ಟನ್ನುಗಳಷ್ಟು. ಸಕ್ಕರೆ ಬಂದುದು ಒಂಭತ್ತು ಸಾವಿರ ಚೀಲಗಳಷ್ಟು. ಮೊದಲನೆಯ ಸಾರಿ ಕಬ್ಬು ಅರೆದಾಗ ಈ ಕಾರ್ಖಾನೆಗೆ ನಮಾರು 9ರಿಂದ 10 ಲಕ್ಷ ರೂಪಾಯಿಗಳಷ್ಟು ನಷ್ಟವಾಯಿತು. ಅದಕ್ಕೆ ಕಾರಣಗಳೇನೆಂದರೆ, ನಿರ್ಧರಿಸಿದ ವೇಳೆಯಲ್ಲಿ ಕಾರ್ಖಾನೆ ಕೆಲಸಕಾರ್ಯಗಳು ಮುಗಿಸಲು ಕ್ಯಾಗಲಿಲ್ಲ. ಕಂಟ್ರಾಕ್ಟರು ಸರಿಯಾದ ಪೈಪುಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸಿರಲಿಲ್ಲ. ಆಷ್ಟು ಹೊತ್ತಿಗೆ ಕಬ್ಬಿನ ಬೆಳೆಯಾಗುವ ಸೀಜನ್ನು ಮುಗಿದಿತ್ತು. ಆದರೆ ಇದು ಈ ಕಾರ್ಖಾನೆಯ ಆಡಳಿತ ಮಂಡಲಿಯವರ ತಪ್ಪಲ್ಲ. ಏಕೆಂದರೆ ಅವರು ಕಾಲಕ್ಕೆ ಸರಿಯಾಗಿ ತಕ್ಕ ಕ್ರಮಗಳನ್ನು ತೆಗೆದುಕೊಂಡಿದ್ದರು. ಈ ಕಾರ್ಖಾನೆ ಲೆಕ್ಕಕ್ಕೆ ಒಂದು ತಿಂಗಳಮೇಲೆ ಕೆಲಸ ಮಾಡಿದ್ದರೂ ನಿಜವಾಗಿಯೂ ತನ್ನ ಕ್ಯಪಾಸಿಟಿಗೆ ಅನುಸಾರವಾಗಿ 18 ದಿನಗಳು ಮಾತ್ರ ಕೆಲಸ ಮಾಡಿದೆ. ಯಾವುದೇ ಹೊಸ ಕಾರ್ಖಾನೆಯೂ ಕೂಡ ಪ್ರಾರಂಭದಲ್ಲಿ ತನ್ನ ಫುಲ್ ಕ್ಯಪ್ಯಾಸಿಟಿಗೆ ಕೆಲಸ ಮಾಡುವುದಿಲ್ಲ ವೆಂಬುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ 8ರಿಂದ 12 ಗಂಟೆಗಳ ಕಾಲ ಕೆಲಸ ಮಾಡಿ ಅದರಲ್ಲರತಕ್ಕ ತೊಂದರೆಗಳೇನೆಂಬುದನ್ನು ಟ್ರೈಯಲ್ ಆಗಿ ಕಂಡುಹಿಡಿಯಬೇಕಾಗಿದೆ. ಇದೂ ಅಲ್ಲದೆ ಆಗಾಗ್ಗೆ ವಿದ್ಯುಚ್ಛಕ್ತಿ ಕೊರತೆಯಿಂದ ಈ ಕಾರ್ಖಾನೆ ಕೆಲಸ ಮಾಡಲಕ್ಕಾಗಲಿಲ್ಲ. ಆ ಕಾಲದಲ್ಲಿ ಸಂಬಂಧಪಟ್ಟ ಇಲಾಖೆಯವರಿಗೆ ಬೇಕಾದಷ್ಟು ದೂರುಗಳನ್ನು ಕೊಟ್ಟರೂ ಸಫಲ

ವಾಗಲಿಲ್ಲ. ಇದರ ಕೊರತೆ ಪ್ರತಿದಿನವೂ ಕಾಣಿಸುತ್ತಿತ್ತು. ಏನ್ನು ಐ.ಓ.ಸಿ. ಅವರು ಈ ಕಾರ್ಖಾನೆಗೆ ಬೇಕಾದಷ್ಟು ಫರ್ನೇಸ್ ಆಯಿರ್ ಸರಬರಾಜು ಮಾಡುವುದರಲ್ಲಿ ಅಸಮರ್ಥರಾದ್ದರಿಂದ ಆಡಳಿತ ಮಂಡಲಿಯವರು ಸರ್ಕಾರದವರ ಸಹಾಯ ಮತ್ತು ಸಹಕಾರವನ್ನು ಕೋರಿದ ಮೇರೆ ಅದಕ್ಕೆ ಬೇಕಾದಂತ ಫರ್ನೇಸ್ ಆಯಿರ್ ಸರಬರಾಜು ಮಾಡಲ್ಪಟ್ಟಿತು. ಇವಲ್ಲದೆ ಬಿದರ್ ಜಿಲ್ಲೆಯಲ್ಲಿ ಯಾವ ಒಂದು ಮೇಜರ್ ಮತ್ತು ಮೈಡಿಯಂ ಇರಿಗೇಷನ್ ಪ್ರಾಜೆಕ್ಟುಗಳನ್ನೂ ಮಾಡಿಲ್ಲ. ಬೇಸಿಗೆ ಕಾಲದಲ್ಲಿ ಬಾವಿಗಳಲ್ಲಿ ನೀರೇ ಇಲ್ಲ. ಕಾಲಕ್ಕೆ ಸರಿಯಾಗಿ ಮಳೆ ಬಾರದೇ ಇರುವುದರಿಂದ, ಅಲ್ಲಿನ ಬಾವಿಗಳೆಲ್ಲಾ ನೀರಿಲ್ಲದೆ ಒಣಗಿ ಹೋಗಿವೆ. ಆದುದರಿಂದ ಈ ಕಾರ್ಖಾನೆಗೆ ಏಪ್ರಿಲ್ ತಿಂಗಳಲ್ಲಿ ತೆಗೆದುಕೊಂಡು ಬಂದಂಥ ಕಬ್ಬು ಅಷ್ಟು ಚೆನ್ನಾಗಿರುತ್ತಿರಲಿಲ್ಲ. ಆದ್ದರಿಂದ ಸಕ್ಕರೆ ಉತ್ಪಾದನೆ ಬಹಳ ಕಡಿಮೆ ಇತ್ತು. ಈ ಕಾರ್ಖಾನೆ ಸ್ಥಾಪನೆಯಾಗುವುದಕ್ಕೆ ಮುಂಚೆ ಕಬ್ಬಿನ ಬೆಲೆ ಒಂದು ಕ್ವಿಂಟಾಲ್‌ಗೆ 300 ರಿಂದ 400 ರೂಪಾಯಿಗಳವರೆಗೆ ಇತ್ತು. ಆದ್ದರಿಂದ ಈ ಕಾರ್ಖಾನೆಯು ಜನರರ್ ಬಾಡಿ ಮೀಟಿಂಗ್‌ನಲ್ಲಿ ಕಬ್ಬಿನ್ನು ಕೊಳ್ಳುವ ಬೆಲೆ ಒಂದು ಟನ್ನಿಗೆ ಎಕ್ಸ್-ಫೀಲ್ಡ್ ಡೆಲಿವರಿ 100 ರೂಪಾಯಿಗಳೆಂದು ಬೈರಾ ಪ್ರಕಾರ ನಿಗದಿ ಮಾಡಲಾಯಿತು. ಇದರ ಬಗ್ಗೆ ಅನೇಕ ಹಸ್ತ ಪತ್ರಿಕೆಗಳನ್ನೂ ಸಹ ಈ ಕಾರ್ಖಾನೆ ಸ್ಥಾಪನೆ ಯಾಗುವ ಮುಂಚೆಯೇ ಹಂಚಲಾಗಿತ್ತು. ಆಗ ಈ ಕಾರ್ಖಾನೆಯ ಆಡಳಿತ ಮಂಡಲಿಯವರು ಜನರರ್ ಬಾಡಿಯಲ್ಲಿ ತೀರ್ಮಾನವಾದ ಕೊಳ್ಳುವ ಕಬ್ಬಿನ ಬೆಲೆಯನ್ನು ಕೊಡಬೇಕಾಯಿತು. ಅನಂತರ ಪುನಃ ಕಬ್ಬಿನ ಬೆಲೆ ಇಳಿಯಿತು. ಅದರಿಂದ ಈ ಕಾರ್ಖಾನೆಗೆ ಅಷ್ಟಾಗಿ ಲಾಭವಾಗಿಲ್ಲ. ಆಗ ಈ ಕಾರ್ಖಾನೆಯನ್ನು ನಡೆಸಬೇಕೇ, ಬೇಡವೇ ಎಂಬ ಬಗ್ಗೆ ಕಳವಳ ಪಡಬೇಕಾಯಿತು. ಏಕೆಂದರೆ ಸರಿಯಾದ ಸಾರಿಗೆ ವ್ಯವಸ್ಥೆ ಇರಲಿಲ್ಲ. ನಂತರ ನಾನು 1969ನೇ ಇಸವಿಯಲ್ಲಿ ಈ ಕಾರ್ಖಾನೆಯ ಹೊಸ ಮ್ಯಾನೇಜ್ ಮೆಂಟಿನ ಚೇರ್‌ಮನ್ ಆಗಿ ಚಾರ್ಜು ವಹಿಸಿಕೊಂಡೆ. ಆಗ ಯಾವ ಒಂದು ರಾಜಕೀಯ ಪಕ್ಷಗಳವರನ್ನು ನಾಮಿನೇಟ್ ಮಾಡುವ ಪ್ರಶ್ನೆ ಇರಲಿಲ್ಲ, ಆಗ ಯಾರು ಬೇಕಾದರೂ ಅಲ್ಲಿ ಚುನಾವಣೆಗೆ ನಿಲ್ಲಬಹುದಿತ್ತು. ನನ್ನ ಸ್ನೇಹಿತರಲ್ಲಿ ಕೆಲವರು ಕಂಟೆಸ್ಟ್ ಮಾಡಿದ್ದರು.

Sri V. N. PATIL.—For your information, I was never a Candidate for election.

ಶ್ರೀ ಎಸ್. ಭೀಮಣ್ಣ.—ಹೊಸದಾಗಿ ರಚನೆಯಾದಂಥ ಆಡಳಿತ ವರ್ಗದವರು ಹಿಂದೆ ನಡೆಸಿದಂಥ ಮೀಟಿಂಗ್‌ಗಳಲ್ಲಿ ಏನೇನು ನಿರ್ಣಯಗಳನ್ನು ಮಾಡಿದ್ದರೋ ಅದರ ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಯಿತು. ಆದ್ದರಿಂದ ಈ ವಿಷಯದಲ್ಲಿ ಯಾರ ಮೇಲೂ ತಪ್ಪನ್ನು ಹೊರಿಸುವ ಹಾಗಿಲ್ಲ. ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಕೊಡಬೇಕಾಗಿದೆ. ಒಂದು ಸಾರಿ ದಿನವಹಿ ಚೆಕಿಂಗ್ ಮಾಡುವ ಕಾಲದಲ್ಲಿ ವೇಯಿಂಗ್ ಆಫ್ ಶುಗರ್ ಕೇನ್‌ನ ರೆಕ್ಕದಲ್ಲಿ ವ್ಯತ್ಯಾಸ ಕಂಡುಬಂತು. ಆಗ ಅದನ್ನು ಇನ್ನೊಂದು ಸಾರಿ ತೂಕ ಮಾಡಿಸಿ ತಪ್ಪು ಕಂಡು ಬಂದಮೇಲೆ ಸಂಬಂಧಪಟ್ಟ ಗುಮಾಸ್ತರನ್ನು ತಕ್ಷಣ ಕೆಲಸದಿಂದ ವಜಾ ಮಾಡಲಾಯಿತು. ಆದ್ದರಿಂದ ಈಗ ಅಲ್ಲಿ ಸುಳ್ಳು ರೆಕ್ಕಗಳನ್ನು ಇಡುವುದಕ್ಕೆ ಅವಕಾಶವಿಲ್ಲ. ಏಕೆಂದರೆ ಈಗಿನ ಆಡಳಿತ ಮಂಡಲಿಯವರು ಈ ಕಾರ್ಖಾನೆಯ ರೆಕ್ಕಗಳ ಬಗ್ಗೆ ಹೆಚ್ಚಿನ ಮುತುವರ್ಜಿವಹಿಸಿ ಪ್ರತಿದಿವಸವೂ ಚೆಕ್ ಮಾಡುತ್ತಿದ್ದಾರೆ. ಆದ್ದರಿಂದ ಈ ಕಾರ್ಖಾನೆಯಲ್ಲಿ ಅಂತಹ ದುರಾಡಳಿತಕ್ಕೆ ಅವಕಾಶವಿಲ್ಲ. ನನ್ನ ಸ್ನೇಹಿತರು ಕೆಲವರು ಈ ಸಭೆಯಲ್ಲಿ ಈ ಕಾರ್ಖಾನೆಯ ಮೇಲೆ ಮಾಡಿರುವ ಆಪಾದನೆಗಳೆಲ್ಲಾ ನಿಜವಾದ ಸ್ಥಿತಿಯನ್ನು ಅರಿಯದೆ ಹೇಳಿರತಕ್ಕದ್ದು, ಯಾವುದೋ ಒಂದು ದೃಷ್ಟಿಯಿಂದ ಬೇರೆ ಬೇರೆ ಅಭಿಪ್ರಾಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅವರು ಆ ರೀತಿಯಾಗಿ ಹೇಳಿದ್ದಾರೆ. ಯಾವ ರೀತಿಯಿಂದಲೂ ಈ ಕಾರ್ಖಾನೆ ಮತ್ತು ಕಬ್ಬಿನ ಬೆಳೆಗಾರರಿಗೆ ಸಂಬಂಧಪಡದೇ ಇರತಕ್ಕವರು ಮತ್ತು ತಮ್ಮ ಜೀವಿತ ಕಾಲದಲ್ಲಿ ಯಾವ ರೀತಿಯಲ್ಲಿಯೂ ಅವರಿಗೆ ಸಹಾಯ ಮಾಡದೇ ಇರುವವರು, ರಾಜಕೀಯ ಕಾರಣದ ಮೇಲೆ ಚುನಾವಣೆಯಲ್ಲಿ ಡೈರೆಕ್ಟರ್ ಆಗಿ ಜಯಶೀಲರಾಗದೇ ಇರುವುದರಿಂದ, ಈ ರೀತಿ ಅನಾವಶ್ಯಕವಾಗಿ ಈ ಕಾರ್ಖಾನೆಯ ಆಡಳಿತದ ಮೇಲೆ ಆಪಾದನೆಗಳನ್ನು ಮಾಡುತ್ತಿದ್ದಾರೆ. ಕೆಲವರಿಗೆ ಯಾವಾಗಲೂ ಟೀಕೆ ಮಾಡುವ ಒಂದು ಹವ್ಯಾಸ ಇರುತ್ತದೆ. ಉದಾಹರಣೆಗೆ ದುರ್ಯೋಧನನಿಗೆ ಇಡೀ ರಾಜಧಾನಿಯಲ್ಲಿ ಒಬ್ಬ ಒಳ್ಳೆಯ ಮನುಷ್ಯನನ್ನು ಹುಡುಕಲಕ್ಕಾಗಲಿಲ್ಲ, ಹಾಗೆಯೇ ಯುಧಿಷ್ಠಿರನಿಗೆ ಒಬ್ಬ ಕೆಟ್ಟ ಮನುಷ್ಯನನ್ನು ಹುಡುಕಲಕ್ಕೆ ಆಗಲಿಲ್ಲ. ಈ ಕಾರ್ಖಾನೆಯಲ್ಲಿರುವ ಮೆಷನರಿಗಳಲ್ಲಿ 29 ಡಿಫೆಕ್ಟ್ ಇವೆ ಮತ್ತು ಅಲ್ಲಿರುವ ಬಾಯಲರ್‌ಗಳು ಬಹಳ ಚಿಕ್ಕವಾಗಿರುವುದರಿಂದ, ಮುಂದಿನ ಕಬ್ಬನ್ನು ಅರೆಯುವ ಸೀಜನಿನಲ್ಲಿ ಇವೆಲ್ಲವನ್ನೂ ಸರಿಪಡಿಸಲಾಗುವುದೆಂಬ ಭರವಸೆ ನನಗಿದೆ. ಇನ್ನೂ ನಮ್ಮ ಕಂಟ್ರಾಕ್ಟರ್ ಪುಲ್ ಟ್ರೈಯಲ್ ಕೊಟ್ಟಿಲ್ಲ. ಅವರು ಮೆಷನರಿಗಳನ್ನು ಸರಿಮಾಡುತ್ತಿದ್ದಾರೆ ಮತ್ತು ಟ್ರೈಯಲ್ ಕ್ರಷಿಂಗ್‌ನಲ್ಲಿ ಬಂದಂಥ ತಪ್ಪುಗಳನ್ನು

(ಶ್ರೀ ಎಸ್. ಭೀಮಣ್ಣ)

ಕಂಡುಹಿಡಿದು ಮುಂದಿನ ಸೀಸನ್ ಹೊತ್ತಿಗೆ ಸರಿಯಾದ ಹಾಗೂ ತೃಪ್ತಿಯಾದ ಪರ್ ಫಾರ್ಮೆನ್ಸ್ ಕೊಡುತ್ತೇವೆಂದು ಹೇಳಿದ್ದಾರೆ. ಆದಾದಮೇಲೆ ಅವರು ಅವರಿಗೆ ನಲ್ಲಬೆಕಾದ ಬಾಕಿ ಮೊಬಲಗನ್ನು ಕಂಟ್ರಾಕ್ಟ್ ಪ್ರಕಾರ ಪಡೆಯಬೇಕಾಗಿದೆ. ಆದ್ದರಿಂದ ಅವರು ಇನ್ನೂ ಫೈನಲ್ ಟ್ರೈಯಲ್ ಮಾಡಬೇಕಾಗಿರುವುದರಿಂದ, ಕೆಲವು ಮೆಷನರಿಗಳು ಇನ್ನೂ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲವಾದ್ದರಿಂದ, ಈ ಕಾರ್ಖಾನೆಯಲ್ಲಿ ಈಗ ಲಾಭ ಬರುವ ಪ್ರಶ್ನೆಯೇ ಇಲ್ಲ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri ABDUL KHUDDUS ANWAR. – It is stated in clause (c) of the reply that the factory crushed 17,579.345 M. Tonnes and the cane juice extracted was 11,892.799 M tonnes. This is a fabricated figure ; it must be nearly 14,000 M. tonnes and not 11,892.799 M. Tonnes. My hon. Friend may be a director or somebody else. I request the Hon. Minister that the matter must be enquired into and whoever is found guilty must be punished.

ಶ್ರೀ ಎಂ. ನಾಗಪ್ಪ.—43 ದಿವಸಗಳ ವರೆಗೆ ಈ ಫ್ಯಾಕ್ಟರಿ ನಡೆಯುತ್ತಿದೆ ಎಂಬುದಾಗಿ ಮಾನ್ಯ ಮಂತ್ರಿಗಳು ಇದೇ ಸಭೆಯಲ್ಲಿ ಹೇಳಿದ್ದಾರೆ. ಮ್ಯಾನೇಜಿಂಗ್ ಡೈರೆಕ್ಟರ್ ಅವರು ಅಷ್ಟು ದಿವಸಗಳು ಆ ಕಾರ್ಖಾನೆ ನಡೆಯಲಿಲ್ಲವೆಂದು ಹೇಳಿದ್ದಾರೆ. ಅವರ ಸೋರ್ಸ್ ಆಫ್ ಇನ್‌ಫರ್‌ಮೇಷನ್ ಯಾವುದು ? ಅವರು ಕೊಡುವ ಹೇಳಿಕೆ ಅಸತ್ಯವೋ ಅಥವಾ ಇವರು ಕೊಡುವ ಹೇಳಿಕೆಯು ಅಸತ್ಯವೋ ಎಂದು ಹೇಳಬೇಕು.

ಶ್ರೀ ಪಿ. ಎಂ. ನಾಡಗೌಡ (ಅಭಿವೃದ್ಧಿ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಪತಿಗಳೇ, ಮೊದಲು ಮಾನ್ಯ ಶ್ರೀ ನಾಗಪ್ಪನವರು ಸರ್ಕಾರ ಇಷ್ಟು ದೊಡ್ಡದಿದೆ, ಸರ್ಕಾರದ ಖಾತೆಗಳು ಇಷ್ಟು ದೊಡ್ಡದಿವೆ, ಇಷ್ಟು ಮಾಹಿತಿಯನ್ನು ತೆಗೆದುಕೊಳ್ಳುವುದಕ್ಕಾಗಲಲ್ಲವೆಂದು ಹೇಳಿದರು. ಸರ್ಕಾರ ಸಾಧ್ಯವಾದಷ್ಟು ಮಾಹಿತಿಗಳನ್ನು ಪಡೆದಿದೆ ಎಂದು ನಾನು ಹೇಳಬೇಕಾಗಿದೆ. ಇನ್ನು ಇವತ್ತಿನ ಮೂಲಭೂತ ಪ್ರಶ್ನೆಯ ಬಗ್ಗೆ ಮಾನ್ಯ ಶ್ರೀ ವಿ. ಎನ್. ಪಾಟೀಲ್ ಅವರು, ಶ್ರೀ ಕಲ್ಮಂಕರ್ ಅವರು, ಶ್ರೀ ರಾಜಯ್ಯ ಶೆಟ್ಟಿಯವರು ಮತ್ತು ಶ್ರೀ ಅಬ್ದುಲ್ ಖುದೂಸ್ ಅನ್ವರ್ ಅವರು ಹೇಳಿದ ಮಾತುಗಳನ್ನು ಬಹಳ ಆಸಕ್ತಿ ವಹಿಸಿ ಕೇಳಿದೆ. ಅದನ್ನು ಕೇಳಿದ ಮೇಲೆ ನನಗನ್ನಿಸಿತು, ಇದರ ಅಭಿಪ್ರಾಯವೇ ಬೇರೆ ಇದೆ, ಅವರು ಹೇಳಿದ ಮಾತು ಬೇರೆ ಇವೆ ಎಂದು ಮುಖ್ಯವಾಗಿ ಈ ಬಿದರ್ ಸಹಕಾರ ಸಕ್ಕರೆ ಕಾರ್ಖಾನೆ ವ್ಯವಸ್ಥಾಪಕ ಮಂಡಲ ಏನಿದೆಯೋ ಅದರ ಮೇಲೆ ಕೆಲವರಿಗೆ ಸ್ವಲ್ಪ ಕಣ್ಣು ಇದೆಯೆಂದು ನನಗೆ ಅನ್ನಿಸುತ್ತಿದೆ. ಈ ವ್ಯವಸ್ಥಾಪಕ ಮಂಡಲಿಯವರು ಚುನಾಯಿತ ಸದಸ್ಯರಾಗಿದ್ದಾರೆ ಎಂಬುದಾಗಿ ನಾನು ಹೇಳುತ್ತೇನೆ. ಅಲ್ಲಿನ 16 ಮಂದಿ ಸದಸ್ಯರೊಳಗೆ 9 ಡೈರಕ್ಟರ್ಸ್ ಬೆಳಗಾರರು. ಇಬ್ಬರು ಡೈರೆಕ್ಟರುಗಳು ಬೆಳೆಗಾರರಲ್ಲದವರು. ಸರ್ಕಾರದವರು ಮೂವರು ಡೈರೆಕ್ಟರುಗಳನ್ನು ನಾಮಿನೇಟ್ ಮಾಡಿದ್ದಾರೆ. ಉಳಿದವರಲ್ಲಿ, ಐ. ಎಫ್. ಸಿ. ಯಿಂದ ಒಬ್ಬ ಪ್ರತಿನಿಧಿ, ಸೆಂಟ್ರಲ್ ಫೈನಾನ್ಸಿಂಗ್ ಏಜನ್ಸಿಯಿಂದ ಒಬ್ಬರು ಇದ್ದಾರೆ. ಸರ್ಕಾರದವರು ಯಾರು ಜನರ ಬಗ್ಗೆ ವಿಶ್ವಾಸ ಇಟ್ಟುಕೊಂಡು ಕೆಲಸ ಮಾಡಿದ್ದಾರೋ ಅಂತಹವರನ್ನು ಆರಿಸಿದ್ದಾರೆ. ಅಲ್ಲಿ ಕಾಂಗ್ರೆಸ್ಸಿನವರು ಮತ್ತು ನಾನ್ ಕಾಂಗ್ರೆಸ್ಸಿನವರು ಇದ್ದಾರೆ. ಆದ್ದರಿಂದ ಅವರು ಹೇಳುವುದು ಅಷ್ಟು ಸಮಂಜಸವಾದುದಲ್ಲ. ಇಲ್ಲಿ ನಾನು ಒಂದು ಮಾತನ್ನು ಹೇಳಬಹುದು. Sri V. N. Patil is making a mountain out of a mole hill. ಇವತ್ತಿನದಿವಸ ಅಲ್ಲಿ ಕರಪ್ಷನ್ ಅಥವಾ ಏನೋ ದುರಾಡಳಿತ ನಡೆದಿದೆ, ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂಬ ಪ್ರಶ್ನೆ ಇದೆ. ಅಲ್ಲಿ ಅಂಥಾದ್ದು ಏನೂ ಇಲ್ಲವೆಂದು ಹೇಳಬಹುದು. ಮುಖ್ಯವಾಗಿರುವ ಪ್ರಶ್ನೆ ಏನೆಂದರೆ, ಅಲ್ಲಿ ಬರೀ ಜ್ಯೆಯಲ್ ಪ್ರಶ್ನೆ ಇದೆ. ಅಲ್ಲಿ ಜ್ಯೆಯಲ್ ಆಗಿ ಕ್ರಷ್ ಆದುದು. ಈ ಕಾರ್ಖಾನೆ 1968ರ ಡಿಸೆಂಬರ್ ತಿಂಗಳಲ್ಲಿ ಪ್ರಾರಂಭ ಮಾಡಬೇಕೆಂದು ಹೇಳಿ ಅವರು ಪ್ರಾರಂಭ ಮಾಡಿದರು. ಮ್ಯಾನ್ ಪ್ರೊಪೋನೆನ್ಸ್, ಗಾಡ್ ಡಿಸ್‌ಪೋನೆನ್ಸ್ ಎಂದು ಹೇಳುವ ಹಾಗೆ ಮೆಷನರಿಗಳಲ್ಲಿ ಮತ್ತು ಬಾಯಲರ್ಸ್‌ಗಳಲ್ಲಿ ಸ್ವಲ್ಪ ಟ್ರಬಲ್ ಇದ್ದುದರಿಂದ ಆ ಕಾರ್ಖಾನೆ ಡಿಸಂಬರ್‌ನಲ್ಲಿ ಪ್ರಾರಂಭವಾಗಲಿಲ್ಲ. ನಂತರ ಮಾರ್ಚ್ ಮಧ್ಯದಲ್ಲಿ ಪ್ರಾರಂ ಮಾಡಿದರು. ಬಿದರ್ ಜಿಲ್ಲೆ ಬ್ಯಾಕ್‌ವರ್ಡ್ ಇದೆಯೆಂದು ಹೇಳಿದರೆ ಅದನ್ನು ಎಲ್ಲರೂ ಒಪ್ಪುತ್ತಾರೆ. ಮಾನ್ಯ ಶ್ರೀ

ಎ. ಎನ್. ಪಾಟೀರ್ ಅವರೂ ಸಹ ಒಪ್ಪುತ್ತಾರೆ. ಅಲ್ಲಿ ನೀರಾವರಿ ಸೌಕರ್ಯಗಳಿಲ್ಲ. ಅಲ್ಲಿ ಸಣ್ಣ ಪುಟ್ಟ ಭಾವಿಗಳನ್ನು ಮಾಡುವಂಥ ಸೌಕರ್ಯಗಳಿರುವುದರಿಂದ ಅಲ್ಲಿ ಕಬ್ಬು ಬೆಳೆಯುತ್ತಾರೆ. ಅಲ್ಲಿ ಸಣ್ಣ ಟ್ಯಾಂಕುಗಳು ಇವೆಯೋ ಇಲ್ಲವೋ ಗೊತ್ತಿಲ್ಲ. ಇಂತಹ ಹಿಂದುಳಿದ ಪ್ರದೇಶದ ಅಭಿವೃದ್ಧಿಯ ಸಲುವಾಗಿ ರೈತರಿಗೆ 2–3 ಕೋಟಿ ರೂಪಾಯಿಗಳನ್ನು ಸರ್ಕಾರದವರು ಸಹಾಯ ಮಾಡುವುದಕ್ಕೆ ಅಷ್ಯೂರೆನ್ಸ್ ಕೊಟ್ಟಿದ್ದಾರೆ. ಸಬ್ಸಿಡಿ ಏನೂ ಕೊಟ್ಟಿಲ್ಲ. ಫೈನಾನ್ಸ್ ಏಜನ್ಸಿಯವರೂ ಸಹ ಅವರಿಗೆ ಸಹಾಯ ಮಾಡಿದ್ದಾರೆ. ಆದ್ದರಿಂದ ಕಾರ್ಖಾನೆಯವರು 2½ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಈ ಸಹಕಾರೀ ಸಕ್ಕರೆ ಕಾರ್ಖಾನೆಯನ್ನು ಚೆನ್ನಾಗಿ ಮಾಡಿದ್ದಾರೆ. ಆದರೆ ಡಿಸೆಂಬರ್‌ನಲ್ಲಿ ಪ್ರಾರಂಭ ಆಗುವಂಥ ಕಾರ್ಖಾನೆ ಮಾರ್ಚ್ ಮಧ್ಯೆ ಆದರೆ ಮಾರ್ಚ್‌ನಲ್ಲಿ ಮಳೆ ಬರುವುದಿಲ್ಲ. ನೀರಾವರಿ ಸೌಕರ್ಯ ಇಲ್ಲದೇ ಇರುವಾಗ ನಿಜವಾಗಿ ಕಬ್ಬು ಒಣಗಿಕೋಗಿ ಸುಮಾರು 9–10 ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ. ಮಾನ್ಯ ಶ್ರೀ ರಾಜಯ್ಯ ಶೆಟ್ಟಿಯವರು ತಪ್ಪಿರಲಿ ಇದ್ದಾರೆಂದು ನಾನು ಹೇಳುತ್ತೇನೆ. ಈಗ ಸಕ್ಕರೆಯಿಂದ ರಿಟರ್ನ್ ಸೇಕಡ 5 ರಿಂದ 12 ಇದ್ದರೆ ಎಷ್ಟು ಲುಕ್ಸಾನು ಆಗುತ್ತದೆ ಎಂಬುದನ್ನು ಲೆಕ್ಕಹಾಕಬೇಕು. ಇದು ಮೂಲಭೂತವಾದ ಮಾತು. ಇದಲ್ಲದೆ ಕೇಂದ್ರ ಸರ್ಕಾರದವರು ಕಬ್ಬಿನ ಕಿಮ್ಮತ್ತನ್ನು ಟನ್ ಒಂದಕ್ಕೆ 70–73 ರೂಪಾಯಿಗಳಿಗೆ ನಿಗದಿ ಮಾಡಿದ್ದರೂ ಕೂಡ, ಈ ಸಕ್ಕರೆ ಕಾರ್ಖಾನೆಯವರು ಟನ್ 1ಕ್ಕೆ 100 ರೂಪಾಯಿಗಳಂತೆ ಕೊಟ್ಟಿದ್ದಾರೆ. ಇದರಲ್ಲಿಯೂ ಲುಕ್ಸಾನು ಬರುತ್ತದೆ. ಅಂದಮೇಲೆ ರೈತರಿಗೆ ಕಾಖಾಯವರು ನೇರ್ ಹೆಚ್ಚಿಗೆ ಕೊಟ್ಟಿದ್ದಾರೆಂದು ಒಂದು ಪಾತಾವರಣವನ್ನು ನಿರ್ಮಾಣಮಾಡುವ ದೆಸೆಯಿಂದ ಪ್ರೊಗ್ರೆಸ್ಸಿವ್ ಆಗಿ ಚೆನ್ನಾಗಿ ಅಲ್ಲಿ ಕೆಲಸ ಮಾಡುವ ಉದ್ದೇಶದಿಂದ ಅವನ್ನು ಒಂದು ಆಕರ್ಷಣೀಯ ಕೇಂದ್ರವನ್ನಾಗಿ ಮಾಡಬೇಕೆಂದು 100 ರೂಪಾಯಿಗಳಂತೆ ಕಿಮ್ಮತ್ತು ಕೊಟ್ಟಿದ್ದಾರೆ. ಮೂರನೆಯ ದಾಗಿ ಇವತ್ತಿನದಿವಸ ಅಲ್ಲಿ ಬಹಳವಾಗಿ ಅಡಚಣೆಗಳು ಬಂದಿವೆ. ಎರೆಕ್ಕೈಸಿಟಿ ಒಂದೇ ಅಲ್ಲ. ಇನ್ನೂ ಐದಾರು ಅಡಚಣೆಗಳು ಇವೆ. Inferior quality of cane supplied, non-supply of furnace oil by the I.O.C. and machinery trouble faced during the crushing period. ಇವೆಲ್ಲಾ ಕಾರಣಗಳ ದೆಸೆಯಿಂದ, ಅಲ್ಲಿ 9 ಲಕ್ಷ ರೂಪಾಯಿಗಳಷ್ಟು ಲುಕ್ಸಾನು ಆಗಿದೆ ಎಂದು ಹೇಳಿದ್ದಾರೆ. ಈ ಕಾರಣಗಳಿಂದ ಇವತ್ತು ಲುಕ್ಸಾನು ಆಗಿದೆಯೇ ಹೊರತು ಬೋರ್ಡ್ ಆಫ್ ಡೈರೆಕ್ಟರ್ಸ್ ಮೇರೆ ಏನೂ ಸಂಶಯವಿಲ್ಲವೆಂದು ನಾನು ಮಾನ್ಯ ಸದಸ್ಯರಿಗೆ ಕಳಕಳಿಯಿಂದ ಹೇಳುತ್ತೇನೆ. ಹಿಂದುಳಿದ ಪ್ರದೇಶಗಳನ್ನು ಪ್ರಗತಿಪರವಾಗಿ ಮಾಡಿಕೊಳ್ಳಬೇಕಾದರೆ ಈ ಸಹಕಾರಿ ಸಕ್ಕರೆ ಕಾರ್ಖಾನೆ ಏನಿದೆಯೋ ಅದು ಒಂದು ಪ್ರಧಾನ ಪಾತ್ರವನ್ನು ವಹಿಸುವ ಅವಶ್ಯಕತೆ ಇದೆ. ಅಲ್ಲಿ ನಡೆಯುವ ಕೆಲಸಕಾರ್ಯಗಳು ಸಫಲವಾಗಬೇಕು. ಆದ್ದರಿಂದ ನಾನು ಎಲ್ಲಾ ಮಾನ್ಯ ಸದಸ್ಯರಿಗೂ ವಿಶ್ವಾಸ ಪೂರ್ವಕವಾಗಿ ಏನು ಹೇಳುತ್ತಿದ್ದೇನೆಂದರೆ, ಅಲ್ಲಿನ ಆಡಳಿತ ವ್ಯವಹಾರದ ಕೆಲಸಕಾರ್ಯಗಳಲ್ಲಿ ಏನಾದರೂ ತಪ್ಪುಗಳಿದ್ದರೆ ಕೂಡಲೇ ಅಲ್ಲಿನ ಮ್ಯಾನೇಜ್ ಮೆಂಟಿನವರು ಆಗಿಂದಾಗ್ಗೆ ಅಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಈಗಾಗಲೇ ಇಬ್ಬರು ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿದ್ದಾರೆ. Government is completely convinced of the integrity and honesty of the management. ಆದರಲ್ಲಿ ಏನೂ ಸಂದೇಹವಿಲ್ಲವೆಂದು ಮಾನ್ಯ ಸದಸ್ಯರಿಗೆ ಕಳಕಳಿಯಿಂದ ಹೇಳುತ್ತೇನೆ. ಯಾವುದಾದರೂ ಒಂದು ಮಾತನ್ನು ಬಹಳವಾಗಿ ವಿಶೇಷ ಮಾಡಿ ಆ ಒಂದು ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಇಂಥಾದ್ದು ನಡೆದಿದೆ, ಅಂಥಾದ್ದು ನಡೆದಿದೆ ಅಂದರೆ, ಆಗ ಎಲ್ಲರಿಗೂ ಒಂದು ರೀತಿಯ ತಪ್ಪು ಕಲ್ಪನೆ ಬರುತ್ತದೆ. ಇವತ್ತಿನ ದಿವಸ ಮಾನ್ಯ ಸದಸ್ಯರು ಈ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಚೆನ್ನಾಗಿ ನಡೆಸುವುದಕ್ಕೆ ಮತ್ತಷ್ಟು ಸೂಚನೆಗಳನ್ನು ಕೊಟ್ಟರುವುದನ್ನು ನಾನು ಒಪ್ಪಿದ್ದೇನೆ. ಒಟ್ಟಿನಲ್ಲಿ ಈ ಸಹಕಾರಿ ಸಕ್ಕರೆ ಕಾರ್ಖಾನೆ ಕಾರ್ಯಗಳು ಚೆನ್ನಾಗಿ ನಡೆಯುತ್ತಿವೆ. ಇನ್ನು ಪಾಂಡವಪುರ ಮತ್ತು ಸಂಕೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಗಳೆಲ್ಲ ಒಂದು ಟನ್ನಿಗೆ 200 ರೂಪಾಯಿಗಳಂತೆ ಕೊಟ್ಟಿದ್ದಾರೆ. ಅದನ್ನು ಕೇಂದ್ರಸರ್ಕಾರದವರೂ ಕೂಡ ಪ್ರಶಂಸೆ ಮಾಡಿದ್ದಾರೆ. ಮೈಸೂರು ರಾಜ್ಯದಲ್ಲಿ ಇತರ ಕ್ಷೇತ್ರಗಳಲ್ಲಿರುವ ಸಹಕಾರ ಸಕ್ಕರೆ ಕಾರ್ಖಾನೆಗಳಲ್ಲಿ ಇನ್ನು ಮುಂದೆ ಯಾವ ರೀತಿ ಅನ್ಯಾಯಗಳು ಆಗಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಎನ್. ಪಾಟೀರ್.—ಸ್ವಾಮಿ, ನಾನು ಒಂದು ಕ್ಲಾರಿಫಿಕೇಷನ್ ಕೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮಂತ್ರಿಗಳು ನನ್ನ ಬಗ್ಗೆ ಮಾತನಾಡುತ್ತಾ ನಾನೇನೋ ಈ ಸಕ್ಕರೆ ಕಾರ್ಖಾನೆಯ ಮೇರೆ ಕಣ್ಣಿಟ್ಟುಕೊಂಡು ಅದರ ಬಗ್ಗೆ ಏನೇನೋ ಮಾತನಾಡುತ್ತಿದ್ದೇನೆ ಎಂದು ಹೇಳಿದರು. ನಾನು ನಿಜವಾಗಿಯೂ ಈ ಕಾರ್ಖಾನೆಯ ಮೇರೆ ಯಾವರೀತಿಯಿಂದಲೂ ಕಣ್ಣಿಟ್ಟಿಲ್ಲ. ಆ ಸಹಕಾರಿ ಸಂಘದ ಸಕ್ಕರೆ ಕಾರ್ಖಾನೆಯ ಡೈರೆಕ್ಟರ್‌ಷಿಪ್ಪಿಗಾಗಿ ನಾನು ಚುನಾವಣೆಗೂ ನಿಂತಿಲ್ಲ.

Sri P. M. NADGOUDA.—I have never made that statement.

Mr. DEPUTY SPEAKER.—The House will now adjourn and meet tomorrow at 1 P.M.

The House adjourned at Three Minutes past Eight of the Clock to meet again at One of the Clock on 5th September 1969.

V-, 31" N 69
N 69 - 21 - 1 - 4
(B) 4871

WD 13533—GPB—600 - 10-12-1969

CONTENTS

		Pages
1	(i) Starred Questions and Answers ...	263—290
	(ii) Short Notice Question and Answer ...	291—293
	(iii) Questions for Answers on the day (but not taken up)	293—294
2	Calling Attention Notice to a matter of Urgent Public Importance :	
	(i) *re* : the visit by Chief Minister to Delhi to discuss the Fifth Finance Commission Award to State ...	294—298
	(ii) *re* : Bus Accident near Arehally on 28-8-1969 ...	298—299
3	(i) Introduction of Lottery in Mysore State ...	300
	(ii) Award by the Fifth Finance Commission ...	300—301
	(iii) Demise of Dr. Ho Chi Minh, President of North Vietnam. ...	301
4	(i) Message from the Chairman, Legislative Council ...	302
	(ii) Papers laid on the Table—	
	(a) Mysore Shops and Commercial Establishment (Amendment) Bill, 1969 as passed by the Legislative Council ...	302
	(b) Mysore Civil Courts (Amendment) Bill, 1969 as passed by the Legislative Council ...	302
5	Question of Privilege *re* : Contradictory Statements made by Deputy Minister for Public Works during Question Hour ...	302—307
6	Bangalore, Karnataka and Mysore Universities (Amendment) Bill, 1969—(Passed) ...	307—323
7	Commencing State Lotteries in the State ...	323—324
8	Private Member's Bills—	
	(a) Mysore Land Revenue (Second) Amendment Bill, 1969—(Introduced) ...	324
	(b) Mysore Public Men Enquiries Bill, 1969—(Motion to consider—Debate not concluded) ...	324—345
9	Statement by the Deputy Minister for Public Works *re* : a Question of Privilege raised against him ...	345
10	Half-an-hour discussion arising out of replies to Question No. 23 *re* : allotment of lands from Gairan (Grazing land) in Angol Village ...	346—349
11	Postponement of Elections of Members to several Committees—(Announced) ...	349

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, 5th September 1969.

The House met in the Assembly Chamber, Vidhana Soudha, Bangalore, at one of the Clock.

MR. DEPUTY SPEAKER (SRI D. MANJUNATH) in the Chair.

STARRED QUESTIONS

(to which oral answers were given)

Warehouses constructed by the T.A.P.M. Society, Ranibennur

10. Sri N. L. BELLAD (Ranibennur).—

Will the Minister for Development be pleased to state :—

(*a*) the number of warehouses constructed so far by the Taluk Agricultural Produce Marketing Society, Ranibennur ;

(*b*) the amount of expenditure incurred towards the laying of the foundation stone and the inauguration ceremony of each of the Warehouses ;

(*c*) whether certificate has been received from Public Works Department as to the completion of the building work of warehouses as per the plan and estimates ?

Sri P. M. NADGOUDA (Minister for Development).—

(*a*) Four Warehouses have been constructed.

(SRI P. M. NADGOUDA)

(*b*) The Expenditure in respect of the laying of foundation stone and the inauguration ceremony is as follows :—

	Expenditure in respect of laying the foundation stone	Expenditure in respect of inauguration ceremony
	Rs. p.	Rs. p.
(a) The first medium sized warehouse.	566-59	314-15
(b) The Second medium sized warehous.	348-68	650-15
(c) The third medium sized warehouse.	408-61	528-24
(d) Processing warehouse.	527-51	628-37

(*c*) Yes.

ಶ್ರೀ ಎನ್. ಎಲ್. ಬೆಲ್ಲದ್.—ಸ್ವಾಮಿ, ಲೋಕೋಪಯೋಗಿ ಇಲಾಖೆಯ ಪ್ಲಾನು ಮತ್ತು ಎಸ್ಟಿಮೇಟ್ ಪ್ರಕಾರ ರಾಣಿಬೆನ್ನೂರು ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘದವರು ಉಗ್ರಾಣಗಳನ್ನು ಕಟ್ಟಿ ದ್ದು ಮುಗಿದಿದೆ ಎಂದು ಹೇಳಿದ್ದೀರಿ. ಮತ್ತು ಈ ಬಗ್ಗೆ ಸರ್ಟಿಫಿಕೇಟ್ ಪಡೆಯಲಾಗಿದೆ ಎಂದು ಹೇಳಿದ್ದೀರಿ. ಆ ಸರ್ಟಿಫಿಕೇಟುಗಳ ಪ್ರತಿ ಸದಸ್ಯರಿಗೆ ಬೇಕಾಗಿರುವುದರಿಂದ ಅದನ್ನು ದಯವಿಟ್ಟು ಒದಗಿಸುತ್ತೀರಾ ?

† ಶ್ರೀ ಬಿ. ಎಲ್. ಗೌಡ.—ಈಗ ಅದು ನನ್ನಲ್ಲಿ ಇಲ್ಲ, ಬೇಕಾದರೆ ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

ಶ್ರೀ ಎನ್. ಎಲ್. ಬೆಲ್ಲದ್.—ಆ ಸಹಕಾರ ಸಂಘದವರು ಆ ಕಟ್ಟಡಕ್ಕೆ ಎಸ್ಟಿಮೇಟಿಗಿಂತ ಹೆಚ್ಚು ಹಣವನ್ನು ಖರ್ಚು ಮಾಡಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎಲ್. ಗೌಡ.—ಇದರಲ್ಲಿ ಮೊದಲನೆಯ ಗೋಡೌನಿಗೆ 296-60 ರೂಪಾಯಿಗಳು ಖರ್ಚಾಗಿದೆ. ಎರಡನೆಯದಕ್ಕೆ ರೂ. 295-60 ಪೈಸೆಗಳು ಖರ್ಚಾಗಿದೆ. ಮೂರನೆಯದಕ್ಕೆ 1108-00 ರೂಪಾಯಿಗಳು ಖರ್ಚಾಗಿದೆ. ನಾಲ್ಕನೆಯದಕ್ಕೆ 12,093 ರೂಪಾಯಿಗಳು ಖರ್ಚಾಗಿದೆ, ಒಟ್ಟು ಇಷ್ಟು ಹಣ ಹೆಚ್ಚಿಗೆ ಖರ್ಚಾಗಿದೆ. ಅದಕ್ಕೆ ಅವರು ಇಲಾಖೆಯ ಮಂಜೂರಾತಿಯನ್ನು ತೆಗೆದು ಕೊಂಡಿಲ್ಲ. ಆದ್ದರಿಂದ ಆ ಬಗ್ಗೆ ಏನು ಕ್ರಮವನ್ನು ತಗೆದುಕೊಳ್ಳಬೇಕೆಂದು ನಾವು ತನಿಖೆ ಮಾಡುತ್ತಿದ್ದೇವೆ.

Sri SIDDAIAH KASHIMATH.—May I know whether the Auditor has made any remark on it ?

Sri B. L. GOWDA.—He has observed that there is excess payment over and above the estimate and the irregularity may be set right.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಅಗ್ರಿಕರ್‌ಚರಲ್ ಮಾರ್ಕೆಟಿಂಗ್ ಸೊಸೈಟಿಯ ಅಧ್ಯಕ್ಷರು ನಾನಾ ಬಾಬಿನಲ್ಲಿ ಹಣವನ್ನು ದುರುಪಯೋಗ ಮಾಡುತ್ತಿದ್ದರೂ ಸಹ ಈ ಇಲಾಖೆಗೆ

† Indicates that the remarks or speeches have not been revised by the member concerned.

ಸಂಬಂಧಪಟ್ಟ ಮಂತ್ರಿಗಳು ಮತ್ತು ರಿಜಿಸ್ಟ್ರಾರ್ ಅವರು ಗೋ ಸ್ಲೋ ಪಾಲಿಸಿ ಹಾಕಿಕೊಂಡು ಅವರನ್ನು ರಕ್ಷಣೆ ಮಾಡಿಕೊಂಡು ಬರುತ್ತಾ ಇರುವುದು ನಿಜವಲ್ಲವೇ ?

ಶ್ರೀ ಬಿ. ಎರ್. ಗೌಡ.—ಅದು ನಿಜವಲ್ಲ. ಅಕ್ರಮಗಳು ಕಂಡುಬಂದರೆ ಅಂಥಾ ಸೊಸೈಟಿಗಳನ್ನು ಸೂಪರ್‌ಸೀಡ್‌ಮಾಡಿ ಸರ್ಕಾರದ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡುತ್ತೇವೆ. ಯಾರಾದರೂ ತಪ್ಪುಮಾಡಿದ್ದರೆ ಅದನ್ನು ತನಿಖೆ ಮಾಡುತ್ತೇವೆ. ಅಕ್ರಮಗಳು ನಡೆದಾಗ ಮಂತ್ರಿಗಳು ಯಾರಿಗೂ ರಕ್ಷಣೆ ಕೊಡುವ ಪದ್ಧತಿಯನ್ನು ಇಟ್ಟುಕೊಂಡಿಲ್ಲ.

ಶ್ರೀ ಎಸ್. ಎಂ. ತಮ್ಮಯ್ಯ.—ಸ್ವಾಮಿ, ಈಗ ಲೋಕಲ್‌ಬೋರ್ಡುಗಳಲ್ಲಿ ಇಪ್ಪತ್ತುಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟ ಕಟ್ಟಡವನ್ನು ಕಟ್ಟಬೇಕಾಗಿದ್ದರೆ ಅದನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಗೆ ವಹಿಸಬೇಕೆಂದು ಇದೆ. ಈ ಪದ್ಧತಿ ಸಹಕಾರ ಇಲಾಖೆಯಲ್ಲಿಯೂ ಇದೆಯೇ ?

ಶ್ರೀ ಬಿ. ಎರ್. ಗೌಡ.—ನಮ್ಮ ಸಹಕಾರ ಇಲಾಖೆಯಲ್ಲಿ ಅಸಿಸ್ಟೆಂಟ್ ಇಂಜನಿಯರು ಇದ್ದಾರೆ. 50 ಸಾವಿರ ರೂಪಾಯಿಗಳ ಒಳಗಡೆ ಖರ್ಚಾಗತಕ್ಕಂಥ ಕಟ್ಟಡಗಳನ್ನು ಅವರೇ ಕಟ್ಟಿಸುತ್ತಾರೆ. 50 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚಾಗತಕ್ಕಂಥ ಕಟ್ಟಡಗಳನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಯವರಿಗೆ ವಹಿಸಿ ಅದನ್ನು ಮಾಡಲಾಗುತ್ತಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಈ ಸೊಸೈಟಿಯ ಬಗ್ಗೆ ನಾಲ್ಕಾರು ಪ್ರಶ್ನೆಗಳು ಬಂದು ಅದರಲ್ಲಿ ಹಣ ಲೂಪವಾಗಿದೆ ಎಂದು ಅಧ್ಯಕ್ಷರ ಮೇಲೆ ದೂರು ಬಂದಿದ್ದರೂ ಕೂಡ ತಾವು ಆ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಿದ್ದೀರಿ, ಎಂದು ಹೇಳುತ್ತಿದ್ದೀರಿ, ಆದ್ದರಿಂದ ಅವರ ಮೇಲೆ ಕ್ರಿಮಿನಲ್ ಆಕ್ಷನ್ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಈ ರಾಣಿಬೆನ್ನೂರು ಸೊಸೈಟಿಯ ಬಗ್ಗೆ ಒಂದು ಪ್ರಶ್ನೆ ಬಂದಿರುವುದು ನಿಜ. ಅದರಲ್ಲಿ ಇರ್ರೆಗ್ಯುಲ್ಯಾರಿಟೀಸ್ ಇರುವುದು ನಿಜ. ಆದಕ್ಕಾಗಿ ಅದನ್ನು ಸೂಪರ್‌ಸೀಡ್ ಮಾಡಿದ್ದೇವೆ. ಈಗ ಅಲ್ಲಿ ನಡೆದಿರತಕ್ಕ ಅಕ್ರಮಗಳ ಬಗ್ಗೆ ತನಿಖೆಮಾಡಿ ಅದರಲ್ಲಿ ಏನಾದರೂ ವೈಯಕ್ತಿಕವಾದ ಜವಾಬ್ದಾರಿಗಳು ಕಂಡುಬಂದರೆ ಅಂಥವರಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ, ಅವರಮೇಲೆ ಕ್ರಿಮಿನಲ್ ಆಗಲೀ, ಸಿವಿಲ್ ಆಗಲೀ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾವು ಹಿಂದೆ ಮುಂದೆ ನೋಡುವುದಿಲ್ಲ.

ಶ್ರೀ ಬೋಳಾ ರಘುರಾಮಶೆಟ್ಟಿ.—ಈ ನಾಲ್ಕು ಉಗ್ರಾಣಗಳನ್ನು ಪ್ರಾರಂಭೋತ್ಸವ ಮಾಡಲು ಸುಮಾರು ನಾಲ್ಕು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದರ ಔಚಿತ್ಯ ಏನು ? ಮಂತ್ರಿಗಳನ್ನು ಏನಾದರು ಕರೆದಿದ್ದರೇ ಹೇಗೆ ?

ಶ್ರೀ ಬಿ. ಎಲ್. ಗೌಡ.—ಯಾರನ್ನು ಕರೆದಿದ್ದರು ಎಂಬ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಈ ಒಂದು ಸಂಘದಲ್ಲಿ ಅವ್ಯವಹಾರ ನಡೆಯುತ್ತಿದೆ ಎಂದು ಸರ್ಕಾರದ ನಜರಿಗೆ ಕಳೆದ ಮೂರು ವರ್ಷಗಳಿಂದ ತರುತ್ತಿದ್ದರೂ ಸರ್ಕಾರದವರು ಗಮನಕ್ಕೆ ತೆಗೆದುಕೊಂಡಿಲ್ಲ. ಈ ಉಗ್ರಾಣಗಳನ್ನು ಪ್ರಾರಂಭೋತ್ಸವ ಮಾಡಲು ಸಹಕಾರ ಮಂತ್ರಿಗಳನ್ನು ಮತ್ತು ರಿಜಿಸ್ಟ್ರಾರ್ ಅವರನ್ನು ಕರೆಸಿದ್ದರು. ಸುಮಾರು ನಾಲ್ಕು ಸಾವಿರ ರೂಪಾಯಿಗಳವರೆಗೆ ಇದಕ್ಕಾಗಿ ಖರ್ಚು ಮಾಡಿದ್ದಾರೆ. ಇಷ್ಟೊಂದು ಅನ್ಯಾಯಗಳು ಈ ಸಂಘದಲ್ಲಿ ನಡೆದಿದ್ದರೂ ಕೂಡ ತನಿಖೆಯನ್ನು ಜಾಗ್ರತೆ ಮಾಡಿಸದಿರುವುದಕ್ಕೆ ಕಾರಣವೇನು ? ಚೆನ್ನಾಗಿ ನಡೆಯುತ್ತಿರುವ ಸಂಘಗಳ ವಿಚಾರದಲ್ಲಿ ಬೇಕಾದರೆ ಸೆಕ್ಷನ್ 54ರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರಿ. ಅವ್ಯವಹಾರ ನಡೆಯುತ್ತಿರುವ ಸಂಘಗಳ ವಿಚಾರದಲ್ಲಿ ತನಿಖೆ ಮಾಡದೆ ಸುಮ್ಮನೆ ಇರಲಕ್ಕೆ ಯಾರ ಪ್ರಚೋದನೆ ಇದೆ ಎಂದು ಹೇಳುತ್ತೀರಾ ?

ಶ್ರೀ ಬಿ. ಎರ್. ಗೌಡ.—ನಾನು ಆಗಲೇ ಹೇಳಿದ್ದೇನೆ, ಸರ್ಕಾರವೇ ಆಗಲೀ ಮಂತ್ರಿಗಳೇ ಆಗಲಿ ಅವ್ಯವಹಾರ ನಡೆಯುತ್ತಿರುವ ಯಾವ ಸಹಕಾರ ಸಂಘಗಳಿಗೂ ಕೂಡ ರಕ್ಷಣೆ ಕೊಡುವುದಿಲ್ಲ ವೆಂದು.

ಶ್ರೀ ಎಂ. ನಾಗಪ್ಪ.—ಅಡಿಗಲ್ಲು ಸಮಾರಂಭಕ್ಕೆ ಆಗಲೀ, ಪ್ರಾರಂಭೋತ್ಸವದ ಸಮಾರಂಭಕ್ಕೇ ಆಗಲಿ ಹಣ ಖರ್ಚು ಮಾಡುವುದು ಸರಿಯಲ್ಲ ಎಂಬ ಬಗ್ಗೆ ಒಂದು ನಿಯಮವನ್ನು ಮಾಡುತ್ತೀರಾ ? ಏಕೆಂದರೆ ಕೆಲವು ಕಡೆಗಳಲ್ಲಿ 10 ಸಾವಿರ ರೂಪಾಯಿಗಳವರೆಗೂ ಸಹ ಖರ್ಚು ಮಾಡುತ್ತಿದ್ದಾರೆ. ಒಂದು ಪಕ್ಷ ಖರ್ಚು ಮಾಡಬೇಕಾದರೆ ಸದಸ್ಯರುಗಳೇ ಕಾಂಟ್ರಿಬ್ಯೂಷನ್ ಹಾಕಿಕೊಂಡು ಮಾಡುವಂತೆ ಒಂದು ನಿಯಮವನ್ನು ಜಾರಿಗೆ ತರುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಸಹಕಾರ ಸಂಘಗಳು ಬಹುತೇಕವಾಗಿ ಸ್ವಯಂ ಅಧಿಕಾರವುಳ್ಳ ಸಂಸ್ಥೆಗಳು. ನಾವೇನಾದರೂ ನಿಯಮ ಹಾಕಿದರೆ ನಮ್ಮ ಅಡಳಿತದಲ್ಲಿ ಸರ್ಕಾರದವರು ಹಸ್ತಕ್ಷೇಪ ಮಾಡುತ್ತಾರೆಂದು ಹೇಳುತ್ತಾರೆ. ಮಾನ್ಯ ನಾಗಪ್ಪನವರು ಹೇಳಿದ ವಿಚಾರವನ್ನು ನಾನು ಸಹ ಒಪ್ಪುತ್ತೇನೆ. ಆ ರೀತಿ ಖರ್ಚು ಮಾಡುವುದು ಸರಿಯಲ್ಲ. ಆದರೆ ಅದು ನೀತಿಯ ಪ್ರಶ್ನೆಯಾಗುತ್ತದೆ.

ಶ್ರೀ ಎನ್. ಎರ್. ಬೆಲ್ಲದ್.—ಸಹಕಾರ ಸಂಘಗಳು ಸ್ವಯಂ ಅಧಿಕಾರವುಳ್ಳ ಸಂಸ್ಥೆಗಳು ಎಂದು ಹೇಳಿದಿರಿ. ಈ ಸಹಕಾರ ಮಾರಾಟ ಸಂಘದ ಷೇರು ಬಂಡವಾಳ ಕೇವಲ 30 ಸಾವಿರ ರೂಪಾಯಿಗಳು ಆದರೂ ಕೂಡ ಸರ್ಕಾರದವರು 89 ಸಾವಿರ ರೂಪಾಯಿಗಳ ನಷ್ಟವಿ ಕೊಟ್ಟಿದ್ದಾರೆ. ಮತ್ತು ಏಳು ಲಕ್ಷದ 10 ಸಾವಿರ ರೂಪಾಯಿಗಳವರೆಗೆ ಷೇರು ರೂಪದಲ್ಲಿ ಹಣವನ್ನು ಆ ಸಂಘದಲ್ಲಿ ತೊಡಗಿಸಿದ್ದಾರೆ. ಇಷ್ಟೊಂದು ಹಣವನ್ನು ಅಲ್ಲಿ ಸರ್ಕಾರದವರು ತೊಡಗಿಸಿರುವುದರಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ ಅಲ್ಲಿ ಅವ್ಯವಹಾರ ನಡೆಯುವುದನ್ನು ತಪ್ಪಿಸಲು ಮತ್ತು ಆ ಸೊಸೈಟಿಯ ಹಿತರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯವಲ್ಲವೇ?

ಶ್ರೀ ಬಿ. ಎಲ್. ಗೌಡ.—ಅದೇ ದೃಷ್ಟಿಯಿಂದ ಈಗ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿದ್ದೇವೆ.

Grant of subsidy to Semi-Nomadic tribes for construeting houses in Khanapur and Belgaum Taluks

103. Sri N. B. SIRDESAI (Khanapur).—

Will the Minister for Social Welfare be pleased to state :—

(*a*) the number of Dombari, *i.e.*, Semi-Nomadic tribe families residing in Khanapur and Belgaum Taluk;

(*b*) whether subsidy has been granted to each family for the construction of houses since 1965 to 1968 and the number of families that were granted such subsidy ;

(*c*) whether Taluka Development Board, Khanapur has represented to Government stating that Housing grant of Rs. 1,500 only for each Harijan family is too meagre and that grant should be increased sufficiently ?

Sri V. L. PATIL (Mniister for Social Welfare).—

(*a*) Khanapur Taluk 84 families. Belgaum Taluk 73 families.

(*b*) Yes. 73 families in Belgaum Taluk and 25 families in Khanapur Taluk have been granted subsidies for construction of houses.

(*c*) No.

Sri N. B. SIRDESAI.—May I know whether Government are going to remove the disparity already caused by granting subsidy to only 25 families and leaving all the rest of the families disappointed ?

†ಶ್ರೀ ವಿ. ಎರ್. ಪಾಟೀಲ್.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಖಾನಾಪುರದಲ್ಲಿ ಒಟ್ಟು 84 ಕುಟುಂಬಗಳು ಇವೆ. ಅದರಲ್ಲಿ 14 ಕುಟುಂಬಗಳಿಗೆ ಮನೆಗಳು ಇವೆ. 1965ರಿಂದ 1968 ರವರೆಗೆ ಸುಮಾರು 25 ಕುಟುಂಬಗಳಿಗೆ ಮನೆಗಳನ್ನು ಮಂಜೂರು ಮಾಡರಾಗಿದೆ. ಕಳೆದ ಅಕ್ಟೋಬರ್ ತಿಂಗಳಲ್ಲಿ ಮತ್ತೆ 10 ಮನೆಗಳನ್ನು ಕಟ್ಟಿಸಿ ಕೊಡರಾಗಿದೆ. ಮಾನ್ಯ ಸದಸ್ಯರು ಮತ್ತೆ

ಮನವಿ ಮಾಡಿದಮೇರೆ 1969ರಲ್ಲಿ ಮೂರು ಮನೆಗಳನ್ನು ಕಟ್ಟಿಸಿಕೊಡರಾಗಿದೆ. ಈ ಪ್ರಕಾರ ಒಟ್ಟು 52 ಮನೆಗಳನ್ನು ಕೊಟ್ಟಿದ್ದೇವೆ. ಇನ್ನೂ ಕೆಲವು ಮನೆಗಳನ್ನು ಕೊಡುವುದಕ್ಕೆ ಸಾಧ್ಯವಾಗ ಬಹುದೆಂದು ಕಾಣುತ್ತದೆ.

Sri N. B. SIRDESAI.—May I know whether it is a fact that Harijans in Khanapur taluka are agriculturists and they need spacious houses for their cattle and storing their agricultural implements and that the grant of Rs. 1,500 already sanctioned is insufficient for having a spacious house and the amount requires to be increased ?

ಶ್ರೀ ವಿ. ಎರ್. ಪಾಟೀರ್.—ಈಗಾಗಲೇ 1,500 ರೂಪಾಯಿಗಳವರೆಗೆ ಸರಕಾರ ಈಗ ಹೆಚ್ಚು ಮಾಡಿದೆ ಮತ್ತು ಇನ್ನೂ ಬಹಳ ಜನರ ಅಪ್ಲಿಕೇಷನ್‌ಗಳೂ ಬಂದಿರುವುದರಿಂದ ಇದನ್ನು ಆ ಸರಕಾರ ಹೆಚ್ಚು ಮಾಡಿ ಕೊಡಬೇಕೆಂದರೆ ಕಷ್ಟವಾಗುತ್ತದೆ. ಆದರಿಂದ ಸಾಧ್ಯವಾಗುವುದಿಲ್ಲ.

Sri B. B. SAYANAK.—[Marathi].

ಶ್ರೀ ವಿ. ಎರ್. ಪಾಟೀರ್.—ಮಾನ್ಯ ಸದಸ್ಯರು ಬೆಳಗಾಂನಲ್ಲ 73 ಮನೆಗಳಿಗೆ ಸಬ್ಸಿಡಿ ಕೊಟ್ಟಿರುವುದು ಸಾಲದು. ಇದನ್ನು ಹೆಚ್ಚು ಮಾಡರಾಗುವುದಿಲ್ಲವೇ ಎಂದು ಪ್ರಶ್ನೆ ಕೇಳಿದರು.

ಇದಕ್ಕೆ ಉತ್ತರವಾಗಿ ಹೇಳಬೇಕಾದರೆ, ಈಗಾಗಲೇ 73 ಮನೆಗಳಿಗೆ ಹಣ ಮಂಜೂರು ಮಾಡಿ ತಾಲ್ಲೂಕ್ ಬೋರ್ಡು ವಶಕ್ಕೆ ಕೊಡಲಾಗಿದೆ. ಇದನ್ನು ಇನ್ನೂ ಹೆಚ್ಚು ಮಾಡಿ ಕೊಡಬೇಕೆಂದು ಮತ್ತು ಹೆಚ್ಚು ಮನೆಗಳನ್ನು ಕಟ್ಟಬೇಕೆಂದು ತಾಲ್ಲೂಕಾ ಬೋರ್ಡಿಗೆ ಸೂಚನೆಗಳನ್ನು ಕೊಡರಾಗಿದೆ ಮತ್ತು ಬೆಳಗಾಂನಲ್ಲ ಹೆಚ್ಚು ಮನೆಗಳನ್ನು ಕಟ್ಟಬಹುದು. ಸರಕಾರ ಕೊಡುವ ಹಣವನ್ನು ಈಗಾಗಲೇ ಕೊಡಲಾಗಿದೆ.

ಶ್ರೀ ಎಂ. ಎಡ್. ಜಯಪ್ರಕಾಶ ನಾರಾಯಣ್.—ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್ ಪಂಗಡದವರಿಗೆ 700 ಮತ್ತು 1500 ಸಬ್ಸಿಡಿ ಎಂದು ಕೊಡುತ್ತಿದ್ದಾರೆ. ಇದನ್ನು ಹೌಸಿಂಗು ಕಾರ್ಪೊರೇಷನ್ ಕೊಡುವಂತೆ ಮೂರು ಸಾವಿರ ರೂಪಾಯಿಗಳಿಗೇರಿಸಬಾರದು ?

ಶ್ರೀ ವಿ. ಎರ್. ಪಾಟೀರ್.—ಮೂರು ಸಾವಿರ ರೂಪಾಯಿಗಳೆಂದು ಕೊಡುವುದಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ.

Difference of charges between the power guaranteed and actually consumed on I. P. Sets

147. Sri C. K. RAJAIAH SHETTY (Chicknayakanahalli).—

Will the Chief Minister be pleased to state :—

(*a*) the number of electrical I. P. Sets installed and administered by Electricity Board in classification 2, 3, 5 and above H.P's ;

(*b*) the number of each classified items which consume enough current to meet the minimum guaranteed charges and above, and the number of those which consume less power making to pay the difference of power consumed charges and minimum guaranteed amount ;

(*c*) if so, the amount collected between less power consumed and guaranteed charges in the years 1966-67, 1967-68 and 1968-69 ;

(*d*) the extra deposits that the Board now is expected to collect after revision of tariff ?

Sri D. PARAMESWARAPPA (Deputy Minister for Major Irrigation and Electricity) [On behalf of SRI VEERENDRA PATIL (Chief Minister)].—

(*a*)—

H. P.	*No. of sets as on 31-3-1968*
1	832
2	5,840
3	27,896
4	1,810
5	29,466
7.5	2,326
10	2,181
15	476
above 15	360
	71,189

(*b*)—

H. P. of Set	*No. of cases consuming enough energy to meet the annual minimum guaranteed charges and above.*	*No. of cases consuming less energy and paying the difference between the minimum (Annual) and energy charges.*
1	118	714
2	940	4,900
3	11,528	16,370
4	731	1,079
5	13,176	16,290
7.5	1,017	1,309
10	978	1,203
15	98	378
above 15	180	180
	28,766	42,423

(calculated only on sample cases)

(*c*) About Rs. 22,76,160 during the year 1967-68.

(*d*) No extra deposit will be collected from the I.P. Set consumers.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಇಲ್ಲಿ ಕೊಟ್ಟಿರುವ ಪಟ್ಟಿ ಪ್ರಕಾರ 42, 423 ಪಂಪು ಸೆಟುಗಳನ್ನು ಕೊಟ್ಟು ಇದರ ಪವರಿಗಾಗಿ ಸುಮಾರು 22 ಲಕ್ಷದಷ್ಟು ಹಣ ಕೊಡಲಾಗಿದೆ. ಇದರಲ್ಲಿ ಸುಮಾರು ಒಂದು ಲಕ್ಷ ಹೆಚ್. ಪಿ. ಪವರು ಎಂದರೆ ಇದರ ಬೆಲೆ ಸುಮಾರು 224 ಕೋಟಿವರೆಗೆ

ಬರುತ್ತೆ ಇದರ ಮೇಲೆ ಹೊಸದಾಗಿ ಶೇಕಡಾ ನೂರರಷ್ಟು ದರವನ್ನು ರೈತರ ಮೇಲೆ ಹೆಚ್ಚು ವಸೂಲು ಮಾಡುವುದು ಸರಿಯಲ್ಲ ಎನ್ನುವುದು ಸರಕಾರದ ಗಮನಕ್ಕೆ ಬರಲಿಲ್ಲವೆ ?

ಶ್ರೀ ಡಿ. ಪರಮೇಶ್ವರಪ್ಪ.—ಬಹಳ ಕಡೆಗಳಿಂದ ಸರಕಾರದಮೇಲೆ ಇದರ ಬಗ್ಗೆ ಒತ್ತಾಯ ಬರುತ್ತಿದೆ. ಇದನ್ನು ಪರಿಶೀಲನೆ ಮಾಡುತ್ತಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

Sri M. S. KRISHNAN.—From the answer given to (*b*) it is clear that those who are consuming less energy are paying more. Is the Government prepared to consider such cases and give immediate concessions to those people and waive the amount ?

Sri D. PARAMESHWARAPPA.—Sir, I have already made it clear that the Government is just examining this aspect to see whether it is possible to reduce the minimum charges.

ಶ್ರೀ ಬೋಳ ರಘುರಾಮ ಶೆಟ್ಟಿ.—ಸ್ವಾಮಿ, (ಸಿ)ಗೆ ಉತ್ತರವಾಗಿ 1967-68ನೇ ಸಾಲಿನಲ್ಲಿ ನುಮಾರು 22,76,160 ರೂಪಾಯಿ ವಸೂಲು ಮಾಡಿದ್ದೀರಿ. ಈ ರೀತಿ ವಸೂಲ್ಮಾಡಿರುವುದು ಸರ್ಕಾರ ರೈತರ ವಿರುದ್ಧವಾಗಿದೆಯೆಂದು ಗೊತ್ತಾಗುವುದಿಲ್ಲವೆ ?

Sri D. PARAMESHWARAPPA.—I do not agree with the view of my hon. friend.

Sri C. K. RAJAIAH SHETTY.—The figuress given are something different from what the Hon. Chief Minister stated yesterday. According to the calculations, for 1,60,000 H.P. at the rate of Rs. 24 per H.P. it comes to Rs. 3,60,00,000. Is it not a regular harassment to the ryots ?

Sri D. PARAMESHWARAPPA.—It is not correct to say that the amount will be much more than what is mentioned in the reply. They have calculated and according to their calculation, the amount that is realised will be Rs. 22 lakhs and odd.

Sri C. K. RAJAIAH SHETTY.—There are 42,423 pumpsets, and these people are not in a position to pay the minimum charges. Do Government realise the real picture and consider it seriously ?

Sri D. PARAMESHWARAPPA.—I do not see any sound reason in the argument of my friend. His assessment that all the 42,423 cases will be consuming uniform energy is not correct; the cases are different.

ಶ್ರೀ ಸಿದ್ಧಯ್ಯ ಕಾಶೀಮಠ್.—ಸ್ವಾಮಿ, ಹೆಚ್ಚು ಆಹಾರಧಾನ್ಯಗಳನ್ನು ಬೆಳೆಯಲು ಐ. ಪಿ. ಸೆಟ್ಟ್‌ಗಳಿಗೆ ಉಯೋಗಿನುವ ವಿದ್ಯುಚ್ಛಕ್ತಿಗೆ ಮಿನಿಮುಮ್ ಛಾರ್ಜನ್ ಬಿಟ್ಟುಬಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಮಿನಿಮುಮ್ ಛಾರ್ಜನ್ನು ಕಂಪ್ಲೀಟ್ ಆಗಿ ಮಾಫಿ ಆಗಿ ಬಿಟ್ಟು ಬಡುವ ಪ್ರಶ್ನೆ ಇಲ್ಲ. ಆ ರೀತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸಾಧ್ಯವಾದಮಟ್ಟಿಗೆ ವ್ಯವಸಾಯ ಗಾರರಿಗೆ ಅನುಕೂಲ ಮಾಡಿ ಕೊಡಬೇಕು ಎನ್ನುವುದನ್ನು ಪರಿಶೀಲಿಸುತ್ತಿದ್ದೇವೆ, ನಂತರ ನೋಡೋಣ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಸ್ವಾಮಿ, ಮಿನಿಮುಮ್ ಛಾರ್ಜನ್ ಕರೆಕ್ಟ್ ಮಾಡುತ್ತಿದ್ದೀರಿ. ಅದರಲ್ಲಿ ಕರೆಂಟ್ ಪಟ್‌ಡೌನ್ ಆದಾಗ ಅಂತಹ ಸಂದರ್ಭದಲ್ಲಿ ಕಾಂಪನ್ಸೇಷನ್ ಕೇಳಿದರೆ ಕೊಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಕರೆಂಟ್ ಪುಟ್‌ಡೌನ್ ಆಗುವುದು ನಮ್ಮ ಕಂಟ್ರೋಲ್‌ನಲ್ಲಿ ಇಲ್ಲ. ಕೆಲವು ಸಂದರ್ಭದಲ್ಲಿ ಆಗಬಹುದು. ಅಂತಹ ಸಂದರ್ಭ ಬಂದಾಗ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

Representation for Cancellation of Licence for the Sale of Toddy in South Kanara District

197. Smt. WINNIFRED F. FERNANDES (Coondapur).—

Will the Minister for Finance, Planning and Youth Welfare be pleased to state :—

(*a*) the name of the successful bidder for the right to sell toddy in South Kanara District for 1969-70 and the amount of the bid per month ;

(*b*) the amounts deposited by the successful bidder as up to 30th June 1969 and the date or dates on which the amounts were deposited ;

(*c*) the date on which the bid was confirmed, and the date on which licences were issued to this person ;

(*d*) whether any representations were made by this bidder to get his licence cancelled by the Government, and whether Government has agreed to cancel the same, and if so, under what provisions of the Excise rules ?

Sri RAMAKRISHNA HEGDE (Minister for Finance, Planning and Youth Welfare).—

(*a*) *Vide* statement placed on the Table of the House.*

(*b*) Does not arise since the re-auctions were held after 30th June 1960.

(*c*) The bids were confirmed for 470 shops on 14th August 1969 and licences are yet to be issued.

(*d*) No such representations have been received from the bidders referred to above.

Smt. WINNIFRED F. FERNANDES.—May I know when the toddy auction for 1967 was held and what was the highest bid ?

Sri RAMAKRISHNA HEGDE.—The question has never asked about the auction either in the first instance or in the second instance and therefore I had to give the latest position and I have given it.

Smt. WINNIFRED F. FERNANDES.—I want to know particularly about the auction that took place in May 1967. May I know the date of the fresh auction held in May 1967 and the bid amount deposited ?

*Copy placed in the Mysore Legistature Library.

Sri RAMAKRISHNA HEGDE.—The first auction was held along with other auctions in other districts. It was sometime in the last week of May or in the early part of May. I do not know the exact date. The highest bid was for Rs. 2 lakhs 96 thousands per month.

ಶ್ರೀ ಬಿ. ಎಂ. ಇದಿನಬ್ಬ.—30-6-69ಕ್ಕೆ ಪುನಃ ಹರಾಜು ಹಾಕುವುದಕ್ಕೆ ಮೊದಲು ಇದ್ದಂಥ ಸವಾಲುದಾರರ ಸವಾಲನ್ನು ರದ್ದುಪಡಿಸಬೇಕು, ಇಲ್ಲದೆ ಇದ್ದರೆ ಎರಡು ಕೋಮುಗಳಲ್ಲಿ ಕಲಹ ವಾಗುತ್ತದೆ ಎಂದು ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ಸರ್ಕಾರಕ್ಕೆ ಮನವಿಯನ್ನು ಕೊಟ್ಟರೇ? ಆ ಆಧಾರದಮೇಲೆ ಸವಾಲನ್ನು ರದ್ದುಪಡಿಸಲಾಯಿತೇ?

ಶ್ರೀ ರಾಮಕೃಷ್ಣ ಹೆಗಡೆ.—ಸರ್ಕಾರಕ್ಕೆ ಮನವಿ ಬಂತೋ, ಅದರ ಮೇಲೆ ರದ್ದುಪಡಿಸಿದಿರೋ ಎಂದು ಮಾನ್ಯ ಸದಸ್ಯರು ಕೇಳಿದರು. ಮನವಿಯ ಮೇಲೆ ಸರ್ಕಾರದವರು ಇಂಥ ವಿಚಾರಗಳಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆ ಕೇಸನ್ನು ಎಗ್ಜಾಮಿನ್ ಮಾಡಿ ಅದರಲ್ಲಿ ಏನಾದರೂ ಸಬಲವಾದ ಕಾರಣವಿದ್ದರೆ ಸರ್ಕಾರದವರು ತೀರ್ಮಾನ ತೆಗೆದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಕಂಟ್ರಾಕ್ಟ್‌ದಾರರು ನನ್ನ ಹತ್ತಿರ ಈ ಕೆಲಸವನ್ನು ಮಾಡತಕ್ಕುದು ಸಾಧ್ಯವಿಲ್ಲ, ಅದಕ್ಕೆ ಬೇರೆ ಬೇರೆ ತರಹ ಕಾರಣವಿದೆ, ಇಡೀ ಜಿಲ್ಲೆಯಲ್ಲಿ ಡೇಟ್ ಟ್ರಾಫಸ್ರ್ ಬಾಯ್‌ಕಾಟ್ ಮಾಡಿದ್ದಾರೆ ಎಂದು ಮುಂತಾಗಿ ತಿಳಿಸಿದ್ದರಿಂದ ಪುನಃ ಹರಾಜು ಮಾಡಬೇಕಾಯಿತು.

Sri H. SIDDAVEERAPPA.—I would like to know whether the contractor was made to pay any damages for having done it.

Sri RAMAKRISHNA HEGDE.—The liability of the previous contractor is yet to be determined after due examination. The contractor has evoked the Doctrine of frustration of contracts for reasons beyond his control. Therefore Government has yet to take a decision.

Sri K. H. PATIL.—Is it a fact that one Sri Anandarao Alva, relative of the M.P.C.C. President Dr. Nagappa Alva was the said contractor and in order to show favour the rules were ignored?

Sri RAMAKRISHNA HEGDE.—I do not know who are his relatives. In this particular contract, it is true, that the name of the Contractor is Anandarao Alva. But there is no question of giving any concession to anybody on the basis of his relationship with somebody else.

Smt. WINNIFRED F. FERNANDES.—May I know whether the bid amount has been deposited as per the Excise Rules?

Sri RAMAKRISHNA HEGDE.—Strictly according to rules he has made the deposit and given Government guarantee and about that there is absolutely no doubt as such.

ಶ್ರೀ ಬೋಳ ರಘುರಾಮಶೆಟ್ಟಿ.—ಫಸ್ಟ್ ನಕ್ಸಸ್‌ಪುರ್ ಬಿಡ್ ಆದಮೇಲೆ ಟ್ರಾಫರ್ಸ್ ಹತ್ತಿರ ಕೆಲವು ಕಾಂಗ್ರೆಸ್ಸಿನವರು ಹೋಗಿ ಅನಾನುಕೂಲವಾಗುವಂತೆ ಮಾಡಿರುವುದು ಗಮನಕ್ಕೆ ಬಂದಿದೆಯೇ?

ಶ್ರೀ ರಾಮಕೃಷ್ಣ ಹೆಗಡೆ.—ಈ ರೀತಿ ಅಪಾದನೆ ಎಲ್ಲರೂ ಮಾಡುವರು. ಕೆಲವರು ವಿರೋಧ ಪಕ್ಷದವರು ಮಾಡಿದರೆಂದೂ ಮತ್ತೆ ಕೆಲವರು ಕಾಂಗ್ರೆಸ್ಸಿನವರು ಮಾಡಿದರೆಂದೂ ಹೇಳುವರು. We are not at all concerned as to who has prevented whom. The Government is concerned about the Government revenue.

ಶ್ರೀ ಎಚ್. ಬಿ. ಜ್ವಾಲನಯ್ಯ.—ಕ್ಯಾನ್ಸಲ್ ಮಾಡಿದಮೇಲೆ ಸರಕಾರ ಡಿಪಾಜಿಟ್ಟನ್ನು ಫರ್ಫೀಟ್ ಮಾಡಿದೆಯೋ ಅಥವಾ ಕಂಟ್ರಾಕ್ಟರಿಗೆ ವಾಪಸು ಕೊಟ್ಟಿದೆಯೋ?

Sri RAMAKRISHNA HEGDE.—The bank guarantee given by him is still valid. I have submitted to the House that we have yet to take a decision in regard to the liability of the contractor in view of the loss sustained by the Government on account of re-auction.

Sri H. SIDDAVEERAPPA.—Since the name of the contractor is Anandarao Alva, please see that you do not get involved unnecessarily and thereby get a bad name.

Sri RAMAKRISHNA HEGDE.—I will not allow myself to be influenced by anybody.

Sri K. CHIDANANDA.—Has it come to the knowledge of the Government that the successful bidder has not paid the tree tax amount and that is why the toddy tappers have not tapped ?

Sri RAMAKRISHNA HEGDE.—That I do not know.

Smt. WINNIFRED F. FERNANDES.—How long the Government will take to take a final decision in the matter ?

Sri RAMAKRISHNA HEGDE.—The matter is being examined in the Law Department and as soon as we get the correct legal opinion, Government will take a decision.

Representation by the Contingent Servants of Government Arts College, Mangalore

287. Sri RATNAKUMAR KATTEMAR (Mudabidri).—

Will the Minister for Education be pleased to state :—

(*a*) whether a representation from the low paid contingent servants of Government Arts College, Mangalore has been received by the Secretary to the Government of Mysore, Education and Youth Welfare Department through the Principal of the said College on 5th September 1968, with regard to the fixation of their pay according to the revised scales of pay of 1957 and 1961 in accordance with the Government Order No. ED 65 SEP (1) 61 dated 11th February 1965 and also to make provisions to enable them to receive gratuity and provident funds, etc.;

(*b*) if so, the action taken on it ?

Sri N. M. KOTRABASIAH SOGI (Deputy Minister for Education).—

(*a*) Yes.

(*b*) The matter is under consideration of Government.

ಶ್ರೀ ರತ್ನಕುಮಾರ್ ಕಟ್ಟೇಮಾರ್.—ಮಂಗಳೂರಿನ ಸರಕಾರಿ ಕಲಾಶಾಲೆ ನೌಕರರು 5 ವರ್ಷಗಳಿಂದ ಮನವಿಮಾಡಿಕೊಂಡರೂ ಕೂಡ ಕಾರ್ಯಕ್ರಮ ಕೈಕೊಂಡಿಲ್ಲ. ಈ ವಿಷಯ

ಪರಿಶೀಲನೆಯಲ್ಲಿದೆಯೆಂದು ತಿಳಿಸಲಾಗಿದೆ. ಅವರ ಜೀವನ ಕಷ್ಟಮಯವಾಗಿದೆ. ಆದುದರಿಂದ ಆಖ್ಯೆರಾಗಿ ತೀರ್ಮಾನಮಾಡಲು ಎಷ್ಟುಕಾಲ ಬೇಕು ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆದಷ್ಟು ತೀವ್ರವಾಗಿ ಮಾಡಲಾಗುವುದು. ಇಡೀ ರಾಜ್ಯದ ಎರ್ಲಾ ಕಾರ್ಪೇಜುಗಳಲ್ಲೂ ಮಾಡಬೇಕು. ಒಂದೇ ಕಾರ್ಪೇಜಿನ ವಿಚಾರವಲ್ಲ.

ಶ್ರೀ ರತ್ನಕುಮಾರ್ ಕಟ್ಟೇಮಾರ್.—ಫೈನಲೈಜ್ ಮಾಡಲು ಪರಮಾವಧಿ ಎಷ್ಟು ಕಾಲ ಬೇಕು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆದಷ್ಟು ತೀವ್ರವಾಗಿ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—1965 ರಲ್ಲಿ ಆರ್ಡರುಮಾಡಿದಮೇಲೆ 3 ವರ್ಷವಾದಮೇಲೆ 1968 ರಲ್ಲಿ ಮನವಿಮಾಡಿದರೂ ಕೂಡ ಇನ್ನೂ ಕಾಲಾವಕಾಶಬೇಕೆಂದು ಹೇಳುತ್ತಿದ್ದೀರಿ, ಯಾವಾಗ ತೀರ್ಮಾನಮಾಡುವುದು ? ಬಹಳ ಕಡಿಮೆ ಸಂಬಳದಾರರವರ ವಿಚಾರದಲ್ಲಿ ಇಷ್ಟು ನಿಧಾನಮಾಡುವುದು ಯುಕ್ತವಲ್ಲವಾದ್ದರಿಂದ ಜಾಗ್ರತೆ ಇತ್ಯರ್ಥಮಾಡುವಿರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದು ಬರೀ ಒಂದು ಕಾರ್ಪೇಜಿನ ಪ್ರಶ್ನೆಯಲ್ಲ, ಇಡೀ ರಾಜ್ಯದಲ್ಲಿರುವ ಎರ್ಲಾ ಸರಕಾರಿ ಕಾರ್ಪೇಜುಗಳಲ್ಲಿರುವ ಕಂಟಿನ್‌ಜೆಂಟ್ ಸರ್ವೆಂಟ್ಸ್ ಪ್ರಶ್ನೆಯಿದೆ. ಆದಷ್ಟು ತೀವ್ರವಾಗಿ ತೀರ್ಮಾನಮಾಡುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ಮನವಿ ಮಾಡಿರುವವರ ಸಂಖ್ಯೆ ಎಷ್ಟು ? ಅವರು ಕೆಲಸಕ್ಕೆ ಸೇರಿದ ರಾಗಾಯ್ತು ಸರ್ವಿಸ್ಸನ್ನು ಗಮನಿಸಿ ಅವರಿಗೆ ಬರಬೇಕಾದ್ದನ್ನು ಕೊಡಲು ಪರಿಶೀಲಿಸುವಿರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಂಖ್ಯೆ ಬಗ್ಗೆ ಮಾಹಿತಿ ಇಲ್ಲ. ಇನ್ನೊಂದು ವಿಚಾರ ಮೊದಲನಿಂದಲೂ ಕೊಡಬೇಕೆಂಬುದನ್ನು ಪರಿಶೀಲಿಸುತ್ತೇವೆ.

Transfers of Labour Inspectors

326. Sri M. S. KRISHNAN (Malleswaram)—

Will the Minister for Law, Labour and Parliamentary Affairs be pleased to state :—

(*a*) whether during the course of the last two months transfers of Labour Inspectors have been effected by the Commissioner of Labour ; if so, the number of them transferred and the places of such transfers (details may be furnished) ;

(*b*) whether some of them were transferred to more than four to five places during the said period ;

(*c*) whether the two Labour Inspectors at Bellary and Hospet have been remaining there for a number of years and whether they have managed to remain either in the same place or get mutually transferred only to these two places ;

(*d*) whether there is any set policy in respect of transferring of officials ; if so, what is it ?

Sri K. PUTTASWAMY (Minister for Law, Labour and Parliamentary Affairs).—

(*a*) Yes, 37. A statement furnishing the details is appended.

(SRI K. PUTTASWAMY)

(*b*) One Inspector was transferred to four places.

(*c*) No. Labour Inspector, Bellary and Labour Inspector, Hospet, were working at Bellary and Hospet from October 1964 and June 1966, and on their request they were mutually transferred.

(*d*) Ordinarily transfers of Government servants within a period of 2 years at a given place are avoided. However, it sometime becomes necessary to make premature transfers either in the public interest or sometimes on the representation of Government servants themselves. Similarly, it is usual not to keep the Government servant on the same post for longer than 3 years.

STATEMENT

The details of the Labour Inspectors transferred.

Sl. No.	Name	Transferred	
		From	To
1	2	3	4
	Sriyuths—		
1	Devandar Pujari	Nanjangud	II Circle, Mangalore
2	H. M. Nagaraja Naik.	Chamarajanagar	II Circle, Chickmagalur.
3	M. S. Ponnappa	II Circle, Chickmagalur	Nanjangud
4	Mohammed Haneef	Mudigere	Kolar
5	G. Sharnappa	II Circle, Raichur	Gangavathi
6	Sugurappa	Gangavathi	II Circle, Raichur
7	K. S. Maheshwarappa.	Bellary	Hospet
8	H. M. Inamdar	Hadagalli	Chikkodi
9	K. Shantiprakash	Kolar	III Circle, Bangalore
10	S. C. Bangera	Koppa	Puttur
11	Basheer Ahmed Shariff.	I Circle, Mangalore	Chamarajanagar
12	K. Hameed	II Circle, Mangalore	Hadagalli
13	Vincent Silvarius D'Souza.	Hiriyur	I Circle, Mangalore
14	T. Laxmipathi	Sagar	Hassan
15	S. R. Betageri	I Circle, Gadag	III Circle, Hubli
16	S. S. Koppad	Karwar	Koppa
17	M. S. Pudakalkatti	Executive Assistant to the Assistant Labour Commissioner, Hubli.	I Circle, Hubli

1	2	3	4
	Sriyuths—		
18	S. M. Motagi	I Circle, Hubli	Haveri
19	S. Ramu	Executive Assistant to the Assistant Labour Commissioner, Chickmagalur.	Doddaballapur
20	M. Narasinga Rao	Puttur	II Circle, Gulbarga
21	B. Kariyappa	Hassan	Tumkur
22	K. A. Subbayya	Mercara	Executive Assistant to the Assistant Labour Commissioner, Chickmagalur.
23	V. M. Shankaran	Tumkur	Hiriyur
24	K. Sathyanarasimha	II Circle, Gulbarga	Chickballapur
25	T. Basavaraju	Maddur	Mercara
26	I. B. Kattimani	Dharwar	Nargund
27	M. K. Mohiuddin	Nargund	Dharwar
28	A. S. Shivananda	Hospet	Bellary
29	R. S. Nemirajaiah	Haveri	Sagar
30	B. R. Mukkuppi	II Circle, Belgaum	I Circle, Gadag
31	R. S. Naik	Doddaballapur	Sirsi
32	B. F. Hokkundi	III Circle, Bangalore	II Circle, Davangere
33	Syed Shabbir	Thirthahalli	Mudigere
34	K. Srinivasan	Chickballapur	Maddur
35	N. G. Jadhav	Chickodi	II Circle, Belgaum
36	M. N. Samartha Ramadas.	III Circle, Hubli	Executive Assistant to the Assistant Labour Commissioner, Hubli.
37	Devadas Batkal	Sirsi	Karwar

ಶ್ರೀ ಎಂ. ಎಸ್. ಕೃಷ್ಣನ್.—(ಬ) ಪ್ರಶ್ನೆಗೆ ಉತ್ತರವಾಗಿ ಒಬ್ಬ ಇನ್‌ಸ್ಪೆಕ್ಟರನ್ನು ಎರಡು ತಿಂಗಳ ಕಾಲದಲ್ಲಿ 4 ಕಡೆಗಳಿಗೆ ಬದಲಾಯಿಸಿದೆ ಎಂದು ಹೇಳಿದ್ದೀರಿ. ಆ ಒಬ್ಬ ನತದೃಷ್ಟ ಲೇಬರ್ ಇನ್‌ಸ್ಪೆಕ್ಟರು ಯಾರು ಎಂಬುದನ್ನು ಹೇಳುವುದಕ್ಕಾಗುತ್ತದೆಯೇ? ಎರಡನೆಯದು ಇದೇ ಅವಧಿಯಲ್ಲಿ 3 ಕಡೆಗಳಿಗೆ ಎಷ್ಟು ಜನರನ್ನು ಟ್ರಾನ್ಸ್‌ಫರ್ ಮಾಡಿದ್ದೀರಿ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ?

1-30 P. M.

† Sri K. PUTTASWAMY.—As far as the first question is concerned, the official concerned is one by name Sri Gokundi. He was transferred to Bagalkot. He went there and took charge. There were representations on behalf of the Labour Inspector who was working at Bagalkot.

(SRI K. PUTTASWAMY)

The representations were found to be very genuine and it was felt that hardship would be caused to the person who was there at Bagalkot if he was disturbed. Therefore he was transferred to Sagar. The man did not go there. He made a representation and on consideration of his representation he was transferred to Doddaballapur. There also he did not go. He made further representation to the Labour Commissioner. The Labour Commissioner took into consideration his representations and transferred him to Davangere where he had gone and taken charge.

ಶ್ರೀ ಎಂ. ಎಸ್. ಕೃಷ್ಣನ್.—ಇದೇ ಅವಧಿಯಲ್ಲಿ 3 ಕಡೆಗೆ ವರ್ಗಾವಣೆಯಾದ ಜನ ಎಷ್ಟು ಜನ ಇದ್ದಾರೆ?

Sri K. PUTTASWAMY.—I have already given detailed information. There were 4 orders and the official was unnecessarily put to difficulties.

Sri M. S. KRISHNAN.—My question is, are there any persons who have been transferred to 3 places, and if so how many are there?

Sri K. PUTTASWAMY.—I am unable to answer that question.

Sri B. B. SAYANAK.—May I know why this man was made to go to 4 places? Is it because that community plays a dominant role here? Will it not amount to an injustice done to that man?

Sri K. PUTTASWAMY.—I have already given the information in detail. The official had to go to Bagalkot, waited for some time and then went to Davangere. As far as the other suggestion of the Hon. Member is concerned, I refuse to answer.

Sri H. M. CHANNABASAPPA.—You were pleased to say that the Officer transferred refused to take orders of the Government. May I know what action the Government took against this official who refused to obey the orders of the Government? If he had refused, is there any value attached to such orders?

Sri K. PUTTASWAMY.—I do not know whether the Hon. Member has heard me properly. I only said that the Officer made representations. I never said that the officer refused to obey the orders of the Government.

Sri H. M. CHANNABASAPPA.—The Hon. Minister said that the official was transferred from Bagalkot to Sagar where he did not take charge. He wilfully disobeyed the orders. Is there any value attached to the orders if he disobeys? What action you took for disobeying the orders?

Sri K. PUTTASWAMY.—I submit that the inference that the Hon. Member has drawn is not correct. The official made representations. The Labour Commissioner considered those representations and found them all to be genuine. He tried to accommodate the official on grounds of health and other family reasons.

Sri V. N. PATIL.—I have reliably learnt that some section of the Government wanted to harass this poor man and transferred him from place to place. Am I not correct ?

Sri K. PUTTASWAMY.—The Hon. Member is highly imaginative.

Sri B. P. GANGADHAR.—May I know whether the transfers have been effected 2 to 3 times in a year and whether this is the way how the orders are being issued to officials ?

Sri K. PUTTASWAMY.—The inference of the Hon. Member is wrong.

ಶ್ರೀ ಎಂ. ಎಸ್. ಕೃಷ್ಣನ್.—(ಸಿ) ಪ್ರಶ್ನೆಯ ಭಾಗದಲ್ಲಿರತಕ್ಕ ಪರಸ್ಪರ ವರ್ಗಾವಣೆಗೆ ಇರಬೇಕಾದ ಅರ್ಹತೆಗಳೇನು ? ಮತ್ತು ಬಳ್ಳಾರಿಯಲ್ಲಿರತಕ್ಕ ಇಬ್ಬರು ಇನ್‌ಸ್ಪೆಕ್ಟರುಗಳು ಈ ಪರಸ್ಪರ ವರ್ಗಾವಣೆಯು ನೆಪದಲ್ಲಿ ಮಾಮೂಲುಗಳನ್ನು ಗಿಟ್ಟಿಸುತ್ತಿರುವುದು ಸರ್ಕಾರಕ್ಕೆ ಗೊತ್ತಿಲ್ಲವೆ ? ಅಂಥವರ ಬಗ್ಗೆ ದೂರುಗಳು ಬಂದರೆ ಏನುಕ್ರಮ ಕೈಗೊಳ್ಳುತ್ತೀರಿ ?

Sri K. PUTTASWAMY.—The suggestions that are contained in the question of the Hon'ble Member are denied. Mutual transfers are permitted when the Head of the Department feels that there are reasonable grounds for it and it is not against public interest.

National Rural Water Supply Scheme in Holenarasipur Taluk

355. Sri H. D. DEVEGOWDA (Holenarasipur).—

Will the Minister for Development be pleased to state :—

(*a*) the number of villages where the N.R.W.S. Scheme was sanctioned so far in Holenarasipur Taluk, Hassan District ;

(*b*) the number of villages where the estimate for taking of N.R.W.S. has been prepared and not sanctioned ;

(*c*) the amount of estimated cost of each scheme ;

(*d*) whether the Government intend to take necessary steps to was sanction the same ?

Sri B. L. GOWDA (Deputy Minister for Co-operation).—

(*a*) Two.

(*b*) Eleven.

(*c*) Indicated in the list appended.

(*d*) Schemes will be sanctioned if,—

(i) the Village Panchayat deposits 10% of the estimated cost,

(ii) it has the capacity to maintain the scheme,

(iii) it has not defaulted in the repayment of loans sanctioned earlier.

(SRI B. L. GOWDA)

Statement of N.R.W.S. Schemes in Holenarasipur Taluk, Hassan District.

Sl. No.	Name of the Scheme			Estimated cost
	I. N. R. W. Schemes sanctioned so far			
1	Halli-Mysore	...	...	26,000
2	Tejur	...	...	42,000
	II. N. R. Ws. Schemes for which estimates have been got up and not sanctioned			
1	Keregodu	...	...	60,500
2	Doddakadanur	...	...	58,100
3	Haradanahalli	...	...	38,350
4	Malali	...	...	36,500
5	Bagivalu	...	...	68,500
6	Mudalahippe	...	...	43,400
7	Nagalapura	...	...	36,000
8	Uddur Hosahalli	...	...	80,000
9	Honmenahalli	...	...	28,700
10	Tatanahalli	...	...	72,200
11	Bidarakka	...	...	48,250

ಶ್ರೀ ಎಚ್. ಡಿ. ದೇವೇಗೌಡ.—10 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಡಬೇಕೆಂಬ ನಿಯಮ ಯಾವಾಗ ಜಾರಿಗೆ ಬಂದಿತು ?

† ಶ್ರೀ ಬಿ. ಎಲ್. ಗೌಡ.—ಈ ಯೋಜನೆ ಮೊದಲಿಂದಲೂ ಜಾರಿಯಲ್ಲಿದೆ. ಆದರೆ ಮೊದಲು ಇದಕ್ಕೆ ಜನರಿಂದ ಅಷ್ಟು ಒತ್ತಡ ಬರುತ್ತಿರಲ್ಲ. ಆಗ ಇದರ ನಿಯಮಾವಳಿಯನ್ನು ಸ್ವಲ್ಪ ಸಡಿಲ ಮಾಡಿದ್ದೆವು. ಈ ಜನರಿಂದ ಹೆಚ್ಚಿನ ಬೇಡಿಕೆಗಳು ಬರುತ್ತಿವೆ. ಆದ್ದರಿಂದ ನಿಯಮಾವಳಿಗಳನ್ನು ಬಿಗಿಮಾಡಿದೆ. ಮೊದಲು ಯಾರು ಯಾರು ಹಣವನ್ನು ಡೆಪಾಜಿಟ್ ಮಾಡಿಕೊಂಡು ಬಂದಿದ್ದಾರೋ ಅಂಥವರಿಗೆ ಮೊದಲು ಕೊಡುತ್ತೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಯೋಜನೆಯನ್ನು ನಡಿಲಗೊಳಿಸಿದ್ದಾಗ 20 ವರ್ಷದಲ್ಲಿ 2 ಸ್ಕೀಮುಗಳನ್ನು ಮಾತ್ರ ಮಾಡಲಾಗಿದೆ. ಆದ್ದರಿಂದ ಈಗ ಏನು ನಿಯಮಾವಳಿಗಳನ್ನು ಬಿಗಿ ಮಾಡಲಾಗಿದೆಯೋ ಅವುಗಳನ್ನು ಮತ್ತೆ ಸಡಿಲ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಬಿ. ಎಲ್. ಗೌಡ.—ಆಗುವುದಿಲ್ಲ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಈ ಯೋಜನೆಯನ್ನು ಇಲ್ಲಿಯವರೆಗೂ ಎಷ್ಟು ಗ್ರಾಮಗಳಿಗೆ ವಿಸ್ತರಿಸಲಾಗಿದೆ, ಮತ್ತು ಹಾಗೆ ವಿಸ್ತರಿಸುವಾಗ ಏನು ಆಧಾರವನ್ನು ಇಟ್ಟುಕೊಂಡು ವಿಸ್ತರಿಸಲಾಯಿತು ?

ಶ್ರೀ ಬಿ. ಎಲ್. ಗೌಡ.—ಈ ಯೋಜನೆಯನ್ನು 300-400 ಗ್ರಾಮಗಳಿಗೆ ವಿಸ್ತರಿಸಲಾಗಿದೆ. ಪ್ರತಿಯೊಂದು ಗ್ರಾಮದ ಕ್ಯಪ್ಯಾಸಿಟಿ ನೋಡಿಕೊಂಡು ಮಾಡಿದ್ದೇವೆ.

ಶ್ರೀ ಬಿ. ಪರಮೇಶ್ವರಪ್ಪ.—ಕೆಲವು ಗ್ರಾಮಗಳಿಗೆ 10 ಪರ್ಸೆಂಟ್ ಕಾಂಟ್ರಿಬ್ಯೂಷನ್ ತೆಗೆದುಕೊಳ್ಳದೆ ಕೆಲಸವನ್ನು ಮಾಡಿ ಅವರಿಗೆ ಹಿಂದಿನಿಂದ ಆ ಹಣವನ್ನು ತುಂಬುವುದಕ್ಕೆ ಅವಕಾಶ ಕೊಟ್ಟು ತಮಗೆ ಬೇಡವಾದವರಿಗೆ ಈ ನಿರ್ಬಂಧ ಹಾಕುತ್ತಿರುವುದು ಪಕ್ಷಪಾತವಾಗುವುದಿಲ್ಲವೇ ?

ಶ್ರೀ ಬಿ. ಎಲ್. ಗೌಡ.—ಇಲ್ಲ. ನಾನಾಗಲೇ ಶ್ರೀ ದೇವೇಗೌಡರ ಪ್ರಶ್ನೆಗೆ ಉತ್ತರವಾಗಿ ಹೇಳಿದ್ದೇನೆ. ಹಿಂದೆ ಇದರ ನಿಯಮಗಳನ್ನು ಸಡಿಲಗೊಳಿಸರಾಗಿತ್ತು. ಆಗ ಕೆಲವರು ಹಣವನ್ನು ಕಟ್ಟಿದ್ದರು. ಈಗ ಆ ನಿಯಮಗಳನ್ನು ಬಿಗಿ ಮಾಡಿದ್ದೇವೆ. ಈಗ ಬೇಡಿಕೆಗಳು ವಿಶೇಷವಾಗಿ ಬರುತ್ತಿವೆ. ಹಿಂದೆ ಮಾಡಿದ ಹಾಗೆ ಈಗ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಈ 10 ಪರ್ಸೆಂಟ್ ಕೊಡಬೇಕೆಂಬ ನಿಯಮ ಯಾವಾಗ ಜಾರಿಗೆ ಬಂದಿತು ? ಆ ಕ್ಯಪ್ಯಾಸಿಟಿಯನ್ನು ಅಳೆಯುತಕ್ಕ ಅಳತೆಗೋಲಾವುದು ?

ಶ್ರೀ ಬಿ ಎಲ್. ಗೌಡ.—4–5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡತಕ್ಕ ಶಕ್ತಿ ಮತ್ತು ಅಲ್ಲಿ ಒಬ್ಬ ಡ್ರೈವರ್, ಮ್ಯಕಾನಿಕ್ ಇವರೆಲ್ಲಾ ಇರುತ್ತಾರೆ. ಇಷ್ಟು ಖರ್ಚನ್ನು ನಿರ್ವಹಿಸತಕ್ಕ ಶಕ್ತಿ ಇದೆಯೇ ಇಲ್ಲವೇ ಎಂಬುದನ್ನು ನೋಡಿಕೊಂಡು ಮಾಡಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—(ಈ) (2)ರಲ್ಲಿ ಉತ್ತರ ಹೇಳಿರುವ ಹಾಗೆ ಸಾರ್ವತ್ರಿಕವಾಗಿ ಕ್ಯಪಾಸಿಟಿ ಇದೆಯೆಂಬುದನ್ನು ಯಾವರೀತಿ ಅಳತೆ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಪಂಚಾಯಿತಿ ಅದಾಯದ ನಂಪನ್ಮೂಲಗಳನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆ ಇದೆ. ಈಗ ಮಂಜೂರಾಗಿರುವ ಸ್ಕೀಮುಗಳನ್ನು ಎಲ್ಲಾ ಪರಿಶೀಲನೆ ಮಾಡುವುದಾದರೆ ವ್ಯಾಯಶಃ ಹಳೆಯ ಮೈನೂರಿನಲ್ಲಿ ಈ ಸ್ಕೀಮುಗಳು ಹೆಚ್ಚಿಗೆ ಆಗಿಲ್ಲವೆನ್ನುವುದು ನಿರ್ವಿವಾದ. ಈ ನಿಬಂಧನೆಗಳನ್ನು ಬಹಳ ಬಿಗಿಯಾಗಿ ಮಾಡಿ ಹೆಚ್ಚು ಬೇಡಿಕೆಗಳು ಏನು ಬಂದಿವೆ, ಅವುಗಳನ್ನು ಸ್ಕ್ಯಾಂಕ್ಷನ್ ಮಾಡಿ ರೀಜನಲ್ ಇಂಬ್ಯಾರೆನ್ಸ್ ಕೂಗನ್ನು ಈಗಲಾದರೂ ಸರಿದೂಗಿಸುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಎಲ್ಲೆಲ್ಲ ಎಷ್ಟೆಷ್ಟು ಕೊಟ್ಟಿದೆ ಎಂಬುದರ ಮಾಹಿತಿ ಈಗ ನನ್ನಲ್ಲಿಲ್ಲ. ಆದ್ದರಿಂದ ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಬಿ. ನಂಜಪ್ಪ.—ಗ್ರಾಮಾಂತರ ನೀರು ಸರಬರಾಜು ಯೋಜನೆಗಳಲ್ಲಿ ಕೆಲವು ಈಗಾಗಲೇ ಮಂಜೂರಾಗಿ ಕೆಲವು ಕಾಲ ಜೆನ್ನಾಗಿ ಕೆಲಸಮಾಡಿ ಈಗ ನಿಂತು ಹೋಗಿರುವುದು ಎಷ್ಟಿವೆ ? ಆ ರೀತಿ ನಿಂತುಹೋಗಿರುವುದನ್ನು ಏನಾದರೂ ಈಗ ಚಾಲೂ ಮಾಡುವುದಕ್ಕೆ ಏನಾದರೂ ಕಂಡುಹಿಡಿದಿದ್ದೀರಾ ?

ಶ್ರೀ ಬಿ. ಎಲ್. ಗೌಡ.—ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಬೇರೆ ಪ್ರಶ್ನೆ ಹಾಕಿದರೆ ಉತ್ತರ ಹೇಳುತ್ತೇನೆ.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸ್ಪೀಕರ್ ಅವರೆ, ನಮ್ಮ ದೇಶದ ಮುಖ್ಯಮಂತ್ರಿಗಳು 5ನೇ ಫೈನಾನ್ಸ್ ಕಮಿಷನ್ನಿನವರು ನಮ್ಮ ರಾಜ್ಯಕ್ಕೆ ಕೊಟ್ಟಂತಹ ಅವಾರ್ಡಿನ ಬಗ್ಗೆ ಕೇಂದ್ರದ ಉನ್ನತ ನಾಯಕರೊಡನೆ ಪ್ರಸ್ತಾಪ ಮಾಡಲು ದೆಹಲಿಗೆ ಹೋಗಿ ಮಾತನಾಡಿಕೊಂಡು ಬಂದಿದ್ದಾರೆಂದು ಗೊತ್ತಾಯಿತು. ಈಗ ನಮಗೆ ಈ ದೇಶದ ಜನತೆಗೆ, ಈ ಮಾನ್ಯ ಸಭೆಗೆ ಒಂದು ದೊಡ್ಡ ಅನುಮಾನ ಏನು ಬಂದಿದೆ ಎಂದರೆ ಈ ದೇಶಕ್ಕೆ, ಈ ದೇಶದ ಹಿತಕ್ಕೆ ಧಕ್ಕೆ ಆಗತಕ್ಕಂಥ ವಿಚಾರ ಸರ್ಕಾರದ ಕಡೆಯಿಂದ ನಡೆಯುತ್ತಿದೆ. ಕೇಂದ್ರ ಸರ್ಕಾರದಲ್ಲಿ ಈ ಸರ್ಕಾರಕ್ಕೆ ಎಳ್ಳಷ್ಟು ಮನ್ನಣೆ ಇಲ್ಲ. ಫೈನಾನ್ಸ್ ಕಮಿಷನ್ನಿನವರು ನಮ್ಮ ರಾಜ್ಯದ ಬಗ್ಗೆ ತಳೆವಿರತಕ್ಕ ಧೋರಣೆ, ಹಾಗೂ ಬೇರೆ ವಿಚಾರಗಳಲ್ಲಿ ಕೂಡ ಈ ರಾಜ್ಯದ ಕಾಂಗ್ರೆಸ್ ನಾಯಕತ್ವ, ಏನಿದೆ ಇದರ ಬಗ್ಗೆ ಕೇಂದ್ರದಲ್ಲಿರತಕ್ಕ ನಾಯಕತ್ವದಲ್ಲಿ ಒಬ್ಬರಿಗೊಬ್ಬರಿಗೆ ಭಿನ್ನಾಭಿಪ್ರಾಯಗಳು ಬಂದು ಗಂಡಾಂತರದ ಜಗಳದಲ್ಲಿ ಕೂಸು ಬಡವಾಯಿತು ಎನ್ನುವ ಗಾದೆಯ ಹಾಗೆ ನಮ್ಮ ರಾಜ್ಯಕ್ಕೆ ಧಕ್ಕೆ ಬರತಕ್ಕಂಥ ಸನ್ನಿವೇಶ ಕಾಣಿಸುತ್ತಿದೆ. ಕಾಂಗ್ರೆಸ್ ಸರ್ಕಾರದಲ್ಲಿ ನಂಬಿಕೆ ಇಲ್ಲ, ಆದಕಾರಣ ಈಗ ಇರತಕ್ಕ ಮಂತ್ರಿಮಂಡಲ ರಾಜೀನಾಮೆಯನ್ನು ನೀಡಲಿ, ಕೇಂದ್ರ ಸರ್ಕಾರದಲ್ಲಿ ಪ್ರಭಾವವನ್ನು ಬೀರುವ ಮಂತ್ರಿಮಂಡಲ ಅಧಿಕಾರಕ್ಕೆ ಬರಬೇಕು. ಆ ರೀತಿ ಮಾಡುವುದಾದರೆ ಆಗ ದೇಶದ ಉನ್ನತಿಗೆ, ದೇಶದ ಹಿತಕ್ಕೆ ಏನಾದರೂ ಅನುಕೂಲ ಆಗಬಹುದು.

ಈ ಒಂದು ಗಂಡಾಂತರ ಪರಿಸ್ಥಿತಿಯ ಕಾರಣ 5ನೇ ಅರ್ಥಿಕ ಆಯೋಗದವರು ಸಹ ನಮ್ಮ ರಾಜ್ಯಕ್ಕೆ 18 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದಾರೆ ಇನ್ನೂ ಅನೇಕ ಗಂಡಾಂತರ ಪರಿಸ್ಥಿತಿಗಳು ಬರುತ್ತಿವೆ. ಈ ಕಾಂಗ್ರೆಸ್ ಸರ್ಕಾರದಿಂದ ಈ ರಾಜ್ಯದ ಹಿತವನ್ನು ಸಾಧನೆ ಮಾಡುವುದಕ್ಕಾಗುತ್ತಿಲ್ಲ, ಈ ಕಾಂಗ್ರೆಸ್ ನಾಯಕತ್ವ ಏನಿದೆ, ಅದು ಕೇಂದ್ರಸರ್ಕಾರದ ನಂಬಿಕೆಯನ್ನು ಕಳೆದುಕೊಂಡಿದೆ. ಈಗ ಇರುವ ಒಂದೇ ಮಾರ್ಗ ಎಂದರೆ ರಾಜೀನಾಮೆ ಕೊಡುವುದು. ಈ ದೇಶದ ಹಿತದೃಷ್ಟಿಯಿಂದ ಈ ಸರ್ಕಾರ ರಾಜೀನಾಮೆ ಕೊಟ್ಟರೆ ದೇಶಕ್ಕೆ ಬಹಳ ಉಪಕಾರ ಮಾಡಿದಂತಾಗುತ್ತದೆ. ಮತ್ತು ಆ ರೀತಿ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

Sri K. PUTTASWAMY.—The Hon. Leader of the Opposition seem to be very much exercised over the reported alleged difference in the Congress party. He seems to feel that a State Government which has lost the confidence of the Central Government should resign. I do not know whether he would ask the other non-Congress Governments in other States also to resign. I would very much advise him not to get himself interested in our affairs. We are entitled to continue in office as long as we enjoy the confidence of this House.

ಶ್ರೀ ಎಸ್. ಶಿವಪ್ಪ.—ಪ್ರಧಾನಮಂತ್ರಿಗಳು ನನ್ನನ್ನು ಸರಿಯಾಗಿ ಮಾತನಾಡಿಸಲಿಲ್ಲ ಎಂದು ಮುಖ್ಯಮಂತ್ರಿಗಳೇ ಹೇಳಿದ್ದಾರೆ.

ಶ್ರೀ ಎನ್. ಹುಚ್ಚುಮಾಸ್ತಿಗೌಡ.—ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಅವರು ಪಾರ್ಟಿಯ ವಿಚಾರದಲ್ಲಿ ಬೇರೆಯವರು ಕೈಹಾಕುವುದು ಸರಿಯಿಲ್ಲ ಎಂದು ಹೇಳಿದರು. ಈ ರಾಜ್ಯದ ಉನ್ನತಿ ಮತ್ತು ಅವನತಿಯ ಬಗ್ಗೆ ಅವರಿಗೆ ಎಷ್ಟು ಆಸಕ್ತಿ ಇದೆಯೋ ಅದರಷ್ಟೇ ನಮಗೂ

ನಹ ಇದೆ ಎಂಬುದನ್ನು ಮರೆಯಬಾರದು. ಕೇಂದ್ರಸರ್ಕಾರದಲ್ಲಿ ಈಗಿನ ಮುಖ್ಯಮಂತ್ರಿಗಳಿಗೆ ಅಪತಂಬಕೆ ಉಂಟಾಗಿದೆ ಎಂಬುದು ನಮಗೆ ಸರಿಯಾಗಿ ಕಾಣುತ್ತಿದೆ. ಈ ಕಾರಣದಿಂದ ಹಿಂದಿನ ಮುಖ್ಯಮಂತ್ರಿಗಳನ್ನೇ ವಾಪಸ್ ಕರೆಸಿಕೊಂಡರೆ ಈ ರಾಜ್ಯಕ್ಕೆ ಒಳ್ಳೆಯದಾಗುತ್ತದೋ ಏನೋ ಎಂಬುದನ್ನು ಈ ಸರ್ಕಾರದವರು ವಿಚಾರಮಾಡುವುದು ಒಳ್ಳೆಯದು.

Demise of Dr. Ho Chi Minh, President of North Vietnam

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸ್ವಾಮಿ, ನಾನು ಮತ್ತು ಪಾಟೀಲ್ ಅವರು ಸೇರಿ ಒಂದು ಪತ್ರವನ್ನು ತಮಗೆ ಕಳಿಸಿದ್ದೇವೆ. ಅಧ್ಯಕ್ಷರಾದ ಹೋಚಿಮಿನ್ ಅವರು ನಿಧನರಾದ ಬಗ್ಗೆ ಪತ್ರ ಕಳಿಸಿದ್ದೇವೆ. ರಾಷ್ಟ್ರಾಧ್ಯಕ್ಷರು ಕೂಡ ತಮ್ಮ ಗೌರವವನ್ನು ಸೂಚಿಸಿದ್ದಾರೆ. ಮತ್ತು ಅವರ ಅಂತ್ಯಯಾತ್ರೆಯಲ್ಲಿ ಭಾಗವಹಿಸಲು ಒಬ್ಬರು ಪ್ರತಿನಿಧಿಗಳನ್ನು ಕಳಿಸುವುದರಲ್ಲಿ ಇದ್ದಾರೆ. ಹೋಚಿಮಿನ್ ಅವರು ದೊಡ್ಡ ವ್ಯಕ್ತಿಯಾಗಿದ್ದರು. ಸಾಮ್ರಾಜ್ಯಷಾಹಿಗೆ ವಿರುದ್ಧವಾಗಿ ಮತ್ತು ಅಮೇರಿಕಾದ ವಿರುದ್ಧವಾಗಿ ಹೋರಾಟ ಮಾಡಿದ ವ್ಯಕ್ತಿಯಾಗಿದ್ದರು. ಅವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸುವುದು ಒಳ್ಳೆಯದೆಂದು ನಮ್ಮ ಅಭಿಪ್ರಾಯ. ಈ ಬಗ್ಗೆ ಅಧ್ಯಕ್ಷರ ಹತ್ತಿರ ಮಾತನಾಡಿದ್ದೆ. ಅವರೇ ರೆಫರೆನ್ಸ್ ಮಾಡುತ್ತೇನೆಂದು ಹೇಳಿದ್ದರು. ಆದರೆ ಅವರು ಬರಲಿಲ್ಲ. ರೂಲ್ 31 (ಬ) ಪ್ರಕಾರ ನಿರ್ಣಯ ಮಂಡಿಸುವುದಕ್ಕೆ ಅವಕಾಶವಿದೆ. ಅದಕಾರಣ ತಾವೇ ಈ ಬಗ್ಗೆ ರೆಫರೆನ್ಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಸ್ಪೀಕರ್‌ಗೆ ಪತ್ರ ಕಳುಹಿಸಿರುವ ವಿಚಾರ ನನಗೆ ಗೊತ್ತಿಲ್ಲ. ಈ ವಿಷಯವನ್ನು ನಿನ್ನೆ ತೆಗೆದುಕೊಳ್ಳಬೇಕಾಗಿತ್ತು. ಈಗಾಗಲೇ ರಾಷ್ಟ್ರಾಧ್ಯಕ್ಷರು ಕಂಡೊಲೆನ್ಸ್ ಮೆಸೇಜ್ ಕಳುಹಿಸಿವ್ದಾರೆ.

ಶ್ರೀ ಎ. ಎನ್. ಪಾಟೀಲ್.—ನಮಗೆ ತಿಳಿದದ್ದು ಇಂದು.

ಉಪಾಧ್ಯಕ್ಷರು.—ಈಗ ಕಳುಹಿಸುವುದು ಅಷ್ಟು ಸೂಕ್ತವಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಿನ್ನೆ ಗೊತ್ತಾದರೂ ಈ ಸಭೆ ಸೇರಿರುವುದು ಇವತ್ತು, ಬೆಳಗ್ಗೆ. ಇದರ ಬಗ್ಗೆ ನಾವು ಇಲ್ಲ ಸೂಚನೆ ಮಾಡುವುದಕ್ಕೆ ಸಾಧ್ಯವಿದೆ. ಇದನ್ನು ತಾವು ಯೋಚನೆ ಮಾಡಬೇಕು. ಅನೇಕ ರಾಜ್ಯ ಸರಕಾರಗಳು ಹಾಗೂ ವಿಧಾನ ಸಭೆಗಳು ಅಂತರರಾಷ್ಟ್ರೀಯ ವ್ಯಕ್ತಿ ಎಂದು ಗೌರವ ಸೂಚಿಸುತ್ತಿವೆ. ಇದರಲ್ಲಿ ರಾಜಕೀಯ ತರಬೇಡಿ. ಇದನ್ನು ತಾವು ಯೋಚನೆ ಮಾಡಬೇಕೆಂದು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು.—ಈ ಸಂದರ್ಭದಲ್ಲಿ ಇದರ ರೆಫರೆನ್ಸ್ ಮಾಡುವುದು ಅಷ್ಟು ಸೂಕ್ತವಲ್ಲ.

ಶ್ರೀ ಎಸ್. ಗೊಪಾಲಗೌಡ.—ಸ್ವಾಮಿ, ನಾನು ಕಾರ್ ಅಟೆನಷನ್ ಮೋಷನ್ ಬಗ್ಗೆ ತಮ್ಮ ಗಮನವನ್ನು ಸೆಳೆಯಲು ಸೂಚನೆ ಕೊಡುತ್ತೇನೆ. ಈಗಿರುವ ರೂಲ್ಸು ಅಪೆಂಡ್ ಆದಮೇಲೆ ಒಬ್ಬರು ಗೊತ್ತಾದ ಸಚಿವರ ಗಮನವನ್ನು ಸೆಳೆಯುವುದಕ್ಕೆ ಒಬ್ಬರು ಅಥವಾ ಇಬ್ಬರು ಸದಸ್ಯರು ಅಥವಾ ಎಷ್ಟುಜನ ಸದಸ್ಯರಾದರೂ ಸಹ ಹಾಕಬಹುದು ಮತ್ತು ಯಾರಾದರೂ ಒಬ್ಬರು ಸರಕಾರದ ಗಮನವನ್ನು ಸೆಳೆಯಬಹುದು. ಪ್ರಶ್ನೆ ಒಬ್ಬರ ಹೆಸರಿನಲ್ಲದ್ದರೆ ಇನ್ನೊಬ್ಬರು ಈಗ ಅದೇ ಪ್ರಶ್ನೆ ಕೇಳಲು ಬರುವುದಿಲ್ಲ. ಇದರಲ್ಲಿರುವ ರೂಲು 63 ರಲ್ಲಿ ಎ ಮೆಂಬರ್ ಎಂದು ಇದೆ. A member with the previous permission of the Speaker, may call the attention of the Minister to any matter of public importance and the Minister....."

"A" member and "The" Minister are specifically mentioned.

Mr. DEPUTY SPEAKER.—I will give a considered ruling.

Message from the Chairman, Legislative Council

(Announcement)

Mr. DEPUTY SPEAKER.—There is a message from the Legislative Council which reads as follows:

"Mr. Speaker,

As required by rule 91 of the Rules of Procedure and Conduct of Business in the Mysore Legislative Council, I transmit the Mysore Civil Courts (Amendment) Bill, 1969 for concurrence of the Legislative Assembly. The Bill was passed by the Legislative Council on 3rd September 1969."

There is another message which reads thus :

"Mr. Speaker,

As required by rule 91 of the Rules of Procedure and Conduct of Business in the Mysore Legislative Council, I transmit the Mysore Shops and Commerical Establishments (Amendment) Bill, 1969 for concurrence of the Legislative Assembly. The Bill was passed by the Legislative Council on 3rd September 1969."

Papers laid on the Table

SECRETARY.—I lay on the Table of the House:

1. The Mysore Shops and Commercial Establishment (Amendment) Bill, 1969 as passed by the Legislative Council.

2. The Mysore Civil Courts (Amendment) Bill, 1969 as passed by the Legislative Council."

Question of Privilege *re* : Contradictory Statements made by Deputy Minister for Public Works during Question Hour

Sri A. R PANCHAGAVI.—Before proceeding with the business of the House, I wish to bring to the notice of the Chair certain serious irregularities and certain contradictory statements made during the Question Hour. This arose out of the question No. 556 put by Sri Gurreddy. The Hon. Deputy Minister for P.W.D. while answering the question has stated that he has not only travelled along that road, but he actually went to the House of Sri Gurreddy and took meals there. But Sri Reddy said that he never visited his House. If such things are stated in the House, will it not be considered that the House is treated so lightly ? This is a serious thing that has taken place in the House.

Sri S. SIVAPPA.—I support what Sri Panchagavi has stated.

Mr. DEPUTY SPEAKER.—I request the hon. Member to give it in writing.

Sri K. H. PATIL.—It is a fit case to be dealt with.

Mr. DEPUTY SPEAKER.—I have to look into the proceedings of the House.

Sri K. H. PATIL.—When he has brought to the notice of the Chair. it is the right time that the matter should be dealt with. At the right time Sri Panchagavi has brought this to the notice of the House. There is no use of asking the member to give it in writing.

† ಶ್ರೀ ಹೆಚ್. ಎನ್. ನಂಜೇಗೌಡ.—ಸ್ವಾಮಿ, ಹಕ್ಕಿನ ಚ್ಯುತಿ ಆಗಿದೆ ಎಂದು ಬರೆವಣಿಗೆಯ ಮುಖಾಂತರ ಕೊಡಬೇಕಾದರೆ ಈ ಸಭೆ ನಡೆಯುವುದಕ್ಕಿಂತ ಮುಂಚಿತವಾಗಿ ಕೊಡಬೇಕೇ; ಯಾವಾಗ ಕೊಡಬೇಕು ಎನ್ನುವುದನ್ನು ಈ ಸಭೆಯಲ್ಲಿ ಮಾನ್ಯ ಸಭಾಧ್ಯಕ್ಷರು ತಿಳಿಸಿದರೇ ? ಈ ವಿಚಾರ ಏತಕ್ಕೆ ಹೇಳುತ್ತೇನೆ ಎಂದರೆ ಹೊರಗಡೆ ಯಾವುದಾದರೂ ಚ್ಯುತಿ ಬಂದರೆ ಈ ಸಭೆಗೆ ಸಂಬಂಧಪಟ್ಟದ್ದೇ ಆಗಲಿ ಅಥವಾ ಸದಸ್ಯರ ಹಕ್ಕಿಗೆ ಸಂಬಂಧಪಟ್ಟದ್ದೇ ಆಗಲಿ ಅಂಥಾದ್ದನ್ನು ಈ ಸಭೆಯ ಗಮನಕ್ಕೆ ತರಬೇಕಾದರೆ ಬರವಣಿಗೆ ಮುಖಾಂತರ ಈ ಸಭೆ ನಡೆಯುವುದಕ್ಕಿಂತ 2 ಗಂಟೆ ಮುಂಚಿತವಾಗಿ ಕೊಡಬೇಕು. ಆದರೆ ಈ ಸಭೆಯಲ್ಲಿ ಒಂದು ಹಕ್ಕಿಗೆ ಲೋಪ ತಂದು ಈ ಸಭೆಯನ್ನು ತಪ್ಪುದಾರಿಗೆ ಎಳೆಯುವುದಕ್ಕೆ ಮುಂತ್ರಿಗಳು ತೊಡಗಿದ ಕಾಲದಲ್ಲಿ ಹಕ್ಕಿಗೆ ಚ್ಯುತಿ ಉಂಟಾಗುವಾಗ ಅಂತಹ ಸಂದರ್ಭದಲ್ಲೂ ಈ ಸಭೆಯ ಗಮನಕ್ಕೂ ಮತ್ತು ಅಧ್ಯಕ್ಷರ ಗಮನಕ್ಕೂ ತಂದರೆ ಅದರ ಮೇಲೆ ಚರ್ಚೆ ಪ್ರಾರಂಭ ಮಾಡಲಿ, ಇಲ್ಲವೇ ಅಧ್ಯಕ್ಷರ ಪ್ರಿವಿಲೇಜ್ ಸಮಿತಿಗೆ ಕಳುಹಿಸಿಲಿ ಎಂದು ಹೇಳುವುದಕ್ಕೆ ಬರುತ್ತದೆ. ಶ್ರೀಮಾನ್ ಪಂಚಗಾವಿಯವರು ಪ್ರಾಮುಖ್ಯವಾದಂಥ ವಿಷಯವನ್ನು ತಿಳಿಸಿದ್ದಾರೆ. ಈ ಸಭೆಯನ್ನು ತಪ್ಪುದಾರಿಗೆ ಎಳೆಯುವ ಪ್ರಯತ್ನವನ್ನು ಮಾನ್ಯ ಉಪಮಂತ್ರಿಗಳು ಮಾಡಿದ್ದಾರೆ ಎಂದು. ಅದೂ ಅಲ್ಲದೆ ಅವರು ಅಧ್ಯಕ್ಷರ ಪೀಠವಲ್ಲಿ ಇದ್ದುಕೊಂಡು ಇದರ ಅನುಭವಗಳನ್ನೂ ತಿಳಿದುಕೊಂಡು ಮತ್ತು ಈ ಸಭೆಯ ನಿಯಮಾವಳಿಗಳನ್ನೂ ಅರಿತು ಇಂತಹ ಒಂದು ಸೂಚನೆಯನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಇದನ್ನು ಅಷ್ಟು ನುಭವವಾಗಿ ಪರಿಗಣಿಸಬಾರದು ಎಂದು ಹೇಳುತ್ತೇನೆ. ಆದುದರಿಂದ ತಮಗೆ ಅರಿಕೆ ಮಾಡಿಕೊಳ್ಳುವುದು ಏನೆಂದರೆ ಈ ಒಂದು ಸಭೆಯನ್ನು ತಪ್ಪುದಾರಿಗೆ ಎಳೆಯುವ ಒಂದು ಪ್ರಯತ್ನವನ್ನು ಮಾಡಿ ಈ ಸಭೆಯ ಹಕ್ಕಿಗೆ ಚ್ಯುತಿ ತಂದಿರತಕ್ಕ ಮಾನ್ಯ ಉಪಮಂತ್ರಿಗಳ ವಿರುದ್ಧವಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಪಂಚಗಾವಿಯವರು ಒಂದು ಸೂಚನೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ರೀತಿ ಈ ಸಭೆಯ ಹಕ್ಕಿಗೆ ಚ್ಯುತಿ ಬಂದಿರುವುದರಿಂದ ಇದನ್ನು ಈ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು ಇಲ್ಲವೇ ಪ್ರಿವಿಲೇಜ್ ಸಮಿತಿಗೆ ಕಳುಹಿಸುವುದಾದರೆ ನಮ್ಮದು ಏನೂ ಅಭ್ಯಂತರವಿಲ್ಲ : ಇಲ್ಲವಿದ್ದರೆ ಇದರ ಚರ್ಚೆಗೆ ತಕ್ಷಣ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಹೆಚ್. ಸಿದ್ದವೀರಪ್ಪ.—ಸ್ವಾಮಿ, ಈಗ ಶ್ರೀಮಾನ್ ಗುರಡ್ಡಿಯವರು ಮತ್ತು ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಪಂಚಗಾವಿಯವರು ಹೇಳಿದ ವಿಷಯವನ್ನು ನಾವು ಅಷ್ಟೊಂದು ಲಘುವಾಗಿ ತೆಗೆದುಕೊಳ್ಳಬಹುದು ಒಳ್ಳೆಯದಲ್ಲ ಎಂದು ನನ್ನ ಭಾವನೆ. ಈ ಸಭೆಯಲ್ಲಿ ಮಾತನಾಡಬೇಕಾದರೆ ಅಥವಾ ಈ ಸಭೆಯಲ್ಲಿ ಏನಾದರೂ ವಿಷಯಗಳನ್ನು ಪ್ರತಿಪಾದಿಸಬೇಕಾದರೆ ಬಹಳ ಜವಾಬ್ದಾರಿಯಿಂದ ಹೇಳಬೇಕು. ಆದನ್ನು ಜವಾಬ್ದಾರಿಯಿಂದ ಹೇಳದೇ ಹೋದರೆ ಅದರ ಪರಿಣಾಮ ದೇಶದಲ್ಲಿ ಏನಾಗುತ್ತದೆ ಎನ್ನುವುದನ್ನು ನೋಡಬೇಕು. ಶ್ರೀಮಾನ್ ಗುರಡ್ಡಿಯವರು ಸ್ಪಷ್ಟವಾಗಿ ಅನುಮಾನಕ್ಕೆ ಆಸ್ಪದವಿಲ್ಲದೆ ಹೇಳಿದ್ದಾರೆ ; ನಮ್ಮ ಮನೆಗೆ ಬಂದಿಲ್ಲ, ನಮ್ಮ ಮನೆಯಲ್ಲಿ ಊಟ ಮಾಡಿಲ್ಲ ; ಈ ರಸ್ತೆಯಲ್ಲೂ ಸಹ ಬಂದಿಲ್ಲ ಎಂದು ಅವರು ಹೇಳಿದಾಗ ಉಪಮಂತ್ರಿಗಳು ಇನ್ನು ಎಷ್ಟು ದೂರ ಹೋಗಬಲ್ಲರು ! ಆದರೆ ಇಂತಹ ಪ್ರಶ್ನೆ ಬಂದಾಗ ಜವಾಬ್ದಾರಿ ತಾವು ವಹಿಸಬೇಕು. ಇಲ್ಲ ಯಾವ ಪಾರ್ಟಿ ಪಂಗತ ಮಾಡುವುದಲ್ಲ. ಈ ಮಾನ್ಯ ಸಭೆಯಲ್ಲಿ ನತ್ಯಕ್ಕೆ ದೂರವಾದ ವಿಷಯಗಳನ್ನು ಅಷ್ಟೊಂದು ಲಘುವಾಗಿ ಹೇಳಿದರು. ನೋಡಿ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಗೋಪಾಲಗೌಡರು ಹುಡುಗರನ್ನು ಮಾತನಾಡುವುದಕ್ಕೆ ಹಚ್ಚಿಬಿಟ್ಟರೆ ಬಾಯಿಬಂದಹಾಗೆ ಆಡುತ್ತಾರೆ ಎಂದು ಮಾತನಾಡಿದಾಗ ಶ್ರೀಮಾನ್ ಪುಟ್ಟಸ್ವಾಮಿಯವರು ಒಂದು ಆಕ್ಷೇಪವನ್ನು ತೆಗೆದುಕೊಂಡರು.

(ಶ್ರೀ ಎಚ್. ಸಿದ್ದವೀರಪ್ಪ)

3-00 P. M.

ಶ್ರೀಮಾನ್ ಗೋಪಾಲ ಗೌಡರು ಅವರ ಇಂಗಿತವನ್ನು ಅರಿತು ವಾಪಸು ತೆಗೆದುಕೊಂಡಿದ್ದೇನೆ ಎಂದು ಹೇಳಿದರು. ಆದರೆ ಅವರು ಹೇಳಿದ್ದು ಸರಿಯಾಗಿತ್ತು ಎಂದು ನನ್ನ ಅಭಿಪ್ರಾಯ. ಅದು ಅನ್‌ಪಾರ್ಲಮೆಂಟರಿಯಾದುದರಿಂದ ವಾಪಸು ತೆಗೆದುಕೊಳ್ಳಬೇಕಾಯಿತು, ವಾಪಸು ತೆಗೆದುಕೊಂಡಿದ್ದಾರೆ. ಶ್ರೀಮಾನ್ ಹಂಡಿಗಾವಿ ಅವರು ಮತ್ತು ಶ್ರೀಮಾನ್ ಗುರೆಡ್ಡಿ ಅವರು ಏನು ಹೇಳಿದ್ದಾರೆ ಅದನ್ನು ಇಡೀ ಮಾನ್ಯ ಸಭೆ ಕೇಳಿದೆ, ತಾವೂ ಕೇಳಿದ್ದೀರಿ. ಆದುದರಿಂದ ಬರೆದುಕೊಡುವ ಪ್ರಶ್ನೆ ಬರುವುದಿಲ್ಲ. ಅದು ಪ್ರಿವಿಲೇಜ್ ಮೋಷನ್ ಆಗುತ್ತದೆಯೇ ಇಲ್ಲವೇ ? ಬೇಕಾದರೆ ಉಪಮಂತ್ರಿಗಳನ್ನು ಕರೆಸಿ ನೀವು ಹೀಗೆ ಹೇಳಿದಿರಿ, ಅವರು ಹಾಗೆ ಹೇಳುತ್ತಾರೆ ಎಂದು ಕೇಳಿ. ಅದಕ್ಕೆ ಅವರು ನಾನು ಅಲ್ಲಿಗೆ ಹೋಗಿ ಬಂದು ಊಟ ಮಾಡಿದ್ದು ನಿಜ ಎನ್ನುವುದಾದರೆ ಪ್ರಿವಿಲೆಜ್ ಕಮಿಟಿಗೆ ಹೋಗಲೇ ಬೇಕಾಗುತ್ತದೆ. ಏತಕ್ಕೋಸ್ಕರ ಹೇಳುತ್ತೇನೆಂದರೆ, ಇಂಥದ್ದು ಪ್ರತಿ ದಿವಸ, ಪ್ರತಿ ನಿತ್ಯ ನಮ್ಮ ಅನುಭವದಲ್ಲಿ ನಡೆಯುತ್ತಿರುವ ವಿಚಾರಗಳು. ಸಾಮಾನ್ಯವಾಗಿ ಹೇಳಬೇಕಾದರೆ ಲಘುವಾಗಿ, ತಮಾಷೆಯಾಗಿ ಹೇಳುವುದು ಬೇರೆ ಇರುತ್ತದೆ ; ಲೈಟರ್ ವೀನ್ ಎಂದು ಹೇಳುತ್ತಾರಲ್ಲ ಹಾಗೆ. ಉಡಾಫೆ ಮಾಡಿ ಹೇಳುವುದು ಸರಿಯಿಲ್ಲ. ದಯವಿಟ್ಟು ಇದನ್ನು ಪ್ರಿವಿಲೆಜ್ ಕಮಿಟಿಗೆ ಕಳಿಸಿಕೊಡಿ, ಅಲ್ಲಿ ವಿಚಾರಣೆಯಾಗಿ ಬರಲಿ.

†ಶ್ರೀ ಎಚ್. ಎಂ. ಚನ್ನಬಸಪ್ಪ.—ರೂಲ್ 180ರ ಪ್ರಾವಿಸೋದಲ್ಲಿ ಹೇಳಿರುವ ಪ್ರಕಾರ ತಮಗೆ ಅಧಿಕಾರವಿದೆ. ಯಾವ ಘಳಿಗೆಯಿಲ್ಲಿ ಬೇಕಾದರೂ ಕೂಡ ಪ್ರಿವಿಲೇಜ್ ಪ್ರಶ್ನೆಯನ್ನು ಪರಿಶೀಲನೆ ಮಾಡುವುದಕ್ಕೆ ತಮಗೆ ಅಧಿಕಾರವಿಲ್ಲ ಎನ್ನುವ ಪ್ರಶ್ನೆ ಇಲ್ಲ. ಆಪದ್ಧ, ಅಪ್ರಮಾಣಿಕತೆಯಿಂದ ಕೂಡಿದ ಹೇಳಿಕೆಯನ್ನು ಕೊಡತಕ್ಕುದ್ದು ನುಮಾರು 9 ವರ್ಷಗಳಿಂದಲೂ ಕೂಡ ಈ ಸರ್ಕಾರಕ್ಕೂ ಮತ್ತು ಹಿಂದಿನ ಸರ್ಕಾರಕ್ಕೂ ಅನೂಚಾನವಾಗಿ ಬಂದ ಪದ್ಧತಿಯಾಗಿದೆ. ಅನೇಕವೇಳೆ ಅಪ್ರಮಾಣಿಕತೆಯಿಂದ ಕೂಡಿದ ಆಪದ್ಧವನ್ನು ನುಡಿದಂಥ ಸನ್ನಿವೇಶಗಳನ್ನು ಎತ್ತಿ ಎತ್ತಿ ತೋರಿಸಿದ್ದೇನೆ; ಅಂಕ ಅಂಶಗಳನ್ನು ಎತ್ತಿ ಅವರು ಹೇಳಿದುದನ್ನು ಒತ್ತಿ ಹೇಳಿದ್ದೇನೆ. ತಮ್ಮ ಕಡೆಗೆ ಒಂದು ಪುಸ್ತಕವನ್ನೇ ಕೊಟ್ಟೆ. ಹಾಗೂ ತಾವು ಕ್ರಮ ತೆಗೆದುಕೊಳ್ಳಲಿಲ್ಲ. ಎಷ್ಟು ಆಪದ್ಧ ಹೇಳಿದರೂ ಕೂಡ ಬಚಾಯಿಸಿಕೊಳ್ಳಬಹುದು ಎನ್ನುವ ಧೈರ್ಯ ಅವರಿಗೆ ಇದೆ. ಗೋದಾವರಿ-ಕೃಷ್ಣ ನೀರಿನ ವಿಷಯ ಚರ್ಚೆಗೆ ಬಂದಾಗ ಅಪದ್ಧಗಳ ಸುರಿಮಳೆಯನ್ನೇ ತಮ್ಮ ಮುಂದೆ ಇಡುತ್ತೇನೆ. ಅದರ ಮೇಲೆ ತಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಶ್ರೀಮಾನ್ ಮಾಗಾವಿ ಅವರು ಆತುರದಲ್ಲಿ ಹೇಳಿದರೋ, ಉತ್ಸಾಹದಲ್ಲಿ ಹೇಳಿದರೋ ಗೊತ್ತಿಲ್ಲ. ಒಂದೇ ಒಂದು ಸುಳ್ಳು ಮಾತು ಹೇಳಿದ್ದರಿಂದ ರಾಡ್ ಪೊಮ್ಪೂಮ ಅದೇ ಘಳಿಗೆಯಲ್ಲಿ ರಾಜೀನಾಮೆಯನ್ನು ಕೊಟ್ಟು ಹೋಗಬೇಕಾಯಿತು, ಸರ್ಕಾರವೂ ಕೂಡ ಹೋಗಬೇಕಾಯಿತು. ಆದ ಕಾರಣ ಪ್ರಜಾಪ್ರಭುತ್ವ ಬದುಕಿರಬೇಕಾದರೆ, ಪ್ರಜಾಪ್ರಭುತ್ವವನ್ನು ಪಾಲಿಸಬೇಕಾದರೆ, ಈ ಪ್ರಸಂಗವನ್ನು ನಿರ್ದಾಕ್ಷಿಣ್ಯವಾಗಿ ನಾವು ವಿಚಾರ ಮಾಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕಾದ್ದು ಅವಶ್ಯ ಮತ್ತು ಬಹಳ ಪ್ರಾಮುಖ್ಯ. ಆದ್ದರಿಂದ ಪ್ರಿವಿಲೇಜ್ ಪ್ರಶ್ನೆಯನ್ನು ಈಗಲೇ ಪರಿಶೀಲನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

†ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಮುದ್ದೇಬಿಹಾಳ ಕ್ಷೇತ್ರದ ಸದಸ್ಯರು ಕೇಳಿದಂಥ ಪ್ರಶ್ನೆಗೆ ಉತ್ತರ ಮಾನ್ಯ ಲಕ್ಕಪ್ಪನವರ ಹೆಸರಿನಲ್ಲಿ ಆಚ್ಚಾಗಿದೆ. ತಾವು ಸಭೆಯ ಅಧ್ಯಕ್ಷತೆ ವಹಿಸಿ, ಉತ್ತರ ಕೊಟ್ಟಂಥ ಉಪಮಂತ್ರಿಗಳು ಏನೇನನ್ನು ಹೇಳಿದ್ದಾರೆ ಎನ್ನುವುದನ್ನು ತಾವು ಕೇಳಿದ್ದೀರಿ. ಇದು ಸಭೆ. ನಮ್ಮಲ್ಲಿ ಬಹಳ ಸಲ ಹಕ್ಕು ಬಾಧ್ಯತೆಗಳ್ಚ್ಯುತಿ ಬಂದಿದೆ ಎಂದು ತಾವು ಶಿಕ್ಷೆ ಕೊಡುತ್ತಿದ್ದೀರಿ, ಕೊಟ್ಟಿದ್ದೀರಿ. ಅಧ್ಯಕ್ಷರು ಕೊಡಬೇಕು, ಶಿರಬಾಗಿ ಅದನ್ನು ನಾವು ಪಾಲನೆ ಮಾಡಬೇಕು. ಇದು ಸಭೆಯ ಘನತೆ-ಗೌರವಗಳಿಗೆ ಸಂಬಂಧಪಟ್ಟಿದೆ. ಈ ದಿವಸ ಕನ್ನಡದ ಪ್ರಶ್ನೋತ್ತರಗಳ ಪಟ್ಟಿ ನನ್ನಲ್ಲಿದೆ. ತಮ್ಮ ಕಣ್ಣು ಮುಂದೆ ಇದು ನಡೆದಿದೆ, ಕ್ಯಾಬಿನೆಟ್ ಮಿನಿಸ್ಟರ ಹೆಸರು ಉತ್ತರದ ಪಟ್ಟಿಯಲ್ಲಿ ಮುದ್ರಿಸಲಾಗಿದೆ. ಉತ್ತರಕೊಡಲು ಜವಾಬ್ದಾರಿ ಇರಬಹುದು. ಉಪ ಸಚಿವರು ಉತ್ತರ ಕೊಡುತ್ತಿದ್ದಾರೆ. ನಮ್ಮ ಸಭೆಯಲ್ಲಿ ಆ ಬಗ್ಗೆ ಇದುವರೆಗೆ ಪ್ರಶ್ನೆ ಮಾಡಿಲ್ಲ. ನಾವು ಕೊಟ್ಟ ಉತ್ತರಗಳನ್ನು ಯಾರೇ ಕೂಡಲಿ ಒಪ್ಪಿಕೊಳ್ಳುತ್ತಿದ್ದೇವೆ. ಪಾರ್ಲಮೆಂಟಿನಲ್ಲಿ ಸಾಮಾನ್ಯವಾಗಿ ಹುಡುಗರು ಎಂಬ ಶಬ್ದವನ್ನು ಪಯೋಗಿಸುತ್ತಾರೆ. ಇಂಗ್ಲೀಷಿನಲ್ಲಿ ಬಾಯ್ಸ್ ಎಂದು ಕರೆಯಬಹುದು, ಬಾಯ್ಸ್ ಇನ್ ದಿ ಮಿನಿಸ್ಟ್ರಿ ಎಂದು ಹೇಳಬಹುದು. ಅದನ್ನು ವಾಪಸು ತೆಗೆದುಕೊಂಡಿದ್ದಾರೆ. ಇದೇ ರೀತಿಯಲ್ಲಿ ಕನ್ನಡದಲ್ಲಿ ಬಾಯಿಗೆ ಬಂದಹಾಗೆ ಎಂದು ಹೇಳುವುದುಂಟು. ಅದನ್ನು ಇಂಗ್ಲೀಷಿಗೆ ತರ್ಜುಮೆ ಮಾಡಿದರೆ ಪಾರ್ಲಮೆಂಟರಿಯಾಗುತ್ತದೆಯೇ ! ಅದೇನೇ ಇರಲಿ, ಈ ವಿಷಯದ ಬಗ್ಗೆ ಮಾತನಾಡುವುದಿಲ್ಲ.

ಈಗ ಗಮನಕ್ಕೆ ತರಬೇಕಾಗಿರುವುದು ಮಾನ್ಯ ಸಿದ್ದವೀರಪ್ಪನವರು, ಚನ್ನಬಸಪ್ಪನವರು ಹೇಳಿದ್ದಾರೆ. ಶ್ರೀ ಪಂಚಗಾವಿಯವರು ಈ ಸಭೆಯ ಉಪಾಧ್ಯಕ್ಷರಾಗಿದ್ದರು. ಈ ಹಕ್ಕುಭಾದ್ಯತೆ ಪ್ರಶ್ನೆ ಬಂದಿರುವಾಗ ನಾನು ಪ್ರೊಪ್ಯೂಮಾ ಕೇಸಿನತನಕ ಹೋಗುವುದಿಲ್ಲ, ಇಂಗ್ಲೆಂಡಿನಲ್ಲಿ ಅಸತ್ಯ ಹೇಳಿ ರಾಜೀನಾಮೆ ಕೊಟ್ಟಿರುವ ವಿಚಾರಕ್ಕೆ ನಾನು ಹೋಗುವುದಿಲ್ಲ. ನನ್ನಲ್ಲಿ ಕನ್ನಡ ಮತ್ತು ಇಂಗ್ಲೀಷಿನ ಪ್ರಶ್ನೋತ್ತರಗಳ ಪಟ್ಟಿ ಎರಡೂ ಇವೆ. ಕನ್ನಡದಲ್ಲಿ ಪ್ರಶ್ನೆ ಈ ರೀತಿ ಇದೆ. ''ತಾಳೆ ಕೋಚೆ-ಹೂವಿನ ಹಿಪ್ಪರಗಿ ರಸ್ತೆಯನ್ನು ಎಂದಿನಿಂದ ದುರಸ್ತು ಮಾಡಿರುವುದಿಲ್ಲ.'' ಇಂಗ್ಲೀಷಿನಲ್ಲಿ ರಿಪೇರ್ ಎಂಬ ಶಬ್ದವನ್ನು ಉಪಯೋಗಿಸಿದ್ದಾರೆ. ಮೈನ್‌ಟಿನೆನ್ಸ್ ಬೇರೆ, ರಿಪೇರಿ ಬೇರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಬಜೆಟ್ಟಿನಲ್ಲಿ ಹಣ ಒದಗಿಸಲಾಗಿತ್ತೇ ಎಂದು ಕೇಳಿರುವುದಕ್ಕೆ ಒದಗಿಸಲಾಗಿದೆ. ನಿಜ ಎಂದು ಒಂದು ಕಡೆ ಹೇಳಿದ್ದಾರೆ. ಪ್ರತಿ ವರ್ಷ ದುರಸ್ತಿ ಮಾಡಿದ್ದೇವೆ ಎಂದು ಒಂದು ಕಡೆ ಹೇಳಿವ್ವಾರೆ. ಇದಕ್ಕೆ ಎಷ್ಟು ಹಣ ಖರ್ಚುಮಾಡಲಾಗಿದೆ. ಕಂಟ್ರಾಕ್ಟರು ಯಾರು, ಏನು ಎಂಬ ವಿವರ ಯಾವುದೂ ಸಭೆಗೆ ಗೊತ್ತಿಲ್ಲ. ಅಲ್ಲ ಏನೂ ರಿಪೇರಿ, ದುರಸ್ತಿ ಆಗುತ್ತಿಲ್ಲ ರಸ್ತೆ ಬಹಳ ಕೆಟ್ಟಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ಸದಸ್ಯರೊಬ್ಬರು 20 ಮೈಲಿಗಳ ಮೇಲೆ ಆ ರಸ್ತೆಯಲ್ಲಿ ಹೋಗುವುದೇ ಕಷ್ಟ ಎಂದು ಹೇಳಿದಾಗ ಮಂತ್ರಿಗಳು ತಮಾಷೆಯಾಗಿ ಉತ್ತರ ಕೊಟ್ಟರು. ನನಗೆ ಸರಿಯಾಗಿ ಕೇಳಿಸಲಿಲ್ಲ. ಅದು ರಿಕಾರ್ಡಿನಲ್ಲಿದೆ, ನೋಡಿ. ಆಮೇಲೆ ಮೈನ್ ಟಿನೆನ್ಸ್ ಎಂಬುದೇ ದುರಸ್ತಿ ಎಂದು ಹೇಳುವುದಾದರೆ.....

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೈನ್‌ಟಿನೆನ್ಸ್ ಎಂದರೆ ಸಾಲಾಬಾದು, ರಿಪೇರಿ ಎಂದರೆ ದುರಸ್ತಿ.

ಶ್ರೀ ಎಸ್. ಗೋಪಾಲಗೌಡ.—ಎರ್ಡ್ಲಾ ರಸ್ತೆಗಳಿಗೂ ಮೈನ್‌ಟಿನೆನ್ಸ್ ಎಂದು ಮಂತ್ರಿಗಳು ಹೋಗುವಾಗ ಮಣ್ಣು ತೂರುತ್ತಾರೆ, ಅದನ್ನು ದುರಸ್ತಿ ಎಂದು ಹೇಳುವುದಿಲ್ಲ. ಒಂದು ಸೇತುವೆಗೆ ಜಖಂ ಆಗಿದ್ದರೆ, ಅಥವ ರಸ್ತೆ ಕೊರೆದುಹೋಗಿದ್ದರೆ ದುರಸ್ತಿ ಮಾಡಬೇಕು. ಬರೀ ಮೈನ್ ಟಿನೆನ್ಸ್ ಪ್ರಶ್ನೆಯಾದರೆ 4 ಲಕ್ಷ 50 ಸಾವಿರ ರೂಪಾಯಿ ಅಂದಾಜು ಮಾಡುವ ಅವಶ್ಯಕತೆಯೇ ಬರುವುದಿಲ್ಲ, ಅದು ದುರಸ್ತಿಗಿಲ್ಲ ಬರುತ್ತದೆ, ಇದರ ಜೊತೆಗೆ ಅವರು ಹೇಳಿದ್ದಾರೆ: ಈ ಅಂದಾಜು ಮಾಡಿದ ಪ್ರಕಾರ ಏನು ಹಣ ಒದಗಿಸಿದ್ದೀವೆ ಅದು ಸಾಲದು ಅಂತ ಕಂಡುಬಂದದ್ದರಿಂದ ಮತ್ತೆ ಪುನಃ ರೀ ಎಸ್ಟಿಮೇಟ್ ಮಾಡುತ್ತೇವೆ. 5 ಲಕ್ಷ ಚಿಲ್ಲರೆ ರೂಪಾಯಿ ಆಗುತ್ತದೆ ಎಂದು ಹೇಳಿದ್ದಾರೆ. ಒಂದಕ್ಕೊಂದು ಸಂಬಂಧವಿಲ್ಲದೇ ಇರತಕ್ಕ ಸತ್ಯವನ್ನು ಮರೆಮಾಚತಕ್ಕ, ಈ ಪ್ರಶ್ನೆಯನ್ನು ಕೇಳಿದ ಸದಸ್ಯರನ್ನು ಅವಮಾನಿಸತಕ್ಕಂಥ, ತಪ್ಪು ದಾರಿಗೆ ಎಳೆಯತಕ್ಕ, ಈ ಎರ್ಡಾ ಕೆಲಸಗಳನ್ನೂ ಈ ಅಚ್ಚು ಮಾಡಿದ ಉತ್ತರದಲ್ಲಿ ಸರ್ಕಾರದವರು ಕೊಟ್ಟಿದ್ದಾರೆ. ಇದಕ್ಕಿಂತ ಲಘುವಾಗಿ ಈ ಪ್ರಶ್ನೆಗೆ ಉಪ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ ಎಂದು ನಾನು ಭಾವಿಸುತ್ತೇನೆ. ಈ ಮನೆಯಲ್ಲಿ ಸತ್ಯ ವಲ್ಲದ, ಗೊತ್ತಿಲ್ಲದೇ ಇರತಕ್ಕ ವಿಷಯಗಳನ್ನು ಹೇಳಬಾರದು, ಪ್ರಾಮಾಣಿಕವಾಗಿರುವ, ಸತ್ಯವಾದ ವಿಷಯಗಳನ್ನು ಹೇಳಬೇಕು, ತಿಳಿದುಕೊಂಡು ಹೇಳಬೇಕು. ಶ್ರೀಮಾನ್ ಸಿದ್ದವೀರಪ್ಪನವರು ಉಡಾಫೆ ಎಂಬ ಪದವನ್ನು ಹೇಳಿದರು. ನಾನು ಉಡಾಫೆ ಅಂತ ಹೇಳುವುದಿಲ್ಲ. ಜವಾಬ್ದಾರಿ ರಹಿತವಾಗಿ ಮಾತನಾಡುವುದು ಏನಿದೆ ಇದು ಬಹಿರಂಗ ಸಭೆಗಳಲ್ಲ, ಚುನಾವಣಿಗಳಲ್ಲ ಅಥವಾ ಯಾವುದಾದರೂ ಕಡೆಯಲ್ಲ ಎಲ್ಲರೂ ಸೇರಿಕೊಂಡು ಹರಟೆ ಹೊಡೆಯುವ ಕಾಲವಲ್ಲ ಅದೂ ಇದೂ, ಏನೋ ಅಂತೆ ಕಂತೆ ಹೇಳಬಹುದೇ ಹೊರತು ರೆಕಾರ್ಡ್‌ನಲ್ಲಿ ಹೋಗುವಂತಹ ವಿಷಯಗಳ ಬಗ್ಗೆ ಈ ತರಹ ಲಘುವಾಗಿ ಉತ್ತರ ಕೊಡಬಾರದು. ಈ ವಿಷಯವನ್ನು ತಾವು ಸಮಗ್ರವಾಗಿ ಪರಿಶೀಲಿಸಿ ಇದನ್ನು ಹಕ್ಕುಬಾಧ್ಯತೆಯ ಸಮಿತಿಗೆ ಕಳುಹಿಸಿಕೊಡಬೇಕು, ಕೊಡುವುದಕ್ಕೆ ಇದು ಬಹಳ ಅರ್ಹವಾದ ವಿಷಯ. ಇದು ಒಂದನ್ನು ವಿಚಾರಣೆಗೆ ಗುರಿಪಡಿಸಿದರೆ ಇದರಿಂದ ಎಷ್ಟೋ ವಿಷಯ ಗಳು ಸರಿಹೋಗುತ್ತವೆ ಎಂದು ಭಾವಿಸುತ್ತೇನೆ. ಇದನ್ನು ತಾವು ದಯವಿಟ್ಟು ಮಾಡಿಕೊಡಬೇಕು.

Mr. DEPUTY SPEAKER.—I will examine the proceedings and consider the matter. It will be taken up during the course of the day.

ಶ್ರೀ ಎನ್. ಶಿವಪ್ಪ.—ಇವತ್ತೇ ಈ ವಿಚಾರದಲ್ಲಿ ತಾವು ಏನು ತೀರ್ಮಾನಕೊಡುತ್ತೀರಿ ಎಂಬುದನ್ನು ಹೇಳಿಬಿಡಿ.

ಉಪಾಧ್ಯಕ್ಷರು.—ಅದಕ್ಕೆ ಸ್ವಲ್ಪ ಕಾಲಾವಕಾಶಬೇಡವೇ!

ಶ್ರೀ ಎಚ್. ಎನ್. ನಂಜೇಗೌಡ.—ನನ್ನ ಒಂದು ಕ್ರಿಯಾರೋಪವಿದೆ. ಹಕ್ಕಿನ ಚ್ಯುತಿಗೆ ತಂದಂತಹ ನೋಡಿನೆಯ ಮೇಲೆ ಮಾತನಾಡುವಾಗ ರೆಕಾರ್ಡ್ ನೋಡುತ್ತೇನೆ ಎಂದು ತಾವು ಹೇಳುತ್ತಾ ಇದ್ದೀರಿ. ಇದಕ್ಕೆ ಸಂಬಂಧಪಟ್ಟ ಉಪಮಂತ್ರಿಗಳು ಗುಂಡುಕಲ್ಲಿನ ಹಾಗೆ ಇದ್ದೇ

(ಶ್ರೀ ಎಚ್. ಎನ್. ನಂಜೇಗೌಡ)

ಕುಳಿತಿದ್ದಾರೆ, ಸಭೆಯಲ್ಲಿ ಏನು ನಡೆಯುತ್ತಾ ಇದೆ ಎಂಬುದನ್ನು ಗಮನಿಸುತ್ತಾ ಇದ್ದಾರೆ. ಆ ರೀತಿ ಹೇಳದಿದ್ದರೆ ಹಾಗೆ ಹೇಳಲಿಲ್ಲ ಅಂತ ಹೇಳುವುದಕ್ಕೆ ಅವರಿಗೆ ಈ ಸಭೆಯಲ್ಲಿ ಅವಕಾಶವಿದ್ದೇ ಇರುತ್ತದೆ. ಇದನ್ನೆಲ್ಲಾ ಅವರು ನಮ್ಮನೆ ಕೇಳಿಕೊಂಡು ಕುಳಿತಿರುವುದನ್ನು ನೋಡಿದರೆ ಅವರು ತಾವು ಹೇಳಿದ್ದನ್ನು ಪರೋಕ್ಷವಾಗಿ ಒಪ್ಪಿಕೊಂಡಂತೆ ಆಯಿತು. ನೇರವಾಗಿ ಇದು ಸಾಬೀತಾಗಿರುವುದರಿಂದ ನನ್ನಮಟ್ಟಿಗೆ ಹೇಳುವುದಾದರೆ ಅವರು ಇದನ್ನು ನಿರಾಕರಿಸದೇ ಇರುವುದರಿಂದ ತಾವು ಇದರ ಬಗ್ಗೆ ತಮ್ಮ ಕನ್‌ಸಿಡರ್ಡ್ ರೂಲಿಂಗ್ ಕೊಡುತ್ತೇನೆ ಎಂದು ಹೇಳುವುದಕ್ಕೆ ಹೋಗದೆ ನೇರವಾಗಿ ಇದನ್ನು ಹಕ್ಕುಬಾಧ್ಯತೆಯ ನಮಿತಿಗೆ ಕಳುಹಿಸಬೇಕೆಂದು ಹೇಳುತ್ತೇನೆ. ಇಂಥ ಜವಾಬ್ದಾರಿ ರಹಿತವಾದ ಹೇಳಿಕೆಗಳನ್ನು ಕೊನೆಗಾಣಬೇಕು. ಇದನ್ನು ತಾವು ನಡೆಸಿಕೊಡಬೇಕು. ಇದು ನನ್ನ ಪಾಯಿಂಟಾಫ್ ಆರ್ಡರ್.

ಉಪಾಧ್ಯಕ್ಷರು.—ನಾನು ಆ ರೀತಿ ಯಾವುದನ್ನೂ ಕಡೆಗಾಣಿಸಿ ನೋಡಿಲ್ಲ. ಮೊನ್ನೆಯ ದಿನ ಒಂದು ಪ್ರಿವಿಲೇಜ್ ಮೋಷನ್ ಬಂದಿತ್ತು. ಅದರ ಬಗ್ಗೆ ಕನ್‌ಸರ್ಪ್‌ಮಾಡಿ.....

ಶ್ರೀ ಎಚ್. ಎನ್. ನಂಜೇಗೌಡ.—ಇಲ್ಲಿ ಆ ಪ್ರಿವಿಲೇಜ್ ಮೋಷನ್ ಬಂದು ಚರ್ಚೆಯಾಗಿದೆ, ತಾವು ರೆಕಾರ್ಡ್‌ನ್ನು ತೆಗೆಸಿನೋಡಿರಿ. ಪರಿಶೀಲನೆ ಮಾಡಿ. ಅಧ್ಯಕ್ಷರು ಇಲ್ಲಿ ಇನ್ನೊಬ್ಬರನ್ನು ರಕ್ಷಿಸುವುದಕ್ಕೆ ಪ್ರಯತ್ನಮಾಡಬಾರದು. ನಮ್ಮ ಹಕ್ಕನ್ನೂ ಉಳಿಸುವುದಕ್ಕೆ ತಾವು ಪ್ರಯತ್ನಮಾಡಿ.

Sri AZEEZ SAIT.—The House is seized of the matter. On the consensus of the House, the privilege motion may be taken up very seriously. If for any better reasons known to you, if the matter is to be shelved, it is open to the member concerned to refute or say something. You can call upon the hon. Member to have his say. It is a very serious matter.

ಉಪಾಧ್ಯಕ್ಷರು.—ನಾನು ಯಾರನ್ನು ಉಳಿಸಬೇಕೆಂದು ಪ್ರಯತ್ನಮಾಡಲಿಲ್ಲ. ತಕ್ಷಣ ಇದನ್ನು ತೀರ್ಮಾನಮಾಡಬೇಕೆಂದೂ ಹೇಳಲಿಲ್ಲ. ಪರಿಶೀಲನೆ ಮಾಡಿ ಎಂದು ಮಾನ್ಯ ಶಿವಪ್ಪನವರೂ ಹೇಳಿದ್ದಾರೆ.....

ಶ್ರೀ ಅಜೀಜ್ ಸೇಟ್.—ತಾವು ಕುಳಿತಿರತಕ್ಕ ಕುರ್ಚಿ ಬಹಳ ಪವಿತ್ರವಾದದ್ದು. ತಾವು ಯಾವಾಗ್ಲೂ "ಸಿಡೌನ್, ಒಬ್ಬೇ ದಿ ಥೇರ್, ರನ್‌ಹಕ್ಟ್ ದಿ ಚೇರ್" ಈ ಮೂರು ಶಬ್ದಗಳನ್ನು ಬಿಟ್ಟರೆ ಬೇರೆನೂ ಹೇಳುವುದಿಲ್ಲ. There is a serious charge not against an ordinary Member but against an Hon. Deputy Minister who holds a responsible post and who has to behave properly. If such an important motion is ignored, I do not think we will get justice in this House.

Mr. DEPUTY SPEAKER.—Order, order. I request the hon. Member to resume his seat.

ಶ್ರೀ ವಾಟಾಳ್ ನಾಗರಾಜ್.—ಬಹಳ ಜವಾಬ್ದಾರಿಯಿಂದ ಅವರು ನಡೆದುಕೊಳ್ಳುತ್ತಿದ್ದಾರೆಂದು ನಾನು ತಿಳಿದಿದ್ದೇನೆ. ನಾನು ಕೇಳುವಂಥ ಪ್ರಶ್ನೆಗೆ ಜವಾಬ್ದಾರಿಯುತವಾದ ಉತ್ತರ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಹಿಂದೆ ಇಂತಹ ಒಂದು ಸಂದರ್ಭದಲ್ಲಿ ಈ ಸಭೆಯಲ್ಲಯೇ ಪ್ರಿವಿಲೇಜ್ ಮೋಷನ್ ಮೂವ್ ಮಾಡಿದ ತಕ್ಷಣ ತಾವು ರೂಲಿಂಗ್ ಕೊಟ್ಟಿದ್ದೀರಿ. ಮಾನ್ಯ ಉಪಮಂತ್ರಿಗಳಾದ ಶ್ರೀಮಾನ್ ಮಾಗಾವಿಯವರು ಒಂದು ಮಾತನ್ನು ಹೇಳಿದರು ನಾನು ಶ್ರೀ ಗುರೆಡ್ಡಿಯವರ ಮನೆಗೆ ಹೋಗಿ ಭೋಜನ ಮಾಡಿಕೊಂಡು ಬಂದೆ ಎಂದು. ನಮ್ಮ ಮನೆಗೆ ಅವರು ಬರಲಿಲ್ಲ ಎಂಬುದಾಗಿ ನನ್ನ ಸ್ನೇಹಿತರು ಹೇಳಿದರು. ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಇದ್ದಾರೆ. ಇದು ಹಕ್ಕು ಬಾಧ್ಯತೆಗೆ ಸಂಬಂಧಪಟ್ಟ ಪ್ರಶ್ನೆ. ಇದನ್ನು ಹಕ್ಕುಬಾಧ್ಯತೆಗೆ ಹೋಗುವುದಕ್ಕೆ ಅವಕಾಶ ಕೊಡಬೇಕು ಎಂಬುದಾಗಿ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಈಗಾಗಲೇ ಹಲವಾರು ಜನ ಸದಸ್ಯರು ಈ ವಿಷಯದ ಬಗ್ಗೆ ಮಾತನಾಡಿದ್ದಾರೆ. ಈ ವಿಚಾರದಲ್ಲಿ ನಾನು ಅಧ್ಯಕ್ಷರ ಗಮನವನ್ನು ಸೆಳೆಯಲು ಪ್ರಯತ್ನ ಪಟ್ಟಿದ್ದೇನೆ. ರೂಲ್ 179ರ ಪ್ರಕಾರ ಹಕ್ಕುಬಾಧ್ಯತೆ ನಿರ್ಣಯವನ್ನು ನಾವು ತೆಗೆದುಕೊಳ್ಳಬಹುದು.

ತಾವು ಕನ್‌ಸೆಂಟ್ ಕೊಡಬೇಕೆಂಬ ಬಗ್ಗೆ ಮಾನ್ಯ ಶ್ರೀ ಚನ್ನಬಸಪ್ಪನವರು ಸೂಚನೆಯನ್ನು ತಮಗೆ ಕಳುಹಿಸಿದ್ದಾರೆ. ಮಾನ್ಯ ಶ್ರೀ ಗೋಪಾಲಗೌಡರ ಬಗ್ಗೆ ಮೊನ್ನೆ ತಾನೇ ನಡೆದಂಥ ಹಕ್ಕು ಭಾಧ್ಯತೆಯ ನಂಬಂಧದಲ್ಲಿ ಪಾರ್ಲಿಮೆಂಟ್ ಮಿನಿಸ್ಟರ್ ಪ್ರಿವಿಲೇಜ್ ಪೋಷನ್ನನ್ನು ಇಲ್ಲಿ ಮೂವ್ ಮಾಡಿದಾಗ ತಾವು ಕನ್‌ಸೆಂಟ್ ಕೊಡುವುದಕ್ಕೆ ಮೊದಲೇ ಮಾನ್ಯ ಶ್ರೀ ಗೋಪಾಲಗೌಡರ ಅಭಿಪ್ರಾಯವನ್ನು ಪಡೆದಿರಿ. ಹಾಗೆಯೇ ಮಾನ್ಯ ಶ್ರೀ ಮಾಗಾವಿಯವರು ಏನು ಹೇಳಬೇಕೆನ್ನುವುದನ್ನು ಅವರು ಹೇಳಬಹುದು. ಅದು ಹೋಗಲೇ ಬೇಕೆಂದು ನಂದರ್ಭ ಬಂದಾಗ್ಗೆ ಹೋಗಲೇ ಬೇಕಾಗುತ್ತದೆ. ಇಲ್ಲಿಯೇ ಇದನ್ನು ಬಗೆಹರಿನಬೇಕಾದರೆ, ಮಾನ್ಯ ಶ್ರೀ ಗೋಪಾಲಗೌಡರಿಗೆ ಅವಕಾಶ ಕೊಟ್ಟಂತೆ ಮಾನ್ಯ ಶ್ರೀ ಮಾಗಾವಿಯವರ ಹೇಳಿಕೆಯನ್ನು ತಾವು ಮೊದಲೇ ಪಡೆಯಬಹುದು. ಆಗ ಯಾವ ಕಾಲದಲ್ಲಾದರೂ ಈ ಪ್ರಿವಿಲೇಜ್ ಮೋಷನ್ನನ್ನು ತೆಗೆದುಕೊಳ್ಳಬಹುದು ಮತ್ತು ಮೂವ್ ಮಾಡಬಹುದು. ರಿಕಾರ್ಡ್‌ನ ನೋಡಿ ಪ್ರಿವಿಲೇಜ್ ಪೋಷನ್ ಬಗ್ಗೆ ತೀರ್ಮಾನ ಮಾಡಬಹುದು. ಇದಕ್ಕೆ ಪ್ರಾಶಸ್ತ್ಯ ಕೊಡಬೇಕು. ಏಕೆಂದರೆ ಇದು ಹಕ್ಕುಬಾಧ್ಯತೆಯ ಪ್ರಶ್ನೆ. ಆದ್ದರಿಂದ ತಾವು ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ತಮ್ಮ ಒಪ್ಪಿಗೆಯನ್ನು ಕೊಡಬೇಕು. ತಾವು ಕನ್‌ಸೆಂಟ್ ಕೊಡಬೇಕು, ಆಮೇಲೆ ಅದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬಹುದು.

ಉಪಾಧ್ಯಕ್ಷರು.—ಪ್ರೊಸೀಡಿಂಗ್ಸನ್ನು ಈ ದಿವಸವೇ ತಂಸಿ ಅದನ್ನು ಪರಿಶೀಲನೆ ಮಾಡಿ ನೋಡುತ್ತೇನೆ.

Bangalore, Karnataka and Mysore Universities Bill, 1969

Mention to consider—(Debate continued)

Sri L. SRIKANTIAH (Nanjangud). Mr. Speaker, resuming what I have stated yesterday, I shall not take much time of the House except adding a few comments here and there.

The object with which the Government is thinking of bringing this amendment, amending section 11, appears to me that there is something more behind it than what appears. The facts are there which indicate that in the Bangalore University for sometime the Vice-Chancellor was absent and somebody was put as officiating Vice-Chancellor. The Government must have, perhaps, smelt a small rat. There is positive evidence to show that the Government is hesitating to probe into the matter. During that interregnum a charge is levelled that about 4 appointments in the Engineering College, 8 appointments in the Central College and 8 appointments in the administration, were proposed. It is one of the specific charges that during this interregnum a grand plan was formed to foist these appointments in the university to the best of their ability and ground was laid to fill these places with persons who are close relatives. Naturally rumours started in the university campus and had its effect in the impressionable minds of the students which are already distrurbed. This information has come to them as a bolt from the blue.

3-30 P.M.

I had an opporutnity to bring to the notice of the Government and the concerned authority, especially the Ministry, the need to probe into

(SRI L. SRIKANTAIAH)

this in a dispassionate manner whether this period of interregnum was not utilised by whoever he may be when he was occupying that post to mis-utilise that power and authority. Normally I go to the Bar Association to take my food and I have to go in front of the University College to reach the Bangalore Bar Association and I can closely hear what the students are talking about. Probably, in order to overcome the difficulty the Government has now opened its eyes to fill up what is called the temporary vacancy by amending section 11 of the Bangalore University Act. I am glad that at least now Government has come forward with a measure to amend this provision. It is high time that Government opened its eyes and took a dispassionate view. After all, there cannot be smoke without fire; somewhere there is fire. If we start with a pre-disposition, "I know Mr. X since his boyhood and he is not capable of it", I would rather caution that all that looks white is not milk.

In this connection, though it does not concern this aspect of the Bangalore University Act, I think it is my duty at this juncture to draw the attention of the Minister of Cabinet rank to what is happening in the University because the Government is also thinking of bringing many more amendments. I would like to read an excerpt from an article which has appealed to me and probably the writer has summarised the whole position of the Indian Universities in a lucid manner giving a gist of what I wanted to say. When my private Bill comes up I will give more details as to what exactly is happening there. The article has opened with the caption "Academic Colonialism : Native Style". We have heard of marriages of Italian style and French style. Here is an interesting article which opens with the caption "Academic Colonialism : Native Style". This article has appeard in 'Mainstream'.

> "But it is also important to consider another aspect of academic colonialism, namely, as it prevails within the educational organizations in the conntry.
>
> The situation in several institutes of higher learning and research is serious. The ways of workings of the educational bureaucracy in these citadels of so-called learning in India should be understood comprehensively and dealt with effectively. The Report of Public Accounts Committee of Parliament on a research institute in north India, the recent despatches in Times of India from one of its correspondents on the affairs of Allahabad and Lucknow Universities and the report of the Committee set up to go into the affairs of Banaras Hindu University a few years ago no doubt shed considerable light on the colonialism which has set in the field of educational administration. But this is not enough—the rotis getting worst. The public has to take a continuous and sustained interest in these matters and press the authorities to deal with the

indigenous version of academic colonialism. Take for instance the recruitment policy and other aspects of personnel policy of some of the educational empire-builders."

In fact, the reference to the appointments made during this interregnum has a close reflection in the article by the writer. The article further says :

"For the selection of the staff and research fellows, experts are included invariably in the selection committees. In principle, this is a right policy ; but over a period of time there has emerged a 'class' of people for whom 'being an expert' has become a profession and hence a vested interest. They are anxious to remain as 'experts' on as many selection boards as possible. Since it is the option of the education super-bosses to select them, these 'experts' become subservient to the heads of the institutions and the departmental heads. The institutions prefer these convenient 'experts' who can be managed to sing on the dotted line. Like professional mourners in the West, there are experts who are ever willing to please the authorities. Thus very often same experts are brought in for selection of candidates for all sorts of posts."

A recent judgment of our High Court in the case of one Sanskrit Professor is worth reading in this connection. It is an interesting judgment on a writ petition filed by Sri Siddappa Aradhya. The article further reads :

"A leading research institute calls the same experts for selecting various candidates be they for filling vacancies in West Asia Department or in International Politics Department or Soviet Studies and South Asian Studies and Chinese. The criteria of qualification for recruitment of candidates are so adjusted by the authorities in advance as to make sure that even the most impartial selection committees select the very candidates whom the authorities wish to prop up and reject those which they not wish to have. Sometimes the advertisements are purposely kept ambiguous. Sometimes different qualifications are stipulated for similar posts depending on the candidates to be taken. It has been seen that in one case a candidate who has a publication to his credit is rejected on the plea that these do not really reflect the eligibility of a candidate ; in other cases, the criteria of publications is so rigidly applied to the extent that even a petty article in some popular or non-descript journal is considered for the appointment".

MR. DEPUTY SPEAKER.—The Hon. Member can go into those details when the Bill standing in his name comes up before the House.

Sri L. SRIKANTIAH.—It is enough if at least the Government have opened their eyes. I may tell the Government that hereafter this interregnum will not be tolerated. At least here is an opportunity for the Ministry of Education to probe into this matter which forms one of the students' grievances.

Sri B. B. SAYANAK (Belgaum).—Mr. Deputy Speaker, Sir, I rise to oppose the Bangalore, Karnataka and Mysore Universities (Amendment) Bill, 1968. I know that the Bangalore University, the Karnataka University and the Mysore University are autonomous bodies, but there is no uniformity in these three University Acts even though these Universities are under the control of the Mysore Government.

I want to bring to the notice of this House the injustice has done to the Jyothi College by the Karnataka University at Belgaum. The Marathi people of Belgaum area wanted to start a college in Belgaum and so they formed a society by name Dakshin Maharashtra Sikshan Prasarak Mandal and they made an application to the Karnatak University to grant permission to start a college in Belgaum. The Karnatak University refused permission. Why? Because there are already two colleges started by the K.L.E. Society, namely, the Raja Lakhamagouda Science Institute and the Lingaraj College. More than 50 per cent of the students in those colleges are Marathi.

Mr. DEPUTY SPEAKER.—I am told the matter is pending before the Court and it is *sub judice*.

Sri B. B. SAYANAK.—I know, I am an advocate; what to speak, what not to speak. I want to point out how it is doing injustice to the Marathi people. The Karnatak University refused permission to this Society to start the college. So the Dakshin Maharashtra Sikshan Prasarak Mandal made an application to the Shivaji University in Maharashtra State and the Shivaji University granted permission to the Dakshin Maharastra Sikshan Prasarak Mandal, Belgaum, to start the College at Belgaum. What harm is there if Shivaji University have given permission to start the College? So the Jyothi College was started in Belgaum in June. But the Karnatak University has brought a stay.....

Mr. DEPUTY SPEAKER.—Since the matter is before the court, I request the Hon. Member not to go into it here. This is only an amending Bill.

Sri B. B. SAYANAK.—The Sivaji University granted permission, but the Karnatak University filed a case in the Civil Court, Belgaum, and obtained a stay order. The Dakshin Maharashtra Sikshan Prasarak Mandal filed an appeal against this order, but the Civil Court did not vacate the stay order. So now the Dakshin Maharashtra Sikshan Prasarak Mandal has filed a writ petition in the Supreme Court since this is a concurrent subject and because the Maharashtrians are thinking that the Mysore High Court will not give justice to them.

The Karnatak University did not give permission to start the Jyothi College because they think that if this college is started there would be a great loss to the Lingraj College and Raja Lakhmagouda College as all the Marathi boys would go to the Jyothi College. That is why they are not giving permission to the Jyothi College. This Karnatak University is a communal institution. It is a Lingayat University and it is doing injustice to the Maharashtrians. If you do not want the Maharashtrians let them go to their own state why you want to take objections for it.

Sri M. NAGAPPA.—On a point of order. ಈಗ ನಥೆಯು ಮುಂದೆ ಇರುವಂತಹ ತಿದ್ದುಪಡಿ ಕರ್ನಾಟಕ ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸದಸ್ಯರನ್ನು ಯಾರನ್ನು ಮಾಡಬೇಕು ಎಂಬ ಬಗ್ಗೆ. ಆದರೆ ಮಾನ್ಯ ಸದಸ್ಯರು ಯಾವುದೋ ಸೂಚ್ ಫೈರ್ ಆದ ವಿಚಾರವನ್ನು, ಅಡ್ಮಿಷನ್ ಕೊಟ್ಟಿಲ್ಲ ಎಂಬ ವಿಚಾರವನ್ನು ಹೇಳುತ್ತಿದ್ದಾರೆ. ರೂಲ್ 292ರ ಪ್ರಕಾರ ಆ ರೀತಿ ಮಾತನಾಡುವುದಕ್ಕೆ ಅವಕಾಶ ಇಲ್ಲ. ಅಲ್ಲದೆ ಅವರು ಕಮ್ಯುನರ್ ಹೆಸರನ್ನು ಈ ಸಮಯದಲ್ಲಿ ತರುತ್ತಿರುವುದು ಸರಿಯಿಲ್ಲ. ಅವರು ಮಾತನಾಡುತ್ತಿರುವುದು ಬಿರ್‌ನ ಪರಿಮಿತಿಯೊಳಗೆ ಬರುವುದಿಲ್ಲವಾದ್ದರಿಂದ ಆ ಬಗ್ಗೆ ತಾವು ತಮ್ಮ ರೂಲಿಂಗ್‌ನ್ನು ಕೊಡಬೇಕು.

Mr. DEPUTY SPEAKER.—I uphold the point of order raised by the Hon. Member Sri Nagappa. The Hon. Member is expected to speak on the Bill. He should not bring in any other matter.

Sri B. B. SAYANAK.—I know that, but I would ask the hon. Member when so many other Members were speaking here outside the purview of the Bill why were they not prevented and why are they raising points of order and trying to prevent me from speaking? Is it because I am a Maharashtrian ?

Mr. DEPUTY SPEAKER.—I have already said that there is a case pending before the court and that is why you should not refer to it here.

Sri B. B. SAYANAK.—I know my responsibility. The Mysore Government is thinking that the Maharashtra Government is giving full support to this Jyothi College and that is why they are not giving permission for starting of this College. I am of the opinion that if the Karnatak University ought to have granted permission to the Jyothi College, the Dakshin Maharashtra Sikshan Prasarak Mandal would not have approached the Shivaji University.

Coming to the Bill, it deals with the appointments of Vice-Chancellor and other officers. That is all very good. The Vice-Chancellors are appointed by the out-siders and the experts in India. I have no objection.

As regards representation, these universities are not giving representation to the students on these bodies and that is why there is this agitation in the student world. The students are the future citizens of India and they should behave well. But if they gherao the Vice-Chancellor and the Registrar, their action should be condemend not only in the public but also in the Assembly here.

With these words I thank the Chair for the time given to me.

† Sri P. B. NANDIHALI (Uchagaon).—Mr. Deputy Speaker, Sir, I wish to express some remarks on the Bangalore, Karnatak and Mysore Universities Amendment Bill, 1968. In the first instance, I wish to bring to the kind notice of the Government about the vacancy of the Vice-Chancellor. If the vacancy of the Vice-Chancellor occurs by reason of resignation or death, temporary appointment may be made. But, I do not understand why there is a provision for temporary appointment on expiry of the term. It is not necessary at all. Such a hasty appointment of Vice-Chancellor may give scope to an aspirant who is on the look out for a post. This will be a spring-board for such a person. There is every possibility of favouritism in appointing a person to such an important post. I suggest that in such an emergency, the rights should not be vested only in the Chancellor to appoint the Vice-Chancellor, but the Senate should make the appointment in consultation with the Chancellor. They can appoint the Secretary to Government, Education Department, or the Director of Collegiate Education, who can take charge temporarily, till permanent arrangement is made under the provisions of law.

Secondly, I wish to bring to the kind notice of the Government and the House that there must be uniformity in all the University Acts in appointments, etc. At present, there is no uniformity in these three Acts. The students also are not given opportunities to represent in all these Universities. The students of one University cannot go to another University and continue their studies. There is a great need for uniformity in laws in the State. Due to lack of uniformity in the laws and syllabus, there is no discipline in the students; there is unrest, and so many agitations are going on by the student population. The Government, according to me, must take a serious note of these things. They must study the problems of the students, and they must have some policy to slove their problems. In all the bodies of the University, proper representation to the students must be given.

I welcome the provision which seems to make the Director of Public Instruction a member of the Syndicate and the Academic Council of the three Universities. The Director of Public Instruction, who is responsible for the secondary education, must necessarily have co-ordinated interest in college education.

In this connection, I wish to express my sorrowful feeling about the functioning of the Karnatak University. In Chapter II - section 4 (12) and (16) there is a provision to admit educational institutions to the privileges of the University and to withdraw such privileges, and to make special provision for the spread of university education among classes and communities which are educationally backward. Sir, I do not want to go into the merits as some of my hon. friends have brought to the notice of the Government that the case of Jyothi College is in the Court. But, I cannot but take this opportunity to express the feelings and difficulties of the Marathi people of the border area. When there is a provision in the Karnatak University Act and when

the Hon. Chief Minister and the Education Minister are here, it will be a great mistake in a democratic set-up, as a representative of the area, not to express the feelings of the people whom I represent. Sir, the Dakshina Maharashtra Sikshan Samstha had applied.....

Sri K. V. SHANKARA GOWDA (Minister for Education).—Sir, there is no meaning in discussing Jyothi College issue. The final authority of granting affiliation vests with the Government. Government had not given its opinion about affiliation of the Jyothi College; they had neither said 'yes' or 'no'. Before that it was improper for the authorities to give affiliation. After hearing from the Government, whether they are giving affiliation or not, they could have approached the Court. Without knowing the reply of the Mysore Government, they have approached the Court. This is wrong.

Sri P. B. NANDIHALI.—Sir, I thank the Hon. Minister for expressing the facts but at the same time I want to bring to his notice...

4-00 P.M.

Sri V. N. PATIL.—May I request the Hon. Minister to throw some light on the merits of the case.

Sri K. V. SHANKARA GOWDA.—The matter is before the Court. I request the Hon. Member not to refer to it. Moreover, it has nothing to do with the Bill that is before the House.

Sri P. B. NANDIHALI.—Sir, it may not be out of the way to bring to the notice of the Hon. Minister that the College authorities had fulfilled all the conditions regarding starting of the college. I also know that the University Grants Commission too visited the place and encouraged the management to start the College and after that the management approached the Government with a request to accord permission. But up to the date of the starting of the college permission was not granted. There was a function arranged for inauguration and the Union Minister accompanied by the State Minister attended the function. It would have been better for the University to bring a stay order on the said function. In the hope that Government would give permission the students were admitted into the College and now these things are going on. In fact, I do not want to go into the merits of the case. But it is my bounden duty to bring to the kind notice of the Minister concerned the inconvenience caused to the students in not granting the permission to the said college. I know the progressive policy of the Government in the educational field. Then, Sir, the Karnatak University did not say anything in the matter. I do not know how the minority people are to get protection and how their institutions could be protected which are prepared to sacrifice for the progress of this country and the State in particular. I am afraid if the Marathi people have no future here, there is every possibility that the people might agitate against the Government. Therefore, I earnestly request

(SRI P. B. NANDIHALI)

the Government to reconsider and give full protection to the minorities, not only the Marathi people in the border areas but throughout the State. The Government should treat all people equally. If in this educational field politics is to enter and the Government and the Ministers are to yield to the pressures of some local people, I fail to understand how the integrity, unity and progress of the State and the nation could be maintained in future. The youth is the sword of the nation and if they treated in this manner without even assuring certainty of their education, I do not know how the country could progress. There have been provisions in the Acts pertaining to Universities and still people are not getting the rights and facilities that are provided therein.

With these words, I thank the Chair and conclude my speech.

Sri V. N. PATIL.—I may kindly be allowed for one minute to say something on this matter.

Mr. DEPUTY SPEAKER.—There are some amendments. After the amendments are moved, I will allow the member to speak.

ಶ್ರೀ ವಿ. ಎನ್. ಎಂ. ಕೊಟ್ರಬಸಯ್ಯ ಸ್ವಾಮಿ. – ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಮಂಡಿಸಿರುವ ಮಸೂದೆಯ ಬಗ್ಗೆ...

Sri V. N. PATIL.—You assured me that you are allowing me after the amendments are moved. But I want to know whether the Hon. Deputy Minister is replying to the debate. We are having 9 colleges in the Hyderabad Karnataka area. That is why it is very necessary for me to speak now only before he replies to the debate.

Mr. DEPUTY SPEAKER.—I have already said that I would allow him to speak out after the Minister finishes speech.

Sri V. N. PATIL.—What is the use if I speak after he finishes his reply ?

Mr. DEPUTY SPEAKER.—Time allowed for this Bill is only one hour. I have already called upon the Hon. Deputy Minister to reply.

Sri V. N. PATIL.—He is yielding. This is a policy matter.

Mr. DEPUTY SPEAKER.—I have already called upon the Hon. Deputy Minister.

Sri B. B. SAYANAK.—I rise on a point of order. When the Hon. Member is given permission, how can the Hon. Chair stop him from speaking and allow the Hon. Deputy Minister to speak ?

Mr. DEPUTY SPEAKER.—I have not allowed him to speak. I have called upon the Minister to speak.

† ಶ್ರೀ ವಿ. ಎನ್. ಎಂ. ಕೊಟ್ರಬಸಯ್ಯ ಸ್ವಾಮಿ.—ಮಾನ್ಯ ಸಭಾಪತಿಗಳೇ, ನಾನು ಸಭೆಯ ಮುಂದೆ ಮಂಡಿಸಿರತಕ್ಕ ಮಸೂದೆಯ ಬಗ್ಗೆ ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಸಭೆಯ ಮುಂದೆ ಇರತಕ್ಕ ಮಸೂದೆಯಲ್ಲಿ ಅಳವಡಿಸಿರತಕ್ಕ ವಿಷಯಗಳ ಬಗ್ಗೆ ಯಾರು ಯಾವ ವಿಧವಾದ ವಿರೋಧವನ್ನಾಗಲೀ, ಆಕ್ಷೇಪಣೆಯನ್ನಾಗಲೀ ಮಾಡಿದ್ದು ಕಂಡು ಬರಲಿಲ್ಲ. ಅವರು ಹೇಳಿದಂಥ ಅನೇಕ ವಿಷಯಗಳು ಈ ಮಸೂದೆಯ ವ್ಯಾಪ್ತಿಗೆ ಬೀರಿದಂಥವು. ಅನೇಕ ಮಹತ್ತ್ವವಾದ ಹಾಗೂ ಮೂಲಭೂತವಾದ ಸಮಸ್ಯೆ

ಗಳ ಬಗ್ಗೆ ಮಾನ್ಯ ಸದಸ್ಯರು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಮಸೂದೆಯಲ್ಲಿರುವ ವಿಷಯಗಳ ಬಗ್ಗೆ ಬಂದಂಥ ಒಂದೇ ಒಂದು ಆಕ್ಷೇಪಣೆ ಎಂದರೆ ಮಾನ್ಯ ನಾಗಪ್ಪನವರು ಚೆಂಪೊರರಿ ವೈಸ್ ಛಾನ್ಸಲರ ಕಾರಾವಧಿ ಎಷ್ಟು ಎನ್ನುವುದನ್ನು ನಿಗದಿ ಮಾಡಿಲ್ಲ ಎನ್ನುವ ಅಭಿಪ್ರಾಯಪಟ್ಟರು. ಆದರೆ ಮಸೂದೆಯಲ್ಲಿರತಕ್ಕ ತಿದ್ದುಪಡಿಯ ಬಗ್ಗೆ ಮಾನ್ಯ ಸದಸ್ಯರ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಛಾನ್ಸಲರ್ ಅವರು ಒಬ್ಬ ವೈಸ್ ಛಾನ್ಸಲರನ್ನು ಖಾಯಂ ಆಗಿ ನೇಮಕ ಮಾಡುವವರೆಗೂ, ಖಾಯಂ ವೈಸ್ ಛಾನ್ಸಲರು ಅಧಿಕಾರ ವಹಿಸಿಕೊಳ್ಳುವವರೆಗೂ ತಾತ್ಕಾಲಿಕವಾಗಿರತಕ್ಕ ವೈಸ್ ಛಾನ್ಸಲರು ಅಧಿಕಾರದಲ್ಲಿರಬೇಕು ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಆ ಬಗ್ಗೆ ಯಾವ ವಿಧವಾದ ಸಂಶಯವಿಲ್ಲ, ಯಾವ ವಿಧವಾದ ಅಸ್ಪಷ್ಟತೆ ಇಲ್ಲ ಎಂದು ಹೇಳಬಯಸುತ್ತೇನೆ.

ಎರಡನೆಯದಾಗಿ ಮಾನ್ಯ ಸದಸ್ಯರಾದ ಶ್ರೀಕಂಠಯ್ಯನವರು ಸರ್ಕಾರ ಇಲ್ಲಿಯವರೆಗೂ ಕಣ್ಣು ಮುಚ್ಚಿಕೊಂಡಿದ್ದು ಈಗ ಕಣ್ಣು ತೆರೆದಿದೆ, ಇದನ್ನು ಬಹಳ ಕಾಲದ ಹಿಂದೆಯೇ ತರಬೇಕಾಗಿತ್ತು ಎಂದು ಹೇಳಿದರು. ಕಳೆದ ಅಧಿವೇಶನದಲ್ಲಿ ಈ ತಿದ್ದುಪಡಿ ಮಸೂದೆಯನ್ನು ಮೇಲ್ಮನೆಯಲ್ಲಿ ಮಂಡಿಸಲಾಗಿದ್ದು, ಅಲ್ಲಿ ಒಪ್ಪಿಗೆಯನ್ನು ಪಡೆದ ನಂತರ ಇಲ್ಲಿಗೆ ತರಲಾಗಿದೆ. ಬಹಳ ಕಾಲದ ಹಿಂದೆಯೇ ಸರ್ಕಾರ ಈ ವಿಚಾರದಲ್ಲಿ ಕ್ರಮತೆಗೆದುಕೊಂಡಿದೆ. ಬೆಂಗಳೂರು ವಿಶ್ವವಿದ್ಯಾಲಯದ ವೈಸ್ ಛಾನ್ಸಲರಾಗಿದ್ದ ಲೋರಿಯಾ ಅವರು ಗತಿಸಿದ ನಂತರ ತೆರವಾದ ಸ್ಥಾನಕ್ಕೆ ತಾತ್ಕಾಲಿಕವಾಗಿ ವೈಸ್ ಛಾನ್ಸಲರನ್ನು ನೇಮಕ ಮಾಡಿದಾಗ ಕಂಡುಬಂದ ಕಾಯಿದೆಯ ತೊಡಕನ್ನು ಪರಿಹರಿಸುವ ಉದ್ದೇಶಕ್ಕಾಗಿ ಈ ತಿದ್ದುಪಡಿಯನ್ನು ತರಲಾಗಿದೆ.

ಮಾನ್ಯ ಸದಸ್ಯರು ಕೆಲವರು ಅನುಷಂಗಿಕವಾಗಿ ವಿಶ್ವವಿದ್ಯಾಲಯದ ರೂಪರೇಷೆ, ಅವುಗಳ ಆಡಳಿತ ವ್ಯವಸ್ಥೆ ಮತ್ತು ಪರ್ಯಾಯವಾಗಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಪರಿಸ್ಥಿತಿ ಇವುಗಳನ್ನೆಲ್ಲ ಪ್ರಸ್ತಾಪ ಮಾಡಿದರು. ಇವೆಲ್ಲ ನಮ್ಮ ಮುಂದೆ ಮಸೂದೆಯಲ್ಲಿನ ಅಂಶಗಳಿಗೆ ಸಂಬಂಧಪಟ್ಟುದು ಎಂದು ಅನ್ನಿಸುವುದಿಲ್ಲ. ಆದರೆ ಬಹುತೇಕ ಮಾನ್ಯ ಸದಸ್ಯರು ಕೊಟ್ಟ ಅಭಿಪ್ರಾಯವೆಂದರೆ, ನಮ್ಮ ರಾಜ್ಯದಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳಿಗೂ ಸಮಗ್ರವಾದ ಕಾಯಿದೆಯನ್ನು ತರಬೇಕು ಎಂಬುದು. ವಿಶ್ವವಿದ್ಯಾನಿಲಯಗಳ ಆಡಳಿತದ ವಿಚಾರದಲ್ಲಿ ಎಲ್ಲ ವಿಶ್ವವಿದ್ಯಾಲಯಗಳಿಗೂ ಏಕರೂಪವಾದ ಕಾಯಿದೆ ಇರಬೇಕೇ ಬೇಡವೇ. ಅಥವಾ ಅದಕ್ಕೆ ಸ್ವತಂತ್ರವಾದ ಸ್ವಾಯತ್ತತೆ ಇರಬೇಕೇ ಬೇಡವೇ, ಪ್ರತಿಯೊಂದು ವಿಶ್ವವಿದ್ಯಾಲಯವೂ ಸ್ವತಂತ್ರವಾದ ಸ್ವಾಯತ್ತತೆಯ ರೂಪವನ್ನು ಎಷ್ಟರಮಟ್ಟಿಗೆ ಬದರಾಯಿಸಬಹುದು ಎನ್ನುವ ವಿಷಯದ ಬಗ್ಗೆ ದೇಶದ ಹಾಗೂ ಪ್ರಪಂಚದ ಅನೇಕ ಶಿಕ್ಷಣ ತಜ್ಞರಲ್ಲಿ, ಶಿಕ್ಷಣದಲ್ಲಿ ಆಳವಾದ ಅನುಭವವಿರತಕ್ಕ ಆಡಳಿತಗಾರರಲ್ಲಿ ಏಕಾಭಿಪ್ರಾಯವಿಲ್ಲ. ಆ ಬಗ್ಗೆ ವಿಚಾರ ವಿಮರ್ಶೆ ನಡೆಯುತ್ತಲೇ ಇದೆ. ಯಾವ ರಾಜ್ಯದಲ್ಲೇ ಆಗಲೀ ಪ್ರಪಂಚದಲ್ಲೇ ಆಗಲೀ, ಎಲ್ಲ ವಿಶ್ವವಿದ್ಯಾಲಯಗಳಿಗೂ ಒಂದೇ ಕಕ್ಷೆಯ ವ್ಯಾಪ್ತಿಯಲ್ಲಿ ಬಂದಂಥ ಪ್ರಸಂಗಗಳಿಲ್ಲ. ಪ್ರತಿಯೊಂದು ವಿಶ್ವವಿದ್ಯಾಲಯವೂ ತನ್ನದೇ ಆಗಿರತಕ್ಕ ಆಡಳಿತ ಪದ್ಧತಿ, ಸ್ವಾಯತ್ತವಾಗಿರತಕ್ಕ ರೀತಿಯನ್ನು ರೂಢಿಸಿಕೊಂಡು ಬಂದಿದೆ. ಮೇಲಾಗಿ ಯಾವುದೇ ವಿಶ್ವವಿದ್ಯಾಲಯವಾಗಲೀ ಅದಕ್ಕೆ ಸ್ವಾಯತ್ತತೆಯ ಸ್ವತಂತ್ರವಾದ ಆಡಳಿತ ವ್ಯವಸ್ಥೆ ಇರತಕ್ಕುದು ಸೂಕ್ತ ಎನ್ನುವ ಅಭಿಪ್ರಾಯವನ್ನು ಅನೇಕ ಶಿಕ್ಷಣ ತಜ್ಞರು ವ್ಯಕ್ತ ಪಡಿಸಿದ್ದಾರೆ. ಆಯಾ ವಿಶ್ವವಿದ್ಯಾನಿಲಯಗಳಿಗೆ ಅವರದೇ ಸ್ವತಂತ್ರವಾದ, ಸ್ವಾಯತ್ತವಾದ ಕಾಯಿದೆ, ಕಾನೂನು ಇರುವುದು ಸರಿಯಲ್ಲವೆಂದು ಕೆಲವರು ಹೇಳಿದರು. ಆದರೆ ಶ್ರೀ ಶ್ರೀಕಂಠಯ್ಯನವರು ಶಿಕ್ಷಣ ತಜ್ಞರು, ಹೆಚ್ಚು ಪರಿಶ್ರಮವುಳ್ಳವರು. ಅವರೂ ಕೂಡ ಏಕರೂಪವಾದ ಕಾನೂನು ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಇರುವುದು ಸೂಕ್ತವಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ, ಈ ಬಗ್ಗೆ ಇತರ ಶಿಕ್ಷಣ ತಜ್ಞರು ಕೂಡ ಅದೇ ಅಭಿಪ್ರಾಯ ಸೂಚಿಸಿದ್ದಾರೆ, ಯಾವುದೇ ವಿಶ್ವವಿದ್ಯಾನಿಲಯವಾಗಲಿ ಅದು ಸ್ವತಂತ್ರವಾಗಿ ವರ್ತಿಸಿ ಸಂಸ್ಥೆಯ ಬೆಳವಣಿಗೆಗೆ ಬೇಕಾದಂತೆ ನಡೆಸುವುದು ಒಳ್ಳೆಯದು ಎಂದು ನಮ್ಮ ದೇಶದ ಮತ್ತು ಹೊರ ದೇಶಗಳ ತಜ್ಞರೂ ಅಭಿಪ್ರಾಯ ಸೂಚಿಸಿದ್ದಾರೆ. ಹಾಗಿರುವಾಗ ನಾವು ವಿಶ್ವವಿದ್ಯಾನಿಲಯಗಳ ಆಡಳಿತದಲ್ಲಿ ಹೆಚ್ಚು ಕೈಹಾಕುವುದು ಸೂಕ್ತವಲ್ಲ. ಪ್ರತಿಯೊಂದಕ್ಕೂ ತನ್ನದೇ ಆದ ಕಾನೂನು, ರೂಪರೇಷೆ ಇರಬೇಕು ಎಂದು ಹೇಳುವರು. ಮಾಡರ್ ಯೂನಿವರ್ಸಿಟಿ ಆಕ್ಟ್ ಎಂದು ಕೇಂದ್ರ ಸರಕಾರದಲ್ಲೂ ಒಂದು ಮೂಲ ಭೂತವಾದ ಕಾನೂನು ಇದೆ ಅದರ ರೂಪರೇಷೆ ಎಲ್ಲಾ ವಿಶ್ವವಿದ್ಯಾನಿಲಯಗಳ ಕಾನೂನಿನಲ್ಲೂ ರೂಪಿತವಾಗಿದೆ. ಯಾವ ರಾಜ್ಯದಲ್ಲೂ ಕೂಡ ಇದುವರೆಗೆ ಏಕರೂಪವಾದ ಮತ್ತು ಸಮಗ್ರವಾದ ಕಾನೂನು ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಟ್ಟಂತೆ ಇರುವುದು ಕಾಣಲಿಲ್ಲ. ಆದುದರಿಂದ ಇದರ ಬಗ್ಗೆ ನಿಖರವಾಗಿ ಹೀಗೇ ಮಾಡಬೇಕೆಂದು ಹೇಳುವುದು ಕಷ್ಟ. ಈ ಬಗ್ಗೆ ಶಿಕ್ಷಣ ತಜ್ಞರ ಅಭಿಪ್ರಾಯ ಪಡೆಯಬೇಕು. ಇಲ್ಲವೇ ಈಗಿರುವ ಹಾಗೇ ಮುಂದುವರೆಸುವುದು ಸೂಕ್ತ ಎಂಬ ಅಭಿಪ್ರಾಯವಿದೆ.

(ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ)

ಇನ್ನೊಂದು ಅನೇಕ ಸದಸ್ಯರು ಬೆಂಗಳೂರು ವಿಶ್ವವಿದ್ಯಾನಿಲಯದ ಪರಿಸ್ಥಿತಿ ಬಗ್ಗೆ ಅಭಿಪ್ರಾಯ ತಿಳಿಸಿದ್ದಾರೆ. ಈ ಬಗ್ಗೆ ಸರಕಾರದ ಅಭಿಪ್ರಾಯವನ್ನು ಈಗಾಗಲೇ ಸ್ಪಷ್ಟಪಡಿಸಲಾಗಿದೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ನಡೆಯುವ ಪ್ರದರ್ಶನ ಮತ್ತು ಮುಷ್ಕರದಬಗ್ಗೆ ಹೇಳುವುದಾದರೆ ಅದನ್ನು ಸರಕಾರ ಕೂಲಂಕಷವಾಗಿ ಪರಿಶೀಲಿಸಿದೆ; ಮಾನ್ಯ ಸದಸ್ಯರು ಕೊಟ್ಟ ಅಭಿಪ್ರಾಯವನ್ನೂ ಕೂಡ ಗಮನಿಸಿ ಸರಕಾರ ಆ ವ್ಯವಹಾರದಲ್ಲಿ ಕೈಹಾಕುವುದು ಸರಿಯಿಲ್ಲ ಎಂದು ಭಾವಿಸಿದೆ, ದುರ್ಧರವಾದ ಪ್ರಸಂಗ, ಅಡಳಿತ ಕುಸಿದುಬೀಳುವ ಪ್ರಸಂಗವಿಲ್ಲ. ಹಾಗಿರುವಾಗ ಸರಕಾರ ಕೈಹಾಕುವುದು ಕಷ್ಟ. ಅಲ್ಲದೆ ವಿದ್ಯಾರ್ಥಿಗಳ ಬೇಡಿಕೆಯಲ್ಲಿ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ವಿಷಯ ಅಷ್ಟಿಲ್ಲ. ಸಂಸ್ಥೆಗೆ ಸಂಬಂಧಪಟ್ಟ ವಿಷಯವಿದೆಯೇ ಹೊರತು ಶೈಕ್ಷಣಿಕ ವಿಷಯ ಅಥವಾ ಪಠ್ಯ ಪುಸ್ತಕಗಳಿಗೆ ಸಂಬಂಧಪಟ್ಟ ವಿಷಯ ಅಥವಾ ಸೌಲಭ್ಯದ ವಿಷಯ ಮುಂತಾದ್ದು ಯಾವುದೂ ಇಲ್ಲದಿರುವುದರಿಂದ ವಿದ್ಯಾರ್ಥಿಗಳು ತಮ್ಮ ತಾಳ್ಮೆ ಕೆಡಿಸಿಕೊಳ್ಳಬೇಕಾದ ಪ್ರಮೇಯವಿಲ್ಲ, ಅವರು ತಮ್ಮ ಅಮೂಲ್ಯವಾದ ವೇಳೆಯನ್ನು, ಶಕ್ತಿಯನ್ನು ವ್ಯರ್ಥವಾದದೆ ಶಿಕ್ಷಣ ವಿಚಾರಕ್ಕೆ ಹೆಚ್ಚು ಗಮನ ಕೊಡಬೇಕು. ಸುಮ್ಮನೆ ಅವರು ಇಂಥ ಮುಷ್ಕರ, ಪ್ರದರ್ಶನಗಳಲ್ಲಿ ಸಮಯ ಹಾಳುಮಾಡಬಾರದು. ಈ ವಿಚಾರದಲ್ಲಿ ಸರಕಾರ ವಿದ್ಯಾರ್ಥಿಗಳಲ್ಲಿ ವಿನಂತಿ ಮಾಡಿಕೊಂಡಿದೆ. ಸಾಮಾನ್ಯವಾಗಿ ಅವರು ಎತ್ತಿರುವ ವಿಷಯ ಅಥವ ಯೂನಿವರ್ಸಿಟಿ ಅಡಳಿತದ ವಿಷಯ ಬರೀ ಮುಷ್ಕರ ಅಥವ ಪ್ರದರ್ಶನದಿಂದ ತೀರ್ಮಾನವಾಗುವುದಿಲ್ಲ. ಹಾಗಿರುವಾಗ ವಿದ್ಯಾರ್ಥಿಗಳು ಚಳವಳಿ ನಡೆಸುವುದು ಸಾಧುವಲ್ಲ. ಆದುದರಿಂದ ವಿದ್ಯಾರ್ಥಿಗಳು ತಮ್ಮ ವೇಳೆಯನ್ನು, ಶಕ್ತಿಯನ್ನು ವ್ಯರ್ಥಮಾಡಿಕೊಳ್ಳದೆ ಅಭ್ಯಾಸಕ್ಕೆ ಹೆಚ್ಚು ಲಕ್ಷ ಕೊಡುವುದು ಸೂಕ್ತ.

ಶ್ರೀ ಎಂ. ನಾಗಪ್ಪ.—ತರುಣ ಮಂತ್ರಿಮಂಡಲವೇನಾದರೂ ವಿದ್ಯಾರ್ಥಿಗಳನ್ನು ಭೆಟ್ಟಿ ಮಾಡಿ ಅವರನ್ನು ಸಮಾಧಾನಮಾಡಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ವಿದ್ಯಾರ್ಥಿಗಳು ಬಂದು ಶಿಕ್ಷಣ ಮಂತ್ರಿಗಳನ್ನು ಮತ್ತು ಮುಖ್ಯ ಮಂತ್ರಿಗಳನ್ನು ಭೆಟ್ಟಿಮಾಡಿದಾಗ ವಿಷಯವನ್ನು ಸ್ಪಷ್ಟಪಡಿಸಲಾಗಿದೆ.

ಶ್ರೀ ಕೆ. ವಿ. ಶಂಕರಗೌಡ.—ವಿದ್ಯಾರ್ಥಿಗಳನ್ನು ಕರೆಸಿಕೊಂಡು ಮಾತನಾಡಬಾರದೆಂಬ ದುರಾಭಿಪ್ರಾಯ ನಮಗಿಲ್ಲ. ಸಿಂಡಿಕೇಟ್ ಸಭೆ ಸೇರಿ ನಾನ್-ಆಫಿಷಿಯಲ್ ಮೆಂಬರ್ಸ್ ಕಮಿಟಿಯೊಂದನ್ನು ಮಾಡಿದೆ. ಆ ಕಮಿಟಿಯವರು ವಿದ್ಯಾರ್ಥಿಗಳ ಮುಖಂಡರನ್ನು ಭೇಟಿಮಾಡಿ ಅವರ ಬೇಡಿಕೆ ಮತ್ತು ಕುಂದುಕೊರತೆಗಳನ್ನು ವಿಚಾರಿಸಿ ವರದಿ ಕೊಡಬೇಕೆಂದು ತಿಳಿಸಿದೆ. ಸರಕಾರ ವಿದ್ಯಾರ್ಥಿಗಳ ಮುಖಂಡರನ್ನು ಕರೆಸಿ ಮಾತನಾಡಲು ಕಾಲ ಪಕ್ವವಾಗಿಲ್ಲ, ಉದ್ರೇಕ, ಉದ್ವೇಗ ಇದೆ, ಇಂಥ ಪರಿಸ್ಥಿತಿಯಲ್ಲಿ ಮಾತನಾಡಿದರೆ ಅನುಕೂಲವಾಗುವುದಿಲ್ಲ ಎಂದು ಸುಮ್ಮನಿದ್ದೆ ಅವರನ್ನು ಕರೆಸಿ ಮಾತನಾಡಬೇಕೆಂಬ ಆಸೆಯಿದೆ, ಅದನ್ನು ಶೀಘ್ರದಲ್ಲೇ ಮಾಡುತ್ತೇವೆ, ಮಾಡದೆ ಬಿಡುವುದಿಲ್ಲ, ಹೀಗೇ ನಡೆಸಬೇಕೆಂದಿಲ್ಲ.

ಶ್ರೀ ಎರ್. ಶ್ರೀಕಂಠಯ್ಯ.—ಆದರೆ ವಿದ್ಯಾರ್ಥಿಗಳು ಹೇಳುವಂಥ ದೋಷವಿದೆಯೇ ಎಂದು ಮಂತ್ರಿಮಂಡಲ ಪರೀಕ್ಷೆಮಾಡಿ ಅದರಮೇರೆ ಯೂನಿವರ್ಸಿಟಿಗೆ ಬರೆಯುವ ವಿಚಾರ ಬೇರೆ. ಸ್ವತಂತ್ರವಾಗಿ ನಿಮ್ಮ ಸೋರ್ಸ್‌ನಿಂದ ಎನ್‌ಕ್ವೈರಿ ಮಾಡಿದಿರಾ ?

ಶ್ರೀ ಕೆ. ವಿ. ಶಂಕರಗೌಡ.—ಅಲಗೇಷನ್ಸ್ ವಿಚಾರದಲ್ಲಿ ಎಕ್ಸ್‌ಪ್ಲನೇಷನ್ ಕೇಳಿದೆವು, ಬಂತು, ಪ್ರತಿಯೊಂದನ್ನೂ ಕೂಲಂಕಷವಾಗಿ ವಿಮರ್ಶೆಮಾಡಿ ಆರೋಪಗಳಿಗೆ ಯಾವ ಆಧಾರವೂ ಇಲ್ಲ ಎಂದು ಮನವರಿಕೆಯಾಗಿದೆ. ಆದುದರಿಂದ ಎನ್‌ಕ್ವೈರಿಮಾಡುವುದಕ್ಕೆ ಆಧಾರವಿಲ್ಲ, ನಿಜಾಂಶವಿಲ್ಲ. ಅದರಮೇಲೆ ಸಾಕ್ಷಿ, ಸಾಹಿತ್ಯ ಇದ್ದರೆ ಒದಗಿಸಿ ಎಂದು ಕೇಳಿದರೆ ಅದನ್ನು ಒದಗಿಸಿಲ್ಲ. ಅದನ್ನು ಒದಗಿಸಿದರೆ ಎನ್‌ಕ್ವೈರಿ ಮಾಡುವುದಕ್ಕೆ ಈಗಲೂ ಸಿದ್ಧವಾಗಿದ್ದೇವೆ.

ಶ್ರೀ ಎರ್. ಶ್ರೀಕಂಠಯ್ಯ.—ಸಂತೋಷ.

